ಸಾಯಿಸುತೆ

# ದೀಪಾಂಕುರ



894.814 3083
SAI N98

# ದೀಪಾಂಕುರ

(ಸಾಮಾಜಿಕ ಕಾದಂಬರಿ)

8328 | 1198

**ಸಾಯಿಸುತೆ**

ಪ್ರಕಾಶಕರು :

**ಕರ್ನಾಟಕ ಸಾಹಿತ್ಯ ಪ್ರಕಾಶನ**
ಸಾಯಿಸದನ,ನಂ.65/2, 7ನೇ ಮುಖ್ಯ ರಸ್ತೆ
ವಿದ್ಯಾನಗರ, ಬಿ.ಹೆಚ್. ರಸ್ತೆ,
**ತುಮಕೂರು - 572 103**

DEEPANKURA - a social novel by Smt. Saisuthe ;
I edn: February 1998; Published by Karnataka
Sahithya Prakashana, No. 65/2, 7th Main Road,
Vidya Nagar, B.H. Road, Tumkur - 3;
All rights reserved by the Authoress;
Pages : 274; Price: Rs. 60=00

ಪ್ರಥಮ ಮುದ್ರಣ: ಫೆಬ್ರವರಿ 1998
ಹಕ್ಕುಗಳು : ಲೇಖಕಿಯದು
ಅಧಿಕೃತ ಮಾರಾಟಗಾರರು :

**ಗೀತಾ ಏಜನ್ಸೀಸ್**

*(ಸಗಟು ಪುಸ್ತಕ ವ್ಯಾಪಾರಿಗಳು)*

ಬಳೇಪೇಟೆ ಚೌಕ, ಬೆಂಗಳೂರು - 53

*(ದೂರವಾಣಿ* : 2874226)

ಬೆಲೆ : ರೂ. 60/-

ಸುಂದರ ಲಿಪಿ ಜೋಡಣೆ

*ಎಸ್. ಎಸ್. ಕಂಪ್ಯೂಟರ್ ಇಂಡಿಯಾ ಇಂಪ್ರೆಷನ್ಸ್,*

ವಿದ್ಯಾನಗರ, ತುಮಕೂರು-3 ; ದೂರವಾಣಿ : 880785

ಮುದ್ರಣ:

*ಜಗನ್ನಾಥ್ ಆಫ್‌ಸೆಟ್ ಪ್ರಿಂಟರ್ಸ್*

ಡಿ. ಎಸ್. ಲೇನ್, ಸೌರಾಷ್ಟ್ರಪೇಟೆ, ಬೆಂಗಳೂರು - 53.

# ಎರಡು ಮಾತು

*ಪ್ರಿಯ ಓದುಗರಲ್ಲಿ*

ನಾಲ್ಕು ವರ್ಷದ ಹಿಂದೆ ಎಂದರೆ 1993ರ ಏಪ್ರಿಲ್ ಮೊದಲ ವಾರದಲ್ಲಿ ಆಕಸ್ಮಿಕವಾಗಿ ಬಂದು ಭೇಟಿ ಮಾಡಿದ ವಯೋವೃದ್ಧರು ನನ್ನ ಮುಂದೆ ಬಿಚ್ಚಿಟ್ಟ ಕತೆ, ಕಲ್ಪನೆಯು ಕಾವ್ಯ ಲಹರಿಯಲ್ಲಿ ಕಾದಂಬರಿಯ ರೂಪದಲ್ಲಿ ನಿಮ್ಮ ಮುಂದಿದೆ.

ಪ್ರಕೃತಿಯ ಗರ್ಭದಲ್ಲಿ ಎಷ್ಟೋ ರಹಸ್ಯಗಳು ಅಡಗಿ ಕೂತಿವೆ. ನಂಬಲಾರದ ವಿಸ್ಮಯಗಳು ನಮ್ಮನ್ನು ಚಕಿತಗೊಳಿಸುತ್ತಿರುತ್ತದೆ. ಕೆಲವು ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದು ಹೋಗುತ್ತದೆ. ಅಂಥ ಒಂದು ವಸ್ತು ನನ್ನ ಲೇಖನಿಯ ಮೂಲಕ ವಿನ್ಯಾಸಗೊಂಡಿದೆ. ನಿಮಗೆ ಮೆಚ್ಚಿಗೆಯಾಗುತ್ತದೆಯೆನ್ನುವ ನಂಬಿಕೆ ನನ್ನದು.

ನನ್ನ ಕಾದಂಬರಿಗಳ ಪ್ರಕಟಣೆ ಮತ್ತು ಮತ್ತು ಮಾರಾಟದಲ್ಲಿ ಹೆಚ್ಚಿನ ಆಸಕ್ತಿ ವಹಿಸಿರುವ ಗೀತಾ ಏಜನ್ಸೀಸ್‌ನ ಶ್ರೀಯುತ ಕೆ. ರಾಮಚಂದ್ರಯ್ಯನವರಿಗೂ, ಪ್ರಕಟಿಸಿದ ಕರ್ನಾಟಕ ಸಾಹಿತ್ಯ ಪ್ರಕಾಶನದವರಿಗೂ,ಮುಖಚಿತ್ರ ರಚಿಸಿ ಕೊಟ್ಟ ಶ್ರೀ ಮೋನಪ್ಪನವರಿಗೂ ಮತ್ತು ಮುದ್ರಣಕಾರರಾದ ಜಗನ್ನಾಥ ಪ್ರಿಂಟರ್ಸ್‌ರವರಿಗೂ ನನ್ನ ಧನ್ಯವಾದಗಳು.

*ಸಾಯಿಸುತೆ*

2-1-98
ಸಾಯಿಸದನ, ವಿದ್ಯಾನಗರ,
ತುಮಕೂರು-3

# ಸಾಯಿಸುತೆಯವರ ಕಾದಂಬರಿಗಳು

ಹಂಸ ಪಲ್ಲಕ್ಕಿ
ದಂತದ ಗೊಂಬೆ
ನನ್ನದೆಯ ಹಾಡು
ಜನನೀ ಜನ್ಮ ಭೂಮಿ
ಪ್ರಿಯಸಖೀ
ನನ್ನ ಭಾವ ನಿನ್ನ ರಾಗ
ಶ್ಯಾನುಭೋಗರ ಮಗಳು
ಸಪ್ತರಂಜನಿ
ಕೋಗಿಲೆ ಹಾಡಿತು
ಕರಗಿದ ಕಾರ್ಮೋಡ
ಹೇಮಂತದ ಸೊಗಸು
ರಾಧ ಮೋಹನಾ
ಬಣ್ಣದ ಚುಂಬಕ
ರಜತಾದ್ರಿಯ ಕನಸು
ಶ್ರಾವಣ ಪೂರ್ಣಿಮ
ಸುಮಧುರ ಸಂಗಮ
ರಾಗ ಬೃಂದಾವನ
ಬೆಳದಿಂಗಳ ಚೆಲುವೆ
ವಸಂತದ ಚಿಗುರು
ನೂರು ನೆನಪು
ಬಾಂದಳದ ನಕ್ಷತ್ರ
ಶ್ರೀರಸ್ತು ಶುಭಮಸ್ತು
ಸ್ನೇಹ ಮಾಧುರಿ
ಮಂಗಳ ದೀಪ
ಇಬ್ಬನಿ ಕರಗಿತು
ಪೂರ್ಣೋದಯ
ಪುಷ್ಕರಿಣಿ
ಹೃದಯ ರಾಗ

ದೀಪಾಂಕುರ
ಸ್ವರ್ಗದ ಹೂ
ಇಂದ್ರ ಧನಸ್ಸು
ಅರುಣ ಕಿರಣ
ಧವಳ ನಕ್ಷತ್ರ
ಚಿರಬಾಂಧವ್ಯ
ಶುಭಮಿಲನ
ಮಧುರಗಾನ
ಕಾರ್ತೀಕದ ಸಂಜೆ
ನಾಟ್ಯಸುಧಾ
ಮೂಡಿ ಬಂದ ಶಶಿ
ಗಂಧರ್ವಗಿರಿ
ಬಿಳಿ ಮೋಡಗಳು
ಮಾನಸ ವೀಣಾ
ಮುಗಿಲ ತಾರೆ
ಸ್ವಪ್ನ ಸಂಭ್ರಮ
ಶ್ವೇತ ಗುಲಾಬಿ
ಮಧುರ ಆರಾಧನ
ಪಸರಿಸಿದ ಶ್ರೀಗಂಧ
ಮೇಘವರ್ಷಿಣಿ
ಮೌನ ಆಲಾಪನ
ಭಾವ ಸರೋವರ
ಆರಾಧಿತೆ
ನಿಶಾಂತ್
ಪಂಚವಟಿ
ಬಿರಿದ ನೈದಿಲೆ
ವಸುಂಧರ
ಕಲ್ಯಾಣ ರೇಖೆ

ಜೀವನ ಸಂಧ್ಯ
ನಲಿದ ಸಿಂಧೂರ
ನಮ್ರತಾ
ಮಿಡಿದ ಶೃತಿ
ಸ್ವರ್ಣ ಮಂದಿರ
ಸುಮಧುರ ಭಾರತಿ
ಮಂದಾರ ಕುಸುಮ
ಸೊಬಗಿನ ಪ್ರಿಯದರ್ಶಿನಿ
ಪ್ರೇಮ ಸಾಫಲ್ಯ
ಮಮತೆಯ ಸಂಕೋಲೆ
ಮುಂಜಾನೆಯ ಮುಂಬೆಳಕು
ಹೊಂಬೆಳಕು
ಸುಪ್ರಭಾತದ ಹೊಂಗನಸು
ಚೈತ್ರದ ಕೋಗಿಲೆ
ಪ್ರೀತಿಯ ಹೂಬನ
ಬಾನು ಮಿನುಗಿತು
ಮಂಜಿನಲ್ಲಿ ಮಿಂದ ಪುಷ್ಪ
ಶರದೃತುವಿನ ಚಂದ್ರ
ಆಡಿಸಿದಳು ಜಗದೋದ್ಧಾರನಾ
ಸುಭಾಷಿಣಿ
ಅನುಬಂಧದ ಕಾರಂಜಿ
ಸಂಧ್ಯಾ ಗಗನ
ಮತ್ತೊಂದು ಬಾಡದ ಹೂ
ನಿಶೆಯಿಂದ ಉಷೆಗೆ
ಬಾಡದ ಹೂ
ವಿಧಿವಂಚಿತೆ
ಗಿರಿಧರ
ಮಿಂಚು
ಸಪ್ತಪದಿ
ನವಚೈತ್ರ
ಅಭಿಲಾಷ
ಡಾ|| ವಸುಧಾ
ಹಿಮಗಿರಿ ನವಿಲು
ವಿವಾಹ ಬಂಧನ
ಬೆಳ್ಳಿ ದೋಣಿ
ಅಮೃತ ಸಿಂಧು
ಸಮ್ಮಿಲನ
ವರ್ಷ ಬಿಂದು
ಪಾಂಚಜನ್ಯ

*ಮುಂದಿನ ಕಾದಂಬರಿಗಳು*

*'ಮಾಗಿಯ ಮಂಜು'*

*'ಹೇಮ ವಿಹಾರಿ'*

ಅದೊಂದು ದೊಡ್ಡ ವಿಸ್ತಾರವಾದ ಬಂಗ್ಲೆ. ಅಲ್ಲಿನ ಜನ ಅದನ್ನು ವಾಡೆಯೆಂದು ಸಂಬೊಧಿಸಿದ್ದಕ್ಕೆ ಮುಖ್ಯವಾದ ಕಾರಣವಿತ್ತು. ನಲ್ವತ್ತು ವರ್ಷಗಳ ಹಿಂದೆ ಭವ್ಯ ಸಂಪತ್ತಿನಿಂದ ಕಂಗೊಳಿಸುತ್ತಿದ್ದ ಬೃಹದಾದ ಕಟ್ಟಡ ಪಾಳು ಬಿದ್ದಿತ್ತು. ಕಟ್ಟಡ ಪ್ರಾಂಗಣದಲ್ಲಿ ಒಂದು ಕಿರಿದಾದ ಕಾಡೇ ನಿರ್ಮಾಣವಾಗಿತ್ತು. ಇದು ವಾಸಂತಿಗೆ ಹೊಸ ತಾಣವಲ್ಲ. ಇಲ್ಲೇ ಹತ್ತಿರದಲ್ಲಿರುವ ಮಲ್ಲಿಗೆ ವಾಡೆಯ ಜೋಷಿಯವರ ಮನೆಯಲ್ಲಿ ಬೆಳೆದಿದ್ದು ಬಲವಂತದಿಂದ ಗೆಳತಿಯನ್ನು ಕರೆತಂದಿದ್ದಳು. ವಾಡೆಯನ್ನು ಹಾದೇ ಜೋಷಿಯವರ ಮನೆ ತಲುಪಬೇಕಿತ್ತು.

ಬಸ್ಸಿಳಿದು ಅಲ್ಲಿಗೆ ಬಂದ ಕೂಡಲೇ ಕಣ್ಮಣಿ ಒಂದು ಹೆಜ್ಜೆ ಮುಂದಿಡಲಾರದೆ ನಿಂತಳು. ಅರ್ಥವಾಗದ ಗೊಂದಲ ಮಿದುಳಿನಲ್ಲಿ. ಎಂದೋ ಈ ಹಾಳು ಬಿದ್ದ ಬಂಗ್ಲೆಯನ್ನು ಕನಸಿನಲ್ಲಿ ಕಂಡ ನೆನಪು.

"ಹಳೇ ಬಂಗ್ಲೆನಾ ?" ಕೇಳಿದಳು ಮೆಲ್ಲಗೆ ಅಲ್ಲಿಂದ ನೋಟ ತೆಗೆಯದೆ.

"ನಾನು ನೋಡಿದಾಗ್ನಿಂದ ಹೀಗೇನೇ ಇದೆ. ಸುತ್ತಮುತ್ತಲು ಸ್ವಲ್ಪ ದೂರದಲ್ಲಿ ಓಡಾಡಿದ್ದೇನಷ್ಟೆ. ಏನೇನೋ ಹೇಳ್ಕೋತಾರೆ. ಭೂತ ಬಂಗ್ಲೆ ಅಷ್ಟೆ. ಜನ ಅತ್ತ ಸುಳಿಯೋಲ್ಲ. ಬೇಗ .... ಬೇಗ... ಹೆಜ್ಜೆ ಹಾಕು" ವಾಸಂತಿ ಅವಸರಿಸಿದಳು. ಆದಷ್ಟು ಬೇಗ ತಲುಪಿ ಶಬರಿಯವರ ಕೈತುತ್ತು ತಿನ್ನುವಾಸೆ.

ಅಲ್ಲಿಂದ ಕಣ್ಮಣಿ ಕದಲಲಿಲ್ಲ. ಅತ್ತಲೇ ನೋಡಿ, ಮಿದುಳಿನಲ್ಲಿ ಅರ್ಥವಾಗದ ಘರ್ಷಣೆಗಳು. ಮನದಲ್ಲಿ ಒಂದು ರೀತಿಯ ಸಂಘರ್ಷ.

"ತುಂಬ ದೊಡ್ಡ ಬಂಗ್ಲೆ ಅಲ್ವಾ ?" ಮತ್ತೆ ಆ ಬಂಗ್ಲೆಗೆ ಸಂಬಂಧಿಸಿದ ಪ್ರಶ್ನೆ. ವಾಸಂತಿ ಬೇಸರದ ಮುಖ ಮಾಡಿದಳು "ನಿಂಗ್ಯಾಕೆ ಹಾಳು ಬಿದ್ದ

ತುಟಿ ಬಿಚ್ಚಲಿಲ್ಲ. ವಿಚಿತ್ರವಾಗಿ ಕಂಡಿತು. "ಎಲೆ.. ಹಾಕಿ" ಶಬರಿ ಹೇಳಿದ ಮೇಲೆನೇ ಅವರುಗಳು ಒಳಗೆ ಹೋಗಿದ್ದು, ಒಬ್ಬರ ಮುಖಗಳನ್ನು ಒಬ್ಬರು ನೋಡಿಕೊಂಡಿದ್ದು. "ಪರಿಚಯ ಅಂತದ್ದನ್ನ ಆಮೇಲೆ ಮಾಡಿಕೋಬಹುದ್ದು. ಮೊದ್ಲು ಬಸ್ಸಿನ ಮೈಲಿಗೆ ಕಳಚಿ ಸ್ನಾನ ಮಾಡ್ಕೊಳ್ಳಿ" ಸೆರಗನ್ನು ಸಿಕ್ಕಿಸುತ್ತ ಒಳಗೆ ಹೋದರು.

ಮೂಲೆಯಲ್ಲಿದ್ದ ಒಂದು ಕೋಣೆಗೆ ಕರೆದೊಯ್ದಳು. "ಒಂದೆರಡ್ವರ್ಷ ಈ ಕೋಣೆಯನ್ನು ನಾನು ಉಪಯೋಗಿಸಿದ್ದು ಇದೆ. ಈಗ ಅಪರೂಪಕ್ಕೆ ಬಂದರೇ ವಾಸ್ತವ್ಯ ಇಲ್ಲೇ. ಸದ್ಯಕ್ಕೆ ನನ್ನ ಕಡೆ ಮಾವ ಇದ್ನ ಇಟ್ಕೊಂಡಿದ್ದಾನೆ" ಹೇಳುತ್ತಲೇ ಅವಳ ಬ್ಯಾಗನ್ನು ಕಿತ್ತು ಮಂಚದ ಮೇಲೆ ಹಾಕಿ "ಬೇಗ ಊಟ ಬೇಕೂಂತ ಅನ್ನಿಸಿದ್ರೆ.. ಬೇಗ ಬಟ್ಟೆ ತಗೊಂಡ್ ಸ್ನಾನಕ್ಕೆ ಬಾ. ಬಸ್ಸಿನ ಮೈಲಿಗೆ ಕಳ್ಕೋವರ್ಗೂ ಅಜ್ಜಿ ಏನು ಕೊಡೋಲ್ಲ" ತನ್ನ ಲೆದರ್ ಬ್ಯಾಗ್‌ನ ಜಿಪ್‌ನ ಎಳೆದು ಬಟ್ಟೆಗಳನ್ನು ತಗೊಂಡಳು. ಕಣ್ಮಣಿ ಮಿಕಿ ಮಿಕಿ ನೋಡುತ್ತಿದ್ದಳು. ಯಾಕೋ ಏನೋ ಈ ಮನೆ ಇಷ್ಟವಾಯಿತು ಅವಳಿಗೆ.

ನಡುಮನೆಯಲ್ಲಿ ನಿಲ್ಲಿಸಿದ್ದ ಕೆತ್ತನೆಯ ಕಂಬಗಳು ಹೊರಗಡೆಯ ಕೈಕಾಲು ತೊಳೆಯುವ ನೀರಿನ ತೊಟ್ಟಿ, ದೊಡ್ಡ ಹಿತ್ತಲನ್ನು ಅವರಿಸಿಕೊಂಡಿದ್ದ ತೆಂಗಿನ ತೋಟ.

"ರಿಯಲೀ.. ಫೆಂಟಾಸ್ಟಿಕ್! ನಂಗೆ ಇಲ್ಲೇ ಎಲ್ಲಾದ್ರೂ ಕೆಲ್ಸ ಕೊಡ್ಸಿ ಬಿಡು. ಇಲ್ಲೇ ಇದ್ಕೋತೀನಿ" ಕಣ್ಣು ಬಾಯಿ ಬಿಟ್ಟ ಕಣ್ಮಣಿಯ ಬೆನ್ನಿಗೊಂದು ಸಣ್ಣಗೆ ಗುದ್ದು ಕೊಟ್ಟು "ಒಂದೇ ಒಂದು ಪೋಸ್ಟ್ ಖಾಲಿ ಇದೆ, ನೋಡು. ಅದು ಯಾವ್ದು ಗೊತ್ತ, ನನ್ನ ಕಡೆ ಮಾವನ ಹೆಂಡ್ತಿ ಆಗೋದು" ಫೊಳ್ಳನೆ ನಕ್ಕಳು.

ಮೊದಲು ಕಣ್ಮಣಿ ಕಕ್ಕಾಬಿಕ್ಕಿಯಾದಳು. ಅವಳ ಮೂಗಿನ ತುದಿ ಕೋಪದಿಂದ ಕೆಂಪಾಯಿತು "ಜೋಕ್, ಮಾಡೋಕೆ ಮಿತಿ ಇರುತ್ತೆ. ನಂಗೆ ಇಂಥ ಮಾತುಗಳೂಂದ್ರೆ.. ಇಷ್ಟವಾಗೋಲ್ಲ" ಸಿಡಿಮಿಡಿಗುಟ್ಟಿದಳು. ನಗೆ ಮುಖದಿಂದ ಅವಳ ಭುಜಗಳ ಮೇಲೆ ಕೈ ಇಟ್ಟು "ಓಕೇ.. ಓಕೇ, ನಾನು ಅಂಥ ಪ್ರಪೋಸಲ್ ಮಾಡ್ಲಾರೆ. ನನ್ನ ಗೋಪಾಲ ಮಾವ ತುಂಬ ಖಂಡಿತವಾದಿ. ಈ ಮನೆಯಲ್ಲಿ ಅವನೊಬ್ಬ ಭಿನ್ನ. ಸುಮ್ನೆ ತಮಾಷೆ ಮಾಡ್ದೇ" ಸಾಂತ್ವನಿಸುವಂತೆ ನುಡಿದಳು. ಇಂಥ ಊಟದ ಸಮಯುಗಳಲ್ಲಿ

ಗೋಪಾಲ ಇರಬೇಕು. ಕೆಲವೊಮ್ಮೆ ಅಳುವಂತೆ ಕಟು ನುಡಿಗಳನ್ನಾಡಿ ಬಿಡುತ್ತಿದ್ದ.

"ಅಜ್ಜಿ, ಗೋಪಾಲ ಮಾವ ಎಲ್ಲಿ ?" ವಿಚಾರಿಸುತ್ತಲೇ ಮೇಲೆದ್ದಳು.

"ಅವ್ನ ಸಮಾಜ ಸೇವೆಯ ವಿಷ್ಯ ಗೋತ್ತಲ್ಲ" ಎಂದರಷ್ಟೆ ಶಬರಿ.

ಊಟದ ಮನೆಯಲ್ಲಿ ಬಾಳೆಯೆಲೆ ರೆಡಿಯಾಗಿತ್ತು. ಬಂದು ಕೂತ ನಂತರ ಮೂಗಿಗಳಂತೆ ಉಪ್ಪು, ಉಪ್ಪಿನಕಾಯಿ, ಹಲಸಿನ ಹಪ್ಪಳ, ಬಾಳೆ ಕಾಯಿ ಉಪ್ಪೇರಿ, ಹುಳಿ ಮಾವಿನ ತೊವ್ವೆ, ಎಂಥದ್ದೋ ಎರಡು ಗೊಜ್ಜುಗಳು ಎಲೆಯನ್ನು ಅಲಂಕರಿಸಿದಾಗ ತಡಬಡಿಸುವಂತಾಯಿತು ಕಣ್ಮಣಿಗೆ. ಅನಾಥಾಲಯದಲ್ಲಿ ಹೆಚ್ಚು ಕಡಿಮೆ ಒಂದೇ ರೀತಿಯ ಊಟ, ತಿಂಡಿ ಎಂದೋ ಅಪರೂಪಕ್ಕೆ ಒಂದಿಷ್ಟು ವ್ಯತ್ಯಾಸವನ್ನು ಕಾಣಬಹುದಿತ್ತು. ವಿಜಯ ವುಮನ್ಸ್ ಹಾಸ್ಟಲ್‌ಗೆ ಬಂದ ನಂತರವೆ ಊಟ, ತಿಂಡಿಯಲ್ಲಿ ವೈವಿದ್ಯತೆ, ರುಚಿ ತಿಳಿದಿದ್ದು. ಆದರೆ ಇಂದಿನ ಊಟಕ್ಕೆ ಬಡಿಸಿದ್ದ ರೀತಿ, ಪದಾರ್ಥಗಳ ವಾಸನೆಯೇ ಅವಳನ್ನು ತಬ್ಬಿಬ್ಬಾಗಿಸಿತು, ಒಂದು ರೀತಿಯ ಗಾಬರಿ.

'ಸಾಕು, ಬೇಕು' ಇಷ್ಟರಲ್ಲಿಯೇ ಊಟ ಮುಗಿದರೂ ಮಧ್ಯೆ ಮಧ್ಯೆ ವಾಸಂತಿ, ಶಬರಿಯವರ ಉಪಚಾರದಿಂದ ಸ್ವಲ್ಪ ಸಂಕೋಚ ಪಕ್ಕಕ್ಕಿಟ್ಟು ಭರ್ಜರಿಯಾಗಿ ಕಣ್ಮಣಿ ಊಟ ಮಾಡಿದ್ದೊಂದು ವಿಶೇಷ.

"ಒಂದ್ಗಳಿಗೆ ಮಲ್ಗಿ" ಶಬರಿ ಹೇಳಿದ ನಂತರವೇ ಇಬ್ಬರು ರೂಮಿನೊಳಕ್ಕೆ ಬಂದು ಬಾಗಿಲು ಹಾಕಿಕ್ಕೊಂಡಿದ್ದು. "ಭರ್ಜರಿ... ಊಟ" ಉರುಳಿಸಿದ ಹಾಸಿಗೆಯ ಮೇಲೆ ಉರುಳಿಕೊಂಡಾಗ ಕಣ್ಮಣಿಗೆ ಕಣ್ಣು ಎಳೆಯತೊಡಗಿತು. "ಮಲಕ್ಕೊಂಡ್, ಒಂದಿಷ್ಟು ಭಾನುವಾರದ ನಿದ್ದೆ ಹೊಡೀ" ಅವಳ ಪಕ್ಕ ಉರುಳಿಕೊಂಡಳು "ಅಜ್ಜಿ ಬಿಟ್ಟು ಮಿಕ್ಕವ್ರು ನಿನ್ನತ್ರ ಮಾತಾಡ್ಲೇ ಇಲ್ಲ" ಗೆಳತಿಯ ಪ್ರಶ್ನೆಗೆ ವಾಸಂತಿಯ ಮುಖದಲ್ಲಿ ತೇಲಿದ್ದು ವಿಷಾದ. "ಇಲ್ಲಿ ಯಾರು ನನ್ನ ಸ್ವಂತದವ್ರು ಇಲ್ಲ. ಸಾಕಿದ ಮಮತೆಗೆ ಅಜ್ಜಿ, ಅಜ್ಜಯ್ಯ ಪ್ರೀತಿಯಿಂದ ನೋಡ್ತಾರೆ. ಮಾವಂದಿರಿಗೂ ಒಂದಿಷ್ಟು ಪ್ರೀತಿ ಇದ್ದುದರಿಂದಲೇ ಈ ಮನೆಯಲ್ಲಿ ಇರಲು ಸಾಧ್ಯವಾಯ್ತು, ಅಷ್ಟಿಷ್ಟು ಓದಿನ ಜೊತೆ ಒಂದು ನೆಲೆ ಅಂತ ಆದುದ್ದು. ಈ ಮನೆಗೆ ಸೊಸೆಯಂದಿರಾಗಿ ಕಾಲಿಟ್ಟ ಒಬ್ಬರಿಗೂ ನನ್ಕಂಡ್ರೆ ಆಗೋಲ್ಲ. ಅವ್ರಿಗೆ ಮಕ್ಳು ಇಲ್ಲ. ಅದ್ಕೇ ನಾನೇ ಕಾರಣ ಅನ್ನೋ ತರಹ ಮೂಢ ನಂಬಿಕೆ". ಫಕ್ಕನೆ ನಕ್ಕಾಗ, ಅವಳ ಕಣ್ಣಿಂದ ತುಂತುರು ಸಿಡಿಯಿತು.

ಕಣ್ಮಣಿ ನೊಂದುಕೊಂಡಳು. ಅನಾಥತ್ವದ ನೋವು ಎಂತಹುದೆಂದು ಅವಳಿಗೆ ಗೊತ್ತು. "ಸಾರಿ ಕಣೇ, ಕಣ್ಣೀರು ಮಿಡಿಯೋ ಅಂಥ ಮಾತುಗಳೇ ಬೇಡ. ಒಂದಿಷ್ಟು ರೆಸ್ಟ್, ಆಮೇಲೆ ತಿರುಗಾಡೋಣ" ಬಲವಂತದಿಂದ ಮಲಗಿಸಿದಳು.

ಒಂದೇ ಮಂಚದ ಮೇಲೆ ಆ ಕಡೆಯೊಬ್ಬಳು, ಈ ಕಡೆಯೊಬ್ಬಳು ತಿರುಗಿಕೊಂಡು ಮಲಗಿದ್ದರು, ತಮ್ಮ ಬದುಕಿನ ದಟ್ಟವಾದ ಚಿಂತನೆಯಲ್ಲಿ ಮುಳುಗಿದ್ದ ಒಂಟಿ ಪಕ್ಷಿಗಳು.

ಇಬ್ಬರು ಎದ್ದು ಹೊರಗೆ ಬರುವ ಮುನ್ನ ವಾಸಂತಿ ನಾಲ್ಕು ಸೀರೆಗಳ ಜೊತೆ ಬ್ಲೌಸ್‌ಪೀಸ್‌ಗಳು, ಅಜ್ಜಿಗೊಂದು ಮೊಣಕಾಲ್ಮೂರು ರೇಶಿಮೆಯ ಸೀರೆ ಸ್ವಲ್ಪ ಬೆಲೆಯುಳ್ಳದ್ದು, ತಾತನಿಗೊಂದು ಶಾಲು - ಇವಿಷ್ಟನ್ನು ತುರುಕಿಕೊಂಡು ಬಂದವಳು ಬಿಚ್ಚಿ ಹೊರಗೆ ತಂದಳು.

'ಅತ್ತೆ, ಇಂದು ನಿಂಗೆ, ಇದು ನಿಮಗೇ, ಈ ಕಲರ್ ನಿಮಗೆ ಮ್ಯಾಚ್ ಆಗುತ್ತೇಂತ ತಂದೆ. ಹಸಿರು ನಿಮಗೆ ಇಷ್ಟಾಂತ ತಂದೆ. ಅಜ್ಜಿಗೆ ಅಂಜೂರ ಬಣ್ಣದ ಸೀರೆ' ಅವರವರ ಪದಾರ್ಥಗಳನ್ನು ಅವರವರಿಗೆ ಕೊಟ್ಟು ಕೃತಜ್ಞಳಾದಳು. ಅವರುಗಳ ಮುಖದಲ್ಲಿ ಅಷ್ಟಿಷ್ಟು ಪ್ರಸನ್ನತೆ ಕಾಣಿಸಿಕೊಂಡಿತು. ಅಜ್ಜಿ ಮಾತ್ರ ದೊಡ್ಡದಾಗಿ ಆಕ್ಷೇಪಿಸಿದಳು 'ಇದೆಲ್ಲ ಯಾಕೆ ಬೇಕಿತ್ತು? ನಾಲ್ಕು ಕಾಸು ಕೂಡಿಟ್ಕೋ. ಮುಂದೆ ನಿಂಗೆ ಸಮಯಕ್ಕೆ ಆಗುತ್ತೆ. ನಿನ್ನ ಅಜ್ಜ ಅಲ್ಲಲ್ಲಿ ಗಂಡು ನೋಡ್ತಾ ಇದ್ದಾರೆ. ನಾಲ್ಕು ಅಕ್ಷತೆ ಕಾಳು ಹಾಕಿದ್ರೆ.. ನಮ್ಮ ಜವಾಬ್ದಾರಿ ಅಷ್ಟಿಷ್ಟು ಕಡ್ಮೇ ಆಗುತ್ತೆ' ಸೀರೆಯನ್ನು ಕೈಯಲ್ಲಿ ಹಿಡಿದೇ ಹೇಳಿದಾಗ, ವಾಸಂತಿ ತಲೆ ಕುಣಿಸಿದಳು. "ಬೇಡ ಅಜ್ಜಿ, ಸದ್ಯಕ್ಕೆ ಮದ್ವೆ ಮಾತೇ ಬೇಡ. ಒಂದು ಜಗತ್ತಿನಿಂದ ಮತ್ತೊಂದು ಜಗತ್ತನ್ನು ಪ್ರವೇಶಿಸಿದಂತಾಗಿದೆ. ಆರಾಮಾಗಿದ್ದೀನಿ. ಇನ್ನು ನಾಲ್ಕಾರು ವರ್ಷವಾದ್ರೂ ಇದೇ ತರಹ ಬದ್ಕಬೇಕನ್ನೋ ಆಸೆ" ಕಣ್ಣೀರು ತೊಡೆದುಕೊಂಡು ಹಿತ್ತಲಿಗೆ ಹೋದಳು.

ತಾಯಿ, ತಂದೆಯರನ್ನ ತಿಂದುಕೊಂಡ ಅನಾಥ ಮಗುವನ್ನು ತಂದು ಸಾಕಿಕೊಂಡಿದ್ದರು ಶಬರಿ. ಮೊದ ಮೊದಲು ಎಲ್ಲಾ ಹಿತವಾಗಿತ್ತು, ಸೊಸೆಯರು ಬಂದ ನಂತರವೇ ಷುರುವಾಗಿದ್ದು ಸಂಕಷ್ಟಗಳ ಸರಮಾಲೆ.

ಮನೆಯ ಗಂಡಸರು ಅಷ್ಟಿಷ್ಟು ಅಕ್ಕರೆಯಿಂದ ಮಾತಾಡಿಸಿದರು. ಆ ಮನೆಯ ಕಡೆಯ ಸಂತಾನ ಸ್ವಲ್ಪ ಕಡಿಮೆ ಓದಿಕೊಂಡಿದ್ದವ. ಹಿರಿಯ

ಮಗ ಒಂದು ಎಸ್ಟೇಟ್‌ನಲ್ಲಿ ರೈಟರ್, ಇನ್ನೊಬ್ಬ ಹತ್ತಿರದ ಜೂನಿಯರ್ ಕಾಲೇಜಿನಲ್ಲಿ ಮೇಷ್ಟರ್, ಮೂರನೆಯವ ತೋಟ ಗದ್ದೆಗಳನ್ನು ನೋಡಿಕೊಳ್ಳುವುದರ ಜೊತೆಗೆ ಅಷ್ಟಿಷ್ಟು ಲೇವಾದೇವಿ ಮಾಡುತ್ತಿದ್ದ. ಸದ್ಯಕ್ಕೆ ನಾಲ್ಕನೆಯವನಿಗೆ ಇಂಥ ಕೆಲಸವೇ ಅಂತೇನಿರಲಿಲ್ಲ. ಚೆನ್ನಾಗಿ ಕೊಳಲು ನುಡಿಸುತ್ತಿದ್ದ. ಸುತ್ತಮುತ್ತಲು ಸಂಗೀತ, ಯಕ್ಷಗಾನ ಅಂದರೆ ಅವನು ಮಂಚೂಣಿಯಲ್ಲಿರುತ್ತಿದ್ದ. ಇನ್ನು ಮದುವೆ ಇಲ್ಲ, ಶಬರಿಗೆ ವಾಸಂತಿಯನ್ನೆ ಕಡೆಯ ಸೊಸೆಯನ್ನಾಗಿ ಮಾಡಿಕೊಳ್ಳುವ ಇಷ್ಟ. 'ಬೇಡ... ಅವಳು ಈ ಮನೆಯ ಮಗು' ಅಜ್ಜನವರ ಉವಾಚ. 'ಅವ್ನಿಗೂ ಹೋಗಿ ಬರೋಕೆ, ಒಂದು ಮನೇಂತ ಬೇಡ್ವಾ! ಬೇರೆ ಕಡೆ ನೋಡೋಣ' ಮೂವರು ಸೋದರರ ಪಟ್ಟು. ಸೊಸೆಯರು ಕೂಡ ಅದೇ ದಾರಿಯಲ್ಲಿದ್ದರು. ಆದರೆ ಗೋಪಾಲನಿಗೆ ವಾಸಂತಿಯೆಂದರೆ ಇಷ್ಟವೇ, ಹಾಗಂತ ಹಿರಿಯರನ್ನೆಲ್ಲ ವಿರೋಧಿಸಿ ಬೀದಿಗೆ ಬೀಳಲು ಇಷ್ಟವಿಲ್ಲ.

ಅಲ್ಲಿ ಇಲ್ಲಿ ಎರಡು ದಿನ ಸುತ್ತಾಡಿದವರು ಮೂರನೆಯ ದಿನ ಹಾಳು ಬಂಗ್ಲೆಯತ್ತ ಹೊರಟರು. ಯಥೇಚ್ಛವಾಗಿ ಗಿಡಗಂಟೆಗಳು ಬೆಳೆದುಕೊಂಡಿದ್ದವು. ಭೂತ ಬಂಗ್ಲೆ ಎನ್ನುವ ಕೆಟ್ಟ ಹೆಸರು ಇದ್ದುದ್ದರಿಂದ ಸುತ್ತಮುತ್ತ ಹಳ್ಳಿಯವರು ಇತ್ತ ಸುಳಿಯುತ್ತಿರಲಿಲ್ಲ. ಒಂದಿಬ್ಬರು ಕೊಂಡು 'ತಮಗೇ ಆಗಿಬರಲಿಲ್ಲ' ಎಂದು ಮಾರಿದ್ದು ಕೂಡ ಉಂಟು. ಬಾಂಬೆಯ ಕಡೆಯ ಒಬ್ಬ ವ್ಯಕ್ತಿ ಕೊಂಡು, ಇದನ್ನು ಹೋಟಲ್ ಆಗಿಸುವ ಕನಸು ಕಂಡು ರಿಪೇರಿ ಮಾಡಿಸುತ್ತಿದ್ದವನು ಹಠಾತ್ತಾಗಿ ಸತ್ತು ಆ ಬಂಗ್ಲೆಗೆ 'ಭೂತ ಬಂಗ್ಲೆ' ಎನ್ನುವ ಹೆಸರನ್ನು ಶಾಶ್ವತ ಮಾಡಿ ಹೋಗಿದ್ದ. ಅಂತು ನಿರ್ಜನವಾಗಿ ಹೋಗೋಕೆ ಅದೊಂದು ಮುಖ್ಯ ಕಾರಣವೆನಿಸಿತು.

"ಇನ್ನು ಸ್ಟಾಪ್, ಮುಂದಕ್ಕೆ ಹೋಗೋದು ಬೇಡ. ಇಲ್ಲಿವರ್‍ಗೂ ಬಂದಿದ್ದೀಂತ ಅಜ್ಜೀಗೇ ಗೊತ್ತಾದ್ರೂ ಪೂಜೆಯಾಗಿಬಿಡುತ್ತೆ". ವಾಸಂತಿ ನಿಂತವಳು ಬಗ್ಗಿ ಮುಳ್ಳಿಗೆ ತಗುಲಿಕೊಂಡಿದ್ದ ಸೀರೆಯ ನೆರಿಗೆಗಳನ್ನು ಬಿಡಿಸಿಕೊಂಡಳು.

ಕಣ್ಮಣಿ ನೋಟವನ್ನು ಅಲ್ಲಿಂದ ಕೀಳಲಿಲ್ಲ. ಅದ್ಭುತ ಆಕರ್ಷಣೆ ಇದೆಯೆನಿಸಿತು ಬಂಗ್ಲೆಯಲ್ಲಿ. ಒಮ್ಮೆ ಒಂದು ಸುತ್ತು ಬಳಸಿ ಬಂದರೇನು? ಪ್ರಶ್ನೆ ಮೂಡಿದ ಕೂಡಲೇ ಅವಳ ಮುಂದಿಟ್ಟಳು.

"ಒಂದು ಸುತ್ತು ನೋಡಿ ಬರೋಣ"

ವಾಸಂತಿ ತಟ್ಟನೇ ಅವಳತ್ತ ನೋಡಿ "ಯಾಕೆ, ಇಂಥ ಕೆಟ್ಟ ಆಸೆ? ಹೇಗೂ, ನಾವುಗಳು ವಯಸ್ಸಿಗೆ ಬಂದ ಹುಡ್ಗೀರು. ಏನಾದ್ರೂ ಮೆಟ್ಟಿಕೊಂಡ್ರೆ!" ಎದೆಯ ಮೇಲೆ ಕೈಯಿಟ್ಟುಕೊಂಡಳು. ಸುತರಾಂ ಅವಳಿಗೆ ಒಪ್ಪಿಗೆ ಇಲ್ಲ.

ಅತ್ತಲೇ ನೋಡುತ್ತಿದ್ದ ಕಣ್ಮಣಿ ಅದೆಲ್ಲ ತಳ್ಳಿ ಹಾಕಿದಳು "ನೀನು ಅದ್ನೆಲ್ಲ ನಂಬ್ತೀಯಾ! ನಾನು ಅದ್ದ ಅನಾಥಾಲಯದಲ್ಲಿ ಒಬ್ಬ ಅಸಿಸ್ಟೆಂಟ್ ವಾರ್ಡನ್ ಇದ್ಲು. ಆ ಕೆಟ್ಟ ಹೆಂಗ್ಸಿಗಿಂತ ದೊಡ್ಡ ಭೂತ ಇರಲಿಕ್ಕಿಲ್ಲ. ನಾನು ಇದ್ದೀನಿ, ಬಾ" ಎರಡು ಹೆಜ್ಜೆ ಮುಂದಕ್ಕೆ ಹಾಕಿದಾಗ ರಟ್ಟೆ ಹಿಡಿದು ನಿಲ್ಲಿಸಿದಳು ಗೆಳತಿಯನ್ನು "ಬೇಡ, ಸುಮ್ನೆ ಬಾ, ಇಲ್ದ ಗೊಂದಲ ಬೇಡ. ಸಿಟಿಯಲ್ಲಾದ್ರೆ ಅವರವ್ರ ಕೆಲ್ಸಗಳು ಅವರವರಿಗೆ. ಇಲ್ಲಿ ಸ್ವಲ್ಪ ಡಿಫರೆಂಟ್. ಬೇಗ ಸ್ಪಂದಿಸಿಬಿಡ್ತಾರೆ. ಆ ಕಡೆ ಹೋಗಿದ್ದು ನೋಡಿದ್ರು... ಮನೆಗೆ ವಿಷ್ಯ ಮುಟ್ಸಿ ಬಿಡುತ್ತೆ" ಕಟ್ಟುನಿಟ್ಟಾಗಿ ಹೇಳಿ ಎಳೆದೊಯ್ದಳು.

ಜಗುಲಿಯ ಮೇಲೆ ಕೂತು ಆರಾಮಾಗಿ ಕೊಳಲು ನುಡಿಸುತ್ತಿದ್ದ ಗೋಪಾಲ ನಿಲ್ಲಿಸಿ ನಗೆ ಚೆಲ್ಲಿದ "ಎಲ್ಲಿಗೆ ಹೋಗಿದ್ರಿ? ಕಾಣಲೇ ಇಲ್ಲ. ನಮ್ಮ ಕಡೆ ಬಂದ್ಬಿಟ್ರೆ ಎಂಥ ಹುಡ್ಗಿಯರಿಗಾದ್ರೂ ಧೈರ್ಯ ಬರುತ್ತೆ" ನಗೆಯಾಡಿದ. ಅವನ ಮಾತಿನ ಧಾಟಿಯೇ ಆ ರೀತಿಯದು.

ಕಣ್ಮಣಿ, ವಾಸಂತಿ ಜಗುಲಿಯಂಚಿನಲ್ಲಿ ಕೂತರು.

"ನೀವು ಕೊಳಲು ಚೆನ್ನಾಗಿ ನುಡಿಸ್ತೀರಾ !" ಕಣ್ಮಣಿ ಹೇಳಿದಾಗ "ಹುರ್ರೆ..." ಎಂದು ಎರಡು ಕೈಗಳನ್ನು ಎತ್ತಿ "ನನ್ನಮ್ಮ ಬಿಟ್ಟು ನಾನು ನುಡಿಸೋ ಕೊಳಲನ್ನು ಸ್ವಲ್ಪ ಇಷ್ಟಪಡೋದು ಅಪ್ಪಯ್ಯ ಮಾತ್ರ. ಬೇರೆ ಕೆಲವರು ಹೇಳಿದ್ರೂ, ನೀವು ಹೇಳಿದ್ಮೇಲೆ ನಂಗೆ ನಂಬ್ಕೇ ಬಂದಿದ್ದು. ತುಂಬ .....ತುಂಬ ಧನ್ಯವಾದ ಕಣ್ರೀ, ಕಣ್ಮಣಿ" ಎಂದ ಹರ್ಷದಿಂದ. ವಾಸಂತಿ ಹಣೆಗೆ ಕೈಯೊತ್ತಿದಳು.

"ಹುಷಾರ್ ಕಣ್ಮಣಿ, ಗೋಪಾಲ ಮಾವನ ಮಾತುಗಳು ಅಂದ್ರೆ... ಅರ್ಜುನನ ಬಾಣಗಳ ತರಹ, ನಾನು ಹೆಚ್ಚು ಭಯಪಡೋದು ಇವನೊಬ್ಬನಿಗೆ ಮಾತ್ರ".

ವಾಸಂತಿಯ ಮಾತುಗಳನ್ನು ಕೇಳಿದವನು ಎದ್ದು ತಲೆಯ ಮೇಲೆ ಮೊಟಕಿದ. ಒಂದಿಷ್ಟು ಜಡೆಯೆಳೆದು ನೋಯಿಸಿದ. ತಲೆ ಕೆದರಿ ಗೋಳೊಯ್ದುಕೊಂಡ.

ಅವಳಿಗಿಂತ ಒಂದು ನಾಲ್ಕು ವರ್ಷ ಹಿರಿಯನಾದ ಗೋಪಾಲನಲ್ಲಿಯೇ ಒಂದಿಷ್ಟು ಸಲಿಗೆ, ಸ್ನೇಹ ವಾಸಂತಿಗೆ. ಆದರೆ ಅವನ ಟೀಕೆ, ಮಾತುಗಳಿಗೆ ಅಷ್ಟೇ ಹೆದರುತ್ತಿದ್ದಳು.

"ಹೇಗೆ ಅನ್ನಿಸ್ತು ನಮ್ಮ ಕಡೆ?" ಕೇಳಿದ ಸ್ನೇಹದಿಂದ.

"ಎಲ್ಲಾ ಇಷ್ಟವಾಯ್ತು ? ಆ ಧೂಳು, ಹೊಗೆ ಎಲ್ಲಾಕ್ಕಿಂತ ಇಲ್ಲೇ ಇದ್ಬಿಡೋಣಾಂತ ಅನ್ನಿಸುತ್ತೆ" ಭಾವುಕಳಾಗಿ ನುಡಿದಾಗ ಕೊಳಲಿನಿಂದ ಕೈ ಮೇಲೆ ತಾಳ ಹಾಕುತ್ತಿದ್ದವನು ನಿಲ್ಲಿಸಿದ. "ಒಂದ್ತಿಂಗು ಇದ್ದು ಇದೇ ಮಾತ್ಹೇಳಿದ್ರೆ... ನಿಮ್ಮನ್ನ ಇಲ್ಲೇ ಉಳ್ಸಿಕೊಳ್ಳೋಕೆ ಏನಾದ್ರೂ ಯೋಜನೆ ಹಾಕೋಣ" ಎಂದ ನಗುತ್ತ. ಒಮ್ಮೆ ವಾಸಂತಿಯತ್ತ ಚುರುಕಿನ ನೋಟ ಹರಿಸಿ "ಇಲ್ಲಿರೋಲ್ಲಾಂತ ಇವ್ಳು ಎಷ್ಟು ಗಲಾಟೆ ಮಾಡಿದ್ದಾಳೆ, ಕೇಳಿ. ಉಪವಾಸ ಸತ್ಯಾಗ್ರಹ ಷುರು ಮಾಡಿದಾಗ ನಮ್ಮ ಅನು ಅತ್ತೆ ಒಂದು ಕೆಲ್ಸ ಕೊಡ್ಸಿ ಇಲ್ಲಿಂದ ಖಾಲಿ ಮಾಡ್ಸಿದ್ರು. ನಿಮ್ಗೇ ಇಲ್ಲೇ ಉಳಿಯೋ ಆಸೆ!" ಛೇಡಿಸಿದ ಇಬ್ಬರನ್ನು ಒಟ್ಟಿಗೆ.

ಒಂಧಿಷ್ಟು ವಾಸಂತಿ, ಗೋಪಾಲ ಜಗಳವಾಡಿದಾಗ ಸದ್ದಿಲ್ಲದೇ ನೋಡುತ್ತ ಕೂತ ಕಣ್ಮಣಿ "ನೀವು ಬಂಗ್ಲೆನಾ ನೋಡಿದ್ದೀರಾ ?" ಕೇಳಿದಳು.

ಕ್ರಾಪ್ ಕೆದರಿಕೊಂಡ "ಆ ಭೂತದ ವಾಡೆ ಬಂಗ್ಲೆನಾ ? ಖಂಡಿತ ನೋಡಿಲ್ಲ. ಮುಂದು ಕೂಡ ನೋಡೋ ಹಂಗಿಲ್ಲ. ನಾನು ಹುಟ್ಟೋ ಮೊದ್ಲು ಅಂದರೇ ನನ್ನ ಎರಡನೆ ಅಣ್ಣಾ ಹುಟ್ಟಿದಾಗ ಅಲ್ಲಿ ದಂಪತಿಗಳ ಕೊಲೆ ಆಯಿತಂತೆ. ಒಬ್ಬೊಬ್ರು ಒಂದೊಂದು ತರಹ ಹೇಳ್ತಾರೆ. ಬರೀ ಸ್ವಾರಸ್ಯವಾದ ಕತೆಗಳೇ. ಆಮೇಲೆ ಕೆಲವರ ಕೈ ಬದಲಾಯ್ತು ಅಂತಾರೆ. ನಮ್ಮಜ್ಜ ದಿನಕ್ಕೊಂದು ದೆವ್ವ, ಭೂತದ ಕತೆ ಹೇಳಿದ್ದರಿಂದ ಎಂದೂ ಅಡ್ಡಾಡೋಕೆ ಹೋಗಿದ್ದೇ ಇಲ್ಲ. ಹೊಸಬರು ಬಂದರೆ ಮಾತ್ರ ಬಂಗ್ಲೆ ಅಂತಾರೆ, ಇಲ್ಲಿನವರೆಲ್ಲ ವಾಡೆ ಅಂತ್ಲೇ ಅನ್ನೋದು" ದೀರ್ಘ ವಿವರಣೆಯನ್ನೆ ಕೊಟ್ಟ.

"ಗೋಪಾಲ ಮಾವ ಬರೀ ಪುಕ್ಕಲು. ನನ್ನಷ್ಟು ಧೈರ್ಯ ಕೂಡ ಇಲ್ಲ" ವಾಸಂತಿ ಆಡಿಕೊಂಡಾಗ, ಹೊಡೆಯಲು ಎತ್ತಿದ ಕೊಳಲನ್ನು, ತಾಯಿಯನ್ನು ನೋಡಿ ಹಿಂದಕ್ಕೆ ತಗೊಂಡ, ಆಕೆ ಇಣಕಿ ಅದೃಶ್ಯರಾದರು.

"ಏನು ಈ ಪಾಟಿ ನಗು, ! ಸಿಟಿಯಲ್ಲಿ ಇಂಥದೆಲ್ಲ ಸೇರಬಹ್ದು. ಇಲ್ಲಿ

ಆಗಲಿಕ್ಕಿಲ್ಲ !" ಶಬರಿಯ ದೊಡ್ಡ ಸೊಸೆ ಆಕ್ಷೇಪಿಸಿದರು ಸಿಡುಕು ಮುಖದಿಂದ.

ಕೆನ್ನೆಯುಜ್ಜಿದ ಗೋಪಾಲ "ಏನು ನಡೀತಾ ಇರೋದು ? ನೀನಂತು ನಗೋಲ್ಲ. ನಗೋ ಜನನಾ ಕಂಡರಾಗೋಲ್ಲ. ಅದ್ಕೇ ಅಳೋಕು ನಗೋಕು ಒಂದು ಸಂತಾನವಿಲ್ದೇ ಹೋಯ್ತು" ಎಂದ ಚೂಟಿಯಾಗಿ. ಇಂಥ ಮಾತುಗಳಿಂದ ಮಾತ್ರ ಆಕೆಯನ್ನು ಹದ್ದುಬಸ್ತಿನಲ್ಲಿಡಬಹುದು, "ಆಡ್ಕೋ, ಆಡ್ಕೋ.. ನನ್ನ ಹಣೆ ಬರಹ" ಆಕೆ ಕಣ್ಣಿಗೆ ಸೆರಗೊತ್ತಿಕೊಂಡು ಹೋದರು.

"ಅತ್ತೆ ನೊಂದ್ಕೊಂಡ್ರು" ವಾಸಂತಿ ಅಂದಳು.

"ಏನು ಪರ್ವಾಗಿಲ್ಲ, ಅದೇನು ತಲೆಕೊಡ್ಸಿಕೊಳ್ಳೋಂಥ ವಿಷ್ಯವಲ್ಲ, ತೋಟದ ಕಡೆ ಹೋಗ್ಬರ್ತೀನಿ" ಅಲ್ಲಿಂದ ಕಾಲು ಕಿತ್ತ. ಕುಟುಕಿದ ಕೂಡಲೇ ಚೇಳಿನಂತೆ ಹರಿದು ಮರೆಯಾಗಿಬಿಡುತ್ತಿದ್ದ.

ಇಬ್ಬರು ಕದಲದೇ ಇನ್ನಷ್ಟು ಹೊತ್ತು ಕೂತರು ಜಗುಲಿಯ ಮೇಲೆ. ಹಚ್ಚ ಹಸುರಿನ ನಡುವೆಯಿಂದ ಬೀಸಿ ಬರುತ್ತಿದ್ದ ಮಂದಾನಿಲ ತಂಪಾದ ಸೊಂಪನ್ನ ಹೊತ್ತು ತರುತಿತ್ತು. ಆದರೆ ಕಣ್ಮಣಿ ಮಿದುಳಿನಲ್ಲಿದ್ದುದು ಬರೀ ಬಂಗ್ಲೆ. ಏನೋ ಒಂದು ರೀತಿಯ ಸೆಳೆತ. ಅರ್ಥವಾಗದ ಆಕರ್ಷಣೆ. ತೀರಾ ವಿಚಲಿತಳಾಗಿದ್ದಳು.

"ಒಮ್ಮೆ ನಾವಿಬ್ರೆ ಬಂಗ್ಲೆಯನ್ನ ಯಾಕೆ ನೋಡ್ಬಾರ್ದು?"

ಗೆಳತಿಯ ತಲೆಯ ಮೇಲೊಂದು ಮೊಟಕಿದಳು. "ಸಾಕು, ನಂಗಂತು ಚೆನ್ನಾಗಿ ಬದುಕೋಕೆ ಆಸೆ ಇದೆ. ಸಾಯೋಕೆ ಇಷ್ಟವಿಲ್ಲ. ಭೂತ, ಪ್ರೇತ ಮೆಟ್ಟಿಕೊಂಡರೇ.... ಬೇವಿನ ಸೊಪ್ಪು ಹಿಡಿದ ಮಂತ್ರವಾದಿಯನ್ನು ನೀನೇ ಕರ್ಕೊಂಡ್ಬಂದ್ ಪೂಜೆ ಹಾಕಿಸ್ಬೇಕು. ಅದು ಬಿಡಲ್ಲಿಲ್ಲಾಂತ.. ಅಂದ್ಕೋ" ಭಯ ನಟಿಸಿದಳು ವಾಸಂತಿ.

ಅಂದಿನ ರಾತ್ರಿಯೆಲ್ಲ ಕಣ್ಮಣಿಗೆ ಬಂಗ್ಲೆಯನ್ನು ನೋಡಬೇಕೆಂಬ ಆತುರ, ಕಾತುರ. ಎಷ್ಟೋ ಪ್ರಯತ್ನಪಟ್ಟರೂ ನಿದ್ರಿಸಲಾಗಲ್ಲಿಲ್ಲ. ಬೆಳಗಿನ ಜಾವವೇ ಎದ್ದು ಕೂತಳು. ವಾಸಂತಿಯನ್ನು ಅಲುಗಿಸಿದಳು. ಬಲವಂತದಿಂದ ಎಬ್ಬಿಸಿ ಕೂಡಿಸಿದಾಗ ಹಾಗೇ ಬಿದ್ದುಕೊಂಡಳು.

"ಇಷ್ಟೊಂದು ನಿದ್ದೆಯಾದ್ರೆ.... ಹೇಗೆ? ಪ್ಲೀಸ್, ಏಳಮ್ಮ" ಮತ್ತೆ ಎಬ್ಬಿಸಿ ಕೂಡಿಸಿ "ನಿಜ್ವಾಗ್ಲೂ ನನ್ನ ಸಂಬಳದಲ್ಲಿ ನಿಂಗೊಂದು ಚೂಡಿದಾರ್ ಕೊಡಿಸ್ತೀನಿ" ಆಶ್ವಾಸನೆ ಕೊಟ್ಟಾಗ ಕಣ್ಣು ಬಿಟ್ಟಳು. ತಕ್ಷಣ ನಾಚಿಕೊಂಡಳು

"ನನ್ನ ಅಷ್ಟು ಸ್ವಾರ್ಥಿ ಅಂತ ತಿಳ್ಕೋಬೇಡ. ಇಬ್ರೂ ಒಂದೇ ದೋಣಿಯ ಪಯಣಿಗರು. ಸ್ವಲ್ಪ ಎಚ್ಚರ ತಪ್ಪಿದರೂ ಮುಳುಗಿಹೋಗ್ತೀವಿ" ಹನಿಗಣ್ಣಾದಳು. ಆದರೆ ಕಣ್ಮಣಿ ಇದ್ದ ಮೂಡ್‌ನಲ್ಲಿ ಅದನ್ನ ಲೆಕ್ಕ ಮಾಡದೇ ಟವಲು, ಪೇಸ್ಟ್, ಬ್ರಷ್ ಹಿಡಿದು ಬಚ್ಚಲು ಮನೆ ಹೋದಾಗ, ಒಲೆಗೆ ಉರಿ ಹಾಕುತ್ತಿದ್ದ ಗೋಪಾಲ ಪಂಚೆಯನ್ನು ಮೇಲಕ್ಕೆತ್ತಿ ಕಟ್ಟುತ್ತ "ಇದೇನು ಇಷ್ಟು ಬೇಗ ಎದ್ದಿದ್ದೀರಾ? ಆರಾಮಾಗಿ ಹೊರ್ಗೆ ಸುತ್ತಾಡಿಕೊಂಡ್ಬಂದ್.. ಸ್ನಾನ ಮಾಡಿ. ಆಗ ಎಂಥ ಮಜಾ ಸಿಕ್ಕುತ್ತೆ, ಗೊತ್ತಾ?" ಎಂದ ಕೂಡಲೇ ವಾಸಂತಿ ರೆಟ್ಟೆ ಹಿಡಿದು ನಿಲ್ಲಿಸಿದಳು "ಹಾಗೆ ಮಾಡೋಣ, ಒಂದಿಷ್ಟು ಸುತ್ತಾಡಿಕೊಂಡ್ಬಂದ್ ಸ್ನಾನ ಮಾಡೋಣ" ಹಿಂದಕ್ಕೆಳೆದುಕೊಂಡು ಬಂದಾಗ ಅವಳಿಗೇನು ಅರ್ಥವಾಗಲಿಲ್ಲ.

ಏನೇ, ಇದೆಲ್ಲ? ವಾಸಂತಿಯ ಪ್ರಶ್ನೆಗೆ ಸೆರಗನ್ನು ಸರಿ ಮಾಡಿಕೊಳ್ಳುತ್ತ 'ನಾವಿಬ್ರೂ ಹೊರಗಡೆ ಹೋಗ್ತಾ ಇದ್ದೀವಿ. ಅದ್ಕೇ ಅಜ್ಜಯಿಂದ ಪರ್ಮಿಷನ್ ಪಡಕೊಂಡ್ಬಾ. ಆಮೇಲೆ ಮಿಕ್ಕಿದ್ದು ಹೇಳ್ತೀನಿ' ಒಂದು ಪುಟ್ಟ ಬ್ಯಾಗನ್ನು ಹೆಗಲಿಗೆ ತೂಗಿ ಹಾಕಿಕೊಂಡಳು.

ಅಕ್ಕಿ ರೊಟ್ಟಿಗೆ ಹಿಟ್ಟನ್ನು ಹದವಾಗಿ ಕಲೆಸುತ್ತಿದ್ದ ಶಬರಿ "ಬೇಗ್ಬಾ, ತೀರಾ ತಿರ‍್ಗಾಡ್ಬೇಡಿ! ಬೇಕೂನ್ನಿಸಿದ್ರೆ ಗೋಪಾಲನ್ನ ಕರ್ಕೊಂಡ್ಹೋಗಿ" ಒಂದು ಸಲಹೆಯನ್ನ ಕೊಟ್ಟರು. ಅದು ಸೂಕ್ತವೆನಿಸಿತು ಅವರಿಗೆ.

ಗೋಪಾಲನಿಗೂ ಅಷ್ಟು ಸಾಕಿತ್ತು. ಅವರುಗಳಳೊಂದಿಗೆ ಹೊರಟೇಬಿಟ್ಟ. ಬಲಕ್ಕೆ ತಿರುಗಿಕೊಳ್ಳುವ ಬದಲು ಎಡಕ್ಕೆ ತಿರುಗಿಕೊಂಡಾಗ ಅವನಿಗೆ ಆಶ್ಚರ್ಯ.

"ಎನ್ರೀ, ಕಣ್ಮಣಿಯವ್ರೆ... ಭೂತ ಬಂಗ್ಲೆ ಕಡೆ ಹೊರಟಂಗಿದೆಯಲ್ಲ. ಅದ್ಕೆ ಪರ್ಮಿಷನ್ ಇಲ್ಲ. ಈ ಕಡೆ ಬನ್ನಿ. ನಾನೊಂದು ಒಳ್ಳೆ ಜಾಗಕ್ಕೆ ಕರ್ಕಂಡ್ ಹೋಗ್ತೀನಿ" ಪೂಸಿಯೊಡೆಯುವಂತೆ ಹೇಳಿದ.

ವಾಸಂತಿಯ ವಿರೋಧವನ್ನು ಲೆಕ್ಕಿಸದೇ ಗೋಪಾಲನನ್ನು ಒಪ್ಪಿಸುವ ವೇಳೆಗೆ ಅವಳಿಗೆ ಸಾಕು ಸಾಕಾಯಿತು.

"ಒಂದು ಕಂಡೀಷನ್, ನಾನು ನರಸಿಂಹ ಮಂತ್ರ ಹೇಳ್ತಾ ಇರ್ತೀನಿ. ನೀವುಗಳು ಕೂಡ ಹೇಳಿಕೊಟ್ಟಂಗೆ ಪಠಿಸಬೇಕು. ಅಕಸ್ಮಾತ್ ಬಾಯಲ್ಲಿ ಮಂತ್ರ ತಪ್ಪಾದ್ರೂ.. ಮನಸ್ಸಿನಲ್ಲಿ ನರಸಿಂಹ ದೇವರನ್ನು ಇಟ್ಕೊಳ್ಳಿ" ಹೇಳಿದ ಗೋಪಾಲ. ಅವನ ಕಂಡೀಷನ್‌ಗೆ ಇಬ್ಬರು ಒಪ್ಪಿಕೊಂಡರು.

ಮುಂದಿನ ಕಾಂಪೌಂಡ್‌ನ ದೊಡ್ಡ ಗೇಟಿಗೆ ಬೀಗ ಹಾಕಿತ್ತು. ಈಚೆಗಂತು ಹತ್ತಿರ ಸುಳಿಯುವವರಿರಲ್ಲಿಲ್ಲ. ಅತ್ತ ಇತ್ತ ಅಕ್ಕ ಪಕ್ಕ ನೋಡಿ ಮೇಲೆ ನೋಡಿ ನಿಟ್ಟುಸಿರು ಚೆಲ್ಲಿದ. ಒಮ್ಮೆ ಕಣ್ಮಣಿಯ ಕಡೆ ನೋಡಿದ. ಈ ಹುಡುಗಿಗೆ ಯಾಕೆ ಇಂಥ ಕೆಟ್ಟ ಹಟ? ಗೋಡೆಯನ್ನು ಸವರಿ ನೋಡಿದ. ಸರಸರನೆ ಜೋರಾಗಿ ನರಸಿಂಹ ಮಂತ್ರ ಪಠಿಸಿದ.

"ರ್‍ರೀ ಕಣ್ಮಣಿ, ನಿಮಗ್ಯಾಕೆ ಇಂಥ ಅಪಾಯದ ಕೆಲ್ಸ? ಭೂತ, ಪ್ರೇತ ಅಂಥದ್ದು ಇಲ್ಲದಿದ್ರೆ.. ಇದ್ನ ಸ್ಮಗ್ಲರ್ಸ್ ಧಾರಾಳವಾಗಿ ಉಪಯೋಗ್ಸಿಕೊಳ್ಳೋರು. ಸುಮ್ನೆ ಆ ಯೋಚ್ನೆ ಬಿಟ್ಟು ನಡೀರಿ" ಕೈಗಳಿಗೆ ಮೆತ್ತಿದ ಧೂಳನ್ನು ಕೊಡವಿಕೊಂಡು ಹಿಂದಕ್ಕೆ ನಡೆದವನು ನಿಂತ. ವಾಸಂತಿ, ಕಣ್ಮಣಿ ಅಲ್ಲೇ ನಿಂತಿದ್ದರು.

ಕಣ್ಮಣಿ ದೈನ್ಯದ ನೋಟ ಹರಿಸಿ "ನಾನೊಬ್ಬಳು, ಫಿಲಾಸಫರ್, ಒಂದು ಒಳ್ಳೆ ಲೇಖನ ಬರೆದ್ರೆ.. ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಸಿಕ್ಕುತ್ತೆ. ಅಡ್ವೆಂಚರ್ ಎಂದರೇ ನಂಗಿಷ್ಟ. ನೀವೇನು ಬರ್ಬೇಡಿ" ನಾನೇ ಹೋಗ್ತರ್ತೀನಿ. ಅವಳು ಹಿಂದೆ ಸರಿಯಲು ಇಚ್ಛಿಸಲಿಲ್ಲ.

ಅಂತು ಎರಡು ಮೂರು ಕಲ್ಲುಗಳನ್ನು ತಂದು ಪೇರಿಸಿ ಮೂವರು ಪ್ರಯಾಸದಿಂದ ಹತ್ತಿ ಒಳಕ್ಕೆ ಧುಮುಕಿದರು. ಒಣಗಿ ಬಿದ್ದ ಎಲೆ, ಕೊಂಬೆಗಳ ದೊಡ್ಡ ರಾಶಿಯೇ ಇತ್ತು. ಗೋಪಾಲ ಬಗ್ಗಿ ಒಂದು ತೆಳುವಾದ ಟೊಂಗೆಯನ್ನ ಮುರಿದು ಕೋಲುಗಳನ್ನಾಗಿ ಮಾಡಿ ಇಬ್ಬರಿಗೂ ಒಂದೊಂದು ಕೊಟ್ಟ, ತಾನೊಂದು ಬಲವಾದ ಕೋಲನ್ನು ಹಿಡಿದುಕೊಂಡ. ಬೆಳಗಿನ ಎಳೆಯ ಬಿಸಿಲು. ಅಲ್ಲಲ್ಲಿ ಸಣ್ಣ ಪುಟ್ಟ ಹುತ್ತಗಳ ಜೊತೆ ದೊಡ್ಡ ಹುತ್ತ ಕೂಡ ಬೆಳೆದುಕೊಂಡಿತ್ತು.

"ಖಂಡಿತ ನಾಗಪ್ಪ ಇಲ್ಲೆಲ್ಲೊ ವಾಸವಾಗಿರ್ತಾನೆ. ಹುಷಾರಾಗಿರಿ. ಮಲೆನಾಡ ಸೀಮೆಯಲ್ಲಿ ಹಾವುಗಳಿಗೆ ಬರವಿಲ್ಲದಿದ್ದರೂ, ಜನರು ಕಾಳಿಂಗ ಸರ್ಪಕ್ಕೆ ಹೆದರುತ್ತಾರೆ. ಹೆಜ್ಜೆ ಇಡೋಕೆ ಮೊದಲು ಒಂದಿಷ್ಟು ಹುಷಾರ್ ಇರ್ಲಿ" ಗೋಪಾಲ ಎಚ್ಚರಿಸುತ್ತಲೇ ಮುಂದಕ್ಕೆ ಹೆಜ್ಜೆ ಇಡತೊಡಗಿದ. ಅವನ ಅಷ್ಟಿಷ್ಟು ಧೈರ್ಯಕ್ಕೆ ಒಂದು ಕಾರಣ ಇತ್ತು. ರಾತ್ರಿಯಾದರೇ ಅಬ್ಬರಿಸುವ ಭೂತ, ಪ್ರೇತಗಳು ಸೂರ್ಯ ರಶ್ಮಿಗೆ ತಮ್ಮ ಪ್ರತಾಪವನ್ನು ಕಳೆದುಕೊಂಡು ನಿರ್ಜೀವವಾಗಿ ಬಿಡುತ್ತದೆಯೆಂದು ಎಲ್ಲೋ ಕೇಳಿದ್ದ.

ಮುಂಬಾಗಿಲಿಗೆ ನೇತಾಡುತ್ತಿದ್ದ ದೊಡ್ಡ ಬೀಗವನ್ನು ಅಲ್ಲಾಡಿಸಿ ನೋಡಿದ.

ಹೆಚ್ಚು ತೂಕದ ಜೊತೆ ಭದ್ರವಾಗಿಯೇ ಇತ್ತು.

"ಮುಂಬಾಗಿಲಿನ ಬೀಗ ನೋಡಿದ್ರಲ್ಲ, ಅಷ್ಟು ಸಾಕು ಬಿಡಿ. ಸದ್ಯಕ್ಕೆ ಈ ಬಂಗ್ಲೆ ಯಾರ ಸುಪರ್ದಿನಲ್ಲಿದ್ಯೋ! ಒಳ್ಗೆ ಹೋಗ್ಬೇಕನ್ನೋದೇ ಅಪರಾಧ. ಮತ್ತೇನು ನೋಡ್ತೀರಾ?" ಕಣ್ಮಣಿಯತ್ತ ನೋಟ ಹರಿಸಿದ.

ತನ್ನ ಬ್ಯಾಗ್‌ನಿಂದ ಪುಟ್ಟ ಕ್ಯಾಮರವನ್ನ ಹೊರ ತೆಗೆದವಳು ಕ್ಲಿಕ್ಕಿಸಲು ನೋಡುತ್ತಿದ್ದಳು.

"ಹೋಗೋಣ್ವಾ?" ಕೇಳಿದ ಗಟ್ಟಿಯಾಗಿ.

ತಟ್ಟನೇ ಎಚ್ಚೆತ್ತು "ಒಂದು ಸುತ್ತು ಬರೋಣ, ಬೇರೆ ಕಡೆಯಿಂದ ಏನಾದ್ರೂ ಒಳ್ಗೆ ಹೋಗೋಕೆ ಬಾಗ್ಲು ಇರ್ಬಹುದು. ಒಂದ್ಸಲ ಯಾಕೆ ನೋಡ್ಬಾರ್ದು" ಎಂದಳು.

ಹತ್ತಿರಕ್ಕೆ ಬಂದ ಗೋಪಾಲ ಅವಳನ್ನೆ ದಿಟ್ಟಿಸಿ ನೋಡಿ "ನೋಡಿದ್ರೆ ತೀರಾ ಮೃದುವಾದ ಹುಡ್ಗಿ ತರಹ ಕಾಣ್ತೀಯಾ! ಯಾವುದಾದ್ರೂ ಡಿಟೆಕ್ಟೀವ್ ಸಂಸ್ಥೆಯಲ್ಲಿ ಕೆಲ್ಸ ಮಾಡ್ತಾ ಇದ್ದೀರಾ? ಸುಮ್ನೆ ನನ್ನ ಎಳೆದಾಡ್ಬೇಡಿ. ನನ್ನ ಓದಿಗೆ ಕೆಲ್ಸ ಸಿಗೋಲ್ಲ, ಅಪ್ಪಯ್ಯ ಮನೆಯಿಂದ ಅಟ್ಟುಬಿಡ್ತಾರೆ" ಒಲ್ಲೆನೆಂದು ಗೋಡೆಯ ಕಡೆ ಹೊರಟಾಗ ವಾಸಂತಿ ಅವನನ್ನು ಹಿಡಿದು ನಿಲ್ಲಿಸಿದಳು. "ಹೆದರ್ಕೊಬೇಡ. ಈ ಹೊತ್ತಿನಲ್ಲಿ ದೆವ್ವ, ಭೂತಗಳು ನಮ್ಮನ್ನೇನು ಮಾಡೋಲ್ಲ. ನಂಗೂ ಯಾಕೋ ಕುತೂಹಲ" ಅವನನ್ನ ಎಳೆದೊಯ್ದಳು.

ಬಂಗ್ಲೆಯ ಹಿಂಭಾಗದಲ್ಲಿ ದೊಡ್ಡ ನೀರಿನ ತೊಟ್ಟಿಯ ಜೊತೆ ಒಂದು ಬಾವಿ ಕೂಡ ಇತ್ತು. ಮುಳ್ಳಿನ ಗಿಡಗಂಟೆಗಳ ಜೊತೆ ಅಲ್ಲಲ್ಲಿ ಬಾವುಲಿಗಳು ಕೂಡ ಓಡಾಡುವಂತೆ ಕಂಡಿತು. ನೆಲದಿಂದ ಬಾಗಿಲವರೆಗೆ ಹೋಗಲು ನಾಲ್ಕು ಮೆಟ್ಟಲುಗಳು ಇತ್ತು. ಕೋಲಿನಿಂದ ಅದರ ಮೇಲಿನ ಎಲೆಗಳನ್ನು ಪಕ್ಕಕ್ಕೆ ತಳ್ಳಿ ಮುಂದಕ್ಕೆ ಕಾಲಿಟ್ಟ. ಭುಸ್ ಎಂಬ ಶಬ್ದ ಕೇಳಿಸಿತು. ಮೂವರು ಬೆವೆತುಬಿಟ್ಟರು ಕ್ಷಣಾರ್ಧದಲ್ಲಿ.

ನಾಲ್ಕು ಹೆಜ್ಜೆ ದೂರದಲ್ಲಿ ಒಂದು ಗೋಧಿ ನಾಗರಹಾವು ಹೆಡೆ ಎತ್ತಿ ಭುಸಗುಟ್ಟುತಿತ್ತು. ಬೆಳಗಿನ ಎಳೆಯ ಬಿಸಿಲಿಗೆ ಅದರ ಮೈ ಫಳಫಳ ಹೊಳೆಯುತಿತ್ತು. ಅಗಲವಾದ ಹೆಡೆ, ಹೊಳೆಯುವ ಮೈಬಣ್ಣ-ಅಷ್ಟು ಹತ್ತಿರದಿಂದ ನಾಗರಹಾವನ್ನ ನೋಡಿಯೇ ಇರಲಿಲ್ಲ ಅವಳು. ನಾಲಿಗೆಯಲ್ಲಿನ ಪಸೆ ಆರಿತು. ಯಾವ ಕ್ಷಣದಲ್ಲಿಯಾದರೂ ತಮ್ಮ ಮೇಲೆ ಧಾವಿಸಬಹುದೆಂದುಕೊಂಡರೂ ಇಂಚು ಕದಲಲಾರದಷ್ಟು ಅವಳ ಹೆಜ್ಜೆಗಳು

ಭೂಮಿಗೆ ಅಂಟಿಕೊಂಡಿತ್ತು. ಎದೆಯ ಬಡಿತ ಅವಳ ಕಿವಿಗೆ ಅಪ್ಪಳಿಸುವಂತೆ ಕೇಳಿಸುತಿತ್ತು. ಬಹುಶಃ ಒಂದೆರಡು ನಿಮಿಷಗಳು ಸರಿದಿರಬಹುದು. ಹಾವು ಹೆಡೆ ತಗ್ಗಿಸಿ ತನ್ನ ಪಾಡಿಗೆ ತಾನು ಸರಿದು ಹೋಯಿತು. ಹತ್ತಿರಕ್ಕೆ ಬಂದ ಮೃತ್ಯು ತಂಗಾಳಿಗೆ ಚದುರಿಹೋದಂತೆ ಭಾಸವಾದರೂ, ಅವಳೆದೆಯ ಬಡಿತದ ವೇಗ ಮಾತ್ರ ತಗ್ಗಲಿಲ್ಲ.

ಎದೆಯ ಮೇಲೆ ಕೈಯಿಟ್ಟುಕೊಂಡು ಭಾರವಾದ ಉಸಿರು ದಬ್ಬಿದ ವಾಸಂತಿ "ಇನ್ನು, ಸಾಕಲ್ಲ ಇಷ್ಟರ ಮಟ್ಟಿನ ಅನುಭವ, ಸದ್ಯಕ್ಕೆ ಗೋಡೆ ಹತ್ತಿ ಪಾರಾಗುವವರೆಗೂ ಏನು ಆಪ್ಪತ್ತು ಬರದಿದ್ರೆ... ಸಾಕು" ಎಂದಳು.

ಬಹುಶಃ ಕಣ್ಮಣಿ ಕೂಡ ಅವಳ ಮಾತಿಗೆ ಸಮ್ಮತಿಸಿ ಬಿಡುವವಳೇ, ಅಷ್ಟರಲ್ಲಿ ಗೋಪಾಲ ಬಾಗಿಲನ್ನು ತಳ್ಳಿ ನೋಡಿ ಕಿರಿಕ್ ಎಂದು ಶಬ್ಧವಾದಾಗ "ಒಂದಿಷ್ಟು ಪ್ರಯತ್ನಪಟ್ರೆ.. ಬಾಗಿಲು ಬಂದ್ಬಿಡುತ್ತೆ" ಎಂದವನೇ ತೆಗೆಯುವ ಪ್ರಯತ್ನಕ್ಕೆ ಮುಂದಾದ ತಳ್ಳಿದ, ಸರಿಸಿದ, ಒಂದು ಕಿಂಡಿಯಾದಾಗ ಕೋಲು ಹಾಕಿ ಬಗ್ಗಿದ, ಮಿಾಟಿದ. ಒಂದು ಕೆಟ್ಟ ಹಟದಿಂದ ಕಡೆಗೂ ತೆಗೆದೇ ಬಿಟ್ಟಾಗ ಗೌರಿ ಶಂಕರ ಏರಿದ ತೇನ್‌ಸಿಂಗ್, ಹಿಲ್ಲೆರಿಗೆ ಆದಷ್ಟೆ ಸಂತೋಷ. ಹಿಂದಕ್ಕೆ ನೂಕಿದವನೇ ಪಕ್ಕಕ್ಕೆ ಸರಿದು ಅವರಿಬ್ಬರನ್ನು ಎಳೆದುಕೊಂಡ. ಬಾವುಲಿಗಳು ದಾಳಿಯಿಕ್ಕುವಂತೆ ಧಾವಿಸಿದವು. ಚೆಲ್ಲಾಪಿಲ್ಲಿಯಾಗಿ ಹೋದವು.

ಹತ್ತು ನಿಮಿಷದ ನಂತರ ಹೊಸ ಗಾಳಿ ಪ್ರವೇಶವಾದ ನಂತರವೇ ಒಳಗೆ ಹೆಜ್ಜೆ ಇಟ್ಟಿದ್ದು ಒಬ್ಬರಾದ ಮೇಲೊಬ್ಬರಂತೆ. ವಿಶಾಲವಾದ ದೊಡ್ಡ ಪಡಸಾಲೆಯಲ್ಲಿದ್ದ ಆಸನಗಳ ಮೇಲೆಲ್ಲ ಧೂಳು ಹರಡಿಕೊಂಡು, ಅವುಗಳ ಸೊಬಗಿನ ಅಸ್ತಿತ್ವವೇ ಮರೆಯಾಗಿತ್ತು. ಅವುಗಳ ಕೆಳಗೆ ಹಾಸಿದ್ದ ಕಾರ್ಪೆಟ್ ಯಾವ ಬಣ್ಣದ್ದೋ, ಅದರ ಮೇಲಿನ ಚಿತ್ತಾರಗಳು ಹೇಗಿದ್ದವೋ ಹೇಳುವಂತಿರಲಿಲ್ಲ. ಧೂಳು, ಮಸಕಾದ ಗೋಡೆಗಳು, ಅದರೊಳಗಿನ ನಿಶಬ್ದತೆ ಭಯವನ್ನುಟ್ಟಿಸುವಂತಿತ್ತು.

"ಬಹಳ ವರ್ಷದಿಂದ ಜನಗಳೇ ಬಂದಂತಿಲ್ಲ" ನೋಟವರಿಸುತ್ತ ಕೇಳಿದಾಗ "ಬಹುಶಃ ಆರೇಳು ವರ್ಷಗಳ ಕೆಳಗಿರಬಹುದು. ಇಲ್ಲೊಂದು ಹೋಟಲ್ ಮಾಡಿ, ಮತ್ತೇನು ಮಾಡೋ ಉದ್ದೇಶವಿತ್ತೋ. ಹೆಚ್ಚು ಬೆಲೆ ಕೊಟ್ಟು ಬಹಳ ಜಮೀನ್ನ ಕೊಂಡು ..... ಕಡೆಗೆ ಕೈಬಿಟ್ಟಿದ್ದು ದೊಡ್ಡ ಸುದ್ದಿ ಆಯ್ತು. ಆಮೇಲೆ ಜನ ಈ ಕಡೆ ತಲೆ ಹಾಕ್ಲಿಲ್ಲ" ದಡ ಬಡ

ಒದರಿಬಿಟ್ಟ. ಆದರೂ ಅವನೆದೆಯು ಬಡಿತ ಎರಡು ಪಟ್ಟು ಏರಿದೆಯೆನ್ನುವುದನ್ನು ಅವನ ಕಂಠದ ನಡುಕವೆ ಸೂಚಿಸುತಿತ್ತು.

ಅಷ್ಟರಲ್ಲಿ ಒಂದು ಬಾಗಿಲು ದಢಾರನೆ ಬಡಿದುಕೊಂಡಾಗ, ಹೆಚ್ಚು ಕಮ್ಮಿ ಮೂವರು ಪ್ರಜ್ಞೆ ತಪ್ಪುವ ಸ್ಥಿತಿಗೆ ಬಂದರು. ಮುಚ್ಚಿದ ಕಣ್ಣುಗಳನ್ನು ಮೂವರು ತೆರೆಯಲು ಕೆಲವು ಸೆಕೆಂಡ್‌ಗಳು ಬೇಕಾಯಿತು. ಸ್ವಲ್ಪ ಸಾವರಿಸಿಕೊಂಡು ಮೂವರು ಅತ್ತ ಸರಿದರು. ಮುಚ್ಚಿದಂತಿದ್ದ ರೂಮಿನ ಬಾಗಿಲು ದೂಡಿದಾಗ ತೆರೆದುಕೊಂಡಿತು. ಗೋಪಾಲ ಒಳಗೆ ಇಣಕಿದ. ಅಗಲವಾದ ಗವಾಕ್ಷಿಯಿಂದ ಬೆಳಕು ಬರುತಿತ್ತು ಒಳಕ್ಕೆ. ಕೈಯಲ್ಲಿನ ಕೋಲಿನಿಂದ ಕಟ್ಟಿದ ಇಲ್ಲಣವನ್ನು ಸರಿಸಿ ಒಳಕ್ಕೆ ಅಡಿಯಿಟ್ಟ. ತೀರಾ ಹಳೆಯ ಸಾಮಾನುಗಳ ಉಗ್ರಾಣವೆನ್ನುವಂತೆ ಕಂಡಿತು.

"ಹೋಟಲ್ ಮಾಡ್ಬೇಕೂಂತ ಬಂದಿದ್ದ ಸೇಠ್ ಬೇಕಾದ್ದು ಒಯ್ದು ಹಳೆಪಳೆದು ಇಲ್ಲಿ ಎಸೆದಿರಬೇಕು." ಕೋಲಿನಲ್ಲಿಯೇ ಕೆದರಿದ. ಹಳೆಯ ಮರದ ಸಾಮಾನುಗಳು, ವರ್ಷಗಳ ಹಿಂದಿನ ಪತ್ರಿಕೆಗಳು, ಹಳೆಯ ಸ್ಟೀರಿಯೋ ಸಿಸ್ಟಮ್, ಕಬ್ಬಿಣದ ಸರಪಣಿಗಳು, ಅಲಂಕಾರಿಕ ಮಣಿಯ ಪರದೆಗಳು. ಒಂದಾ...ಎರಡಾ...ನಾನಾ ವಸ್ತುಗಳು ಉಗ್ರಾಣ.

ಪಕ್ಕದಲ್ಲಿ ಧೂಳು ತುಂಬಿಕೊಂಡಿದ್ದ ಟೇಬಲ್ಲು ಡ್ರಾಯರ್‌ನ ಎಳೆದ ಕೂಡಲೇ ದೊಡ್ಡ ಸೈಜಿನ ಎರಡು ಹಲ್ಲಿಗಳು ಹೊರಗೆ ಧಾವಿಸಿದಾಗ, ಕಣ್ಮಣಿ ಥಂಗನೆ ಅಷ್ಟು ದೂರಕ್ಕೆ ಜಿಗಿದಳು.

"ಏನ್ರಿ, ಇದು.... ಸಣ್ಣ ಪುಟ್ಟ ಪ್ರಾಣಿಗಳಿಗೆ ಹೆದರೋ ನೀವು.. ಇಷ್ಟೊಂದು ಸಾಹಸ ಮಾಡಿ ಬಂಗ್ಲೆಯೊಳಕ್ಕೆ ಬಂದಿದ್ದಿರಲ್ಲ" ಸ್ವಲ್ಪ ಧೈರ್ಯದಿಂದ ಹಂಗಿಸಿದ ಗೋಪಾಲ, ಡ್ರಾಯರ್‌ನ ಪೂರ್ತಿಯಾಗಿ ಎಳೆದ ಕೂಡಲೇ ಅದೇ ನೆಲ ತಪ್ಪಿದಂತೆ ಕೆಳಗೆ ಬಿತ್ತು. ಬರೀ ನೋಟುಗಳ ಚೂರುಗಳ ದೊಡ್ಡ ರಾಶಿ ಇತ್ತು. ಆದರೆ ಅದರಿಂದ ಡೈರಿಯನ್ನು ಕೋಲಿನಿಂದ ಅತ್ತಿತ್ತ ದೂಡಿ ಹತ್ತಿರಕ್ಕೆಳೆದುಕೊಂಡಳು. ಬಹುಶಃ 1927ನೇ ಇಸವಿ ಡೈರಿ. ಒಂದೆರಡು ಕಡೆ ಏನೋ ಬರೆದಂತಿತ್ತು. ಅಕ್ಷರಗಳು ಚಿಕ್ಕದಾಗಿ ಮಸುಕಾಗಿದ್ದುದ್ದರಿಂದ ಸ್ಪಷ್ಟವಾಗಿ ಗುರುತಿಸುವಂತಿರಲಿಲ್ಲ.

"ಎಸೀರಿ ಇಲ್ಲಿ. ದೆವ್ವಗಳು ಡೈರಿ ಬರೆಯೋ ಪರಿಪಾಠವೇನಾದ್ರೂ ಇಟ್ಟುಕೊಂಡಿದ್ದೇಯೋ, ಏನೋ! ಅಕ್ಷರಗಳು ನಮ್ಗೆ ಕಾಣೋಲ್ಲ ಅಷ್ಟೆ". ತಮಾಷೆ ಮಾಡಿದ ಕಣ್ಮಣಿಗೆ ಎಸೆಯಲು ಮನಸ್ಸು ಬರಲಿಲ್ಲ. "ನಾನು

ಇಟ್ಕೋತೀನಿ, ನಿಮ್ಮ ಪ್ರಕಾರ ದೆವ್ವಗಳು ಡೈರಿ ಬರೆದಿದ್ರೆ, ಅದರ ಕಷ್ಟ ಸುಖಗಳು ಬೇರೆಯವರಿಗಾದ್ರೂ ಗೊತ್ತಾಗ್ಲಿ. ಇಂಥದ್ನ ಓದೋ ಪರಿಣಿತರನ್ನು ಹುಡ್ಕಿಕೊಂಡರಾಯ್ತು". ಮೇಲ್ಮುಖದ ಧೂಳನ್ನು ಕೊಡವಿಟ್ಟುಕೊಂಡಳು.

ಮಿಕ್ಕ ರೂಮುಗಳಿಗೆ ಭದ್ರವಾದ ಬೀಗಗಳ ಜೊತೆ ಡೋರ್‌ಲಾಕನ್ನು ಮಾಡಲಾಗಿತ್ತು. ಗೂಡು ಕಟ್ಟಿದ್ದ ಬಾವಲಿಗಳು, ಪಕ್ಷಿ, ಹುಳಗಳ ಸಪ್ಪಳ ಹೆದರಿಸುತ್ತಲೇ ಇದ್ದುದ್ದರಿಂದ ಬೇಗ ಹೊರಗೆ ಬರಬೇಕಾಗಿತ್ತು.

ಚಿತ್ತಾರದ ದೊಡ್ಡ ಕಮಾನಿನ ಬಾಗಿಲು ಇದ್ದ ಕಡೆ ಹೋದ ಗೋಪಾಲ "ಬಹುಶಃ ಭೂತಕಾಲದಲ್ಲಿ ಇದು ದೇವರ ಮನೆ ಆಗಿರಬಹ್ದು. ವರ್ತಮಾನದಲ್ಲಿ ಇದರ ಸ್ಥಿತಿ ನೋಡಿ, ಇನ್ನು ಭವಿಷ್ಯದ ಬಗ್ಗೆ ಯೋಚಿಸುವುದೇನು ಬೇಡ" ಬಗ್ಗಿದ.

ಹಳೆಯ ಕಪ್ಪು ಮರದ ದೊಡ್ಡ ಮಂದಾಸನದ ತುಂಬ ಗೂಡು, ಇಲ್ಲಣ, ಧೂಳಷ್ಟೆ ಇತ್ತು. ಕೋಲಿನಿಂದ ಕೆದಕಿದ, ಎರಡು ಮೂರು ಸಣ್ಣ ವಸ್ತುಗಳು ಹೊರಳಾಡಿದವು. ತಟ್ಟನೇ ಬಗ್ಗಿ ಒಂದು ಗೋಲಿಯಾಕಾರದ ಪದಾರ್ಥವನ್ನೆತ್ತಿಕೊಂಡಳು. ಕಪ್ಪನೆಯ ಶಿಲೆ ಧೂಳು ಕೊಡವಿದ ಮೇಲೆ ಹೊಳೆಯತೊಡಗಿತು.

"ಇದು ಸಾಲಿಗ್ರಾಮ ಇದ್ದಂಗೆ ಕಾಣುತ್ತೆ. ಏನೇನೋ ಹೇಳ್ತಾರೆ. ಅಪ್ಪನ ಕೇಳ್ಬೇಕು, ಇಲ್ಲದ ಉಸಾಬರಿ ಯಾಕೆ? ಅಲ್ಲೇ ಹಾಕ್ಬಿಡಿ" ಎಂದ ಗೋಪಾಲ. ಇನ್ನಷ್ಟು ಕೆದಕಿದ. ಒಂದು ಬೆಳ್ಳಿ ತಟ್ಟೆ, ಗಂಟೆ ಎಲ್ಲಾ ಕಾಣಿಸಿಕೊಂಡಿತು. ಆದರೆ ಅವನು ಕೈ ಹಾಕಲಿಲ್ಲ. "ಬೆಳ್ಳಿ ತಟ್ಟೆ ನಾನು ಇಟ್ಕೋತೀನಿ. ನೆನಪಿಗೇ ಇರ್ಲಿ" ವಾಸಂತಿ ಎತ್ತಿಕೊಂಡಳು. ಗೋಪಾಲನಿಗೆ ಅದು ಕೂಡ ಸರಿಯೆನಿಸಲಿಲ್ಲ "ನಂಗೆ ಬೇಡ ಅನ್ನಿಸ್ತ, ಇದೆ. ನಿಮ್ಮಿಷ್ಟ, ಇನ್ನು ಹೋಗೋಣ" ವಿವಿಧ ಕೋನಗಳಿಂದ ಫೋಟೋ ತೆಗೆಯುತ್ತಿದ್ದ ಕಣ್ಮಣಿಯತ್ತ ತಿರುಗಿದ.

ಮೇಲಿನಿಂದ ದಪ್ಪನೆಯ ಮೇಲ್ಛಾವಣಿಯ ಒಂದು ಭಾಗ ಬೀಳುವುದಕ್ಕೂ ಇವನು ಎಳೆದುಕೊಳ್ಳುವುದಕ್ಕೂ ಸರಿಹೋಯಿತು. ಬಾಗಿಲವರೆಗೂ ರಭಸದಿಂದ ಎಳೆದೊಯ್ದವನು ಏದುಸಿರು ಬಿಡುತ್ತಿದ್ದ.

"ಬೇಗ, ಬೇಗ.. ವಾಸಂತಿ" ಎಂದವನ ಹೆದರಿಸುವಂತೆ ಹಿಂಬದಿಯ ತೆರೆದ ಬಾಗಿಲು ಮುಚ್ಚಿಕೊಂಡಾಗ ಕೈಯಲ್ಲಿದ್ದ ಕೋಲಿನಿಂದ ಇಬ್ಬರನ್ನು ಬಡಿದು ಹಾಕಿಬಿಡಬೇಕೆನಿಸಿತು. "ನಿಮ್ಗೆ ಇಷ್ಟವಾದ್ರೆ ಸಾಯಿರಿ, ನಂಗಂತು

ತುಂಬ ಜನ ಅಳೋರು ಇದ್ದಾರೆ" ಕಚ್ಚಿಕೊಂಡ ಬಾಗಿಲನ್ನು ಭದ್ರವಾಗಿ ತ 'ಯುತೊಡಗಿದ. ವಿಪರೀತ ಭೀತಿ ಆವರಿಸಿ ಅವನಲ್ಲಿ ಶಕ್ತಿಯೇ ಹುಡುಗಿ ಹೋಯಿತು. ಇನ್ನು ತಮ್ಮ ಸಮಾಧಿ ಇಲ್ಲಿಯೇ ಎಂದು ತಿಳಿದರು.

ಬಂಗ್ಲೆ ಇದ್ದ ಕಡೆ ನಿರ್ಜನತೆ. ಇತ್ತ ಯಾರೂ ಸುಳಿಯುತ್ತಿರಲಿಲ್ಲ. ಇವರು ಕೂಗಾಡಿದರು. ಯಾರಿಗೂ ಕೇಳಿಸದು. ಕೇಳಿಸಿದರೂ ಇವರ ರಕ್ಷಣೆಗೆ ಬಂದಾರೆಂಬ ನಂಬಿಕೆ ಇರಲಿಲ್ಲ.

ಕಪ್ಪನೆಯ ಹೊಳೆಯುವ ಕಲ್ಲು ಕಣ್ಮಣಿಯ ಕೈಯಲ್ಲೇ ಇತ್ತು. ಢವಗುಟ್ಟುವ ಎದೆ. ವಾಸಂತಿಯ ಕಣ್ಣಲ್ಲಿ ನೀರು, ಗೋಪಾಲ ಬೆವೆತು ಕಂಗೆಟ್ಟಿದ್ದ. ಮೆಲ್ಲಗೆ ಬಾಗಿಲ ಮೇಲೆ ಕೈಯಿಟ್ಟು ಅಲ್ಲಾಡಿಸತೊಡಗಿದಳು. ಸ್ವಲ್ಪ ಜೋರಾಗಿಯೇ ನಡುಗುವ ಕಂಠದಿಂದ ನರಸಿಂಹ ಮಂತ್ರ ಪಠಿಸುತ್ತಿದ್ದ. ಸೊಯ್ಯನೆ ತೂರಿ ಬಂದ ಗಾಳಿ ಬಾಗಿಲನ್ನು ಹಿಂದಕ್ಕೆ ತಳ್ಳಿದಂತೆ ತೆರೆದುಕೊಂಡಾಗ ಮೃತ್ಯು ಮುಖದಿಂದ ಹೊರಗೆ ತಳ್ಳಿದಂತೆ ಬಾಗಿಲನ್ನು ದಾಟಿದರು. ದೊಡ್ಡ ಶಬ್ದದೊಂದಿಗೆ ಬಾಗಿಲು ಮುಚ್ಚಿಕೊಂಡಿತು. ಅದೇ ಗೋದಿ ಸರ್ಪ ಇವರಿಗಾಗಿಯೇ ಕಾದಿರುವಂತೆ ಹೆಡೆ ಎತ್ತಿ ನಿಂತಿತ್ತು.

ಕೋಲು ಮೇಲೆ ಎತ್ತಲು ಹೋದರೂ ಗೋಪಾಲನಿಗೆ ಧೈರ್ಯ ಬರಲಿಲ್ಲ. ಸನಾತನ ಸಂಪ್ರದಾಯದಲ್ಲಿ ನಂಬಿಕೆ ಇದ್ದ ಕುಟುಂಬದಲ್ಲಿ ಹುಟ್ಟಿ ಬೆಳೆದವನು. ವರ್ಷಕ್ಕೊಮ್ಮೆ ಬರುವ ನಾಗರಪಂಚಮಿಯಂದು ಹುತ್ತಕ್ಕೆ ಹಾಲೆರೆದು ಪೂಜಿಸುವ ಸಂಪ್ರದಾಯ ಇಂದಿಗೂ ಅವನ ಮನೆಯಲ್ಲಿತ್ತು. ಸ್ವಲ್ಪ ಸರಿದರೂ ಕಣ್ಣು ತಪ್ಪಿಸಿ ಹಿಂಬಾಲಿಸಿ ಬಂದು ಕಾಟು ಹಾಕಬಹುದೆಂಬ ಭಯ.

'ಈಗೇನು ಮಾಡೋದು?' ಎನ್ನುವಂತೆ ಅವರಿಬ್ಬರತ್ತ ನೋಟ ಹರಿಸಿದ. ಇವನಿಗಿಂತ ವಿಭಿನ್ನವಾದ ಸ್ಥಿತಿಯಲ್ಲಿ ಅವರೇನು ಇಲ್ಲದಿದ್ದರೂ, ಕಣ್ಮಣಿ ತಟ್ಟನೆ ತನ್ನ ಕೈಯಲ್ಲಿದ್ದ ಕಪ್ಪನೆಯ ಕಲ್ಲನ್ನು ಬಗ್ಗಿ ನೆಲದ ಮೇಲಿಟ್ಟಳು. ಇಪ್ಪತ್ತು ಸೆಕೆಂಡ್‌ಗಳ ನಂತರ ಗೋಧಿ ನಾಗರಹಾವು ಹೆಡೆ ತಗ್ಗಿಸಿ ಆ ಕಲ್ಲನ್ನು ಒಮ್ಮೆ ಸುತ್ತಿ ಶಾಂತವಾಗಿ ಸರಿದು ಹೋಯಿತು ತನ್ನ ಪಾಡಿಗೆ . ಒಣಗಿದ ಎಲೆಗಳ ಮೇಲೆ ಅದು ಸರಿದು ಹೋಗುವ ಮರ ಮರ ಸದ್ದು ಕ್ರಮೇಣ ದೂರವಾಗಿ ನಂತರ ನಿಂತುಹೋದಾಗ, ಹೋದ ಜೀವ ಮರಳಿ ಬಂದಂತಾಯಿತು.

"ಇದು ನಿಜ್ವಾಗ಼್ೂ ಸಾಲಿಗ್ರಾಮನೇ. ಸದ್ಯಕ್ಕೆ ನಮ್ಮನ್ನು ರಕ್ಷಿಸಿದ್ದು ಅದೇ"

ಬಗ್ಗಿ ಎತ್ತಿಕೊಳ್ಳಲು ಹೋದ ಗೋಪಾಲ "ನೀವೇ ತಗೊಳ್ಳಿ ಕಣ್ರಣಿ. ನಿಮ್ಹತ್ರ ಇರೋದು ಅಪರಾಧವಲ್ಲ ಅಂತ ಗೊತ್ತಾಗಿದೆ" ಎಂದ.

ಅದನ್ನೆತ್ತಿ ತನ್ನ ಪರ್ಸಿಗೆ ಹಾಕಿಕೊಂಡಳು. ಈ ಕಡೆಯಿಂದ ಗೋಡೆ ಹತ್ತಲು ಅಷ್ಟೇ ಪ್ರಯಾಸವೆನಿಸಿತು. ಗೋಡೆಯ ಪಕ್ಕಕ್ಕೆ ರೆಂಬೆಗಳನ್ನು ಹರಡಿಕೊಂಡಿದ್ದ ಮರದ ಮೇಲೆ ರೆಂಬೆಗಳ ಮೂಲಕ ಗೋಡೆಯನ್ನೇರಿದ ಗೋಪಾಲ ಕೆಳಗೆ ನೋಡಿದ. ಹನ್ನೆರಡು ಅಡಿಗಳಷ್ಟು ಎತ್ತರದ ಗೋಡೆ. ಅವನೇನೋ ಧುಮುಕಿ ಕಾಲು ಮುರಿದುಕೊಂಡು ಪಾರಾಗಬಹುದು. ಆದರೆ ಇವರುಗಳ ಗತಿ? ತಾನು ಹೋಗಿ ಎತ್ತರವಾದ ಏಣಿಯನ್ನೋ, ಅಥವಾ ಬೇರೆಯವರ ಸಹಾಯದೊಂದಿಗೆ ಬರುವವರೆಗೂ ಇವರ ಗತಿಯೇನು? ಬಾಗಿಲು ಮುಚ್ಚಿದ ಸದ್ದು ಕಿವಿಯಲ್ಲಿ ಪ್ರತಿಧ್ವನಿಸಿ ಬೆಚ್ಚಿದ್ದ.

"ಈಗೇನು... ಮಾಡ್ತೀರಾ? ಸದ್ಯಕ್ಕೆ ಮರ ಏರಿ ಗೋಡೆಯ ಮೇಲಕ್ಕೆ ತಲುಪುವುದೇ ಸುಲಭವಾದ ಉಪಾಯ. ನಾನು ಬರ್ತೀನಿ "ಮತ್ತೆ ಟೊಂಗೆಯ ಮೂಲಕ ಮರವನ್ನು ತಲುಪಿದ "ಸ್ವಲ್ಪ ಪ್ರಯತ್ನಪಡೀ, ನಾನು ಕೈ ಆಸರೆ ಕೊಟ್ಟು ಮೇಲಕ್ಕೆ ಎಳೆದುಕೋತೀನಿ" ಎಂದ. ವಾಸಂತಿಗೆ ಸುಲಭವಾಗಿ ಕಾಣಲಿಲ್ಲ. ಅಳುತ್ತ ಕೂತುಬಿಟ್ಟಳು. ಅವನು ಮರದ ಮೇಲೆ, ಇವರು ಕೆಳಗೆ. ಭಯದಿಂದ ತತ್ತರಿಸುವ ಕ್ಷಣಗಳು.

ಒಂದೆರಡು ಗಂಟೆಗಳ ಸತತ ಪ್ರಯಾಸದಿಂದ ಗೋಡೆಯ ಮೇಲಕ್ಕೆ ತಲುಪಿ ನಿಟ್ಟುಸಿರು ಬಿಟ್ಟರು. ಕೆಳಗಿನ ಕಲ್ಲು ಮುಳ್ಳುಗಳ ಮೇಲೆ ಧುಮುಕುವುದು ಅಪಾಯಕ್ಕೆ ಆಹ್ವಾನ ಕೊಟ್ಟಂತೆಯೇ. ಈ ಮಲೆನಾಡ ಸೀಮೆಯುವನಾದ ಗೋಪಾಲ ಸ್ವಲ್ಪ ಕಷ್ಟಕ್ಕೆ ಒಡ್ಡಿಕೊಂಡು ನೆಲ ತಲುಪಿದವನು, ಕೈಕಾಲು ತರಚಿಸಿಕೊಂಡರೂ ದೃಢವಾಗಿ ನಿಂತ.

"ಈಗ ಬೇರೆ ದಾರಿನೇ ಇಲ್ಲ. ಕಣ್ಮುಚ್ಚಿಕೊಂಡು ನನ್ಮೇಲೆ ಧುಮುಕಿ ಬಿಡಿ. ಬೇಗ.. ಬೇಗ...." ಅವಸರಿಸಿದ. ಆಪ್ಪತ್ತಿನ ಅಂಚಿನಲ್ಲಿ ನಾವಿದ್ದೇವೆನ್ನುವ ಭಯ. ಯಾವ ಕ್ಷಣ ಏನೋ, ಹೆಡೆಯೆತ್ತಿ ನಿಂತ ಹಾವು ಎಲ್ಲಿ ಪ್ರತ್ಯಕ್ಷವಾಗಿ ಬಿಡುಬಹುದೋ ಎನ್ನುವ ಹೆದರಿಕೆ.

"ಬೇಡ ಕಣೋ, ನಂಗಂತು ಭಯ. ಕೆಳ್ಗೇ ಬಿದ್ಹೋದ್ರೆ.. ನಮ್ಮ ಜೊತೆ ನಿಮ್ಗೂ ಪೆಟ್ಟು" ವಾಸಂತಿ ಅಳಲು ಷುರು ಮಾಡಿದಾಗ ಕೋಪದಿಂದ ಕನಲಿದ "ಈಗ ಅಳೋಕೆ ಸಮಯವಿಲ್ಲ. ಆಮೇಲೆ ಅಳೋಕೆ ಅವಕಾಶವಿದೆ, ಬೇಗ.... ಬೇಗ.... ಇಲ್ದಿದ್ರೆ ನಾನೇ ಬಿಟ್ಹೋಗ್ತೀನಿ" ಸ್ವರವೇರಿಸಿ ಗದರಿದ.

ಕೊಸರಿಕೊಂಡಳು, ಅತ್ತಳು. ಕೊನೆಗೆ ಧುಮುಕಿಯೇ ಬಿಟ್ಟಳು. ತನ್ನ ಬಲವನ್ನೆಲ್ಲ ಕ್ರೋಢೀಕರಿಸಿ ಅವಳು ಭೂಶಾಯಿಯಾಗದಂತೆ ನೋಡಿಕೊಂಡ ಹಲ್ಲು ಕಚ್ಚಿ. ವಾಸಂತಿಯನ್ನು ಹಾಗೆಯೇ ಎತ್ತಿಕೊಂಡು ಬಂದು ಒಂದು ಕಡೆ ಕೂಡಿಸಿ ಕಣ್ಮುಚ್ಚಿ ಸುಧಾರಿಸಿಕೊಂಡ ಕೆಲವು ಗಳಿಗೆಗಳನ್ನು. ಎದೆಯೊತ್ತಿ ಉಸಿರು ಭಾರವಾಗುತಿತ್ತು. ಇಡೀ ಮೈಯಲ್ಲಿ ಶಕ್ತಿಯೇ ಇಲ್ಲವೆನಿಸಿತು. ಕಣ್ಣು ಕತ್ತಲಿಟ್ಟಿತು. ನಿಲ್ಲಲು ತ್ರಾಣವೇ ಇಲ್ಲವಾಯಿತು. ಇನ್ನು ಭಯದಿಂದ ವಾಸಂತಿ ಎರಡು ಕೈಗಳಲ್ಲು ಕಣ್ಮುಚ್ಚಿಕೊಂಡು ಅಳುತ್ತಿದ್ದಳು.

ತಲೆ ಕೊಡವಿಕೊಂಡು ಕಾಲೆಳೆಯುತ್ತ ಬಂದು ಸನ್ನೆಯಿಂದ ಧುಮುಕುವಂತೆ ಕಣ್ಮಣಿಗೆ ಸನ್ನೆ ಮಾಡಿದ. ಗೋಪಾಲ್ ತತ್ತರಿಸುತ್ತಿದ್ದ ಸ್ಥಿತಿಯನ್ನು ನೋಡಿ ಧೈರ್ಯವುಂಟಾಗಲಿಲ್ಲ.

"ನೀವು ಮೊದ್ಲು ಸುಧಾರ್ಸಿಕೊಳ್ಳಿ, ಇಲ್ಲ ನಾನೇ ಧುಮುಕಿಬಿಡ್ತೀನಿ" ಎಂದಳು ಕಣ್ಮಣಿ.

ನಾಲಿಗೆಯಿಂದ ತುಟಿಗಳನ್ನು ಸವರಿಕೊಂಡ ಗೋಪಾಲ "ಬೇಡ, ಇದು ಹುಡ್ಗಾಟದ ವಿಷ್ಯವಲ್ಲ, ನಾವಿನ್ನು ಅಪಾಯದಿಂದ ಪಾರಾಗಿಲ್ಲ. ಈ ಕೊಸರಾಟದಲ್ಲಿ ರಾತ್ರಿಯಾಗ್ಬಿಟ್ಟರೇ, ಸೂರ್ಯನ ಹೆದರಿಕೆ ಇಲ್ದೇ ಪಿಶಾಚಿಗಳಿಗೆ ನಾವುಗಳು ಬಲಿಯಾಗಿಬಿಡ್ಬೇಕಾಗುತ್ತೆ. ಇಲ್ಲ, ಧುಮುಕಿ ಕಾಲು ಮುರ್ದುಕೊಂಡ್ರೆ ನಿಮ್ಗೆ ಯಾರಿದ್ದಾರೆ ನೋಡಿಕೊಳ್ಳೋಕೆ? ಕಾಲುಗಳ್ನ ಮುರ್ದುಕೊಂಡು ಯಾವುದಾದ್ರೂ ಸರ್ಕಾರಿ ಆಸ್ಪತ್ರೆಯ ಮೂಲೆಯಲ್ಲಿ ಅನಾಥವಾಗಿ ಬಿದ್ಕೊಂಡ್ ಸಾಯ್ಬೇಕಾಗುತ್ತೆ. ಸ್ವಲ್ಪ ಹೇಳ್ದಂಗೆ ಕೇಳಿ. ಆರಾಮಾಗಿ ಬಿಟ್ಕೊಂಡ್ಹೋಗ್ತೀನಿ" ದಬಾಯಿಸಿದ, ಹೆದರಿಸಿದ. ಅವಳ ಕಣ್ಣುಗಳಿಂದ ಮುತ್ತಿನಂಥ ಎರಡೇ ಕಂಬನಿಯ ಬಿಂದುಗಳು ಉದುರಿದ್ದು. ಅದನ್ನು ಗಮನಿಸುವ ಸ್ಥಿತಿಯಲ್ಲಿರಲಿಲ್ಲ ಗೋಪಾಲ. "ಅವೆಲ್ಲ ಬೇಡ, ಆಮೇಲೆ ಬೇಕಾದ್ರೆ ವಾಸಂತಿ ಪಕ್ಕ ಕೂತು ನೀವು ಜೋರಾಗಿ ಅಳ್ಬಹುದು. ಈಗ ಧುಮುಕಿ" ಎರಡು ಕೈಗಳನ್ನ ಮುಂದಕ್ಕೆ ಚಾಚಿದ. ಹೂವಿನ ಉಂಡೆಯಂತೆ ಬಿದ್ದವಳನ್ನು ಬಾಹುಗಳಲ್ಲಿ ಬಳಸಿ ತಂದು ವಾಸಂತಿಯ ಪಕ್ಕ ಇಳಿಸಿ, ತಾನು ಅಲ್ಲೇ ಕೂತ.

"ಈಗ ಎಷ್ಟು ಬೇಕಾದ್ರೂ ಅತ್ತುಕೊಳ್ಳಿ" ಸಿಡಿಮಿಡಿಗುಟ್ಟಿ ಒಂದು ಕಡೆ ಕೂತುಬಿಟ್ಟ. ನೂರು ಯೋಜನಾ ಧಾವಿಸಿ ಬಂದಷ್ಟು ಆಯಾಸಗೊಂಡಿದ್ದ. ಈಜು, ಮರ ಹತ್ತುವಿಕೆ, ಸುತ್ತಾಟ ಯಾವುದೂ ಅವನಿಗೆ ಹೊಸದಲ್ಲ.

ಗಾಬರಿ, ಭಯ ಅವನ ಅರ್ಧ ಶಕ್ತಿಯನ್ನು ಕುಗ್ಗಿಸಿತ್ತು. ಎದೆಯ ಮೇಲೆ ಕೈಯಿಟ್ಟುಕೊಂಡು ಕಣ್ಮುಚ್ಚಿದ. ನಿಮಿಷಗಳು ಗಾಳಿಯ ವೇಗದಲ್ಲಿ ಸರಿದು ಹೋಗಿ, ಸೂರ್ಯ ನೆತ್ತಿಗೆ ಬಂದು ಸುಡತೊಡಗಿದಾಗ ಕಣ್ಣು ಬಿಟ್ಟ. ಒಬ್ಬರ ಆಸರೆಯಲ್ಲಿ ಒಬ್ಬರು ಕೂತಿದ್ದ ವಾಸಂತಿ, ಕಣ್ಮಣಿಯನ್ನು ನೋಡಿ ಆ ಸ್ಥಿತಿಯಲ್ಲಿ ನಗು ಬಂತು. "ಅಮ್ಮನ ಗಲಾಟೆಗೆ ಅಪ್ಪಯ್ಯ ಹುಡುಕಾಟ ಪ್ರಾರಂಭಿಸಿದ್ರೂ... ಹೆಚ್ಚಲ್ಲ. ಇನ್ನು ಮಿಕ್ಕವ್ರು ತಲೆಕೆಡ್ಸಿಕೊಳ್ಳೋಲ್ಲ, ಬೇಗ... ಏಳೀ...." ಪ್ರಯಾಸದಿಂದ ಶರೀರವನ್ನ ಎತ್ತಿ ನಿಲ್ಲಿಸಿದ. ದೃಢಕಾಯನಾಜ ಮಲೆನಾಡಿನ ಗಂಡು ಕೂಡ ಬಳಲಿದ್ದ. ವ್ಯಯವಾದ ಶಕ್ತಿಯನ್ನು ಕೂಡಿಸಿಕೊಳ್ಳಬೇಕಿತ್ತು.

ವಾಸಂತಿ ಕೈಕಾಲುಗಳು ತರಚಿದ್ದರೇ, ಕಣ್ಮಣಿಯ ಕಾಲು ಉಳುಕಿ ಎತ್ತಿಡುವುದು ಪ್ರಯಾಸವೆನಿಸಿತು. ಕುಂಟಿದಾಗ ನಕ್ಕುಬಿಟ್ಟು, "ನೋಡಿದ್ರಾ, ಸುಮ್ನೆ ಕೆಟ್ಟ ಹಟ ಮಾಡಿದ್ರಿ. ನಿಮ್ಗೇನು ಸಿಕ್ತು? ಅಷ್ಟಿಷ್ಟು ಫೋಟೋ ತಗಂಡ್ ಇರ್ಬಹ್ದು. ಅದು ಪಬ್ಲಿಕ್ ಆದ್ರೆ.. ಕೆಲವರಿಗೆ ಉಪಕಾರ, ನಿಮ್ಗೆ ಅಪಾಯ. ಕಡೆಗೆ ಏನೇನು ಆಗಿ ಎಲ್ಲಿಗೆ ತಲುಪುತ್ತೋ, ಸ್ವಲ್ಪ ಹುಷಾರಾಗಿರಿ. ಹೇಗೂ ನೋಡಿದಾಯ್ತು, ಬದ್ಕಿ ಉಳ್ದು ಬಂದಿದ್ದೀವಿ. ಅದೇ ದೇವರ ದಯೆ ಅಂದ್ಕೊಳ್ಳಿ". ಕೈಗಳನ್ನು ಕೊಡವಿ, ತಿರುಗಿಸಿ ಸರಿ ಮಾಡಿಕೊಳ್ಳಲು ಪ್ರಯತ್ನಿಸಿದ.

ಅಂತೂ ಹೇಗೋ ಮನೆ ತಲುಪಿ ಬಚ್ಚಲು ಮನೆಗೆ ಸ್ನಾನಕ್ಕೆ ಹೋದಾಗಲೇ ಕಣ್ಮಣಿ ಕಾಲಿನ ನೋವು ಅರಿವಾಗಿದ್ದು. ಕಾಲು, ಪಾದದ ನಡುವಿನ ಕೀಲು ನೋಯುತಿತ್ತು. ಗಟ್ಟಿಯಾಗಿ ಪಾದವೂರಿದಾಗ ಇಡೀ ಕಾಲು ಪೂರ್ತ ನೋವು ಹರಿದಂತಾಯಿತು. ಸ್ನಾನದ ಮನೆಯಿಂದ ಹೊರಗೆ ಬಂದಾಗ ಪೂರ್ತಿ ಕೆಂಪು ಕೆಂಪಗಾಗಿ ಹೋಗಿದ್ದಳು.

"ಬಿಸಿಲಲ್ಲಿ ತುಂಬ ಸುತ್ತಾಡ್ಸಿಬಿಟ್ನಾ? ಕೆಲ್ಸಕ್ಕಿಂತ ಅವ್ನಿಗೆ ಸುತ್ತಾಟಾಂದ್ರೆ ತುಂಬನೇ ಇಷ್ಟ. ಜವಾಬ್ದಾರಿ ಇಲ್ದ ಹುಡ್ಗ" ಶಬರಿ ಮಗನನ್ನು ಪ್ರೀತಿಯಿಂದ ಬೈಯ್ದುಕೊಂಡರು. ಅವರ ಎಲ್ಲಾ ಗಂಡು ಮಕ್ಕಳ ಪೈಕಿ ಇವನೇ ತುಂಬ 'ಒಳ್ಳೆಯವ' ಎನ್ನುವ ಅಭಿಪ್ರಾಯ. ಅದು ಸುಳ್ಳಲ್ಲ, ಗೋಪಾಲನಿಗೆ ಒಳ್ಳೆಯ ಮನಸ್ಸಿತ್ತು.

ಕೋಣೆಗೆ ಬಂದ ಕಣ್ಮಣಿ, ಮಲಗಿದ್ದ ವಾಸಂತಿಯ ಪಕ್ಕ ಹೋಗಿ ಕೂತಳು. ಚೇತರಿಸಿಕೊಂಡಿರಲಿಲ್ಲ ಅವಳು. ತಲೆಯ ಮೇಲೆ ಕೈಯೊತ್ತು

ಕೂತಿದ್ದಳು. ಅವಳ ಮುಖ ನಿಸ್ತೇಜವಾಗಿತ್ತು.

ಭುಜದ ಮೇಲೆ ಕೈಯಿಟ್ಟ ಕಣ್ಮಣಿ "ಯಾಕೆ, ಏನಾದ್ರೂ ನೋವಾಯ್ತ?" ಕೇಳಿದಳು. ಅತ್ತಿತ್ತ ನೋಡಿ ಮೆಲ್ಲಗೆ ತರಚಿಕೊಂಡ ಮೊಣಕೈ ಜೊತೆ, ಪೆಟ್ಟಾದ ಮಂಡಿಯನ್ನು ತೋರಿಸಿದಳು. "ಆರಾಮಾಗಿ ಸುತ್ತಾಡಿ ಹೋಗೋಕೆ ಬಂದ ನಮ್ಗೆ, ಇದೆಲ್ಲ ಯಾಕೆ ಬೇಕಿತ್ತು?" ಅವಳ ಕಣ್ಣಲ್ಲಿ ನೀರಾಡಿಯೇ ಬಿಟ್ಟಿತು - ಭೀತಿಯ ನೆರಳಿನಿಂದ ಪಾರಾಗಿರಲಿಲ್ಲ.

"ಸಾರಿ, ಸಾರಿ .. ಎಕ್ಸ್ಟ್ರೀಮ್ಲೀ ಸಾರಿ! ಪ್ಲೀಸ್ ಕ್ಷಮ್ಸಿಬಿಡಮ್ಮ. ಒಂದಿಷ್ಟು ಆಯಿಂಟ್‌ಮೆಂಟ್ ಹಚ್ಲಾ?" ಕೇಳಿದಳು ವ್ಯಥಿತಳಾಗಿ. ಗೆಳತಿಯನ್ನ ಕ್ಷಮಿಸಿಬಿಡುವಂಥ ಧಾರಾಳ ಹೃದಯವಿತ್ತು. "ಆಯ್ತು, ಹೇಗೋ ... ಬದ್ಕಿ ಹೊರಬಿದ್ದೆವಲ್ಲ, ಹೊಟ್ಟೆ ವಿಪರೀತ ಹಸೀತಾ ಇದೆ. ಸ್ನಾನ ಮಾಡ್ದೆ ಹೊರ್ತು ಅಜ್ಜಿ ಬಡಿಸೋಲ್ಲ. ಒಂದಿಷ್ಟು ಸ್ನಾನದ ಶಾಸ್ತ್ರ ಮಾಡ್ಕೊಂಡ್ ಬರ್ತೀನಿ" ಚುರು ಚುರು ಎನ್ನುತ್ತಿದ್ದ ಮಂಡಿಗಳನ್ನು ನೋಡುತ್ತಲೇ, ತೆಗೆದಿಟ್ಟ ಬಟ್ಟೆಗಳನ್ನು ಬಚ್ಚಲ ಮನೆಗೆ ಒಯ್ದಳು.

ಮನೆಯ ಗಂಡಸರ ಊಟ ಮುಗಿದಿದ್ದರಿಂದ, ಹೆಂಗಸರು ಎಲೆ ಹಾಕಿಕೊಂಡಿದ್ದರು. ನಿಂತು ಬಡಿಸುತ್ತಿದ್ದ ಶಬರಿ. ಗೋಪಾಲ ಇವರಿಬ್ಬರಿಗೆ ಎಲೆಗಳನ್ನು ಹಾಕಿ ಉಪ್ಪು, ಉಪ್ಪಿನಕಾಯಿ ಜೊತೆ ಎಲೆಯ ಕೊನೆಗೆ ಪಾಯಸ ಬಡಿಸಿದ್ದರು. ಯಾರೇ ಬಂದರೂ ಸಿಹಿ ಬಡಿಸಿ ಉಪಚರಿಸುವುದು ಉತ್ತಮ ಸಂಪ್ರದಾಯ, ಅದು ಆಚರಣೆಯಲ್ಲಿತ್ತು. ಬಡಿಸಲು ನಿಂತರೆ ಆಕೆ ಸಾಕ್ಷಾತ್ ಅನ್ನಪೂರ್ಣೆಯೇ.

ಹೊಟ್ಟೆಯೇನೋ ಹಸಿದಿತ್ತು. ಘಮಘಮಿಸುವ ಸಾರು, ಹುಳಿ, ತಂಬುಳಿ ಜೊತೆ ಹಪ್ಪಳ, ಸಂಡಿಗೆ. ಗಬಗಬ ತಿನ್ನಬೇಕೆನಿಸುತಿತ್ತು. ಅಂಥ ಪ್ರಯತ್ನವು ನಡೆಯಿತು. ಹಸಿವು ಕೆಲವೊಮ್ಮೆ ಎಲ್ಲವನ್ನು ಧಿಕ್ಕರಿಸಿ ನಡೆಯುವಂಥ ಛಾತಿಯುಳ್ಳದ್ದು. ಗೋಪಾಲ ಆ ಮನೆಯವರ ಪ್ರಕಾರ ಹೊಟ್ಟೆಬಾಕ. ಎಲ್ಲರಿಗಿಂತ ಹೆಚ್ಚಾಗಿ ಊಟ ಮಾಡಬಲ್ಲವ. ಎಲ್ಲವು ರುಚಿಕಟ್ಟಾಗಿರಬೇಕು. ಸೊಸೆಯರಿಗೆ ಸಿಡಿಮಿಡಿಯೇ. ಆದರೆ ಮಕ್ಕಳಿಲ್ಲದ ಕೊರಗು ಅವರನ್ನು ತೆಪ್ಪಗಾಗಿಸಿ ಈ ಮನೆಯ ಶಾಂತತೆಯನ್ನು ಕಾಪಾಡಿತ್ತು. ಹಿರಿಯುವಳು ಸ್ವಲ್ಪ ಬಾಯಿ ಬಡಕಿ. ಇವರಿಗಿಂತ ಆರ್ಥಿಕವಾಗಿ ಕೆಳಮಟ್ಟದಲ್ಲಿರುವ ಮನೆತನದಿಂದ ಹುಡುಗಿಯನ್ನು ತರುವಾಗ, ಹುಡುಗಿ ತುಂಬ ವಿಧೇಯತೆಯಿಂದ ಈ ಮನೆಯನ್ನು ತೂಗಿಸಿಕೊಂಡು

ಹೋಗುತ್ತಾಳೆನ್ನುವ ಅಭಿಪ್ರಾಯ ಎಲ್ಲರದು. ಆದರೆ ಇಲ್ಲಿಗೆ ಬಂದ ಮೇಲೆ ಬಾಯಿ ಜಾಸ್ತಿ ಆಯಿತಷ್ಟೆ. ಇನ್ನು ಎರಡನೆಯವರದು ಸ್ವಲ್ಪ ಅಸಹನೆಯ ಸ್ವಭಾವ. ಇದ್ದಿದ್ದರಲ್ಲಿ ಮೂರನೆಯವಳು ಶಾಂತ ಸ್ವಭಾವದವಳು, ಒಳ್ಳೆಯವಳು. ಸ್ವಲ್ಪ ಮನಸ್ಸಾಕ್ಷಿ ಇದ್ದವಳು. ಹೊಂದಿಕೆಯಾಗುತ್ತಿದ್ದಳು. ಆದರೆ ಹಿರಿಯಕ್ಕಂದಿರು, ತಮ್ಮ ಚಾಳಿಯಿಂದ ಬಂಧಿಸಿಡುವ ಪ್ರಯತ್ನ ನಿರಂತರವಾಗಿ ಮಾಡುತ್ತಿದ್ದರು.

"ಸರ್ರ್ಯಾಗಿ ಊಟ ಮಾಡ್ಲೇ ಇಲ್ಲ" ಶಬರಿ ದನಿಗೆ ಎಚ್ಚೆತ್ತ ಕಣ್ಮಣಿ "ತುಂಬ ಬಡ್ಸಿಬಿಟ್ಟರಿ. ಹಾಸ್ಟೆಲ್‌ನಲ್ಲಿ ಒಂದೇ ತರಹ, ಸಾರು, ಹುಳಿ. ಇವತ್ತೇ ತುಂಬ ತಿಂದಿದ್ದು" ಎಂದಳು ತಡಬಡಿಸುತ್ತ. ಬಡಿಸಿದ್ದೆಲ್ಲ ಎಲೆಯಲ್ಲಿ ಹಾಗೆಯೇ ಇತ್ತು. ನೀರು ಕುಡಿಯುತ್ತಿದ್ದ ಗೋಪಾಲ ಫಕ್ಕನೆ ನಕ್ಕ, ಬಾಯಲ್ಲಿನ ನೀರು ಅಷ್ಟು ದೂರಕ್ಕೆ ಹಾರಿತು.

"ನಿಂದು ಬರೀ ಹುಡ್ಗಾಟ! ಊಟ ಮಾಡೋವಾಗ ಒಂದಿಷ್ಟು ವೈನಾಗಿ ಊಟ ಮಾಡ್ಬಾರ್ದ?" ಮಗನನ್ನು ಪ್ರೀತಿಯಿಂದ ಬಯ್ದರು. ಅದರಲ್ಲಿ ಕೋಪವೇನು ಇರಲಿಲ್ಲ. ತುಂಬು ತಾಯ್ತನದ ಮಮತೆ, ಹಿರಿಯಾಕೆ ಶಬರಿ ನಿಷ್ಕಳಂಕ ಮನಸ್ಸಿನವಳಾದುದ್ದರಿಂದಲೇ ಅನಾಥ ಹೆಣ್ಣು ಮಗು ವಾಸಂತಿಯನ್ನು ಪ್ರೀತಿಯಿಂದ ಸಲಹಿದ್ದು. ಅಂಥ ತುಂಬು ಹೃದಯದ ಹೆಣ್ಣು.

"ಯಾಕೋ ನಕ್ಕಿದ್ದು?" ಗದರಿದಾಗ ಕಣ್ಮಣಿಯ ಎಲೆ ಕಡೆ ತೋರಿಸಿದ "ಬಡಿಸಿದ್ದೆಲ್ಲ ಹಾಗೇ ಇದೆ. ಮತ್ತೆ ತಿಂದಿದ್ದೇನು? ಮತ್ತೆ ನಗ್ದೇ ಏನ್ಮಾಡ್ಲಿ? ಅವ್ರಿಗೆ ನಿನ್ನ ಕೈನಾ ಅಡ್ಗೆ ರುಚಿಸಿದ್ದಂಗಿಲ್ಲ" ಸಹಜವಾಗಿ ತಮಾಷೆ ಮಾಡಿದ. ಕಣ್ಮಣಿಯ ಕಣ್ಣುಗಳಲ್ಲಿ ತೆಳ್ಳಗಿನ ಪರೆ ಆವರಿಸಿತೇ ವಿನಃ ಹನಿಯುಕ್ಕಲಿಲ್ಲ.

"ಏನೇನೋ ಮಾತಾಡ್ಬೇಡ. ನಮ್ಮ ಗೋಪಾಲ ಒಂದು ತರಹ... ಹೀಗೇನೇ! ಬಾಯಿಗೆ ಬಂದಿದ್ದು ಮಾತಾಡಿಬಿಡ್ತಾನೆ, ಏನು ತಿಳ್ಕೋಬೇಡ" ಎಂದರು ಶಬರಿ.

ಮೂವರಲ್ಲಿ ಬಹಳ ಕಡಿಮೆ ಊಟ ಮಾಡಿದವಳು, ಕಣ್ಮಣಿಯೊಬ್ಬಳೇ. ಚುರುಕು ಮಾತಿನ ಗೋಪಾಲನ ನುಡಿಗಳಿಂದ ನೊಂದಿದ್ದಳು. ಜೊತೆಗೆ ಕಾಲು ನೋವು ಬೇರೆ. ಮರುದಿನ ಹೊರಡುವ ಪ್ರೋಗ್ರಾಂ ಇತ್ತು. ಹೇಗಪ್ಪ ಎನ್ನುವ ಯೋಚನೆ. ಅವಳು ಒಂದು ಪತ್ರಿಕಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಳು. ಜಾಬ್ ಸೆಕ್ಯೂರಿಟಿ ಇಲ್ಲ. ತೀರಾ ಕಟ್ಟುನಿಟ್ಟು. ಆದರೂ

ಒಳ್ಳೆಯ ಸಂಬಳ, ವಾಹನ ಸೌಕರ್ಯವಿರುತಿತ್ತು. ಕೆಲವೊಮ್ಮೆ ಅದು ತೀರಾ ಇಷ್ಟವಾದ ಕೆಲಸ ಎನ್ನುವುದಕ್ಕಿಂತ ಅವಳ ಬದುಕು ನಿಂತಿದ್ದು ಅದರ ಮೇಲೆನೇ.

ಕೈ ತೊಳೆಯಲು ಏಳುವಾಗ ತೀರಾ ಕುಂಟುವಂತಾಯಿತು. ವಾಸಂತಿ ಮೊದಲೇ ಎದ್ದು ಹೋಗಿದ್ದಳು. ಪ್ರತಿಯೊಂದು ಸಲ ಪಾದವನ್ನೂರುವಾಗ, ಕಾಲಿನ ನೋವು ಇಡೀ ಮೈಯಲ್ಲಿ ಸಂಚರಿಸುತಿತ್ತು. ನಡೆಯಲು ಕಷ್ಟವೆನಿಸಿತು.

"ಅಮ್ಮ....." ಹಿತ್ತಲಿನ ಗೋಡೆಗೊರಗಿದಾಗ ಹಿಂದಿನಿಂದ ಬಂದ ಗೋಪಾಲ "ತುಂಬ ನೋವಾ! ನಾನು ಗಮನಿಸ್ತಾನೇ ಇದ್ದೆ ಊಟ ಮಾಡೋವಾಗ" ಯಾವ ಸಂಕೋಚವು ಇಲ್ಲದೆ ಕೈ ಹಿಡಿದು ನಡೆಸಿಕೊಂಡು ಹೋಗಿ ತಾನೇ ಎಂಜಲ ಕೈಗೆ ನೀರು ಹಾಕಿದ. ಕಣ್ಮಣೆ ಮುಖ ಕಿವಿಚುವ ರೀತಿಗೆ ಮೃದುವಾಗಿಬಿಟ್ಟಿದ್ದ.

"ನೋವಾಂತ.. ಕೇಳ್ದೇ?" ಎಂದ ಗಟ್ಟಿಯಾಗಿ.

"ಸ್ವಲ್ಪ ಅಷ್ಟೆ" ಎನ್ನುತ್ತ ಪ್ರಯಾಸದಿಂದ ಕಾಲನ್ನು ಎಳೆದುಹಾಕುತ್ತ ಹೋಗಿ ಕೋಣೆಯಲ್ಲಿನ ಮಂಚದ ಮೇಲೆ ಕುಸಿದಾಗ ಗಾಬರಿಯಾದಳು ವಾಸಂತಿ. "ಏನಾಯ್ತೇ?ತುಂಬ ನೋವಾ?".

"ಕಾಲೂರೋಕೆ ಆಗೋಲ್ಲ. ಮತ್ತೆ ಹೇಗೆ ಊರಿಗೆ ಹೋಗೋದು?" ಎಂದಳು ದುಃಖದಿಂದ. "ಡೋಂಟ್ ವರೀ ವಾಸಿ ಮಾಡ್ಕೊಂಡೇ ಹೋಗೋಣ. ಒಂದೆರಡು ದಿನಕ್ಕಾಗಿ ನಿನ್ನ, ನನ್ನ ಯಾರು ಕೆಲ್ಸದಿಂದ ತೆಗ್ದು ಹಾಕೋಲ್ಲ. ಹಾಕೂಂದ್ರು.. ಬೇರೊಂದು ಕೆಲ್ಸಕ್ಕೆ ಟ್ರೈ ಮಾಡೋಣ". ಸುಲಭವಾಗಿ ಹೇಳಿದಳು. ಅದೆಷ್ಟು ಕಷ್ಟವೆಂದು ಅವಳಿಗೆ ಗೊತ್ತು.

ಅಷ್ಟರಲ್ಲಿ ಒಂದು ಸೀಸೆ ಹಿಡಿದು ಬಂದ ಗೋಪಾಲ "ಈ ಕಡೆ ಕಾಲು ನೀಡಿ. ಝಟ್ ಫಟ್ ಅಂತ ನಿಮ್ಮ ಕಾಲಿನ ಉಳುಕು ಸರಿಯಾಗಿ ಬಿಡ್ಬೇಕು" ಮುಖದ ತುಂಬ ನಗುವನ್ನು ತುಂಬಿಕೊಂಡು ಹೇಳಿದಾಗ ಮಾನವೀಯತೆಯ ಹೊಳಪು ಅವನ ಕಣ್ಣುಗಳಲ್ಲಿತ್ತು. ಸಂಕೋಚಿಸಿದಳು. ಇಷ್ಟವಾಗಲಿಲ್ಲ ಕೂಡ "ಬೇಡ, ಹಾಗೇ ಸರಿಹೋಗುತ್ತೆ" ಕಾಲನ್ನು ಮುಂದಕ್ಕೆ ನೀಡಲಿಲ್ಲ. ಒಂದು ತರಹ ನೋಡಿದ. 'ಸ್ವಲ್ಪ ಹೇಳ್ದಂಗೆ ಕೇಳಿ' ಎನ್ನುವಂತಿತ್ತು. ಅವನ ಮುಖದ ಭಾವ.

"ಪರ್ವಾಗಿಲ್ಲ, ಕಾಲು ಕೊಡೇ, ಅಜ್ಜಯ್ಯನಿಗೆ ಅಭ್ಯಂಗನ ಸ್ನಾನ

ಮಾಡ್ತೋದು ನಮ್ಮ ಗೋಪಾಲ ಮಾವನೇ. ಯಾವ ಯಾವ ಮೂಳೆ ಎಲ್ಲೆಲ್ಲಿ ಇರ್ಬೇಕು, ಯಾವ ಯಾವ ನರಗಳು ಎಲ್ಲೆಲ್ಲಿ ಇವೇಂತ ಅವ್ನಿಗೆ ಗೊತ್ತಿದೆ". ಹೇಳಿದ ವಾಸಂತಿ ಅವನು ಕೂಡಲು ಒಂದು ಪುಟ್ಟ ಸ್ಟೂಲನ್ನು ತಂದು ಹಾಕಿದಳು.

ವಾಸಂತಿ, ಗೋಪಾಲನತ್ತ ಬದಲಿಸಿ ಬದಲಿಸಿ ನೋಡಿದವಳು "ನಾನು ಸಿಟಿಯಲ್ಲಿರೋ ಆಸ್ಪತ್ರೆಯಲ್ಲಿ ತೋರಿಸ್ತೀನಿ. ದಯವಿಟ್ಟು ಸುಮ್ನೆ ಇದ್ಬಿಡಿ" ಗೋಗರೆದಳು. ದುರುದುರು ನೋಡಿ ಅವಳ ಪಾದವನ್ನು ಒರಟಾಗಿ ಎಳೆದುಕೊಂಡು ಮೃದುವಾಗಿ ಬೆರಳುಗಳಿಂದ ಮುಟ್ಟಿ ಮುಟ್ಟಿ ನೋಡಿದವನು, ಅತ್ತಿತ್ತ ತಿರುಗಿಸಿ ಅವಳ ಕಣ್ಣಲ್ಲಿ ನೀರು ಬರಿಸಿದ. "ಆರಾಮಾಗಿ ಕಣ್ಮುಚ್ಕೊಂಡ್ ಕೂತುಬಿಡಿ. ಎಷ್ಟು ಬೇಗ ನೋವು ಕಡ್ಮೆ ಆಗುತ್ತೆ, ನೋಡಿ. ಈ ಗೋಪಾಲನದ ಕೈಗುಣ ಅಂಥದ್ದು. ಹುಡ್ಕಿಕೊಂಡು ಬರ್ತಾರೆ, ನನ್ನ ಕೈಯಲ್ಲಿ ಕಾಲು ನೀವಿಸಿಕೊಳ್ಳೋಕೆ". ಆಯಿಲ್‌ನ ಕೈಗೆ ಬಗ್ಗಿಸಿಕೊಂಡು ಪಾದದ ಮೇಲು ಭಾಗದವರೆಗೂ ಸವರಿದ ಮೃದುವಾಗಿ. ನಂತರ ನೀವ ತೊಡಗಿದಾಗ ಬಾಯಿ ಬಡಿದುಕೊಳ್ಳುವಂತಾಯಿತು ಅವಳಿಗೆ. ಆಮೇಲೆ ಹಿತವೆನಿಸಿತು. ಹತ್ತು ನಿಮಿಷಗಳ ನಂತರ ಊದಿದ ಜಾಗಕ್ಕೆಲ್ಲ ಯಾವುದೋ ಎಲೆ ರಸ ಸವರಿ ಮೇಲೆದ್ದ.

"ಸ್ವಲ್ಪ ಆರಾಮಾಗಿ ಮಲ್ಗಿ ಬಿಡಿ. ಇವತ್ತು, ನಾಳೆ ರೆಸ್ಟೇ. ಹೇಗೋ ಪುಟ್ಟ ಟೇಪ್‌ರೆಕಾರ್ಡರ್, ಕ್ಯಾಸೆಟ್‌ಗಳ್ನ ತಂದಿದ್ದರಲ್ಲ, ಹಾಕ್ಕೊಂಡು... ಕೇಳಿಕೊಳ್ಳಿ" ಬಾಟಲು ಎತ್ತಿಕೊಂಡು ರೂಮಿನಿಂದ ಹೊರಗೆ ಹೋದ.

ಗೆಳತಿಯನ್ನು ತಬ್ಬಿಕೊಂಡು ಅತ್ತೆ ಬಿಟ್ಟಳು ಕಣ್ಮಣಿ "ಎಷ್ಟೊಂದು ಕಷ್ಟವಾಯ್ತು! ನಾನು ನಿನ್ಜೊತೆ ಬಂದಿದ್ದೇ ತಪ್ಪಾಯ್ತು."

ಹೆಗಲಿಗೊರಗಿಸಿಕೊಂಡ ವಾಸಂತಿ ಕಣ್ಣೀರು ತೊಡೆದು ಸಮಾಧಾನಿಸಿ "ನಮ್ಮಂಥವು ಇನ್ನಷ್ಟು ಧೈರ್ಯವಾಗಿ ಸಮಸ್ಯೆಗಳ್ನ ಫೇಸ್ ಮಾಡೋದ್ನ ಕಲೀಬೇಕು. ಇಲ್ಲಾಂದ್ರೆ ಬದ್ಕು ಬರ್ಬರವಾಗ್ಬಿಡುತ್ತೆ".

ಆಮೇಲೆ ಮನೆಯವರೆಲ್ಲ ಬಂದು ಅವಳ ಕಾಲನ್ನು ನೋಡಿ ಹೋದರು. ಎಲ್ಲರೂ ಧೈರ್ಯದ ಮಾತುಗಳನ್ನು ಆಡಿದರು. ಅಜ್ಜಯ್ಯ, "ಇವೆಲ್ಲ ಸಾಧಾರಣವಾದುದ್ದು. ನಮ್ಮ ಗೋಪಾಲನ ಮೂರು ಮಂತ್ರದಲ್ಲಿ ನಿಮ್ಮ ಕಾಲಿನ ಉಳುಕು ಸರ್ಯೋಗುತ್ತೆ. ನಮ್ಮ ತಂದೆ ಉಳುಕಿಗೆ ಮಂತ್ರ ಹಾಕೋರು. ನಾನು ಕಲೀಲಿಲ್ಲ. ನೆಟ್ಟಗೆ ಮೊಮ್ಮಗನಿಗೆ ಕಲಿಸಿದ್ದಾರೆ". ಹೇಳಿದಾಗ,

ವಾಸಂತಿಯ ಮುಖ ನೋಡಿದಳು. ಈ ಪರಿಸರ, ಇವರೆಲ್ಲ ಇಷ್ಟವಾದರು ಕಣ್ಮಣಿಗೆ.

ಶಬರಿ ಬಿಸಿ ಬಿಸಿ ಹಾಲಿನ ಜೊತೆ ಒಂದು ಗುಳಿಗೆ ತಂದಿತ್ತರು. "ಇದ್ನ ನಂಗಿ, ಹಾಲು ಕುಡ್ದು.. ನಿದ್ರಿಸು. ಆ ಹೊತ್ಗೆ ಎಷ್ಟೋ ನೋವು ಕಡ್ಮೆ ಆಗಿರುತ್ತೆ" ಹೇಳಿ ಹೋದರು. ಈ ಪ್ರೇಮ, ವಿಶ್ವಾಸ ಎಲ್ಲಾ ಆಪ್ಯಾಯಮಾನವೆನಿಸಿತು. ಇದೆಲ್ಲವನ್ನ ನನ್ನಿಂದ ದೇವರು ಯಾಕೆ ಕಿತ್ತುಕೊಂಡ? ಹಡೆದ ತಾಯಿಗೆ ಬೇಡವಾಗಿ ಬೀದಿಗೆ ಬಿದ್ದೆ - ಅಳಬೇಕೆನಿಸಿತು.

ಆರಾಮಾಗಿ ಮಲಗಿದಾಗ ಟೇಪ್ ರೆಕಾರ್ಡರ್ ಬಟನೊತ್ತಿದರು. ವಿದ್ಯಾಭೂಷಣ ಸ್ವಾಮೀಜಿಯವರು ತಮ್ಮ ಮಧುರ ಕಂಠದಿಂದ 'ನಮ್ಮಮ್ಮ ಶಾರದೆ.. ಉಮಾ ಮ' ಹಾಡುತ್ತಿದ್ದರು. ಸನ್ಯಾಸ ಆಶ್ರಮ ತ್ಯಜಿಸಿದ ಸುಬ್ರಮಣ್ಯ ಪೀಠದ ಸ್ವಾಮೀಜಿಯವರು ರಮಾ ಎಂಬ ಹುಡುಗಿಯನ್ನು ಪ್ರೇಮಿಸಿ ಮದುವೆಯಾಗಿ ಆಸ್ತಿಕ ಸಮಾಜದಲ್ಲಿ ದೊಡ್ಡ ಕ್ರಾಂತಿಯನ್ನೆ ಮಾಡಿದ್ದರು. ಈಚೆಗೆ ಪತ್ರಿಕೆಗಳಲ್ಲಿ ಅದೇ ಸುದ್ದಿ. ಕೆಲವು ಜನ ಅಪಸ್ವರವೆತ್ತಿದರು. ಸಹೃದಯಿ ಜನ ಅವರ ಪ್ರಾಮಾಣಿಕತೆಯನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡು ರಮ, ವಿದ್ಯಾಭೂಷಣ ದಾಂಪತ್ಯಕ್ಕೆ ಶುಭ ಹಾರೈಸಿದ್ದರು. ಆ ನೆನಪುಗಳಲ್ಲಿ ತೇಲಿದಳು. ಮೆಲ್ಲ ಮೆಲ್ಲಗೆ ಎಂಥಾ ಅದ್ಭುತ ಕಂಠ. ರಮಾ ಈ ಕಂಡ ಸಿರಿಗೆ ಮಾರು ಹೋದರಾ? ಹಾಗೆಯೇ ಕಣ್ಣು ಮುಚ್ಚಿದಳು. ಮಧುರ ಕಂಠದ ಧ್ವನಿಗಳು ಉಬ್ಬಿರ ಏರಿಳಿತವಿಲ್ಲದ ಅಲೆಗಳನ್ನೆಬ್ಬಿಸಿ ಒಂದು ರೀತಿಯ ಶಾಂತತೆಯನ್ನು ನೀಡಿತು. ಹಾಡುಗಾರಿಕೆಗೆ ಎಂಥ ಶಕ್ತಿ ಇದೆ? ಎಂಥ ಶಾಂತತೆಯನ್ನು ನೀಡಬಲ್ಲದು? ಮಂಪರು ಕವಿದಂತಾಗಿ ನಿದ್ರಾ ಲೋಕಕ್ಕೆ ಜಾರಿದಳು. ಸೇರಿಸುವುದು ಹಾಗೆಯೇ ಕಣ್ಣು ಮುಚ್ಚಿದಳು. ಮಧುರ ಕಂಠದ ಧ್ವನಿಗಳು ಉಬ್ಬರವಿಳಿತವಿಲ್ಲದ ಅಲೆಗಳನ್ನೆಬ್ಬಿಸಿ ಒಂದು ರೀತಿಯ ಶಾಂತತೆಯನ್ನು ನೀಡಿತು.

ತೀರಾ ಕತ್ತಲು ಕವಿದ ಮೇಲೆಯೇ ಅವಳಿಗೆ ಎಚ್ಚರವಾಗಿದ್ದು. ವಾಸಂತಿ ಎಲ್ಲೂ ಹೋಗದೆ ಕೋಣೆಯಲ್ಲಿಯೇ ಉಳಿದಿದ್ದಳು. ಅವಳ ಕಾಲಿನ ನೋವಿನ ಜೊತೆ ಬಂಗ್ಲೆಯಲ್ಲಿನ ಅನುಭವ ಅವಳಲ್ಲಿ ಭಯವನ್ನೇ ಹುಟ್ಟಿಸುತಿತ್ತು. ಧೂಳು, ಕಸ, ಗೂಡು ಕಟ್ಟಿದ ಪಕ್ಷಿಗಳ ಆವಾಸಸ್ಥಾನ, ತಲೆಯ ಮೇಲೆ ಹಾರಾಡುವಂತೆ ಬರುತ್ತಿದ್ದ ಬಾವಲಿಗಳು-ನಡುಕ

ಬಂದಂತಾಗುತಿತ್ತು. ತಮಗೇ ಅಷ್ಟು ಧೈರ್ಯ ಬಂದಿದ್ದು ಹೇಗೆ? ಸೌಮ್ಯ ಸ್ವಭಾವದ ಕಣ್ಮಣಿಯಲ್ಲಿ ಹಠ ಜಾಗೃತವಾದುದ್ದು ಆಶ್ಚರ್ಯವೆನಿಸಿತು.

"ಎಚ್ಚರ ಆಯ್ತು? ಅಜ್ಜಿ, ಗೋಪಾಲ ಒಂದು ನಾಲ್ಕು ಸಲವಾದ್ರೂ.. ಬಂದ್ಹೋದ್ರು! ಈಗ ಕಾಲಿನ ನೋವು ಕಮ್ಮಿ ಆಗಿದ್ಯಾ?'' ಕೈ ಹಿಡಿದುಕೊಂಡಳು. ಈ ಕುಟುಂಬದಲ್ಲಿ ವಾಸಂತಿ ಬೆಳೆದರು ಅನಾಥಳೇ. ಆದರೆ ಕಣ್ಮಣಿ ಬೆಳೆದಿದ್ದೇ ಅನಾಥಾಶ್ರಮದಲ್ಲಿ. ಇಬ್ಬರಿಗೂ ತಮ್ಮ ಹುಟ್ಟು, ತಾಯ್ತಂದೆಯರ ಬಗ್ಗೆ ಗೊತ್ತಿಲ್ಲ.

"ಸ್ವಲ್ಪ ವಾಸಿ" ನಿಧಾನವಾಗಿ ಕಾಲನ್ನು ಎಳೆದುಕೊಂಡು ಎದ್ದು ಕೂತವಳ ನೋಟ ಮೆಲ್ಲಗೆ ಪಾದದತ್ತ ಹೊರಳಿತು. ಕೀಲಿನಿಂದ ಹಿಡಿದು ಪೂರ್ತಿ ಪಾದ ಊದಿತ್ತು. "ಏನೇ.. ಇದು?" ಆತಂಕಗೊಂಡಳು. ವಾಸಂತಿ ನಕ್ಕಳು "ಎಂಥದ್ದು ಇಲ್ಲ, ಸ್ವಲ್ಪ ನೀವಿದ್ದರಿಂದ, ವಾಸಿ. ಇಲ್ಲದಿದ್ರೆ.... ಪಾದದ ಆಕಾರನೇ ಬದಲಾಗಿಬಿಡ್ತಾ ಇತ್ತು. ಈಗ್ಬಂದ್, ಗೋಪಾಲ ನೀವುತ್ತಾನೆ. ನಾಳೆ ಸಂಜೆ ಹೊತ್ಗೇ ನಾರ್ಮಲ್‌ಗೆ ಬರುತ್ತೆ. ನಾಳಿದ್ದು ಹೊರಡಬಹುದು". ಒಂದು ಅಡ್ವಾನ್ಸ್ ಪ್ರೋಗ್ರಾಂನ ಅವಳ ಮುಂದಿಟ್ಟಳು.

ಸುಟ್ಟ ಗೆಣಸಿನ ಹಪ್ಪಳ, ಬಾಳೆಕಾಯಿ ಬಜ್ಜಿಯ ತಟ್ಟೆಗಳನ್ನು ಹಿಡಿದು ಬಂದ ಗೋಪಾಲ ಹುಬ್ಬೇರಿಸಿ "ಹೇಗಿದೆ ನೋವು, ಮಲಗೋದ್ರಲ್ಲಿ ಕೂಡ ಮಜಾ ಇದೇರಿ" ಎಂದ ನಗುತ್ತ. ಅವಳ ಕೈಯಲ್ಲಿನ ತಟ್ಟೆಗಳನ್ನು ಇಬ್ಬರಿಗೂ ಕೊಟ್ಟು "ಬಿಸಿ ಬಿಸಿ ಇದ್ದಾಗ್ಲೇ ಮುಗ್ಸಿ ಬಿಡಿ. ಬೇರೆಯವ್ರಿಗೆ ಹೇಗೋ..ಏನೋ, ಗೆಣಸಿನ ಹಪ್ಪಳ, ಬಾಳೆಕಾಯಿ ಬಜ್ಜೀ ನನ್ನ ಕಾಂಬಿನೇಷನ್. ತಿಂದು ಹೇಳಿ, ಕಾಫೀ ತರೋ ಹೊತ್ತಿಗೆ ತಟ್ಟೆಗಳು ಖಾಲಿಯಾಗಿರ್ಬೇಕು" ಎನ್ನುತ್ತ ಪಂಚೆಯನ್ನೆತ್ತಿ ಮೊಣಕಾಲಿನ ಮೇಲಕ್ಕೆ ಕಟ್ಟಿಕೊಳ್ಳುತ್ತ ಹೋದವನು ಒಂದು ದೊಡ್ಡ ಕಂಚಿನ ಚೊಂಬಿನಿಂದ ನೀರು, ಲೋಟ ಹಿಡಿದು ಬಂದ, ತಟ್ಟೆಗಳತ್ತ ನೋಡಿ "ಸರ್‍ಯಾಗಿ ಶುರು ಹಚ್ಚಿದ್ರೆ.. ತಟ್ಟೆಗಳು ಖಾಲಿಯಾಗ್ಬಿಡ್ಬೇಕು" ಜೋರು ಮಾಡಿದ.

"ನೀನು ಇಲ್ಲೇ ಬಾ" ಗೆಣಸಿನ ಹಪ್ಪಳ ಕಡಿಯುತ್ತ ವಾಸಂತಿ ಹೇಳಿದಾಗ ನಕ್ಕುಬಿಟ್ಟ. ಒಂದು ಮಗು ನಗುವಂಥ ಮುಗ್ಧ ನಗು. "ಬೇಡಮ್ಮ ಬೇಡ! ನಂದು ನಿಮ್ಮಗಳ ಹಾಗೇ ನಾಜೋಕ್ ತಿನ್ನುವಿಕೆಯಲ್ಲ. ಇಂಥ ಹತ್ತು ತಟ್ಟೆಗಳಾದ್ರೂ ಬೇಕು. ಅಮ್ಮ ಮಾಡುತ್ತ ಇರೋವಾಗ್ಲೇ ತಿಂದು ಕೈ ತೊಳ್ಕೊಂಡ್ ಹೊರ್ಗೇ.. ಬಂದ್ಬಿಡ್ತೀನಿ" ಎನ್ನುತ್ತ ಕೈ ಕೊಡವಿಕೊಂಡು ಹೋಗಿಬಿಟ. ಅತಲೇ ನೋಡಿದರು.

ಹಪ್ಪಳ, ಬಜ್ಜಿಯಲ್ಲಿ ಖಾರ, ಉಪ್ಪು ಹದವಾಗಿ ಬೆರೆತು ರುಚಿಯಾಗಿದ್ದುದ್ದರಿಂದ ಆರಾಮಾಗಿ ತಿಂದುಬಿಟ್ಟರು. ಕಾಲನ್ನ ಮಂಚದಿಂದ ಇಳಿಸಲೇ ಕಷ್ಟವೆನಿಸಿತು. ದೈನ್ಯದಿಂದ ವಾಸಂತಿಯತ್ತ ನೋಡಿದಾಗ, ನೀರು ತಟ್ಟೆ ಅವಳ ಮುಂದಿಡಿದು ಕೈ ತೊಳೆಯುವಂತೆ ಸನ್ನೆ ಮಾಡಿದಳು.

"ಇವತ್ತು ಮುಖ ತೊಳಿದಿದ್ರೆ, ಬೇಡ. ಬಚ್ಚಲ ಮನೆಗೆ ಹೋಗ್ಬೇಕಾದ್ರೆ ಮಾತ್ರ ಕರ್ಕಂಡ್ ಹೋಗ್ತೀನಿ. ಕಾಫಿ ಜೊತೆ ಗೋಪಾಲ ಮಾವ ಎಣ್ಣೆ ಹಿಡಕಂಡ್ ಬರ್ತಾನೆ" ಎನ್ನುತ್ತ ಅವಳ ಕೈಗೆ ನೀರು ಸುರಿದು ಟವಲು ಕೊಟ್ಟಳು.

ಕಾಲನ್ನು ಮತ್ತೆ ಮತ್ತೆ ನೋಡಿಕೊಂಡ ಕಣ್ಮಣಿ ಆಗುವ ನೋವನ್ನು ಕಲ್ಪನೆ ಮಾಡಿಕೊಂಡು ಹೆದರಿದಳು. "ತುಂಬ ನೋವಾಗುತ್ತೆ!" ಎನ್ನುವ ವೇಳೆಗೆ ಆಯಿಲ್‌ನ ಸೀಸೆ ಹಿಡಿದು ಒಳಗೆ ಬಂದ ಗೋಪಾಲ "ನೋವಾಗುತ್ತೇಂತ ಮಲ್ಗಿ ಬಿಟ್ಟರೇ, ನಿಮ್ಮನ್ನ ಎತ್ಕೊಂಡ್ ತಿರುಗೋರು.. ಯಾರು? ನನ್ನ ರೆಟ್ಟೆಯಲ್ಲಿ ಬಲ ಇರೋದ್ರಿಂದ ನನ್ನನ್ನೆ ಆಶ್ರಯಿಸ್ಬೇಕಾಗುತ್ತೆ. ಅದ್ಕಿಂತ ಇದೇ ಮೇಲು" ಎನ್ನುತ್ತಲೇ ಮಂಚದ ಮೇಲಿದ್ದ ಕಾಲನ್ನು ಕೆಳಗಿಳಿಸಿದ. ಅವಳಿಗೆ ಬಾಯಿ ಬಡಿದುಕೊಳ್ಳುವಂತಾಯಿತು. ತುಟಿ ಕಚ್ಚಿ ನುಂಗಿದಳು. ಮುಟ್ಟಿ ಮುಟ್ಟಿ ಹೊರಳಿಸಿ ನರವನ್ನು ತಟ್ಟಿ ನೋಡಿ ಹದವಾಗಿ ನೀವತೊಡಗಿದಾಗ ಸ್ವರ ಹೊರಗೆ ಬರದಂಗೆ ಬಾಯಿಗೆ ಕೈ ಅಡ್ಡವಾಗಿಡಿದ ಕಣ್ಮಣಿಯ ಸ್ಥಿತಿಯನ್ನು ನೋಡಲಾರದೆ ಹೋದ ವಾಸಂತಿ "ಗೋಪಾಲ ಮಾವ, ಸ್ವಲ್ಪ ನಿಧಾನವಾಗಿ ನೀವಿ, ಅವ್ರಿಗೆ ಮೊದಲ್ನೇ ಸಲ ಕಾಲು ಉಳುಕಿರೋದು." ಹೇಳಿದಾಗ, ನೋಟವೆತ್ತಿ ಕಣ್ಮಣಿಯನ್ನು ನೋಡಿ ನಗೆ ಚೆಲ್ಲಿದ. 'ತುಂಬ ಚೆನ್ನಾಗಿ ನಗ್ತೀರಾ' ಅಂತ ಹೇಳಬೇಕೆನಿಸಿತು ಆ ಸಮಯದಲ್ಲೂ ಕೂಡ ಮೊದ ಮೊದಲು ಇಡೀ ಕಾಲಿನ ನೋವು ಮೇಲೇರಿದರೂ ಆಮೇಲೆ ಕಡಿಮೆಯಾದ ಅನುಭವ. ರಾತ್ರಿ ಏನು ತಿನ್ನಲೇ ಇಲ್ಲ, ಎದ್ದು ತಿರುಗಾಡಲು ಕಷ್ಟವೆಂದು ಒಮ್ಮೆ ವಾಸಂತಿ ಬಚ್ಚಲಿಗೆ ಕರೆದೊಯ್ದಿದ್ದಳು.

ಬೆಳಗಿನ ಹೊತ್ತಿಗೆ ಸ್ವಲ್ಪ ಊತ ಇಳಿದಿದೆಯೆನಿಸುವುದರ ಜೊತೆಗೆ ನೋವು ಕೂಡ ತಗ್ಗಿದೆಯೆನಿಸಿತು. ಕುಂಟಿಕೊಂಡು ನಾಲ್ಕು ಹೆಜ್ಜೆ ಇಡಬಹುದೆನಿಸಿದಾಗ, ಹೋದ ಜೀವ ಬಂದಂತಾಯಿತು ಕಣ್ಮಣಿಗೆ, ಮನದಲ್ಲಿಯೇ ಮೂರು ಕೋಟಿ ದೇವರಿಗೆ ನಮಸ್ಕರಿಸಿದಳು.

"ಪರ್ವಾಗಿಲ್ವೇ ವಾಸಂತಿ! ಬೆಳಿಗ್ಗೆ ಹೊರಡೋ ತಯಾರಿ ಮಾಡ್ಬಹುದು"

ಹರ್ಷದಿಂದ ಉಲಿದಾಗ, ತನ್ನ ಪರ್ಸ್‌ನ ತಡಕುತ್ತಿದ್ದ ಅವಳು "ಆಯ್ತು, ನಾಳೆಯೊಂದು ದಿನ ಇದ್ಬಿಡೋಣ. ನಾಳಿದ್ದು ಮುಂಜಾನೆಯ ಬಸ್ಸಿಗೆ ಹೊರಟರಾಯ್ತು, ಅಜ್ಜಯ್ಯ ತಂಗಿ ಮನು ಅತ್ತೆಗೆ ಮೈ ಸರಿಯಿಲ್ವಂತೆ. ಒಂದಿಷ್ಟು ಹೋಗ್ಬರೋಣಾಂದ್ರು ಅಜ್ಜಿ. ಈಗೇನ್ಮಾಡೋದು; ನೀನು ಬರೋದಿದ್ರೆ ಸರಿಯಿತ್ತು" ಪೇಚಾಡಿಕೊಂಡಳು.

"ಕುಂಟಿಕೊಂಡು ಹೇಗೇ ಬರ್ಲೀ? ನೀನ್ಹೋಗಿದ್ದು ಬಾ. ನಾನು ಆರಾಮಾಗಿ ಭಾವಣೆ ನೋಡ್ಕೊಂಡ್ ಮಲಗಿರ್ತೀನಿ" "ಸಮ್ಮತಿ ಸೂಚಿಸಿದಳು ಕಣ್ಮಣಿ. ಈಗಲೇ ತಾನು ಬಂದು ಸಾಕಷ್ಟು ತೊಂದರೆ ಕೊಟ್ಟಿದ್ದೀನಿ ಎನ್ನುವ ಪೇಚಾಟ ಅವಳದು. ಈ ಪ್ರದೇಶ ನೋಡಿದ ಮೇಲೆ ಇರುವ ನಾಲ್ಕು ದಿನ ಹಕ್ಕಿಯಂತೆ ಹಾರಾಡಬೇಕೆಂದುಕೊಂಡಿದ್ದು ಸುಳ್ಳಾಯಿತು, ಈಗ ಆರಾಮಾಗಿ ಇಲ್ಲಿ ಬಿಟ್ಟರೆ ಸಾಕಿತ್ತು."

ಸ್ನಾನ, ಉಪಹಾರ ಮುಗಿದ ನಂತರ ಶಬರಿ, ಜೋಷಿಗಳ ಜೊತೆ ಹೊರಟ ವಾಸಂತಿ ಒಂದು ನೂರು ಸಲವಾದರೂ 'ಬೇಗ ಬಂದ್ಬಿಡ್ತೀವಿ' ಎಂದು ಹೇಳಿ ಹೋಗಿದ್ದಳು. ಅದರ ಜೊತೆ ಇನ್ನೊಂದು ಮಾತು. 'ಬೆಳಗಿನ ಜಾವವೇ ಹೋಗಿದ್ದಾನೆ, ಗೋಪಾಲ ಮಾವ. ನಿನ್ನ ಕಾಲನ್ನು ನೆನಪಿಸಿಕೊಂಡಾದ್ರು ಬೇಗ ಬರ್ತಾನೆ. ಅವ್ನು ಬಂದ್ಮೇಲೆ ಬೇಜಾರು ಅನ್ನೋದೇ ಇಲ್ಲ' ಸೇರಿಸಿ ಹೇಳಿದ್ದಳು.

ಮುನ್ನ ವಾಸಂತಿಯ ಬಗ್ಗೆ ಅವಳಿಗೇನು ತಿಳಿದಿರಲಿಲ್ಲ. ಇಲ್ಲಿಗೆ ಬಂದ ನಂತರ ಅವಳೇ ಹೇಳಿಕೊಂಡಿದ್ದು, ಅವಳು ಕೂಡ ಹೆತ್ತವರು ಇಲ್ಲದ ಅನಾಥೆ. ರಕ್ತ ಸಂಬಂಧದ ಬಂಧುಗಳು ಇರಲ್ಲಿಲ್ಲ ! ಏನು ಈ ವಿಪರೀತ! ಇದೆಂಥ ದಾರುಣ.

ಆಗ ಹುಟ್ಟಿದ ಮಗುವಿನಿಂದ ಹಿಡಿದು ಹತ್ತು, ಹನ್ನೆರಡು ವಯಸ್ಸಿ ಮಕ್ಕಳು ಕೂಡ ಕಸದ ತೊಟ್ಟಿಗೆ ಎಸೆದಂತೆ ಅನಾಥಾಲಯಕ್ಕೆ ಬಂದು ಬೀಳುತ್ತಿತ್ತು. ಕರುಣೆ-ನಿಂದೆ ಜೊತೆ ಜೊತೆಯಾಗಿಯೆ ಇರುತಿತ್ತು.

ಇಲ್ಲಿ ಕೂಡ ಶಬರಿಯ ಗಂಡು ಮಕ್ಕಳು ಗೋಪಾಲನನ್ನು ಬಿಟ್ಟು ಮಿಕ್ಕವರು ಎದುರಾದಾಗ ಮಾತ್ರ ವಾಸಂತಿಯನ್ನು ಮಾತಾಡಿಸುತ್ತಿದ್ದರು. ಅಂಥ ಮುತುವರ್ಜಿಯೇನು ಇರಲಿಲ್ಲ. ಆದರೆ ಈ ಮನೆಯಲ್ಲಿ ಒಂದೇ ಒಂದು ತೊಟ್ಟಿಲು ತೂಗದ್ದು ದೌರ್ಭಾಗ್ಯ.

ಸದ್ದಿಗೆ ಎಚ್ಚೆತ್ತು ಪಕ್ಕಕ್ಕೆ ತಿರುಗಿದಳು. ಮನೆಯ ಹಿರಿಯ ಸೊಸೆ ಇಣಕಿ

ತಕ್ಷಣ ಬಾಗಿಲು ಎಳೆದುಕೊಂಡಳು. ಮಾತೇ ಬರೋಲ್ಲವೇನೋ ಎನ್ನುವಂತೆ ನಟಿಸುವ ಅವರುಗಳು ಜೀವವಿರುವ ಬೊಂಬೆಗಳಂತೆ ಮಾತ್ರ ಕಂಡಿದ್ದರು.

"ನೀನಾಗಿ ಅವರಲ್ಲಿ ಮಾತಾಡೋಕೆ ಹೋಗ್ಬೇಡ. ಬಾಯಿ ತೆರೆದರೆ ಬರೀ ದುರ್ಗಂಧವೇ. ಅವರುಗಳು ಮಾತಾಡದೇ ಇರುವುದೇ ಒಳ್ಳೆಯದು" ವಾಸಂತಿ ಹೇಳಿದ್ದಳು.

ಹನ್ನೊಂದಕ್ಕೆ ಮುನ್ನವೇ ಬಂದ ಗೋಪಾಲ "ಹೇಗಿದ್ದೀರಿ? ನೋವು ಕಡ್ಮೆಯಾಗಿದ್ಯಾ? ನಂಗೆ ನಿಮ್ಮ ಕಾಲಿನದೇ ಯೋಚ್ನೆಯಾಗ್ಬಿಟಿತ್ತು" ಎಂದ ಕೂಡಲೇ ಕಾಲನ್ನು ಸ್ವಲ್ಪ ಎಳೆದುಕೊಂಡು ಏಳಲು ಪ್ರಯತ್ನಿಸಿದಾಗ ಅವಳ ಹಿಂಬದಿಗೆ ದಿಂಬನಿಟ್ಟು ಪಾದವನ್ನಿಡಿದು ನೋಡಿದ "ಪರ್ವಾಗಿಲ್ಲ, ಇಂದು ಎರ್ಡು ಸಲ ನೀವಿ ಬಿಟ್ಟರೇ, ಆರಾಮಾಗಿ ಎದ್ದು ನೀವು ನಡೀಬಹ್ದು" ಹರ್ಷದಿಂದ ಹೇಳಿದವನು ಚೇಷ್ಟೆಯ ನೋಟ ಬೀರಿ "ಇನ್ನೊಮ್ಮೆ ವಾಡೆಗೆ ಹೋಗಿ ಬಂದರೆ ಹೇಗೆ?" ಎಂದಾಗ ಕಣ್ಮಣಿ ತುಟಿ ತೆರೆಯಲಿಲ್ಲ.

ಒಂದೆರಡು ಗಂಟೆಗಳು ಬಿಟ್ಟು ಮತ್ತೆ ಬಂದ ಗೋಪಾಲ "ಸುಮ್ನೆ ಯಾಕೆ ಮಲಗಿರ್ತೀರಾ! ಕಾಲಿಗೆ ಅದೇ ಅಭ್ಯಾಸವಾದ್ರೆ ಮತ್ತಷ್ಟು ಸೋಮಾರಿತನ ಮಾಡುತ್ತೆ. ಇಲ್ಲೇ ಹತ್ತಿರ ಒಂದು ಒಳ್ಳೆ ಸ್ಥಳವಿದೆ, ಕರ್ಕಂಡ್ ಹೋಗ್ತೀನಿ.... ಬನ್ನಿ" ಬಲವಂತದಿಂದ ಅವಳ ಕಾಲನ್ನು ನೆಲಕ್ಕೂರಿಸಿದ. ನಾಲ್ಕು ಹೆಜ್ಜೆ ಕಷ್ಟವೆನಿಸಿದರೂ, ಆಮೇಲೆ ಚೇತರಿಸಿಕೊಂಳು. ಕೈ ಹಿಡಿದು ನಡೆಸಿದಳು..

ಹೊರಗೆ ಬಂದಾಗ ಇಡೀ ಮನೆ ನಿರ್ಜನವೆನಿಸಿತು. ಯಾಕೆ .... ಹೀಗೇ? ಊಟದವರೆಗೂ ಅಡಿಗೆ ಮನೆಯಲ್ಲಿರುತ್ತಿದ್ದ ಸೊಸೆಯರು ಬಡಿಸಿ, ಉಂಡ ನಂತರ ತಮ್ಮ ಕೋಣೆಗಳನ್ನು ಸೇರಿಬಿಟ್ಟರೇ ಸಂಜೆಯೇ ಎದ್ದು ಹೊರ ಬರುವುದು. ಮೊದ ಮೊದಲು ಶಬರಿ ತಾಕೀತು ಮಾಡಿ ಗೊಣಗಿ ಸಾಕಾಗಿ ಈಚೆಗೆ ಅವರ ಪಾಡಿಗೆ ಅವರನ್ನು ಬಿಟ್ಟುಬಿಟ್ಟಿದ್ದರು.

ಸ್ವಲ್ಪ ಕುಂಟಿಕೊಂಡಾದರೂ ನಡದೇ ನಡೆದಳು. ನೆಲದಲ್ಲಿ ಹಚ್ಚ ಹಸುರಿನ ಹುಲ್ಲಿನ ನೆಲ ಹಾಸು, ಅಕ್ಕ ಪಕ್ಕ ನೆರಳನ್ನು ನೀಡುವ ಮರಗಳು, ಹಿತವಾದ ವಾತಾವರಣ.

"ಇಲ್ಲಿ ಕೂತ್ಕೋಬಹ್ದು. ಆರಾಮಾಗಿ ಕಾಲು ನೀಡಿಕೊಳ್ಳಿ. ಈಗ ಟೇಪ್‌ರೆಕಾರ್ಡರ್ ಹಚ್ಚಿಕೊಳ್ಳಿ, ಈಗಿನ ಖುಷಿಯೇ ಬೇರೆ ಇರುತ್ತೆ" ಎರಡು

ಕೈಗಳನ್ನು ಬೆಸೆದು ತಲೆಯ ಕೆಳಗಿಟ್ಟುಕೊಂಡು ಅಂಗಾತಾಗಿ ಮಲಗಿ ಬಿಟ್ಟ.

ಅತ್ತಿತ್ತ ನೋಡಿ ಆರಾಮಾಗಿ ಕಾಲು ನೀಡಿಕೊಂಡಳು. ತಣ್ಣಗೆ ಬೀಸುತ್ತಿದ್ದ ಗಾಳಿ ಎಷ್ಟು ಹಿತವಾಗಿತ್ತೆಂದರೇ, ಜೀವನ ಪೂರ್ತ ಇಲ್ಲೇ ಇದ್ದು ಬಿಡಬೇಕೆನಿಸಿದ್ದು ಅತಿಶಯವಲ್ಲ, ಆ ಪರಿಸರ ಹಾಗಿತ್ತು.

"ಒಂದ್ಮಾತು ಕೇಳ್ಲಾ? ನಿಮಗ್ಯಾಕೆ ಆ ಬಂಗ್ಲೆಯ ಬಗ್ಗೆ ಕುತೂಹಲ?" ಕಣ್ಣು ಮುಚ್ಚಿಯೇ ಪ್ರಶ್ನಿಸಿದ. ಅವಳು ಕೂಡ ಸ್ಪಷ್ಟವಾಗಿ ಉತ್ತರಿಸಲಾರಳು. ಪಾಲಿಷ್ ಮಾಡಿದ ಉಗುರುಗಳನ್ನೆ ನೋಡುತ್ತಿದ್ದವಳು, "ಖಂಡಿತ ಗೊತ್ತಿಲ್ಲ, ಏನೋ ವಿಪರೀತವಾದ ಆಕರ್ಷಣೆ. ನೋಡಲೇಬೇಕೆಂಬ ಹಟ ಮನಸ್ಸಿನಲ್ಲಿ ಮೂಡಿತು. ನಿಮ್ಮಗಳ್ನ ಕೂಡ ಅಪಾಯಕ್ಕೆ ಸಿಕ್ಕಿಸಿಬಿಟ್ಟೆ" ಪಶ್ಚಾತಾಪವಿತ್ತು ಅವಳ ದನಿಯಲ್ಲಿ.

ತಟ್ಟನೆ ಕಣ್ಣು ತೆರೆದು ಅವಳತ್ತ ತಿರುಗಿ "ಎಷ್ಟು ಸುಲಭವಾಗಿ ಹೇಳ್ಬಿಟ್ರಿ. ನಿಮ್ಗೇನೋ ಪರ್ವಾಗಿಲ್ಲ, ನಂಗೇನಾದ್ರೂ ಆಗಿದ್ರೆ... ನಮ್ಮಮ್ಮ ಎದೆಯೊಡೆದು ಸಾಯ್ತಾ ಇದ್ಲು. ಶಬರಿಯಮ್ಮ ಇಲ್ದ ಮನೆ ಸ್ಥಿತಿಯನ್ನ ನೆನಸ್ಕೊಳ್ಳಿ, ಬರೀ ನಮ್ಮ ಅತ್ತಿಗೆಯರು ಇರೋ ಮನೆನ ಕಲ್ಪಿಸಿಕೊಳ್ಳೋದೇ ಕಷ್ಟ". ಮುಚ್ಚು ಮರೆ ಇಲ್ಲದೆ ಫ್ರಾಂಕಾಗಿ ಹೇಳಿದ. ಅದು ಅವನ ನೈಜ ಸ್ವಭಾವವೇನೋ!.

ಭರ್ಜಿಯಂತೆ ಇರಿಯಿತು ಅವನ ಮಾತು "ನಂಗೆ ಯಾರಿಲ್ಲ, ಅದ್ನ ಎಷ್ಟು ಸಲ ಹೇಳ್ತೀರಾ! ಬೇರೆಯವ್ರ ಮನಸ್ಸಿಗೆ ನೋವಾಗುತ್ತೆ ಅನ್ನೋ ಸರಳವಾದ ಅರಿವು ಕೂಡ ನಿಮಗಿಲ್ಲ" ಎಂದಳು ತಕ್ಷಣ.

ಎದ್ದು ಕೂತವನು ಅವಳ ಮುಖ ನೋಡಿ ಪಶ್ಚಾತಾಪದ ದನಿಯಲ್ಲಿ "ಸಾರಿ, ಎಕ್ಸ್‌ಕ್ಯೂಜ್ ಮಿ ಅನ್ನೋದು ಕೂಡ ತಪ್ಪಾಗಿಬಿಡುತ್ತೆ. ನೀವು ಹೇಳ್ದ ಪಾಯಿಂಟ್ ಕರೆಕ್ಟ್, ಯಾಕೆ ನೋವು ಮಾಡ್ಕೋತೀರಾ" ಹೊಣೆಗಾರರಲ್ಲದ ಅಪರಾಧಕ್ಕೆ ಯಾಕೆ ಕೀಳರಿಮೆಪಟ್ಕೋತೀರಾ? ಹೆತ್ತವರು ರೂಪಿಸೋಕ್ಕಿಂತ ವಿಭಿನ್ನರಾಗಿ ಸ್ವತಂತ್ರವಾಗಿ ನಿಮ್ಗೆ ಇಷ್ಟ ಬಂದಂಗೆ ನಿಮ್ಮ ಜೀವನವನ್ನು ರೂಪಿಸ್ಕೋಬಹುದ್ದು. ಅದು ಕೂಡ ಒಂದು ರೀತಿಯಲ್ಲಿ ಛಾಲೆಂಜ್. ಹತ್ತಿರಕ್ಕೆ ಬಂದು ಸಂಕೋಚವಿಲ್ಲದೆ ಬೆರಳಿನಿಂದ ಕಣ್ಣೀರು ತೊಡೆದು "ನೀರೇನು ಅತ್ತರೂ ಅಳುಮುಂಜಿ ತರಹ ಕಾಣೋಲ್ಲ. ಅತ್ತಾಗ, ನಕ್ಕಾಗ, ಕೋಪಿಸಿಕೊಂಡಾಗ ಚೆನ್ನಾಗಿ ಕಾಣೋ ಹೆಣ್ಣೇ ಚೆಲುವೆ. ನೀವು ಆ ಪೈಕಿ ಬಿಡಿ" ಎಂದು ನಗುವಂತೆ ಮಾಡಿದ.

ಆಮೇಲೆ ಷರಟಿನ ಜೇಬಿನಿಂದ ಚಾಕಲೇಟ್ ತೆಗೆದು ಮುರಿದು

ಅವಳಿಗೊಂದು ಪೀಸ್ ಕೊಟ್ಟ "ತಗೊಂಡ್ ಬಾಯಿಗೆ ಹಾಕ್ಕೊಳ್ಳಿ, ಪರ್ಸ್.. ಹ್ಯಾಂಡ್ ಬ್ಯಾಗ್‌ಗೆ ಹಾಕ್ಬೇಡಿ" ಹೇಳಿದ.

"ನಾಟಕೀಯ, ವ್ಯಂಗವಲ್ಲದ ಗೋಪಾಲನ ಮಾತುಗಳು ಇಷ್ಟವಾಯಿತು." "ಎಷ್ಟು ಗಂಟೆಗೆ ಬರೋದು, ವಾಸಂತಿ, ಅಜ್ಜಿ?" ಕೇಳಿದಳು. "ಕತ್ತಲಾದ್ಮೇಲೇನೇ, ಅಪರೂಪಕ್ಕೆ ಹೋಗಿದ್ದಾರೆ. ಇಲ್ಲೇ ಬೆಳ್ದ ವಾಸಂತಿ ಮೇಲೆ ಅಕ್ಕರೆ ಇರೋಕೆ ಒಂದು ಕಾರಣ ಇದೆ. ಅತ್ತೆಯ ದತ್ತು ಮಗನೊಬ್ಬನಿದ್ದಾನೆ. ಅವ್ನಿಗೆ ಅರೆ ಹುಚ್ಚು ಅಂತ ಅವರಿವರು ಹೇಳ್ತಾರೆ. ಆದರೆ ಅದ್ನ ಅವ್ನ ಅಪ್ಪ, ಅಮ್ಮಂದಿರು ಒಪ್ಪೋಲ್ಲ. ನಮ್ಮ ವಾಸಂತಿ ಸ್ವಲ್ಪ ಜಾಣೆನೇ. ಹೇಗೋ ಸಮಾಳಿಸ್ಕೊಂಡ್ಹೋಗ್ತಾಳೇಂತ, ಅವ್ರ ಅಭಿಪ್ರಾಯ. ಅದು ಒಂದು ರೀತಿಯಲ್ಲಿ ಸರಿ" ಎಂದ ಕೊಳಲಿನ ಮೇಲು ಮೈ ಸವರುತ್ತ. ಸದಾ ಕೊಳಲು ಅವನ ಬಳಿಯಲ್ಲಿಯೇ ಇರುತ್ತಿತ್ತು.

"ನಂಗೆ ಅರ್ಥವಾಗ್ಲಿಲ್ಲ" ಎಂದಳು ಗಾಬರಿಯಾಗಿ.

"ಅರ್ಥ ಆಗ್ದೇ ಇರೊಂಥ ಕಗ್ಗಂಟ್ಟಾ? ಏನೇನು ಇಲ್ಲ. ಅವ್ನಿಗೆ ನಮ್ಮ ವಾಸಂತಿಯನ್ನು ಮದ್ವೆ ಮಾಡಿಕೊಳ್ಳೋ ಆಸೆ. ಅದಕ್ಕೆ ಇರಿಸ್ಕೊಂಡ್ ಸ್ವಲ್ಪ ಚೆನ್ನಾಗಿ ನೋಡಿ ಕಳುಸ್ತಾರೆ". ಸಹಜವಾಗಿ ಹೇಳಿದ.

"ನಿಮ್ಗೆಲ್ಲ ಒಪ್ಪಿಗೆ ಇದ್ಯಾ?" ಅವಳಿಗೆ ಆತಂಕ.

"ಇಲ್ಲಿ, ನನ್ನ ನಿಮ್ಮ ಒಪ್ಗೇ ಅಷ್ಟೊಂದು ಮುಖ್ಯವಲ್ಲ, ತಾಳಿಗೆ ಕೊರಳು ಒಡ್ಡೋಳು 'ಹ್ಞೂ' ಅಂದರೇ ಸಾಕು. ಮನೆಗೆ ತೀರಾ ಕಿರಿಯವನಾದ ನನ್ನ ಬಳಿಗೆ ಇಂಥ ವಿಷ್ಯಗಳು ಬರೋಲ್ಲ. ಹೈ ಕಮಾಂಡ್‌ನಲ್ಲಿ ತೀರ್ಮಾನವಾಗಿ ಜಾರಿ ಸ್ಥಿತಿಯಲ್ಲಿ ನನ್ನ ತಲುಪೋದು" ಸ್ಪಷ್ಟವಾಗಿ ವಿಷಯವನ್ನು ಅವಳ ಮುಂದಿಟ್ಟ. ಅರ್ಥವಾಗದವಳಂತೆ ಮಿಕಿ ಮಿಕಿ ನುಡಿದಳು. 'ಶಬರಿ ಅಜ್ಜಿಗೆ ನನ್ನ, ಗೋಪಾಲ ಮಾವನಿಗೆ ಮಾಡಿಕೊಳ್ಳುವ ಆಸೆ. ಅದ್ಕೆ ಮನೆಯವರೆಲ್ಲ ವಿರೋಧ' ವಾಸಂತಿ ಈ ಮಾತನ್ನ ಅವಳ ಕಿವಿಯ ಮೇಲೆ ಹಾಕಿದ್ದಳು. ಆದರೆ ವಿಷಯ ಬೇರೆ ಮಗ್ಗಲು ಹಿಡಿದಿತ್ತು.

ತದೇಕಚಿತ್ತಳಾಗಿ ಗೋಪಾಲನನ್ನ ದಿಟ್ಟಿಸಿದ್ದು ಅವನ ಅರಿವಿಗೆ ಬಂದಾಗ ನಕ್ಕುಬಿಟ್ಟ ಜೋರಾಗಿ "ಅದೇನು ಹಾಗೆ ನೋಡ್ತೀರಾ? ಚಾಕಲೇಟು ಕೈಯಲ್ಲಿದ್ರೆ ಕೆಡುತ್ತೆ. ಬಾಯಿಗೆ ಹಾಕ್ಕೊಳ್ಳಿ." ತನ್ನದನ್ನು ಬಾಯಿಗೆಸೆದುಕೊಂಡ. ಮಲ್ಲಿಗೆವಾಡೆ, ಇಲ್ಲಿನ ಜನರ ಕಷ್ಟ ಸುಖ, ಸಮಸ್ಯೆಗಳನ್ನು ಚಲನಚಿತ್ರದ ರೀಲುಗಳಂತೆ ಬಿಡಿಸಿಟ್ಟ ಅವಳ ಮುಂದೆ.

ಎಲ್ಲಿಯು ಕಹಿ ಇಲ್ಲ, ಹಾಗಲ ಕಾಯಿ ಕಹಿಗೂ ರುಚಿ ತೋರುವ ಜಾಣ.

ಗೋಪಾಲ ವಿಶಿಷ್ಟ ವ್ಯಕ್ತಿಯಾಗಿ ಕಂಡ.

"ನೀವು ಸ್ವಲ್ಪ ಹೊತ್ತು ಕೊಳಲು ನುಡಿಸಿ, ನಾನು ರಿಕಾರ್ಡ್ ಮಾಡ್ಕೋತೀನಿ. ಮಲ್ಲಿಗೆ ವಾಡೆಗೆ ಬಂದ ನೆನಪಾಗಿ ನನ್ಹತ್ರ ಇರುತ್ತೆ" ಹ್ಯಾಂಡ್ ಬ್ಯಾಗ್‌ನಲ್ಲಿದ್ದ ಖಾಲಿ ಕ್ಯಾಸೆಟ್‌ನ ತೆಗೆದು ತನ್ನ ಪುಟ್ಟ ಟೇಪ್ ರೆಕಾರ್ಡರ್‌ನೊಳಕ್ಕೆ ತುರುಕಿದಳು.

"ಸಾರಿ, ರೆಕಾರ್ಡಿಂಗ್ ಅಂದರೆ ನಂಗೆ ಅಂಜಿಕೆ, ದಯವಿಟ್ಟು ತೆಗ್ದು ಬಿಡಿ" ಎಂದಾಗ ಆಫ್ ಮಾಡಿ ಹತ್ತಿರ ಇಟ್ಟುಕೊಂಡಳು. ಆನ್ ಆಗಿದ್ದು ಮಾತ್ರ ಅವಳ ಗಮನಕ್ಕೆ ಬರಲಿಲ್ಲ. "ಬೇಡ ಬಿಡಿ, ಈಗ ನುಡ್ಸಿ, ನಾನು ಕೇಳ್ತೀನಿ" ವಿನಂತಿಸಿದಳು.

ಕೊಳಲನ್ನೆತ್ತಿಕೊಂಡ ಗೋಪಾಲ 'ನಿನ್ನೆ ನಿಮ್ಮತ್ತಿ ನೀವೇ ಗತಿ ನೀರಜದಳ ನಯನಾ' ಹೈಮವತಿ ರಾಗದಲ್ಲಿ ವಿಸ್ತಾರ ರಾಗಾಲಾಪನೆಯನ್ನು ಶ್ರುತಿಬದ್ಧ ವೇಣುವಾದನ ವಿದ್ವತ್ಪೂರ್ಣವಾಗಿ ನುಡಿಸಿದ್ದು ಅವಳನ್ನು ಸಂಗೀತ ಲೋಕಕ್ಕೆ ಒಯ್ದಿತು. ಆಮೇಲೆ ನುಡಿಸಿದ್ದೆಲ್ಲ ಜನಪದ, ಲಾವಣಿ - ವೇಳೆ ಸರಿದಿದ್ದೇ ಗೊತ್ತಾಗಲ್ಲಿಲ್ಲ.

"ಎಷ್ಟು ಅದ್ಭುತವಾಗಿ ನುಡಿಸ್ತೀರಾ!" ಸಂತೋಷದ ಉದ್ಗಾರ, ಗೋಪಾಲ ನಸುನಗೆ ಬೀರಿದ. "ನಂಗೆ ಶ್ರೋತೃಗಳ ಅಗತ್ಯವಿಲ್ಲ. ನನಗೋಸ್ಕರ ಊಟ ಮಾಡೋಲ್ವಾ, ಹಾಗೆನೇ ಕೊಳಲು ನುಡಿಸೋದು ಕೂಡ ನನಗೊಸ್ಕರವೇ" ಎಂದ ತುಂಬು ಪ್ರಾಮಾಣಿಕತೆಯ ಮಾತು.

ದಟ್ಟವಾದ ಮರಗಳಿಂದ ಸುಯ್ಯೆಂದು ಗಾಳಿ ಬೀಸಿ ಬಂದಾಗ ಸ್ಪರ್ಶದಿಂದಲೇ ಮಳೆಯ ಸೂಚನೆಯೆಂದು, ಅತ್ತಿತ್ತ ನೋಡಿ ಮೇಲಕ್ಕೆದ್ದ. "ಕಣ್ಮಣಿ ಹೊರಟುಬಿಡೋಣ. ಮಳೆ ಬರೋ ಸೂಚನೆ ಇರೋದ್ರಿಂದ ನೆಂದು ಮನೆ ಸೇರಬೇಕಾಗುತ್ತೆ. ಥಂಡಿ, ಶೀತ, ಕೆಮ್ಮು... ನಿಮ್ಮ ಪ್ರಯಾಣ ಮುಂದಕ್ಕೆ ಹೋಗ್ಬಹುದ್ದು" ಎಚ್ಚರಿಸಿದ. ಕಣ್ಮಣಿ ಟೇಪ್ ರಿಕಾರ್ಡರ್ ತಗೊಂಡ್ ತನ್ನ ಹ್ಯಾಂಡ್‌ಬ್ಯಾಗ್‌ಗೆ ಹಾಕಿದಳು. ಅದು ಆನ್‌ನಲ್ಲಿಯೇ ಇದ್ದುದ್ದರಿಂದ ಪೂರ್ತಿ ರೆಕಾರ್ಡ್ ಆಗಿತ್ತು.

ಆಸರೆ ಕೊಟ್ಟು ಎದ್ದು ನಿಲ್ಲಿಸಿದ. ಬಂದಾಗಿನ ಕಾಲಿನ ಭಾರ, ನೋವು ಇಪ್ಪತ್ತೈದರಷ್ಟಾದರೂ ಕಡಿಮೆಯಾಗಿದೆಯೆನಿಸಿತು. ಒಂದು ರೀತಿಯ ಹರ್ಷ, ಕುಣಿದಾಡುವಷ್ಟು ಸಂತೋಷ. ಅಲ್ಪ ಸ್ವಲ್ಪ ಊರಿ ಕುಂಟಿಕೊಂಡು ಮನೆ

ಸೇರಿದಾಗ ನಡುಮನೆಯಲ್ಲಿ ಪಗಡೆ ಹಾಸನ್ನು ಬಿಡಿಸಿಕೊಂಡು ಕೂತಿದ್ದರು ನಾಲ್ವರು. ಇವನನ್ನು ನೋಡಿದ ಕೂಡಲೇ ಮೇಲೆದ್ದು, ಒಬ್ಬರ ಹಿಂದೆ ಒಬ್ಬರು ನಡೆದು ಕೊನೆಯಲ್ಲಿ ಉಳಿದವಳು ಕಡೆಯವಳು.

"ಅರೇ, ನೀವು ಉಳ್ಕೊಂಡ್‌ಬಿಟ್ಟರಲ್ಲ" ಎಂದ ಚುಟುಕಾಗಿ.

"ಕಾಫೀ.. ತರ್ತೀನಿ" ಅವಳು ಒಳಗೆ ಹೋದಳು.

ಬಿಸಿ ಮಂಡಕ್ಕಿ ಕಾಫೀ ತಂದ ಸುನಂದ ಕೂತು "ನೀವೇ ಅದೃಷ್ಟವಂತರು. ನಮ್ಮ ಬದ್ಕು ನಾಲ್ಕು ಗೋಡೆಗಳ ಮಧ್ಯೆ. ನಂಗೂ ಹೊರ್ಗಡೆ ದುಡಿದು ಸಂಪಾದಿಸಿ, ಆ ಹಣದಲ್ಲೆ ಬೇಕು ಬೇಕಾದ್ದು ತಗೋಬೇಕೆಂಬ ಆಸೆ." ಏಕಾಏಕಿ ತನ್ನ ಮನಸ್ಸನ್ನು ಬಿಚ್ಚಿಟ್ಟಾಗ ವಿಸ್ಮಿತಳಾದಳು. ಅವಳ ಕಣ್ಣಂಚು ಒದ್ದೆಯಾಗಿರುವುದು ಅವಳ ಅರಿವಿಗೆ ಬಂತು.

ಅಷ್ಟರಲ್ಲಿ ಹಿತ್ತಲಿಗೆ ಮುಖ ತೊಳೆಯಲು ಹೋಗಿದ್ದ ಗೋಪಾಲ ಒದ್ದೆ ಮುಖವನ್ನೊತ್ತುತ್ತ ಬಂದ. "ನೋಡಿ, ಸುನಂದತ್ತಿಗೆ.. ಇದೊಂದು ಆರೋಗ್ಯಕರವಾದ ಲಕ್ಷಣ. ಮೂರ್ಹೊತ್ತು ಅಡಿಗೆ ಮನೆ, ಕೋಣೆ ಇಷ್ಟೆ ಅಲ್ಲ ಬದ್ಕು. ಸ್ವಲ್ಪ ಹೊರ್ಗಡೆ ಅಡ್ಡಾಡಿ ಬನ್ನಿ. ಬಂದ ಜನರೊಂದಿಗೆ ಮನ ಬಿಚ್ಚಿ ಮಾತಾಡಿ. ಎಷ್ಟೊಂದು ಚೆನ್ನಾಗಿರುತ್ತೆ. ಅಮ್ಮನ ಉತ್ಸಾಹ ನಿಮ್ಮಲ್ಲಿಲ್ಲಾಂದ್ರೆ.. ನಾನೇನ್ಹೇಳ್ಲಿ?" ಟವಲನ್ನ ಮುಂದಿನ ಮೊದಲ ನಡುಮನೆಯ ಕೋಲಿನ ಮೇಲೆ ಹರವಿ, ಮಂಡಕ್ಕಿ ಪ್ಲೇಟ್ ತೆಗೆದುಕೊಂಡ. ಬೇಗ ಬೇಗನೇ ಮುಗಿಸಿ ಎರಡು ಲೋಟ ಕಾಫಿ ಕುಡಿದು ಮೇಲೆದ್ದ. "ಕಣ್ಮಣಿ, ಮಳೆ ಬರೋಕೆ ಷುರುವಾಗಿದೆ. ಜಗಲಿಯ ಮೇಲೆ ಕೂತು ನೋಡಿ. ಮಲೆನಾಡಿನ ಮಳೆ ನೋಡೋಕೆ ಬೋ ಚೆಂದ ಅಂತಾರೆ. ನಾನು ಪುಟ್ಟ ಹುಡ್ಗನಾಗಿದ್ದಾಗ ಬಿಸಿಲಿನ ಹಾಗೇ ಪ್ರತಿ ದಿನ ಮಳೆ ಬರುತ್ತೆ ಅಂದ್ಕೊಂಡಿದ್ದೆ. ಅದೆಲ್ಲ ಸುಳ್ಳಾಗಿಹೋಯ್ತು. ಕಾಲು ಕೆಳಗೆ ಹರಿಯೋ ನೀರು, ಕೊಚ್ಚೆ, ತಲೆಯ ಮೇಲೆ ಸುರಿಯೋ ಮಳೆ. ಎಷ್ಟೋ ಸಲ ಮಳೆನ ಬಯ್ದುಕೊಂಡಿದ್ದುಂಟು. ಈಗ ಅದಕ್ಕಾಗಿ ಹಾತೊರಿಕೆ" ಒಂದು ದೀರ್ಘ ಭಾಷಣವನ್ನೇ ಕೊಟ್ಟ ಮೂಲೆಯಲ್ಲಿದ್ದ ಕೊಡೆ ತಗೊಂಡ.

ಗೋಪಾಲ ಅವರಿಬ್ಬರನ್ನು ಬಿಟ್ಟು ಹೊರಗೆ ಹೋದ. ಮನೆಯ ಹಿರಿಯ ಸೊಸೆ ರಾತ್ರಿಯ ಅಡಿಗೆಯನ್ನು ನೆನಪಿಸಿ ಕರೆದೊಯ್ದಳು ಸುನಂದಾನ. ಪ್ರಯಾಸವಾಗಿ ಎದ್ದ ಕಣ್ಮಣಿ ಮೊದಲ ಹೆಜ್ಜೆಯೂರುವಾಗ ಕಷ್ಟವೆನಿಸಿದರೂ,

ಸ್ವಲ್ಪ ಕುಂಟಿದಂತೆ ಜಗುಲಿಗೆ ಬಂದಳು.

ಮೇಲಿನ ಛಾವಣಿಯ ಸಪೋರ್ಟ್‌ಗೆ ನಿಲ್ಲಿಸಿದ್ದ ದೊಡ್ಡ ಕಂಬವನ್ನು ಒರಗಿ ನಿಂತಿದ್ದ ಗೋಪಾಲ ಎದೆಯ ಮೇಲೆ ಕೈಕಟ್ಟಿ ಮಳೆಯ ನರ್ತನವನ್ನು ನೋಡುತ್ತಿದ್ದ. ಇಂಥ ನೋಡುವಿಕೆ ಮಾತ್ರವಲ್ಲ, ಈಗೀಗ ಮಳೆಯಲ್ಲಿ ನೆನೆಯುವುದು ಕೂಡ ಅವನಿಗೆ ಇಷ್ಟ. ತೋಟದಲ್ಲೋ, ಗದ್ದೆಯ ಬಳಿಯಲ್ಲೋ ಒಂಟಿಯಾಗಿದ್ದರೆ ಇಂಥ ಮಳೆಯಲ್ಲು ಕೂಡ ಕೊಳಲು ನುಡಿಸುತ್ತಿದ್ದ ಆನಂದದಿಂದ. ಕೊಡೆ ತಮಾಷೆ ನೋಡುವಂತೆ ಗೋಡೆಗೊರಗಿ ನಿಂತಿತ್ತು.

ಎರಡು ಬದಿಯ ವಿಶಾಲವಾದ ಜಗುಲಿಗಳ ಮಧ್ಯೆ ಆರು ಮೆಟ್ಟಲುಗಳಿದ್ದವು. ಮನೆಯ ತಲೆ ಬಾಗಿಲಿಗೆ ಅಂಟಿಕೊಂಡು ಆ ಕಡೆ ಬದಿಗೊಂದು, ಈ ಕಡೆ ಬದಿಗೊಂದು ಕಂಬಗಳು ಮೇಲ್ಛಾವಣಿಗೆ ಇಳಿಜಾರಾಗಿ ಮಂಗಳೂರು ಹೆಂಚುಗಳನ್ನು ಹೊದ್ದಿಸಿದ್ದರು. ಬಹುಶಃ ದೊಡ್ಡದು, ಚಿಕ್ಕದು, ಕೆಲವು ವಿಶಾಲವಾದ ಮನೆಗಳು ಇದ್ದರೂ, ಇದೇ ವಿನ್ಯಾಸವನ್ನು ಹೊಂದಿದ್ದವು.

ಮೆಟ್ಟಲಿನ ಮೇಲೆ ಕಾಲನ್ನಿಟ್ಟು ಜಗುಲಿಯ ಮೇಲೆ ಕೂತ ಸದ್ದಿಗೆ ಅವಳತ್ತ ತಿರುಗಿದವನು "ಒಂದು ಛೇರ್ ತಂದು ಹಾಕ್ಲಾ?" ಕೇಳಿದಾಗ, ಅವಳಿಗೆ ಇದೇ ಹಿತವೆನಿಸಿದ್ದರಿಂದ "ಬೇಡ, ಆರಾಮಾಗಿದೆ. ಈಗ ಕಾಲು ನೋವು ಕೂಡ ಕಡಿಮೆ" ಎಂದಳು ಮಳೆಯತ್ತ ನೋಟವರಿಸುತ್ತ.

ಎದುರು ಜಗುಲಿಯ ಮೇಲೆ ಬಂದು ಕೂತವನು "ಕಣ್ಮಣಿ, ಒಂದ್ಮಾತು..... ನೀವು ಫಿಲಾಸಫರ್ ಅಂತ ಹೇಳ್ಕೊಂಡ್ರಿ. ಆ ಬಂಗ್ಲೆ ಬಗ್ಗೆ ಲೇಖನ ಬರೀತೀರಾ?" ಕೇಳಿದ ಮೃದುವಾಗಿ, ಬೇರೆಯವರ ಸ್ವತಂತ್ರ, ಸೃಜನಶೀಲತೆಯ ಬಗ್ಗೆ ಅವನಿಗೆ ಗೌರವ ಇತ್ತು. ಇಲ್ಲಿನ ಸ್ಥಿತಿ ಬೇರೆ ಇತ್ತು.

"ಹಾ.." ಎಂದಳು. ಅಂಥ ಉದ್ದೇಶ ಅವಳಿಗಿತ್ತು.

ತುಟಿ ಕಚ್ಚಿದ. ಮಳೆಯತ್ತ ನೋಡಿದ. ಎದ್ದು ಓಡಾಡಿದ. ಮತ್ತೆ ಬಂದು ಅವಳ ಎದುರಿನಲ್ಲಿಯೇ ಕೂತ "ಆ ಬಂಗ್ಲೆ ಯಾರ್ಗೂ ಶುಭವನ್ನ ತಂದಿಲ್ಲ, ಅಂಥದ್ನ ನಾನು ನಂಬ್ತೀನಿ, ನಂಬೋಲ್ಲ ಅನ್ನೋದು ಮುಖ್ಯವಲ್ಲ. ಯಾರ್ಗೂ ಒಳ್ಳೆದಾಗಿಲ್ಲಾಂತ ಅಪ್ಪಯ್ಯ ಹೇಳ್ತಾರೆ. ಒಳ್ಳೆದು, ಕೆಟ್ಟದು ಅನ್ನೋ ತರ್ಕ ತುಂಬ ಕಷ್ಟ. ಅವೆಲ್ಲ ಇರ್ಲೀ, ಒಂದು ದೃಷ್ಟಿಯಲ್ಲಿ ನಾವು ಬಂಗ್ಲೆಯಿಂದ

ಉಳ್ದುಕೊಂಡು ಹೊರ್ಗ ಬಂದಿದ್ದೇ ಒಂದು ಪವಾಡ. ಭೂತ, ಪ್ರೇತಗಳು ಅಲ್ಲಿ ವಾಸವಾಗಿದೆಯೆಂದೇ ಕೆಟ್ಟ ಜನ ಅಲ್ಲಿ ಸುಳಿದಿರಲಿಲ್ಲ. ಅವ್ರು ಕಾನೂನು, ದೇವರು, ಮನುಷ್ಯರಿಗೆ ಹೆದರದೇ ಇದ್ದರೂ. ಕ್ಷುದ್ರ ಶಕ್ತಿಗಳಿಗೆ ಹೆದರ್ತಾರೆ. ಈಗ ನಿಮ್ಮಂಥ ಹುಡ್ಗಿಯೇ ಹೊರ್ಗ ಹೋಗಿ ಫೋಟೋ ತೆಗೆದು ಲೇಖನ ಬರೆದಳೂಂದ್ರೆ.. ಅವ್ರಿಗೆಲ್ಲ ಧೈರ್ಯ ಬರುತ್ತೆ. ಅಥ್ವಾ ನಿಮ್ಮ ಹಿಂದೆ ಬೀಳ್ತಾರೆ. ಇದ್ಕೆಲ್ಲ ಅಂಥ ದೊಡ್ಡ ಕಾರಣಗಳೇನು ಬೇಕಿಲ್ಲ. ಆಮೇಲೆ ಆ ಬಂಗ್ಲೆಯಲ್ಲಿ ನಡೆಯಬಾರದ್ದು ನಡೆಯುತ್ತೆ. ನಿಶ್ಚಿಂತೆಯಿಂದ ಹೆಣ್ಣು ಮಕ್ಳು ಒಂಟೊಂಟಿಯಾಗಿ ಓಡಾಡ್ತಾರೆ, ಇಲ್ಲೆಲ್ಲ. ಒಬ್ರೋ... ಇಬ್ರೋ.. ನಾಪತ್ತೆಯಾದ್ರೆ.... ಆ ಓಡಾಟಗಳೆಲ್ಲ ಬಂದ್ ಆಗುತ್ತೆ. ಇಷ್ಟಕ್ಕೆಲ್ಲ ನಿಮ್ಮ ಲೇಖನ ಕಾರಣವಾಗ್ಬಾರ್ದು. ಯೋಚ್ಸಿ, ನಿರ್ಧಾರ ತಗೊಳ್ಳಿ" ಬಿಡಿಸಿ ಹೇಳಿದ. ವಾಡೆ ಕಡೆ ತಲೆ ಹಾಕಬೇಡ ಅವನ ಅಜ್ಜಿ ಹೇಳುತ್ತಿದ್ದರು.

"ಅಂದರೇ, ಆ ಬಂಗ್ಲೆ ಕತ್ತಲೆಯ ಕೂಪದಲ್ಲಿ ಬೀಳಬೇಕಾ?"

ಅವಳ ಪ್ರಶ್ನೆಗೆ ಅವನ ಕಣ್ಣುಗಳು ಅಗಲವಾದವು. "ಅದ್ರಿಂದ ಯಾರ್ಗೂ ನಷ್ಟವಿಲ್ಲ. ಅತ್ಯಂತ ಈ ಪ್ರಶಾಂತವಾದ ಸ್ಥಳದಲ್ಲಿ ಏನೇನೋ ಆಗಿ ಪ್ರಕೃತಿಗೆ ಮಾರಕವಾಗುವುದು ಬೇಡ. ನೋಡಿದ ನೆನಪುಗಳನ್ನ ನಿಮ್ಮಲ್ಲೇ ಉಳ್ಸಿಕೊಳ್ಳಿ. ಅವೆಲ್ಲ ಬರೀ ನೆನಪುಗಳಾಗ್ಲಿ" ಎಂದ ಪ್ರಶಾಂತವಾಗಿ.

ಮೌನವಹಿಸಿದಳು ಕಣ್ಮಣಿ. ಲೇಖನ ಬರೆಯಬೇಕನ್ನೋ ಅಪೇಕ್ಷೆಗಿಂತ ಯಾವುದೋ ಒಂದು ಅದ್ಭುತ ಶಕ್ತಿಯಿಂದ ಆಕರ್ಷಿತಳಾಗಿದ್ದಳು, ಬಂಗ್ಲೆಯ ಬಗ್ಗೆ. ಅದೇನೆಂದು ಸ್ಪಷ್ಟವಾಗಿ ಹೇಳಲಾರದ ಸ್ಥಿತಿ.

"ಯೋಚಿಸ್ತೀರಲ್ಲ!", ಎಂದ ಕಣ್ಣುಗಳನ್ನು ಕಿರಿದುಗೊಳಿಸಿ ನಸುನಗು ಚೆಲ್ಲುತ್ತ. 'ಖಂಡಿತ' ಎನ್ನುವಂತೆ ತಲೆದೂಗಿದಳು. ಮಳೆ 'ಧೋ' ಎಂದು ಸುರಿಯುತ್ತಲೇ ಇತ್ತು ಪ್ರವಾಹದಂತೆ. ಅಷ್ಟು ದಟ್ಟವಾಗಿ ಸುರಿಯುವ ಮಳೆ ನೋಡಿಯೇ ಇಲ್ಲವೆನ್ನುವಂತೆ ನೋಡುವ, ವಿಸ್ಮಿತಳಾಗಿ ಕಣ್ಣುಗಳಲ್ಲಿ ಅನಂತ ಪ್ರಶ್ನೆಗಳ ಸಮೂಹ. ನಿಮಿಷ ನಿಮಿಷಕ್ಕೂ ಜಾಸ್ತಿಯಾಗುತ್ತಿದ್ದ ಪ್ರವಾಹ ಪ್ರಕೃತಿಯ ಅತ್ಯಂತ ರಮ್ಯ ಚಮತ್ಕಾರಗಳಲ್ಲಿ ಒಂದೆನಿಸಿತು.

"ನೀವು ಕೊಳಲು ಕಲಿತಿದ್ದು ಹೇಗೆ?" ಕೇಳಿದಳು.

"ಶಾಸ್ತ್ರೋಕ್ತವಾಗಿ ಕಲಿತಿದ್ದೇನಲ್ಲ. ನಂಗೆ ಶಾಲೆಗಿಂತ ಹುಡುಗರನ್ನ ಕಟ್ಟಿಕೊಂಡು ಅಲೆದಾಡೋದು, ಈಜೋದು, ಮರ ಹತ್ತೋದು ಆ ಬಗ್ಗೆನೇ ಆಸಕ್ತಿ. ನಮ್ಮ ತಂಡದಲ್ಲಿ ರಾಮೀಂತ ಒಬ್ಬ ಇದ್ದ. ಅವ್ನ ತಾತ ತುಂಬ

ಚೆನ್ನಾಗಿ ಕೊಳಲು ನುಡಿಸೋರು. ಶಾಲೆಗೆ ಚಕ್ಕರ್ ಹಾಕಿ ಅಲ್ಲಿಗೆ ಹೋಗ್ತಾ ಇದ್ದೆ. ಅವ್ರ ಬಳಿ ಕಲಿತಿದ್ದು ನನ್ನ ಸಂಗಾತಿಯಾಯ್ತು. ಎಲ್ಲೋ ಒಂದ್ಕಡೆ ಏಕಾಂತವಾಗಿ ಕೂತು ಕೊಳಲು ನುಡಿಸ್ಕೋತೀನಿ. ನಾನು ಶೋತೃಗಳಿಗೆ ನುಡಿಸುವಂಥ ಕಲಾವಿದನಲ್ಲ" ಎಂದ ಭಾವುಕನಾಗಿ. ಯಾವಾಗಲೂ ಸ್ವಾಭಾವಿಕವಾಗಿ ಮಾತಾಡುವ ಗೋಪಾಲ ಭಾವುಕನಾಗಿದ್ದು ಯಾಕೆ? ಪ್ರಶ್ನೆ ಅವಳಲ್ಲಿಯೇ ಉಳಿದುಹೋಯಿತು.

ತಟಕ್ಕನೆ ಮೇಲೆದ್ದವನು "ಆ ಬಂಗ್ಲೆಯಲ್ಲಿ ನಿಮ್ಗೆ ಒಂದು ಕಪ್ಪಗಿನ ಶಿಲೆ ಸಿಕ್ಕಿತಲ್ಲ. ಬಹುಶಃ ಅದು ಸಾಲಿಗ್ರಾಮ ಇರಬಹ್ದು. ಅದನ್ನೊಮ್ಮೆ ಅಪ್ಪಯ್ಯನಿಗೆ ತೋರ್ಸಿ, ನಮ್ಮ ದೇವರ ಮನೆಯಲ್ಲಿ ಕೂಡ ಸಾಲಿಗ್ರಾಮಗಳು ಇವೆ. ಅವರೊಬ್ರೇ ಅಭಿಷೇಕ ಪೂಜೆ ಎಲ್ಲಾ ಮಾಡೋರು. ಕೆಲವು ನೀತಿ, ನಿಯಮಗಳು ಇವೆ. ನಂಬೋದು ಬಿಡೋದು ಆಮೇಲಿನದು. ಏನೇ, ಆದರೂ ನಮ್ಮ ಊರಿಗೆ ಬಂದ ನಿಮ್ಗೆ ಯಾವ್ದೇ ರೀತಿಯಲ್ಲಿ ಕೆಡಕಾಗ್ಬಾರ್ದು" ಒಳಗೆ ಹೋದ.

ಬಂಗ್ಲೆಯ ವಿಲಕ್ಷಣದ ಬಗ್ಗೆ ಯೋಚಿಸುತ್ತಿದ್ದ ಅವಳು ಸಿಕ್ಕ ಪುಟ್ಟ ಕರಿಯ ಕಲ್ಲನ್ನು ಮರೆತಿರಲಿಲ್ಲ. ಮಳೆ ಕ್ರಮೇಣ ವಿರಳವಾದರೂ, ಒಂದೊಂದೇ ದಪ್ಪ ದಪ್ಪ ಹನಿಗಳು ಎರಚಿದಂತೆ ಬೀಳುವುದರ ಜೊತೆಗೆ ಮೋಡಗಳ ಮರೆಯಿಂದ ಸೂರ್ಯ ಇಣಕಿ ಸಸ್ಯರಾಶಿಯು ಜೊತೆಗೆ ಚೆಲ್ಲಾಟವಾಡತೊಡಗಿದ್ದು ಅವಿಸ್ಮರಣೀಯವಾಗಿತ್ತು. ಆ ಚೆಲ್ಲಾಟದೊಂದಿಗೆ ಸೂರ್ಯ ನಿರ್ಗಮಿಸತೊಡಗಿದಾಗ ವಾತಾವರಣ ಪೂರ್ತಿ ಮಂಕಾಯಿತು. ಆ ವೇಳೆಗೆ ಛತ್ರಿಗಳನ್ನು ಹಿಡಿದು ನೆನೆದು ತೊಪ್ಪೆಯಾದ ಶಬರಿ, ವಾಸಂತಿ, ಅಪ್ಪಯ್ಯ ಬಂದರು. ಇಂಥ ಓಡಾಟ ಅವರಿಗೆ ಹೊಸದಲ್ಲ. ಬಿಸಿಲಿಗಿಂತ ಹೆಚ್ಚು ಮಳೆಯೇ ಅವರ ಒಡನಾಡಿಯಾಗಿತ್ತು.

"ಕಾಲು ನೋವು ಹೇಗಿದೆ?" ವಾಸಂತಿ ಕೊಡೆ ಮಡಚಿ ಕಂಬಕ್ಕೆ ಒರಗಿಸುತ್ತ ಕೇಳಿದಳು. ನೆಂದ ರೆಟ್ಟೆಗಳನ್ನ ಕೊಡವುತ್ತ "ಕಡ್ಮೇ ಆಗಿದೆ. ಮಳೆಯಲ್ಲಿ ನೆಂದೇ ಬಂದಿದ್ದೀರಲ್ಲ. ಸ್ವಲ್ಪ ನಿಲ್ಲೋವರ್ಗೂ ನಿಧಾನಿಸ್ಬೇಕಿತ್ತು". ಎಂದಳು ಕಣ್ಮಣಿ. ಶಬರಿ ಮುಖದ ಮೇಲೆ ನಗು.

"ಇದು ಎಂಥ ಮಳೆ! ಇದೇನು.. ಮಾಡೀತು? ಯಾಪಾಟಿ ಮಳೆಗಳಲ್ಲಿ ಓಡಾಡಿದ್ದೀವಿ. ಈಚೆಗೆ ಮಳೆನೇ ಕಡ್ಮೆಯಾಗಿಹೋಗಿದೆ" ನೊಂದವರಂತೆ ನುಡಿದ ಶಬರಿ, ಅವಳ ಕಾಲಿನ ಬಳಿ ಬಗ್ಗಿ ಮುಟ್ಟಿ ನೋಡಿ "ನೋವು

ಕೊಂಚ ಕಮ್ಮಿಯಾಗಿದೆಯೆನಿಸುತ್ತೆ. ಇವಹ್ನತ್ರ ಮಂತ್ರ ಹಾಕಿಸೋಕೆ... ದೂರದ ಊರುಗಳಿಂದ ಕೂಡ ಬರ್ತಾರೆ. ಅವ್ನ ಕೈ ಗುಣ ಬಹಳ ಒಳ್ಳೇದು" ಮಗನ ಬಗ್ಗೆ ಮೆಚ್ಚಿಗೆಯ ಮಾತಾಡಿದರು. ಹೆತ್ತ ತಾಯಂದಿರಿಗೆ ತಮ್ಮ ಮಕ್ಕಳ ಬಗ್ಗೆ, ಅವರ ಗುಣಗಳ ಬಗ್ಗೆ, ಉನ್ನತಿಯ ವಿಷಯವಾಗಿ ಎಷ್ಟೊಂದು ಅಭಿಮಾನ. ತನಗೂ ತಾಯಿ ಇದ್ದಿದ್ದರೇ, ಬರೀ 'ರೆ' ಪ್ರಪಂಚದ ಬದುಕೇ. ಬಹುಶಃ ತನಗೇ ಜನ್ಮ ಕೊಟ್ಟವರು ಬದುಕಿರಬಹುದು. ಅದು ಕೂಡ ಅಸ್ಪಷ್ಟ.

ತನ್ನನ್ನೇ ದೃಷ್ಟಿಸಿ ನೋಡುತ್ತಿದ ಕಣ್ಮಣಿಯನ್ನು ನೋಡಿ ಶಬರಿ ನಕ್ಕರು. "ನೀನು ನಗ್ತೀಯಾ! ಅವ್ನ ಮೇಲೆ ವಿಪರೀತ ಪ್ರೀತೀಂತ.... ಮನೆಯವರೆಲ್ಲ ಆಡಿಕೋತಾರೆ. ಅರ್ಥವಾಗ್ದು. ನಿಷ್ಠೂರವಾದರೂ ಸತ್ಯವನ್ನು ನುಡಿಯುವವನು ಅವನೊಬ್ನೇ". ಮಗನಲ್ಲಿನ ಬಿಚ್ಚು ಮನಸ್ಸನ್ನು ಹೊಗಳಿಕೊಂಡರು ಅವಳು ಮಾತಾಡಲಿಲ್ಲ.

ವಾಸಂತಿ ಬಟ್ಟೆ ಬದಲಾಯಿಸಿಕೊಂಡು ಬಂದು ಅವಳ ಪಕ್ಕ ಕೂತಳು. ಸ್ವಲ್ಪ ವ್ಯಥಿತಳಾಗಿದ್ದಳು, ಅಲ್ಲಿಗೆ ಹೋಗಿದ್ದು ತನ್ನದೇ ತಪ್ಪು, ಒಳಗೊಳಗೆ ಗೊಣಗಿದ್ದಷ್ಟೆ.

"ಯಾಕೆ ಒಂದು ತರಹ ಇದ್ದೀ? ದೂರದ ಅತ್ತೆಯ ಟ್ರೀಟ್‌ಮೆಂಟ್ ಅಪರೂಪದ ಸೊಸೆಗೆ ಜಾಸ್ತಿ ಆಗಿರಬೇಕು". ಛೇಡಿಸಿದಳು ಮೃದುವಾಗಿ ಕಣ್ಮಣಿ, ಅತ್ತಿಂದಿತ್ತ ನೋಡಿದ ವಾಸಂತಿ "ನಿನ್ನ ಬದ್ಲು ನನ್ನ ಕಾಲು ಉಳುಕಬೇಕಿತ್ತು. ಎಲ್ಲಾ ಅವಕಾಶವಾದಿಗಳು. ಮಗನಿಗೆ ಒಬ್ಬ ಹೆಂಡ್ತಿ ಬೇಕೂಂತ ನನ್ನ ಬಲಿ ಕೊಡೋಕೆ ತಯಾರಾಗಿದ್ದಾರೆ. ನನ್ನ ಅನ್ನ ನಾನು ದುಡೀತಾ ಇರೋದ್ರಿಂದ... ಯಾರ್ದೂ ಸೊಪ್ಪು ಹಾಕ್ಬೇಕಿಲ್ಲ" ಖಾರವಾಗಿ ಅಂದು ಕಣ್ಣೊರೆಸಿಕೊಂಡಳು.

ಎರಡು ಸಲ ಮನೆಯ ಸೊಸೆಯರು ಬಂದು ಇಣುಕಿ ಹೋಗಿದ್ದರಿಂದ ತುಟಿ ಎರಡು ಮಾಡಲಿಲ್ಲ ಕಣ್ಮಣಿ. ಇಲ್ಲಿ ವಾಸಂತಿಯ ಬಗ್ಗೆ ಸಾಕಿದ ಮನೆಯ ಹಿರಿಯರಿಗೆ ಒಂದಿಷ್ಟು ಅಕ್ಕರೆ ಇರಬಹುದಷ್ಟೆ, ಮಿಕ್ಕವರು ಇವಳನ್ನ ಮನೆಯವರಾಗಿ ನೋಡುತ್ತಿಲ್ಲವೆನ್ನುವುದು ಅವಳಿಗೆ ಅರಿವಾಗಿತ್ತು.

ರಾತ್ರಿಯ ಊಟವಂತು ಭರ್ಜರಿಯಲ್ಲದಿದ್ದರೂ ತುಂಬ ಹಿತವಾಗಿತ್ತು. ಸ್ವಲ್ಪ ಹುಳಿಯ ರುಚಿ ಇದ್ದ ಸೌತೆಕಾಯಿ ತಂಬೂಳಿ ಅವಳಿಗೆ ತುಂಬ ಇಷ್ಟವಾಯಿತು.

ಕೋಣೆಗೆ ಬಂದ ಕೂಡಲೇ ವಾಸಂತಿ ಹೊರಗಿದ್ದ ತನ್ನ ಸೀರೆಗಳನ್ನು ಸೂಟುಕೇಸ್‌ಗೆ ಹಾಕಿ "ನಿಂಗೇನು, ತುಂಬ ನೋವ್ಗೂಂತ ಅನ್ನಿಸದಿದ್ದರೇ.. ಬೆಳಿಗ್ಗೆ ಮೊದಲನೇ ಬಸ್ಸಿಗೆ ಹೊರಟುಬಿಡೋಣ. ಮತ್ತೆಂದು ಬರೋದು ನೋಡೋಣ" ಗೊಣಗುವ ವೇಳೆಗೆ ಒಳಗೆ ಬಂದ ಗೋಪಾಲ "ಅಷ್ಟು ಯಾಕೆ ಕೋಪ, ವಾಸಂತಿ? ದುದ್ದನ ಜೊತೆ ಮದ್ವೆ ವಿಷ್ಯ ತಾನೇ? ಕತ್ತಿಡಿದು ತಾಳಿ ಕಟ್ಟಿಸೋಕ್ಕಂತು ಆಗೋಲ್ಲ. ಇಷ್ಟವಿಲ್ಲಾಂದ್ರೆ.. ಬೇಡಾನ್ನು" ಹೇಳುತಲೇ ಬಾಳೆಕಾಯಿ ಉಪ್ಪೇರಿಯ ತಟ್ಟೆಯನ್ನು ಅವರುಗಳ ಮುಂದಿಟ್ಟು ತಾನೊಂದು ತಗೊಂಡು ಮೆಲ್ಲತೊಡಗಿದ ಶಾಂತವಾಗಿ. ವಾಸಂತಿಯ ದಪ್ಪಗಾದ ಮುಖ ತಕ್ಷಣವೇ ಮಾಮೂಲಿ ಸ್ಥಿತಿಗೆ ಮರಳಲಿಲ್ಲ. "ಅಮ್ಮ ತಾಯಿ.. ಶಾಂತವಾಗು! ಯಾಕೆ ಅಷ್ಟೊಂದು ಕೋಪ? ನಿನ್ನ ಪರ ನಾನು ಇದ್ದೇ ಇರ್ತೀನಿ. ಈಗ ಕಣ್ಮಣಿ ಕೂಡ ಇದ್ದಾರೆ. ಅಪ್ಪಯ್ಯನಿಗೂ ಅಮ್ಮನಿಗೂ ಕೂಡ ಇದು ಇಷ್ಟವಿಲ್ದ ವಿಷ್ಯ. ಅವ್ರ ಯೋಚ್ನೆ ಮತ್ತಷ್ಟು ಭಯಂಕರ. ಈ ಕೊಳಲಿನ ಗೋಪಾಲನಿಗೆ ನಿನ್ನ ಕಟ್ಟೋ ಪ್ಲಾನ್. ಇದ್ಕೇ ನನ್ನ ಸೇರ್ಸಿ ಮನೆಯವರೆಲ್ಲ ವಿರೋಧ. ನಾನು ಚಿಕ್ಕವ್ನು, ಅದರಿಂದ್ಲೇ ಎಲ್ಲರಿಗೂ ಹಕ್ಕು, ಅಧಿಕಾರ ಇರುತ್ತೆ. ನಿನ್ನ ಕಟ್ಟಿಕೊಳ್ಳೋದ್ರಿಂದ ವರದಕ್ಷಿಣೆ, ವರೋಪಚಾರವಿಲ್ಲ. ಜೊತೆಗೆ ಲಗ್ನದ ಖರ್ಚು ಕೂಡ ಇವ್ರೆ ಮಾಡ್ಬೇಕಾಗುತ್ತೆ. ಇದು ಬುದ್ಧಿವಂತಿಕೆಯ ಲಕ್ಷಣಾನಾ? ಖಂಡಿತ ಅಲ್ಲ, ಇದಂತು ಆಗೋಲ್ಲ. ಇನ್ನು ಆ ದುದ್ದನ ವಿಷ್ಯದಲ್ಲಿ ಪ್ರತಿಭಟಿಸು ಮತ್ತೆ ಬರೋವಾಗ ಮದ್ವೆ ಮಾಡ್ಕೊಂಡೇ.. ಬಂದ್ಬಿಡು" ಎಲ್ಲಾ ಸಮಸ್ಯೆಗಳನ್ನು ಒಟ್ಟಿಗೆ ಬಿಡಿಸಿಟ್ಟ. ವಾಸಂತಿಯ ಕಣ್ಣುಗಳಲ್ಲಿ ಕಂಬನಿ ಫಳಕ್ಕೆಂದಿತು. ಬಾಯಿಗೆ ಕೈ ಅಡ್ಡ ಇಟ್ಟು ಬಿಕ್ಕಿದಳು. 'ಉಸ್ಸ್' ಎಂದು ಮುಖ ತಿರುಗಿಸಿದ.

ಇನ್ನೆರಡು ಉಪ್ಪೇರಿಯನ್ನು ಗಬಗಬನೆ ಬಾಯಿಗೆ ಹಾಕ್ಕೊಂಡು ಕೂತಿದ್ದವನು ಎದ್ದು ತೋರು ಬೆರಳಿನಿಂದ ಅವನ ಗದ್ದವನ್ನಿಡಿದು ಮುಖವನ್ನು ಮೇಲೆತ್ತಿ "ಅಳೋಕೇನಾಯ್ತು! ನಿಂಗೆ ಅಷ್ಟಕ್ಕೂ ಮದ್ವೆ ಆಗೋ ಇಷ್ಟವಿಲ್ಲದಿದ್ರೆ ಮದರ್ ತೆರೆಸಾ ತರಹ ರೋಗಿಗಳನ್ನೂ, ಕಷ್ಟದಲ್ಲಿರುವವರ ಸೇವೇನೋ ಮಾಡ್ಕೊಂಡ್ ಇದ್ಬಿಡು. ಅದ್ಕೆ ನನ್ನ ಒಪ್ಪಿಗೆ ಇದೆ. ಬೇಗ ಕಣ್ಣಲ್ಲಿರೋ ನೀರು ಸುರಿಸ್ಬಿಡು. ಮತ್ತೇನಾದ್ರೂ ಎಡವಟ್ಟು ಇದೇಯಾಂತ ನೋಡ್ತೀನಿ" ಎಂದ ತಮಾಷೆಯಾಗಿ. ನಕ್ಕುಬಿಟ್ಟಳು. ಅಷ್ಟು ಅವನಿಗೂ ಸಾಕಿತ್ತು. ಉಪ್ಪೇರಿಯ ತಟ್ಟೆಯಿಂದ ಇನ್ನೆರಡು ತಗೊಂಡು "ಮುಗ್ಸಿ, ಆರಾಮಾಗಿ ಮಲ್ಗಿ ಬಿಡಿ. ಮೊದಲನೇ ಬಸ್ಸಿಗೇಂದ್ರೆ ಮಹಾನ್ ಕಿರಿಕಿರಿ.

ಮಧ್ಯಾಹ್ನ ಹೋದರೇ... ರಾತ್ರಿ ನಿಮ್ಮ ಹಾಸ್ಟಲ್ ಸೇರ್ಕೋಬಹ್ದು. ಗುಡ್‌ನೈಟ್... ಸ್ವೀಟ್ ಡ್ರೀಮ್.." ಎಂದು ಬಾಗಿಲು ಮುಚ್ಚಿಕೊಂಡು ಹೊರಗೆ ಹೋದವನು ಮತ್ತೆ ಇಣಕಿ "ಕನಸ್ಸಿನಲ್ಲಿ ದುದ್ದನಾಗ್ಲೀ, ನನ್ನನ್ನಾಗ್ಲೀ ಕಂಡು ಹೆದರ್ಕೋಬೇಡ. ನಾವೇನು ಅಂಥ ಅಪಾಯದ ವ್ಯಕ್ತಿಗಳಲ್ಲ. ಇನ್ನು ಕಣ್ಮಣಿ, ನಿಮ್ಮ ಕನಸ್ಸಿನಲ್ಲೆಲ್ಲ ವಾಡೆ.. ಬಂಗ್ಲೆನೇ ಇರುತ್ತೆ. ಅದೇ ಹಾವು ಮತ್ತೆ ಕನಸ್ಸಿನಲ್ಲಿ.. ಬಂದೀತು" ಹಾಸ್ಯ ಮಾಡಿ ಹೋದ.

ಮೊದಲು ಸುಮ್ಮನಿದ್ದರೂ ಚಳಿ, ಮಳೆಗೆ ಉಪ್ಪೇರಿಸುವಂತಿತ್ತು. ಇಬ್ಬರು ತಿಂದು ಮುಗಿಸಿ ಒಂದು ತಂಬಿಗೆ ನೀರು ಕುಡಿದರು. ಕಪ್ಪಗಿನ ಕಲ್ಲು, ವಾಡೆಯ ಭ್ರಮೆಯಲ್ಲಿದ್ದಳು ಕಣ್ಮಣಿ.

"ಮಧ್ಯಾಹ್ನದ ಬಸ್ಸಿಗೆ ಹೋಗೋದಾ?" ಕೇಳಿದಳು ಕಣ್ಮಣಿ ದಿಂಬಿನ ಮೇಲೆ ತಲೆ ಇಡುತ್ತ "ಹಾಗೇ ಮಾಡೋಣ, ಏನಾದ್ರೂ ಕೇಳಿದ್ರೆ.. ಧೈರ್ಯವಾಗಿಯೇ ಹೇಳ್ತೀನಿ. ನಾನೇನು ಇಲ್ಲಿರಬೇಕಿಲ್ಲ" ಕಹಿಯಾಡಿದಳು. ಸ್ವಲ್ಪ ಧೈರ್ಯ ಬಂದಿತು ಅವಳಿಗೆ.

ಮಲಗಿದ್ದ ಕಣ್ಮಣಿ ಅವಳ ತೋಳಿನ ಮೇಲೆ ಕೈ ಹಾಕಿ "ನಿಂಗೆ ಆ ಅತ್ತೆ ಮಗ ದುದ್ದ ಇಷ್ಟವಿಲ್ದೇ ಇರ್ಬಹ್ದು. ಆದರೆ ಗೋಪಾಲ ಇಷ್ಟಾಂತ ಕಾಣುತ್ತೆ" ಅಂದಿದ್ದೇ ತಡ ಮೇಲೆದ್ದ ವಾಸಂತಿ "ನೀನು ಹೇಗೆ ಊಹಿಸ್ದೇ? ಅವ್ನಿಗೆ ಕೊಳಲು ನುಡಿಸೋದ್ಬಿಟ್ಟು ಬೇರೆ ಗೊತ್ತಿಲ್ಲ. ತೋಟ, ಗದ್ದೆಯಲ್ಲಿ ಓಡಾಡ್ತಾನೆ ಅಷ್ಟೆ. ಒಂದಿಷ್ಟು ವ್ಯವಹಾರ ಅನ್ನೋದು ಗೊತ್ತಿಲ್ಲ. ಅವ್ನ ಕಟ್ಟಿಕೊಂಡರೇ, ನಾನೇ ಸಾಕಬೇಕು" ಕನಲಿ ನುಡಿದಳು.

ಗಾಬರಿಯಾದಳು ಕಣ್ಮಣಿ.

"ಸಾರಿ, ನಾನು ಅಂದಿದ್ದು ತಪ್ಪು. ಗೋಪಾಲ ನಿನ್ನ ಬಗ್ಗೆ ಕಾಳಜಿ ವಹಿಸೋದು ನೋಡಿ ಹಾಗೇ ಅಂದ್ಕೊಂಡೆ. ಬಹುಶಃ ಅವ್ನಿಗೆ ನೀನು ಇಷ್ಟವಾಗಿರ್ಬಹ್ದು" ಹೇಳಿದಳು ಸ್ಪಷ್ಟವಾಗಿ.

ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅತ್ತ ವಾಸಂತಿಯನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೆನಿಸಿತು. ಆ ಚಿಂತನೆಯಿಂದ ಹೊರ ಬರುವ ಮೊದಲೇ ಗುಡುಗಿದಳು.

"ಅವ್ನೆ ಬಾಯ್ಬಿಟ್ಟು ಹೇಳಿದ್ನಲ್ಲ, ನನ್ನನ್ನು ಸೇರ್ಸಿಕೊಂಡು ಅಪ್ಪ, ಅಮ್ಮನನ್ನು ಬಿಟ್ಟು ಯಾರ್ನ್ನೂ ನಿನ್ನ ಸೊಸೆಯಾಗಿ ತಂದುಕೊಳ್ಳೋಕೆ ಇಷ್ಟವಿಲ್ಲಾಂತ. ನಾನ್ಹೋಗಿ ಅವ್ನ ಕಾಲಿಗೆ ಬೀಳ್ತೀನಿಂತ ತಿಳ್ಕೊಂಡ."

ಅವಳ ಮಾತುಗಳಿಗೆ ಕಣ್ಮಣಿ ದನಿಯೆತ್ತದೇ ಮಗ್ಗುಲಾಗಿ ಮಲಗಿದಳು. ಏನಾದರೂ ಇಲ್ಲಿನ ವಿಷಯ ಹೇಳುವಾಗ ಗೋಪಾಲನ ವಿಷಯವನ್ನೆ ಹೆಚ್ಚು ಪ್ರಸ್ತಾಪಿಸುತ್ತಿದ್ದುದ್ದನ್ನು ಗಮನಿಸಿದ್ದಳು ಸೂಕ್ಷ್ಮವಾಗಿ.

ಇಡೀ ರಾತ್ರಿ ಮಳೆ ದೋ ಎಂದು ಸುರಿಯತೊಡಗಿದಾಗ ಇಬ್ಬರು ಹೋಗಿ ಪುಟ್ಟ ಕಿಟಕಿಯ ಬಳಿ ನಿಂತು ಮುಖವ ನೊಡ್ಡಿದರು ತಂಪಾದ ಗಾಳಿಗೆ. ತುಂತುರು ತುರುವ ಗಾಳಿ ಬರೀ ತಂಪನ್ನು ಮಾತ್ರವಲ್ಲ ಸಂಗೀತವನ್ನು ಹೊತ್ತು ತರುತ್ತದೆಯೆಂದು ಕೊಂಡರು.

"ವಾಸಂತಿ, ನಿನ್ನ ಮನಸ್ಸಿನಲ್ಲಿ ದ್ವಂದ್ವ ಇದೆ. ನಿಂಗೆ ಗೋಪಾಲ ಅಂದರೆ ಇಷ್ಟ" ಎಂದ ಕೂಡಲೇ ಸಿಡಿದಳು. "ಮತ್ತೆ ಆ ವಿಷ್ಯ ಬೇಡ. ನಂಗೂ ಒಳ್ಳೆ ಬದ್ಕು ಬೇಕು. ಅದ್ನ ಕಷ್ಟಪಟ್ಟಾದ್ರೂ ಪಡ್ಕೋತೀನಿ" ಉದ್ವೇಗವಿತ್ತು ವಾಸಂತಿಯ ದನಿಯಲ್ಲಿ. ಮತ್ತೆ ಏನು ಹೇಳಲ್ಲಿಲ್ಲ ಕಣ್ಮಣಿ.

ರಾತ್ರಿ ಬಹಳ ಹೊತ್ತಾದ ಮೇಲೆ ಮಲಗಿದ್ದರಿಂದ ಎದ್ದಿದ್ದು ಲೇಟಾಗಿಯೇ. ಇವರು ಸ್ನಾನ ತಿಂಡಿ ಮುಗಿಸಿ ಬರುವ ವೇಳೆಗೆ ಗೋಪಾಲ ಕೂತಿದ್ದ ತಂದೆಯ ಬಳಿ ಎದೆಯ ಮೇಲೆ ಕೈಕಟ್ಟಿ ಮಾತಾಡುತ್ತಿದ್ದ. ಕಣ್ಣಲ್ಲಿಯೇ ಆ ಕಪ್ಪು ಕಲ್ಲನ್ನು ತರುವಂತೆ ಸನ್ನೆ ಮಾಡಿದವನು. "ಅಪ್ಪಯ್ಯ, ನಮ್ಮ ಕಣ್ಮಣಿಗೆ ಒಂದು ಕಪ್ಪು ಗಂಡಗಿನ ಶಿಲೆ ಸಿಕ್ಕಿದೆ. ನನ್ನ ಪ್ರಕಾರ ಅದು ಸಾಲಿಗ್ರಾಮ ಇರಬಹುದ್ದು. ನೀವು ಒಂದಿಷ್ಟು ನೋಡ್ತೀರಾ" ಪ್ರಸ್ತಾಪಿಸಿದವನು ಕಣ್ಮಣಿ ಕೊಟ್ಟ ಕಪ್ಪಗಿನ ಶಿಲೆಯನ್ನು ಅಂಗೈಯಲ್ಲಿ ತಂದೆಯ ಮುಂದೆ ಹಿಡಿದ. ಕೈಗೆತ್ತಿಕೊಂಡವರ ಮುಖದಲ್ಲಿ ಭಕ್ತಿಭಾವ ಮೂಡಿತು. ನಾಲ್ಕು ಸಲ ತಿರುಗಿಸಿ ನೋಡಿದವರ ಕಣ್ಣುಗಳಲ್ಲಿ ದಿವ್ಯವಾದ ಬೆಳಕು, ಧನ್ಯತಾ ಭಾವ. ಕಣ್ಣೆಗೊತ್ತಿಕೊಂಡರು. "ಪವಿತ್ರವಾದ ವಿಷ್ಣು ಸಾಲಿಗ್ರಾಮ. ವಿಷ್ಣು ಸಹಜವಾಗಿ ಸದಾ ಸನ್ನಿಹಿತವಾಗಿರೋದು ಸಾಲಿಗ್ರಾಮ ಶಿಲೆಯಲ್ಲೆ. ಎಲ್ಲಿ .... ಸಿಕ್ತು?" ಪ್ರಶ್ನಿಸಿದರು. ತೀರಾ ಆಸ್ತಿಕ ವ್ಯಕ್ತಿ.

ಕಣ್ಮಣಿ, ವಾಸಂತಿ ಮತ್ತು ಗೋಪಾಲನ ಮುಖವನ್ನು ಬದಲಿಸಿ ಬದಲಿಸಿ ನೋಡಿದಳು ಗೊಂದಲದಿಂದ. ಸತ್ಯ ನುಡಿದು ಅನಾಹುತ ಮಾಡಿಕೊಳ್ಳುವುದು ಬೇಡವಾಗಿತ್ತು ಮನೆಯ ಮಗನಿಗೆ. ಆದರೂ ಒಂದಷ್ಟು ಸತ್ಯಕ್ಕೆ ಸನ್ನಿಹಿತವಾಗಿದ್ದನ್ನು ನುಡಿಯಬೇಕೆನಿಸಿತು.

"ಮೊನ್ನೆ ಅಡ್ಡಾಡೋವಾಗ, ಅದೇ ಬಂಗ್ಲೆ ಕಡೆ ಅಂದರೆ ಹೊರ ಭಾಗದಲ್ಲಿ ಹೋಗಿದ್ವಿ. ಆಗ ಕಣ್ಮಣಿಯ ಕಣ್ಣಿಗೆ ಬಿದ್ದಿದೆ, ಕುತೂಹಲದಿಂದ

ತಗೊಂಡಿದ್ದಾಳೆ" ಅರೆ ಸತ್ಯವನ್ನು ನುಡಿದ. ಗೋಪಾಲ.

ಅವರು ಸುಮ್ಮನಾದರು. ಇವರು ಬಂಗ್ಲೆ ಎಂದು ಹೆಸರಿಸುವ ಅದನ್ನು 'ವಾಡೆ' ಎಂದು ಕರೆಯುತ್ತಿದ್ದರು ಅವರ ಹಿರಿಯರು. ಹತ್ತಾರು ದಂತ ಕತೆಗಳು ಪ್ರಚಲಿತವಾಗಿದ್ದರೂ, ನಲ್ವತ್ತು ವರ್ಷದ ಹಿಂದೆ ಆ ವಾಡೆಯ ಕೊನೆಯ ಸಂತಾನ ಅತ್ಯಂತ ಭೀಭತ್ಸವಾಗಿ ಮರಣಿಸಿದ್ದರು. ಪೊಲೀಸ್, ಕೋರ್ಟು ಅಪರಾಧಿಗಳು, ಸಿಕ್ಕರು ಇಂಥ ಮಾತುಗಳು ಹರಡಿ ಹರಡಿ ಮಾಯವಾಗಿ ಕೊನೆಗೆ ವಿಷಯ ಹಳೆಯದಾಗಿ ಆಸಕ್ತಿ ಕಳೆದುಕೊಂಡಿತ್ತು. ಅದು ಕಣ್ಣಿಗೆ ಕಟ್ಟಿದಂತಿತ್ತು. ನಂತರ ಅದಕ್ಕೆ ಅಸ್ತಿತ್ವವೇ ಕೂಡಿಬರಲಿಲ್ಲ. ಅದು ಬಂಗ್ಲೆಯಲ್ಲ ರಾಜ ಮನೆತನದವರು ವಾಸಿಸುತ್ತಿದ್ದ ವಾಡೆ.

ತಂದೆಯಲ್ಲಿನ ಸಂಪ್ರದಾಯಬದ್ಧತೆ, ಪ್ರಾಮಾಣಿಕತೆಯನ್ನು ಬಲ್ಲ ಗೋಪಾಲ ಒಂದಿಷ್ಟು ಹೆದರಿದ. "ಅಪ್ಪಯ್ಯ, ಕಣ್ಮಣಿ ತಗೊಳ್ಳೋವಾಗ ನನ್ನ ಕೇಳಿದ್ಲು. ಅದೇನು ವಜ್ರ, ಬೆಳ್ಳಿ, ಬಂಗಾರ ಅಲ್ಲ, ತಗೊಳ್ಳಿ ಅಂದೆ. ಈಗ್ಲೂ ಬೇಕಾದ್ರೆ.. ಅಲ್ಲೇ ತಗೊಂಡ್ಹೋಗಿ ಹಾಕ್ಬರ್ತೀನಿ" ಎಂದ. ಅವರು ಬಹಳ ಬೇಗ ಮೌನವೇನು ಮುರಿಯಲಿಲ್ಲ. ಮತ್ತೆ ಮತ್ತೆ ಅಂಗೈಯಲ್ಲಿ ಹಿಡಿದ ಸಾಲಿಗ್ರಾಮ ನೋಡಿದರು.

"ವಿಷ್ಣು ಸಾಲಿಗ್ರಾಮ, ಈ ಶಿಲೆಗೆ ಪ್ರತಿಷ್ಠೆ, ಸ್ಥಾಪನೆ, ಆವಾಹನೆ - ಮುಂತಾದ ಸಂಸ್ಕಾರ ಕ್ರಮಗಳ ಅಗತ್ಯವಿರದು. ಮನುಷ್ಯ ನಿರ್ಮಿತಿ ಮೂರ್ತಿಗಳಿಗಾದರೆ ಈ ಕ್ರಮಗಳು ಅಗತ್ಯ. ಅವಿಲ್ಲದಿದ್ದರೇ ನಿರ್ಮಿತಿ ಮೂರ್ತಿಗಳು ಪೂಜಾ ಯೋಗ್ಯವಲ್ಲ. ಸಾಲಿಗ್ರಾಮ ಪೂಜೆಯಲ್ಲಿ ಅಭಿಷೇಕವೆ ಮುಖ್ಯ. ನೀರಿನಿಂದಲೋ ! ಹಾಲಿನಿಂದಲೋ ತೊಳೆದು ಅದನ್ನು ತೀರ್ಥರೂಪದಲ್ಲಿ ಸ್ವೀಕರಿಸಿದರೇ ದೇಹವನ್ನು, ಮನಸ್ಸನ್ನು ಶುದ್ಧಿಗೊಳಿಸುತ್ತದೆಯೆನ್ನುವ ನಂಬಿಕೆ" ವಿವರಿಸಿದರು.

ಕಣ್ಮಣಿ ಇದ್ದ ಅನಾಥಾಶ್ರಮದಲ್ಲಿ ಬೆಳಗಿನ ಪ್ರಾರ್ಥನೆ ಇತ್ತು. ಅದು ಬಿಟ್ಟರೇ ಮೂರ್ತಿ ಪೂಜೆ ಅಂಥದೇನು ಇರದು. ಈಗ ಅವಳು ಇದ್ದಿದ್ದು ವರ್ಕಿಂಗ್ ಉಮನ್ಸ್ ಹಾಸ್ಟಲ್‌ನಲ್ಲಿ. ಅಲ್ಲಿ ರೂಮು ಮೇಟ್ ವಾಸಂತಿ. ಒಂದು ದಿನ ಪತ್ರಿಕಾಲಯದಿಂದ ಹಿಂದಿರುಗುವಾಗ ಮುದ್ದಾದ ಒಂದು ಮಣ್ಣಿನ ಕೊಳಲು ಹಿಡಿದ ಕೃಷ್ಣನ ಮೂರ್ತಿಯನ್ನು ಕೊಂಡು ತಂದಿದ್ದಳು. ಅಂದಿನಿಂದ ದಿನವು ಬೆಳಿಗ್ಗೆ ಕೈ ಜೋಡಿಸಿ ಒಂದೆರಡು ನಿಮಿಷ ನಿಲ್ಲುವ ಪದ್ಧತಿಯನ್ನು ರೂಢಿಸಿಕೊಂಡಿದ್ದು ಕೂಡ ಪ್ರಯತ್ನ ಪೂರ್ವಕವಾಗಿಯೇ.

"ಅಜ್ಜಯ್ಯ, ಸಾಲಿಗ್ರಾಮನ ನೇಮದಿಂದ ಪೂಜೆ ಮಾಡ್ಬೇಕು. ತುಂಬ ಮಡಿ ಇರಬೇಕು. ಹೆಂಗಸರು ಪೂಜೆ ಮಾಡ್ಬಾರ್ದೂಂತಾರೆ. ಹೇಗೆ... ಸಾಧ್ಯ? ಇಲ್ಲೇ ಇಟ್ಕೊಳ್ಳಿ" ವಾಸಂತಿ ಹೇಳಿದಳು. ಕಣ್ಮಣಿ ಸಮ್ಮತಿಯೆನ್ನುವಂತೆ ಮೌನವಹಿಸಿದಾಗ, ಅವರೇ. "ಏನು ಪರ್ವಾಗಿಲ್ಲ, ಇದ್ನ ಕಣ್ಮಣಿಯೇ ಇಟ್ಟುಕೊಳ್ಳಲಿ ಕೆಲವೆಲ್ಲ ಬರೀ ಮೂಢ ನಂಬಿಕೆಗಳು. ಅದ್ಕೆ ಬಲವಾದ ಆಧಾರಗಳೇನಿಲ್ಲ. ಸಾಲಿಗ್ರಾಮಕ್ಕೆ ವಿಶೇಷ ಪೂಜೆಯೇ ಅಗತ್ಯವಿಲ್ಲ, ಅದರ ದರ್ಶನ ಸ್ಪರ್ಶನಗಳೇ ಪರಮ ಭಾಗ್ಯವೆನ್ನುವುದನ್ನು ಶಾಸ್ತ್ರಗಳು ಸ್ಪಷ್ಟಪಡಿಸಿದೆ. ನೀನೇ ಇಟ್ಕೋ.. ತಾಯಿ" ಅವಳಿಗೇ ಕೊಟ್ಟರು.

ಹಿಡಿಯಲ್ಲಿಡಿದ ಸಾಲಿಗ್ರಾಮ ಒಮ್ಮೆ ತೆರೆದು ನೋಡಿದಳು. 'ವಿಷ್ಣು ಸನ್ನಿಹಿತನಾಗಿರುತ್ತಾನೆ' ಮತ್ತೆ ಅವಳ ಬೆರಳುಗಳು ಮಡಚಿಕೊಂಡು ಹಿಡಿ ಭದ್ರವಾಯಿತು.

ದುದ್ದನ ಮನೆಯಿಂದ ಒಬ್ಬ ಹಿರಿಯರು ಬಂದು ಮದುವೆ ಪ್ರಸ್ತಾಪವೆತ್ತಿದಾಗ ಅಡ್ಡ ಬಂದವನು ಗೋಪಾಲನೇ. "ನೋಡಿ ಮಾವ, ಅವ್ಳ ಮದ್ವೆಯ ಮಾತೇನಾದ್ರೂ ಆರು ತಿಂಗ್ಳ ನಂತರವೇ. ಹೇಗೂ ಈಗ ದುಡಿಯೋಕೆ ಷುರುವಾಗಿದ್ದಾಳೆ ಕುಕ್ಕರ್, ಗ್ಯಾಸ್ -ಅಂಥದ್ದೆಲ್ಲ ಮೊದ್ಲು ತನ್ನ ಸ್ವಂತ ಸಂಪಾದ್ನೆಯಿಂದ್ಲೇ ಕೊಂಡುಕೊಳ್ಳಿ. ಅದ್ವರ್ಗೂ ಮದ್ವೆ ಮಾತು ಬೇಡಾಂತ ಹೇಳಿದ್ದಾಳೆ" ಅವರ ಬಾಯೇನೋ ಸುಲಭವಾಗಿ ಮುಚ್ಚಿಸಿದ.

ಆದರೆ ಕಲ್ಲು ಮರಗೆಯಿಂದ ಪುಟ್ಟ ಜಾಡಿಗೆ ಉಪ್ಪಿನಕಾಯಿ ತುಂಬುತ್ತಿದ್ದ ದೊಡ್ಡ ಸೊಸೆ "ಇದ್ನ ವಕಾಲತ್ತು ವಹಿಸೋದು ನೋಡಿದ್ರೆ, ಇವ್ಳಿಗೆ ಲಗ್ನ ಆಗೋ ಮನಸ್ಸಿದೇಂತ ಅನ್ನಿಸುತ್ತೆ. ಅದ್ಕೆ ಈ ಸುತ್ತು ಬಳಸಿನ ಮಾತುಗಳು" ಎಲ್ಲರು ಕೇಳುವಂತೆ ಕುಟುಕಿದಾಗ, ನಡು ಮನೆಯಲ್ಲಿದ್ದ ಗೋಪಾಲ ಬಾಗಿಲಿಗೆ ಬಂದು "ಅತ್ತಿಗೆ, ಈ ಸುತ್ತು ಬಳಸಿನ ಮಾತುಗಳ್ನ ಆಡಿ ನಂಗೆ ಅಭ್ಯಾಸವಿಲ್ಲ. ಇಷ್ಟವಿದೇಂತ ಅಂದ್ಕೊಂಡ್ರೆ ಅಭ್ಯಂತರ ಹೇಳಬೇಕಾದವ್ಳು.. ವಾಸಂತಿ ಮಾತ್ರ. ನೀವು ಸುಮ್ನೇ ತಲೆ ಬಿಸಿ ಮಾಡ್ಕೋಬೇಡಿ. ಹೇಗೂ ನಿಮ್ಮ ತವರಿನ ಒಂದು ಸಂಬಂಧ ನಂಗಾಗಿ ಕಾಯ್ದಿರಿಸಿದ್ದೀರಲ್ಲ" ಎಂದ ಚುರುಕಾಗಿ. ಆಕೆಯ ಮುಖ ಗುಬ್ಬಚ್ಚಿಯ ಮುಖದಷ್ಟಾಯಿತು. "ಅಯ್ಯೋ ನಂಗೇನು! ನನ್ನಣ್ಣನ ಮಗ್ಳಿಗೆ ನಿಂಗಿಂತ ಎಷ್ಟೋ ಪಾಲು ಒಳ್ಳೆಯ ಸಂಬಂಧಗಳು ಬಂದು ಹೋಗಿವೆ. ಮುಂದು ಬರುತ್ತೆ" ಖಾರವಾಗಿ ಅಂದಳು.

ಒಳಗೆ ಬಂದು ಆಕೆಯ ಕೈಯಲ್ಲಿನ ಪುಟ್ಟ ಜಾಡಿಯನ್ನು ಇಸಿಕೊಂಡು "ಖಂಡಿತ ಬರ್‍ಲೀ. ದೇವರ ದಯೆಯಿಂದ ಒಂದು ಸಂಬಂಧ ಗೊತ್ತಾಗ್ಲಿ. ನಿಮ್ಗ ಮೈದುನನ ಮೇಲಿರೋ ಮಮಕಾರದಿಂದ.... ಈ ಹುಡ್ಗೀ ಬಾಳು ಹಾಳು ಮಾಡ್ಬೇಡಿ. ಈ ಕೊಳಲಿನ ಗೋಪಾಲನನ್ನು ಕಟ್ಟಿಕೊಳ್ಳೋಕೆ.. ಅವ್ಳೇನು ಕಲಿಯುಗದ ರಾಧೆಯಲ್ಲ. ಈ ಜಾಡಿಗೊಂದು ಭದ್ರವಾಗಿ ಬಟ್ಟೆ ಕಟ್ಟಿಕೊಡಿ" ಜಾಡಿಯನ್ನ ನೆಲದ ಮೇಲಿಟ್ಟು ಹೊರನಡೆದ. ಆ ಜಾಡಿಯ ಉಪ್ಪಿನಕಾಯಿ ವಾಸಂತಿಗಾಗಿ, ಒಡೆಯದಂತೆ ಸ್ವಲ್ಪ ಜೋರಾಗಿ ಕುಕ್ಕಿಯೇ ಬಟ್ಟೆ ಕಟ್ಟಿದ್ದು.

711916R

ಮನೆಯವರಿಂದ ಬೀಳ್ಕೊಟ್ಟು ಮೂವರು ಬಸ್ ನಿಲ್ದಾಣಕ್ಕೆ ಬಂದಾಗ ಒಂದಷ್ಟು ಜನ ಕಾದಿದ್ದರು. ಒಂದೆರಡು ಪೆಟ್ಟಿಗೆ ಅಂಗಡಿಗಳ ಜೊತೆ ಒಂದು ಸಣ್ಣ ಹೋಟಲ್ ಕೂಡ ಇತ್ತು. ಇದ್ದಿದ್ದು ಒಂದೇ ಹೋಟಲ್. ಸದಾ ಜನ ಮುಕುರುತ್ತಿದ್ದರು. ಅದಕ್ಕಾಗಿಯೋ ಏನೋ ಮಾಲೀಕ ಸದಾ ದನಿಯನ್ನು ಏರಿಸಿಯೇ ಇರುತ್ತಿದ್ದ. ಅವಸವಸರವಾಗಿ ಬಂತು ಒಂದು ಶೆಟ್ಟರ ಕುಟುಂಬ ಪಿಳ್ಳೆಗಳೊಂದಿಗೆ. ಗಂಡ, ಹೆಂಡತಿ ಜಗಳವಾಡುತ್ತ ದುಸದುಸ ಎನ್ನುತ್ತಲೇ ನಿಂತಿದ್ದ ಬಸ್ಸನ್ನೇರಿದರು. ಆ ಆದಿನಾರಾಯಣ ಶೆಟ್ಟಿ ಸಣ್ಣ ಅಂಗಡಿಯಲ್ಲಿಯೇ ದೊಡ್ಡ ರೀತಿಯಲ್ಲಿ ವ್ಯಾಪಾರ ಮಾಡುತ್ತಿದ್ದ ಜಿಪುಣ. ಸದಾ 'ವೆಂಕಟರಮಣ' ಎನ್ನುವುದರ ಜೊತೆಗೆ ಬಾಯಲ್ಲಿ ಬೈಗಳು ಇರುತ್ತಿದ್ದವು. ಊರಿನಲ್ಲಿ ತನ್ನ ವಿಶಿಷ್ಟ ವ್ಯಕ್ತಿತ್ವದಿಂದ ಪಾಪ್ಯುಲರ್ ವ್ಯಕ್ತಿ.

ಆತುರಾತುರವಾಗಿ ಶೆಟ್ಟರು ಕೆಳಗಿಳಿದರು. ಗಂಡನನ್ನ ಜೋರು ದನಿಯಲ್ಲಿ ಕೂಗಿದ ಆತುರ ಹೆಂಡತಿ ಕಳಿಸಬೇಕಾಗಿದ್ದ ತಿಂಡಿಯ ವಿವರದ ಜೊತೆ ಪ್ಯಾಕ್ ಮಾಡಿಸಬೇಕಾದ ಲಿಸ್ಟ್‌ನ ಒದರತೊಡಗಿದಳು. ರೇಗಿಕೊಂಡೇ ಮಂಕಾದ ಕಚ್ಚೆಯ ಪಂಚೆ ಕೊಳೆಯಾದೀತೆಂದು ಮೇಲಕ್ಕೆತ್ತಿಕೊಂಡು ಒಳ ನಡೆದವನ ಹಿಂದೆ ನೀಲಿ ಷರಟು ತೊಟ್ಟ ಅವನ ಮದುವೆ ವಯಸ್ಸಿನ ಮಗ ಹೊರಟಾಗ ಅಲ್ಲೇ ನಿಲ್ಲಿಸಿ ಏನೋ ಹೇಳಿ ಒಬ್ಬಂಟಿಯಾಗಿ ಹೊರಟ. ಅವನಿಗೆ ಗೆಳೆಯರು ಗಂಟು ಬಿದ್ದಿದ್ದರಿಂದ ಸಿಗರೇಟು ಸೇದಲು ಮರದ ಮರೆಗೆ ಹೋದ. ಮುಂದಿನ ಸೀನ್ ಕ್ರಿಯೇಟ್ ಆಗಲು ಇದೊಂದು ಕಾರಣ.

ನಿಂತಿದ್ದ ಗೋಪಾಲ ಉದ್ದ ಪಂಚೆಯನ್ನೆತ್ತಿ ಮೇಲಕ್ಕೆ ಕಟ್ಟಿ "ಸ್ವಲ್ಪ ನೋಡಿ, ತಮಾಷೆ" ಎಂದು ಹೋಟಲ್‌ನ ಮುಂಭಾಗದಲ್ಲಿ ನಿಂತ ಎತ್ತಲೋ ನೋಡುವಂತೆ. ತಿಂಡಿಯ ಪ್ಲೇಟುಗಳ ಟ್ರೇ ಹಿಡಿದು ಬಂದ ಮಾಣಿ,

ಇವನಿಗೆ ಕೊಟ್ಟಾಗ ಸದ್ದು ಗದ್ದಲವಿಲ್ಲದೆ ಪಡೆದು ಟೈರ್‌ಗೆ ಪಂಚರ್ ಹಾಕುತ್ತಿದ್ದ ಕುಂಟ ನಟೇಶನ ಸನ್ನೆ ಮಾಡಿ ಕರೆದು ಕೊಟ್ಟು ಖಾಲಿ ಮಾಡಿ ತಗೊಂಡು ಹೋಗಿ ಕ್ಯಾಷ್‌ಕೌಂಟರ್‌ನಲ್ಲಿ ಕೊಡುವಂತೆ ಹೇಳಿದ್ದು ಕೂಡ ಸನ್ನೆಯಿಂದಲೇ. ತಲೆಯಾಡಿಸಿ ಹೋದ, ಐದು ನಿಮಿಷಕ್ಕೆ ಮತ್ತೊಂದು ತಿಂಡಿಯ ಪ್ಲೇಟುಗಳನ್ನೊತ್ತ ಟ್ರೇ ಬಂತು. ಅದನ್ನು ತಗೊಂಡು ಹಣ್ಣಿನ ಬುಟ್ಟಿ ಹೊತ್ತು ತಿರುಗುತ್ತಿದ್ದ ಅಹಮದ್‌ಗೆ ಕೊಟ್ಟು ತುಟಿಯ ಮೇಲೆ ಬೆರಳಿಟ್ಟು, ತಲೆಯಾಡಿಸಿದ. ಗೋಪಾಲ್ ಎಂದರೇ ಅವನಿಗೆ ಅಭಿಮಾನವೇ. 'ಹ್ಞೂ' ಗುಟ್ಟಿ ಉತ್ಸಾಹದಿಂದ ಹಣ್ಣಿನ ಬುಟ್ಟಿಯನ್ನು ಅಲ್ಲೇ ಇಟ್ಟು ತಿಂಡಿಯ ತಟ್ಟೆಯನ್ನೊಯ್ದ. ಹತ್ತು ನಿಮಿಷದಲ್ಲಿ ತಿಂಡಿಯ ತಟ್ಟೆ ಖಾಲಿಯಾಗಿ ಕೌಂಟರ್ ತಲುಪಿತು. ತೀರಾ ಕಟ್ಟುನಿಟ್ಟಿನ ಐತಾಳರು ಹೊರಗೆ ಬಂದು ಪ್ಲೇಟ್ ಇಡ್ಲಿ ಹೋಗಬೇಕಾದರೂ ಅವರ ಮುಂದೆ ಹಿಡಿದು, ನೋಡಿ ಗುರುತು ಹಾಕಿಕೊಂಡ ನಂತರ ಹೊಸಲು ದಾಟಬೇಕು, ಕೆಲವೊಮ್ಮೆ ಮುಖ ಗಂಟಿಕ್ಕಿ 'ಒಂದಿಷ್ಟು ಚಟ್ನಿ, ಸಾಂಬಾರ್ ಕಡ್ಮೆ ಒಯ್ಯೋಕ್ಯಾಗೋಲ್ವ ತಿನ್ದೇ ನೀರು ಸುರೀತಾರೆ' ಕಣ್ಣು ಕೆಂಪಗೆ ಮಾಡುತ್ತಿದ್ದರು.

ಬಂದ ತಂಬಿಗೆ, ನೀರಿನ ಲೋಟಗಳನ್ನ ತಾನೇ ಪಡೆದು ಪಕ್ಕಕ್ಕೆ ಸುರಿದು ಖಾಲಿಯಾದ್ದನ್ನ ಅಹಮದ್ ಕೈಗೆ ಕೊಟ್ಟು ಕಳುಹಿಸಿದ ನಂತರ, ಚಕ್ಕುಲಿ, ಕೊಡಬಳೆ, ನಿಪ್ಪಟ್ಟು, ಬಿಸ್ಕತ್ ಪಡೆದು ಪಕ್ಕಕ್ಕೆ ಸುರಿದು ಖಾಲಿಯಾದ್ದನ್ನು ಅಹಮದ್ ಕೈಗೆ ಕೊಟ್ಟು ಕಳುಹಿಸಿದ ನಂತರ, ಚಕ್ಕುಲಿ, ಕೊಡಬಳೆ, ನಿಪ್ಪಟ್ಟು, ಬಿಸ್ಕತ್ ಪ್ಯಾಕೆಟ್‌ಗಳನ್ನು ತಂದವನು ಇವನ ಕೈಗೆ ಕೊಟ್ಟಾಗ, ನಟೇಶನನ್ನು ಕರೆದು ಅವನ ಕೈಯಲ್ಲಿಟ್ಟು ತನ್ನ ಪಾಡಿಗೆ ತಾನು ಹೋಗಿ ವಾಸಂತಿ, ಕಣ್ಮಣಿಯ ಜೊತೆ ನಿಂತ, ತಮಾಷೆ ನೋಡುವವನಂತೆ.

"ಏನಿದೆಲ್ಲ?" ವಾಸಂತಿ ಕೇಳಿದಳು.

"ಆ ಮನುಷ್ಯ ತನ್ನ ಜೀವಮಾನದಲ್ಲಿ ಒಬ್ಬರಿಗೆ ಊಟ ಹಾಕಿ, ಹತ್ತು ಪೈಸೆ ದಾನ ಮಾಡಿದವನಲ್ಲ. ಆ ವಿಷ್ಯದಲ್ಲಿ ನಾನು ಸಹಾಯ ಮಾಡ್ದೇ. ಅವ್ನ ಹೆಂಡ್ತಿ, ಮಕ್ಳು ಮುಂದಿನ ನಿಲ್ದಾಣದಲ್ಲಿಯಾದ್ರೂ.. ಕಾಡಿ ತಿಂತಾರೆ. ಅರ್ಧ ದಿನ ಉಪವಾಸವಿರೋದು ಅವ್ರುಗಳ ಆರೋಗ್ಯಕ್ಕೆ ಒಳ್ಳೇದು" ಕೈ ಕೊಡವಿದ.

ಬಸ್ಸು ಸ್ಟಾರ್ಟ್ ಆಗಿ, ಹಾರನ್ ಷುರುವಾದಾಗ ಸಿಗರೇಟು ಸೇದುತ್ತಿದ್ದ ಶೆಟ್ಟಿಯ ಮಗ ಪೊಗದಸ್ತಾಗಿ ತಿಂದು ಇಷ್ಟು ಬಿಲ್ಲಾಯಿತೆಂದು

ಗೊಣಗಿಕೊಳ್ಳುತ್ತ ಮೂತಿಯೊರೆಸುತ್ತ ಬಂದ ಶೆಟ್ಟಿ ಇಬ್ಬರು ಒಟ್ಟಿಗೆ ಬಸ್ಸನೇರಿದರು. ಬಹುಶಃ ಶೆಟ್ಟಿಯ ಹೆಂಡತಿ, ಮಕ್ಕಳು ಒಟ್ಟಿಗೆ ಮುಗಿ ಬಿದ್ದಿರಬೇಕು, ತಂದೆ, ಮಗನಿಗೆ. ಒಂದು ಮದುವೆ ಮನೆಯಷ್ಟು ಗಲಾಟೆ ಷುರುವಾಯಿತು. ಬಸ್ಸಿನೊಳಗೆ. ಅದನ್ನೆಲ್ಲ ಅಡಗಿಸುವಂತಿತ್ತು ಕಂಡಕ್ಟರ್ ಪೀಪಿಯ ಸದ್ದು. ಬಸ್ಸು ಧೂಳೆರಚುತ್ತ ಹೋಯಿತು.

ವಾಸಂತಿ, ಕಣ್ಮಣಿ ಇಬ್ಬರು ನಕ್ಕರು. ಶೆಟ್ಟಿ ಹೋಟಲ್ ಮಾಲೀಕನಿಗೆ ಇನ್ನೂರು ಚಿಲ್ಲರೆ ಕೊಟ್ಟು ಕಳೆದುಕೊಂಡಿದ್ದ. ಅವನ ಮಟ್ಟಿಗೆ ಅದು ದೊಡ್ಡ ನಷ್ಟ. ಬಸ್ಸಿನಲ್ಲಿ ಸೀಟು ಬಿಟ್ಟು ಕೆಳಗಡೆಯೇ ಕೂತು ಹೆಂಡತಿ, ಮಕ್ಕಳನ್ನು ಬಯ್ಯುತ್ತ ಗೋಳಾಡಿದ್ದು, ಮರುದಿನ ಆ ಬಸ್ಸಿನಲ್ಲಿದ್ದ ಪ್ರಯಾಣಿಕರಿಂದ ತಿಳಿಯಿತು. ಅದಕ್ಕಾಗಿ ಗೋಪಾಲ ಪಶ್ಚಾತಾಪ ಪಡಲಿಲ್ಲ. ನಕ್ಕಿದ್ದ ಮನಪೂರ್ತಿಯಾಗಿ.

* * * *

ಆ ದಿನ ಸ್ವಲ್ಪ ತಲೆ ನೋವು ಇದ್ದಿದ್ದರಿಂದ ರೂಮಿನಲ್ಲೇ ಉಳಿದಿದ್ದಳು. ಹೊರಡುವ ಮುನ್ನ ವಾಸಂತಿ "ಆರಾಮಾಗಿ ಮಲ್ಗೀ ನಿದ್ದೆ ಮಾಡು. ಇಲ್ಲ ಸಾಲಿಗ್ರಾಮ ಇಟ್ಕೊಂಡ್ ಜಪ ಮಾಡ್ತೀಯೇನೋ ನೋಡು" ಹಾಸ್ಯದ ಪನ್ನೀರನ್ನು ಚಿಮುಕಿಸಿದ್ದಳು ಎಂದಿನಂತೆ.

ಹಾಸಿಗೆಯ ಮೇಲೆ ಉರುಳಿಕೊಂಡ ಕಣ್ಮಣಿ ಕ್ಯಾಸೆಟ್ ಟೇಪ್‌ರಿಕಾರ್ಡರ್‌ನೊಳಕ್ಕೆ ತುರುಕಿ, ದಿಂಬಿನ ಮೇಲೆ ತಲೆ ಆನಿಸಿದಳು ಮೃದುವಾಗಿ. ಶಾಂಪುನಿಂದ ತೊಳೆದ ಕೂದಲು ಕೆನ್ನೆಗಳಿಗೆ ಮುತ್ತಿಕ್ಕುತಿತ್ತು.

"ಫೋನಿದೆ......" ವಾರ್ಡನ್‌ನಿಂದ ಬುಲಾವ್ ಬಂತು. ಇದೊಂದು ಪ್ರೈವೇಟ್ ವರ್ಕಿಂಗ್ ಉಮೆನ್ಸ್ ಹಾಸ್ಟಲ್ ಆದುದ್ದರಿಂದ ಆಕೆ ಓನರ್-ಕಂ-ವಾರ್ಡನ್. ಇದೊಂದು ರೀತಿಯ ಸೋಷಿಯಲ್ ವರ್ಕ್ ಎನ್ನುವ ಪ್ರಚಾರ ಬೇರೆ.

ಅನಾಥಾಶ್ರಮದ ಸೆಕ್ರೆಟರಿ ಲೈನ್‌ನಲ್ಲಿ ಇದ್ದಿದ್ದು ಯೋಗಕ್ಷೇಮ ವಿಚಾರಿಸುವ ಜೊತೆಗೆ ಛೀಮಾರಿ ಹಾಕಿದರು ಕೂಡ "ಈಚೆಗೆ ಒಂದ್ತಿಂಗ್ಳಿಂದ ಆಶ್ರಮದ ಕಡೆ ಬಂದಿಲ್ಲ, ಯಾಕೆ? ಬೀದಿ ಪಾಲಾಗಿ ಎಲ್ಲೋ ಮಣ್ಣಾಗಿ ಬಿಡುತ್ತಿದ್ದ ನಿನ್ನಂಥವ್ರಿಗೆ ನೆಲೆ ಕಲ್ಪಿಸಿದ್ದು, ಆಶ್ರಮ. ಈಗ ಅನ್ನಕ್ಕೆ ದಾರಿ ಸಿಕ್ತೂಂತ ಒಬ್ಬೊಬ್ರೆ ಹಾರಿ ಹೋದರೂ, ಕೃತಜ್ಞತೆ ಅನ್ನೋದು ಇರ್ಬೇಕು". ದೊಡ್ಡ ದನಿಗೆ ಸುಸ್ತಾದಳು "ಸಾರಿ, ಮೇಡಮ್... ಕೆಲವು ದಿನ ನನ್ನ

ರೂಮುಮೇಟ್ ವಾಸಂತಿ ಊರಿಗೆ ಹೋಗಿದ್ದೆ, ಭಾನುವಾರಗಳು ಅರ್ಧದಿನಕ್ಕೆ ಆಗೋಷ್ಟು ಬಟ್ಟೆ ಒಗೆಯೋದು, ಇಸ್ತ್ರಿ ಮಾಡೋದು ಇರುತ್ತೆ. ಅದ್ಕೇ ಬರೋಕ್ಕಾಗ್ಲಿಲ್ಲ" ಇವಳ ಸಬೂಬಿಗೆ ತಣ್ಣಗಾಗುವಂಥ ಹೆಣ್ಣಲ್ಲ "ಇಂಥ ಮಾತುಗಳೆಲ್ಲ ಬೇಡ. ಆಗಾಗ ಆಶ್ರಮಕ್ಕೆ ಬಾ" ದಢಾರನೆ ಫೋನ್ ಕುಕ್ಕಿದಳು. ಹಿರಿಯಾಕೆ ಸತ್ತು ಈಕೆ ಪಟ್ಟಕ್ಕೆ ಬಂದ ಮೇಲೆ ಅಪಾರವಾದ ಶಿಸ್ತಿನ ಜೊತೆ 'ಅನಾಥರು' ಎಂಬುದನ್ನು ಗುರುತು ಮಾಡಿ ಹಂಗಿಸುತ್ತಿದ್ದಳು. ಅದಕ್ಕಾಗಿಯೇ ಹೋಗಲು ಹಿಂಜರಿಕೆ.

ರೂಮಿಗೆ ಹಿಂದಿರುಗಿದಾಗ ಕಣ್ಮಣಿಯ ಉತ್ಸಾಹ ಬತ್ತಿದಂತಾಗಿತ್ತು. ತಲೆ ಮತ್ತಷ್ಟು ಸಿಡಿಯುತೊಡಗಿದಾಗ ಒಂದು ಮಾತ್ರೆ ನುಂಗಿ ಟೇಪ್‌ರಿಕಾರ್ಡರ್‌ನ ಟ್ಯೂನ್ ಹೆಚ್ಚಿಸಿದಳು. ಅದನ್ನು ತನ್ನ ಮೊದಲ ಸಂಬಳದಲ್ಲಿ ಕೊಂಡಿದ್ದರಿಂದ ಅದಕ್ಕೆ ಪ್ರತ್ಯೇಕವಾದ ಸ್ಥಾನವಿತ್ತು. ಯಾವುದೇ ಪಕ್ಕ ವಾದ್ಯಗಳು ಇಲ್ಲದಿದ್ದರೂ ಗೋಪಾಲನ ಕೊಳಲು ಮಧುರವಾಗಿತ್ತು. ಅದರ ನಡುವೆ ಹಕ್ಕಿಗಳ ಚಿಲಿಪಿಲಿ, ಎಲೆಗಳ ಮರಮರ ಗಾಳಿಯ ಸದ್ದು ಎಲ್ಲಾ ಹಿತವೆನಿಸಿತು. ಮತ್ತಷ್ಟು ಟ್ಯೂನ್ ಹೆಚ್ಚಿಸಿದಳು.

'ಸಾಲಿಗ್ರಾಮಕ್ಕೆ ಷೋಡಶೋಪಚಾರ, ಪೂಜೆ ಇಲ್ಲದಿದ್ದರೂ ದರ್ಶನ-ಸ್ಪರ್ಶನದಿಂದಲೇ ಒಳ್ಳೆಯದಾಗುತ್ತೆ' ಅಪ್ಪಯ್ಯ ಹೇಳಿದ್ದರು. ಬಂದವಳೇ ಒಂದು ಸಣ್ಣ ಡಬ್ಬಿಯನ್ನು ಖರೀದಿಸಿ ಅದರಲ್ಲಿಟ್ಟು ಪ್ರತಿದಿನ ಬೆಳಿಗ್ಗೆ, ಸಂಜೆ ನೋಡಿ ಕಣ್ಣಿಗೊತ್ತಿಕೊಳ್ಳುವುದೊಂದು ಪರಿಪಾಠವಾಗಿತ್ತು.

ಎರಡಕ್ಕೆ ಊಟ ಮುಗಿಸಿ ಮತ್ತೆ ಮಲಗಿದರೂ ಅವಳಿಗೆ ನಿದ್ದೆ ಬರಲಿಲ್ಲ. ಬಂಗ್ಲೆಯ ಅನುಭವ ಅವಳನ್ನು ರೋಮಾಂಚಿತಗೊಳಿಸಿದರೂ, ಆ ತಾಣ ತನಗೆ ಪರಿಚಯವಿತ್ತು. ತಾನು ಹಿಂದೆ ನೋಡಿದೆಯೆನಿಸಿದರೂ ವಾಸಂತಿಗೂ ಕೂಡ ಹೇಳಿರಲಿಲ್ಲ. ಬಹುಶಃ ಹೇಳಿದರೇ ಹಾಸ್ಯ ಮಾಡಬಹುದು. ಅವಳಿಗೆ ವಿಚಿತ್ರವಾಗಿ ಕಾಣುತ್ತೆ. ಸೀರಿಯಸ್ಸಾಗಿ ಮಾತ್ರ ತೆಗೆದುಕೊಳ್ಳಲಾರಳು. ಎಂದಾದರೂ ಕನಸ್ಸಿನಲ್ಲಿ ಕಂಡಿದ್ದುಂಟ? ಸಾಕಷ್ಟು ತಲೆ ಕೆಡಿಸಿಕೊಂಡಿದಷ್ಟೆ ಭಾಗ್ಯ, ಅವಳಿಗೇನು ನೆನಪಾಗಿರಲಿಲ್ಲ.

ಅಂದು ಸಿಕ್ಕಿದ ಹಳೆಯ ಡೈರಿಯನ್ನು ನೆನಪಿಸಿಕೊಂಡು ಕವರ್‌ನಲ್ಲಿ ಹಾಕಿಟ್ಟವಳು ಬಿಡಿಸಿ ಅದರ ಮೇಲಿನ ಧೂಳನ್ನು ನಿಧಾನವಾಗಿ ಒರಸಿ ಪುಟಗಳನ್ನು ಮೊಗಚಿದಳು. ಅಲ್ಲಲ್ಲಿ ಏನೇನೋ ಬರೆದಿದ್ದರೂ ಅಕ್ಷರಗಳು ಪೂರ್ತಿ ಸ್ಪಷ್ಟವಾಗಲಿಲ್ಲ. ಡೈರಿಯ ಒಳಭಾಗದ ಕೆಲವು ಪುಟಗಳನ್ನು ಅಲ್ಲಲ್ಲಿ ಜಿರಳೆ, ಮುಂತಾದವು ತಿಂದಿದ್ದರಿಂದ ಅಕ್ಷರಗಳು ಬಿಟ್ಟು ಬಿಟ್ಟು ಹೋಗಿ

ಓದಲು ಕಷ್ಟವೆನಿಸಿತು. ಎತ್ತಿ ಡಸ್ಟ್ ಬಿನ್‌ಗೆ ಹಾಕದೆ ಮತ್ತೆ ಎತ್ತಿಟ್ಟಳು. ಜೋಪಾನವಾಗಿ ಒಂದು ರೀತಿಯ ವ್ಯಾಮೋಹ. ಜೋಪಾನವಾಗಿರಿಸಿ-ಕೊಳ್ಳಬೇಕೆಂಬ ತವಕ ಆತ್ಮೀಯವೆನಿಸಿತು.

ಮೂರರ ಸುಮಾರಿಗೆ ಬಂದ ವಾಸಂತಿ "ಈಡಿಯಟ್.... ರೋಗ್ಸ್... ಇವ್ರ ಬೆದರಿಕೆಗೆ ಹೆದರಿ ದುದ್ದನ್ನು ಮದ್ವೆಯಾಗ್ಬಿಡ್ತೀನಾ?" ಕನಲಿದಳು. ಕಣ್ಮಣಿಗೇನು ಅರ್ಥವಾಗಲಿಲ್ಲ.

"ಏನಾಯ್ತೇ?" ಪಕ್ಕದಲ್ಲಿ ಕೂತು ಪ್ರಶ್ನಿಸಿದಳು.

"ಆ ದುದ್ದನ ಅಪ್ಪ ಈ ಕೆಲ್ಸಕ್ಕೆ ರೆಕಮಂಡೇಷನ್ ಮಾಡಿದ್ದು ದಿಟ. ಆದರೆ ಆ ಪೇಪರ್‌ನಲ್ಲಿನ ಅಡ್ವರ್ಟೈಜ್‌ಮೆಂಟ್ ನೋಡಿ ಅಪ್ಲಿಕೇಷನ್ ಹಾಕಿದ್ದು ನಾನು, ಇಲ್ಲಿ ಕೆಲ್ಸ ಮಾಡ್ತಾ ಇರೋದು ನಾನು" ಭುಸುಗುಟ್ಟಿದಾಗ ಕಣ್ಮಣಿ ತಣ್ಣನೆಯ ನಗೆ ಬೀರಿದಳು.

"ಷೂರ್, ಈಗ ಸಂಬ್ಳ ತಗೋತಾ ಇರೋದು, ಅದ್ನ ಸ್ವಂತಕ್ಕೆ ಖರ್ಚು ಮಾಡಿಕೊಳ್ತಾ ಇರೋದು ಕೂಡ ನೀನೇ. ಆ ಬಗ್ಗೆ ಇನ್ನೊಂದು ಮಾತಿಲ್ಲ. ಈಗೇನಾಯ್ತು?".

ಮುಖ ದಪ್ಪಗೆ ಮಾಡಿಕೊಂಡು ಕೂತಿದ್ದ ವಾಸಂತಿ ಹತ್ತು ನಿಮಿಷದ ನಂತರವೇ ಬಾಯಿ ಬಿಟ್ಟಿದ್ದು. ದುದ್ದನ ಅಪ್ಪ, ಅಮ್ಮ ಇಲ್ಲಿವರೆಗೂ ಮದುವೆಯ ಮಾತನ್ನು ತಂದು ಬುದ್ಧಿ ಹೇಳಿಸಿದ್ದು ಅವಳಿಗೆ ಅಪರಾಧವಾಗಿತ್ತು.

ಎಲ್ಲಾ ಕೇಳಿ ಮುಗಿಸಿದ ಕಣ್ಮಣಿ "ಅಷ್ಟಕ್ಕೆ ಇಷ್ಟೊಂದು ಕೋಪ ಯಾಕೆ? ನಿನ್ನ ಗೋಪಾಲ ಮಾವ ಹೇಳ್ದ ಪ್ರಕಾರ ನಿನ್ನ ಕುತ್ತಿಗೆ ಹಿಡ್ದು ತಾಳಿ ಕಟ್ಟೋಕ್ಕಂತು ಸಾಧ್ಯವಿಲ್ಲ. ಸ್ವಲ್ಪ ಶಾಂತವಾಗಿರು."

ಕಡೆಗೆ ಈಗ ಎದುರಾಗುವ ಸಮಸ್ಯೆಯನ್ನು ಬಿಡಿಸಿಟ್ಟಳು "ಆ ಓನರ್ ಅವ್ರ ಕ್ಲೋಸ್ ರಿಲೇಟಿವ್, ನನ್ನ ಕೆಲ್ಸ ಹೋದ್ರೂ ಹೆಚ್ಚಲ್ಲ. ಆಮೇಲೆ ಮುಂದಿನ ಗತಿಯೇನು?"

"ಯೋಚ್ನೆ ಬೇಡ. ಮತ್ತೆ ಕೆಲ್ಸಕ್ಕಾಗಿ ಪ್ರಯತ್ನಿಸೋದು. ಆವರೆಗೆ ನನ್ನ ಸಂಬಳವಾದ್ರೂ ಬರುತ್ತಲ್ಲ" ಪರಿಹಾರ ಸೂಚಿಸಿದಳು ಕಣ್ಮಣಿ. ಕೃತಜ್ಞತೆಯಿಂದ ತುಂಬಿತು ವಾಸಂತಿಯ ಕಣ್ಣುಗಳು. ಅವರಿಬ್ಬರು ಈ ವರ್ಕಿಂಗ್ ವಿಮೆನ್ಸ್ ಹಾಸ್ಟಲ್‌ಗೆ ಬಂದ ಮೇಲೆಯೇ ಪರಿಚಿತರಾಗಿದ್ದು, ಗೆಳತಿಯರಾಗಿದ್ದು, ಆದರೂ ಬಿಟ್ಟಿರಲಾರದಷ್ಟು ಆತ್ಮೀಯತೆ. ಒಂದೇ

ದೋಣಿಯ ಪ್ರಯಾಣಿಕರ ಮಧ್ಯೆ ಮೂಡಿದ ಸ್ನೇಹ ಸಂಬಂಧವೋ!.

ವಾಸಂತಿಯ ಭಯ ಕೆಲವೇ ದಿನಗಳಲ್ಲಿ ನಿಜವಾಯಿತು. ಪ್ರತಿಯೊಂದಕ್ಕೂ ಸಿಡಿಮಿಡಿ, ಛೀಮಾರಿ. ಭರಿಸುವುದು ಕಷ್ಟವೆನಿಸಿದಾಗ ಮಧ್ಯಾಹ್ನ ಅರ್ಧ ದಿನ ಲೀವ್ ಹಾಕಿದ್ದರು. ಹಿಂದಿರುಗಿಬಿಟ್ಟಳು ಹಾಸ್ಟಲ್‌ಗೆ. ಅಷ್ಟು ದೊಡ್ಡ ಜನರಲ್ ಸ್ಟೋರ್ ಇಡೀ ಸಿಟಿಯಲ್ಲಿಯೇ ಇರಲಿಲ್ಲ. ಒಂದೇ ವರ್ಷದಲ್ಲಿ ಅವಳಿಗೆ ಮೂರು ಪ್ರಮೋಷನ್ ಕೊಟ್ಟು ಕ್ಯಾಷ್ ಕೌಂಟರ್‌ಗೆ ಹಾಕಿದ್ದರು. ಅವಳ ಕೆಲಸ ನೋಡಿ. ಇದಕ್ಕೆ ತಾವು ಕಾರಣವೆನ್ನುವುದು ದುದ್ದನ ಅಪ್ಪ, ಅಮ್ಮನ ಹೇಳಿಕೆ. ಆ ಬಗ್ಗೆ ಕೂಡ ಅವಳಿಗೆ ಮಿತಿ ಮೀರಿದ ಕೋಪ.

ಗೆಳತಿಯ ತೋಳಿಗೆ ತಲೆಯಾನಿಸಿ ಕಣ್ಣೀರು ಸುರಿಸಿದಳು "ನಾನು ಕೆಲ್ಸಕ್ಕೆ ಇಷ್ಟು ದೂರ ಬರೋದು ಯಾರ್‍ಗೂ ಇಷ್ಟವಿರ್ಲಿಲ್ಲ. ನಾನು ಒಂದು ಭದ್ರವಾದ ಕೋಟೆಯಿಂದ ಹೊರಬರಲು ಎಷ್ಟೆಲ್ಲ ಕಷ್ಟಪಡಬೇಕಾಯಿತೋ, ಅಷ್ಟೆಲ್ಲ ಪಟ್ಟೆ. ಈಗ ಮತ್ತೆ ಅಲ್ಲಿಗೆ.. ಹೋಗ್ಲಾರೆ."

"ಬೇಡ, ಅಲ್ಲಿಂದ ನೀನು ಒಂಟಿಯಾಗಿ ಬಂದ್ರೂ ಈಗ ನಾನು ನಿನ್ನೊತೆಯಲ್ಲಿ ಇದ್ದೀನಿ" ಸಮಾಧಾನಿಸಿದಳು.

ಒಂದಲ್ಲ ನಾಲ್ಕು ಕಾರಣಗಳನ್ನು ಒಡ್ಡಿ ಅವಳನ್ನು ಕೆಲ್ಸದಿಂದ ಡಿಸ್‌ಮಿಸ್ ಮಾಡಿದರು. ಇದನ್ನು ನಿರೀಕ್ಷಿಸಿಯೇ ಇದ್ದ ವಾಸಂತಿ ಕಂಗೆಡದಿದ್ದರೂ, ಮುಂದೇನು?. ಒಂದು ಕೆಲಸ ಸಿಕ್ಕುವುದು ಸುಲಭವೇ? ಒಂದು ತಿಂಗಳು ದೂಡುವ ವೇಳೆಗೆ ಕೈಯಲ್ಲಿನ ಕಾಸು ಖಾಲಿಯಾಯಿತು. ಕೆಲಸದ ಅನ್ವೇಷಣೆಗಾಗಿ, ಅಪ್ಲಿಕೇಷನ್, ಸಿಟಿಬಸ್ಸು, ಆಟೋಗಳಿಗೆ ಕೂಡ ಕಣ್ಮಣಿಯಿಂದ ಹಣ ಪಡೆಯಬೇಕಾದಾಗ ಅವಳು ಭೂಮಿಗಿಳಿದು ಹೋದಳು.

ರಾತ್ರಿಯೂಟ ಮುಗಿಸಿಕೊಂಡು ಡೈನಿಂಗ್ ಹಾಲ್ ಬಿಟ್ಟು ರೂಮಿಗೆ ಹಿಂದಿರುಗೋವಾಗ ವಾಸಂತಿ "ನಾಳೆ ಊರಿಗೆ ಹೋಗೋಣಾಂತ ಇದ್ದೀನಿ" ಎಂದಳು. ಕಣ್ಮಣಿ ರೂಮಿಗೆ ಬರುವವರೆಗೂ ಮಾತಾಡಲ್ಲಿಲ್ಲ. ವಯಸ್ಸಾದ ತಂದೆ ತಾಯಿ ಮಕ್ಕಳನ್ನ ವಿರೋಧ ಕಟ್ಟಿಕೊಳ್ಳುವುದು ಕಷ್ಟವೆಂದು ಅವಳಿಗೆ ಗೊತ್ತು. ಇವರು ಹೋದ ದಿನವೇ ಮನೆಯ ಹಿರಿಯ ಮಗ "ಮತ್ತೆ ವಾಸಂತಿ ಬಂದಿದ್ದಳೆ? ಆರ್ಥಿಕವಾಗಿ ಅಷ್ಟೇನು ಬಲವಾಗಿಲ್ಲದ ನಾವು ಏನು ಸಹಾಯ ಮಾಡೋಕ್ಕಾಗೋಲ್ಲ. ನೀವೇನು ಹೆಚ್ಚಿಗೆ ಹಚ್ಕೋಬೇಡಿ"

ಬಡಿಸುತ್ತಿದ್ದ ತಾಯಿಗೆ ಹೇಳಿದ. ಗೋಪಾಲನ ವಿಷಯ ಹೇಗೋ, ಏನೋ ಅವಳ ವಿಷಯದಲ್ಲಿ ಎಲ್ಲರ ಅಭಿಮತವು ಅಷ್ಟೆ.

ಮಂಕಾಗಿ ಕೂತ ಗೆಳತಿಯನ್ನ ನೋಡಿದಳು ಕಣ್ಮಣಿ. "ಈ ನಿರ್ಧಾರ ಒಳ್ಳೆದಲ್ಲ. ಬೇರೆಯವ್ರ ಕರುಣೆಯಲ್ಲೆ ಇರೋಕ್ಕಿಂತ ಆತ್ಮಹತ್ಯೆನೇ ಮೇಲೂಂತ ಅನ್ನಿಸುತ್ತೆ. ಕೆಲ್ಸ ಸಿಗೋದು ಕಷ್ಟವೇ ವಿನಃ, ಕೆಲ್ಸ ಸಿಗ್ದೇ ಹೋಗೋಲ್ಲ. ಮತ್ತಷ್ಟು ಪ್ರಯತ್ನ ಮಾಡೋಣ, ನಂದಿನಿ ಟೆಕ್ಸ್‌ಟೈಲ್‌ನಲ್ಲಿ ಸೇಲ್ಸ್‌ಗರ್ಲ್‌ಗೆ ಆಫರ್ ಮಾಡಿದ್ದಾರೆ. ವಾಕ್-ಇನ್-ಇಂಟರ್‌ವ್ಯೂ.. ಸಂಡೇ-ಹೋಗ್ಬರೋಣ. ಸದ್ಯಕ್ಕೆ ಯಾವುದಾದ್ರೂ ಕೆಲ್ಸ. ಇಡೀ ದಿನ ಹಾಸ್ಟಲ್‌ರೂಂನಲ್ಲೇ ಉಳಿದರೇ, ನಿನ್ತಲೆ ಕೆಟ್ಹೋಗುತ್ತೆ" ಸಂತೈಸಿದಳು.

ಸುಮ್ಮನೆ ಮಲಗಿಬಿಟ್ಟಳು ವಾಸಂತಿ. ದಿಕ್ಕು ತೋರದ ಸ್ಥಿತಿ! ಮುಂದೇನು? ಬರುವ ಮುನ್ನ ಶಬರಿ ಅವಳ ಕೈಹಿಡಿದು ಕಣ್ಣೀರು ಮಿಡಿದಿದ್ದರು. "ಗೋಪಾಲನಿಗೆ ಮಾಡಿಕೊಳ್ಳೋಕೆ, ಮನೆಯವರದೆಲ್ಲ ವಿರೋಧ. ಇನ್ನ ನಿನ್ನದೃಷ್ಟ ನೋಡಿ ಮಾಡೋರ್‍ಯಾರು? ದುಡ್ಡು, ಒಂದಿಷ್ಟು ಮಂಕು ಅನ್ನೋದು ಬಿಟ್ಟರೇ, ಚಿನ್ನ, ಭೂಮಿ ಕಾಣಿ ಬೇಕಾದಷ್ಟಿದೆ. ಜೀವನ ಪರ್ಯಂತ ಇನ್ನೊಂದು ಯೋಚ್ನೆ ಇಲ್ದೇ ನೆಮ್ದಿಯಾಗಿ ಇರ್‍ಬಹ್ದು. ಒಂದು ಕೆಲ್ಸ ಇರ್‍ಬಹ್ದು. ಎಷ್ಟು ದಿನಾಂತ ಒಂಟಿಯಾಗಿ ಇರ್ತೀಯಾ?" ದೊಡ್ಡ ಪ್ರಶ್ನೆಯನ್ನೆ ಅವಳ ಮುಂದಿಟ್ಟಾಗ, ಒಂದೇ ಸಲ ತಲೆಯ ಮೇಲೆ ಕಾಲಿಟ್ಟು ಭೂಮಿಯೊಳಕ್ಕೆ ಅದುಮಿದಂತಾಗಿತ್ತು.

'ಯಾಕೆ, ನನ್ನ ತಂದುಸಾಕಿದ್ದೀರಿ? ಅಲ್ಲೆ ಸಾಯಲು ಬಿಡಬೇಕಿತ್ತು.' ಕೂಗಿ ಕೂಗಿ ಕೇಳಬೇಕೆನಿಸಿತು. ಜೋರಾಗಿ ಅರಚಿ ಹೇಳಬೇಕೆನಿಸಿತು. ಅತ್ತು ಅತ್ತು ನಿದ್ದೆ ಮಾಡಿದಳು.

ಪತ್ರಿಕಾಲಯದಿಂದ ಇಳಿಯುವುದಕ್ಕೂ ಒಂದು ಕಾರು ಮುಂದಕ್ಕೆ ಹೋಗುವುದಕ್ಕೂ ಸರಿಹೋಯಿತು. ಆ ವ್ಯಕ್ತಿಯನ್ನು ಎಲ್ಲೋ ನೋಡಿದೆನಿಸಿತು. ನೋಡಿದ್ದು ಒಂದೆರಡು ಕ್ಷಣಗಳು ಮಾತ್ರ. ಛೇ, ಕೊಡವಿಕೊಂಡು ಬಸ್ ಹಿಡಿಯಲು ಹೋದಳು. ಅಲ್ಲೂ ಕೂಡ ಅದೇ ಮುಖ. ಒಂದು ಸಲವಲ್ಲ. ಹಲವು ಬಾರಿ.. ನೂರಾರು ಸಲ ನೋಡಿದ್ದೇನೆನಿಸಿತು. ಎಲ್ಲಿ? ಬಹುಶಃ ಎಂದಾದರೂ ಅನಾಥಾಶ್ರಮದಲ್ಲಿ ನಡೆದ ಫಂಕ್ಷನ್‌ಗೆ ಬಂದಿರಬಹುದು. ಕೆಲವು ಗಣ್ಯ ವ್ಯಕ್ತಿಗಳು ಆಗಾಗ

ಬಂದು ಸಹಾನುಭೂತಿ ಸೂಚಿಸಿ ಕೊಡುಗೆಗಳನ್ನು ನೀಡಿದ್ದುಂಟು. ಮೊದ ಮೊದಲು ಏನು ಅನ್ನಿಸದಿದ್ದರೂ ಡಿಗ್ರಿ ಮುಗಿಸುವ ವೇಳೆಗೆ ಈ ಬೇಡಿಗಳಿಂದ ಕಳಚಿಕೊಳ್ಳಬೇಕೆಂದು ಅವಳ ಮನಸ್ಸು ಚೀರಾಡುತಿತ್ತು.

ಅಲ್ಲಿ ಕೂಡ ಸಾಕಷ್ಟು ಕೆಲಸವಿದ್ದರೂ ಸಂಬಳ ಅಂಥದೇನು ಇರಲಿಲ್ಲ. ಕೆಲವು ಹುಡುಗಿಯರು ಇಲ್ಲಿಂದ ಮದುವೆಯಾಗಿ ಹೋಗಿದ್ದಲ್ಲದೇ, ತರಕಾರಿ ತಂದು ಹಾಕುವ ಶಾಮ ಇವಳನ್ನು ಮೆಚ್ಚಿ ನೇರವಾಗಿ ಮದುವೆಯಾಗುವ ಇಚ್ಛೆ ವ್ಯಕ್ತಪಡಿಸಿ, ಇವಳು ಮುಖ ತಿರುಗಿಸಿದಾಗ ವಾರ್ಡನ್ ಮುಂದೆ ತನ್ನ ಬೇಡಿಕೆ ವ್ಯಕ್ತಪಡಿಸಿದ್ದ.

"ಒಳ್ಳೆ ಆದಾಯವಿದೆ. ಸ್ವಂತ ಮನೆಯಲ್ಲಿ ನಾನು, ನನ್ನ ತಾಯಿ ಇದ್ದೀವಿ. ಮಾಡ್ಕೊಡಿ. ಚೆನ್ನಾಗಿ ನೋಡ್ಕೋತೀನಿ" ಅವರುಗಳಿಗೆ ಒಪ್ಪಿಗೆಯೇ. 'ಓದಿದ ಹುಡ್ಗಿ-ಓದಿಲ್ಲದ ಶಾವು' ಅನಾಥಾಲಯುದಲ್ಲಿ ಬೆಳೆದ ಹುಡುಗಿಯರು ಕೆಲವು ವಿಷಯಗಳಲ್ಲಿ ರಾಜಿಯಾಗಬೇಕಿತ್ತು. ವಿಷಯ ಇವಳ ಮುಂದಕ್ಕೆ ಬಂದಾಗ ವಿನಮ್ರಳಾಗಿ ತಲೆಯಾಡಿಸಿದಳು "ಬೇಡ ಮೇಡಮ್, ನಂಗೆ ಮದ್ವೆ ಆಗೋ ಇಚ್ಛೆ ಇಲ್ಲ" 'ಅಹಂಕಾರ'ವೆಂದುಕೊಂಡರೂ ಹದಿನೆಂಟು ತುಂಬಿದ ಅವಳನ್ನು ಬಲವಂತ ಪಡಿಸುವಂತಿರಲಿಲ್ಲ. ಬುದ್ಧಿ ಹೇಳಿದರು. ಡೈರೆಕ್ಟರ್ ಮೀಟಿಂಗ್‌ನಲ್ಲೂ ವಿಷಯ ಬಂತು. 'ಜಪ್ಪಯ್ಯ' ಅನ್ನಲಿಲ್ಲ. ಕೆಲಸ ಸಿಕ್ಕ ಕೂಡಲೇ ಹೊರಕ್ಕೆ ಹಾರಿ ಬಂದಿದ್ದಳು.

ಆ ವ್ಯಕ್ತಿಯು ನೆನಪಿನ ಗೊಂದಲದಲ್ಲಿ ಇದ್ದ ಅವಳು ಎದುರಿನ ಹೋಟಲ್‌ಗೆ ಹೋಗಿ ಕಾಫೀಗೆ ಆರ್ಡರ್ ಮಾಡಿದರು. 'ಯಾರು ಆ ವ್ಯಕ್ತಿ?' ತೀರಾ ಹತ್ತಿರದ ವ್ಯಕ್ತಿ ಎನ್ನುವಂತೆ ಭಾಸವಾಗುವ ಮನುಷ್ಯನಾರು?.

"ಮೇಡಮ್.. ಕಾಫಿ..." ಎಂದ ಮಾಣಿ. ತಂದಿಟ್ಟ ಮೇಲೆ ಒಂದೆರಡು ಸಲ ಆ ಟೇಬಲ್ಲು ಬಳಿ ಓಡಾಡಿದವನು ಎಚ್ಚರಿಸಿದ "ಬಹುಶಃ ಕಾಫಿ ಆರಿಯೇ ಹೋಗಿದೆ. ಬೇರೆ ತಂದ್ಕೊಡ್ತೀನಿ" ಕಪ್‌ನ ಒಯ್ದ. ಇಷ್ಟೊಂದು ವಿಮನಸ್ಕತೆ-ಬೆಚ್ಚಿ ಬಿದ್ದಳು. ಮತ್ತೆ ಬಂದ ಕಾಫೀಯನ್ನು ಕುಡಿದು ಬಿಲ್ ತೆತ್ತು ಹೊರಗೆ ಬಂದಳು.

ಇವಳು ರೂಮಿಗೆ ಬರುವ ವೇಳೆಗೆ ವಾಸಂತಿ ಮಲಗಿದ್ದಳು. ಬೇಸರದಿಂದ "ಈ ಪತ್ರ ಓದಿ ಪೋಸ್ಟ್ ಮಾಡ್ಬಿಡು. ಇನ್ನೆರಡು ದಿನದಲ್ಲಿ ಲಗೇಜ್ ಕಟ್ಟಿಕೊಂಡು ಊರಿಗೆ ಹೋಗ್ಬಿಡ್ತೀನಿ" ಎಂದಳು, ದಿಂಬನ್ನೆತ್ತಿ ಇವಳ ಹಾಸಿಗೆಯ [illegible].

ಟೇಬಲ್ಲು ಮೇಲೆ ಕವರ್‌ನಲ್ಲಿ ಹಾಕಿಟ್ಟ ಪತ್ರವನ್ನು ತೆರೆದು ಓದಿದಳು. 'ದು'ಗನನ್ನು ಮದುವೆಯಾಗಲು ಸಮ್ಮತಿಸಿ, ಊರಿಗೆ ಹೋಗುತ್ತಿದ್ದೇನೆ. ನಾನು ಸೋತೆ' ಅಷ್ಟನ್ನೇ ಬರೆದಿದ್ದಿದ್ದು. ಎರಡೆರಡು ಸಲ ಓದಿ ಮಡಚಿ ಕವರಿಗೆ ಹಾಕಿದ ಅವಳ ಪಕ್ಕ ಕೂತಳು. "ಪೋಸ್ಟ್ ಮಾಡೋ ಅಗತ್ಯವೇನು? ನಾನು ಓದಿದ್ದು ಆಯಿತಲ್ಲ. ಇಷ್ಟು ಬೇಗ ನಿರಾಶಲಾದರೇ.. ಹೇಗೆ, ವಾಸಂತಿ? ಇಷ್ಟಕ್ಕೆ ಸೋಲೊಪ್ಪಿಕೊಳ್ಳವಳಾಗಿದ್ರೆ.. ಖಂಡಿತ ಇಲ್ಲಿವರ್ಗೂ ಬರ್ತಾ ಇರ್ಲಿಲ್ಲ. ಇನ್ನು ಎಷ್ಟೊಂದು ಕಡೆ ಅಪ್ಲಿಕೇಷನ್ ಹಾಕ್ಕೊಂಡಿದ್ದೀಯಾ! ಒಂದಲ್ಲ.. ಒಂದ್ಕಡೆ ಸಿಕ್ಕುತ್ತೆ" ಸಂತೈಯಿಸಿದಾಗ ಬಿಕ್ಕಿ ಬಿಕ್ಕಿ ಅಳುವುದರ ಜೊತೆಗೆ, ದುದ್ದನ ಮನೆಯವರಿಗೆ ಹಿಡಿ ಶಾಪ ಹಾಕಿದಳು.

ಇಬ್ಬರು ಮುಖ ತೊಳೆಯುವ ವೇಳೆಗೆ ಕಾಫೀ ಬಂತು. ಕುಡಿದು ಹಾಸ್ಟಲ್‌ನಿಂದ ಹೊರ ಬಂದರು. ಅಲ್ಲಿದ್ದವರೆಲ್ಲ ದುಡಿಯುವ ಮಹಿಳೆಯರೇ. ಕೆಲವರಿಗೆ ಮದುವೆಗಳು ಕೂಡ ಆಗಿದ್ದವು. ಈಗಿನ ದುಬಾರಿ ಜೀವನದಲ್ಲಿ ತಾವು ಕೆಲಸ ಬಿಟ್ಟು ಹೋಗಿ ಗಂಡನೊಡನೇ ನೆಲೆಸಲಾರದೆ, ಅವನನ್ನು ಮನೆ ಮಾಡಿ ಇಲ್ಲಿಗೆ ಕರೆಸಿಕೊಳ್ಳಲಾರದೆ ಅಸಹಾಯ ಸ್ಥಿತಿಯಲ್ಲಿ ದಿನಗಳನ್ನು ದೂಡುತ್ತಿದ್ದ ಹೆಣ್ಣುಗಳು, ಕೆಲವರು. ಈ ಸ್ಥಿತಿಯಿಂದ ಹೊರಗೆ ಉಳಿದಿದ್ದರೂ, ಒಂದು ಕೆಟ್ಟ ಹಟ. ಅವರನ್ನು ಇಲ್ಲಿ ಕಟ್ಟಿಹಾಕಿತ್ತು. ಸಂಬಳವೆಲ್ಲ ಖರ್ಚು ಮಾಡಿಕೊಂಡು ಸ್ವತಂತ್ರವಾಗಿದ್ದರು. ಮನೆಯವರು, ಗಂಡ ಎಂದರೇ ಮುಜುಗರ-ಅದಕ್ಕೆ ಹಲವು ಕಾರಣಗಳು ಇರಬಹುದು.

ವಿಜಯ ವುಮನ್ಸ್ ಹಾಸ್ಟಲ್‌ನಿಂದ ಹೊರ ಬಂದರು. ಆ ಹಾಸ್ಟಲ್ ಸಿಟಿಯ ಹೃದಯದ ಭಾಗದಲ್ಲಿತ್ತು. ಅಗಾಧವಾದ ಬಸ್ಸು ಸೌಕರ್ಯ. ಆದುದ್ದರಿಂದಲೇ ಅಲ್ಲಿ ರೂಮು ಸಿಗಲು ಕ್ಯೂನಲ್ಲಿ ನಿಲ್ಲಬೇಕಿತ್ತು.

"ಈಗ ಎಲ್ಲಿಗೆ ಹೋಗೋಣ?" ವಾಸಂತಿಯ ಪ್ರಶ್ನೆ.

"ಉಡುಪಿ ಹೋಟಲ್ ಮಸಾಲೆದೋಸೆ ತಿನ್ನಲು."

ಕಣ್ಮಣಿಯ ಉತ್ತರಕ್ಕೆ ಗಾಬರಿಯಾದಳು. ದುಂದು ಮಾಡುವಷ್ಟು ದೊಡ್ಡ ಸಂಬಳವೇನು ಅವರದಲ್ಲ. ಹೋಟೆಲ್‌ಗಳಿಗೆ ಹೋಗುತ್ತಿದ್ದುದ್ದೇ ಅಪರೂಪ. "ಏನು ವಿಶೇಷ?" ಕಣ್ಮಣಿ ಉತ್ತರಿಸದೇ ಮುಗುಳ್ನಕ್ಕಳು. "ಏನಿಲ್ಲ, ಸ್ಯಾಲರಿ ಡೇ ಅಲ್ವಾ! ಒಂದಿಷ್ಟು ದಿನಚರಿಯಲ್ಲಿ ಛೇಂಜ್

ಇರಲೀಂತ" ಅಷ್ಟೆ. ಅಂದಿದ್ದು ಅದಕ್ಕಿಂತ ತಾನು ನೋಡಿದ ವ್ಯಕ್ತಿಯ ಬಗ್ಗೆ ವಾಸಂತಿಗೆ ಹೇಳಬೇಕೆಂಬ ತವಕ. ಅದನ್ನು ರೂಮಿನಲ್ಲಿ ಕೂತು ಹೇಳುವ ಬದಲು ಬೇರೆ ಕಡೆ ಆರಾಮಾಗಿ ಕೂತು ತಿಂಡಿ ತಿನ್ನುತ್ತ ಹೇಳಬೇಕೆನಿಸಿತ್ತು.

ಆರಾಮಾಗಿ ಹೋಟಲ್‌ನಲ್ಲಿ ತಿಂಡಿ ತಿಂದರು. ಆ ನಡುವೆ ಎಷ್ಟೋ ಸಲ ಹೇಳಬೇಕೆಂದುಕೊಂಡರೂ ಕಣ್ಮಣಿಯಿಂದ ಹೇಳಲಾಗಲಿಲ್ಲ. ಹೇಗೆ ಷುರು ಮಾಡುವುದು? ಹೇಗೆ ಹೇಳಿದರೇ ತನ್ನ ಮನದ ಹೊಯ್ದಾಟ ಅವರಿಗೆ ಅರ್ಥವಾದೀತು-ಈ ಚಡಪಡಿಕೆಯಲ್ಲಿ ನಿಮಿಷಗಳು ಜಾರಿದ್ದವು.

ಕಣ್ಮಣಿಯೆ ಹೋಟಲ್‌ನ ಬಿಲ್ ತೆತ್ತು ಹೊರಗೆ ಬಂದವಳು "ಆ ಎದುರಿಗಿನ ಪಾರ್ಕ್‌ನಲ್ಲಿ ಸ್ವಲ್ಪ ಹೊತ್ತು ಕೂತುಕೊಳ್ಳೋಣ" ಸೂಚಿಸಿ, ಅತ್ತ ಹೆಜ್ಜೆ ಹಾಕಿದಾಗ ನಿಶ್ಶಬ್ದವನ್ನು ಆಶ್ರಯಿಸಿ ನಡೆದಳು ವಾಸಂತಿ. ಕೆಲಸಕ್ಕಾಗಿ ತಿರುಗಿ ತಿರುಗಿ ಸೋತುಹೋಗಿದ್ದ ಅವಳಿಗೆ ಕಟ್ಟ ಕಡೆಯದಾಗಿ ಊರಿಗೆ ಹಿಂದಿರುಗುವುದೊಂದೇ ದಾರಿಯೆನಿಸಿತ್ತು.

ಲೈಟುಗಳು ಹತ್ತಿಕೊಂಡವು. ಅದೊಂದು ಬಡಾವಣೆಯ ಚಿಕ್ಕ ಪಾರ್ಕ್. ಅದು ಅಲ್ಲಿನವರ ಉಪಯೋಗಕ್ಕಾಗಿಯೇ ಎನ್ನುವಂತೆ, ಸುತ್ತ ಮುತ್ತಲಿನ ಮನೆಯ ಮಕ್ಕಳು, ವಯಸ್ಸಾದವರು ಬಂದು ಕೂತಿರುತ್ತಿದ್ದರು. ಹಿರಿಯರು ತಮ್ಮ ಜೊತೆಯವರೊಡನೆ ನೆನಪುಗಳನ್ನು ಮೆಲಕು ಹಾಕಿದರೇ ಕಿರಿಯರು ಜಾರೆಬಂಡೆ, ಜೋಕಾಲಿ ಮುಂತಾದುವುದನ್ನು ಆಡುತ್ತ ನಲಿಯುತ್ತಿದ್ದರು. ಇವರಿಬ್ಬರು ಹೋಗಿ ಮೂಲೆಯ ಕಲ್ಲು ಬೆಂಚನ್ನು ಆಶ್ರಯಿಸಿದ್ದರು.

ಗೆಳತಿಯ ಕೈಯನ್ನು ತನ್ನ ಕೈಯೊಳಗೆ ತಗೊಂಡ ಕಣ್ಮಣಿ "ಈ ದಿನ ಬರೋವಾಗ ಕಾರಿನಲ್ಲಿ ಹೋಗುತ್ತಿದ್ದ ಒಬ್ಬ ವ್ಯಕ್ತಿಯನ್ನು ನೋಡಿದೆ". ಇವಳ ಮಾತಿಗೆ ಪಕ್ಕನೆ ನಕ್ಕುಬಿಟ್ಟಳು. ಕಣ್ಮಣಿ ಗಂಭೀರವಾದಾಗ ಕೆನ್ನೆಗೆ ಹಾಕಿಕೊಂಡು "ಸಾರಿ, ಈಗ್ಹೇಳು, ಯಾರು ಆ ವ್ಯಕ್ತಿ?" ಗೊತ್ತಿಲ್ಲವೆಂದು ತಲೆಯಾಡಿಸಿದಳು.

ವಾಸಂತಿಯ ಕೈ ಹಣೆಯ ಮೇಲೆ ಹೋಯಿತು. 'ಗೊತ್ತಿಲ್ಲದ' ವ್ಯಕ್ತಿಯ ಬಗ್ಗೆ ಇವಳ್ಯಾಕೆ ತಲೆ ಬಿಸಿ ಮಾಡಿಕೊಳ್ಳುತ್ತಾಳೆ? ಎಂದುಕೊಂಡರೂ ಬಾಯಿ ಬಿಟ್ಟು ಕೇಳಲಿಲ್ಲ.

"ಗೊತ್ತಿಲ್ಲವೆಂದರೂ ಆ ವ್ಯಕ್ತಿ ತೀರಾ ಪರಿಚಯದವ ಎನಿಸುತ್ತೆ. ಎಲ್ಲಿ ನೋಡಿದ್ದೀನಿ, ಎನ್ನುವುದು ನೆನಪಿಗೆ ಬರುತ್ತಾ ಇಲ್ಲ. ಅನಾಥಾಶ್ರಮಕ್ಕೆ ದೇಣಿಗೆ

ನೀಡಲು, ಸಮಾರಂಭಗಳಲ್ಲಿ ಭಾಗವಹಿಸಲು ದೊಡ್ಡ ದೊಡ್ಡ ವ್ಯಕ್ತಿಗಳು ಬರುತ್ತಿದ್ದುದ್ದುಂಟು. ಅವರಲ್ಲೊಬ್ಬರು ಅಂದುಕೊಳ್ಳೋಕೆ ಮನಸ್ಸು ಒಪ್ಪದು" ಬಹಳ ಕ್ಲಿಷ್ಟವಾದ ಸಮಸ್ಯೆಯ ಮಧ್ಯೆ ನರಳಿದಂತೆ ಉಸುರಿದಳು. ಗಾಬರಿಯಾದಳು ವಾಸಂತಿ.

"ನಂಗೆ ಅರ್ಥವಾಗಲಿಲ್ಲ" ಎಂದಳು ದನಿಯೇರಿಸಿ.

"ನಂಗೆ ಕೂಡ ಅರ್ಥವಾಗ್ಲಿಲ್ಲ, ಯಾರಿರಬಹುದ್ದು ಆ ವ್ಯಕ್ತಿ? ಅನಾಥಾಲಯದಲ್ಲಿ ಬೆಳ್ದ ನಂಗೆ ನಿನ್ನ ಬಿಟ್ಟರೇ ಆತ್ಮೀಯರೆಲ್ಲ ಅಲ್ಲಿನವರೇ, ಅಂಥದ್ದರಲ್ಲಿ ಈ ವ್ಯಕ್ತಿ ಯಾರು? ನೋಡಿದಾಗ್ನಿಂದ ಒಂದು ರೀತಿಯ ತಳಮಳ" ತೋಡಿಕೊಂಡಳು ಮನ ಬಿಚ್ಚಿ.

ಇಬ್ಬರು ಬಹಳ ಹೊತ್ತು ಮೌನವಾಗಿ ಕೂತರು. ಮಾತೇ ಇಲ್ಲವೆನಿಸಿತು. ಪಾರ್ಕ್‌ನಲ್ಲಿ ಒಬ್ಬೊಬ್ಬರಾಗಿ ಖಾಲಿಯಾಗತೊಡಗಿದಾಗ ಮೊದಲು ಕಣ್ಮಣಿ ಎದ್ದಳು. "ಹೋಗೋಣ, ನಿಧಾನವಾಗಿ ಜ್ಞಾಪಕಕ್ಕೆ ಬರಬಹುದೇನೋ", ಇಬ್ಬರು ಪಾರ್ಕ್‌ನಿಂದ ಹೊರ ಬಂದರು.

"ಆಟೋ ಬೇಡ, ನಡದೇ ಹೋಗೋಣ" ವಾಸಂತಿ ಸೂಚನೆಗೆ ಪ್ರತಿ ಹೇಳಲಿಲ್ಲ. ಸದ್ಯಕ್ಕೆ ಹೋದ ತಿಂಗಳು ಹಾಸ್ಟಲ್ ಫೀಜ್ ಕಣ್ಮಣಿಯೇ ಕೊಟ್ಟಿದ್ದಳು. ಈ ಸಲ ಕೂಡ ಇವಳೇ ಕೊಡಬೇಕಿತ್ತು. ಸೀರೆ ಕೊಳ್ಳಬೇಕೆಂದುಕೊಂಡ ಪ್ಲಾನ್‌ನ ಮುಂದಕ್ಕೆ ಹಾಕಿದಳು.

ಊಟ ಮುಗಿಸಿ ಮಲಗಿದರೂ ಆ ವ್ಯಕ್ತಿಯ ಮುಖವೇ ಅವಳನ್ನು ಕಾಡುತಿತ್ತು. ಆ ಮನುಷ್ಯನ ತುಟಿಯಂಚಿನಲ್ಲಿ ಕೂತಿದ್ದ ನಗು ಹೊಸದಲ್ಲ. ಆ ನಗುವಿನ ಛಾಯೆಯಲ್ಲಿ ಮಿಂದಿದ್ದೇನೆ. ಎಲ್ಲಿ? ಹೇಗೆ? ಇಡೀ ರಾತ್ರಿ ತಲೆಕೆಡಿಸಿಕೊಂಡರೂ 'ಕ್ಲೂ' ಕೂಡ ಸಿಕ್ಕಲಿಲ್ಲ. ಹದಿನೈದು ದಿನ ಕಳೆದರೂ ಆ ಹ್ಯಾಂಗೋವರ್‌ನಿಂದ ಹೊರ ಬರಲಿಲ್ಲ. ಮರೆಯುಬೇಕೆಂದು ಪ್ರಯತ್ನಿಸಿದಷ್ಟು ಕಾಡತೊಡಗಿತು. ಯಾವುದೇ ಕಾರು ಕಂಡರೂ ಅವಳ ನೋಟ ಅಲ್ಲಿ ಹುಡುಕಾಡುತ್ತಿತ್ತು. ನಸು ಕಂದು, ಗ್ರೇ ಕಲರ್‌ನ ಮಾರುತಿ ಜೇನ್‌ನಲ್ಲಿ ಕೂತ ವ್ಯಕ್ತಿ ಒಮ್ಮೆ ಹೊರಗೆ ಹೊರಳಿಸಿದ್ದ ನೋಟವನ್ನು ಸ್ಟೀರಿಂಗ್ ಹಿಡಿದು. ಅದು ಮಾಮೂಲಿ ನೋಟವಾದರೂ ಇವಳನ್ನು ಕಟ್ಟಿ ಹಾಕಿತ್ತು.

ಇನ್ನೊಮ್ಮೆ ಆ ವ್ಯಕ್ತಿ ಸಿಗಬಾರದೆ, ಎಂದು ಯೋಚಿಸುತ್ತಲೇ ನಿಮಿಷ, ಗಂಟೆ, ದಿನ, ವಾರಗಳನ್ನು ದೂಡಿದ್ದಳು. ಅದೇ ವ್ಯಕ್ತಿ ಸಿಟಿ ಬಸ್ಸಿನಲ್ಲಿ ಕೂತಿದ್ದಾಗ, ಒಂದು ದೊಡ್ಡ ಷಾಪಿಂಗ್ ಕಾಂಪ್ಲೆಕ್ಸ್‌ನಿಂದ ಇಳಿದು, ಅದರ

ಎದುರಿನಲ್ಲಿರುನಲ್ಲಿರುವ ನರೋನಾ ಷಾಪಿಂಗ್ ಕಾಂಪ್ಲೆಕ್ಸ್‌ನೊಳಕ್ಕೆ ಹೋದುದ್ದನ್ನು ಕಂಡ ಕೂಡಲೇ, ಅವಳೆದೆಯ ಬಡಿತ ಏರಿಬಿಟ್ಟಿತು. ರೆಡ್ ಸಿಗ್ನಲ್ ಲೈಟು ಹತ್ತಿಕೊಂಡು ಬಸ್ಸು ನಿಂತ ಕೂಡಲೇ ನಿಂತಿದ್ದ ಜನರನ್ನು ತಳ್ಳಿಕೊಂಡು ಹುಚ್ಚು ಹಿಡಿದವಳಂತೆ ಕಂಡಕ್ಟರ್ ಹೇಳುತ್ತಿದ್ದರೂ ಕಿವಿಯ ಮೇಲೆ ಹಾಕಿಕೊಳ್ಳದವಳಂತೆ ವಾಹನಗಳ ಮಧ್ಯೆ ಇಳಿದು ಆ ಕಡೆಗೆ ಹೋಗಿಯೇಬಿಟ್ಟಳು.

"ಗಾಳಿ ಹಂಗೆ ಹೋಗ್ಬಿಟ್ಲು" ಬಸ್ಸಿನಲ್ಲಿದ್ದ ಒಬ್ಬರ ಉವಾಚ "ಆಫೀಸ್‌ಗೆ ಹೋತ್ತಾಯಿತೇನೋ, ಅಲ್ಲಿ ಮೇಲ್ಪಟ್ಟವರಿಂದ ಬೈಸಿಕೊಳ್ಳಬೇಕಲ್ಲ. ಗಾಳಿ, ಬೆಳಕು ಸೋಕದಂತೆ ಹಿಂದೆ ಹೆಣ್ಣು ಮಕ್ಳು ಆರಾಮಾಗಿದ್ರು. ಈಗಿನ ಹಣೆ ಬರಹ ನೋಡಿ" ಒಬ್ಬ ಹಿರಿಯರು ಲಾಜಿಕ್‌ನೊಂದಿಗೆ ನುಡಿದರು. ಅವರವರ ಭಾವಕ್ಕೆ ತೋಚಿದಂತೆ ನುಡಿದರು. ಅಲ್ಲಿ ಸತ್ಯ ಗೋಚರಿಸದು, ಇದೇ ಸಮಾಜ!.

ಓಡುವ ನಡಿಗೆಯಲ್ಲಿ ನರೋನಾ ಕಾಂಪ್ಲೆಕ್ಸ್‌ನೊಳಕ್ಕೆ ನುಗ್ಗಿದಳು. ಬಿರುಗಳಿಯಲ್ಲಿ, ಅವಳ ಸ್ವಭಾವಕ್ಕೆ ವಿರುದ್ಧವಾದ ರೀತಿಯೇ ತೀರಾ ಶ್ರೀಮಂತ ಕಾಂಪ್ಲೆಕ್ಸ್. ಅವಳು ಒಮ್ಮೆ ಮಾತ್ರ ಬಂದಿದ್ದಳು ವಾರ್ಡನ್ ಜೊತೆ. ಎಲಿವೇಟರ್ ಮೇಲೆ ಕಾಲಿಟ್ಟಳು. ಅದು ಮೇಲೆರುವುದು ಕೂಡ ನಿಧಾನವೆನಿಸಿ ಅತ್ತಿತ್ತ ನೋಡಿದಳು, ಆ ವ್ಯಕ್ತಿ ಕಣ್ಣಿಗೆ ಬೀಳಬಹುದೆಂದು. ಇಡೀ ಕಾಂಪ್ಲೆಕ್ಸ್ ಪ್ರತ್ಯೇಕ ಪ್ರತ್ಯೇಕವಾಗಿ ವಿಂಗಡಿಸಿ ಮೆಟಲ್‌ನಿಂದ ಹಿಡಿದು ಹಾರ್ಡ್‌ವೇರ್‌ವರೆಗೂ, ಮೆಡಿಸಿನ್‌ನಿಂದ ಹಿಡಿದು ದಿನಸಿವರೆಗೂ ಸಿಗುತ್ತಿತ್ತು ವ್ಯವಸ್ಥಿತವಾಗಿ. ಕಾಂಡಿಮೆಂಟ್ಸ್ ಐಟಮ್‌ಗಳಿಗಂತು ತೀರಾ ಪ್ರಸಿದ್ಧಿ. ಪ್ರತಿಯೊಂದು ಕಡೆ ಜಾಲಾಡಿ ಜಾಲಾಡಿ ಸೋತು ಕಾರಿಡಾರ್‌ನಲ್ಲಿ ಹಾಕಿದ್ದ ಛೇರ್ ಮೇಲೆ ಕುಸಿದಂತೆ ಕೂತಳು. ಇಡೀ ವಾತಾವರಣದ ಟೆಂಪರೇಚರ್ ಏರಿ ಬಿಟ್ಟಿದೆಯೆನಿಸುವಂತೆ ಬೆವತ್ತಿದ್ದಳು.

"ವಾಟ್ ಯು ವಾಂಟ್, ಮಿಸ್" ಟೈ ಕಟ್ಟಿಕೊಂಡು ನೀಟಾಗಿ ಡ್ರೆಸ್ ಮಾಡಿಕೊಂಡು ಘಮ ಘಮಿಸುವಂತಿದ್ದ ಯುವಕ ಪ್ರಶ್ನಿಸಿದಾಗ, ಅವಳ ಮುಖ ಬಿಳಿಚಿಕೊಂಡರು "ಐಯಾಮ್ ವೆಯಿಟಿಂಗ್ ಫಾರ್ ಮೈ ಫ್ರೆಂಡ್. ಒಂದಿಷ್ಟು ಪರ್ಚೇಸ್ ಮಾಡೋದಿದೆ" ಎಂದಳು.

"ಓಕೇ ಮೇಡಮ್, ಥ್ಯಾಂಕ್ಯೂ" ಹೋದ ವಿನಮ್ರತೆಯಿಂದ.

ಆಕ್ವಗಾರ್ಡ್ ಅಳವಡಿಸಿದ್ದ ನಲ್ಲಿಯಿಂದ ನೀರು ಕುಡಿದು ನಿಧಾನವಾಗಿ ಅತ್ತಿತ್ತ ನೋಟವರಿಸುತ್ತ ಕಾಸ್ಮೆಟಿಕ್ಸ್ ಸೆಂಟರ್ ಕಡೆ ಹೋಗಿ ಕ್ರೀಮ್ ಮತ್ತು ಪೌಡರ್‌ಗೆ ಬಿಲ್ ಹಾಕಿಸಿ ಮತ್ತೆ ತನ್ನ ಅನ್ವೇಷಣೆ ಪ್ರಾರಂಭಿಸಿದಳು. ಮೆಡಿಕಲ್ ಸೆಂಟರ್‌ನಲ್ಲಿ ಅದೇ ವ್ಯಕ್ತಿ. ಮತ್ತೆ ಕಣ್ಣರಳಿಸಿದಳು. ಅದೇ ವ್ಯಕ್ತಿನೇ! ತಾನು ಪರದಾಡಿದ ವ್ಯಕ್ತಿ ಇದ್ದ! ಕಣ್ಣುಗಳು ಅಚಲವಾದವು. ನಿಂತಲ್ಲಿಯೇ ಗೊಂಬೆಯಾದಳು. ಚೇತರಿಸಿಕೊಳ್ಳುವ ಮುನ್ನ ಆ ವ್ಯಕ್ತಿ ಕಡೆ ಸಾಗಿ, ನೋಡು ನೋಡುತ್ತಿದ್ದಂತೆ ಕಣ್ಮರೆಯಾದ ಧಾವಿಸಿ ಕೆಳಗೆ ಬರುವ ವೇಳೆಗೆ ಅದೃಶ್ಯನಾಗಿದ್ದ. ಎಲ್ಲಿ ಹೋದ ಆ ವ್ಯಕ್ತಿ? ಅಲ್ಲೆಲ್ಲ ಕಣ್ಣರಳಿಸಿದವಳು, ಬಿಲ್ ಕೌಂಟರ್‌ನ ಬಳಿ ಇದ್ದ ಕ್ಯೂನಲ್ಲಿ ನಿಂತಳು. ಅವಳ ಪ್ಯಾಕೆಟ್ ಬಂದ ಕೂಡಲೇ ಹಣ ತೆತ್ತು ಹೊರಗೆ ಬಂದಳು. ಇಷ್ಟು ಕಾಸ್ಟ್ಲೀ ಕ್ರೀಮ್ ಪೌಡರ್ ಕೊಂಡಿದ್ದು ಇಂದೇ! ಬೇರೆ ಸಮಯದಲ್ಲಾಗಿದ್ದರೇ ಅವಳ ಕಣ್ಣಲ್ಲಿ ನೀರು ಕಾಣಿಸಿಕೊಳುತ್ತಿತ್ತು.

ಎಲ್ಲಿಯ ಸೆಳೆತ? ಯಾವುದು ಈ ಆಕರ್ಷಣೆ? ಎರಡೂವರೆ ಗಂಟೆ ಹೇಗೋ ಕಳೆದುಹೋಗಿದ್ದು ಅರಿವಿಗೆ ಬಂದಾಗ ಬೆಚ್ಚಿದಳು. ಸಮಯದ ಬೆಲೆ ಗೊತ್ತು. ಆ ಪತ್ರಿಕಾಲಯದಲ್ಲಿ ಎಲ್ಲಾ ಕೆಲಸ ಮಾಡಬೇಕಿತ್ತು. ಕೆಲವೊಮ್ಮೆ ಅಲ್ಲಿಗೂ ಇಲ್ಲಿಗೂ ಓಡಾಡಿಸಿ ಮಾಹಿತಿ ಸಂಗ್ರಹಣೆ ವಹಿಸಿದರೇ, ಕೆಲವೊಮ್ಮೆ ಸಬ್ಜೆಕ್ಟ್ ಮತ್ತು ಫೋಟೋಗಳು ಕೊಟ್ಟು ಲೇಖನ ಬರೆಸುತ್ತಿದ್ದರು. ಆದರೆ ಇವಳ ಹೆಸರಿನಲ್ಲಿ ಲೇಖನ ಪ್ರಕಟವಾಗುತ್ತಿರಲಿಲ್ಲ. ಅದೊಂದು ಚಿದಂಬರ ರಹಸ್ಯ.

ಒಂಬತ್ತೂವರೆ ವೇಳೆಗೆ ಆಫೀಸ್‌ನಲ್ಲಿ ಇರಬೇಕು. ಹತ್ತರ ಒಳಗೆ ಹೋದರೇ ಕಾರಣ ಕೊಡಬೇಕಿತ್ತು. ಹತ್ತರ ಮೇಲೆ ಹೋದರೇ ಸಹಿ ಹಾಕುವಂತಿರಲಿಲ್ಲ. ಇಂದು ಅರ್ಧ ದಿನವೇನು ಪೂರ್ತಿ ದಿನ ರಜವೇ. ಲೋಕಲ್ ಟೆಲಿಫೋನ್ ಬೂತ್‌ನಿಂದ ಮೊದಲು ಮ್ಯಾನೇಜರ್‌ನ ಸಂಪರ್ಕಿಸಿ, ನಂತರ ಎಡಿಟರ್‌ನ ರಿಕ್ವೆಸ್ಟ್ ಮಾಡಿಕೊಂಡಳು. ಇಂದು ಒಂದು ಭಯಂಕರ ಸುಳ್ಳು ಹೇಳಿದಳು.

"ಬರೋ ದಾರಿಯಲ್ಲಿ ಒಂದು ಸಣ್ಣ ಆಕ್ಸಿಡೆಂಟ್ ಕೈಗೆ, ತಲೆಗೆ ಪೆಟ್ಟು. ಎರಡು ದಿನ ರೆಸ್ಟ್ ಹೇಳಿದ್ದಾರೆ. ಇಲ್ಲೇ ನರ್ಸಿಂಗ್ ಹೋಂನಿಂದ ಮಾತಾಡ್ತಾ ಇದ್ದೀನಿ".

"ಚ್ಚೂ... ಚ್ಚೂ.. ಚ್ಚೂ.... ವೆರಿ ಬ್ಯಾಡ್ ರೋಡ್ಸ್. ಓವರ್ ಟ್ರಾಫಿಕ್.

ಇದೆಲ್ಲ ಯಾಕೆ ಗೊತ್ತಾಗೋಲ್ಲ, ಸಂಬಂಧಪಟ್ಟವರಿಗೆ". ಎಡಿಟರ್ ಮಿಡುಕಿದಾಗ ಅವಳಿಗೆ ಕಿಂಚಿತ್ ಧೈರ್ಯ ಬಂತು. "ನಾಳೆ ಬರ್ತೀನಿ, ಸರ್" ಫೋನಿಟ್ಟೇಬಿಟ್ಟಳು. ಅವರು ನರ್ಸಿಂಗ್ ಹೋಂ, ಆದ ಪೆಟ್ಟುಗಳು, ಆಕ್ಸಿಡೆಂಟಾದ ಜಾಗ ಮುಂತಾದ ವಿವರಗಳನ್ನು ಕೇಳಿದರೇ, ಅವಳೇನು ಹೇಳಬೇಕು?

ಹಾಸ್ಟಲ್‌ಗೆ ಹಿಂದಿರುಗಿದಾಗ ವಾರ್ಡನ್ ಕನ್ನಡಕ ಸರಿಪಡಿಸಿಕೊಂಡು ನೋಡಿದರು. "ಸ್ವಲ್ಪ ತಲೆ ನೋವಿತ್ತು. ಅರ್ಧ ದಿನ ರಜ ಹಾಕ್ಬಂದೇ" ಪ್ರಶ್ನಿಸುವ ಮುನ್ನವೇ ಹೇಳಿ ರೂಮಿಗೆ ಹೋದಳು. ಅರವತ್ತೈದು ಜನ ವರ್ಕಿಂಗ್ ಉಮೆನ್ಸ್ ಇರುವ ಹಾಸ್ಟಲ್ ಅದು. ಬೆಳಿಗ್ಗೆ ಗೂಡು ಬಿಟ್ಟರೇ ಸಂಜೆಯೇ ಹಕ್ಕಿಗಳಂತೆ ಮರಳುವುದು. ಬೆಳಿಗ್ಗೆ ಊಟ ಮಾಡುವವರಿಗೆ ಊಟ, ಒಯ್ಯಲು ತಿಂಡಿ ಡಬ್ಬಿ. ಕೆಲವರು ತಿಂಡಿ ತಿಂದು ಊಟದ ಡಬ್ಬಿ ಒಯ್ಯುತ್ತಿದ್ದರು. ಅಂತು ಅವರವರ ಅನುಕೂಲಗಳನ್ನು ಆಧರಿಸಿ ಊಟ, ತಿಂಡಿಗಳ ಸಪ್ಲೇ ಆಗುತ್ತಿತ್ತು.

ಬೀಗ ತೆಗೆದು ಒಳಿಗೆ ಹೋಗಿ ಬಾಗಿಲು ಹಾಕಿಕೊಂಡಳು. ತನಗೇನು ಹುಚ್ಚಿಡಿದಿದೆಯ? ಯಾರಾದರೂ ಕೇಳಿದರೆ ನಗಬಹುದು. ಇದೇನು ಭ್ರಮೆ? ಬೇಸರಗೊಂಡಳು ತನ್ನ ನಡತೆಯ ಬಗ್ಗೆ.

ಎರಡು ದಿನದಿಂದ ಒಂದು ಟೆಕ್ಸ್‌ಟೈಲ್‌ನಲ್ಲಿ ಸ್ವಾಗತಕಾರಿಣಿಯಾಗಿ ಕೆಲಸ ಮಾಡುತ್ತಿದ್ದ ವಾಸಂತಿ ಬರುವುದು ಎಂಟರ ಮೇಲೆಯೇ. ಎಂಟರ ಮೇಲೆ ಹತ್ತರ ಒಳಗೆ ಬರುವ ಎಲ್ಲರಿಗೂ ಬಿಸಿಯಾದ ಅಡಿಗೆ ಲಭ್ಯವಿತ್ತು. ಹತ್ತರ ನಂತರ ಮೈನ್‌ಗೇಟ್ ಮುಚ್ಚಿದರೆ, ಬೆಳಿಗ್ಗೆ ಆರಕ್ಕೆಯೇ ತೆರೆಯುವುದು. ಅಪರೂಪ ಸನ್ನಿವೇಶಗಳಲ್ಲಿ, ವಿಪರೀತ ಸಂದರ್ಭಗಳಲ್ಲಿ ಮಾತ್ರ ರೂಲ್ಸು ಅನ್ವಯವಾಗುತ್ತಿರಲಿಲ್ಲ.

ಎಂಟರ ಸುಮಾರಿಗೆ ಕೋಣೆಯಲ್ಲಿ ಮಿಣುಕಿದ ಮೇಡಮ್ ಗಿರಿಜ "ಊಟಕ್ಕೆ ಬನ್ನಿ" ಕರೆದಳು. ಇವಳು ಏನಾದರೂ ಹೇಳುವ ಮುನ್ನ ಒಳಗೆ ನುಗ್ಗಿದವಳು "ರೂಮ್‌ಮೇಟ್‌ಗಾಗಿ ಕಾಯ್ತ ಇದ್ದೀರಾ? ಯಾಕೆ ಮಂಕಾಗಿದ್ದೀರಾ? ಕೆಲ್ಸ ಜಾಸ್ತಿನಾ?" ಅವಳ ಎದುರಿಗೆ ಕೂತಳು.

ನಲವತ್ತು ಹತ್ತಿರದ ವಯಸ್ಸಿನ ಗಿರಿಜಾ ನಾಲ್ಕು ವರ್ಷದಿಂದ ಈ ಉಮನ್ಸ್ ಹಾಸ್ಟಲ್‌ನಲ್ಲಿದ್ದಳು. ದೂರದ ಊರಿನಲ್ಲಿ ಗಂಡ, ಮೂರು ಮಕ್ಕಳು ಇದ್ದರು. ಆಗಾಗ ಹೋಗಿ ಬರುವುದಿತ್ತು. ಅಪರೂಪಕ್ಕೊಮ್ಮೆ

ಗಂಡ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದ.

"ಏನಿಲ್ಲ, ಸ್ವಲ್ಪ ತಲೆ ನೋವಿತ್ತು. ರಜ ಹಾಕಿ ಬಂದೆ". ಇವಳ ಮಾತಿಗೆ ಗಿರಿಜ ನಿಟ್ಟುಸಿರು ಬಿಟ್ಟಳು. "ಇದು ಒಂದು ರೀತಿಯ ದುರಂತ ಅನ್ನಿಸುತ್ತೆ. ತಲೆ ನೋವು ಬಂದ ಸಮಯದಲ್ಲಿ ತೀರಾ ಸನ್ನಿಹದವರು, ಪ್ರೀತಿ ಪಾತ್ರರು ಹತ್ತಿರವಿದ್ದು ಪ್ರೇಮದಿಂದ ಮಾತಾಡಿಸಿ, ಮಾತ್ರೆ ಕೊಟ್ಟು ಮಾಡಿದ್ರೆ ಎಷ್ಟು ಚೆನ್ನಂತ ಅನ್ನಿಸುತ್ತೆ. ಅಮೃತಾಂಜನದ ಅಡ್ವರ್ಟೈಸ್‌ಮೆಂಟ್ ನಲ್ಲಿ ಒಂದು ಪುಟ್ಟ ಮಗು ತನ್ನ ತಾಯಿಯ ತಲೆ ನೋವಿಗೆ ಬಾಮ್ ಹಚ್ಚುತ್ತೆ. ಅದೆಷ್ಟು... ಚೆನ್ನ! ಊರು ಕಡೆ ಟ್ರಾನ್ಸ್‌ಫರ್ ಮಾಡ್ಸಿಕೊಂಡು ಬಿಡ್ಲಾಂತ ಅತ್ತಿದ್ದುಂಟು. ಆದರೆ ಬೇಡ ಅನ್ನಿಸುತ್ತೆ. ನನ್ನ ಗಂಡನಿಗೆ ನನ್ನ ಕಣ್ಣಿಂದ ಕಂಬನಿ ಹರಿಸೋದು ಗೊತ್ತುಂಟೇ ವಿನಃ ತೊಡೆದು ಅಭ್ಯಾಸವಿಲ್ಲ. ಎದುರಿಗಿದ್ದರೇ ಏನಾದರೂ ಅಂದು ಅಂದು ಪೂರೈಸಿಬಿಡ್ತಾರೆ. ನಾನು ಮಾಡೋದು ಅವ್ರಿಗೆ ಪ್ರತಿಯೊಂದು ತಪ್ಪಾಗಿ ಕಾಣುತ್ತೆ. ಬೈಗಳು.. ಬೈಗಳು.. ಯಾಕೆ? ದೂರ ಇರೋದೇ ಸರಿಯೆನ್ನಿಸುತ್ತೆ" ಹನಿಗಣ್ಣಾದಳು. ಅನಾಥಾಲಯದಲ್ಲಿ ಬೆಳೆದ ಅವಳು ಕೌಟುಂಬಿಕ ಸಮಸ್ಯೆಗಳನ್ನು ಓದಿಯೇ ತಿಳಿಯಬೇಕಿತ್ತು. ಯಾರಾದರೂ ಹೇಳಬೇಕು! ವಾಸಂತಿ ಊರಿಗೆ ಕರೆದೊಯ್ದಾಗ ಮಾತ್ರ ಪ್ರಾಕ್ಟಿಕಲ್ ಅನುಭವ.

ಗಿರಿಜ ಎಷ್ಟೋ ಹೇಳಿಕೊಂಡಳು. ಮಧ್ಯಮ ತರಗತಿಯ ಮನೆಯಲ್ಲಿ ಹುಟ್ಟಿ ಬೆಳೆದರೂ, ಅದಕ್ಕಿಂತ ಸ್ವಲ್ಪ ಹೆಚ್ಚಿನ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವವರ ಮನೆಯ ಸೊಸೆಯಾದ ಮೇಲೆ ತಾಪತ್ರಯಗಳ ಬೆಂಕಿ ಅವಳನ್ನು ತಾಕತೊಡಗಿದಾಗ, ಬಿ.ಎಸ್.ಸಿ., ಬಿ.ಎಡ್., ಅವಳ ನೆರವಿಗೆ ಬಂತು. ಆಗ ಅವಳ ತಂದೆಯೇ ಸಹಾಯ ಸಹಕಾರ ನೀಡಿದ್ದು. "ನಿಂಗೆ ತಾಪತ್ರಯಾ ಒಮ್ಮೆ ಹಣ ಕೊಟ್ಟರೇ ಕಡ್ಮೆ ಆಗೋಂಥದ್ದಲ್ಲ. ಕೆಲ್ಸಾಂತ ಒಂದು ಇದ್ರೆ... ನಿಂಗೆ ಅನ್ಕೂಲವಾಗುತ್ತೆ". ಮುಂದಾಲೋಚನೆಯಿಂದ ಅಂದಿದ್ದರು, ಅದು ನಿಜವೇ. ಆದರೆ ಅವಳು ಹೆಂಡತಿ, ತಾಯಿ, ಗೃಹಿಣಿ ಪಟ್ಟಕ್ಕಿಂತ ದುಡಿಯುವ ಕರ್ತೆಯಾದಳು. ಈಗ ಒಂಟಿ ಜೀವಕ್ಕೆ ಒಗ್ಗಿಕೊಂಡಿದ್ದಳು. ಅಪರೂಪಕ್ಕೆ ನಾಲ್ಕು ದಿನ ರಜ ಹಾಕಿ ಹೋದರೇ ಎರಡೇ ದಿನಕ್ಕೆ ಹಿಂದಿರುಗಿ ಬರುತ್ತಿದ್ದಳು.

ಎಲ್ಲಾ ಹೇಳಿಕೊಂಡ ಗಿರಿಜ ಮೇಲೆದ್ದು "ಬನ್ನಿ, ಹೋಗಿ ಊಟ ಮಾಡೋಣ. ಇಲ್ಲಿ ಎಲ್ಲರದು ಒಂದೊಂದು ಕಥೆ. ಬೇರೊಬ್ಬರ ಸಮಸ್ಯೆಗಳನ್ನು ಕೇಳಿ ನಾವೇ ಸುಖಿಗಳು ಅಂದ್ಕೋಬೇಕು". ಬಲವಂತ

ಮಾಡಿ ಕರೆದೊಯ್ಯುವ ವೇಳೆಗೆ, ಎದುರಾದ ವಾಸಂತಿ ಸುಸ್ತು ನಟಿಸಿ "ಕೊಲಿಗ್ ಬಲವಂತಕ್ಕೆ ತಿಂಡಿ ತಿಂದೆ. ನೀನು ಊಟ ಮಾಡ್ಕೊಂಡ್ಬಾ, ಬರೋವಾಗ ಒಂದ್ಲೋಟ ಮಜ್ಜಿಗೆ ತಂದ್ಬಿಡು". ಕೀ ಬಂಚ್‌ನ ಅವಳ ಕೈಯಲ್ಲಿಟ್ಟಳು ಕಣ್ಮಣಿ. ಊಟ, ತಿಂಡಿ ಹೋಗುವಾಗ ಪ್ರತಿಯೊಬ್ಬರು ಅವರವರ ರೂಂಗಳನ್ನು ಲಾಕ್ ಮಾಡಿಕೊಳ್ಳಬೇಕು. ಸಾಮಾನು ಸರಂಜಾಮು ಬಿಲ್ಡಿಂಗ್‌ದೊಳಗೆ ಅವರಿದ್ದೂ ಕಳುವಾದರೇ, ಮ್ಯಾನೇಜ್‌ಮೆಂಟ್‌ನವರು ಜವಾಬ್ದಾರರಲ್ಲ. ಅದೂ ಹೋಯಿತು, ಇದು ಹೋಯಿತು ಎಂದೂ ಯಾರಾದರೂ ಗೋಣಗಿದರು ಸಹಿಸರು.

ಇವಳ ಪಕ್ಕ ಕೂತ ಗಿರಿಜ ಗಂಡನ ನಡತೆ, ಕಟುಮಾತುಗಳ ಬಗ್ಗೆ ಹೇಳುತ್ತಲೇ ಅನ್ನದಲ್ಲಿ ಕಣ್ಣೀರು ಬೆರೆಸಿದಳು. ಕಣ್ಮಣಿಗೆ ಹೆಚ್ಚು ಊಟ ಮಾಡಲಾಗಲಿಲ್ಲ. ಅಷ್ಟರ ನಡುವೆಯೂ ಆ ವ್ಯಕ್ತಿ ಬಂದು ಕಾಡುತ್ತಿದ್ದ ತಲೆಯಲ್ಲಿ. ಮಜ್ಜಿಗೆ ಹಿಡಿದು ಬರುವ ವೇಳೆಗೆ ವಾಸಂತಿ ಮಲಗಿಬಿಟ್ಟಿದಳು ಬಳಲಿಕೆಯಿಂದ.

"ಮಜ್ಜಿಗೆ.... ತಗೋ. ಯಾಕೆ ಇಷ್ಟೊಂದು ಸುಸ್ತಾಗಿದ್ದೀಯಾ? ಅದೇನು ಅಂಥ ತಲೆನೋವಿನ ಕೆಲ್ಸವಲ್ಲವಲ್ಲ" ಎನ್ನುತ್ತ ಕಣ್ಮಣಿ ಅವಳ ಬದಿಯಲ್ಲಿ ಕೂತಳು. ತಟ್ಟನೇ ಎದ್ದ ವಾಸಂತಿ "ನಂಗೂ ಹಾಗೇ ಅನ್ನಿಸ್ತು. ಬರೋ ಚಿತ್ರ ವಿಚಿತ್ರ ಜನ, ಅವರು ಕೇಳೋ ವಿಪರೀತ ಪ್ರಶ್ನೆಗಳು ಇಷ್ಟರ ನಡುವೆ ಮುಖದ ಮೇಕಪ್ ಕೆಡಬಾರದು. ಬೇಜಾರು ಸುಳಿಯಬಾರ್ದು. ಕೆಲವೊಮ್ಮೆ ಓವರ್ ಆ್ಯಕ್ಟಿಂಗ್ ಅನ್ನಿಸಿ ನನಗೆ ಬೇಜಾರಾಗಿ ಬಿಡುತ್ತೆ" ಎಂದು ಹಣೆಯೊತ್ತಿಕೊಂಡು ನಿಧಾನವಾಗಿ ಮಜ್ಜಿಗೆಯನ್ನು ಗುಟುಕರಿಸಿದಳು.

"ಹೋಗ್ಲಿ, ಈ ಕೆಲ್ಸ ... ಬಿಟ್ಬಿಡು. ಬೇರೆ ನೋಡೋಣ" ಕಣ್ಮಣಿಯ ಮಾತಿಗೆ ಬೆಚ್ಚಿಬಿದ್ದಳು. "ಬೇರೆ ಕೆಲ್ಸನಾ! ಸದ್ಯಕ್ಕೆ ಅಂಥ ಛಾಲೆಂಜ್ ತಗೊಳ್ಳೋ ಸ್ಥಿಯಲ್ಲಿಲ್ಲ. ದುದ್ದನ ಹೆಂಡ್ತಿಯಾಗಿರೋಕ್ಕಿಂತ... ಇದು ಮೇಲೇ!" ಮಜ್ಜಿಗೆ ಲೋಟವನ್ನು ಅವಳ ಕೈಗಿತ್ತು ಉರುಳಿಕೊಂಡಳು. ಕಣ್ಣು ರೆಪ್ಪೆಗಳು ಮುಚ್ಚಿಕೊಂಡವು ನಿಧಾನವಾಗಿ.

ತನ್ನ ಮನಸ್ಸಿನ ಗೊಂದಲದಿಂದ ವಿಮುಕ್ತಿಗೊಳ್ಳಬೇಕಾದರೇ ವಾಸಂತಿಯ ಮುಂದಾದರೂ ಏನಾದರೂ ಹೇಳಿಕೊಳ್ಳಬೇಕಿತ್ತು. "ಆ ವ್ಯಕ್ತಿನ ಮತ್ತೆ ನೋಡ್ದೆ" ಎಂದ ಕೂಡಲೇ ಷಾಕ್ ತಟ್ಟಿದಂತೆ ಎದ್ದಳು. "ಅದೇ, ಅದೇ... ಅಂದರೇ ನಿನ್ನ ಕಾಡುತ್ತಿರುವ ಮನುಷ್ಯ! ಪೂರ್ತಿ ಮರೆಯೋಕೆ ಮುನ್ನ

ಮತ್ತೆ ಕಣ್ಣಿಗೆ ಬೀಳಬೇಕಾ?" ಆತಂಕವಿತ್ತು ವಾಸಂತಿಯ ಮುಖದ ಮೇಲೆ. ಕಣ್ಮಣಿಯ ಸ್ವಭಾವ ಬಲ್ಲ ಅವಳಿಗೆ ಇದು ವಿಪರೀತವೆನಿಸಿತು.

ಇಂದು ನಡೆದದ್ದೆಲ್ಲ ವಿವರಿಸಿದಾಗ ವಾಸಂತಿ ರೆಪ್ಪೆಗಳು ಅಚಲಗೊಂಡವು. ತುಟಿ ಕೂಡ ಅಲುಗಲಿಲ್ಲ. ಸ್ತಬ್ಧ ಚಿತ್ರವಾದಳು ಕೆಲವು ಕ್ಷಣಗಳು. ಭಯ ಆವರಿಸಿತು. ನಿಧಾನವಾಗಿ, ತಕ್ಷಣ ಕಣ್ಮಣಿಯ ಎರಡು ಕೈಗಳನ್ನು ಹಿಡಿದುಕೊಂಡಳು ಮೃದುವಾಗಿ ಕಂಪಿಸುತ್ತ.

"ನಂಗ್ಯಾಕೋ, ಭಯ ಕಣೇ! ಅದಷ್ಟು ಜನರಿಂದ ದೂರವಿರಲು ಬಯಸುವ ನಿಂಗೇನಾಗಿದೆ. ನೋಡಿದ ಕೂಡಲೇ ಬಸ್ಸು ಇಳಿದು ಓಡುವಂಥ ಬಂಧುತ್ವನಾ? ಅವನೆಲ್ಲೋ ಮಾಟಗಾರ ಇರ್ಬೇಕು. ನಿಂಗೇನೋ ಮಾಡ್ಸಿದ್ದಾನೆ" ಎಂದಳು.

ಅವಳ ಅಭಿಪ್ರಾಯ ಸರಿಯೆನಿಸಲಿಲ್ಲ ಕಣ್ಮಣಿಗೆ.

"ಇಲ್ಲ, ಆ ತರಹ ಕಾಣೋಲ್ಲ, ಮಾಂತ್ರಿಕನ ಲಕ್ಷಣಗಳೇನು? ವಿಭೂತಿ, ಜಟೆ, ರುಮಾಲು, ಗಡ್ಡ, ಕಾಷಾಯ ಅಂಥದೇನಿಲ್ಲ. ನವೀನ ಮಾದರಿಯ ಅತ್ಯಂತ ಬೆಲೆ ಬಾಳುವ ಸೂಟು ಧರಿಸಿರುವ ಆ ವ್ಯಕ್ತಿ ದೊಡ್ಡ ಆಫೀಸರ್ ಅಥವಾ ಶ್ರೀಮಂತ ಇಂಡಸ್ಟ್ರಿಯಲಿಸ್ಟ್ ತರಹ ಕಾಣಿಸ್ತಾನೆ".

ಕಣ್ಮಣಿಯ ವಿವರಣೆಗೆ ತಲೆಯ ಮೇಲೆ ಕೈಯೊತ್ತು ಕೂತುಬಿಟ್ಟಳು. ಇದು ಯಾವ ರೀತಿಯ ಸಮಸ್ಯೆ? ಹೇಗೆ ಪರಿಹರಿಸುವುದು?.

"ನಿನ್ನ ಮನಸ್ಸನ್ನು ನೀನು ಅಧೀನದಲ್ಲಿ ಇಟ್ಕೋ ಇಲ್ಲ, ಇನ್ನೊಮ್ಮೆ ಭೇಟಿಯಾದರೇ ಧೈರ್ಯರಾಗಿ ವಿಚಾರ್ಸು, ಅವನೇನಾದ್ರೂ ರಕ್ತ ಸಂಬಂಧದ ಪಳೆಯುಳಿಕೆಯೇನೋ!" ಎಂದವಳು ಬಿದ್ದುಕೊಂಡಳು. ಅವಳ ಪ್ರಕಾರ ಪರಿಚಿತನಲ್ಲ! ರಕ್ತ ಸಂಬಂಧದ ಪಳೆಯುಳಿಕೆ! ಒಂದು ಕ್ಲೂ ಸಿಕ್ಕಿದಂತಾಯಿತು. ತನ್ನ ಹುಟ್ಟಿನ ಬಗ್ಗೆ ಅವಳಿಗೇನು ಗೊತ್ತಿಲ್ಲ. ಆಸ್ಪತ್ರೆಯಲ್ಲಿ ಬಿಟ್ಟು ಹೋದ ಮಗು ಅನಾಥಾಶ್ರಮದಲ್ಲಿ ಬೆಳೆದು ಕಣ್ಮಣಿಯಾಗಿದ್ದಳು.

ಅದೇ ಗುಂಗಿನಲ್ಲಿ ಮಲಗಿದಳು. ಅವಳಿಗೂ ತನ್ನ ಹೆತ್ತವರನ್ನು ಬಂಧು ಬಳಗದವರನ್ನು ನೋಡುವ ಅಪೇಕ್ಷೆ ಇತ್ತು. ಬಹುಶಃ ಈ ಜನ್ಮಕ್ಕೆ ಪೂರೈಯಿಸದು. ಆಸ್ಪತ್ರೆಯಲ್ಲಿ ಹೆತ್ತುಬಿಟ್ಟು ಹೋದಾಕೆ ಸುಳ್ಳು ವಿಳಾಸ ಬರೆಸಿದ್ದರಿಂದ ಯಾವುದೇ ಮಾಹಿತಿ ಲಭ್ಯವಿಲ್ಲ. ಅಂಥ ಆಸೆ ಎಷ್ಟು ಪ್ರಬಲವಾಗಿ ಬಿಡುತ್ತಿತ್ತೆಂದರೇ, ಸಿಕ್ಕಿದ ಜನರನ್ನು ರೆಟ್ಟೆ ಹಿಡಿದು ನಿಲ್ಲಿಸಿ ತನ್ನ ಮಾತಾಪಿತೃಗಳನ್ನು ಹುಡುಕಬೇಕೆನಿಸುತಿತ್ತು.

ದಿನಗಳು ಕಳೆದರೂ ಆ ವ್ಯಕ್ತಿಯ ನೆನಪು ಮಾಸದಾಯಿತು. ಮನಸ್ಸು ಅರಸುತಿತ್ತು. ಹೃದಯ ಮೌನವಾಗಿ ಶೋಧಿಸುತಿತ್ತು. ಈ ಮಧ್ಯೆ ಗೋಪಾಲ್ ಬಂದು ಇಳಿದ. ಯಾವುದೋ ಲೇಖನ ರೆಡಿ ಮಾಡುತ್ತಿದ್ದವಳಿಗೆ ಆಫೀಸ್ ಬಾಯ್ ಬಂದು ವಿಷಯ ಮುಟ್ಟಿಸಿದ.

"ನಿಮ್ಮನ್ನ ಹುಡ್ಕಿಕೊಂಡು ಯಾರೋ ಬಂದಿದ್ದಾರೆ."

"ಇದ್ನ ಮುಗ್ಸಿ.. ಬಂದ್ಬಿಡ್ತೀನಿ, ಕೂತುಕೊಳ್ಳೋಕೆ ಹೇಳು" ಅವನನ್ನು ಪುಸಲಾಯಿಸಿ ಅಟ್ಟಿ, ಲೇಖನ ಪೂರ್ತಿ ಮಾಡಿ ಸಹಾಯಕ ಸಂಪಾದಕನ ಮುಂದಿಟ್ಟಾಗ, ಏನೋ ಓದುತ್ತಿದ್ದವರು ಇತ್ತ ಗಮನ ಹರಿಸಲೇ ಇಲ್ಲ. "ಸರ್... ಸರ್..." ಎಂದಾಗ ಮೆಲ್ಲನೆ ತಲೆಯೆತ್ತಿದ್ದವರು ಮುಖ ಗಂಟಿಕ್ಕಿದರು. "ಹ್ಯಾವ್ ಪೇಷನ್ಸ್, ಈಗಿನ ಯುವ ಜನಾಂಗಕ್ಕೆ ತಾಳ್ಮೆ ಅನ್ನೋದೇ ಇಲ್ಲ. ಯಿಲ್ ಮ್ಯಾನರ್ಡ್" ಅವರ ಬೈಗಳಿಗೆ ಬೆಪ್ಪಾದಳು. ಇವರು ಬಂದ ಮೇಲೆ ಬೈಗಳು ಸಾಧಾರಣವಾಗಿಹೋಗಿತ್ತು. 'ಯಿಲ್ ಮ್ಯಾನರ್ಡ್' ಅನ್ನೋಷ್ಟು ಅಪರಾಧ ತಾನೇನು ಮಾಡಿದ್ದು? 'ಸಾರಿ' ಕೇಳಬೇಕೆನಿಸಲಿಲ್ಲ, ನಿಂತೇ ಇದ್ದಳು.

ತಂದಿಟ್ಟ ಮ್ಯಾಟರ್‌ನ ಮೇಲೆ ಕಣ್ಣಾಡಿಸಿದ ಸಹಾಯಕ ಸಂಪಾದಕರು "ಡ್ಯಾಮ್ ಇಟ್, ವಾಟ್ ಈಸ್ ದಿಸ್?" ಅಷ್ಟು ದೂರಕ್ಕೆ ಎಸೆದೇ ಬಿಟ್ಟರು.

ಇವರು ಬಂದಾಗಿನಿಂದ ಸಾಕಷ್ಟು ತಾಳ್ಮೆವಹಿಸಿದ್ದಳು. ಬರೀ ಪ್ರತಿಷ್ಠೆಯ ಮನುಷ್ಯ. ಆ ವ್ಯಕ್ತಿಗೆ ತನ್ನ ಪ್ರತಿಷ್ಠೆ ಮಾತ್ರ ಮುಖ್ಯ. ಮಿಕ್ಕದೆಲ್ಲ ಗೌಣ. ಯಾವುದೋ ಫರ್ಮ್‌ನಲ್ಲಿ ಜನರಲ್ ಮ್ಯಾನೇಜರ್ ಆಗಿದ್ದವ ಅಲ್ಲಿ ಮಾತ್ರವಲ್ಲ, ಮನೆಯಲ್ಲಿ ಕೂಡ ಕಿರಿಕಿರಿ ತಾಳಲಾರದೆ, ಕಡೆಗೆ ಅವರ ಬೀಗರು ತಂದು ಇಲ್ಲಿ ಪ್ರತಿಷ್ಠಾಪಿಸಿದ್ದು ಇಲ್ಲಿನವರ ದುರಾದೃಷ್ಟ.

ಪೇಪರ್‌ಗಳನ್ನು ಆಯ್ದುಕೊಂಡಳು ಬಗ್ಗಿ. ಬೇರೆಯವರ ಬಳಿ ಸ್ವಲ್ಪ ಸ್ಮೂತ್ತಾಗಿ ವರ್ತಿಸುವ ಮನುಷ್ಯ ಇವಳ ಬಗ್ಗೆ ಬಹಳ ಒರಟಾಗಿ ನಡೆದುಕೊಳ್ಳುತ್ತಿದ್ದ. ಅದಕ್ಕೆ ಕಾರಣ ಹಿಂದು ಮುಂದು ಇಲ್ಲದ 'ಅನಾಥೆ'. ಅನಾಥಾಶ್ರಮದಲ್ಲಿ ಬೆಳೆದವಳು. ಇಷ್ಟು ಸಾಕಾಗಿತ್ತು, ಇವಳನ್ನು ಕೀಳಾಗಿ ಕಾಣಲು.

"ಇನ್ನು ಹತ್ತು ನಿಮಿಷದಲ್ಲಿ ರೆಡಿ ಮಾಡ್ಕೊಂಡ್ಬಾ" ಆಜ್ಞಾಪಿಸಿದರು. ಅವಳು 'ಹಾ' 'ಹ್ಞೂ' ಎನ್ನಲ್ಲಿಲ್ಲ. ಇವಳು ಹೊರ ಬರುವ ವೇಳೆಗೆ ಆಫೀಸ್

ಬಾಯ್ ದ್ವಾರಕಿ ಬಂದವನೇ "ಯಾರೋ, ಗೋಪಾಲ್ ಅಂತೇ.... ಮೇಡಮ್" ಎಂದ. ಅವಳಿಗೆ ಆಕಾಶದಲ್ಲಿ ಹಾರಾಡುವಂತಾಯಿತು. ಸ್ನೇಹದಿಂದ, ಸಲಿಗೆಯಿಂದ ನಡೆದುಕೊಂಡಿದ್ದ ಗೋಪಾಲ್‌ನ ಮರೆಯುವಂತಿರಲಿಲ್ಲ. "ಏನ್ಮಾಡ್ಗೋದು, ಈ ಲೇಖನ ಈಗ್ಲೇ ರೆಡಿ ಮಾಡ್ಕೊಂಡ್ಬಾ ಅಂದಿದ್ದಾರೆ" ತೋಡಿಕೊಂಡಳು.

"ನನ್ನ ಕೈಯಲ್ಲಿ ಕೊಡಿ. ರೆಡಿಯಾಗಿದೇಂತ ಟೇಬಲ್ ಮೇಲೆ ಇಡ್ತೀನಿ. ನಾನು ಎಷ್ಟೋ ಜನನಾ ನೋಡಿದ್ದೀನಿ. ಈ ಮನುಷ್ಯ ನಂಗೆ ಯಾವ ಲೆಕ್ಕ? ಮ್ಯಾನೇಜ್ ಮಾಡ್ಕೋತೀನಿ. ನೀವ್ಹೋಗಿ...." ಎಂದವನೇ ಆ ಲೇಖನ ಇಸಿಕೊಂಡು ಇನ್ನೊಂದು ಕಡೆ ಹೋದ.

ಅವನೊಬ್ಬ ಪವರ್‌ಫುಲ್ ಹುಡುಗನೇ. ಕೆಲವರ ಲೂಪ್ ಹೋಲ್‌ಗಳ ತಿಳಿದ ದ್ವಾರಕಿ ಅಂಗೈನಲ್ಲಿ ಆಟವಾಡಿಸುತ್ತಿದ್ದ. ಯಜಮಾನರ ಹೆಂಡತಿಯ ಮನೆಯ ಕಡೆಯವನು. ಅದೊಂದು ಪ್ರತಿಷ್ಠೆ ಅವನಿಗೆ. ಕೆಲವೊಮ್ಮೆ ಅವನ ಮಾತಿಗೆ ಎದುರೇ ಇಲ್ಲದಂತಾದ ಪ್ರಸಂಗಗಳು ಕೂಡ ಇದೆ.

ಅರ್ಧ ದಿನದ ಲೀವ್ ಲೆಟರ್ ಬರೆದು ಮ್ಯಾನೇಜರ್ ಮುಂದಿಟ್ಟು ಸರಸರನೇ ಹೊರ ಬರುವ ವೇಳೆಗೆ, ಹಾಲು ನಗೆಯ ಗೋಪಾಲ್ ನಿಂತಿದ್ದ. "ಸದ್ಯ, ಹೊರ್ಗಡೆ ... ಬಂದ್ರಲ್ಲ. ನೂರೆಂಟು ಪ್ರಶ್ನೆಗಳು. ಅದ್ಕೆ, ಇಲ್ಲಿ ನಿಂತೆ. ಚೆನ್ನಾಗಿದೇರಿ, ನಿಮ್ಮ ಆಫೀಸು!" ಎಂದ ಅತ್ತ ನೋಟ ಹರಿಸುತ್ತ ಕೈಯಲ್ಲೊಂದು ಚೀಲವಿತ್ತು.

ನಾಲ್ಕು ಹೆಜ್ಜೆ ಅವನತ್ತ ಬಂದು "ಯಾವಾಗ್ಬಂದಿದ್ದು? ಪತ್ರದಲ್ಲಿ ನೀವು ಬರೋಂಥ ವಿಷ್ಯವೇನಾದ್ರೂ ಇದ್ದಿದ್ರೆ, ಹೇಳ್ತಾ ಇದ್ಲು ವಾಸಂತಿ. ದಿಢೀರ್ ರಂಗ ಪ್ರವೇಶ ಮಾಡಿದಂತಿದೆ" ಎಂದಳು.

"ಕಣ್ಮಣಿ, ಈಗ ಮೊದ್ಲು ಊಟ ಮಾಡ್ಬೇಕು. ತಿಂಡಿ ಅಮ್ಮ ಕಳ್ಸಿದ್ದಾಳೆ. ಊಟ ಮಾಡೋಕೆ ಒಂದು ಪ್ರಶಾಂತ ಜಾಗ ಹುಡ್ಕಿ ಕೊಟ್ರೆ ... ಸಾಕು. ಇಲ್ದಿದ್ರೆ ಎದುರಿಗಿರೋ ನಿಮ್ಮನ್ನೆ ತಿಂದುಬಿಡ್ಬೇಕಾಗುತ್ತೆ."

ಹತ್ತಿರದಲ್ಲಿಯೇ ಇರುವ ಪಾರ್ಕ್‌ಗೆ ಹೋಗಿ ನೆರಳು ಇರೋ ಕಡೆ ಕೂತರು. ಬ್ಯಾಗ್‌ನಲ್ಲಿದ್ದುದ್ದನ್ನು ಒಂದೊಂದಾಗಿ ತೆಗೆದಿಟ್ಟ, ಒಂದು ಬಾಟಲು ನೀರು ಕೂಡ ಇತ್ತು.

"ಇದೇನು ಮಿನರಲ್ ವಾಟರ್ ಅಲ್ಲ. ಮಲೆನಾಡಿನ ಶುಭ್ರ ತಿಳಿನೀರು. ಹೇಗಿದೆ, ಅಂತೀರಾ? ನಿಮ್ಮ ಎಳನೀರು ಕೂಡ ಈ ರುಚಿ ಬರೋಲ್ಲ. ಕೈ

ತೊಳ್ದು ಬರ್ತೀನಿ" ಎದ್ದು ಹೋದ. ವಾಚಾಳಿ ನಲ್ಲಿಯುನೇನು ಹುಡುಕಿಕೊಂಡು ಹೋಗಲಿಲ್ಲ. ತಿಂಡಿ ತಿನ್ನುತ್ತಿದ್ ಒಂದು ಪುಟ್ಟ ಸಂಸಾರದವರಿಂದ ನೀರು ಕೇಳಿ ಪಡೆದು ಕೈ ತೊಳೆದು, ಅವಳಿಗೂ ಒಂದು ಬಾಟಲು ನೀರು ಕೇಳಿ ಪಡೆದು ಬಂದು ಕೂತ. "ಇದೇನು, ಗೊಂಬೆ ತರಹ ಕೂತಿದ್ದೀರಾ? ಏನೇನು ಇದೇಂಥ ಕೂಡ ತೆಗ್ದು ನೋಡಿಲ್ಲ. ನಾನಾಗಿದ್ರೆ, ಅರ್ಧ ಮುಗ್ಸಿ ಬಿಡ್ತಾ ಇದ್ದೆ. ನೀವು ..... ನೀನು, ಯಾವುದಾದ್ರಾಗ್ಲೀ... ಕೈ ತೊಳ್ಕೋ" ಬುತ್ತಿಗಳನ್ನು ಬಿಚ್ಚತೊಡಗಿದ "ನಂದೂ.. ಆಯ್ತು.." ಎಂದಳು.

"ಹೋಗಿ ಕೈ ತೊಳೀರಿ. ಆಮೇಲೆ ತಿನ್ನೋದು ಬಿಡೋದು ಯೋಚ್ಸೋಣ" ತಾನೇ ನೀರಿನ ಬಾಟಲು ಬಿರಡೆ ಬಿಚ್ಚಿ ಕೊಟ್ಟ. ಅವನ ಸ್ವಭಾವ ಬಲ್ಲ ಕಣ್ಮಣಿ ಮರುಮಾತಾಡಲಿಲ್ಲ.

ನವಿರಾದ ಬಾಳೆಎಲೆಗಳಲ್ಲಿ ಸುತ್ತಿ ಪ್ಯಾಕ್ ಮಾಡಿದ ಅಕ್ಕಿ ರೊಟ್ಟಿ, ಕಾಯಿ ಚಟ್ನಿ, ಪಲ್ಯಗಳನ್ನು ಎರಡು ಎಲೆಗಳಿಗೂ ಸಮಾನಾಂತರವಾಗಿ ಹಾಕಿ, ಬಾಯಿ ಮೇಲೆ ಬೆರಳಿಟ್ಟು ಮಾತಾಡಬೇಡವೆನ್ನುವಂತೆ ಸನ್ನೆ ಮಾಡಿದ. ಅವನು ಭೋಜನ ಪ್ರಿಯ. ಇದನ್ನು ಅವನ ಅತ್ತಿಗೆಯವರು ದಯಪಾಲಿಸಿದ್ದರು. ಸಂತೋಷದಿಂದ ಸ್ವೀಕರಿಸಿದ್ದ.

"ತಗೊಳ್ಳಿ, ಇದೇನು ಹೆಚ್ಚಿಲ್ಲ. ಆಮೇಲೆ ಬಲವಂತ ಮಾಡೋಕೆ ಏನು ಉಳಿದಿರೋಲ್ಲ. ಇಷ್ಟು ರುಚಿಯಾದುದ್ದು ಇಲ್ಲೆಲ್ಲಿ ಸಿಗುತ್ತೆ? ಹೆಚ್ಚು ಹೇಳ್ಸಿಕೊಳ್ಳದೇ ತಿನ್ನಿ" ಎಂದವ ತಿನ್ನಲು ಷುರು ಮಾಡಿದ.

ಹದವಾದ ಅಕ್ಕಿ ರೊಟ್ಟಿಗೆ ಬೆಣ್ಣೆ ಸವರಿದ್ದರಿಂದ ಬಾಯಿಗೆ ಇಟ್ಟ ಕೂಡಲೇ ಬ್ರಹ್ಮಾಂಡ ರುಚಿ. ಯಾವ ಸಂಕೋಚ ಕಾಡಲ್ಲಿಲ್ಲ. ತಿನ್ನುವ ಮಧ್ಯೆ ಇವಳಿಗೆ ಮಾತಿಗೆ ಅವಕಾಶ ಕೊಡದಂತೆ ತಾನೇ ಅಲ್ಲಿನ ವಿಷಯವನ್ನೆಲ್ಲ ಹೇಳಿಕೊಂಡ. ಉಳಿದಿದ್ದನ್ನೆಲ್ಲ ತಾನೇ ಹಾಕಿಕೊಂಡ. ಊರಿನಿಂದ ತಂದ ನೀರನ್ನು ಮುಕ್ಕಾಲು ತಾನು ಕುಡಿದು ಉಳಿದಿದ್ದನ್ನು ಅವಳಿಗೆ ಕೊಟ್ಟ.

"ನೀವು ತಿಂದಿದ್ದಕ್ಕೆ, ಈ ನೀರು ಸಾಕು" ಮೇಲೆದ್ದ ನೇರ ಮಾತಿನ ಗೋಪಾಲನಲ್ಲಿ ಕಲ್ಮಶವಿಲ್ಲವೆನಿಸಿತು. ಮಿಕ್ಕ ಒಂದೆರಡು ಪೊಟ್ಟಣಗಳನ್ನ ನೋಡಿದಳು. ಅದು ವಾಸಂತಿಗಾಗಿ ಕಳಿಸಿದ ತಿಂಡಿಗಳು ಇರಬಹುದೆನಿಸಿತು.

ಹಿಂದಕ್ಕೆ ಬಂದ ಗೋಪಾಲ ಅವನ್ನೆಲ್ಲ ಬ್ಯಾಗಿಗೆ ಸೇರಿಸಿದ. "ನಿಮ್ಮ ಗೆಳತಿ ಕೆಲ್ಸ ಮಾಡೋ ಟೆಕ್ಸ್‌ಟೈಲ್ ಬಳಿ ಹೋಗಿದ್ದೆ. ಮಧ್ಯಾಹ್ನದ ವೇಳೆಯು

ಎಂಥ ಭಯಂಕರ ರಷ್. ಯಾವುದಾದ್ರೂ ಹೊಸ ಟೋಪಿ ಸ್ಕೀಮ್ ಷುರು ಮಾಡಿರಬಹುದ್ದು. ಹೆಂಗೆಳೆಯರ ಸಮೂಹ. ಎದ್ದೆನೋ, ಬಿದ್ದೆನೋ ಎಂದು ಬಂದು ಸೇರಿದ್ರು. ಅಲ್ಲಿ ನಾನೊಬ್ಬ ಗಿರಾಕಿಯಾಗಿ ಹೋಗ್ಬೇಕಿತ್ತು. ಕೊಳ್ಳೋಷ್ಟು ಜೇಬು ಭರ್ತಿ ಆಗಿರ್ಲಿಲ್ಲ. ಸೀರೆ, ಬಟ್ಟೆ ಅಂಥ ಆಯ್ಕೆಯೇನು ಗೊತ್ತಿಲ್ಲ. ಇನ್ನು ವಾಸಂತಿನ ಹುಡ್ಕಿಕೊಂಡ್ಹೋದ್ರೆ, ಕ್ಯಾಷ್ ಕೌಂಟರ್‌ನಲ್ಲಿರೋ ಯಜಮಾನ ಮುಖ ಕೆಂಪಗೆ ಮಾಡ್ಕೋಬಹುದ್ದು. ಅದ್ಕೆ ನಿನ್ನ ನೋಡೋಕ್ಬಂದೆ" ಸರಳವಾಗಿ ಬಿಡಿಸಿಟ್ಟ. ಎಗ್ಗಿಲ್ಲದೇ ಮಾತಾಡುವ ಅವನ ವೈಖರಿಗೆ ಶಭಾಷ್ ಎಂದು ಹೇಳಬೇಕೆನಿಸಿತು.

"ಯಾವಾಗ ವಾಸಂತಿ ಹಿಂದಿರುಗೋದು?" ಕೇಳಿದ ಕೂದಲನ್ನು ಸರಿ ಮಾಡಿಕೊಳ್ಳುತ್ತ "ಹಾಸ್ಟಲ್ ತಲುಪೋ ವೇಳೆಗೆ ಎಂಟಾಗುತ್ತೆ. ಮಧ್ಯಾಹ್ನ ಲಂಚ್ ಬ್ರೇಕ್ ಇದೆ" ಎಂದವಳು ಗಡಿಯಾರ ನೋಡಿ ತಲೆ ಅಲ್ಲಾಡಿಸಿದಳು. "ಅದು ಮುಗ್ದುಹೋಗಿದೆ. ರಾತ್ರಿವರ್ಗೂ ಕಾಯ್ಬೇಕು. ಅಥ್ವಾ ನೀವು ಬಂದಿದ್ದ ಸುದ್ದಿಯನ್ನು ತಿಳಿಸೋಣ. ಅಕಸ್ಮಾತ್ ಪರ್ಮಿಷನ್ ಪಡಕೊಂಡ್... ಬರ್ಬಹುದ್ದು". ಅವಳ ಸಲಹೆಗೆ ಒಪ್ಪಿಗೆ ಸೂಚಿಸಿದ.

ಪಬ್ಲಿಕ್ ಬೂತ್‌ನಿಂದ ಒಂದಲ್ಲ, ನಾಲ್ಕು ಸಲ ಪ್ರಯತ್ನಿಸಿದರೂ ಎಂಗೇಜ್ ಶಬ್ದ. ಕಡೆಗೆ ಇನ್ನೊಂದು ಕಡೆ ಪ್ರಯತ್ನಿಸಿದಾಗ ಲೈನ್ ಸಿಕ್ಕಿತು.

"ಹಲೋ....." ಎಂದರು.

"ಸೇಲ್ಸ್ ಗರ್ಲ್ ವಾಸಂತಿ ಹತ್ರ ಮಾತಾಡ್ಬೇಕಿತ್ತಲ್ಲ" ಎಂದ ಕೂಡಲೇ "ಇಲ್ಲಿ ಕೆಲ್ಸ ಮಾಡೋ ಜನಕ್ಕೆ ಫೋನ್‌ನ ಸೌಲಭ್ಯವಿಲ್ಲ" ಅಚ್ಚ ಕನ್ನಡದಲ್ಲಿ ಹೇಳಿ ಕುಕ್ಕಿ ಫೋನಿಟ್ಟ. ತಣ್ಣಗೆ ಫೋನಿಟ್ಟು ಬೂತ್‌ನಿಂದ ಹೊರ ಬಂದವಳು "ಫೋನ್ ಹತ್ರ ಕರ್ಯೋಕೆ ಒಪ್ಪಲಿಲ್ಲ" 'ದಟ್ಸ್ ಆಲ್....' ಎನ್ನುವಂತೆ ನೋಡಿದ.

ವರ್ಕಿಂಗ್ ವುಮನ್ಸ್ ಹಾಸ್ಟಲ್‌ನಲ್ಲಿ ಪುರುಷರ ಪ್ರವೇಶವಿಲ್ಲ, ವಿಪರೀತ ಶಿಸ್ತು. ಆದ್ದರಿಂದ ಗೋಪಾಲನ ಕರೆದೊಯ್ಯುವಂತಿರಲಿಲ್ಲ.

"ಒಂದ್ಕೆಲ್ಸ ಮಾಡು, ಕಣ್ಮಣಿ! ಈ ಸುತ್ತಾಟದಿಂದ ತಲೆನೋವು ಬರುತ್ತೆ. ನಮ್ಮ ಕಡೆಯವನೊಬ್ಬ ಅಂಗ್ಡಿ ಇಟ್ಕೊಂಡಿದ್ದಾನೆ. ಅಲ್ಲಿ ಸಮಯ ಕಳ್ದು, ರಾತ್ರಿ ಎಂಟಕ್ಕೆ ನಿಮ್ಮ ಹಾಸ್ಟಲ್ ಹತ್ರ ಬರ್ತೀನಿ". ಹೇಳಿದ ಬೇಸರದ ಮುಖದಿಂದ.

"ನಮ್ಮ ಹಾಸ್ಟಲ್ ಹತ್ರ ಒಂದು ಲಾಡ್ಜಿಂಗ್ ಇದೆ. ಅಲ್ಲಿ ಉಳ್ದುಕೊಳ್ಳಿ.

ಒಂದಿಷ್ಟು ರೆಸ್ಟು ಕೂಡ ಸಿಗುತ್ತೆ. ಅಕಸ್ಮಾತ್ ವಾಸಂತಿ ಬೇಗ್ಬಂದ್ರೆ.... ನಾವೇ ಬರ್ಬಹುದು" ಎಂದಳು.

ಇದು ಅವನಿಗೂ ಸರಿಯೆನಿಸಿತು. ಇಬ್ಬರು ಆಟೋ ಹತ್ತಿ ಲಾಡ್ಜ್ ಮುಂದೆ ಇಳಿದಾಗ, ಗೋಪಾಲ "ನೀವು ಹಾಸ್ಪಲ್‌ಗೆ ಹೋಗಿ. ಹೇಗೂ ಫೋನಿರುತ್ತೆ. ನಾನೇ ನಂಬರ್ ತಿಳಿಸ್ತೀನಿ" ಅವಳನ್ನು ಕಳುಹಿಸಿ ಕೊಟ್ಟ. ಪದೇ ಪದೇ ಅಮ್ಮ ಆಡುವ ಮಾತುಗಳು ಅವನ ನೆನಪಿನಲ್ಲಿತ್ತು. 'ಪ್ರತಿಯೊಬ್ರು ತಮ್ಮ ಮಗನಿಗೆ ಒಳ್ಳೆ ಸಂಬಂಧದಲ್ಲಿ ಹೆಣ್ಣು ತಂದ್ಕೋಬೇಕೂಂತ ಇರ್ತಾರೆ. ನಾವು ಸಾಕಿರ್ಬಹುದು, ಆದರೆ ನಾವೇ ಅಪ್ಪ, ಅಮ್ಮ ಅಲ್ಲವಲ್ಲ. ಅದ್ಕೇ ವಾಸಂತಿ ಮದ್ವೆ ಕಷ್ಟ ಅಂದ್ಕೊಂಡೇ. ಅವ್ಳು ಕೆಲ್ಸ... ಕೆಲ್ಸಾಂತ ಹಟ ಮಾಡ್ಕೊಂಡ್ ಊರು ಬಿಟ್ಲು. ಇಲ್ಲೇ ಇದ್ದಿದ್ರೆ... ಒಂದಿಷ್ಟು ಗಲಾಟೆ ಮಾಡಿಯಾದ್ರೂ, ನಿಂಗೆ ಮಾಡ್ಕೊಂಡ್‌ಬಿಡ್ತಾ ಇದ್ದೆ'. ನಕ್ಕುಬಿಟ್ಟಿದ್ದ. "ಕರುಣೆ ಮತ್ತು ನಿನ್ನ ಹಟಕ್ಕೆ ವಾಸಂತಿ ಜೊತೆ ಸಂಸಾರ ಮಾಡೋಕ್ಕಾಗುತ್ತ! ನಂಗೂ ನೆಟ್ಟಗೆ ಏನೂ ಮಾಡೋಕೆ ಬರೋಲ್ಲ. ಸ್ವಂತ ಸಂಪಾದ್ನೆ ಇಲ್ಲ. ಇಬ್ರೂ ಮನೆಗೆ ದಂಡ ಪಿಂಡಗಳಾಗ್ಬಿಟ್ರೆ, ಈ ಮನೆಯ ಶಾಂತಿಯನ್ನು ದೇವರೇ ರಕ್ಷಿಸ್ಬೇಕು. ನಿಂಗಿರೋ ಪ್ರೀತಿ, ಕರುಣೆ, ಆತಂಕದಿಂದ್ಲೇ ನಾಮ್ಬಿಬ್ರ ಮದ್ವೆ ಮಾಡೋಕ್ಕಾಗುತ್ತ" ಹಾಸ್ಯ ಮಾಡಿದ್ದ. ಹಾಗೆಂದು ವಾಸಂತಿಯ ಬಗ್ಗೆ ಅವನ ಮನದ ಭಾವನೆಗಳು ಮೃದುವಲ್ಲವೆಂದು ಹೇಳಲಾಗದು.

ಐದರ ಅಂಚಿಗೆ ಬಂದಳು ವಾಸಂತಿ.

"ಮೈ ಗಾಡ್, ಒಂದ್ನಿಮ್ಷ ಅತ್ತಿತ್ತ ನೋಡೋಕ್ಕಾಗೋಲ್ಲ ಅಷ್ಟೊಂದು ಬಿಜಿ! ಈ ನ್ಯೂ ಸ್ಕೀಮ್‌ಗೆ ಹೇಗೆ ಮುಗಿ ಬಿದ್ದಿದ್ದಾರೆ ಗೊತ್ತ? ನೀನು ಎಲ್ಲಾದ್ರೂ ಇದ್ದಿಯೇನೋಂತ ನೋಡ್ದೆ" ಮಂಚದ ಮೇಲೆ ಕುಕ್ಕರಿಸಿ, ನವೀನ ಮಾದರಿಯಲ್ಲಿ ಎತ್ತಿ ಕಟ್ಟಿ ಕ್ಲಿಪ್ ಹಾಕಿದ ಕೂದಲನ್ನು ಸ್ವತಂತ್ರವಾಗಿಸಿ "ಮುಖ ತೊಳ್ದು ಬಂದ್ಬಿಡ್ತೀನಿ" ಎನ್ನುವ ವೇಳೆಗೆ ಬಾಟಲಿನಲಿದ್ದ ನೀರನ್ನು ಗ್ಲಾಸ್‌ಗೆ ಬಗ್ಗಿಸಿ ಅವಳ ಮುಂದಿಡಿದಳು. ಗಟಗಟನೆ ಕುಡಿದು ಭಾರವಾದ ಉಸಿರು ದಬ್ಬಿದಾಗ "ಊರಿಂದ ಗೋಪಾಲ ಬಂದಿದ್ದಾರೆ. ಈಗ ತಾನೇ, ಫೋನ್ ಮಾಡಿ ಲಾಡ್ಜ್‌ನ ನಂಬರ್ ಕೊಟ್ರು. ನೀನ್ಬಂದಿರೋ ವಿಷ್ಯ ತಿಳ್ಸಿ ಬರ್ತೀನಿ, ಇರು" ಹೊರಟವಳ ರೆಟ್ಟೆಯನ್ನು ಹಿಡಿದ ವಾಸಂತಿ ಕಣ್ಣರಳಿಸಿ "ನಿಜ್ವಾಗ್ಲೂನಾ? ಅದೇನಮ್ಮ ಅಂಥ ಅಪರೂಪ? ದುದ್ದನ ಕೇಸೇನೋ!

ನಾನಂತು ಅವ್ನ ಮದ್ವೆ ಆಗೋದೇನು, ಆ ಕಡೆ ತಲೆನೇ ಹಾಕೋಲ್ಲ. ಅತ್ತಿತ್ತ ತಿರುಗೋಕೆ ಪುರಸತ್ತಿಲ್ಲದಿದ್ರೂ... ಒಳ್ಳೆ ಸಂಬಳ! ನಂಗೆ ಮದ್ವೆಯ ತಂಟೆಯೇ ಬೇಡ" ಎಂದಳು.

ರೆಟ್ಟೆಯನ್ನು ಬಿಡಿಸಿಕೊಂಡ ಕಣ್ಮಣಿ "ಆಮೇಲೆ ಮಾತಾಡ್ಬಹುದು. ಒಂದಿಷ್ಟು ಮುಖ ಗಲಬರಿಸ್ಕೊಂಡ್ ರೆಡಿಯಾಗು" ಫೋನ್ ಮಾಡಲು ಹೋದಳು.

ಐದೇ ನಿಮಿಷದಲ್ಲಿ ವಾಸಂತಿ ರೆಡಿಯಾದಳು. ಕಣ್ಮಣಿ ಸಿದ್ಧವಾಗಿಯೇ ಇದ್ದುದ್ದರಿಂದ ಲಾಡ್ಜ್ ಬಳಿಗೆ ಹೋಗುವ ವೇಳೆಗೆ ಗೋಪಾಲ ಹಸನ್ಮುಖನಾಗಿ ಹೊರಗೆ ನಿಂತಿದ್ದ. ಮಲೆನಾಡಿದ ಸೊಬಗನ್ನು ಮೈವೆತ್ತ ಗಂಡು. ಮಾತು ಎಷ್ಟು ನೇರ, ಎಷ್ಟು ಚುರುಕೋ ಕಣ್ಣು ಕೂಡ ಅಷ್ಟು ಸೂಕ್ಷ್ಮ.

"ಬಹಳ ಬಿಜಿಯಾಗಿ ಕಾಣಿಸ್ತೀಯಾ" ಹುಬ್ಬೆತ್ತಿ ಕೇಳಿದ. ವಾಸಂತಿ ನಿಟ್ಟುಸಿರು ದಬ್ಬಿದಳು "ಹೌದು, ಸಂಬಳಕ್ಕೆ ಸರ್ಯಾದ ಕೆಲ್ಸ. ನಾನು ಅಲ್ಲೇ ಅತ್ತೆ ನೆಂಟರ ಫರ್ಮ್‌ನಲ್ಲೇ ಕೆಲ್ಸ ಮಾಡ್ಕೊಂಡ್ ಇದ್ದಿದ್ರೆ, ಇಷ್ಟು ಪಗಾರ ನೋಡೋಕೆ ಇನ್ನ ಮೂರ್ವರ್ಷನಾದ್ರೂ ಬೇಕಿತ್ತು". ಕಹಿ ಕಕ್ಕಿದಾಗ, ಜೋರಾಗಿ ನಕ್ಕುಬಿಟ್ಟ "ಆ ಆಫೀಸ್‌ನಲ್ಲಿ ಕ್ಲರ್ಕ್ ಆಗಿ ಕೆಲ್ಸ ಮಾಡ್ತಾ ಇದ್ದೆ. ಅಲ್ಲಿ ನಿಂಗೊಂದು ಕುರ್ಚಿ, ಟೇಬಲ್ ಇತ್ತು. ಆದರೆ ನಂದಿತಾ ಟೆಕ್ಸ್‌ಟೈಲ್ಸ್ ವಿಷ್ಯವೇ ಬೇರೆ. ಇಲ್ಲಿಗೆ ಕೆಲವು ಸ್ಪೆಷಲ್ ಕ್ವಾಲಿಫಿಕೇಷನ್ ಬೇಕಾಗುತ್ತೆ. ಅದು ನಿಂಗಿದೆ ಬಿಡು" ಎಂದ. ಒಂದರ್ಥದಲ್ಲಿ ಅವಳ ಚೆಲುವನ್ನು ಹೊಗಳಿದ್ದರಿಂದ ರೋಮಾಂಚಿತಳಾದಳು ವಾಸಂತಿ. ಕೆಂಪು ಕೆಂಪಗಾದ ಮುಖವನ್ನು ನೋಡಿ ದುದ್ದನನ್ನು ನೆನಪು ಮಾಡಿಕೊಂಡ.

"ಹೀಗೇ, ರೋಡಿನಲ್ಲಿ ನಿಲ್ಬೋದ್ಬೇಡ, ಆರಾಮಾಗಿ ಯಾವುದಾದ್ರೂ ಗಾರ್ಡನ್ ರೆಸ್ಟೋರೆಂಟ್‌ಗೆ ಹೋಗಿ ತಿಂಡಿ ತಿಂತಾ ಮಾತು ಷುರು ಮಾಡೋಣ. ಊಟದ ಸಮಯುದವರೆಗೂ, ನಂತರ ಊಟ, ಮಾತು" ಎಂದ ನಗೆಯ ಅಲೆಯನ್ನೆಬ್ಬಿಸುತ್ತ.

ಮೂವರು ನಡೆದೇ ಸ್ವಲ್ಪ ದೂರದ ಗಾರ್ಡನ್ ರೆಸ್ಟೋರೆಂಟ್‌ಗೆ ಹೋದರು. ಮಂಗಳೂರು ಬಜ್ಜಿ, ಟೊಮಾಟೋ ಆಮ್ಲೆಟ್‌ಗೆ ಆರ್ಡರ್ ಮಾಡಿ ಕೈ ತೊಳೆದು ಬಂದು ಕೂತರು.

"ಹೇಗಿದ್ದೀಯಾ ವಾಸಂತಿ?" ಈಗ ಕೇಳಿದ ಕ್ಷೇಮ ಸಮಾಚಾರ. ಮುಖ ದಪ್ಪಗೆ ಮಾಡಿದಳು. "ಹೋಗೋವಾಗ ವಿಚಾರ್ಸಬಹುದಿತ್ತಲ್ಲ?"

"ಹಾಗೂ ಮಾಡಬಹುದಿತ್ತು. ಸ್ವಲ್ಪ ಬೇಗ್ನೆ ಅಂದರೆ ಬೆಳಿಗ್ಗೆ ನಾನು ಹೋಗೋ ಮುನ್ನ ಸಿಕ್ಕರೇ ಕೇಳಬಹುದಿತ್ತು. ಚೆನ್ನಾಗಿಯೇ ಕಾಣ್ತೇಯಾ! ಆದ್ರೂ, ಅಮ್ಮ ಕೇಳ್ದಾಗ... ನಿನ್ನ ಮಾತ್ನ ಹೇಳ್ಬೇಕಲ್ಲ. ಯಾಕೆ ಅಲ್ಲಿ ಕೆಲ್ಸ ಬಿಟ್ಟಿದ್ದು?" ಉದ್ದ ತೋಳಿನ ಷರಟನ್ನು ಮಡಚುತ್ತ ಅವಳನ್ನು ನೋಡಿದ.

"ಅವ್ರೇ ಮನೆಗೆ ಕಳ್ಸಿದ್ರು. ನಂಗೂ ಸಾಕಾಗಿತ್ತು, ಎಷ್ಟೊಂದು ಕಿರಿಕಿರಿ ಷುರು ಮಾಡಿದ್ರೂಂದ್ರೆ, ನಾನು ಕೆಲ್ಸ ಬಿಟ್ಟು ಊರಿಗೆ ಬರ್ಬೇಕಿತ್ತು. ಅದು ಅವ್ರ ಉದ್ದೇಶವಾಗಿತ್ತು. ಆದರೆ, ಕಣ್ಮಣಿ ಇದ್ಲು. ನನ್ನ ಎಲ್ಲಾ ಖರ್ಚು ವೆಚ್ಚಗಳ್ನ ಅವ್ಳೇ ನೋಡ್ಕೊಂಡ್ಲು" ಕೃತಜ್ಞತೆಯಿಂದ ಗದ್ಗದವಾಯಿತು ಅವಳ ಕಂಠ.

ಕಣ್ಮಣಿಗೆ ಮುಜುಗರವಾಯಿತು. ಅದನ್ನು ಅವಳ ಮುಖ ಸ್ಪಷ್ಟವಾಗಿ ವ್ಯಕ್ತಪಡಿಸಿತು ಕೂಡ. ಅಷ್ಟರಲ್ಲಿ ತಿಂಡಿಗಳ ತಟ್ಟೆಗಳು ಬಂದಿದ್ದರಿಂದ, ಗೋಪಾಲ ಆ ಕಡೆ ಗಮನ ಕೊಟ್ಟ. ಅದು ಊರಿನ ಬಸ್‌ಸ್ಟಾಂಡ್‌ನಲ್ಲಿ ನಡೆದ ಪ್ರಸಂಗವನ್ನು ನೆನಪು ಮಾಡಿಕೊಂಡು ಮೂವರು ನಕ್ಕರು.

"ಆರು ಪ್ಲೇಟ್ ಇಡ್ಲಿ, ಆರು ಪ್ಲೇಟ್ ಪೂರಿ, ಸಾಗು, ಆರು ಕಪ್ ಕಾಫೀ, ಅರ್ಧ ಕೆ.ಜಿ. ಖಾರ, ಇಪ್ಪತ್ತೈದು ನಿಪ್ಪಟ್ಟು, ಇಪ್ಪತ್ತೈದು ಕಜ್ಜಾಯ, ಹನ್ನೆರಡು ಕೊಡುಬಳೆ, ನಾಲ್ಕು ಗ್ಲೂಕೋಸ್ ಬಿಸ್ಕತ್ ಪ್ಯಾಕೆಟ್ - ಟೋಟಲೀ ಇಷ್ಟು ದೊಡ್ಡ ಲಾಸ್ ಆ ಶೆಟ್ಟರಿಗೆ. ದಾರಿಯುದ್ದಕ್ಕೂ ಹೆಂಡತಿನ ಗಂಡ ಬೈಯೋದು, ಗಂಡನ್ನ ಹೆಂಡ್ತಿ ಬೈಯೋದು. ಕಳೆದುಕೊಂಡ ದುಡ್ಡಿಗಾಗಿ ಎದೆ ಬಡಿದುಕೊಳ್ಳುತ್ತ ಮಕ್ಕಳಿಗೆ ಚಚ್ಚೋದು, ಅವು ಬೊಮ್ಮಡಿ ಬಜಾಯಿಸೋದು. ಬಸ್ಸಿನ ಜನಕ್ಕೆ ಪುಕ್ಕಟೆ ಮನರಂಜನೆಯ ಜೊತೆ ಕಿರಿಕಿರಿ". ಗೋಪಾಲ ಸೀನ್‌ಗಳನ್ನು ಕ್ರಿಯೇಟ್ ಮಾಡಿ ಅವರುಗಳ ಮುಂದಿಟ್ಟು ನಗಿಸಿದ.

ತಿಂಡಿ ಬಹಳ ನಿಧಾನವಾಗಿಯೇ ತಿಂದಿದ್ದರು. ಮಧ್ಯೆ ಆ ಮಾಣಿಯನ್ನು ಕರೆದು ಗೋಪಾಲ "ನಿಂಗೆ ಸಿನಿಮಾದಲ್ಲಿ ಪಾರ್ಟ್ ಮಾಡೋ ಆಸೆ ಇದ್ಯಾ?" ಕೇಳಿದ. ಅವನ ಮುಖದಲ್ಲಿ ಬೆಳದಿಂಗಳು ತೇಲಿತು. ಇನ್ನಷ್ಟು ಪಕ್ಕಕ್ಕೆ ಸರಿದು ಅತ್ತಿತ್ತ ನೋಡಿ "ಹೌದು, ನಿಮಗ್ಯಾಗೆ ಗೋತ್ತಾಯ್ತು, ಸರ್, ನಾನು ಇಲ್ಲಿಗೆ ಬಂದಿದ್ದೇ ಆ ಉದ್ದೇಶ ಇಟ್ಕೊಂಡ್. ಹೊಟ್ಟೆ ಪಾಡಿಗಾಗಿ ಕೆಲ್ಸ ಮಾಡೋ ಹಣೆ ಬರಹ ನಂಗೇನಿರಲ್ಲಿಲ್ಲ. ವಂಶ ಪರಂಪರೆಯಾಗಿ ನಮ್ದು ಚಿನ್ನ, ಬೆಳ್ಳಿ ವ್ಯಾಪಾರ. ನಿಮ್ಗೆ ಯಾರಾದ್ರೂ ಡೈರೆಕ್ಟರ್ ಗೊತ್ತಿದ್ದಾರ,

ಸರ್?" ರಿಕ್ವೆಸ್ಟ್ ಮಾಡಿಕೊಂಡ. ತಕ್ಷಣ ಅವನ ಭುಜದ ಮೇಲೆ ಕೈ ಹಾಕಿ ಕರೆದೊಯ್ದು ಗೋಪಾಲ ಹತ್ತು ನಿಮಿಷದ ಮೇಲೆ ಬಂದ. ಇವರುಗಳು ಕಾಫಿಯ ಮೇಲೆ ಐಸ್‌ಕ್ರೀಮ್ ಕೂಡ ತಿಂದು ಆಗಿತ್ತು. "ಡೈರೆಕ್ಟರ್‌ನ ಹುಡ್ಕಿಕೊಂಡು ನೇರವಾಗಿ ಹೋಗಿದ್ಯಾ?" ತಮಾಷೆ ಮಾಡಿದಳು ವಾಸಂತಿ.

ಟೇಬಲ್‌ನ ಮೇಲೆ ಕೈಯೂರಿ ಕೂತ "ಇಲ್ಲ, ಫೋನ್ ಮಾಡಿದ್ದೆ. ಪುಣ್ಯಾತ್ಮ ಸಿಕ್ದ. ಖಂಡಿತ ಛಾನ್ಸ್ ಕೊಡ್ತೀನಿ ಅಂದಿದ್ದಾನೆ. ಆದರೆ ನಂಗಲ್ಲ, ವಾಸುಕಿಗೆ. ನಂಗೆ ಅವ್ನ ಕಣ್ಣುಗಳ್ನ ನೋಡಿದಾಗ ಒಬ್ಬ ಆ್ಯಕ್ಟರ್ ಆಗ್ಬಹುದು, ಅಂದ್ಕೊಂಡೆ. ಆ ಕಡೆ ಷೂಟಿಂಗ್ ಬಂದವರು, ಮುವತ್ತು ದಿನ ಅಲ್ಲೇ ಉಳ್ದುಕೊಂಡಿದ್ದರಿಂದ, ಹೆಚ್ಚಿಗೆ ಪರಿಚಯವಿತ್ತು. ಕೆಲವು ಕೃತಜ್ಞತೆಯ ಡೈಲಾಗ್ ಹೊಡೆದು ಹೋಗಿದ್ದರು. ನೋಡೋಣಾಂತ.. ಪ್ರಯತ್ನಿಸಿದೆ. ಪರ್ವಾಗಿಲ್ಲ ವ್ಯಕ್ತಿ ಪ್ರಾಮಾಣಿಕ. ಹೇಗೆ, ಊಟದ ಟೇಬಲ್ಲಿಗೆ ಹೋಗೋಣ್ವಾ?" ತಮಾಷೆ ಮಾಡಿದ.

"ಕಾಫೀ ಜೊತೆ... ಬಿಲ್ ತಗಂಡ್ ಬರೋಕೆ ಹೇಳಿದ್ದೀನಿ. ನಿಂಗೆ ಊಟ ಮಾಡ್ಬೇಕೂಂತ ಅನ್ನಿಸಿದ್ರೆ... ಬೇರೆ ಹೋಟಲ್‌ಗೆ ಹೋಗೋಣ. ನಮ್ಮನ್ನ ಗಮನಿಸಿದವರು ನಕ್ಕಾರು" ವಾಸಂತಿ ಹೇಳಿದಳು.

ಕಾಫಿ ಜೊತೆ ಬಂದ ಬಿಲ್‌ನ ಗೋಪಾಲ ಎತ್ತಿಕೊಂಡ "ಅಮ್ಮ ನಿಂಗೋಸ್ಕರ... ಬೇಡ, ನಿಮಗೊಸ್ಕರ ಕಳ್ಸಿದ ತಿಂಡಿ ಇದೆ. ದಾರಿಯಲ್ಲಿ ಹೋಗ್ತಾ ಮಾತಾಡೋಣ" ಬಿಲ್ ತಂದಿತ್ತ ಮಾಣಿ ಏನೋ ಹೇಳಲು ಪ್ರಯತ್ನಿಸಿದಾಗ ಅವನ ಭುಜದ ಮೇಲೆ ಕೈಯಿಟ್ಟು "ವಿಶ್ ಯು ಬೆಸ್ಟ್ ಆಫ್ ಲಕ್. ಮೊದ್ಲು ಆ ಮನುಷ್ಯ ನಿಂಗೊಂದು ಛಾನ್ಸ್ ಕೊಡ್ಲಿ" ಹಣವನ್ನು ತೆತ್ತು ಹೊರಗೆ ಬಂದ.

ದಾರಿಯಲ್ಲಿ ಸಿಕ್ಕ ಒಂದು ಐಸ್‌ಕ್ರೀಮ್ ಪಾರ್ಲರ್ ಹೊಕ್ಕವನು ವಾಸಂತಿಯನ್ನು ಆಶ್ಚರ್ಯಗೊಳಿಸಿದ "ನಿಂಗೆ ಎಂದಿನಿಂದ ಐಸ್‌ಕ್ರೀಮ್ ತಿನ್ನೋ ಆಸೆ?".

"ಖಂಡಿತ ಇಲ್ಲ. ಒಂದಿಷ್ಟು ಮಾತಾಡೋದಿದೆ. ನೀನು ಬಿಸಿಯಾಗ್ದೇ ಇರೋಕೆ, ಈ ಕೋಲ್ಡ್‌ನ ಉಪಚಾರ" ಛೇಡಿಸಿದ.

ಮನೆಯವರೆಲ್ಲ ಸೇರಿ ಬಹಳ ಪ್ರಯತ್ನಪೂರ್ವಕವಾಗಿ ಈ ರಾಯಭಾರಕ್ಕೆ ಕಳಿಸಿದ್ದರು. ದುದ್ದನ ಮನೆಯವರು ನೂರಾರು ಎಕರೆ

ತೋಟವಿದ್ದ ಶ್ರೀಮಂತರು. ಸುಂದರವಲ್ಲದಿದ್ದರೂ ವಾಸಂತಿಯ ಬದುಕಿಗೆ ಸುಭದ್ರತೆ ಸಿಗುತ್ತಿತ್ತು. ಹೆಚ್ಚು ಕಡಿಮೆ ಇದು ಎಲ್ಲರ ಅನಿಸಿಕೆ.

"ನೋಡು ವಾಸಂತಿ, ದುದ್ದ ಪೆದ್ದ ಅನ್ನೋದೊಂದು ಬಿಟ್ಟರೇ, ಅವನಲ್ಲಿ ಏನು ಕೊರತೆ? ಶ್ರೀಮಂತಿಕೆ ಇದೆ. ನೀನೇನು ಕಷ್ಟಪಡ್ಬೇಕಿಲ್ಲ. ಭವಿಷ್ಯದ ಬಗ್ಗೆ ನಿಶ್ಚಿಂತೆ. ಇದು ಅವರೆಲ್ಲರ ಮಾತುಗಳು. ಐಸ್‌ಕ್ರೀಮ್ ಪ್ಲೇಟ್ ನನ್ನ ಮುಖಕ್ಕೇನು ಎಸೀಬೇಡ. ಯೋಚ್ನೆ ಮಾಡು" ತಣ್ಣಗೆ ಹೇಳಿದ. ದುರು ದುರು ನೋಡಿದಳು ವಾಸಂತಿ "ನಂಗೆ ಮದ್ವೆನೇ ಬೇಡ. ಸಾಕಿದ ಕಾರಣಕ್ಕೆ ಬೇಕಾದ್ರೆ ಜೀತ ಮಾಡ್ಕಿಕೊಂಡು ಋಣ ಹರಸ್ಕೊಳ್ಳಿ. ಅಷ್ಟೇ ಹೊರ್ತು ನನ್ನ ಬದ್ಕಿಗೆ ಬೆಂಕಿ ಇಡೋದ್ಬೇಡ" ಕನಲಿ ನುಡಿದಳು. ಕೋಪದಿಂದ ಕೆಂಪಾದ ಮುಖವನ್ನೆ ದಿಟ್ಟಿಸಿ ನೋಡಿದ ಗೋಪಾಲ. ಎದ್ದು ಹೋಗಿಬಿಟ್ಟಳು.

"ಅವ್ಳಿಗೆ ಇಷ್ಟವಿಲ್ದ ವಿಷ್ಯನ ಯಾಕೆ ಪ್ರಸ್ತಾಪ ಮಾಡಿದ್ರಿ?" ಕಣ್ಮಣಿ ಮುಖ ಚಿಕ್ಕದು ಮಾಡಿಕೊಂಡಳು. ಜೇಬಿನಿಂದ ಒಂದು ಲೆಟರ್ ತೆಗೆದು ಅವಳ ಕೈಗೆ ಕೊಟ್ಟ. "ನೀವು ಆಮೇಲೆ ಓದ್ಕೊಳ್ಳಿ" ಮೇಲೆದ್ದವನು "ಕರ್ಕೊಂಡ್ಬರ್ತೀನಿ" ಹೊರ ನಡೆದ. ಹತ್ತು ನಿಮಿಷಗಳ ಮಾತಿನ ಸಾಹಸದ ನಂತರವೇ ವಾಸಂತಿ ಬಂದಿದ್ದು. ಆ ವೇಳೆಗೆ ಬೇರರ್ ನಾಲ್ಕು ಸಲ ಬಂದು ಹೋಗಿದ್ದ. ಐಸ್‌ಕ್ರೀಮ್, ಕೂಲ್ ಡ್ರಿಂಕ್ಸ್‌ಗಳ ಮೆನು ತಿರುವಿ ತಿರುವಿ ಇಟ್ಟಿದ್ದಳು.

'ಎರ್ಡು ಐಸ್‌ಕ್ರೀಮ್" ಗೋಪಾಲ್ ಹೇಳಿದ.

"ಬೇಡ, ಮೂರು ಆರೆಂಜ್ ಜ್ಯೂಸ್ ಕೊಡಿ" ಎಂದು ತಿದ್ದಿದಳು ಕಣ್ಮಣಿ. "ಆಯ್ತು, ಮೇಡಮ್" ಕಣ್ಣಲ್ಲಿಯೇ ನಕ್ಕ. ನಿಧಾನವಾಗಿ ಜ್ಯೂಸ್ ಕುಡಿದಿಟ್ಟ ನಂತರ ಪರ್ಸ್ ತೆಗೆಯಲು ಕಣ್ಮಣಿ ಹೋದಾಗ ತಡೆದ "ಬೇಡ ಮಿಸ್, ಎಲ್ಲಾ ನೀವೇ ಬಾಚಿಕೊಂಡ್ಬಿಟ್ರೆ ನಮ್ಮಗಳ ಗತಿಯೇನು?" ಸೂಕ್ಷ್ಮವಾಗಿ ತೇಲಿಸಿದ.

ವಾಸಂತಿಯು ಕಣ್ಣಿನ ತುಂತುರು ಮಾಯುವಾಗಲಿಲ್ಲ. ಆಗಾಗ ಜಿನುಗುತ್ತಲೆ ಇತ್ತು. ಹತ್ತಿರಕ್ಕೆ ಬಂದ ಗೋಪಾಲ ಕರ್ಚೀಫಿನಿಂದ ಕಣ್ಣೊರೆಸಿ "ಅಳೋಂಥದೇನಾಗಿದೆ? ಜಗತ್ತಿಗೆ ಬರೋವಾಗ ಅನಾಥರು, ಹೋಗೋವಾಗ ಅನಾಥರು. ಆದರೆ ಬದುಕಿರೋವಾಗ ಜನರ ನಡುವೆಯೇ ಇರೋದು ಎಲ್ಲಾ. ನಾನು ರಾಯಭಾರಿಯಾಗಿ ಬಂದಿದ್ದು ಬಲವಂತಕ್ಕೆ

ಮಾತ್ರವಲ್ಲ, ನಿನ್ನ ಹಿತೈಷಿಯಾಗಿ. ಧೈರ್ಯವಾಗಿ ಬೆಳಿಗ್ಗೆ ನಿನ್ನ ಅಭಿಪ್ರಾಯ ತಿಳ್ಸು. ಇಲ್ಲಿ ನೀನು ಯಾರ್ಗೂ ಋಣಿಯಲ್ಲ. ಅಷ್ಟನ್ನು ಮಾತ್ರ ಮನಸ್ಸಿನಲ್ಲಿ ಇಟ್ಕೊಂಡ್... ಚಿಂತಿಸು" ಭುಜ ತಟ್ಟಿದ.

ಕಣ್ಮಣಿ ಅವರಿಬ್ಬರ ನಡುವೆ ಪ್ರೇಕ್ಷಕಳು.

"ಬೆಳಗಿನ ಹತ್ತಕ್ಕೆ ಒಂದು ಬಸ್ಸು ಇದೆ. ನೀನು ಕೆಲ್ಸಕ್ಕೆ ಹೋಗೋದು, ಎಷ್ಟೊತ್ತಿಗೆ?" ಕೇಳಿದ. ಕರ್ಚಿಫ್‌ನಿಂದ ಕಣ್ಣೊತ್ತುತ್ತಿದ್ದವಳು "ಭಾನುವಾರದವರ್ಗೂ ಇರು. ಇನ್ನೊಂದ್ಸಲ ನೀನು ಬರೋ ವೇಳೆಗೆ ನಾನು, ಕಣ್ಮಣಿ ಸೇರಿ ಒಂದು ಪುಟ್ಟ ಮನೆ ಮಾಡ್ಬಿಡ್ತೀವಿ. ಆಗ ಲಾಡ್ಜ್‌ನಲ್ಲಿ ಉಳ್ದುಕೊಳ್ಳೋ ತಾಪತ್ರಯವಿರೋಲ್ಲ" ಎಂದಳು.

"ಆ ಕಷ್ಟ ಬೇಡ. ಮತ್ತಷ್ಟು ಸಮಸ್ಯೆಗಳು, ಹಾಲು, ಕಾಫೀಪುಡಿ, ಗ್ಯಾಸ್, ಎಲೆಕ್ಟ್ರಿಕ್ ಬಿಲ್‌ಗಳ ಏರಿಕೆಯ ಬಗ್ಗೆ ಮಾತಾಡ್ಬೇಕಾಗುತ್ತೆ, ಸದಾ. ಈಗ ನಿಶ್ಚಿಂತೆ. ಅದಕ್ಕೂ ಬಂದು ಹೋಗೋರು.... ಯಾರಿದ್ದಾರೆ? ಎಲ್ಲ ಸೇರಿ ದಬ್ಬಿದಕ್ಕೆ ನಾನ್ಬಂದು ಇಲ್ಲಿ ಬಿದ್ದೆ." ಸತ್ಯವನ್ನು ಮುಲಾಜಿಲ್ಲದೇ ಹೇಳಿ ಇಬ್ಬರ ಮನಸ್ಸು ನೋಯಿಸಿದ. ಇದು ವ್ಯಂಗ್ಯವಲ್ಲ. ನಾಟಕೀಯವಾಗಿ ಮಾತಾಡುವ ಸ್ವಭಾವದವನಲ್ಲ. ನೇರವಾಗಿ ಮಾತಾಡಿದರೂ ಕೆಟ್ಟ ಉದ್ದೇಶವೇನು ಇರುತ್ತಿರಲ್ಲಿಲ್ಲ.

"ಅವ್ರು ದಬ್ಬಿದರೂ ನಿಂಗೆ ಬುದ್ಧಿ ಇರ್ಬೇಕಿತ್ತು. ಯಾಕೆ ಬಂದೆ?" ಕೋಪದಿಂದ ಕುಟುಕಿದಳು ವಾಸಂತಿ. ಕೆನ್ನೆಗೆ ಹೊಡೆದುಕೊಂಡ "ತಪ್ಪಾಯ್ತು! ನಾನು ಭಾನುವಾರದವರ್ಗೂ ಇರೋನಲ್ಲ. ಬೆಳಿಗ್ಗೆ ಹೊರಡೋದಿದೆ. ಫೈನಲ್ಲಾಗಿ ನಿನ್ನ ಅಭಿಪ್ರಾಯ ತಿಳ್ಸು. ದುದ್ದನ್ನ ಅಲ್ಲದಿದ್ರೆ ಅವ್ನ ಅಪ್ಪನ ಮಾಡ್ಕೋ. ಇವ್ನಿಗಿಂತ ಅವ್ನು ಸ್ವಲ್ಪ ವಾಸಿ, ಕಂಜೂಸ್ ಅನ್ನೋದು ಬಿಟ್ರೆ" ರೇಗಿಕೊಂಡು ಹೋಗಿಬಿಟ್ಟ. ಕಣ್ಮಣಿ ಮೌನ ವಹಿಸಿದಳು.

ರೂಮಿಗೆ ಬಂದ ಮೇಲೆ ಕಣ್ಮಣಿ ಪತ್ರ ಬಿಚ್ಚಿ ಓದಿದಳು. ಕೊನೆಯಲ್ಲಿ ಗೋಪಾಲ ಅಂದ ಮಾತು ಇವಳು ಬರೆದಿದ್ದೇ ಆಗಿತ್ತು. ಕೆಲಸ ಕಳೆದುಕೊಂಡ ಮೇಲೆ ಹತಾಶೆಯಿಂದ ಪತ್ರ ಬರೆದಿದ್ದಳು ಊರಿಗೆ.

ಮಲಗಿ ಬಿಕ್ಕುತ್ತಿದ್ದ ವಾಸಂತಿಯ ರೆಟ್ಟೆಯ ಮೇಲೆ ಕೈಯಿಟ್ಟ ಕಣ್ಮಣಿ "ನೀನೇ ದುದ್ದ ಇಲ್ಲದಿದ್ರೆ ಅವನಪ್ಪನ್ನ ಮದ್ವೆ ಆಗ್ತೀನೀಂತ ಬರೆದಿದ್ದಿಯಲ್ಲ.

ಅದು ಗೋಪಾಲರ ಮಾತೇನು ಅಲ್ಲ" ಎಂದ ಕೂಡಲೇ ದಢಕ್ಕನೆ ಎದ್ದು ಕೂತಳು. "ನಾನು ಆ ಕಾಗದನ ಪೋಸ್ಟ್ ಮಾಡ್ಲಿಲ್ಲ."

ಕೈಯಲ್ಲಿದ್ದ ಪತ್ರವನ್ನು ಅವಳ ಮುಂದಿಡಿದಳು. "ನೋಡು, ಎಷ್ಟೊಂದು ಬರ್ಕೊಂಡ್ ಇದ್ದೀಯ! ಹೇಗೂ ಧೈರ್ಯ ಮಾಡಿ ಇಲ್ಲಿವರ್‍ಗೂ ಬಂದಿದ್ದೀಯ. ಜೀವನನ ಛಾಲೆಂಜ್ ಆಗಿ ತಗೋಬೇಕು. ಹಿತೈಷಿಯಾಗಿ ಗೋಪಾಲ ನಿಂಗೆ ಬುದ್ಧಿ ಹೇಳೋಕೆ ಬಂದಿರಬೇಕು. ಸುಮ್ನೆ ಯಾಕೆ ಕೋಪ ಮಾಡ್ಕೋತೀಯಾ? ಅಳುನೇ ಎಲ್ಲಕ್ಕೂ ಪರಿಹಾರವಲ್ಲ. ಹೇಗೂ ಮತ್ತೆ ಒಂದ್ಕೆಲ್ಸ ಸಿಕ್ಕಿತಲ್ಲ. ಇಷ್ಟವಿಲ್ದ ಮದ್ವೆ ಬದ್ಕನ್ನು ನರಕವಾಗಿಸುತ್ತೆ" ಬುದ್ಧಿ ಹೇಳಿದಳು. ವಾಸಂತಿ ಇವಳನ್ನು ತಬ್ಬಿಕೊಂಡು ಕಣ್ಣೀರು ಸುರಿಸಿದ್ದು ಸಮಾಧಾನವಾಗುವವರೆಗೂ. ಇಬ್ಬರು ಅರ್ಧರಾತ್ರಿಯನ್ನು ಮಾತುಗಳಿಂದಲೇ ಕಳೆದರು. ತಮ್ಮ ಅನಾಥತ್ವದ ನೆನಪುಗಳನ್ನು ಹಂಚಿಕೊಂಡರು ಒಬ್ಬರಿಗೊಬ್ಬರು. ಅಲ್ಲಿ ಸಿಹಿಗಿಂತ ಕಹಿಯೇ ಹೆಚ್ಚು.

ಬೆಳಿಗ್ಗೆ ಆರಕ್ಕೆ ಅವರಿಗೊಂದು ಫೋನ್‌ಕಾಲ್ ಇದೆಯೆಂದು ಫೀಮೇಲ್ ಸರ್ವೆಂಟ್ ಲಿಲ್ಲಿ ಹೇಳಿದಾಗ ಸ್ನಾನಕ್ಕೆ ಹೊರಟಿದ್ದ ವಾಸಂತಿ "ಸ್ವಲ್ಪ ನೋಡು, ಹತ್ತು ನಿಮಿಷದಲ್ಲಿ ರೆಡಿಯಾಗಿ ಹೋಗೋಣ" ಪುಟ ಪುಟ ಅಂತ ಬಾತ್‌ರೂಂನತ್ತ ನಡೆದಳು.

ತಂತಿಯ ಕೊನೆಯಲ್ಲಿದ್ದವನು ಗೋಪಾಲನೇ "ವಾಸಂತಿಗೆ ಕೋಪ ಬಂದಿದ್ಯಾ? ಬಂದ್ಕೊಳ್ಳಿ.... ಬಿಡು, ನಾನಂತು ಹತ್ತು ಗಂಟೆ ಬಸ್ಸಿಗೆ ಹೊರಡೋನೇ. ನೀವಿಬ್ರೂ ಬಂದರೇ ಜೊತೆಯಲ್ಲಿ ಕಾಫಿ ಕುಡೀಬಹುದ್ದು" ಎಂದು ಸ್ವಲ್ಪ ಬಿರುಸಾಗಿ.

"ಬರ್ತೀವಿ...." ಫೋನಿಟ್ಟಳು.

ಇವರಿಬ್ಬರು ಹೋಗುವ ವೇಳೆಗೆ ಲಾಡ್ಜ್ ಮುಂದೆ ಕಾಯುತ್ತಿದ್ದ ಗೋಪಾಲ ಬಹಳ ಫ್ರೆಷ್ಷಾಗಿ ಕಂಡ. "ಅಳು, ಕೋಪ ಎಲ್ಲಾ ಹೋಯ್ತು, ತಾಯಿ?" ಕೇಳಿದ ನಗುತ್ತ.

ಹತ್ತಿರದ ಒಂದು ಹೋಟಲ್‌ಗೆ ಹೋದರು. ಮೂಲೆಯ ಟೇಬಲ್ ಹಿಡಿದ ಗೋಪಾಲ "ಸ್ವಲ್ಪ ತಿಂಡಿನು ತಗೊಂಡ್‌ಬಿಡೋಣ. ಈಗ್ಹೇಳು, ಏನು ನಿನ್ನ ಸಮಸ್ಯೆ? ಮತ್ತೆ ಕೆಲ್ಸ ಕಳ್ದುಕೊಂಡು ಅತ್ಕೊಂಡ್ ಕಾಗ್ದ ಬರೆಯೋದ್ಬೇಡ. ಏನು ನಿನ್ನ ಅಭಿಪ್ರಾಯ? ವಿಪರೀತ ಪದ ಪ್ರಯೋಗ ಮಾಡಿ ವಿಷ್ಯನ ಗೋಜಲು ಗೋಜಲಾಗಿಸದೆ, ನೇರವಾಗಿ ಹೇಳು. ದುದ್ದನ

ಮದ್ವೆ ಆಗೋಕೆ ನೀನು... ರೆಡಿನಾ?" ಸಿರಿಯಸ್ಸಾಗಿ ಪ್ರಶ್ನಿಸಿದ. 'ಇಲ್ಲ'ವೆಂದು ತಲೆ ಅಡ್ಡಡ್ಡ ಆಡಿಸಿದಳು.

"ಮುಗೀತು, ಮತ್ತೆಂದೂ ಪತ್ರ ಬರ್ಯೊಕೆ ಹೋಗ್ಬೇಡ. ನಿಂಗೇನು ಕುಂಟ, ಕುರುಡ! ಎಷ್ಟೊಂದು ಜನ ಎಷ್ಟು ದುರ್ಭರ ಬದ್ಕನ್ನು ಸಹನೀಯವಾಗಿಸ್ಕೊಂಡಿದ್ದಾರೆ. ಜೀವ್ನವನ್ನು ಛಾಲೆಂಜಾಗಿ ತಗೊಂಡಾಗ್ಲೇ ಅರ್ಥಪೂರ್ಣ. ಊಟ, ತಿಂಡಿಗೆ ಚಿಂತೆ. ಇಲ್ಲ. ನಿಂಗೆ ಒಳ್ಳೆ ಫ್ರೆಂಡ್ ಇದ್ದಾಳೆ. ಇಷ್ಟು ಸಾಕು ಸದ್ಯಕ್ಕೆ ಊರು ಕಡೆಗೆ ಬರ್ಬೇಡ" ಹೇಳಿದ ಸ್ಪಷ್ಟವಾಗಿ. ಅಷ್ಟಕ್ಕೆ ಆ ಮಾತುಗಳನ್ನು ಬಿಟ್ಟು ಕಣ್ಮಣಿಯ ಕಡೆ ನೋಟ ಹರಿಸಿದ. "ಹೇಗಿದೆ, ನಿಮ್ಮ ಕೆಲ್ಸ? ಆ ವಾಡೆಯ ಬಗ್ಗೆ ನೀವೇನು ಲೇಖನ ಬರ್ಯೋ ಪ್ರಯತ್ನ ಮಾಡಿಲ್ವಲ್ಲ. ಖಂಡಿತ ಬೇಡ ನೀವು ತೊಂದರೆಗೆ ಸಿಕ್ಕಿ ಹಾಕ್ಕೋತೀರಾ! ಅಲ್ಲಿ ವಾಸಿಸೋ ಕೀಟ, ಪಕ್ಷಿ ಮುಂತಾದುವುಗಳು ಹಾಗೇ ಸ್ವತಂತ್ರವಾಗಿ, ನೆಮ್ದಿಯಾಗಿ ಇದ್ಕೊಳ್ಳಿ. ನಮ್ಮನ್ನ ಜೀವಂತವಾಗಿ ಬಿಟ್ಟ ಹಾವಿಗೆ ಕೃತಜ್ಞರಾಗಿ ಇರ್ಬೇಕಲ್ಲ" ಹಾವನ್ನು ನೆನಪಿಸಿಕೊಂಡ. ಹಾವುಗಳು ಅಪರೂಪವಲ್ಲ, ತೋಟ ಮಾತ್ರವಲ್ಲ ಮಾರ್ಗ ಮಧ್ಯೆದಲ್ಲಿ, ಮನೆ ಮುಂದೆ ಹರಿದಾಡುತ್ತಿದ್ದ ಸ್ಥಳದಲ್ಲಿ ಹುಟ್ಟಿ ಬೆಳೆದವನು, ಆದರೆ ಅಂದಿನ ಅನುಭವವೇ ಬೇರೆ.

ಇಡ್ಲಿ, ವಡೆ, ಸಾಂಬಾರ್ ಜೊತೆ ಕಾಫಿಯಾದ ಮೇಲೆ ತಂದಿದ್ದ ಬ್ಯಾಗ್‌ನ ವಾಸಂತಿಗೆ ಕೊಟ್ಟ "ಅಮ್ಮ ಕಳ್ಸಿದ್ದು, ವೇಸ್ಟ್ ಮಾಡ್ದಂಗೆ... ತಿಂದ್ಕೊಳ್ಳಿ" ಬಿಲ್ ತೆತ್ತು ಹೊರಗೆ ಬಂದ.

ಲಾಡ್ಜ್‌ವರೆಗೂ ಬಂದ ಗೋಪಾಲ "ಒಬ್ಬ ಫ್ರೆಂಡ್‌ನ ನೋಡೋದಿದೆ. ನೋಡ್ಕಂಡ್.. ಹೋಗ್ತೀನಿ. ನೀನೇನು ಬರೋಕೆ ಹೋಗ್ಬೇಡ. ಅಮ್ಮನಿಗೆ ನಾನು ಹೇಳ್ತೀನಿ, ಬಿಡು. ಈಗ್ಲೇ ಲಾಡ್ಜ್ ಖಾಲಿ ಮಾಡಿ ಹೋಗ್ತೀನಿ. ಮತ್ತೆ ಸಿಗೋಲ್ಲ. ಇನ್ನೇನಾದ್ರೂ ಹೇಳೋದು, ಕೇಳೋದು ಇದ್ಯಾ?" ವಿಚಾರಿಸಿದ.

ಕಣ್ಮಣಿ ಮೌನವಹಿಸಿದರೇ, ಅವಳು 'ಏನಿಲ್ಲ' ಎನ್ನುವಂತೆ ತಲೆಯಾಡಿಸಿ ಬಿಟ್ಟಳು.

"ನೀವ್ಹೋಗಿ, ನಾನ್ಬರ್ತೀನಿ" ಲಾಡ್ಜ್‌ನೊಳಕ್ಕೆ ಹೋದ.

ಇಬ್ಬರು ಹಾಸ್ಟಲ್‌ಗೆ ಹಿಂದಿರುಗಿದರು. ಗೋಪಾಲನ ಕೆಲವು

ಮಾತುಗಳು ಚುಚ್ಚಿದಂತಿದ್ದರೂ, ಆದರೆ ಸತ್ಯವಿದೆಯೆಂಬ ಅರಿವಿತ್ತು, ಅವರಿಗೆ.

* * * *

ಸಹಾಯಕ ಸಂಪಾದಕರು ತಮ್ಮ ನೆಂಟರೊಬ್ಬರ ಹುಡುಗಿಯ ಅಪಾಯಿಂಟ್‌ಮೆಂಟ್‌ಗೋಸ್ಕರ, ಹೇಗಾದರೂ ಕಣ್ಮಣಿಯನ್ನು ಹೊರಗೆ ಹಾಕಲು ನಿರ್ಧರಿಸಿದ್ದರಿಂದ, ಇವಳಿಗೆ ಕಿರುಕುಳ ಷುರು ಮಾಡಿದ್ದರು. ಪ್ರತಿಯೊಂದಕ್ಕೂ ಛೀಮಾರಿ ಕೆಲವೊಮ್ಮೆ (ಜೆನೆಟಿಕ್) ವಂಶವಾಹಿನಿಯ ಬಗ್ಗೆ ವ್ಯಂಗ್ಯವಾಡುತ್ತಿದ್ದರು. ಅವರು ತೀರಾ ಪ್ರಭಾವ ವ್ಯಕ್ತಿ. ಎಡಿಟರ್‌ಗಾಗಲೀ, ಪಬ್ಲಿಷರ್‌ಗಾಗಲೀ ರಿಪೋರ್ಟ್ ಮಾಡುವುದರಿಂದ ಪ್ರಯೋಜನವಿಲ್ಲವೆಂದು ಗೊತ್ತಿದ್ದರಿಂದ ತೆಪ್ಪಗಿದ್ದಳು.

ಹಿಂದಿನ ದಿನವೇ ಒಂದು ಅಸೈನ್‌ಮೆಂಟ್ ಕೊಟ್ಟಿದ್ದರಿಂದ ಅದನ್ನು ಮುಗಿಸಿಕೊಂಡು ಬಂದಾಗ ಮಧ್ಯಾಹ್ನವಾಗಿತ್ತು. ಅಂಥ ಅರ್ಜೆಂಟ್ ಮ್ಯಾಟರೇನು ಅಲ್ಲ. ಎಡಿಟರ್ ಕೋಣೆಗೆ ಬಂದಾಗ ಅವರು ಯಾರನ್ನೋ ನೋಡಲು ಹೋಗಿರುವುದಾಗಿ ತಿಳಿದು ಮೇಲಿನಿಂದ ಕೆಳಗಿಳಿಯುತ್ತಿದ್ದಾಗ ದ್ವಾರಕಿ ಬಂದು ಕೈಯಲ್ಲಿಯೇ ಸನ್ನೆ ಮಾಡಿದ 'ಕರೆಯುತ್ತಿದ್ದಾರೆ' ಎಂದು.

"ರ್ರೀ ಮೇಡಮ್, ಯಾಕ್ರೀ ಹೆದರ್‌ತೀರಾ, ಆ ಮನುಷ್ಯನಿಗೆ? ಒಂದು ದಿನ ಮುಖದ ನೀರು ಇಳ್ಸಿಬಿಡೀ. ಆಮೇಲೆ ತೆಪ್ಪಗಾಗ್ತಾರೆ. ಬಗ್ಗಿದೋರಿಗೇ ಗುದ್ದು ಅಂತಾರಲ್ಲ, ಹಾಗೇ" ಎಂದ. ಈಚೆಗೆ ಕಣ್ಮಣಿಯನ್ನು ಬಹಳವಾಗಿ ಗೋಳು ಹೊಯ್ದುಕೊಳ್ಳುತ್ತಾನೆಂದು ಅವನಿಗೆ ಗೊತ್ತು.

ಇದು ಅವಳ ಅನ್ನದ ಸಮಸ್ಯೆ. ಅನಾಥಾಶ್ರಮದಿಂದ ಒಮ್ಮೆ ಹೊರ ಬಂದ ಅವಳಿಗೆ ಅಲ್ಲಿ ಪ್ರವೇಶವಿಲ್ಲ! ಇದ್ದರೂ ಹೋಗಲಾರಳು. ಮೇಲ್ಮುಖದಲ್ಲಿ ಎಲ್ಲಾ ಚೆನ್ನಾಗಿ ಕಾಣುವ ಅದರಲ್ಲಿ ಹತ್ತು, ಹಲವು ಸಮಸ್ಯೆಗಳು. ಒಳ್ಳೆ ಉದ್ದೇಶದಿಂದ ಹುಟ್ಟು ಹಾಕಿದ ಸಂಸ್ಥೆ ಈಗ ಬರೀ ಸಮಾಜಕ್ಕೆ ದೊಡ್ಡ ಉಪಕಾರ ಮಾಡಿಬಿಡುವಂತೆ ವರ್ತಿಸುತಿತ್ತು.

ಸ್ವಲ್ಪ ಹೆದರುತ್ತಲೇ ಒಳಗಡಿ ಇಟ್ಟಳು.

"ಎಲ್ಹೋಗಿದ್ದೆ?" ಪೂರ್ತಿ ಮುಖ ಗಂಟಿಕ್ಕಿದರು. ಕಣ್ಣುಗಳು ಕಿಡಿಗಳನ್ನು ಉಗುಳುತಿತ್ತು. ಅವಳ ಕಾಲುಗಳಲ್ಲಿ ನಡುಕ ಷುರುವಾಗಿ ನಾಲಿಗೆಯಲ್ಲಿನ ಪಸೆಯಾರಿತು. "ಎಡಿಟರ್ ಒಂದು ಅಸೈನ್‌ಮೆಂಟ್ ಕೊಟ್ಟಿದ್ರು" ಪೂರ್ತಿ ಮಾಡುವ ಮುನ್ನವೇ ಎಗರಿ ಬಿದ್ದರು.

"ನೀನೆಲ್ಲಿ ಸರಿಹೋಗ್ತೀಯಾ. ಈವನ್ ಗಾಡ್ ಕೆನಾಟ್ ಛೇಂಜ್ ದಿ ಪಾಸ್ಟ್. ಭೂತಕಾಲನ ಬದಲಾಯಿಸೋಕೆ ಭಗವಂತನಿಗೂ ಸಾಧ್ಯವಿಲ್ಲ. ಎಲ್ಲೋ ಹುಟ್ಟು, ಎಲ್ಲೋ ಬೆಳವಣಿಗೆ... ಶಾಪಗ್ರಸ್ತ ಸಂತಾನ. ಎಲ್ಲಿರುತ್ತೆ ನಿನ್ನಂಥವ್ರಿಗೆ ಒಳ್ಳೆಯ ಫ್ಯೂಚರ್" ಚುಚ್ಚಿದರು.

ಆರಾಮಾಗಿ ತಣ್ಣಗೆ ಮಲಗಿದ್ದ ಅವಳ ಆತ್ಮಾಭಿಮಾನವೆಂಬ ಸರ್ಪವನ್ನು ತುಳಿದಂತಾಯಿತು. ಹೆಡೆಯೆತ್ತಿದ ಸರ್ಪಿಣಿಯಂತೆ ಕೈಯಲ್ಲಿನ ಪ್ಯಾಡ್ ಮುಖದ ಮೇಲೆಸೆದು ಹೊರಗೆ ಬಂದಳು. ಮೆಟ್ಟಲು ಇಳಿಯುತ್ತಿದ್ದಾಗ, ಇದೇ ಕಡೆಯ ಬಾರಿ ಅನಿಸಿತು. ಭವಿಷ್ಯದ ಬಗ್ಗೆ ಲವಲೇಶವು ಹೆದರಿಕೆ ಮೂಡಲಿಲ್ಲ.

"ಬೈಸಿಕೊಂಡು ಸಪ್ಪಗೆ ಬರ್ತೀರಾಂತ ಅಂದ್ಕೊಂಡೆ ಇಂದೇನು ಹಾಗೇ ಕಾಣ್ತಿಲ್ಲ". ರಿಜಿಸ್ಟರ್ ಹಿಡಿದು ಮೇಲೆ ಬರುತ್ತಿದ್ದ ದ್ವಾರಕಿ ಹೇಳಿದಾಗ ಅವಳು 'ಹಾ', 'ಹ್ಹೂ' ಎನ್ನಲಿಲ್ಲ. ಕೆಳಗೆ ತನ್ನ ಟೇಬಲ್ಲಿಗೆ ಬಂದವಳೇ ರಾಜಿನಾಮೆ ಪತ್ರ ಬರೆದು ಮ್ಯಾನೇಜರ್ ಟೇಬಲ್ ಮೇಲಿಟ್ಟು ಹೊರಗೆ ಬಂದಳು. ಪತ್ರಿಕಾಲಯದಿಂದ ಹೊರಗೆ ಬಂದ ಮೇಲೆ ಜಗತ್ತು ಬಹಳ ವಿಶಾಲವಾಗಿ ಕಂಡಿತು. ಎಲ್ಲಾ ವ್ಯಕ್ತಿಗಳು ಅಂಥವರೇ ಅಲ್ಲ. ಆ ಕ್ಷಣ ಮನುಷ್ಯನಿಗಿಂತ ಪ್ರಾಣಿ ಪಕ್ಷಿಗಳೆ ಪ್ರಿಯವೆನಿಸಿತು.

ಮೆಡಿಕಲ್ ಷಾಪ್‌ನಲ್ಲಿ ವಿಕ್ಸ್, ನಾಲ್ಕು ನಾವೆಲಿಜಿನ್ ಕೊಂಡು, ಒಳಗಿದ್ದ ನೋಟುಗಳ ಮೇಲೆ ತಣ್ಣಗೆ ಬೆರಳುಗಳನ್ನಾಡಿಸಿದಳು. ಇಂದು ತಾರೀಖು ಇಪ್ಪತ್ತು. ಸಂಬಳದಲ್ಲಿ ಉಳಿದ ಹಣ ಮೂರು ನೂರ ಎಂಬತ್ತೇಳು ರೂಪಾಯಿ ಇತ್ತು. ಉಳಿಕೆ ಸ್ವಲ್ಪ ಪಾಸ್‌ಬುಕ್‌ನಲ್ಲಿತ್ತು. ಈ ತಿಂಗಳು ಒಂದೆರಡು ಸೀರೆಗಳನ್ನು ಕೊಳ್ಳಬೇಕೆಂದಿದ್ದು, ಅದು ಅನಿರ್ದಿಷ್ಟಕಾಲ ಮುಂದಕ್ಕೆ ಹೋಯಿತು.

ಹಾಸ್ಟಲ್‌ಗೆ ಹಿಂದಿರುಗಿದವಳು ರೂಮಿಗೆ ಹೋಗುವ ಮುನ್ನ ಎದುರಾದ ಕುಕ್‌ನ "ಊಟ.. ಇದ್ಯಾ?" ಕೇಳಿದಳು. ಬೆಳಿಗ್ಗೆ ಬರೀ ತಿಂಡಿ ತಿಂದಿದ್ದು, ಈಗ ಮೂರರ ವೇಳೆ. ಎರಡೂವರೆವರೆಗೂ ಊಟದ ಸೌಲಭ್ಯವಿತ್ತು. "ಇದೆಮ್ಮ, ರೂಮಿಗೆ ತಂದುಕೊಡ್ಲಾ? ಅಥವಾ ಊಟದ ಟೇಬಲ್‌ಗೆ ಬರ್ತೀರಾ" ಕೇಳಿದಳು. ಅವಳಿಗೆ ಆಗಾಗ ಐದು, ಹತ್ತು ಕೊಡುತ್ತಿದ್ದರಿಂದ ಅಂಥವರನ್ನು ವಿಶೇಷ ಕಾಳಜಿಯಿಂದ ನೋಡಿ ಕೊಳ್ಳುತ್ತಿದ್ದಳು. "ತುಂಬ ಬೇಡ, ಮೋನಕ್ಕ, ಒಂದಿಷ್ಟು ಹುಳಿಯನ್ನ, ಮೊಸರನ್ನ ಕಲೆಸಿಕೊಂಡ್ಬಂದ್ರೆ....

ಸಾಕು" ಹೇಳಿದಳು.

ರೂಮಿಗೆ ಹೋದವಳೇ ಬಟ್ಟೆ ಕೂಡ ಬದಲಾಯಿಸದೇ ಕೂತಳು. ಒಂದೊಂದು ರೂಮಿಗೆ ಇಬ್ಬರು, ಇಬ್ಬರು. ವಾಸಂತಿ ಇವಳ ರೂಮ್‌ಮೇಟ್. ಸ್ವಲ್ಪ ದೊಡ್ಡ ರೂಮಿನಲ್ಲಿ ಮೂರು ಮುಂಚಗಳನ್ನು ಹಾಕಿ ಮೂವರಿಗೆ ಅಕಾಮೊಡೇಷನ್ ಒದಗಿಸಿಕೊಟ್ಟಿದ್ದರು, ವ್ಯವಸ್ಥಾಪಕರು.

ಮೋನಕ್ಕ ತಂದಿಟ್ಟ ಮೊಸರನ್ನ, ಹುಳಿಯನ್ನ ತಿಂದಿದ್ದು ಕಷ್ಟಪಟ್ಟುಕೊಂಡೇ. ಮುಂದೇನು? ಭವಿಷ್ಯಕ್ಕೆ ಭದ್ರವಾಗಿ ಬುನಾದಿ ಹಾಕುವಂಥ ಪೇರೆಂಟ್ಸ್ ಅವಳಿಗಿಲ್ಲ. ಅವಳೇ ಹುಡುಕಾಟ ನಡೆಸಬೇಕು. ಸಾಧನೆ, ಶ್ರಮದಿಂದ ತನ್ನ ಬದುಕನ್ನು ರೂಪಿಸಿಕೊಳ್ಳಬೇಕು. ನಿರಂತರ ಹೋರಾಟ-ಇದು ಸಾವಿರಾರು ಅಲ್ಲ, ಲಕ್ಷಾಂತರ, ಮಿಲಿಯನ್‌ಗಟ್ಟಲೆಯ ಪರದೇಶಿ ಮಕ್ಕಳ ಸಮಸ್ಯೆ. ಸಾಕಲು ಶಕ್ಯವಿಲ್ಲದ, ಸಮಾಜಕ್ಕೆ ಭಯಪಡುವಂಥ ಹೆಣ್ಣುಗಳು ಮಗುವಿಗೆ ಯಾಕೆ ಜನ್ಮ ನೀಡಬೇಕು? ಪ್ರೇಮದ ಹೆಸರಿನಲ್ಲಿ ಹೊಯ್ದಾಡುವ ಬಯಕೆಗಾಗಿ.

ಅವನ ಚಿಂತನೆ ಮುಂದುವರಿಯುತ್ತ ಸೃಷ್ಟಿಯ ಮೂಲ ಉದ್ದೇಶದ ರಹಸ್ಯದತ್ತ ಧಾವಿಸಿತು ವೇಗವಾಗಿ. ಕಾವ್ಯಮಯವಾದ ಬದುಕು ಎಷ್ಟೊಂದು ಗೋಜಲು.

ರೂಮು ಬಿಟ್ಟು ಸಂಜೆಯವರೆಗೂ ಹೊರ ಬರದಿದ್ದವಳು, ಆರರ ನಂತರ ಹಾಸ್ಟಲ್‌ನಿಂದ ಹೊರಬಂದು ನಂದಿತಾ ಟೆಕ್ಸ್‌ಟೈಲ್‌ನ ಹತ್ತಿರದ ಸ್ಟಾಪ್‌ನ ಬಸ್ಸು ಹಿಡಿದಳು. ಹೋಗುವಲ್ಲಿ ಅಂಥ ದೊಡ್ಡ ಉದ್ದೇಶವಿಲ್ಲದಿದ್ದರೂ, ಒಮ್ಮೆ ಬರುವಂತೆ ಆಗಾಗ ಬಲವಂತ ಮಾಡುತ್ತಿದ್ದಳು ವಾಸಂತಿ.

"ನಮ್ಮ ಹೊಸ ಸ್ಕೀಮ್‌ಗೆ ಸೇರ್ಕೋ. 2 ಸಾವಿರದಿಂದ ಹಿಡಿದು 200 ರೂಪಾಯಿವರೆಗೂ ಕಟ್ಟಿ ಸದಸ್ಯರಾಗಬಹ್ದು. ಆಕರ್ಷಕವಾದ ಬಹುಮಾನಗಳ ಜೊತೆ, ಒಂದು ಬಂಪರ್ ಬಹುಮಾನ ಕೂಡ ಇದೆ. ಅದು ನಿನ್ನ ಪಾಲೇ... ಆಗ್ಬಹ್ದು" ಈ ಡೈಲಾಗ್ ಆಗಾಗ ಹೊಡೆಯುತ್ತಿದ್ದಾಗ ತಡೆದು "ಸದ್ಯಕ್ಕೆ ಬೇಡ. ರಾತ್ರಿ ಮಲ್ಗಿ... ಬೆಳಿಗ್ಗೆ ಶ್ರೀಮಂತರಾಗಿ ಬಿಡಬಹುದೆಂಬ ಕನಸು ನಂಗಿಲ್ಲ".

ಇಂದು ಅವಳು ಹೋದಾಗ ಹೆಂಗಳೆಯರ ದೊಡ್ಡ ಸಮೂಹವೇ ಇತ್ತು. ಗಂಡಸರ, ಹೆಂಗಸರ, ಮಕ್ಕಳ ಬಟ್ಟೆಗಳನ್ನು ಮೂರು ವಿಭಾಗಗಳಾಗಿ

ವಿಂಗಡಿಸಿದರೂ ಕ್ಯಾಷ್‌ಕೌಂಟರ್ ಒಂದೇ. ಕೆಳ ಭಾಗವೆಲ್ಲ ಲೇಡಿಸ್‌ಗೆ ಬೇಕಾದ ಬಟ್ಟೆಗಳ ರಾಶಿ. ಮೇಲಿನ ಭಾಗವನ್ನು ವಿಭಾಗಿಸಿ ಜೆಂಟ್ಸ್ ಮತ್ತು ಮಕ್ಕಳ ಉಡುಪುಗಳಿಗೆ ಮೀಸಲಾಗಿಟ್ಟಿದ್ದರು. ಕೆಳಗಡೆಯ ಅದ್ದೂರಿತನ, ಸೊಬಗು, ವರ್ಣರಂಜಿತ ಆಕರ್ಷಣೆ ಮೇಲ್ಭಾಗದಲ್ಲಿ ಇರಲಿಲ್ಲ.

ಸೀರೆಗಳನ್ನು ತೋರಿಸುತ್ತಿದ್ದ ವಾಸಂತಿ ಇವಳನ್ನು ನೋಡಿ ಕಣ್ಣರಳಿಸಿದಳು. ಅವಳಿಗೆ ತುಂಬ... ತುಂಬ ಸಂತೋಷ. ಸದ್ಯಕ್ಕೆ, ಜಗತ್ತಿನಲ್ಲಿ ಈಗ ಹೆಚ್ಚು ಹೆಚ್ಚು ಇಷ್ಟಪಡುವ ವ್ಯಕ್ತಿಯೆಂದರೆ ಕಣ್ಮಣಿ ಮಾತ್ರವೇ.

ಮುಂದಿದ್ದವರ ಮುಂದೆ ಕೈಯಲ್ಲಿನ ಸೀರೆ ಹರಡಿ ಅವಳತ್ತ ಬಂದಳು, ಅತ್ತಿತ್ತ ನೋಡುತ್ತ "ನಂಗಂತು ಸರ್‌ಪ್ರೈಜ್, ಬಾ ಕೂತ್ಕೊ" ಎಳೆತಂದು ಕೂಡಿಸಿದಳು. "ಸ್ವಲ್ಪ ಹೊತ್ತು ಕೂತಿರು. ಒಂದರ್ಧ ಗಂಟೆ ಪರ್ಮಿಷನ್ ಪಡ್ಕೊಂಡ್... ಬಂದ್ಬಿಡ್ತೀನಿ. ನೀನೇನಾದ್ರೂ ನಮ್ಮ ಸ್ಕೀಮ್‌ನಲ್ಲಿ ಸೇರಿಕೊಳ್ಳೋಕೆ.... ಬಂದ್ಯಾ?". ಅವಳ ನಗುವಿನ ಪ್ರಶ್ನೆಗೆ ಉತ್ತರಿಸಲು ಹೋಗಲಿಲ್ಲ.

ಅಲ್ಲೇ ಕೂತ ಕಣ್ಮಣಿಗೆ, ವಾಸಂತಿಯ ಮಾತಿನ ವೈಖರಿ, ಮುಗುಳ್ನಗೆಯಿಂದ ಜನರನ್ನು ಆಕರ್ಷಿಸುವ, ಅವರನ್ನು ಒಪ್ಪಿಸುವ ರೀತಿಗೆ ಚಕಿತಳಾದಳು. 'ಭೇಷ್' ಅನಿಸಿತು.

ಆ ಹಿಂದಿನ ಜನ ಹೋದ ಕೂಡಲೇ, ಇವಳ ಮುಂದೆ ಕೆಲವು ಸೀರೆಯ ಪ್ಯಾಕೆಟ್‌ಗಳನ್ನು ತಂದು ಹಾಕಿ 'ಬಣ್ಣ, ಡಿಜೈನ್, ಕ್ವಾಲಿಟಿಯ ಬಗ್ಗೆ ವಿವರಿಸತೊಡಗಿದಾಗ ಏನು ಹೇಳಬೇಕೋ, ತಿಳಿಯದಂತೆ ಸುಮ್ಮನೆ ಕೂತಳು. ಅವಳೇ ಇವಳ ಹೆಗಲ ಮೇಲೆ ಸೀರೆ ಹಾಕಿ ಎರಡು ಸೀರೆಗಳನ್ನು ಆರಿಸಿಟ್ಟು, ಬಿಲ್‌ನ ಕೌಂಟರ್‌ಗೆ ಕಳಿಸಿದಾಗ ನಿಜವಾಗಿ ಗಾಬರಿಗೊಂಡಳು, ಕಣ್ಮಣಿ'.

"ಏಯ್, ಸೀರೆ ಅಂಥದೆಲ್ಲ ಬೇಡ" ಮೆಲ್ಲನೆ ದನಿಯಲ್ಲಿ ಹೇಳಿದಾಗ ವಾಸಂತಿ ನಸುನಕ್ಕಳು "ಸುಮ್ಸುಮ್ನೇ ಯಾರು ಬರೋಲ್ಲ. ನಮ್ಮ ಅಂಗ್ಡೀಗೆ ಬಂದ ಗಿರಾಕಿಯನ್ನು ಬರೀ ಕೈಯಲ್ಲಿ ಕಳಿಸೋಲ್ಲ". ತನ್ನ ಪರ್ಸ್ ಜಿಪ್ ತೆಗೆದು ಕೆಲವು ನೋಟುಗಳನ್ನು ಅವಳ ಹ್ಯಾಂಡ್ ಬ್ಯಾಗ್‌ಗೆ ತುರುಕಿ "ನೀನ್ಹೋಗಿ... ಪಡ್ಕೋ, ನಾನು ಹಾಜರಾಗ್ಬಿಡ್ತೀನಿ" ಬಂದ ಗಿರಾಕಿಗಳತ್ತ ಗಮನ ಕೊಟ್ಟವಳು, ಅಲ್ಲೇ ಇದ್ದ ಸೇಲ್ಸ್ ಗರ್ಲ್ ಜೊತೆ ಪಿಸಿಪಿಸಿ ಮಾತಾಡಿ, ಪಕ್ಕದ ಎ.ಸಿ.ರೂಮಿನ ಮುಂಭಾಗದಲ್ಲಿ ಕೂಡುತ್ತಿದ್ದ

ಮ್ಯಾನೇಜರ್ ಬಳಿಗೆ ಹೋದವಳು ಎರಡೇ ನಿಮಿಷದಲ್ಲಿ ಹಿಂದಿರುಗಿ ಬಂದಳು. ಆ ವೇಳೆಗೆ ಒಂದು ಸಾವಿರದ ನೂರಾ ಐವತ್ತೈದು ತೆತ್ತು ಎರಡು ಸೀರೆಗಳ ಜೊತೆ ಒಂದು ಕೂಪನ್ ಕೂಡ ಪಡೆದಾಗಿತ್ತು ಕಣ್ಮಣಿ. ಒಳಗೊಳಗೇ ಶಪಿಸಿದಳು. ಇದ್ದಿದ್ದು ಕೆಲವೇ ಸೀರೆಗಳು. ಆದರೂ ಆರ್ಥಿಕ ಭದ್ರತೆ ಇಲ್ಲದ ತಾವು ದುಂದು ವೆಚ್ಚ ಮಾಡಿದರೇ ಪುಟ್‌ಪಾತ್‌ನಲ್ಲಿ ನಿಲ್ಲಬೇಕಾಗುತ್ತದೆಯೆಂದು ಅವಳಿಗೆ ಗೊತ್ತು.

ಕಣ್ಮಣಿ ಹೊರಗೆ ಹೋಗಿ ನಿಂತಳು. ಷಾಪಿಂಗ್ ಕಾಂಪ್ಲೆಕ್ಸ್‌ಗಳು ಇದ್ದ ಮೈನ್ ರೋಡು ವಿದ್ಯುತ್‌ದ್ದೀಪಗಳಿಂದ ಝಗಝಗಿಸುತಿತ್ತು. ಜನ ದಟ್ಟನೆಯ ನಡುವೆ ವಾಹನ ಸಂಚಾರ-ಧೂಳು, ಶಬ್ದ.

"ಹೋಗೋಣ...." ವಾಸಂತಿ ಬಂದಳು.

ಗಂಭೀರವಾಯಿತು ಕಣ್ಮಣಿಯ ಮುಖ. "ಸಾರೀ ಕಣೇ, ಈಗಾಗ್ಲೇ ನಾವು ಸಾಕಷ್ಟು ಕಳ್ದುಕೊಂಡಿದ್ದೀವಿ. ಈ ಚಿಕ್ಕ ಚಿಕ್ಕ ಸಂತೋಷಗಳ್ನ ಕೂಡ ಕಳ್ದುಕೊಂಡ್ಬಿಟ್ರೆ.... ಹೇಗೆ? ನಮ್ಮಂಥವ್ರ ಪಾಲಿಗೆ ಸದಾ ಕಷ್ಟಗಳು, ಸಮಸ್ಯೆಗಳು ಇರುತ್ತೆ. ಹಾಗಂತ ಬದ್ಕನ್ನ ತುಂಬ ಭಾರ ಮಾಡ್ಕೋಬಾರ್ದಲ್ಲ" ಎಂದಳು ಅರ್ಥಪೂರ್ಣವಾಗಿ. ಅದು ವಾಸ್ತವವೇ. ನಡೆಯಬೇಕಾದ್ದು ದೂರವಿತ್ತು. ಕಲ್ಲು, ಮುಳ್ಳುಗಳ ಮೇಲೆ ನಡೆಯಬೇಕಾದ ಸ್ಥಿತಿ ಇದ್ದಾಗ, ಚಪ್ಪಲಿ ಕೊಳ್ಳುವಷ್ಟಾದರೂ ಸಾಮರ್ಥ್ಯವಿರಬೇಕೆಂದು ಅವಳ ಅನಿಸಿಕೆ.

"ಆಯ್ತು, ಬಿಡು! ಚಿಕ್ಕ ಚಿಕ್ಕ ಸಂತೋಷಗಳನ್ನು ನಮ್ಮದಾಗಿಸಿಕೊಳ್ಳಲು ಕೂಡ ಧೈರ್ಯ ಬೇಕು. ಈಗ ಎಲ್ಲಿಗೆ ಹೋಗೋಣ?" ಕಣ್ಮಣಿ ರಾಜಿಯಾದಳು.

ಎದುರಿನ ಐಸ್‌ಕ್ರೀಮ್ ಪಾರ್ಲರ್‌ಗೆ ಕರೆದೊಯ್ದಾಗ ಮಾತ್ರ ನಿರಾಕರಿಸಿದಳು "ಇದು ಕೆಟ್ಟ ಧೈರ್ಯವಾಗುತ್ತೆ. ನಾವೇನು ಐಸ್‌ಕ್ರೀಮ್ ಹುಡ್ಗಿಯರಲ್ಲ" ಹಿಂದಕ್ಕೆ ಕರೆದೊಯ್ದಳು.

ಹತ್ತಿರದಲ್ಲೆ ಇದ್ದ ಮಹಾಲಕ್ಷ್ಮಿ ದೇವಸ್ಥಾನಕ್ಕೆ ಹೋಗಿ ಮಂಗಳಾರತಿ, ಪ್ರಸಾದ ಪಡೆದು ಹೊರಗೆ ಬಂದು ಮೆಟ್ಟಲು ಮೇಲೆ ಕೂತ. ಕಳ್ಳೇಕಾಯಿ ಮಾರುತ್ತಿದ್ದವನನ್ನು ಕರೆದು, ಎರಡು ರೂಪಾಯಿ ಕೊಟ್ಟು ಎರಡು ಪೊಟ್ಟಣ ಪಡೆದು ತಿನ್ನತೊಡಗಿದರು.

ಒಂದು ಕಾರು ಬಂದು ನಿಂತಿತು. ಅದರೊಳಗಿನಿಂದ ಒಬ್ಬ ವ್ಯಕ್ತಿ ಇಳಿದಾಗ, ದಿಗ್ಭ್ರಾಂತಳಾದಳು. ಅದೇ ವ್ಯಕ್ತಿ. ವಯಸ್ಸಾದ ಒಬ್ಬ ಹೆಂಗಸನ್ನು

ಇನ್ನೊಬ್ಬ ಹೆಂಗಸಿನ ಸಹಾಯದಿಂದ ಇಳಿಸಿಕೊಂಡವನು, ಅನಾಮತ್ತಾಗಿ ಎತ್ತಿಕೊಂಡು ದೇವಸ್ಥಾನದ ಮೆಟ್ಟಲೇರಿದಾಗ, ಆ ಇನ್ನೊಬ್ಬ ಹೆಂಗಸು ಒಂದು ಮಡಚುವ ಛೇರ್ ಹಿಡಿದು ಓಡಿದಳು ಅವರ ಹಿಂದೆ. ಕಳ್ಳೆಕಾಯಿ ಸುಲಿಯುತ್ತಿದ್ದ ಕಣ್ಮಣಿಯ ಕೈ ಬೆರಳು ಸ್ಥಬ್ಧವಾಗಿ ಮರಗಟ್ಟಿದಂತಾಯಿತು.

ಏನೋ ಹರಟುತ್ತಿದ್ದ ವಾಸಂತಿ, ಅಚ್ಚ ಬಿಳಿಯ ಷಿಫಾನ್ ಸೀರೆಯ ಒಡಲ್ಲೆಲ್ಲ ನೇರಳೆ ಬಣ್ಣದ ಹೂಗಳಿದ್ದ ಸೀರೆಯುಟ್ಟ ಯುವತಿಯನ್ನು ನೋಡಿ ಎದ್ದು ಹೋದಳು. ಕೂತ ಕಣ್ಮಣಿ ಕಲ್ಲಾಗಿದ್ದಳು. ಕದಲದ ಬಂಡೆಯಾದಳು, ಚಲನೆ ಬಂದ ಕೂಡಲೇ ಮೆಟ್ಟಲುಗಳನ್ನೇರಿ ದೇವಸ್ಥಾನಕ್ಕೆ ಹೋಗಿ, ಅಲ್ಲೆಲ್ಲ ಅರಸಿಕೊಂಡು ಹಿಂದಿರುಗುವ ವೇಳೆಗೆ ಅದೇ ವ್ಯಕ್ತಿ, ಆ ಹೆಂಗಸನ್ನು ಕಾರು ಹತ್ತಿಸುತ್ತಿದ್ದ. ಕೆಲವು ಸೆಕೆಂಡ್‌ಗಳಲ್ಲಿಯೇ ಕಾರು ಮರೆಯಾಗಿ ಹೋಯಿತು. ಇನ್ನ ವಾಸಂತಿಯ ಮಾತುಗಳು ಸಾಗಿತ್ತು. ಕಣ್ಮಣಿ ಮೊದಲು ಕೂತ ಜಾಗದಲ್ಲಿಯೇ ಕೂತಳು.

"ಸಾರಿ, ಆಕೆ ನನ್ನ ಪರ್ಮನೆಂಟ್ ಕಸ್ಟಮರ್ ತಿಂಗಳಿಗೆ ಮೂರುನಾಲ್ಕು ಸೀರೆಗಳನ್ನಾದ್ರೂ ಪರ್ಚೇಸ್ ಮಾಡ್ತಾರೆ. ನಮ್ಗೆ ಸೇಲ್ಸ್ ಮೇಲೆ ಕಮಿಷನ್ ಉಂಟು. ನನ್ನನ್ನೇ ಹುಡ್ಕಿಕೊಂಡು ಬರ್ತಾಳೆ. ಕಸ್ಟಮರ್ಸ್‌ನ ಚೆನ್ನಾಗಿ ಇಟ್ಕೊಂಡ್ರೆ... ನಮ್ಗೂ ಬೆನಿಫಿಟ್. ಅದ್ಕೆ ಒಂದಿಷ್ಟು ಮಾತುಗಳು. ಬಾ... ಹೋಗೋಣ" ಎಂದಾಗ ಎದ್ದಳು. ಸಿಟಿ ಬಸ್ಸು ಹತ್ತುವವರೆಗೂ ಆಕೆಯ ಸೀರೆಯ ಪ್ರೇಮದ ಬಗ್ಗೆ ಹೇಳಿಕೊಂಡು ನಗುತ್ತಿದ್ದಳು.

ವಾಸಂತಿ ಮಲಗಿದ ಮೇಲೆಯೇ ಕಣ್ಮಣಿ ಎಂದಿನಂತಿಲ್ಲವೆಂದು ಕೊಂಡಳು. ಮೌನವನ್ನು ಇಷ್ಟಪಡುವ ಅವಳು ಇಂದು ಕಪ್ಪು ಮೋಡ ಮುಸುಕಿದ ಆಕಾಶದಂತಿದ್ದಳು ತಕ್ಷಣ ಮುಗ್ಗುಲಿಗೆ ತಿರುಗಿದಳು ಗಾಬರಿಯಿಂದ.

"ಕಣ್ಮಣಿ, ಯಾಕೋ ಒಂದು ತರಹ ಇದ್ದೀಯಾ? ಏನಾದ್ರೂ... ಪ್ರಾಬ್ಲಮ್?" ಕೇಳಿದ ಕೂಡಲೇ ಅಂಗಾತ ಮಲಗಿದ್ದವಳು ಅವಳತ್ತ ತಿರುಗಿ ಭಾರವಾದ ನಿಟ್ಟುಸಿರು ದಬ್ಬಿ "ಅದೇ, ಆ ವ್ಯಕ್ತಿನನ್ನ ಮತ್ತೆ ನೋಡ್ದೆ. ನಾನು ಮರೆಯಲು ಪ್ರಯತ್ನಿಸಿದಷ್ಟು ಆ ವ್ಯಕ್ತಿ ಅವನ ಮಸ್ತಿಷ್ಕದಲ್ಲಿ ದೃಢವಾಗಿ ನಿಂತಿದ್ದ. ಇಂದು ನೋಡಿದ ಕೂಡಲೇ ತಟಸ್ಥಳಾಗ್ಬಿಟ್ಟೆ. ನಾನು ಎಷ್ಟೇ ಪ್ರಯತ್ನಿಸಿದರೂ ನನ್ನನ್ನು ನಾನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳೋಕೆ ಸಾಧ್ಯವಾಗಲಿಲ್ಲ. ಹುಡ್ಕಿಕೊಂಡು ಹೋದೆ. ನನ್ನ ಹುಡುಕಾಟ ಮುಗ್ದು

ಹಿಂದಿರುಗುವ ವೇಳೆಗೆ ಆ ವ್ಯಕ್ತಿ ಕಾರು ಹತ್ತಿದ. ಆದರೂ ಒಬ್ಬ ಅಪರಿಚಿತ ವ್ಯಕ್ತಿಯ ಬಗ್ಗೆ ಇಷ್ಟೆಲ್ಲ ಸೆಳೆತ, ಹೊಯ್ದಾಟ ಯಾಕೆ? ಅಕಸ್ಮಾತ್ ನಾನು ಇದ್ದ ಅನಾಥಾಶ್ರಮಕ್ಕೆ ಬಂದಿರಬಹುದು. ಅದೇನು ಅಂಥ ದೊಡ್ಡ ಪರಿಚಯವಲ್ಲ, ಯೋಚಿಸಿದಷ್ಟು ತೀರಾ ಕಗ್ಗಂಟಾಗುತ್ತಷ್ಟೆ" ತೀರಾ ಗೊಂದಲದಲ್ಲಿ ಬಿದ್ದಂತೆ ಹೇಳಿದಳು.

ಇದು ತೀರಾ ವಿಚಿತ್ರವೆನಿಸಿತು ವಾಸಂತಿಗೆ.

"ಏನೋಪ್ಪ, ನಂಗೋಂದು ಅರ್ಥವಾಗೋಲ್ಲ" ಎದ್ದು ತಲೆಯ ದಿಂಬನ್ನ ತೊಡೆಯ ಮೇಲೆ ಹಾಕಿಕೊಂಡು "ನಿಂಗೆ ಗೊತ್ತಿಲ್ಲದ ರಕ್ತ ಸಂಬಂಧಿ ಇರ್ಬಹುದು. ಹುಟ್ಟಿದ ಮಗುವಿನ ಬೀದಿಗೆಸೆದು ತಪ್ಪಿಸಿಕೊಂಡಿರಬಹುದು. ಆದರೆ ರಕ್ತ ಗುರುತಿಸಿದೆ ಅಷ್ಟೆ. ಹೇಗಾದ್ರೂ ಮಾಡಿ ಆ ವ್ಯಕ್ತಿ ಯಾರೂಂತ ಕಂಡು ಹಿಡೀಬೇಕು. ಅವ್ರ ಇತಿಹಾಸ ಸ್ವಲ್ಪ ಕೆದಕಿದರೇ ನಿನ್ನ ತಾಯ್ತಂದೆ ಸಿಗಬಹುದು, ಆಗ ಎದುರು ನಿಂತು ಛೀಮಾರಿ ಹಾಕ್ಬಹುದು." ವಾಸಂತಿಯ ಮಿದುಳಿಗೆ ಹೊಳೆದ ವಿಷಯವನ್ನು ಅವಳ ಮುಂದಿಟ್ಟಳು.

ಕಣ್ಮಣಿಯ ಎದೆ ಭಾರವಾಯಿತು. ಅನಾಥಾಶ್ರಮದಲ್ಲಿ ಬೆಳೆದವಳು. ಯಾವ ಯಾವ ಸ್ಥಿತಿಯಲ್ಲಿ ಮಕ್ಕಳು ಅಲ್ಲಿಗೆ ಬರುತ್ತದೆಯೆಂದು ಸ್ವಲ್ಪ ಬೆಳೆದಂತೆ ತಿಳಿಯತೊಡಗಿತ್ತು. ಖಂಡಿತ ಅವಳಿಗೆ ತಾಯಿ ತಂದೆಯರನ್ನು ನೋಡಬೇಕೆಂಬ ಆಸಕ್ತಿ ಇರಲಿಲ್ಲ. ಹುಟ್ಟಿದ ಮಗು ಕಾಲಿಗೆ ಚುಚ್ಚಿದ ಮುಳ್ಳೆನ್ನುವಂತೆ ಎಸೆದ ಜನರ ಬಗ್ಗೆ ತಿಳಿಯಲು, ಅವರ ನಡುವೆ ಬದುಕುವ ಸಾಹಸವಂತು ಅವಳು ಮಾಡಲಾರಳು.

"ಅಂಥದೇನು ಬೇಡ! ಎಸೆದ ಜನರ ಮುಂದೆ ನಿಂತು ನಾನು ನಿಮ್ಮ ಮಗ್ಳುಂತ ಸಾಭೀತುಪಡಿಸಿಕೊಳ್ಳೋ ಇಷ್ಟ ನಂಗಿಲ್ಲ. ಸದ್ಯ ಮತ್ತೆಂದೂ ಆ ವ್ಯಕ್ತಿ ನನ್ನ ಕಣ್ಣಿಗೆ ಬಿದ್ದು ಮನದಲ್ಲಿ ಬಿರುಗಾಳಿ ಎಬ್ಬಿಸೋದ್ಬೇಡ. ದೇವರು ಸದ್ಯಕ್ಕೆ ನಂಗೆ ಒಂದಿಷ್ಟು ಮರೆವನ್ನು ಕೊಡ್ಲಿ" ಆ ವಿಷಯಕ್ಕೆ ತೆರೆ ಎಳೆಯುವ ಇರಾದೆ ವ್ಯಕ್ತಪಡಿಸಿದಳು. ಇದು ಮೇಲ್ನುಖದ್ದು. ಅಂತರಂಗಿಕವಾಗಿ ಆ ವ್ಯಕ್ತಿಯ ನೆನಪು ಹಿತವನ್ನು ತರುತ್ತಿತ್ತು.

ಮರುದಿನ ಬೆಳಿಗ್ಗೆ ಬೆಳಿಗ್ಗೆ ಮೂರು ದಿನಗಳ ಪೇಪರನ್ನು ತಂದು ಮುಂದೆ ಹಾಕಿಕೊಂಡು ಕಾಲಂಗಳನ್ನು ನೋಡಿ ನೋಡಿ ಗುರುತು ಹಾಕಿಕೊಳ್ಳ ತೊಡಗಿದಾಗ, ಒದ್ದೆಯ ತಲೆಯನ್ನೊರೆಸುತ್ತ ಬಂದ ವಾಸಂತಿ ಅಲ್ಲೇ ನಿಂತಳು.

"ಏನೋ, ಗುರ್ತು ಮಾಡ್ತಾ ಇದ್ದೀಯಲ್ಲ."

ಕಣ್ಮಣಿ ಮೆಲ್ಲಗೆ ತಲೆಯೆತ್ತಿ "ಹೌದು, ನಂಗೊಂದು ಕೆಲ್ಸ ಬೇಕು. ಆ ಮನುಷ್ಯ ಆತ್ಮಾಭಿಮಾನ ರೊಚ್ಚಿಗೇಳುವಂತೆ ಮಾತಾಡುತ್ತಾರೆ. ಪ್ರಪಂಚದಲ್ಲಿ ಅನಾಥರು ಸಮಾಜಕ್ಕೊಂದು ಶಾಪ. ಅವ್ರುಗಳು ಬದುಕಲೇಬಾರ್ದು ಎನ್ನುವುದು ಅವ್ರ ಅಭಿಪ್ರಾಯಾಂತ ಕಾಣಿಸುತ್ತೆ. ಪದೇ ಪದೇ ಜೆನೆಟಿಕ್ಸ್ ಬಗ್ಗೆ ಮಾತಾಡ್ತಾರೆ. ನಂಗೂ ಸಹಿಸಿ ಸಹಿಸಿ ಸಾಕಾಯ್ತು. ರಾಜಿನಾಮೆ ಬರ್ದು ಕೊಟ್ಬಂದೆ" ಎಂದಳು. ಅಪಾರ ತಾಳ್ಮೆಯ ಕಣ್ಮಣಿ ಕೆಲಸ ಬಿಟ್ಟು ಬರಲು ಹೆಚ್ಚು ಮಾನಸಿಕ ಹಿಂಸೆ ಅನುಭವಿಸಿರಬೇಕೆಂದುಕೊಂಡ ವಾಸಂತಿ ನೊಂದಳು. ಬದುಕು ದೀರ್ಘ ಕಾಲದ ಹೋರಾಟವೇನೋ ! ಈ ಹೋರಾಟದಲ್ಲಿಯೆ ಮುಗಿದುಹೋಗುತ್ತೇನೋ ನಮ್ಮಂಥವರ ಜೀವನ ಎನಿಸಿತು.

"ನೀನು ರಾಜಿನಾಮೆ ಕೊಡ್ಬಾರ್ದಿತ್ತು. ಒಂದಿಷ್ಟು ಕಾದಿದ್ದರೇ ಯೂನಿಯನ್ ನಿನ್ನ ನೆರವಿಗೆ ಬರ್ತಾ ಇತ್ತೇನೋ ! ಕಾನೂನು ಮೊರೆ ಹೋಗಬಹುದಿತ್ತು" ಎಂದಳು ವಾಸಂತಿ. ಅಡ್ಡಡ್ಡ ತಲೆಯಾಡಿಸಿದ ಕಣ್ಮಣಿ, "ಅದೆಲ್ಲ ತುಂಬ ಕಷ್ಟ. ನಂಗೆ ಯೂನಿಯನ್‌ನಿಂದ ಸಹಾಯವಾಗುತ್ತೋ ಇಲ್ವೋ ! ಇನ್ನ ಕಾನೂನಿನ ಮೊರೆ ಹೋಗೋಕೆ ಸರ್ಯಾದ ಎವಿಡೆನ್ಸ್ ಬೇಕು. ಅಷ್ಟೆಲ್ಲ ಹೋರಾಟ ನಡೆಸಲು ಸಮಯ, ಹಣ ಎರ್ಡು ಬೇಕಾಗುತ್ತೆ. ಸಮಯ ಇದೇಂತ ಅಂದ್ಕೊಂಡ್ರು... ಅದರ ನೆರವಿಗೆ ಹಣ ಬೇಕು. ಆಮೇಲೆ ಅಲ್ಲಿ ಕೆಲ್ಸ ಮಾಡೋದು ಕಷ್ಟ. ನಿರಂತರ ಕಿರಿಕಿರಿ. ಅವೆಲ್ಲ ಯಾಕ ಬೇಕು ? ಕೆಲವು ದಿನ ನಿರುದ್ಯೋಗ. ಆಮೇಲೆ ಕೆಲ್ಸವೇ ಸಿಗಲಿಲ್ಲಾಂತ ಅಂದ್ಕೋ, ಸ್ವಂತವಾಗಿ ಏನಾದ್ರೂ ಮಾಡ್ತೀನಿ. ಮೆಣಸಿನಪುಡಿ, ಹಪ್ಪಳ, ಕವರ್ಸ್ ಮಾಡೋದು, ಫೈಲುಗಳ ಮ್ಯಾನಿಫ್ಯಾಕ್ಚರ್-ಇಂಥದೆಲ್ಲ ಮಾಡೋಕೆ ದೊಡ್ಡದಾಗಿ ಕ್ಯಾಪಿಟಲ್ ಏನು ಬೇಕಾಗೋಲ್ಲ" ಎಂದವಳೇ ತನ್ನ ಕೆಲಸದಲ್ಲಿ ಮಗ್ನವಾದಳು. ಅವಳ ಆತ್ಮವಿಶ್ವಾಸಕ್ಕೆ 'ಭೇಷ್' ಎಂದುಕೊಳ್ಳಬೇಕೆನಿಸಿತು ವಾಸಂತಿಗೆ.

ಕಣ್ಮಣಿ ಹಾಸ್ಟಲ್ ಸೇರಿ ರೂಮು ಮೇಟ್ ಆದನಂತರ ವಾಸಂತಿ ಸ್ವಲ್ಪ ಬೆಳೆದಿದ್ದಳು. ಮಲ್ಲಿಗೆ ವಾಡೆಯಲ್ಲಿ ಬೆಳೆದ ಇವಳನ್ನು ಎಷ್ಟೋ ಸಲ ತಿದ್ದಿದವಳು ಅವಳೇ.

"ಕಣ್ಮಣಿ ನೀನು ನಂಗೆ ಸಿಗದಿದ್ರೆ... ನಾನೇನಾಗ್ತ ಇದ್ದೆ" ಕೇಳಿದಳು .

ಅಲ್ಲೇ ಕೂತು. ನೋಟ ಎತ್ತಿ ನಕ್ಕವಳು "ನನ್ನ ಪ್ರಕಾರ ಅಂಥದೇನು ಆಗ್ತಾ ಇರ್ಲಿಲ್ಲ. ನಂಗೆ ಗ್ರೇಟ್ ಲಾಸ್. ಮಲ್ಲಿಗೆ ವಾಡೆಯಂಥ ಊರು ಆ ಬಂಗ್ಲೆ ಅಲ್ಲ.... ವಾಡೆನ ನೋಡೋ ಅವಕಾಶ ಸಿಕ್ತಾ ಇರ್ಲಿಲ್ಲ" ನೆನಪಿಸಿಕೊಂಡಳು ಅಂದಿನ ಘಟನೆಗಳನ್ನು. ಭಯ, ವಿಸ್ಮಯಕ್ಕಿಂತ ಅವಿಸ್ಮರಣೀಯವಾದ ಅನುಭವ. ಬದುಕಿನಲ್ಲಿ ಒಮ್ಮೊಮ್ಮೆ ನಡೆಯುವಂಥದ್ದು.

ಅದರಿಂದ ಹೊರ ಬಂದು ಪೇಪರನ್ನು ಮತ್ತಷ್ಟು ಹತ್ತಿರಕ್ಕೆಳೆದುಕೊಂಡಿದ್ದು ಒಂದು ತಿರುವಿಗೆ ನಾಂದಿಯಾಯಿತು.

ಒಂದು ಚಿಕ್ಕ ಪ್ರಕಟಣೆ ಅವಳ ಗಮನ ಸೆಳೆಯಿತು. 'ಸ್ವಲ್ಪ ಹೆಚ್ಚು ಸಹನೆ ಇರುವ, ಹಿರಿಯರ ಬಗ್ಗೆ ಪ್ರಾಮಾಣಿಕವಾದ ಗೌರವಾದರಗಳು ಉಳ್ಳ ಆದರ್ಶ ಮನೋಭಾವ, ಇಪ್ಪತ್ತು, ಮುವತ್ತರ ನಡುವಿನ ಯುವತಿ ಬೇಕಾಗಿದ್ದಾಳೆ. ಆಕರ್ಷಕವಾದ ಸಂಬಳದ ಜೊತೆ ಅಕಾಮೊಡೇಷನ್ ಒದಗಿಸಲಾಗುತ್ತೆ. ಕನಿಷ್ಟ ಕನ್ನಡ, ಇಂಗ್ಲಿಷ್, ಹಿಂದಿ ಬಲ್ಲವಳಾಗಿರಬೇಕು. ಓದುವಿಕೆಯಲ್ಲಿ ಸಹಜವಾದ ಆಸಕ್ತಿ ಉಳ್ಳವರಿಗೆ ಆದ್ಯತೆ'.

ಅದನ್ನು ಗುರುತು ಹಾಕಿದಳು. ಅಲ್ಲಿ ಕ್ಲಾಸ್, ಪರ್ಸೆಂಟೇಜ್, ಸೌಂದರ್ಯದ ಬಗ್ಗೆ ಒಂದು ಮಾತು ಇರಲಿಲ್ಲ. ಅವಳಿಗೆ ಕನ್ನಡ, ಇಂಗ್ಲೀಷ್, ಹಿಂದಿಗಿಂತ ಸ್ವಲ್ಪ ಚೆನ್ನಾಗಿ ಗೊತ್ತು ಅಷ್ಟೆ. ಅಂಥ ಪಂಡಿತಳೇನು ಅಲ್ಲ. ಆದರೂ ಒಂದು ಅಪ್ಲಿಕೇಷನ್ ಹಾಕಬೇಕೆನಿಸಿತು. ತಕ್ಷಣವೇ ಒಂದು ಅಪ್ಲಿಕೇಷನ್ ಸಿದ್ಧಪಡಿಸಿ ಕವರ್‌ಗೆ ಹಾಕಿ ಮೇಲೆದ್ದಳು.

"ಊಟ ಮುಗ್ಸಿಕೊಂಡು, ನಾನು ನಿನ್ನೊತೆ ಬರ್ತೀನಿ, ಒಂದು ಲೆಟರ್ ಪೋಸ್ಟ್ ಮಾಡೋದಿದೆ".

ಹೊರಡುವ ತರಾತುರಿಯಲ್ಲಿದ್ದ ವಾಸಂತಿಯೇನು ಪ್ರಶ್ನಿಸಲಿಲ್ಲ. ಡೈನಿಂಗ್ ಹಾಲ್‌ಗೆ ಬರುವ ವೇಳೆಗೆ ಕೆಲವರು ಊಟ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಬರೀ ಮುಗುಳ್ನಗೆಯ ವಿನಿಮಯ ಮಾತ್ರ. ಅವರವರಿಗೆ ಅವರದೇ ಆದ ಒತ್ತಡಗಳು, ಸಮಸ್ಯೆಗಳು ಬರುವಾಗ ಡಬ್ಬಿಗಳನ್ನು ತಂದಿಟ್ಟರೇ ತಿಂಡಿಯನ್ನು ತುಂಬಿಕೊಡುವ ಪರಿಪಾಠ. ಇಂದು ಇಬ್ಬರ ಮಧ್ಯೆ ಒಂದೇ ಡಬ್ಬಿ ಕಂಡಾಗ ಕುಕ್ ಹುಬ್ಬೇರಿದ.

"ಒಂದೇ ಡಬ್ಬಿ ಇದೇ ಮೇಡಮ್."

"ಇವತ್ತು ಕಣ್ಮಣಿ ರಜ" ವಾಸಂತಿ ಹೇಳಿದಳು.

'ದಕ್ಕೆ ಕಾರಣವಿತ್ತು. ಈ ವರ್ಕಿಂಗ್ ಉಮನ್ಸ್ ಹಾಸ್ಟಲ್ ನಡೆಸುತ್ತಿದ್ದವರು ಮಹಾನ್ ಸೂಕ್ಷ್ಮ. ಯಾರಿಗಾದರೂ ಕೆಲಸವಿಲ್ಲವೆಂದು ಗೊತ್ತಾದ ಕೂಡಲೇ, ಖಾಲಿ ಮಾಡುವ ಸೂಚನೆ ಕೊಡುತ್ತಿದ್ದರು. 'ಸಮಾಜ ಸೇವೆ' ಎನ್ನುವ ಈ ಜನ ದಯಾದಾಕ್ಷಿಣ್ಯ ತೋರುತ್ತಿರಲಿಲ್ಲ.

ಊಟ ಮಾಡಿ ಇಬ್ಬರು ಹೊರಗೆ ಬಂದಾಗ, ಎದುರಾದ ವಾರ್ಡನ್ "ನೀನು ಕೆಲ್ಸಕ್ಕೆ ರಾಜಿನಾಮೆ ಕೊಟ್ಟೇಂತ ಗೋತಾಯ್ತು!" ವಿಚಾರಿಸಿದಾಗ ತಣ್ಣಗೆ ನುಡಿದಳು, ಕಣ್ಮಣಿ "ಬೇರೆ ಕಡೆ ಅಪಾಯಿಂಟ್‌ಮೆಂಟ್ ಸಿಕ್ತು, ಸದ್ಯಕ್ಕೆ ನಾನು ಇದ್ದ ಕಡೆ ಪ್ರಮೋಷನ್, ಇನ್‌ಕ್ರಿಮೆಂಟ್, ಅಂಥದೇನು ಸದ್ಯಕ್ಕಿಲ್ಲ. ಸೆಕ್ಯೂರಿಟಿ ಬಗ್ಗೆ ಹೇಳೋಕ್ಕಾಗೋಲ್ಲ. ಯಾವುದಾದ್ರೂ ಕಾರಣವೊಡ್ಡಿ ಕೆಲ್ಸದಿಂದ ವಜಾ ಮಾಡ್ಬಹ್ದು. ಇದ್ನೆಲ್ಲ ಮನಸ್ಸಿನಲ್ಲಿ ಇಟ್ಕೊಂಡೇ.. ಬಿಟ್ಟಿದ್ದು" ಆಕೆಗೆ ಸಮಾಧಾನವೆನಿಸಿತು.

"ಗುಡ್, ನಿನ್ನ ಡಿಸಿಷನ್ ತುಂಬ ಒಳ್ಳೇದು. ನಮ್ಗೆ ಒಂದಿಷ್ಟು ಕೆಟ್ಟ ಅನುಭವಗಳು ಕೂಡ ಆಗಿವೆ. ಮಧ್ಯದಲ್ಲಿ ಕೆಲ್ಸ ಕಳ್ಕೊಂಡವ್ರು... ಗುಟ್ಟಾಗಿಟ್ಟು ಪರದಾಡ್ತಾರೆ. ಒಂದ್ತಿಂಗ್ಳು, ಎರಡು ತಿಂಗ್ಳು ಅಡ್ವಾನ್ಸ್‌ನಲ್ಲಿ ಮುಗಿಯುತ್ತೆ. ಆಮೇಲೆ ನಾವೇ ಹೊರ್ಗೆ ಹಾಕ್ಬೇಕಾಗುತ್ತೆ. ಅದ್ಕೆ ಸ್ವಲ್ಪ ಅಲರ್ಟ್ ಆಗಿರುತ್ತಿವಿ."

ಆಕೆಯ ಮಾತುಗಳಿಗೆ ಬರೀ ಕಿರುನಗೆ ಬೀರಿದಳು, ವಾಸಂತಿ ತುಟಿ ಎರಡು ಮಾಡಲಿಲ್ಲ. ಇವಳಿಗೆ ಕೆಲಸವಿಲ್ಲದಾಗ, ಕಣ್ಮಣಿ ತಿಂಗಳ ಪೇಮೆಂಟ್ ಸರಿಯಾಗಿ ಮಾಡಿದರೂ, ವಾಸಂತಿಯ ಬಗ್ಗೆ ಅನಾದರ ತೋರಿದ್ದು ಅವಳನ್ನು ಮರೆತಿರಲಿಲ್ಲ.

ಬಸ್‌ಸ್ಟಾಪ್‌ವರೆಗೂ ಜೊತೆಯಾಗಿ ಬಂದ ಕಣ್ಮಣಿ ಅಲ್ಲೇ ಇದ್ದ ಪೋಸ್ಟ್ ಡಬ್ಬಕ್ಕೆ ಲೆಟರ್ ಹಾಕಿ "ಹೇಗೂ ಫ್ರೀಯಾಗಿದ್ದೀನಿ. ಒಂದ್ಸಲ ಅನಾಥಾಶ್ರಮಕ್ಕೆ ಹೋಗ್ಬರ್ತೀನಿ. ನಂಗೂ ಟೈಮ್ ಪಾಸಾಗುತ್ತೆ" ಹೇಳಿದಳು. ವಾಸಂತಿ ಅವಳ ಕೈ ಹಿಡಿದು ಭರವಸೆ ತುಂಬುವಂತೆ ಅದುಮಿದಳು. ಇವಳು, ಅವಳು ಅಭಿಮುಖವಾಗಿ ನಡೆದರು. ಆ ವೇಳೆಯಲ್ಲಿ ಬಸ್ಸು ಹಿಡಿಯುವುದು ಕಷ್ಟ. ಆಟೋಗೆ ಹಣ ತೆರುವ ಸ್ಥಿತಿಯಲ್ಲಿ ಅವಳಿರಲಿಲ್ಲ. ನಡೆದೆ ಹೊರಟಳು. ಮಧ್ಯದಲ್ಲಿ ಎದುರಾದ ಮಳವಳ್ಳಿ ಸೀತಮ್ಮ ಅವಳ ಹಾಸ್ಟಲ್ ಮೇಟ್.

"ಏನ್ರೀ, ಒಬ್ಬರೇ... ಹೊರಟಿದ್ದೀರಾ?" ಬಿಸಿಲಿಗೆ ಹಿಡಿದ ಕೊಡೆಯನ್ನು ಮಡಚಿ "ಅರ್ಧ ದಿನ ರಜ ಹಾಕ್ಬಂದೇ. ಹುಡುಗರಿಗೆ ಒಂದಿಷ್ಟು ಬಟ್ಟೆ ತಗೋಬೇಕು. ನೀವೂ ಸ್ವಲ್ಪ ಬನ್ನಿ" ಕರೆದಳು. ಹತ್ತು ವರ್ಷದಿಂದ ಆ ವರ್ಕಿಂಗ್ ಉಮೆನ್ಸ್ ಹಾಸ್ಟಲ್‌ನಲ್ಲಿದ್ದಳು. ಎಲ್.ಐ.ಸಿ, ಯಲ್ಲಿ ಕೆಲಸ. ಒಂದು ಬ್ರಾಂಚ್‌ನಿಂದ ಇನ್ನೊಂದು ಬ್ರಾಂಚ್‌ಗೆ ಟ್ರಾನ್ಸ್‌ಫರ್ ಆಗುತ್ತಿತ್ತೆ ವಿನಃ, ಅವರ ಊರಿನ ಕಡೆಗೆ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುತ್ತಿರಲಿಲ್ಲ, ಅದೇನು.... ಕತೆಯೋ!

"ಎಲ್ಲಿಗೋ ಹೊರಟಿದ್ದೆ!" ಸ್ವಲ್ಪ ಅನುಮಾನಿಸಿದಳು.

"ಪರ್‍ವಾಗಿಲ್ಲ, ಇವತ್ತು ನಂಗೋಸ್ಕರ ಬನ್ನಿ. ಈ ಒಂಟಿತನ ಕೆಲವೊಮ್ಮೆ ರೋಸಿಹೋಗುತ್ತೆ" ಕೇಳಿಕೊಂಡಳು. ಅರ್ಥವಾಗದ ದುಗುಡದಿಂದ ಬೆಯುತ್ತಿದ್ದಳು.

ಇಬ್ಬರು ಆಟೋದಲ್ಲಿ ಷಾಪಿಂಗ್‌ಸೆಂಟರ್‌ಗೆ ಹೋಗಿ ಬಟ್ಟೆ ಖರೀದಿಸಿ ಹೊರ ಬರುವ ವೇಳೆಗೆ ಮಧ್ಯಾಹ್ನವೇ ಆಯಿತು. ತನ್ನ ಮಕ್ಕಳಿಗಾಗಿ ತಾಯಿ ಬಟ್ಟೆ ಆಯ್ಕೆ ಮಾಡುವಾಗ ಅತಿ ಎಚ್ಚರವಹಿಸುತ್ತಾಳೆಂಬ ಅನುಭವವಾಯಿತು.

"ಇಲ್ಲೇ ಎಲ್ಲಾದ್ರೂ ಊಟ ಮಾಡೋಣ" ಹತ್ತಿರದ ಹೋಟಲ್‌ಗೆ ಕರೆದೊಯ್ದಾಗ ನಿರಾಕರಿಸಿದಳು "ನಂದು ಊಟ ಆಯ್ತು. ನಾನು ಕಾಫೀ ಮಾತ್ರ ತಗೋತೀನಿ" ಕಣ್ಮಣಿಯ ಮಾತಿಗೆ ಒಪ್ಪಿಗೆ ಸಿಗಲಿಲ್ಲ. ಎರಡು ಊಟದ ತಟ್ಟೆ ಒಂದೇ ಬಂತು.

ಪೂರಿಯನ್ನು ಮುಗಿಸಿ ಅನ್ನ ಕಲೆಸುತ್ತ ಸೀತಮ್ಮ "ನೀವಿಬ್ರೂ ಮನೆ ಮಾಡ್ತೀರಾ, ಅನ್ನೋ ಮಾತು ಕಿವಿಗೆ ಬಿತ್ತು. ನನ್ನನ್ನ ಕೂಡ ಜೊತೆಯಾಗಿ ಸೇರ್‍ಸಿಕೊಳ್ಳಿ. ಮೂರು ಜನನೂ ಷೇರ್ ಮಾಡ್ಕೋಬಹ್ದು. ನಂಗೂ ಹಾಸ್ಟಲ್ ಜೀವನ ರೋಸಿಹೋಗಿದೆ. ನಾನಂತೂ ರಿಟೈರ್ಡ್ ಆಗೋವರ್‍ಗೂ ಇಲ್ಲಿರೋಳೇ ಅಷ್ಟರಲ್ಲಿ ಸತ್ತುಹೋದರೇ ಪುಣ್ಯವಂತೆ" ಎಂದು ಕಣ್ಣೊರೆಸಿಕೊಂಡಾಗ, ಸರಾಗವಾಗಿ ಊಟ ಮಾಡಲಾಗಲಿಲ್ಲ ಕಣ್ಮಣಿಗೆ. ಒಬ್ಬ ಸೀತೆ, ಒಬ್ಬ ದ್ರೌಪತಿಯ ಹೆಸರಲ್ಲಿ ಚಿತ್ರಿತವಾದ ರಾಮಾಯಣ, ಮಹಾಭಾರತಗಳಿಗಿಂತ ಇನ್ನಷ್ಟು ಅದ್ಭುತವಾದ ಕತೆಗಳಿವೆ. ಒಂದೊಂದು ಹೆಣ್ಣಿನ ಬಾಳಿನ ಪುಟ ತೆರೆದು ನೋಡಿದಾಗ, ಹೆಣ್ಣಿಲ್ಲದ ಯಾವ ಕತೆಯೂ ರೋಮಾಂಚನಕಾರಿಯಾಗದು, ದುಃಖಾಂತ, ಸುಖಾಂತದ ನರಳಿಕೆಯು

ಅಲ್ಲಿರೋಲ್ಲ! ಅದು ಬೋರ್ ಕತೆ. ಅದಕ್ಕೆ ಆಯಸ್ಸು ಕೂಡ ಕಡಿಮೆ.

"ಮಾಡಿದ ಊಟ ಹೊಟ್ಟೆಯಲ್ಲಿ ಕರಗಿಯೇ ಇಲ್ಲ. ಅದ್ಕೆ ಏನು ತಿನ್ನಲಾಗಲಿಲ್ಲ. ನಿಮ್ಮ ಬಲವಂತಕ್ಕೆ ಅಷ್ಟಿಷ್ಟು ತಿಂದೆ" ಊಟದ ತಟ್ಟೆ ಖಾಲಿ ಮಾಡದಿದ್ದಕ್ಕೆ ಸಮಾಜಾಯಿಷಿ ಕೊಟ್ಟಳು. ಅವಳ ಮಾತು ಕೇಳಿಸಿಕೊಳ್ಳಲಾರದ ಮೂಡ್‌ನಲ್ಲಿದ್ದಳು ಸೀತಮ್ಮ.

ದಾರಿಯುದ್ದಕ್ಕೂ ಸೀತಮ್ಮ ತನ್ನ ಕತೆ ಬಿಡಿಸಿಟ್ಟಳು. ಮದುವೆಯಾಗಿ ಎರಡು ಮಕ್ಕಳು ಇರುವ ಸೀತಮ್ಮನದು ವಿರಸ ದಾಂಪತ್ಯ. ಆಕೆಯ ಗಂಡನಿಗೆ ಅವನ ಆಫೀಸ್‌ನಲ್ಲಿ ಕೆಲಸ ಮಾಡುವ ಹೆಣ್ಣಿನ ಜೊತೆ ಸಂಬಂಧವಿತ್ತು. ಜಗಳ-ರಂಪಾಟ ನಡೆಯುತ್ತಿದ್ದಾಗಲೇ ಇಲ್ಲಿಗೆ ಟ್ರಾನ್ಸ್‌ಫರ್ ಆಗಿದ್ದು. ಆಗ ಅತ್ತು, ಗೋಳಾಡಿದ್ದಳು. ಅತ್ತೆ, ಮಾವ ಒಳ್ಳೆಯ ಜನ. ಬುದ್ದಿ ಹೇಳಿ ಸೋತಾಗ ಕಣ್ಣೀರು ಸುರಿಸಿದ್ದರಷ್ಟೆ. ಮಕ್ಕಳನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಾರೆನ್ನುವ ಸಮಾಧಾನ ಆಕೆಗೆ.

"ಬರೀ ಮಕ್ಕು ನನ್ನ ಅತ್ತೆ, ಮಾವನ್ನ ನೋಡೋಕೋಸ್ಕರ ಹೋಗ್ತೀನಿ. ರಾತ್ರಿಗಳು ನನ್ನ ಪಾಲಿಗೆ ಭಯಂಕರವೇ. ಅವ್ರಿಗೆ ಯಾವ್ದೇ ನೀತಿ, ನಿಯಮಗಳು ಇಲ್ದೇ ಇರ್ಬಹುದ್ದು. ನಂಗೆ ಮಾತ್ರ ಅವ್ನ ಉಸಿರು ಕೂಡ ಹೇಸಿಗೆ ತರಿಸುತ್ತೆ. ಒಂಟಿಯಾಗಿ ಮಾತಾಡೋಕೆ ಕೂಡ ಇಷ್ಟವಿಲ್ಲ. ಅದ್ಕೇ ಈ ದೂರದ ಊರಿನಲ್ಲಿ ಒಂಟಿ. ಅಪರೂಪಕ್ಕೆ ಬರ್ತಾರೆ. ಹೋಟಲ್‌ನಲ್ಲಿ ರೂಮು ಮಾಡಿದ್ದೀನಿ ಅಂತಾರೆ. ಆ ಕಡೆ ಮುಖ ಹಾಕೋಕು ಮನಸ್ಸಿರೋಲ್ಲ. 'ನಂಗೆ ಬರೋಕ್ಕಾಗೋಲ್ಲ. ನಿಮ್ಮ ಸುಖ, ಸಂತೋಷ ಬೇರೆ ಕಡೆ ನೋಡ್ಕೊಂಡಿದ್ದೀರಲ್ಲ. ನನ್ನಿಂದ ಏನು ಬಯಸ್ಬೇಡಿ' ಅಂತ ಒಂದ್ಸಲ ಹೇಳೇಬಿಟ್ಟೆ. ಅಶ್ಲೀಲವಾಗಿ ಪತ್ರ ಬರೆದ್ರು. ಹೋದಾಗ ನಂಗೆ ಬೇರೆಯವ್ರ ಜೊತೆ ಸಂಬಂಧ ಇದೇಂತ ರೇಗಾಡಿದ್ರು. ನಾನು ಎಲ್ಲಕ್ಕೂ ಮೌನವಹಿಸ್ದೇ. ಹೆಚ್ಚಿಗೆ ಅವ್ರು ಇಲ್ದೇ ಇರೋವಾಗ ಹೋಗ್ತೀನಿ. ಅದು ನನ್ನ ಅತ್ತೆ, ಮಾವನಿಗೆ ಗೊತ್ತು. ಸುಮ್ನೆ ಅವ್ರು ಕಣ್ಣೀರಿಡ್ತಾರೆ." ದುರಂತ ಕತೆಯ ನಾಯಕಿಯಂತೆ ಹೇಳಿಕೊಂಡರು ಮುಕ್ತವಾಗಿ.

ಕಣ್ಮಣಿ ಮೂಕವಾದಳು. ಚಟುವಟಿಕೆಯಿಂದ ಸದಾ ನಗು ನಗುತ್ತ ಇರುವ ಮಳವಳ್ಳಿಯ ಸೀತಮ್ಮನ ಬಾಳಿನಲ್ಲಿ ಎಂಥ ಘೋರವಿದೆಯೆನಿಸಿತು.

ಇಬ್ಬರು ಹಾಸ್ಟಲ್‌ಗೆ ಹಿಂದಿರುಗಿಸಿದಾಗ ನಾಲ್ಕರ ಸುಮಾರು. ನಡೆದು ಬಂದ ಕಿಲೋಮಿಟರ್‌ಗಳನ್ನು ಲೆಕ್ಕ ಹಾಕಿಕೊಂಡರೆ ಗಾಬರಿ. ದಾರಿಯಲ್ಲಿ

ಕೊಂಡು ತಂದಿದ್ದ ಪತ್ರಿಕೆಯನ್ನು ಓದುತ್ತ ಕೂತಳು. ಒಬ್ಬ ದೊಡ್ಡ ಲೇಖಕರ, ವಿಮರ್ಶಕರ ಪ್ರಶಂಸೆ ಗಳಿಸಿದ್ದವರ ಒಂದು ನೀಳ್ಗತೆ. ಒಮ್ಮೆಯಲ್ಲ ಎರಡು ಸಲ ಓದಿದ್ದಳು. ಏನೇನು ಅರ್ಥವಾಗಲಿಲ್ಲ. ಪತ್ರಿಕೆಯನ್ನು ಪಕ್ಕಕ್ಕೆ ಇಟ್ಟು ಒಗೆಯಬೇಕಾದ ಬಟ್ಟೆಗಳನ್ನು ಹಿಂದಕ್ಕೆ ಒಯ್ದಳು. ಒಟ್ಟೆ ಒಗೆಯುವ ಬಂಡೆ ಖಾಲಿ ಇತ್ತು, ಕೆಲವರು ಸ್ವಂತ ಒಗೆಯುತ್ತಿದ್ದರು. ಮತ್ತೆ ಕೆಲವರು ಲಾಂಡ್ರಿಗೆ ಕೊಡುತ್ತಿದ್ದುದ್ದುಂಟು. ಅದಲ್ಲದೇ, ಒಬ್ಬ ಹೆಣ್ಣಾಳು ಇದ್ದಳು. ಕೆಲವರು ಅವಳ ಕೈಯಲ್ಲಿ ಒಟ್ಟೆ ಒಗೆಸಿಕೊಳ್ಳುತ್ತಿದ್ದರು. ಇವಳು ವಾಸಂತಿ ಭಾನುವಾರಗಳಲ್ಲಿ ಒಗೆದು ಹರವಿ ತಾವೇ ಐರನ್ ಮಾಡಿಸುತ್ತಿದ್ದರು. ಅಥವಾ ತಳ್ಳುವ ಗಾಡಿಯುವನಿಂದ ಐರನ್ ಮಾಡಿಸಿಕೊಳ್ಳುತ್ತಿದ್ದರು. ಯಾಕೋ, ಭಾನುವಾರದವರೆಗೂ ಕಾಯಬೇಕೆನಿಸದೇ ನೆನೆಸಿ ಒಗೆಯ ತೊಡಗಿದಳು. ಮುಕ್ಕಾಲು ಗಂಟೆಯಲ್ಲಿ ಮುಗಿಯಬಹುದಾದ ಕೆಲಸವನ್ನು ಒಂದು ಗಂಟೆಯುವರೆಗೂ ಎಳೆದಳು.

ರೂಮಿಗೆ ಬಂದು ಮುಖ ತೊಳೆದು ಅದೇ ಪತ್ರಿಕೆಯನ್ನು ಮತ್ತೆ ತಿರುವ ತೊಡಗಿದಳು. ಬೇಸರದಿಂದ ಬಂದ ವಾಸಂತಿ ಮಂಚದ ಮೇಲೆ ಕೂತು ಫ್ಯಾನ್ ಬಟನೊತ್ತಿದಳು.

"ಅಬ್ಬಬ್ಬ ಕೆಲಸವೋ, ಕೆಲಸ! ಇವತ್ತು ಲಂಚ್ ಬ್ರೇಕ್ ಕೂಡ ಇಲ್ಲ. ಜನ ಮರಳೋ, ಜಾತ್ರೆ ಮರಳೋಂತ! ಭಯಂಕರ ಬಿಜಿನೆಸ್." ಅಂದಿನ ವ್ಯಾಪಾರದ ವೈಖರಿಯನ್ನು ಬಣ್ಣಿಸಿದ್ದು ಉತ್ಸಾಹದಿಂದ.

ಎಂದಿಗಿಂತ ಸ್ವಲ್ಪ ಗಂಭೀರವಾಗಿದ್ದ ಕಣ್ಮಣಿ "ಬೇಗ ಡ್ರೆಸ್ ಛೇಂಜ್ ಮಾಡಿ ಮುಖ ತೊಳ್ಕೋ. ಸುಮ್ನೆ ಕೂತವರಿಗೆ ಹಸಿವು ಜಾಸ್ತಿ ಅಂತಾರೆ" ಅವಸರಿಸಿದಳು.

ಊಟ ಮುಗಿಸಿ ಬಂದ ಮೇಲೂ ವಾಸಂತಿಯ ಉತ್ಸಾಹ ಕಡಿಮೆಯಾಗಲಿಲ್ಲ. ಸೇಲ್ಸ್ ಹೆಚ್ಚು ಮಾಡಿದಂತೆ ಕಮೀಷನ್ ಹೆಚ್ಚಾಗಿ ಸಿಗುತ್ತಿತ್ತು. ಅದನ್ನ ಲೆಕ್ಕ ಹಾಕತೊಡಗಿದಾಗ ಕಣ್ಮಣಿ ಮಲಗಿಬಿಟ್ಟಳು.

"ಒಂದ್ವರ್ಷ, ನಿಂಗೆ ಕೆಲ್ಸವಿಲ್ಲದಿದ್ರೂ... ನೋ ಪ್ರಾಬ್ಲಮ್. ಸಂಬಳದ ಜೊತೆ ಕಮಿಷನ್ ಹಣ ಕೂಡ ಸಿಗೋದಿದ್ರೆ ಆರ್ಥಿಕವಾಗಿ ನಲುಗಬೇಕಿಲ್ಲ". ಖುಷಿಯಿಂದ ಅವಳ ತೋಳಿಡಿದು ಅಲುಗಾಡಿಸಿದ, ವಾಸಂತಿ "ನಂಗೆ ಬದ್ಕಿನಲ್ಲಿ ಯಾರೂ ಇಲ್ಲದಾಗ ಕೊಹಿನೂರ್ ವಜ್ರದಂತೆ ಸಿಕ್ದೇ. ಇನ್ನ ನನ್ನ ಕನಸುಗಳೆಲ್ಲ ನಿನ್ಮೇಲೆ. ಒಳ್ಳೆ ಗಂಡು ನೋಡಿ ಮದ್ವೆ ಮಾಡ್ತೀನಿ.

ಸೈಟು ತಗೊಂಡ್, ನಿಂಗೋಸ್ಕರ ಮನೆ ಕಟ್ಟಿಸ್ತೀನಿ. ಆಮೇಲೆ ನೀನು ಮನೆಯಲ್ಲೇ ಇರ್ಬೇಕು. ತವರು, ಬಸಿರು, ಬಾಣಂತನ, ನಾಮಕರಣ... ಪುಟ್ಟ ಮಗ - ಮುಂದಿನ ದಿನಗಳೆಲ್ಲ ಬೆಳದಿಂಗಳೇ" ಆನಂದ ಬಾಷ್ಪ ಸುರಿಸಿದಾಗ ಕಣ್ಮಣಿ ಎದ್ದು ಕೂತು ವಿಸ್ಮಯದಿಂದ ನೋಡಿದಳು.

"ಯಾಕೆ, ಇಷ್ಟೊಂದು ಎಮೋಷನಲ್ ಆಗ್ತೀಯಾ! ಮೊದ್ಲು ನಿನ್ನ ಬಗ್ಗೆ, ನೀನು ಕನಸು ಕಾಣು. ನನ್ನ ಬಗ್ಗೆ ಕನಸು ಕಾಣೋಕೆ ಸಮಯವಿದೆ" ಎಂದ ಕೂಡಲೇ ವಾಸಂತಿ ಅವಳನ್ನು ಅಪ್ಪಿಕೊಂಡು ಬಿಕ್ಕಿದಳು.

ಎಷ್ಟೋ ಸಮಯದ ಮೇಲೆ ಸಮಾಧಾನಗೊಂಡ ವಾಸಂತಿ ಬೇಗ ನಿದ್ದೆ ಹೋದರೂ, ಕಣ್ಮಣಿ ಕಣ್ಣು ಮುಚ್ಚಲಿಲ್ಲ. ಗೆಳತಿಯ ಸ್ನೇಹ ಬದುಕಲ್ಲಿ ನವ ಉತ್ಸಾಹ ತಂದಿತ್ತು. ಆದರೆ ತನ್ನನ್ನು ಕಾಡುತ್ತಿರುವ ಈ ನೆನಪು ಯಾವುದು? ಗಂಭೀರವಾಗಿ ಕಾಣುವ ಆ ವ್ಯಕ್ತಿ ತೀರಾ ಪರಿಚಿತನಂತೆ, ಆತ್ಮೀಯನಂತೆ ಕಾಡುವುದೇಕೆ? ಎಷ್ಟೇ ಪ್ರಯತ್ನಿಸಿ ಜ್ಞಾಪಿಸಿಕೊಂಡರೂ, ಅನಾಥಾಲಯದಲ್ಲಿದ್ದ ದಿನಗಳಲ್ಲಿ, ಆಮೇಲಿನ ತಿಂಗಳುಗಳಲ್ಲಿ ಯಾವುದೇ ವ್ಯಕ್ತಿ ಪರಿಚಿತನಾಗಿ ಸ್ನೇಹದಿಂದ ವರ್ತಿಸಿರಲಿಲ್ಲ. ಆದರೆ ಅವನಾರು? ಏನೇನು ಅರ್ಥವಾಗಲಿಲ್ಲ. ಬಹಳ ಹೊತ್ತಿನ ನಂತರ ನಿದ್ದೆ ಬಂದರೂ ತಟ್ಟನೆ ನೆನಪಾಗಿ ಎದ್ದು ಕೂತಳು. ಅವಳ ಸೂಟುಕೇಸ್‌ನ ಮೃದುವಾದ ಪರ್ಸ್‌ನಲ್ಲಿ ಗಟ್ಟಿಯಾಗಿ ಕೂತ ಸಾಲಿಗ್ರಾಮವನ್ನು ನೋಡಬೇಕೆನಿಸಿತು. ಸದ್ದಾಗದಂತೆ ಸೂಟುಕೇಸ್ ತೆಗೆದು ಪುಟ್ಟು ಶಿಲೆಯನ್ನು ಅಂಗೈ ಮೇಲಿಟ್ಟುಕೊಂಡಳು. 'ವಿಷ್ಣು ಸದಾ ನೆಲೆಸಿರುತ್ತಾನೆ' ಗೋಪಾಲನ ತಂದೆ ಹೇಳಿದ್ದರು. ಕಣ್ಣಿಗೊತ್ತಿಕೊಂಡು ಹಾಗೆಯೇ ಇಟ್ಟು ಸೂಟುಕೇಸ್ ಮುಚ್ಚಿದಳು.

* * * *

ಲೈಬ್ರರಿಯಲ್ಲಿ ಹೋಗಿ ಕೂತು ಕೆಲಸ ಖಾಲಿ ಇದೆ ಎಂದ ಕಡೆಯಲ್ಲೆಲ್ಲ ಅಪ್ಲಿಕೇಷನ್ ಹಾಕಿದಳು. ಒಂದು ಕಂಪ್ಯೂಟರ್ ಸೆಂಟರ್‌ಗೆ ವಾಕ್-ಇನ್-ಇಂಟರ್‌ವ್ಯೂಗೆ ಕೂಡ ಹೋಗಿ ಬಂದಳು. ಬರೀ ಮೂರುನೂರ ಐವತ್ತು ರೂಪಾಯಿಗೆ ಬೆಳಿಗ್ಗೆ ಎಂಟರಿಂದ ರಾತ್ರಿ ಒಂಬತ್ತರವರೆಗೂ ದುಡಿತ ಎಂದಾಗ ಯೋಚಿಸುವಂತಾಯಿತು.

ಅಂದು ಬೆಳಿಗ್ಗೆ ಎದ್ದವಳೇ ಬೇಗ ರೆಡಿಯಾದಾಗ ಸ್ನಾನಕ್ಕೆ ಹೊರಟ ವಾಸಂತಿ ಅವಳತ್ತ ನೋಡಿ "ಏನು ಸಮಾಚಾರ, ಯಾವುದಾದ್ರೂ

ಇಂಟರ್‌ವ್ಯೂಗೆ ಹೊರಟ್ಯಾ?" ಕೇಳಿದಳು.

ನೆರಿಗೆಗಳನ್ನು ಸರಿಮಾಡಿಕೊಳ್ಳುತ್ತ "ಆ ಕಂಪ್ಯೂಟರ್ ಸೆಂಟರ್‌ಗೆ ಹೋಗ್ತೀನಿ. ಅಲ್ಲಿ ಯಾರಾದ್ರೂ ಜಾಯಿನ್ ಆಗ್ಬಿಟ್ರೆ ಕಷ್ಟ". ಗೆಳತಿಯ ಮಾತಿಗೆ ವಾಸಂತಿ ಕುಸಿದಳು.

"ನಿಂಗೇನು ಜ್ಞಾನ ನೆಟ್ಟಗಿದ್ಯಾ? ಮುನ್ನೂರ ಐವತ್ತು ರೂಪಾಯಿಗಳಿಗೆ 12 ಗಂಟೆ ದುಡಿತಾ! ಕನಿಷ್ಟ ನಿನ್ನ ಬಸ್ಸು, ಆಟೋಗೆ ಕೂಡ ಆ ಹಣ ಸಾಕಾಗೋಲ್ಲ. ಅದ್ರ ಬದ್ಲು ಆರಾವಾಗಿ ರೂಮಿನಲ್ಲಿರು". ಗದರಿಕೊಂಡಳು. ಸ್ನೇಹದಿಂದ ಆ ಅಧಿಕಾರ ಆತ್ಮೀಯತೆ ಒದಗಿಸಿತ್ತು.

ನಿಸ್ಸಾಹಾಯಕತೆಯಿಂದ ವಾಸಂತಿಯತ್ತ ನೋಡಿ "ಹಣಕ್ಕಿಂತ ಇಡೀ ದಿನ ಸುಮ್ಮನಿರೋದು ಕಷ್ಟ. ಸರ್ವಿಸ್ ಅಂತ ತಿಳ್ಕೊಂಡ್ ಬಿಡ್ತೀನಿ" ತೀರ್ಮಾನಕ್ಕೆ ಬಂದಂತೆ ನುಡಿದಳು.

ಇದು ಒಪ್ಪಿಗೆಯಾಗಲಿಲ್ಲ ವಾಸಂತಿಗೆ. 'ದುಡಿತಕ್ಕೆ ಕನಿಷ್ಟ ಸಾವಿರ ರೂಪಾಯಿಗಳಾದರೂ ಬೇಡವಾ?' ಮುಖ ದಪ್ಪಗೆ ಮಾಡಿದಳು. ಆ ವೇಳೆಗೆ ವಾರ್ಡನ್ ಹೇಳಿ ಕಳಿಸಿದ್ದರು. 'ಒಂದು ಫೋನ್ ಕಾಲ್ ಇದೆ, ಕಣ್ಮಣಿಗೆ !' ವಿಸ್ಮಯದಿಂದಲೇ ಓಡಿದಳು. 'ಎಡಿಟರ್‌ನಿಂದ ಮತ್ತೆ ಕೆಲಸಕ್ಕೆ ಬುಲಾವ್' ರೆಕ್ಕೆ ಕಟ್ಟಿಕೊಂಡು ಹಾರುವಂತಾಯಿತು. ಇಲ್ಲಿ ನಿರೀಕ್ಷೆ ಸುಳ್ಳಾಯಿತು. 'ಚೈತನ್ಯ ಗ್ರೂಪ್ಸ್ ಆಫ್ ಕಂಪನೀಸ್' ನಿಂದ ಇಂಟರ್‌ವ್ಯೂಗೆ ಬರಲು ಕರೆ.

"ನಾಲ್ಕು ಗಂಟೆಗೆ ಒಂದು ಇಂಟರ್‌ವ್ಯೂ ಇದೆ" ಟವಲನ್ನೆತ್ತಿಕೊಂಡು ಬಾತ್‌ರೂಮಿಗೆ ಹೋದಳು. ಮುಖಕ್ಕೆ ಸೋಪು ಹಚ್ಚಿದ ನಂತರ 'ಯಾವ ಪೋಸ್ಟ್‌ಗೆ ?' ನೆನಪಾಗಲಿಲ್ಲ. ಕೆಲಸ ಬಿಟ್ಟ ಮೇಲೆ ಸಾಕಷ್ಟು ಅಪ್ಲಿಕೇಷನ್‌ಗಳನ್ನು ಹಾಕಿದ್ದಳು. ಪತ್ರ ಬಿಟ್ಟು ಫೋನ್ ಮೂಲಕ ಇಂಟರ್‌ವ್ಯೂ- ಅವಳಿಗೆ ಆಶ್ಚರ್ಯವೇ.

ಬಾತ್‌ರೂಂನಿಂದ ಒದ್ದೆಯ ಮುಖವನ್ನೊತ್ತುತ್ತ ಬಂದ ಅವಳನ್ನು "ಯಾವ ಪೋಸ್ಟ್‌ಗೆ ಇಂಟರ್‌ವ್ಯೂ ? ಎಲ್ಲಿ ಇಂಟರ್‌ವ್ಯೂ ?" ಪ್ರಶ್ನಿಸಿದಳು ವಾಸಂತಿ.

"ಚೈತನ್ಯ ಗ್ರೂಪ್ಸ್ ಆಫ್ ಕಂಪನೀಸ್" ಚೈತನ್ಯ ಬಿಲ್ಡಿಂಗ್ ಸೆವೆನ್ತ್ ಫ್ಲೋರ್, ಸಿಕ್ಸ್ ಮೈನ್, ಪಾರ್ಕ್ ರೋಡು- ಇದಿಷ್ಟು ಇಂಟರ್‌ವ್ಯೂಗೆ ಹೋಗಬೇಕಾದ ವಿಳಾಸ. ಯಾವ ಪೋಸ್ಟ್ ಅಂತ ನೆನಪಿಲ್ಲ. ತಯಾರಿನು

ನಡ್ಡಿಲ್ಲ. ಕೆಲ್ಸ ಸಿಗೋ ಗ್ಯಾರಂಟಿ ಇಲ್ಲ. ಕರೆದಿದ್ದಾರೆ, ಹೋಗ್ಬರ್ತೀನಿ 'ಟವಲನ್ನು ಮಂಚದ ಮೇಲೆ ಹರವಿ ಕೂದಲನ್ನು ಹರವಿ ಬಾಚತೊಡಗಿದಳು. ಅನಾಥಾಶ್ರಮದಲ್ಲಿದ್ದಾಗ ಆಗಾಗ ಕೂದಲನ್ನು ಕತ್ತರಿಸುತ್ತಿದ್ದರು. ಸ್ವಲ್ಪ ಬೆಳೆದ ಮೇಲೆ ಕಟ್ ಮಾಡಿಕೊಳ್ಳುವಂತೆ ಹೇಳುತ್ತಿದ್ದರು. ಹೊರ ಬಂದ ಮೇಲೆ ಅಂಥ ರಗಳೆ ಇಲ್ಲ.'

ಬೇಗ ಬೇಗ ಜಡೆ ಹೆಣೆದು, ಮುಖಕ್ಕೆ ಒಂದಿಷ್ಟು ಪೌಡರ್ ಸವರಿ ಆಗಲೇ ಸಿದ್ಧವಾಗಿ ಕೂತಳು.

ಮೂರು ಮುಕ್ಕಾಲಿಗೆ ಚೈತನ್ಯ ಬಿಲ್ಡಿಂಗ್ ತಲುಪಿದಾಗ ದಂಗಾದಳು. ಹದಿನೈದು ವರ್ಷದ ಹುಡುಗಿಯರಿಂದ ಹಿಡಿದು ನಲ್ವತ್ತು ವರ್ಷದ ವಿಧವೆಯರು ಕೂಡ ಇದ್ದರು. ಬಂದಿದ್ದುದು ಹದಿನೈದು ಜನ. ಎಲ್ಲಾರಿಗೂ ತುರ್ತಾಗಿ ನೌಕರಿಯ ಅಗತ್ಯವಿತ್ತು. ತಾನು ಅಪ್ಲಿಕೇಷನ್ ಕಳಿಸಿದ್ದು ಯಾವ ನೌಕರಿಗೆ? ಎಷ್ಟು ನೆನಪಿಸಿಕೊಂಡರೂ ಜ್ಞಾಪಕಕ್ಕೆ ಬರಲಿಲ್ಲ. ಅವಳ ಬಳಿ ಇದ್ದಿದ್ದು ಒಂದು ಡಿಗ್ರಿಯ ಜೊತೆ ಜರ್ನಲಿಸಂ ನಂತರ ಮಾಡಿಕೊಂಡ ಕಂಪ್ಯೂಟರ್‌ಗೆ ಸಂಬಂಧಿಸಿದ್ದ ಎಜುಕೇಷನ್, ಇನ್ನು ಎಕ್ಸ್‌ಪೀರಿಯನ್ಸ್. ಅವಳು ಕೆಲಸ ಮಾಡಿದ ಪತ್ರಿಕಾಲಯದಿಂದ ಯಾವುದೇ ಸರ್ಟಿಫಿಕೇಟ್ ಸಿಕ್ಕಿರಲ್ಲಿಲ್ಲ. ಸಿಗುವಂತಿರಲಿಲ್ಲ. ಮೌನವಾಗಿ ಕೂತಳು ಒಂದು ಕಡೆ. ' Silence Please' ಎಂದು ಬೋರ್ಡು ಇದ್ದುದ್ದರಿಂದ, ಯಾರೊಬ್ಬರು ಹರಟುವಂತಿರಲಿಲ್ಲ.

ಮೂರು ಜನರಿಂದ ಸಂಸ್ಥೆಯವರು ಮೊದಲ ರೌಂಡ್ ಇಂಟರ್‌ವ್ಯೂ ಮುಗಿಸಿದ ಕೂಡಲೇ ಅವರಿಗೆ ತಿಂಡಿ ಕಾಫಿಯ ವ್ಯವಸ್ಥೆ ಇತ್ತು. ನಂತರ ಎಲ್ಲಾರಿಗೂ ಕವರ್‌ನಲ್ಲಿ ಹಾಕಿ ಇಂತಿಷ್ಟು ಹಣವನ್ನು ಕೊಟ್ಟ ನಂತರ, ಮೂವರನ್ನು ಉಳಿಸಿಕೊಂಡರು. ಎರಡನೇ ರೌಂಡ್ ಇಂಟರ್‌ವ್ಯೂ ಮಾಡಿದ್ದು, ಒಬ್ಬ ವಯಸ್ಸಾದ ಬೆಳ್ಳನೆಯ ಉದ್ದದ ವಯಸ್ಸಾದರೂ ಅತ್ಯಂತ ಆಕರ್ಷಣೀಯವಾದ ವರ್ಚಸ್ಸು ಪಡೆದಿದ್ದ ವ್ಯಕ್ತಿ. ಅವರು ಕೇಳುವ ಪ್ರಶ್ನೆ, ಗಮನಿಸುವ ರೀತಿಯಿಂದಲೇ ಅತ್ಯಂತ ಸೂಕ್ಷ್ಮಮತಿ ಎಂದು ಕಂಡು ಕೊಳ್ಳಬಹುದಿತ್ತು. ಕೊನೆಯ ರೌಂಡ್‌ಗೆ ಉಳಿದುಕೊಂಡಿದ್ದು ಕಣ್ಮಣಿ ಮಾತ್ರ.

"ಎಂ.ಡಿ. ಆಯ್ಕೆಯನ್ನು ಒಪ್ಕೊಂಡ್ರೆ, ನಿಮ್ಮ ಕೆಲ್ಸ ಗ್ಯಾರಂಟಿ" ಹೇಳಿ ಹೋದ ವ್ಯಕ್ತಿ. ಎರಡೇ ನಿಮಿಷದಲ್ಲಿ ಎಂ.ಡಿ. ಕೋಣೆಯಿಂದ ಬುಲಾವ್ ಬಂತು. ಐದೂವರೆಗೆ ಬರೀ ಎರಡೇ ನಿಮಿಷ ಇತ್ತು.

"ಯೆಸ್ ಕಮಿನ್" ಎಂದರು. ಯಾವುದೋ ಫೈಲು ನೋಡುತ್ತಿದ್ದ ಎಸ್. ಮುರುಳಿ ಕೃಷ್ಣ ಚೈತನ್ಯ, ಹಾಗೆಯೇ ಫೈಲಿಡಿದೇ ನೋಟವೆತ್ತಿದಾಗ, ಎ.ಸಿ. ರೂಮಿನಲ್ಲಿ ಕೂಡ ಬೆವತುಬಿಟ್ಟಳು. ಅದೇ ವ್ಯಕ್ತಿ ಕನಸ್ಸಿನಲ್ಲಿ, ಕಲ್ಪನೆಯಲ್ಲಿ, ವಾಸ್ತವತೆಯಲ್ಲಿ ತೇಲುತ್ತಿದ್ದ ವ್ಯಕ್ತಿಯ ಹೆಸರೇ ಎಸ್. ಮುರುಳಿ ಕೃಷ್ಣ ಚೈತನ್ಯ.

"ಟೇಕ್ ಯುವರ್ ಸೀಟ್" ಎಂದ ಗಂಭೀರವಾಗಿ.

ದನಿ ಗಡುಸಾಗಿದೆಯೆನಿಸಿತು. ಉಗುಳು ನುಂಗಿ ಎರಡೆರಡು ಸಕಲ ಮುಖದ ಮೇಲೆ ಕರ್ಚಿಫ್ ಆಡಿಸಿಕೊಂಡಾಗ, ಅವನ ನೋಟ್ಫೈಲನ್ನು ಹೊಕ್ಕಿತು.

"ಕೂತ್ಕೊಳ್ಳಿ, ನೀವು ಮೊದಲ್ನೇ ಸಲದ ಇಂಟರ್‌ವ್ಯೂಗೆ ಬರ್‍ತಾ ಇರೋದು. ಇನ್‌ಫಿಯಾರಿಟಿ ಕಾಂಪ್ಲೆಕ್ಸ್ ಒಳ್ಳೇದಲ್ಲ. ನಂಗೆ ನೀವು ಹೆದರಬೇಕಾದ ಅಗತ್ಯವಿಲ್ಲ. ಕೆಲ್ಸ ಸಿಗೋದು ಬಿಡೋದು ಬೇರೆ" ಎಂದ. ಒಂದೊಂದು ಪದವು ಚಾಟಿಯೇಟಿನಂತಿತ್ತು.

ಮತ್ತೆ ಒಮ್ಮೆ ಮುಖದ ಮೇಲೆ ಕರ್ಚಿಫ್ ಆಡಿಸಿ ಮೆಲ್ಲಗೆ ಕೂತಳು. ಬೆಲ್ ಒತ್ತಿದ. ತಕ್ಷಣ ಆಫೀಸ್ ಬಾಯ್ ಒಂದು ಗ್ಲಾಸ್ ನೀರಿನ ಜೊತೆ ಕಾಫಿ ತಂದಿಟ್ಟು ಹೋದ.

"ರಿಲ್ಯಾಕ್ಸ್ ... ಮಾಡ್ಕೊಳ್ಳಿ" ಎದ್ದು ಪಕ್ಕದ ರ್‍ಸ್ಟ್ ರೂಮಿಗೆ ಹೋದ ಎಸ್. ಮುರುಳಿ ಕೃಷ್ಣ ಚೈತನ್ಯ.

ಬಹಳ ಕಷ್ಟದಿಂದ ಉಸಿರೆಳೆದುಕೊಂಡು ನೀರು ಕುಡಿದಳು. ಅತ್ತಿತ್ತ ನೋಡಿ ಕಾಫಿ ಕುಡಿದಿದ್ದು ಪ್ರಯಾಸದಿಂದಲೆ. ಅದನ್ನು ಗಮನಿಸ್ತ್ತಲೇ ಇದ್ದ ಎಂ.ಡಿ. ಅವನು ಬಹಳ ಮುಖ್ಯವಾದ ಕೆಲಸಕ್ಕೆ ನೇಮಕ ಮಾಡುವುದಿತ್ತು. ಅದಕ್ಕಾಗಿ ಬಹಳ ಜಾಗರೂಕತೆ ವಹಿಸಿದ್ದ. ಬೇರೆ ಪೋಸ್ಟ್‌ಗಳಿಗೆ ಆಯ್ಕೆ ಮಾಡುವಾಗ ಇಷ್ಟು ರಿಸ್ಕ್ ತೆಗೆದುಕೊಳ್ಳುತ್ತಿರಲಿಲ್ಲ. ನೆಮ್ಮದಿ, ಶಾಂತಿ, ನಿರಾತಂಕ ಸಿಗುವುದು ಈಗಿನ ಆಯ್ಕೆಯಿಂದಲೇ.

ಎಂ.ಡಿ. ಬಂದ ಕೂಡಲೇ ಎದ್ದು ನಿಂತಳು. ಕೂತ ನಂತರ ಕೂಡುವಂತೆ ಸನ್ನೆ ಮಾಡಿದ.

"ನಿಮ್ಮ ಹೆಸರು?" ಕೇಳಿದ.

"ಕಣ್ಮಣಿ..." ಎಂದಳು.

ಒಂದೆರಡು ಕ್ಷಣ ದಿಟ್ಟಿಸಿ ನೋಡಿದ. ಶರ್ವರಿ ಆಯ್ಕೆ ಸರಿಯೆನಿಸದಿದ್ದರೂ ಸದ್ಯಕ್ಕೆ ಒಂದು ಛಾನ್ಸ್ ಕೊಟ್ಟು ನೋಡಬೇಕೆನಿಸಿತು.

"ನಿಮ್ಮನ್ನ ನನ್ನ ಸಂಸ್ಥೆಗಳಲ್ಲಿ ಯಾವ್ದೇ ಪೋಸ್ಟ್‌ಗೆ ಅಪಾಯಿಂಟ್ ಮಾಡ್ಕೋತಾ ಇಲ್ಲ. ಮನೆಯಲ್ಲಿ ನನ್ನ ತಾಯಿ ಇದ್ದಾರೆ. ಅವ್ರನ್ನ ಆತ್ಮೀಯತೆಯಿಂದ ನೋಡಿಕೊಳ್ಳುವಂಥವ್ರು ಬೇಕು. ಆಕೆ ನಡೀಲಾರಳು. ಉಪಚರಿಸಲು ನರ್ಸ್ ಇದ್ದಾರೆ. ಪ್ರೀತಿ, ವಿಶ್ವಾಸ, ಸ್ನೇಹ ತುಂಬ ಬೇಕು. ನಿಮ್ಗೆ ಕೆಲ್ಸದ ಅವರ್ಸ್‌ನ ಲಿಮಿಟೇಷನ್ ಇಲ್ಲ. ಲಾಡ್ಜಿಂಗ್, ಬೋರ್ಡಿಂಗ್ ಎಲ್ಲಾ ನಮ್ಮಲ್ಲೇ, ಆಕೆ ಚೇತರಿಸಿಕೊಳ್ಳೋಕೆ, ಒಂದು ಜೀವದ ಸಹಾಯ ಬೇಕು. ಅದು ನಿಮ್ಮಿಂದ ಸಾಧ್ಯನಾ? ಆದರೆ ಒಂದು ವಿಷ್ಯ ನೆನಪಿನಲ್ಲಿ ಇಟ್ಕೊಳ್ಳಿ. ಕೆಲವನ್ನು ನಾನು ಸಹಿಸೋಲ್ಲ, ಕ್ಷಮಿಸೋಲ್ಲ. ನಿಮ್ಗೆ ಮೂವತ್ತು ದಿನಗಳ ಬಾಯ್ಮಾತಿನ ಅಗ್ರಿಮೆಂಟ್ ಮೇಲೆ ಕೆಲ್ಸ ಕೊಡೋದು. ಸಂಬ್ಳನ ಕೂಡ ಕೆಲ್ಸ ನೋಡಿಯೇ ಫಿಕ್ಸ್ ಮಾಡೋದು. ಈ ಮುವತ್ತು ದಿನದಲ್ಲಿ ಎಂದಾದ್ರೂ ನಿಮ್ಮಿಂದ ಸಾಧ್ಯವಾಗದಾದ್ರೆ ಬಿಟ್ಹೋಗ್ಬಹುದ್ದು. ಅಥ್ವಾ ಯಾವ ಕ್ಷಣದಲ್ಲಿಯಾದ್ರೂ ನಿಮ್ಮನ್ನು ನಾನು ಹೊರ್ಗೆ ಕಳಿಸ್ಬಹುದ್ದು. ನಿಮ್ಗೆ ಇಷ್ಟವಾದ್ರೆ ನಾಳೆ ಈ ಅಡ್ರೆಸ್‌ಗೆ, ಒಂಬತ್ತು ಗಂಟೆಯೊಳ್ಗೆ ಬನ್ನಿ" ಒಂದು ವಿಳಾಸದ ಕಾರ್ಡನ್ನು ಅವಳ ಮುಂದೆ ಹಾಕಿದ.

ನಡುಗುವ ಕೈ ಬೆರಳುಗಳು ಅದನ್ನು ಸ್ಪರ್ಶಿಸಿದಾಗ ಅರ್ಥವಾಗದ ಅಲೌಕಿಕವಾದ ಅನುಭವ. 'ವಿಷ್' ಮಾಡಿ ಹೊರಗೆ ಬಂದು ಮುಖದ ಬೆವರನ್ನೊತ್ತಿಕೊಂಡಳು. ತನಗೆ ಆ ಕೆಲಸ ಸಿಕ್ಕೇ ಸಿಗುತ್ತದೆಯೆನ್ನುವ ಗ್ಯಾರಂಟಿಯ ಜೊತೆ, ಒಂದು ರೀತಿಯ ಸದವಕಾಶವೆಂದು ಅವಳ ಮನ ಹೇಳುತ್ತಿತ್ತು. ಯಾಕೆ? ಏನು? ಮಿದುಳಿನ ಪ್ರಶ್ನೆಗಳಿಗೆ ಉತ್ತರವಿಲ್ಲ. ಹೃದಯದಲ್ಲಿ ಮಾತ್ರ ಸಪ್ತಸ್ವರಗಳ ನಿನಾದ.

ಇದೇ ಗುಂಗಿನಲ್ಲಿ ವೇಳೆ ಸರಿದಿದ್ದೇ ಅವಳಿಗೆ ಗೊತ್ತಾಗಲಿಲ್ಲ.

"ಕನಸು ಕಾಣ್ತಾ ಇದ್ದೀಯಾ!" ವಾಸಂತಿ ಛೇಡಿಸಿದಾಗಲೇ ಬೆಚ್ಚಿ ವಾಸ್ತವಕ್ಕೆ ಮರಳಿದ್ದು. ಭುಜದ ಮೇಲೆ ಕೈಯಿಟ್ಟ ವಾಸಂತಿ ಗಲ್ಲವಿಡಿದು "ಏನೀ ಪ್ರಾಬ್ಲಮ್?" ಆತಂಕದಿಂದ ಪ್ರಶ್ನಿಸಿದಳು.

"ನಂಗೆ ಕೆಲ್ಸ ಸಿಗೋ ಹಾಗಿದೆ" ಎಂದಳು ಮೆಲುವಾಗಿ.

ವಾಸಂತಿಗಂತು ಖುಷಿಯೋ ಖುಷಿ. ಸಾಲು ಸಾಲಾಗಿ ಕೆಲಸ ಕೇಳಿಕೊಂಡು ಬರುವ ಯುವತಿಯರ ಹಿಂಡಿತ್ತು. ಒಬ್ಬ ಎಂ.ಬಿ.ಎ.

ಮಾಡಿದ ಯುವತಿ ಕೂಡ ಸೇಲ್ಸ್‌ಗರ್ಲ್ ಇಂಟರ್‌ವ್ಯೂಗೆ ಬಂದಿದ್ದನ್ನು ನೋಡಿದಳು. ಗೆಳತಿಯ ಕೆಲಸಕ್ಕಾಗಿ ಒಂದೆರಡು ದೇವಸ್ಥಾನಗಳಲ್ಲಿ ಹರಕೆ ಸಲ್ಲಿಸಿದ್ದಳು ಕೂಡ.

"ಸಿಗೋ ಹಾಗಿದೆ, ತಾನೇ? ಅದ್ಕೇ ಸಂತೋಷಪಡ್ಬೇಕು. ಅದ್ಬಿಟ್ಟು ಮಂಕಾಗಿ ಯಾಕೆ ಕೂತಿದ್ದೀಯಾ? ಅಕಸ್ಮಾತ್ ಸಿಗಲಿಲ್ಲಾಂತ ಅಂದ್ಕೊಂಡ್ರು, ಫುಟ್‌ಪಾತ್‌ಗೆ ಹೋಗ್ಬೇಕಿಲ್ಲ" ಸಾಂತ್ವನಿಸಿದಳು.

ಕಣ್ಮಣಿ ಅವಳ ಕೈ ಹಿಡಿದು ಕೂಡಿಸಿಕೊಂಡು ಕೆಲಸದ ವಿವರ ಹೇಳಿದಳು. ಚಿಂತೆಗೀಡಾದಳು ವಾಸಂತಿ. ಗೆಳತಿ ಅಲ್ಲೇ ಉಳಿಯುವುದು ಸುತರಾಂ ಇಷ್ಟವಿಲ್ಲ.

"ನಂಗೇನೋ ಇಷ್ಟವಾಗ್ಲಿಲ್ಲ" ಕೈಯಾಡಿಸಿಬಿಟ್ಟಳು.

ಏನೇ ಅಂದುಕೊಂಡರೂ, ಯಾವುದೋ ಸೆಳೆತ ಕಣ್ಮಣಿಯನ್ನು ಸೆಳೆಯುತ್ತಿದ್ದರಿಂದ ನಿರಾಕರಿಸುವ ಸ್ಥಿತಿಯಲ್ಲಿರಲಿಲ್ಲ.

"ಬರೀ ಮುವತ್ತು ದಿನದ ಕರಾರು ತಾನೇ! ಅಕಸ್ಮಾತ್ ಅವರೇ ಬೇಡ ಅನ್ನಬಹುದು. ಅಥ್ವಾ ನಾನೇ ನಿರಾಕರಿಸ್ಬಹುದು. ಒಂದು ಅನುಭವನಾದ್ರೂ ಸಿಕ್ಕುತ್ತೆ. ಬೆಳಗಿನಿಂದ ಸಂಜೆಯವರ್ಗೂ ಹಾಸ್ಟಲ್‌ನಲ್ಲಿ ಉಳಿದರೇ ನೂರೆಂಟು ಪ್ರಶ್ನೆಗಳು. ಆರಾಮಾಗಿ ಹೋಗ್ಬರ್ತೀನಿ" ಅಂದಳು. ಆದರೆ ಅಲ್ಲೇ ಉಳಿಯಬೇಕೆಂಬ ಕರಾರು ಇತ್ತು.

ವಾಸಂತಿ ಕೂದಲಿಗೆ ಮತ್ತು ಸೆರಗಿಗೆ ಹಾಕಿದ್ದ ಪಿನ್ನನ್ನು ಬಿಚ್ಚಿಟ್ಟು "ನಂಗೆ, ನೀನು ಹೋಗೋದೇ ಬೇಡಾಂತ ಅನ್ನಿಸುತ್ತೆ. ಇದು ಫ್ಯಾಕ್ಟರಿ, ಆಫೀಸ್‌ನ ಕೆಲ್ಸವಲ್ಲ. ಆ ಮನುಷ್ಯನ ಸ್ವಭಾವ ಹೇಗೋ, ಏನೋ! ಬೇಡ, ಬಿಡು" ಟವಲಿಡಿದು ಬಾತ್‌ರೂಂನತ್ತ ನಡೆದಳು.

ಏನೇ ಆಂದೋಲನವಿದ್ದರೂ ಕಣ್ಮಣಿ ಒಂದು ನಿರ್ಣಯಕ್ಕೆ ಬಂದಾಗಿತ್ತು. ಬಹುಶಃ ಪ್ರಪಂಚದ ಯಾವುದೇ ಶಕ್ತಿ ಅವಳನ್ನು ಹಿಂದಕ್ಕೆ ದೂಡಲಾರದಷ್ಟು ಗಟ್ಟಿಯಾಗಿತ್ತು ಅವಳ ಮನಸ್ಥಿತಿ.

ಇಬ್ಬರು ಹೋಗಿ ಊಟ ಮಾಡಿ ಬಂದರು. ಗಮನಿಸುತ್ತಲೇ ಇದ್ದಳು. ಕಣ್ಮಣಿಯ ಮೌನ ಬೇಸರ ತರಿಸಿತು. ಇದು ಕೆಲವು ಕ್ಷಣಗಳು ಮಾತ್ರ. ಅವಳು ಬೆಳೆದು ಬಂದ ಸ್ಥಿತಿ, ಈಗಿನ ಪರಿಸ್ಥಿತಿಯಲ್ಲಿ ಭವಿಷ್ಯದ ಬಗ್ಗೆ ಆತಂಕವಿರುವುದು ಸಹಜ. ಹಾಗೆಂದು ವಾಸಂತಿ ಅವಳನ್ನು ಬಿಡಲು

"ಬೆಳಿಗ್ಗೆ ಹೋಗೋಲ್ಲ, ತಾನೇ! ಅಕಸ್ಮಾತ್ ಹೋದರೂ ಅಲ್ಲೇ ಇರಲು ನನ್ನ ಒಪ್ಪಿಗೆ ಇಲ್ಲ. ಏನು ಸೆಕ್ಯೂರಿಟಿ? ಒಂಟಿ ಹೆಣ್ಣಿಗೆ ಯಾವ ರಕ್ಷಣೆ ಇದೆ ? ನಿಂಗೆ ಆ ಕೆಲ್ಸ ಬೇಡ" ವಾಸಂತಿಯೇ ನಿರ್ಣಯಕ್ಕೆ ಬಂದಳು. ಅವಳ ವಾದ ನೂರಕ್ಕೆ ನೂರರಷ್ಟು ಸತ್ಯವೇ. ಆದರೆ ಯಾವುದೇ ಭಯ, ಕಣ್ಮಣಿಯನ್ನು ಕಾಡುತ್ತಿರಲಿಲ್ಲ.

ಮೌನವಾಗಿ ಮಲಗಿಬಿಟ್ಟಳು. ಸ್ವಲ್ಪ ಹೊತ್ತು ಗೊಣಗಿದ ವಾಸಂತಿ ಬೇಗ ನಿದ್ರಿಸಿದರೂ, ಅವಳ ರೆಪ್ಪೆಗಳು ಮುಚ್ಚಿಕೊಳ್ಳಲಾರದಷ್ಟು ನಿಶ್ಚಲವಾಗಿದ್ದವು. ಬೆಳಿಗ್ಗೆ ವಾಸಂತಿಗೆ ಮೊದಲು ಎದ್ದು ಸ್ನಾನ ಮುಗಿಸಿ ರೆಡಿಯಾಗಿದ್ದಳು.

"ಹೋಗೋದೂಂತ ತೀರ್ಮಾನ ಮಾಡಿದ್ಯಾ?" ಏಳುತ್ತಿದ್ದಂತೆ ಪ್ರಶ್ನಿಸಿದ ವಾಸಂತಿ, ಅವಳ ಭುಜದ ಮೇಲೆ ಕೈಯಿಟ್ಟು "ಸ್ವಲ್ಪ ದಿನ ನಿರಾತಂಕವಾಗಿರು. ನಾನು ಸಾಕಷ್ಟು ಪ್ರಯತ್ನ ಮಾಡ್ತಾ ಇದ್ದೀನಿ, ನಿನ್ನ ಕೆಲ್ಸಕ್ಕಾಗಿ. ಒಂದು ಕಾನ್ವೆಂಟ್‌ನಲ್ಲಿ ಬರೀ ಮೂರು ನೂರಕ್ಕೆ ಕೆಲ್ಸ ಮಾಡ್ತೀರಾಂತ ಕೇಳ್ತಾರೆ. ಹೇಗೆ... ಮಾಡೋದು? ಡೊನೇಷನ್, ಫೀಜು ಹೆಸರಲ್ಲಿ ಎಷ್ಟೊಂದು ಸುಲಿಗೆ ಮಾಡ್ತಾರೆ. ಅಲ್ಲಿ ಕಷ್ಟಪಟ್ಟು ಪಾಠ ಮಾಡೋರಿಗೆ ಕೊಡೋದು, ಬರೀ ಮುನ್ನೂರು. ಯಾತಕ್ಕೆ ಸಾಕು? ಓಡಾಟಕ್ಕೆ ಸಾಕಾಗೋಲ್ಲ" ಅವರನ್ನು ಟೀಕಿಸಿದಳು. ಇವಳು ಕಿವುಡಾಗಿದ್ದಳು. ಏನೋ ಆತುರ, ಕಾತುರ, ಅರ್ಥವಾಗದ ಉದ್ವೇಗ.

ಸೂಟುಕೇಸ್‌ನಲ್ಲಿದ್ದ ಕೆಲವು ನೋಟುಗಳನ್ನು ತನ್ನ ಪರ್ಸ್‌ನೊಳಕ್ಕೆ ಹಾಕಿಕೊಂಡ ಕಣ್ಮಣಿ "ಅವ್ರ ತಾಯಿನ್ನಾದ್ರೂ ನೋಡ್ಕೊಂಡ್ ಬರ್ತೀನಿ. ತುಂಬ ಸ್ಟ್ರಿಕ್ಟ್ ಮನುಷ್ಯ. ಅವ್ರ ಅಂದಾಜಿಗೆ ತಕ್ಕಂತೆ ನನ್ನಿಂದ ನೋಡಿಕೊಳ್ಳೋಕಾಗದಿದ್ರೆ, ಮುಲಾಜಿಲ್ಲದೆ ಮನೆಗೆ ಕಳಿಸ್ತಾರೆ. 'ಎಕ್ಸ್‌ಪೀರಿಯನ್ಸ್' ಅನ್ನೋ ಕಾಲಂ ತುಂಬಲು ಇದೊಂದು ಸೇರಿಸ್ಕೋಬಹ್ದು" ಶಾಂತವಾಗಿ ನುಡಿದಳು ಕಣ್ಮಣಿ.

ಅವಳು ತಿಂಡಿ, ಊಟ ಯಾವುದಕ್ಕೂ ಕಾಯದೇ ಹಾಸ್ಟಲ್‌ನಿಂದ ಹೊರಗೆ ಬಂದಳು. ಎರಡು ಬಸ್ಸು ಬದಲಾಯಿಸಿಯೇ ಅವರು ಕೊಟ್ಟ ವಿಳಾಸವನ್ನು ತಲುಪಬೇಕಿತ್ತು.

ಗಾಂಧಿನಗರದ ಬಸ್ಸು ಸ್ಟಾಪ್‌ನಿಂದ ಅವರು ಕೊಟ್ಟ ವಿಳಾಸದ ಮನೆಗೆ ಒಂದೂವರೆ ಫರ್ಲಾಂಗ್‌ನಷ್ಟು ದೂರ. ವಿಶಾಲವಾದ ಗೇಟು. ಅದರ

ಮುಂದೆ ಒಬ್ಬ ಗೂರ್ಕ. ಎತ್ತರವಾದ ಕಾಂಪೌಂಡ್. ಒಳಗಿನ ವಿದ್ಯಮಾನಗಳು ಹೊರಗೆ ಕಾಣುವಂತಿರಲ್ಲಿಲ್ಲ. ಇದುವರೆಗೂ ಇಷ್ಟು ದೊಡ್ಡ ಬಂಗ್ಲೆಯನ್ನು ಎಂದೂ ಪ್ರವೇಶಿಸಿರಲಿಲ್ಲ.

ವಿಳಾಸದ ಕಾರ್ಡನ್ನು ತೋರಿಸಿದ ಕೂಡಲೇ ಗೂರ್ಖ ಗೇಟು ತೆರೆದು ಒಳಗೆ ಬಿಟ್ಟ. ಹಚ್ಚ ಹಸುರಿನ ಲಾನ್ ಇಬ್ಬನಿಯಲ್ಲಿ ತೊಯ್ದು ಪುನೀತವಾದಂತೆ ಹರ್ಷಿಸುತ್ತಿತ್ತು. ಅಲ್ಲಲ್ಲಿ ಬೆಳೆಸಿದ ಲಾನ್ ಇಡೀ, ಬಂಗ್ಲೆಯ ಶ್ರೀಮಂತಿಕೆಯನ್ನು ಹೆಚ್ಚಿಸಿತ್ತು. ಕೈಯಲ್ಲಿನ ವಾಚ್‌ನತ್ತ ದೃಷ್ಟಿ ಹರಿಸುತ್ತಲೇ ಹೆಜ್ಜೆ ಹಾಕಿದಳು.

ಬಾಲ್ಕನಿಯಲ್ಲಿ ಎದುರಾದ ಸಮವಸ್ತ್ರದ ಆಳು ಕರೆದೊಯ್ದು ಮುಂದಿನ ವಿಸಿಟಿಂಗ್ ರೂಮಿನಲ್ಲಿ ಕೂಡಿಸಿಹೋದ. ಗೋಡೆಗಳೆಲ್ಲ ಅಮೃತ ಶಿಲೆಯ ಹೊಳಪಿನಿಂದ ಮಿರುಗುಟ್ಟುತ್ತಿದ್ದರೇ ಗೋಧಿ ಬಣ್ಣದ ನೆಲ ಹೊಳೆಯುತ್ತಿತ್ತು. ಹಾಲ್‌ನ ಮಧ್ಯದಲ್ಲಿ ದೊಡ್ಡ ಹಿತ್ತಾಳೆಯ ಪಾತ್ರೆಯಲ್ಲಿ ಹೂವುಗಳನ್ನು ಜೋಡಿಸಿದ್ದರು. ಅತ್ಯಂತ ಸುಸಜ್ಜಿತ ರೀತಿಯಲ್ಲಿ ಆಸನ ವ್ಯವಸ್ಥೆ ಮಾಡಿದ್ದರು. ಒಟ್ಟಿನಲ್ಲಿ ಅವಳ ಕಲ್ಪನೆಗೂ ಸಿಗದ ಶ್ರೀಮಂತ ವಾತಾವರಣ. ಇದೆಲ್ಲ ಅವಳ ಪಾಲಿಗೆ ಹೊಸದೇ. ಎಂದೂ ನೋಡಿಲ್ಲದ ತ್ರಾಣವೇ. ಆದರೆ ಎಸ್.ಮುರುಳಿ ಕೃಷ್ಣ ಚೈತನ್ಯರನ್ನು ಮಾತ್ರ ಅಪರಿಚಿತ ವ್ಯಕ್ತಿಯೆಂದುಕೊಳ್ಳಲು ಅವಳಿಗೆ ಸಾಧ್ಯವಿರಲಿಲ್ಲ.

ಸ್ವಲ್ಪ ನಡು ವಯಸ್ಸಿನ ಅಂದರೆ ಐವತ್ತು - ಅರವತ್ತರ ನಡುವಿನ ವ್ಯಕ್ತಿ ಬಂದು ಅವಳನ್ನು ಒಂದು ವಿಶಾಲವಾದ ಹಾಲ್‌ಗೆ ಕರೆದೊಯ್ದರು. ರೂಮಿನ ನಾಲ್ಕು ಕಡೆಗಳಲ್ಲೂ ಹೂದಾನಿಗಳಲ್ಲಿ ರಂಗು ರಂಗಿನ ಜೀವಂತ ಹೂಗಳ ಸೊಬಗು ಕಣ್ಣಿಗೆ ರಾಚುವಂತಿತ್ತು. ವಿಶಾಲವಾದ ಮಂಚದ ಮೇಲೆ ಶ್ರೀಮಂತ ಮುಖದ ಕಳೆಯ ಹೆಂಗಸು ಮಲಗಿದ್ದಳು. ಅನತಿ ದೂರದಲ್ಲಿ ಬಿಳಿ ಸಮವಸ್ತ್ರದ ಸಿಸ್ಟರ್ ಮ್ಯಾಗಝೀನ್ ತಿರುವಿದ್ದವಳು ಹೋದ ಕೂಡಲೇ ವಿಶ್ ಮಾಡಿ ಎದ್ದು ನಿಂತಳು.

"ನಮಸ್ಕಾರ, ಅಮ್ಮ...." ಅತ್ಯಂತ ವಿನೀತರಾಗಿ ಕೈಗಳನ್ನು ಜೋಡಿಸಿದರು, ಮಧುಸೂದನರಾವು. ಅವರು ಎಸ್.ಮುರುಳಿ ಕೃಷ್ಣ ಚೈತನ್ಯರ ಪರ್ಸನಲ್ ಸೆಕ್ರೆಟರಿ. ಹತ್ತು ವರ್ಷಗಳಿಂದ ಆ ಪೋಸ್ಟನ್ನು ನಿಭಾಯಿಸುತ್ತಿರುವವರು, ಅವರೇ. ತುಂಡು ಲಂಗದ, ಚುರುಕು ಕಣ್ಣಿನ, ಲಿಪ್‌ಸ್ಟಿಕ್ ಹಚ್ಚಿದ ಕೆಂಪು ಮಿನುಗುವ ತುಟಿಗಳ ಹುಡುಗಿಯನ್ನು ಎಂದು

ತಮ್ಮ ಪಿ. ಎ. ಮಾಡಿಕೊಳ್ಳಬೇಕೆಂಬ ವಿಷಯ ಆ ಯಜಮಾನನಿಗೆ ಬಂದಿರಲಿಲ್ಲ.

"ಹೇಗಿದ್ದೀರಾ? ಮಗ್ಳು ಮದ್ವೆ ಚೆನ್ನಾಗಿ ಆಯ್ತು?". ಆಕೆ ಪ್ರಶ್ನಿಸುತ್ತಲೇ ನಿಧಾನವಾಗಿ ಅವಳತ್ತ ಹರಿಸಿದರು ನೋಟವನ್ನು. "ನಿಮ್ಮನ್ನು ನೋಡಿಕೊಳ್ಳೋಕೆ ಹೊಸ್ದಾಗಿ ಅಪಾಯಿಂಟ್ ಮಾಡ್ಕೋತಾ ಇದ್ದಾರೆ. ಹೆಸರು ಕಣ್ಮಣಿ ಅಂತ" ಪರಿಚಯಿಸಿದರು. ಎರಡು ಕೈಗಳನ್ನು ಜೋಡಿಸಿದಳು. "ಹೆಸರಿಗೆ ಸರಿಯಾಗಿ 'ಕಣ್ಮಣಿ' ಹಾಗೇ ಇದ್ದಾಳೆ" ಮೆಚ್ಚಿಗೆ ಸೂಚಿಸಿದರು. ಅವರ ತುಟಿಯಂಚಿನಲ್ಲಿ ಕಂಡೂ ಕಾಣದ ವಿಷಾದ.

ಮತ್ತೆ ಇವಳನ್ನು ಕರೆತಂದು ಮುಂದಿನ ವಿಸಿಟರ್ಸ್ ರೂಮಿನಲ್ಲಿ ಕೂಡಿಸಿ "ನನ್ನ ಹೆಸರು ಮಧುಸೂದನರಾವು ಅಂತ. ನಾನು ಹೆಸರಿಗೆ ಬಾಸ್‌ಗೆ ಪಿ. ಎ. ಆದರೂ, ಈ ಮನೆಯಲ್ಲಿ ನಾನು ಒಬ್ಬ ಎಂದು ಕಾಣುವ ಧಾರಾಳತನ. ಹತ್ತು ನಿಮಿಷದಲ್ಲಿ ನೀವು ಅವ್ರನ್ನ ಕಾಣಬಹ್ದು" ಹೇಳಿ ಹೊರಗೆ ಹೋದರು.

ಬಿಸಿಬಿಸಿ ಇಡ್ಲಿ, ಸಾಂಬಾರ್, ವಡೆ, ಚಟ್ನಿ ಸಮೋಸಾದ ಬ್ರೇಕ್‌ಫಾಸ್ಟ್ ಬಂತು. ಸಂಕೋಚಿಸುತ್ತಲೇ ಇದ್ದಳು. ತಾಯಿ, ಅಜ್ಜಿ, ಚಿಕ್ಕಮ್ಮ ದೊಡ್ಡಮ್ಮ ಎನ್ನುವ ಬಂಧುಗಳು ಇಲ್ಲದೆ ಬೆಳೆದವಳು. ಸುಬ್ಬಲಕ್ಷ್ಮಿಯವರನ್ನು ನೋಡಿದಾಗ ಗೌರವದ ಜೊತೆ ಆತ್ಮೀಯ ಭಾವ ಮೂಡಿತು. 'ಈ ಕೆಲಸ ಸಿಕ್ಕರೆ ತನ್ನ ಹುಟ್ಟು ಸಾರ್ಥಕ' ಎನ್ನುವ ಅಪರೂಪವಾದ ಉದ್ವೇಗ ಅವಳಲ್ಲಿ ತುಂಬಿಕೊಂಡಿತು.

ಸರಿಯಾಗಿ ಒಂಬತ್ತಕ್ಕೆ ಹತ್ತು ಸೆಕೆಂಡ್‌ಗಳು ಇದೆ ಎನ್ನುವ ವೇಳೆಗೆ ಎಸ್.ಮುರುಳಿ ಕೃಷ್ಣ ಚೈತನ್ಯ ಒಳಗೆ ಬಂದರು. ಎದ್ದು ನಿಂತಾಗ ಕೂಡುವಂತೆ ಸನ್ನೆ ಮಾಡಿ ಕೂತ. ಪ್ರಬುದ್ಧತೆಯ ಜೊತೆ ವಿಪರೀತವಾದ ಸೀರಿಯೆಸ್‌ನೆಸ್ ಮುಖದ ಮೇಲೆ .

"ನೀವು ನೋಡಿದ್ದು ನನ್ನ ತಾಯಿಯನ್ನು, ಅವರು ಓಡಾಡಲಾರರು. ಕೈಗಳಲ್ಲಿ ಶಕ್ತಿ ಕಮ್ಮಿ. ಮಿಕ್ಕ ವಿಷ್ಯದಲ್ಲೂ ಆಲ್‌ರೈಟ್. ಟ್ರೀಟ್‌ಮೆಂಟ್, ಆರೈಕೆನ ಸಿಸ್ಟರ್ ನೋಡ್ತಾರೆ. ಅವರನ್ನು ಪ್ರೀತಿಯಿಂದ ನೋಡಿಕೊಳ್ಳೋದು, ಆತ್ಮೀಯವಾಗಿ ಅವರಿಗೆ ಇಷ್ಟವಾಗುವಂತೆ ನಡೆದುಕೊಳ್ಳುವುದು ನಿಮ್ಮ ಕೆಲ್ಸ. ಇಷ್ಟು ಪ್ರಾಮಾಣಿಕವಾಗಿ ಸಿಕ್ಕರೇ, ಅವ್ರು ಬೇಗ ಚೇತರಿಸ್ಕೋತಾರೆ. ಈ ಕೆಲ್ಸ ನಿಮ್ಮಿಂದ ಸಾಧ್ಯವಾಗುವುದಾದ್ರೆ... ಮಧುಸೂದನರಾವುಗೆ ತಿಳ್ಸಿ. ಅವ್ರ

ಜೊತೆ ನೀವು ಮಾತಾಡ್ಬಹುದ್ದು" ಎದ್ದು ಹೋಗಿಬಿಟ್ಟ. ಅವಳಿಗೇನು ತೋಚಲಿಲ್ಲ.

ಐದು ನಿಮಿಷದ ತರುವಾಯ ಮಧುಸೂದನರಾವು ಬಂದರು. ಅವಳಿಗೆ ಒಪ್ಪಿಗೆ ಇತ್ತು. ಆದರೆ ಇಲ್ಲಿ ಪೂರ್ತಿಯಾಗಿ ಇರುವ ಬದಲು ಹಾಸ್ಟಲ್‌ಗೆ ಹೋಗಿ ಬಂದು ಮಾಡಬಹುದೆಂಬುದು ಅವಳ ಅಭಿಪ್ರಾಯ. ಅದನ್ನು ವ್ಯಕ್ತ ಪಡಿಸಿದಳು ಕೂಡ.

"ರಾತ್ರಿ, ಹಾಸ್ಟಲ್‌ಗೆ ಹೋಗಿ... ಬೆಳಿಗ್ಗೆ ಬರಬಹುದಲ್ಲ" ಅವರು ತಲೆಯಾಡಿಸಿಬಿಟ್ಟರು "ಆಗೋಲ್ಲ, ಈ ಮನೆಯವಳಂತೆ ಇಲ್ಲೇ ಇರ್ಬೇಕು. ಇದ್ನ ದೃಷ್ಟಿಯಲ್ಲಿ ಇಟ್ಕೊಂಡೇ ನಿನ್ನನ್ನು ಆರಿಸಿರೋದು. ವರ್ಕಿಂಗ್ ಉಮೆನ್ಸ್ ಹಾಸ್ಟಲ್‌ನಲ್ಲಿ ಪೇ ಮಾಡಿ ಅಲ್ಲಿರೋದಕ್ಕಿಂತ ಇಲ್ಲಿರೋದು-ಲಾಭದಾಯಕ." ಬುದ್ಧಿ ಮಾತಿನ ಜೊತೆ ನಿಯಮವನ್ನು ತಿಳಿಸಿ ಹೇಳಿದರು.

"ಬರ್ತೀನಿ, ಸರ್" ಮೇಲೆದ್ದಳು.

ಮಧುಸೂದನರಾವು ಅವಳ ಮುಖ ನೋಡಿದರು ಪ್ರಶ್ನಾರ್ಥಕವಾಗಿ, ಆ ಕೆಲಸಕ್ಕೆ ನೂರು ಜನರನ್ನು ಬೇಕಾದರೂ ಅಪಾಯಿಂಟ್‌ಮೆಂಟ್ ಮಾಡುವ ಸಾಮರ್ಥ್ಯ ಚೈತನ್ಯ ಇತ್ತು. ಹಣದ ಆಸೆಗಾಗಿ ಬರೋ ಜನರಲ್ಲಿ ಹೃದಯವಂತಿಕೆ, ಪ್ರಾಮಾಣಿಕತೆಯ ಜೊತೆಗೆ ಪ್ರೀತಿಸುವ ಗುಣ ಕೂಡ ಇರಬೇಕಿತ್ತು. ಅದು ಅವನ ನಿರೀಕ್ಷೆ.

"ನಾಳೆ ಬೆಳಿಗ್ಗೆ ಬರ್ತೀನಿ. ಒಮ್ಮೆ 'ಅಮ್ಮ'ನ್ನ ನೋಡಿಕೊಂಡು ಹೋಗ್ಲಾ?" ಒಪ್ಪಿಗೆಯ ಜೊತೆ ಪರ್ಮಿಷನ್ ಕೂಡ ಕೇಳಿದಾಗ ಮಧುಸೂದನರಾವು ಮುಖ ಅರಳಿತು. "ಗುಡ್, ಐ ಲೈಕ್ ಯು, ಈ ಗುಣ ಇಲ್ಲಿ ಎಲ್ಲರಿಗೂ ಮೆಚ್ಚಿಗೆ ಆಗುತ್ತೆ. ಬೆಸ್ಟ್ ಆಫ್ ಲಕ್, ನಿಂಗೆ ಸೆಕ್ಯೂರಿಟಿ ಜೊತೆ ಒಳ್ಳೆ ಫ್ಯೂಚರ್ ಕೂಡ ಇರುತ್ತೆ" ಮನಃದುಂಬಿ ನುಡಿದರು. ಇವಳ ವಯಸ್ಸಿನ ಮಗಳಿಗೆ ಮದುವೆ ಮಾಡಿ ಇಂದೇ ಕಳುಹಿಸಿಕೊಟ್ಟಿದ್ದರು. ಆ ಭಾವಾವೇಗದಿಂದ ಇನ್ನು ಮುಕ್ತರಾಗಿರಲಿಲ್ಲ.

ಸದ್ದಾಗದಂತೆ ರೂಮಿನ ಬಾಗಿಲನ್ನು ದೂಡಿಕೊಂಡು ಅಂಜುತ್ತಲೇ ಒಳ ಹೊಕ್ಕಾಗ, ಕೂತಿದ್ದ ಸಿಸ್ಟರ್ ಏನು ಎನ್ನುವಂತೆ ನೋಡಿ, "ವಾಟ್ ಡು ಯು ವಾಂಟ್ ?" ಹುಬ್ಬೇರಿಸಿದಳು. ಉತ್ತರಿಸುವುದು ಅವಳಿಂದಾಗಲಿಲ್ಲ. ಮಂಚದ ಬಳಿ ಹೋಗಿ ಸುಬ್ಬಲಕ್ಷ್ಮಿಯವರ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡು "ಅಮ್ಮ ನಾಳೆ ಬೆಳಿಗ್ಗೆ ಬರ್ತೀನಿ" ಹೇಳಿದಳು. ಆಕೆಯ

ಮುಖದಲ್ಲಿ ಹಸನ್ಮುಖತೆ ಮಿನುಗಿತು. 'ಸರಿ'ಯೆನ್ನುವಂತೆ ನೋಡಿದರು. ಕಣ್ಣೊರೆಸಿಕೊಂಡು ಹೊರಗೆ ಬಂದಳು.

ಮುಂದಿನ ಆಫೀಸ್ ಕೋಣೆಯಲ್ಲಿದ್ದ ಮಧುಸೂದನ ರಾಯರಿಗೆ ಹೇಳಿ, ಹೊರ ಬಂದು, ಗೇಟಿನವರೆಗೂ ಹೋಗಿ ಹಿಂದಕ್ಕೆ ತಿರುಗಿ ನೋಡಿದಳು. ಭವ್ಯ ಮಹಲಿನಂತೆ ಕಂಡಿತು. ಈಗ ಪಾಳುಬಿದ್ದ ವಾಡೆ ಕೂಡ ಒಂದು ಕಾಲದಲ್ಲಿ ಭವ್ಯವಾಗಿ, ಕಲಾತ್ಮಕವಾಗಿ ಕಣ್ಣು ಕೋರೈಸುವಂತೆ ಇದ್ದಿರಬೇಕೆಂದುಕೊಂಡಳು.

ಇದಕ್ಕೆ ಪೂರ್ತಿಯಾಗಿ ವಾಸಂತಿಯ ವಿರೋಧ ವ್ಯಕ್ತವಾಯಿತು. "ಅಲ್ಲಿರೋಕೆ, ನನ್ನ ಒಪ್ಗೆ ಖಂಡಿತ ಇಲ್ಲ. ಈಗ ಜನನಾ ನಂಬೋದೇ ಕಷ್ಟ. ಗುಹೆ ಸೇರಿದ್ಮೇಲೆ ಈಚೆಗೆ ಬರೋದು ಕಷ್ಟ. ಅಕೌಂಟ್ ಸೆಕ್ಷನ್‌ನಲ್ಲಿ ಒಂದು ಪೋಸ್ಟ್ ಖಾಲಿ ಆಗ್ತಾ ಇದೆ. ಅಲ್ಲಿ ಟ್ರೈ ಮಾಡೋಣ ಬಿಡು".

ಶಾಂತವಾಗಿ ಅವಳ ಮಾತುಗಳನ್ನು ಕೇಳಿಸಿಕೊಂಡ ಕಣ್ಮಣಿ "ನೋಡೋಣ, ಒಂದ್ವಾರ ಇರ್ತೀನಿ. ಇಷ್ಟವಾಗ್ಲಿಲ್ಲಾಂದ್ರೆ... ಬಿಟ್ಹೋಗ್ಬಹುದ್ದಂತ ಬಾಸ್ ಹೇಳಿದ್ದಾರೆ. ಆಮೇಲೆ ಇದ್ದೇ ಇದೆ, ಮತ್ತೊಂದು ನೌಕರಿಯ ತಲಾಷ್. ನಂಗೂ ಹಿರಿಯರ ಜೊತೆ ನಾಲ್ಕು ದಿನಕಳ್ಯೋ ಆಸೆ. ಆಕೆ ದೇವತೆಯಂತೆ ಕಂಡರು." ಸುಬ್ಬಲಕ್ಷ್ಮಿಯನ್ನು ಕುರಿತು ಹೇಳಿದಳು.

ವಾಸಂತಿ ಕೂಗಾಡಿದಳು. ಕೋಪ ಮಾಡಿಕೊಂಡಳು. ಊಟ ಬೇಡವೆಂದಳು. ಅವಳ ಮನವೊಲಿಸುವ ವೇಳೆಗೆ ಸಾಕು ಸಾಕಾಯಿತು ಅವಳಿಗೆ.

"ವಿಳಾಸ, ಫೋನ್ ನಂಬರ್ ಎಲ್ಲಾ ಕೊಡ್ಬೇಕು. ದಿನ ಒಂದ್ಸಲನಾದ್ರೂ ಫೋನ್ ಮಾಡ್ಬೇಕು. ಸ್ವಲ್ಪ ಕಷ್ಟ, ಬೇಜಾರೂಂತ ಅನ್ನಿಸಿದರೂ ಬಿಟ್ಟು ಬರ್ಬೇಕು. ನೀನು ಒಂಟಿಯಲ್ಲ, ನಾನು ನಿನ್ಜೊತೆ ಇದ್ದೀನಿ" ಎಂದ ಭಾವೋದ್ವೇಗದಿಂದ ಹೇಳಿದಾಗ ಕಣ್ಮಣಿ ಅಪ್ಪಿಕೊಂಡು ಕಣ್ಣೀರು ಸುರಿಸಿದಳು - ಈ ಸ್ನೇಹದ ನಂಟಿಗೆ ಯಾವುದು ಸಾಟಿ?

ಬರೀ ತನ್ನ ಬಟ್ಟೆಬರೆಗಳು, ಒಂದು ಸೂಟುಕೇಸ್ ಕಣ್ಮಣಿ ರೆಡಿ ಮಾಡಿಕೊಂಡಾಗ, ಮಂಕಾಗಿ ಕೂತೇ ಇದ್ದಳು ವಾಸಂತಿ. ಇಂದು ತೀರಾ ಒಂಟಿಯಾದ ಅನುಭವ ಅವಳಿಗೆ. ಪದೇ ಪದೇ ಹೇಳಿದ್ದೇ ಹೇಳಿದಳು. ಆಟೋ ಸ್ಟ್ಯಾಂಡ್‌ವರೆಗೂ ತಾನೇ ಸೂಟ್‌ಕೇಸ್ ಹೊತ್ತುಕೊಂಡು ಹೋಗಿ, ಕಣ್ತುಂಬಿ ಕೈ ಬೀಸಿದಳು.

ಇದು ಕಣ್ಮಣಿಯ ಜೀವನದ ಮೂರನೆಯ ಅಧ್ಯಾಯ. ಕೆಲಸ ಸಿಕ್ಕಿ ಅನಾಥಾಶ್ರಮದಿಂದ ಹೊರಗೆ ಬಂದಾಗ ಪಂಜರದಲ್ಲಿ ಕೂಡಿ ಹಾಕಿದ ಹಕ್ಕಿಯನ್ನು ಹೊರಗೆ ಬಿಟ್ಟಂತಾಗಿತ್ತು. ಬೇರೆಯವರ ಸಹಾನುಭೂತಿ ಬೇಡ, ಸ್ವಂತ ಸಂಪಾದನೆಯಿಂದ ಬದುಕಬಲ್ಲೆ ಎನ್ನುವ ಆತ್ಮವಿಶ್ವಾಸ. ವಾಡೆಯ ಪ್ರವೇಶ ಎರಡನೇ ಅಧ್ಯಾಯ!

ವಿಶಾಲವಾದ ದೊಡ್ಡ ಗೇಟು ದಾಟಿ ಹೊರಟು ಒಳಗೆ ಬಂದಾಗ, ಕಾಲುಗಳು ನಡುಗತೊಡಗಿದವು. ಇದು ದಿಟ್ಟ ಹೆಜ್ಜೆಯೋ ಅಲ್ಲವೋ, ಒಂದು ರೀತಿಯ ಸೆಳೆತ ಅವಳನ್ನು ತಂದು ಇಲ್ಲಿಗೆ ಸೇರಿಸಿತ್ತು.

ಸಮವಸ್ತ್ರದ ಆಳು ಮುಂದೆ ಇದ್ದ ಆಫೀಸ್ ರೂಮಿಗೆ ಕರೆದೊಯ್ದ. ಪ್ರಧಾನವಾದ ಸೀಟು ಖಾಲಿ ಇತ್ತು. ಈ ಕಡೆ ಕೂತಿದ್ದ ಮಧುಸೂಧನರಾವು ಹಸನ್ಮುಖದಿಂದ ಬರಮಾಡಿಕೊಂಡರು.

"ಒಳ್ಳೆ ಡಿಸಿಷನ್ ತಗೊಂಡೆ. ಯಜಮಾನರು ಒಳ್ಳೆ ವ್ಯಕ್ತಿ. ನಿನ್ನ ಭವಿಷ್ಯಕ್ಕೆ ಸಹಾಯ ಮಾಡ್ತಾರೆ, ಕೂತ್ಕೋ" ಎಂದರು.

ಅವಳ ಬಯೋಡಟಾ ಫೈಲನ್ನು ಒಮ್ಮೆ ನೋಡಿ, ಕತ್ತೆತ್ತಿ ಅವಳತ್ತ ನೋಟ ಹರಿಸಿದರು. ಸೌಮ್ಯವಾದ ಈ ಚೆಲುವೆ ಅನಾಥಾಶ್ರಮದ ಕೊಡುಗೆ. ಮಗಳ ಮದುವೆಯ ಗಡಿಬಿಡಿಯಲ್ಲಿದ್ದುದರಿಂದ ಅವರ ನೋಟೀಸಿಗೆ ಬಂದಿರಲಿಲ್ಲ.

ಆಳನ್ನು ಕರೆದು ಅವಳ ಸೂಟುಕೇಸು ಮತ್ತು ಬ್ಯಾಗನ್ನು ಒಯ್ದು ಅವಳಿಗಾಗಿ ತೆರೆದಿಟ್ಟ ಕೋಣೆಯನ್ನು ತೋರಿಸಲು ಹೇಳಿದರು.

"ಇಂದಿನಿಂದ್ಲೇ ಡ್ಯೂಟಿಗೆ ಜಾಯಿನ್ ಆದ ಲೆಕ್ಕ. ಇಲ್ಲಿ ಸಹಿ ಮಾಡು" ಎಂದು ಒಂದು ರಿಜಿಸ್ಟರ್ ಮತ್ತು ಒಂದೆರಡು ಕಡೆ ಅವಳ ಸಹಿ ಪಡೆದರು. "ಈ ಮನೆಯಲ್ಲಿ ಏನು ಭಯವಿಲ್ಲ. ಅಮ್ಮಾವರನ್ನು ಚೆನ್ನಾಗಿ ನೋಡ್ಕೋಬೇಕು. ಸಿಸ್ಟರ್‌ಗೆ ಒಂದು ರೀತಿಯ ಅಸಹನೆ ಅದ್ನ ಸ್ವಲ್ಪ ಸಹಿಸ್ಕೋಬೇಕು" ಕಡೆಯ ಮಾತನ್ನು ಮೆಲುದನಿಯಿಂದ ಹೇಳಿದರು.

ಮೂರು ವರ್ಷದಿಂದ ಮಂಚವಿಡಿದ ಸುಬ್ಬಲಕ್ಷ್ಮಿಯ ಶುಶ್ರೂಷೆಗಾಗಿ ಈ ಸಿಸ್ಟರ್ ನೇಮಕವಾಗಿದ್ದಳು. ಅಮೆರಿಕಾದಲ್ಲಿ ಕಲಿತು ಬಂದವಳೆಂಬ ಎಕ್ಸ್‌ಟ್ರಾ ಕ್ವಾಲಿಫಿಕೇಷನ್ ಅವಳದು.

"ಲುಕ್, ಮಿಸ್ಟರ್ ಚೈತನ್ಯ, ಟ್ರೀಟ್‌ಮೆಂಟ್ ಜೊತೆ ಪ್ರೀತಿ ತೋರುವಂಥ, ಆತ್ಮವಿಶ್ವಾಸ ತುಂಬುವಂಥವರ ಒಡನಾಟ ಬೇಕು ನಿನ್ನ

ತಾಯಿಗೆ. ಅಂಥವರನ್ನು ಒಬ್ಬರನ್ನು ಅಪಾಯಿಂಟ್ ಮಾಡ್ಕೋ. ಮನೆಯವರಾಗಿದ್ರೆ.. ಇನ್ನು ಒಳ್ಳೆಯದು." ಕೇರಳದಿಂದ ಬಂದ ಒಬ್ಬ ನರರೋಗ ತಜ್ಞ ಡಾಕ್ಟರ್ ಸಲಹೆ ಕೊಟ್ಟಿದ್ದರು ಅವನಿಗೆ. ಅದಕ್ಕಾಗಿ ಈ ಪ್ರಯತ್ನ. ಆರು ತಿಂಗಳಲ್ಲಿ ಆರು ಜನರನ್ನು ಅಪಾಯಿಂಟ್ ಮಾಡಿಕೊಂಡಿದ್ದ. ಸಿಸ್ಟರ್, ಅವರ ನಡುವೆ ಜಗಳ, ಇರುಸು ಮುರುಸು. ಕೆಟ್ಟ ಹರಟುವಿಕೆ ಆಕೆಗೆ ಇಷ್ಟವಾಗದು. ಸುಬ್ಬಲಕ್ಷ್ಮಿ ಬೌದ್ಧಿಕವಾಗಿ ಬೆಳೆದ ಹೆಣ್ಣು ಮಗಳು. ಈಗ ಮತ್ತೊಂದು ಪ್ರಯತ್ನವೆನ್ನುವಂತೆ ಕಣ್ಮಣಿಯ ಆಯ್ಕೆ.

ಈ ವಾತಾವರಣದಲ್ಲಿ ಕಣ್ಮಣಿಯ ಹೊಸ ಬದುಕು ಷುರುವಾಗಿತ್ತು.

* * * *

ಬೆಳಗಿನ ವ್ಯಾಯಯಾಮ ಮುಗಿಸಿಕೊಂಡು ಚೈತನ್ಯ ಬರುತ್ತಿದ್ದುದು ತಾಯಿಯ ರೂಮಿಗೆ. ಕಾಫೀ ಕುಡಿಯುತ್ತಿದ್ದುದ್ದು ಅಲ್ಲಿಯೇ. ನಂತರವೇ ಅವನ ದಿನಚರಿ. ಬ್ರೇಕ್‌ಫಾಸ್ಟ್ ಮುಗಿಸುವ ಮುನ್ನ ಮತ್ತೊಮ್ಮೆ ತಾಯಿಯ ರೂಮಿಗೆ ಬರುತ್ತಿದ್ದ. ತಾನೇ ಕೈಗಳಲ್ಲಿ ಎತ್ತಿ ಒಯ್ದು ಬಾತ್‌ರೂಂನಲ್ಲಿ ಆಕೆಗಾಗಿಯೇ ಸಿದ್ಧಪಡಿಸಿದ ವಿರಾಮಾಸನದಲ್ಲಿ ಕೂಡಿಸುತ್ತಿದ್ದ. ಸಿಸ್ಟರ್, ಆಯಾ ಸ್ನಾನ ಮಾಡಿಸಿ ಬಟ್ಟೆ ತೊಡಿಸಿದ ನಂತರ ತಾನೇ ಕರೆ ತಂದು ಮಂಚದ ಬಳಿಯಲ್ಲಿನ ವಿಶೇಷವಾದ ಒರಗು ಆಸನದ ಮೇಲೆ ಕೂಡಿಸುತ್ತಿದ್ದ. ಕೈಯಾರೇ ತಿನ್ನಿಸಿದ ನಂತರವೇ ಅವನು ಮಿಕ್ಕದ್ದು ಗಮನಿಸುತ್ತಿದ್ದುದು. ತಾಯಿಯ ಮುಖ ಸ್ವಲ್ಪ ಕಂದಿದ್ದರೂ ಕೋಟಿ ಕೋಟಿಗಳು ನಷ್ಟವಾದಂತೆ ಪರಿತಪಿಸುತ್ತಿದ್ದ. ಬ್ರೇಕ್‌ಫಾಸ್ಟ್ ಮುಗಿಸಿಕೊಂಡು ಹೋಗುವ ಮುನ್ನ ಮತ್ತೊಮ್ಮೆ ಬಂದು ತಾಯಿಯನ್ನು ಮಾತಾಡಿಸುತ್ತಿದ್ದ. ನಂತರ ಮಿಕ್ಕ ಕೆಲಸಗಳು. ದಿನಚರಿಯಲ್ಲಿ ಯಾವುದು ಬೇಕಾದರೂ ಏರುಪೇರಾಗಬಹುದು. ಆದರೆ ಇಷ್ಟು ಮಾತ್ರ ಬದಲಾವಣೆಯಾಗುತ್ತಿರಲ್ಲಿಲ್ಲ.

ಕಣ್ಮಣಿಯ ದಿನಚರಿ ಸುಬ್ಬಲಕ್ಷ್ಮಿಯವರ ಮುಖ ನೋಡುವುದರೊಂದಿಗೆ ಷುರುವಾಗುತಿತ್ತು. ಸಿಸ್ಟರ್ ಟೆಸ್ಟ್ ಮಾಡಿದರೂ ಇನ್ನೊಮ್ಮೆ ಬಿ.ಪಿ. ಟೆಂಪರೇಚರ್ ಪ್ರತಿಯೊಂದನ್ನು ತಾನೇ ಟೆಸ್ಟ್ ಮಾಡಿ ಚಾರ್ಟ್‌ನಲ್ಲಿ ಬರೆಯುತ್ತಿದ್ದ. ಅಷ್ಟು ಎಚ್ಚರ ತಾಯಿಯ ಬಗ್ಗೆ. ಪ್ರತಿದಿನ ಚೆಕ್‌ಅಪ್‌ಗೋಸ್ಕರ ಡಾಕ್ಟರ್ ಬರುತ್ತಿದ್ದರು. ಕೈಕಾಲುಗಳಿಗೆ ವ್ಯಾಯಾಮ ಮಾಡಿಸಲು ವಿಶೇಷ ಉಪಕರಣಗಳನ್ನು ವಿದೇಶದಿಂದ ತರಿಸಲಾಗಿತ್ತು.

ಅದನ್ನು ಅವನೇ ಆಪರೇಟ್ ಮಾಡುತ್ತಿದ್ದ. ಕೆಲವೊಮ್ಮೆ ಸಿಸ್ಟರ್ ಅವನ್ನೆಲ್ಲ ಮಾಡುತ್ತಿದ್ದರು.

ಮುಂಬಯಿಗೆ ಹೋಗಿದ್ದ ಚೈತನ್ಯ ದಿನದಲ್ಲಿ ನಾಲ್ಕು ಸಲವಾದರೂ ಫೋನ್ ಮಾಡುತ್ತಿದ್ದ. ಟೆಂಪರೇಚರ್‌ನಿಂದ ಪ್ರತಿಯೊಂದನ್ನು ವಿಚಾರಿಸುತ್ತಿದ್ದ. ಅಂದು ರಾತ್ರಿ ಒಂಬತ್ತು ಗಂಟೆಗೆ ಫೋನ್ ಬಂದಾಗ ಸುಬ್ಬಲಕ್ಷ್ಮಿಯವರ ಕೋಣೆಯಲ್ಲಿ ಇದ್ದಿದ್ದು ಕಣ್ಮಣಿ ಮಾತ್ರ.

"ಹಲೋ..." ಎಂದಳು ಕಂಪಿಸುವ ಸ್ವರದಲ್ಲಿ.

"ಕಣ್ಮಣಿ, ಎಲ್ಲಿ ಸಿಸ್ಟರ್?" ಕೇಳಿದ ದನಿಯಲ್ಲಿ ಗಡಸಿತ್ತು.

"ಅವ್ರ ಕಸಿನ್ ಬಂದಿದ್ದಾರೆ. ಹೊರ್ಗಡೆ ಮಾತಾಡ್ತಾ ಇದ್ದಾರೆ" ಎಂದವಳು ಅಂದು ತೆಗೆದುಕೊಂಡ ಆಹಾರದಿಂದ ಹಿಡಿದು ಟೆಂಪರೇಚರ್, ವ್ಯಾಯಾಮ ಎಲ್ಲವನ್ನು ಪಟ್ಟಿಮಾಡಿಕೊಂಡಂತೆ ಉಸುರಿದಳು. "ಗುಡ್, ಅಮ್ಮನಿಗೆ ಕೊಡು" ಹೇಳಿದ.

ರಿಸೀವರ್‌ನ ಹಿಡಿಯುವಷ್ಟು ಶಕ್ತಿ ಆಕೆಯ ಕೈಗಳಿಗೆ ಇರಲಿಲ್ಲ. ಅದನ್ನು ಕೇಳಲು, ಮಾತಾಡಲು ಅನುಕೂಲವಾಗುವಂತೆ ಫೋನನ್ನು ಹಿಡಿಯಬೇಕಿತ್ತು.

"ಚೈತನ್ಯ, ಹೇಗಿದ್ದೀಯಾ?" ಕೇಳಿದರು. ತಾಯಿಯ ಮಮತೆಯೆಲ್ಲ ಧಾರೆಯಾಗಿ ದನಿಯಲ್ಲಿ ಉಕ್ಕಿ ಹರಿಯಿತೇನೋ ಅನ್ನಿಸಿತು. ಅಷ್ಟು ಆರ್ದ್ರತೆಯಿಂದ ಕೇಳಿದರು. ಮೂರು ನಿಮಿಷ ನಿರಂತರವಾಗಿ ಸಂಭಾಷಿಸಿದ ಚೈತನ್ಯ "ನಾಳಿನ ಬೆಳಗಿನ ಫ್ಲೈಟ್‌ಗೆ ಬರ್ತೀನಿ" ಸದ್ದು ಅಡಗಿತು. ಆಕೆಯ ಕಣ್ಣಂಚು ತೇವವಾಗಿ ಕಂಬನಿ ಉಕ್ಕಿ ಹರಿಯಿತು. "ಇಂಥ ಮಗ ಎಷ್ಟು ಜನ ತಾಯಂದಿರಿಗೆ ಸಿಕ್ತಾನೆ?" ಮೊದಲ ಸಲ ಮೆಚ್ಚಿಗೆಯಾಡಿದರು ಅವಳ ಎದುರಿನಲ್ಲಿ.

ಅವಸರವಸರವಾಗಿ ಬಂದ ಸಿಸ್ಟರ್ "ನನ್ನ ಬ್ರದರ್‌ಗೆ ಆಕ್ಸಿಡೆಂಟಾಗಿದೆ. ಡಾಕ್ಟ್ರುಗೆ ಫೋನ್ ಮಾಡ್ತೀನಿ. ಆ ಸಿಸ್ಟರ್ ಬರೋವರ್ಗ್ಗೂ ಮ್ಯಾನೇಜ್ ಮಾಡಿಕೊಳ್ಳೋಕೆ, ಸಾಧ್ಯನಾ ಮೇಡಮ್" ಎದೆಯ ಮೇಲೆ ಕೈಯಿಟ್ಟುಕೊಂಡು ದುಃಖ, ಆತಂಕದಿಂದ ಕೇಳಿದಳು.

"ಇಲ್ಲೇನು ತೊಂದರೆ ಇಲ್ಲ, ಹೋಗ್ಬಾ" ಸುಬ್ಬಲಕ್ಷ್ಮಿ ನುಡಿದರು "ಒಳ್ಳೆದಾಗುತ್ತೆ, ತೀರಾ ಗಾಬ್ರಿಯಾಗ್ಬೇಡ."

ಸಿಸ್ಟರ್ ಸೀಮಾ ಕಣ್ಮಣಿಯ ಎರಡು ಕೈಗಳನ್ನು ಹಿಡಿದುಕೊಂಡಳು. "ಹೆಲ್ಪ್ ಮಿ, ಬಾಸ್‌ಗೆ ತುಂಬ ಕೋಪ ಬಂದ್ಬಿಡುತ್ತೆ. ಮೇಡಮ್‌ನ ಸರ್ರಾಗಿ ನೋಡ್ಕೋಬೇಕು. ಮೈ ಹಂಬಲ್ ರಿಕ್ವೆಸ್ಟ್" ಕೇಳಿಕೊಂಡಳು. "ಹೋಗಿ, ಅಮ್ಮನ್ನ ನಾನು ನೋಡ್ಕೋತೀನಿ" ಭರವಸೆ ಕೊಟ್ಟಳು.

ಮುವತ್ತೆಂಟರ ಸೀಮಾ ತನ್ನ ಯಂಗ್ ಕಸಿನ್‌ನೊಂದಿಗೆ ಹೋಗಿದ್ದು ಲಾಡ್ಜ್‌ಗೆ. ಈ ಸುಸಮಯಕ್ಕಾಗಿ ಎಷ್ಟೋ ದಿನದಿಂದ ಕಾದಿದ್ದ ಅವಳು ಕಾದ ಹೆಂಚಾಗಿದ್ದಳು.

"ಅಮ್ಮ, ಸ್ಲೀಪಿಂಗ್ ಡೋಸ್" ಮಾತ್ರೆಯನ್ನು ಒಯ್ದಾಗ ಆಕೆ ನಿರಾಕರಿಸಿದರು "ಮಾತ್ರೆ ತಗೊಂಡು... ತಗೊಂಡು ನಿದ್ದೆ ಮಾಡಿ ಸಾಕಾಗಿದೆ. ಇವತ್ತು ಬೇಡ. ಏನಾದ್ರೂ ಮಾತಾಡು, ಹಾಡು. ಕೇಳ್ತೀನಿ. ಸ್ಟಿರಿಯೋ, ಟಿ.ವಿ. ರೇಡಿಯೋ ಎಲ್ಲಾ ಬೋರಾಗಿದೆ" ಎಂದರು.

ತುಸು ಸಂಕೋಚದಿಂದಲೇ ಒಂದು ಛೇರ್ ಎಳೆದುಕೊಂಡು ಅವರ ಮಂಚದ ಸನ್ನಿಹದಲ್ಲಿ ಕೂತಳು. ಹಾಗೆಯೇ ನೋಡಿದರು ಕಣ್ಮಣಿಯನ್ನು. ಅವಳು ಬಂದು ಹತ್ತು ದಿನ ಕಳೆದುಹೋಗಿದ್ದರೂ, ಅವಳ ಬಗ್ಗೆ ಏನು ವಿಚಾರಿಸಿರಲಿಲ್ಲ. ಹಿಂದಿನ ಆರು ಜನಕ್ಕಿಂತ ಹೆಚ್ಚು ಡಿಫರೆಂಟಾಗಿ ಕಂಡಿದ್ದಳು. ಮಾಡುವ ಕೆಲಸದಲ್ಲಿ ಶ್ರದ್ಧೆ, ಪ್ರೀತಿ ಇತ್ತು. ಉಪಚರಿಸುವಾಗ ಮಗಳಿನಂತೆ ಕಂಡಿದ್ದಳು. ಬಹುಶಃ ಅವಳ ಸ್ವಂತ ವಿಷಯಗಳನ್ನು ಮಧುಸೂಧನರಾವು ಆಗಲೀ, ಚೈತನ್ಯ ಆಗಲೀ ಆಕೆಯ ಗಮನಕ್ಕೆ ತಂದಿರಲಿಲ್ಲ.

"ನಿಮ್ತಂದೆ ಎಲ್ಲಿದ್ದಾರೆ?" ಆಕೆ ಪ್ರಶ್ನಿಸಿದರು.

ಶುಭ್ರವಾಗಿದ್ದ ಅವಳ ಮುಖದಲ್ಲಿ ಮೋಡಗಳು ಮುಸುಗಿದವು. ಸ್ವಲ್ಪ ತಲೆ ತಗ್ಗಿತು "ಗೊತ್ತಿಲ್ಲ, ಅಮ್ಮ. ನಾನು ಅನಾಥಾಶ್ರಮದಲ್ಲಿ ಬೆಳೆದೋಳು. ನನ್ನ ತಾಯಿ ತಂದೆ ಯಾರೋ, ಎಲ್ಲಿದ್ದಾರೋ? ನಂಗೊಂದೂ ಗೊತ್ತಿಲ್ಲ. ಅಪಾಯಿಂಟ್‌ಮೆಂಟ್ ಸಿಕ್ಮೇಲೆ ಅನಾಥಾಶ್ರಮದಿಂದ ಹೊರ ಬಂದಿದ್ದು. ಡಿಗ್ರಿ ಜೊತೆ ಜರ್ನಲಿಸಂ ಮಾಡ್ಕೊಂಡಿದ್ದೆ. ಆಗಾಗ ಅದೂ ಇದೂ ಪೇಪರಿಗೆ ಬರೆಯುತ್ತಿದ್ದೆ. ಅದರಿಂದ್ಲೇ 'ಸಂಭ್ರಮ' ಪತ್ರಿಕಾಲಯದಲ್ಲಿ ಕೆಲ್ಸ ಸಿಕ್ಕಿತ್ತು" ಅತ್ಯಂತ ಸ್ಪಷ್ಟವಾಗಿ ಎಲ್ಲಾ ಹೇಳಿದಳು.

ಸುಬ್ಬಲಕ್ಷ್ಮಿ ಭಾರವಾದ ಉಸಿರು ದಬ್ಬಿದರು. ತೀರಾ ಸರಳವಾಗಿ ಕಾಣುತ್ತಿದ್ದ ಕಣ್ಮಣಿ ಇಷ್ಟವಾಗಿದ್ದು ಹಲವು ಕಾರಣಕ್ಕಾದರೇ, ಪ್ರತಿಯೊಂದು ಕೆಲಸದಲ್ಲು ಪ್ರಾಮಾಣಿಕತೆ ಇರುತ್ತಿತ್ತು.

"ಎಷ್ಟು ವಿಚಿತ್ರ! ತಾಯ್ತನ ಒಂದು ಸೌಭಾಗ್ಯ ಅನ್ನೋದೊಂದು ಬರೀ ಮಾತಲ್ಲ, ಸೃಷ್ಟಿಯ ಒಂದು ಅದ್ಭುತ ಅನುಭವ. ಅದೇ ತಾಯ್ತನ ಹೇಗೆ ಶಾಪವಾಗುತ್ತೆ, ಹೆಣ್ಣಿಗೆ ಸ್ವಲ್ಪ ಎಚ್ಚರ ತಪ್ಪಿದರೇ ಆ ಮಗು ಬೀದಿಗೆ. ಇದೊಂದು ಶಾಪ" ಆಕೆ ನೊಂದುಕೊಂಡರು.

ಆಮೇಲೆ ಮನ ಬಿಚ್ಚಿ ಮಾತಾಡಿದರು, ಕೂಡ.

"ನಮ್ಮ ಚೈತನ್ಯ ಹುಟ್ಟಿದ್ಮೇಲೆ ಹತ್ತು ಮಕ್ಕಳನ್ನು ಪಡೆಯಲು ನಾನು ಶಕ್ತಳಾಗಿದ್ದೆ. ಅಪ್ರಿಗೂ ಮಕ್ಳೂಂದ್ರೆ ಪ್ರಾಣ. ಆದರೇನು ಮತ್ತೆ ಸಂತಾನದ ಭಾಗ್ಯ ಇರ್ಲಿಲ್ಲ. ಇವನೊಬ್ನೆ!... ಅವ್ನು ಕೂಡ ಒಂಟೀ". ಅಂದ ಮೇಲೆ ಇದು ಅನಗತ್ಯ ಮಾತೆನಿಸಿತು ಆಕೆಗೆ. ತಟ್ಟನೆ "ಕಣ್ಮಣಿ, ಮ್ಯೂಜಿಕ್ ಅನ್ ಮಾಡಿ ನೀನು ಮಲಕ್ಕೋ ಹೋಗು" ಹೇಳಿದರು.

ಪಕ್ಕದ ರೂಮೇ ಇವಳದು. ರಾತ್ರಿ ಹತ್ತಕ್ಕೆ ಸಿಸ್ಟರ್ ಟೆಂಪರೇಚರ್, ಬಿ.ಪಿ. ಚೆಕ್ ಮಾಡಿ ಮಾತ್ರೆ ಕೊಡೋವರೆಗೂ ಅಲ್ಲಿಯೇ ಇದ್ದು, ನಂತರ ಸರಿಯಾಗಿ ಹೊದ್ದಿಸಿ ಏನುಬೇಕೆಂದು ವಿಚಾರಿಸಿದ ನಂತರ ತನ್ನ ರೂಮಿಗೆ ಹೋದರೂ ಮಧ್ಯೆ ಮಧ್ಯೆ ಒಂದೆರಡು ಸಲ ಬಂದು ಎಚ್ಚರವಾಗಿದ್ದರೇ ಮಾತಾಡಿಸಿ, ಏನಾದರೂ ಬೇಕೇನೋ ವಿಚಾರಿಸಿ, ನಂತರ ಕ್ಯಾಸೆಟ್ ಬದಲಾಯಿಸಿ ಅಲ್ಲೇ ಕೂಡುತ್ತಿದ್ದು, ಇಲ್ಲ, ಹೋಗಿ ಮಲಗುತ್ತಿದ್ದಳು. ಮಧ್ಯರಾತ್ರಿಯಲ್ಲಿ ಚೈತನ್ಯ ಎದ್ದು ಬಂದು ತಾಯಿಯನ್ನು ನೋಡಿಕೊಂಡು ನಿಶಬ್ದವಾಗಿ ಹೋಗುತ್ತಿದ್ದ. ಆ ನಿರ್ವ್ಯಾಜ ಪ್ರೀತಿಯ ಬಗ್ಗೆ ಯಾರಾದರೂ ಎಚ್ಚರ ತಪ್ಪಬೇಕು!

ವಾಚ್ ಕಡೆ ನೋಡಿದ ಕಣ್ಮಣಿ "ಅಮ್ಮ ಇನ್ನು ಸ್ವಲ್ಪ ಹೊತ್ತು ಇಲ್ಲೇ ಕೂತುಕೊಳ್ಲೊ?" ಅನುಮಾನಿಸುತ್ತಲೇ ಕೇಳಿದಳು. ಹಿಂದಿನ ಆರು ಜನರು ನಿದ್ದೆಗಾಗಿ ಚಡಪಡಿಸುವ ಪೈಕಿಯವರೇ "ನಿಂಗೇನು ದಣಿಯಾಗೋಲ್ವಾ? ಏನಾದ್ರೂ ಒಂದ್ಕೆಲ್ಸ ಹಚ್ಕೊಂಡ್ ಮಾಡ್ತಾ ಇರ್ತೀಯಾ. ಒಂದಿಷ್ಟು ರೆಸ್ಟ್ ಕೂಡ ಬೇಕು. ಹೋಗಿ ಮಲಕ್ಕೊ" ಹೇಳಿದರು. ತಲೆ ತಗ್ಗಿಸಿಕೊಂಡು ನಡೆದಳು.

ಸಿಸ್ಟರ್ ಜೊತೆ ಅವರನ್ನು ನೋಡಿಕೊಳ್ಳಲು ಇನ್ನೊಬ್ಬ ಕ್ಯಾಂಡಿಡೇಟ್‌ನ ಇಟ್ಟರೂ, ಮೊದಲ ಇಬ್ಬರೂ ಸದಾ ಬರೀ ಮನೆಯ ಸುದ್ದಿ ಒದರುತ್ತಿದ್ದಳೋ, ಇನ್ನೊಬ್ಬ ಹೆಣ್ಣು ಪಂಕಜ, ಅತಿ ಆಸೆಯವಳು ಕೋಣೆಯಲ್ಲಿನ ಒಂದೆರಡು ಸಣ್ಣ ಪುಟ್ಟ ಸಾಮಾನುಗಳು

ಕಾಣೆಯಾಗಿದೆಯೆಂದು ಸಿಸ್ಟರ್ ಮಧುಸೂಧನರಾವ್‌ವರೆಗೂ ವಿಷಯವನ್ನು ಒಯ್ದು, ಒಂದು ಹಂತದ ಗಲಾಟೆಯಾದಾಗ ಸುಬ್ಬಲಕ್ಷ್ಮಿ ಬೇಸರಗೊಂಡರು.

"ಮೊದ್ಲು, ಆಕೆ ಸಂಬ್ಳ ಚುಕ್ತಾ ಮಾಡಿ ಕಳ್ಸು. ಸಿಸ್ಟರ್ ಜೊತೆ ಮನೆಯ ಆಳುಕಾಳುಗಳು ಇದ್ದಾರೆ. ಅಂಥದ್ದರಲ್ಲಿ ಇನ್ನೊಬ್ಬರೇಕೆ ನನ್ನ ನೋಡಿಕೊಳ್ಳಲು!" ಮಗನ ಬಳಿ ಹೇಳಿದಾಗ, ಆಕೆ ಮತ್ತೆ ರೂಮಿನೊಳಕ್ಕೆ ಕಾಲಿಡಲು ಅವಕಾಶ ಮಾಡಿಕೊಡದಿದ್ದರೂ, ಮತ್ತೊಬ್ಬರನ್ನು ನೇಮಕ ಮಾಡಿದ. ಬರೀ ಇಪ್ಪತ್ತೆರಡರ ಯುವತಿ. ಶ್ರೀಮಂತಿಕೆಯ ಆಕಾಂಕ್ಷೆ ಯೊಂದಿದ್ದವಳು, ಕಾರಣವಿಲ್ಲದೇ ಚೈತನ್ಯನ ಮಾತಾಡಿಸುವುದು ರಾತ್ರಿ ವೇಳೆ ಯಾವುದೋ ಒಂದು ನೆಪವೊಡ್ಡಿ ರೂಮಿಗೆ ಹೋಗುವುದು. ಅವನ ಬಿಗಿದ ಹುಬ್ಬುಗಳನ್ನು ಕಂಡಾಗ "ಅಮ್ಮ ತುಂಬ ಬಳಲಿದಂತೆ ಕಂಡರು. ಅದ್ನ ನಿಮ್ಗೆ ತಿಳಿಸೋಣಾಂತ್ಬಂದೇ" ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು.

ಒಮ್ಮೆ ಸಿಟ್ಟಿನಿಂದ ಕುದಿದು "ಗೆಟ್ ಔಟ್ ಅಂಡ್ ಗೆಟ್ ಲಾಸ್ಟ್, ಈ ಮನೆಯೊಳಗೆಲ್ಲ ಓಡಾಡೋಕೆ ನಿಂಗೆ ಪರ್ಮಿಷನ್ ಇಲ್ಲ. ನಿನ್ನ ಕೆಲ್ಸ ಬರೀ ಅಮ್ಮನ್ನ ನೋಡಿಕೊಳ್ಳೋದು" ಕಣ್ಣು ಕೆಂಪಗೆ ಮಾಡಿದ್ದ.

ಅವಳ ಸ್ವಭಾವದಲ್ಲಿ ಅಂಥ ಬದಲಾವಣೆ ಕಾಣದಿದ್ದಾಗ ಪಿ.ಎ.ಗೆ ಕೆಲಸದಿಂದ ತೆಗೆದುಬಿಡಲು ಸೂಚಿಸಿದ್ದ. ಅವನಿಗೆ ತಲೆ ಕೆಟ್ಟಂತಾಗಿತ್ತು.

"ಇಷ್ಟು ಯಾಕೆ ತಲೆ ಕೆಡಿಸ್ಕೋತೀಯಾ! ಆರಾಮವಾಗಿ ಮದ್ವೆ ಯಾಗ್ಬಿಟ್ಟರೇ, ಸೊಸೆ ಮನೆಯಲ್ಲಿ ಇರ್ತಾಳೆ, ಪರ್ಮನೆಂಟಾಗಿ. ಅತ್ತೆ ಅನ್ನೋ ಪ್ರೀತಿಯಿಂದ ನೋಡ್ಕೋತಾಳೆ" ಈ ಮಾತನ್ನು ಎಷ್ಟೋ ಸಲ ಹೇಳಿದರು. ಇಂದು ಹೇಳಿದಾಗಲೂ ಅದೇ ಪ್ರತಿಕ್ರಿಯೆ "ನಂಗೆ ಅಂಥ ಗ್ಯಾರಂಟಿಯೇನಿಲ್ಲ. ಇವ್ರನ್ನು ನಿವಾರಿಸಿಕೊಂಡಷ್ಟು ಸುಲಭವಾಗಿ ಅವ್ಳನ್ನ ನಿವಾರಿಸಿ ಕೊಳ್ಳೋಕ್ಕಾಗೋಲ್ಲ. ಈಗ ಎಂಥ ಮದ್ವೆ! ನನ್ನ ಕ್ರಾಪ್‌ನಲ್ಲಿ ಈಗಾಗ್ಲೇ ಒಂದೊಂದು ಬಿಳಿ ಕೂದಲು ಕಾಣ್ತಾ ಇದೆ" ಉತ್ಪ್ರೇಕ್ಷೆ ಮಾಡುತ್ತಿದ್ದ. ಆಕೆಗೂ ಮಗ ಮದುವೆಯಾಗುವ ಕನಸಿರಲಿಲ್ಲ, ಅದರ ಬದಲು ಚಿಂತೆ ಇತ್ತು.

ತೀರಾ ಮುರುಳಿ ಕೃಷ್ಣ ಚೈತನ್ಯ ಹರೆಯದಲ್ಲಿ ಯಾರನ್ನೋ ಪ್ರೇಮಿಸಿದ ಮಾತು ಆಕೆಯ ಕಿವಿಗೆ ಬೀಳುವ ವೇಳೆಗೆ ತುಂಬ ತಡವಾಗಿತ್ತು. ಆ ಹೆಣ್ಣು ಬೇರೆಯ ಗಂಡಿನ ಸಿಂಧೂರಕ್ಕೆ ಬಾಗೇದಾರಿಯಾಗಿದ್ದು ತಿಳಿದು ತೀರಾ ಮರುಗಿದ್ದರು. ಆಗ ಚೈತನ್ಯ ತಂದೆ ಕೂಡ ಬದುಕಿದ್ದರು. ಒಬ್ಬನೇ ಮಗನ

ಆಸೆಗೆ ಎದುರಾಡುವ ವ್ಯಕ್ತಿ ಆಗಿರಲ್ಲಿಲ್ಲ. ಆದರೆ ಎಲ್ಲಿ ಎಡವಟ್ಟು ಆಗಿದ್ದು? ಅದು ಚೈತನ್ಯ ತಂದೆ ತೀರಿ ಹೋದ ಮೇಲೆ ತಿಳಿದ ವಿಷಯ. 'ನಿರಾಕರಣೆ ಆ ಹುಡುಗಿಯ ಕಡೆಯಿಂದಲೇ ಬಂದಿದ್ದು. ಪ್ರೇಮಕ್ಕಿಂತ ತಂದೆಯ ಮಾತಿಗೆ ಬದ್ಧಳಾಗಿ ಬೇರೆಯವರ ಕೈ ಹಿಡಿದಿದ್ದು'. ಆ ದಾಂಪತ್ಯ ಒಂದು ಮಗುವಿಗೆ ಮಂಗಳವಾಡಿ ಪಯಣಿಸಿದ್ದಳು ಬೇರೆ ಲೋಕಕ್ಕೆ. ಚೈತನ್ಯ ಆ ಷಾಕ್‌ಗೆ ಮನುಷ್ಯನಾಗಲು ಒಂದೆರಡು ವರ್ಷಗಳೇ ಹಿಡಿಸಿದವು. ಅಂದಿನಿಂದ ಮದುವೆಯ ಪ್ರಯತ್ನಗಳು ನಡೆಯುತ್ತಿದ್ದವು. ಯಾವುದೇ ಒತ್ತಡ, ಒತ್ತಾಯಕ್ಕೆ ಮಣಿಯದಷ್ಟು ಗಟ್ಟಿ ಆಗಿದ್ದ.

"ದೇವರು ನಂಗೆ ಸಂಗಾತಿಯನ್ನು ಸೃಷ್ಟಿಸಲಿಲ್ಲ. Marriage has made in heaven ಅಂತಾರೆ. ನಂಗೆ ಮದ್ವೆ ಮಾಡಬೇಕೆನ್ನುವಾಗ ದೇವರು ತೀರಾ ಬಿಜಿಯಾಗಿ ನನ್ನ ಒಂಟಿಯಾಗಿಯೇ ಭೂಲೋಕಕ್ಕೆ ಕಳ್ಸಿದ್ದಾನೆ. ಆ ವಿಷ್ಯದಲ್ಲಿ ಅಪನಂಬಿಕೆ ಬೇಡ" ಎಂದು ತಾಯಿಯ ಬಾಯನ್ನು ಮುಚ್ಚಿಸಿಬಿಡುತ್ತಿದ್ದ.

ಆ ನೋವು ಸದಾ ಆಕೆಯನ್ನು ಸುಡುತ್ತಿತ್ತು. ಜೊತೆಗೆ ಅನಾರೋಗ್ಯ! ಮೂರು ವರ್ಷವಾಯಿತು ಮಂಚ ಸೇರಿ, ಎರಡು ಸಲ ವಿದೇಶಕ್ಕೂ ಕರೆದುಕೊಂಡು ಹೋಗಿ ಬಂದ, ಚೈತನ್ಯ. ಯಾವುದೇ ರೀತಿಯಲ್ಲಿ ಗುಣ ಕಂಡಿರಲಿಲ್ಲ. ಎಲ್ಲಾ ರೀತಿಯ ವೈದ್ಯ ಪದ್ಧತಿಯಿಂದಲೂ ಚಿಕಿತ್ಸೆ ಮಾಡಿಸಿದ್ದ. ಯಾವುದೇ ಪರಿಣಾಮ ಕಂಡಿರಲಿಲ್ಲ. ಯಾವುದೇ ಲೋಪದೋಷಗಳಿಲ್ಲ. ಎಂದು ಬೇಕಾದರೂ ಚೇತರಿಸಿಕೊಳ್ಳಬಹುದು. ಎಲ್ಲರ ಅಭಿಪ್ರಾಯವು ಒಂದೇ ಆಗಿದ್ದರಿಂದ ಆಪ್ಟಿಮಿಸ್ಟ್! (ಆಶಾವಾದಿ) ಆಗಿದ್ದ. ಆದರೆ ದಿನದಿಂದ ದಿನ ಆಕೆ ನಂಬಿಕೆ ಕಳೆದುಕೊಂಡಿದ್ದರು. ಹುಟ್ಟಿದಾಗಿನಿಂದ ನಾನು ಇದೇ ಸ್ಥಿತಿಯಲ್ಲಿ ಇದ್ದೀನಿ. ಒಂದೂ ನಡದೇ ಇಲ್ಲ. ತನ್ನ ಕೈಗಳು ಉಪಯೋಗಕ್ಕೆ ಬಂದೇ ಇಲ್ಲ ಎನ್ನುವ ಭ್ರಮೆಯಲ್ಲಿ ಪೂರ್ತಿಯಾಗಿ ಮುಳುಗಿಹೋಗಿದ್ದರು.

ಯಾಕೋ, ಏನೋ ನಿದ್ದೆಯ ಮಾತ್ರೆಯ ಪರಿಣಾಮದಿಂದ ವಂಚಿತರಾಗಿ, ಎಚ್ಚರವಾಗಿಯೇ ಇದ್ದರು. ಬಾಗಿಲ ಸದ್ದಾದಾಗ ಅತ್ತ ದೃಷ್ಟಿ ಹರಿಸಿದರು, ಕೈಯಲ್ಲಿ ಒಂದು ಪುಸ್ತಕ ಹಿಡಿದ ಕಣ್ಮಣಿ ಬಂದಳು.

"ಅಮ್ಮ ನಿದ್ದೆ ಬರ್ಲಿಲ್ವಾ? ಕೊಟ್ಟ ನಿದ್ದೆ ಮಾತ್ರೆಯ ಡೊಸೇಜ್ ಸಾಕಾಗಲಿಲ್ವಾ?" ಸ್ವಲ್ಪ ಗಾಬರಿಯಿಂದಲೇ ಪ್ರಶ್ನಿಸಿದಳು.

ಆಕೆಯ ತುಟಿಗಳ ಮೇಲೆ ತೆಳುವಾದ ನಗೆ ತೇಲಿತು.

"ಹಾಗೇನಿಲ್ಲ, ನಿದ್ದೆ ಮಾಡ್ಬೇಕೂಂತ ಅನ್ನಿಸ್ಲಿಲ್ಲ, ಕನಿಷ್ಟ ಮನಸ್ಸು ಅಲ್ಪಸ್ವಲ್ಪವಾದ್ರೂ ಸಹಕರಿಸಿದರೇ ತಾನೇ, ನಿದ್ದೆ ಬರೋದು. ನಂಗೆ ಸರೀ, ನೀನ್ಯಾಕೆ ನಿದ್ದೆ ಮಾಡ್ಲಿಲ್ಲ" ಆಕ್ಷೇಪಿಸಿದರು.

"ಭಯ, ಇವತ್ತು ಸಿಸ್ಟರ್ ಕೂಡ ಇಲ್ಲ. ಅದ್ಕೆ, ಇಲ್ಲೆ ಕೂತೀರ್ತಿನಿ, ನೀವು ಪರ್ಮಿಷನ್ ಕೊಟ್ಟರೇ" ಸಂಕೋಚದಿಂದಲೇ ಕೇಳಿದಳು.

"ಯಾರು ಬೇಡಾಂದ್ರೂ! ನಿದ್ದೆಗೆಡೋದು ಮಾತ್ರ ಒಳ್ಳೆದಲ್ಲ. ಸಿಸ್ಟರ್ ರಾತ್ರಿ ಮಲಗಿದರೇ, ಬೆಳಿಗ್ಗೆ ನಾನು ಕೂಗಿದಾಗ್ಲೇ ಗಡಬಡಿಸ್ಕೊಂಡ್ ಏಳೋದು. ಹಿಂದೆ ಇಬ್ಬರು ಸಿಸ್ಟರನ್ನು ಅಪಾಯಿಂಟ್ ಮಾಡಿದ್ದ, ಡೇ ಡ್ಯೂಟಿಗೆ ಒಬ್ರು, ನೈಟ್ ಡ್ಯೂಟಿಗೇ ಒಬ್ಬರೂಂತ. ಅದು ಕಾಂಪ್ಲಿಕೇಟೆಡ್ ಆಯ್ತು. ನಾನು ಇಲ್ಲೇ ಇದ್ದು ನೋಡ್ಕೊತೀನಿ." ಗೋಗರೆದಳು. ಅದು ಆಯ್ತು, ಪ್ರೀತಿ, ವಿಶ್ವಾಸದಿಂದ ನೋಡಿಕೊಳ್ಳೋಕೇಂತ ಅಪಾಯಿಂಟ್ ಮಾಡ್ಕೊಂಡ್ ಬಂದ. ನೀನು ಆರನೇಯವಳು. ಅವನದು ವಿಚಿತ್ರ ಮನಸ್ಥಿತಿ. ಹಣಕ್ಕಾಗಿ ಮಕ್ಕಳನ್ನು ನೋಡಿಕೊಳ್ಳೋ ಆಯ, ಸ್ವಂತ ತಾಯಿ ಆಗೋಕೆ ಸಾಧ್ಯನಾ? ಅಂಥ ಅಪರೂಪದ ಕೇಸ್‌ಗಳು ಇರ್ಬಹ್ದು. ಇವನದು ಆ ಹುಡುಕಾಟ." ಹೇಳಿಕೊಂಡರು ಮಗನ ಸ್ವಭಾವದ ಬಗ್ಗೆ.

ಕಣ್ಮಣಿ ಮಾತಾಡಲಿಲ್ಲ. ಯಜಮಾನನ ಚಿಂತನೆಯ ಮಟ್ಟಕ್ಕೆ ಅನುಗುಣವಾಗಿ ತಾನು ಸುಬ್ಬಲಕ್ಷ್ಮಿಯನ್ನು ನೋಡಿಕೊಳ್ಳಲು ಸಾಧ್ಯವೇ? ಆ ಮಗನ ಪ್ರೀತಿಯ ಎತ್ತರಕ್ಕೆ ಯಾರು ಏಣಿ ಹಾಕಲು ಸಾಧ್ಯವಿಲ್ಲ. ಅಂಥದ್ದರಲ್ಲಿ ಏರುವುದೆಲ್ಲಿ?.

ಕ್ಯಾಸೆಟ್ ಬದಲಾಯಿಸಲು ಮೇಲೆದ್ದಾಗ "ಬೇಡ ಸಾಕು, ನೀನು ಹಾಡು ಕೇಳ್ತೀನಿ" ಎಂದರು.

ಅವಳಿಗೆ ಗಾಬರಿಯೋ ಗಾಬರಿ. ಅನಾಥಾಶ್ರಮಕ್ಕೆ ಒಬ್ಬ ಮೇಷ್ಟರು ಬಂದು ಆಸಕ್ತಿ ಇರುವವರಿಗೆ ಮಾತ್ರ ಸಂಗೀತ ಪಾಠ ಹೇಳಿ ಕೊಡುತ್ತಿದ್ದರು. ಅದರಲ್ಲಿ ಇವಳೊಬ್ಬ ಸ್ಟೂಡೆಂಟ್ ಆಗಬಹುದಿತ್ತು. ಸಿಡುಬು ಮುಖದ ಅಂಜಲಿ ಮೇಡಮ್ ಏನಾದರೂ ಹೇಳಿ ಕರೆದೊಯ್ಯುತ್ತಿದ್ದರು. ಆದರೆ ಎಲ್ಲರಿಗೂ ಒಟ್ಟಾಗಿ ಕಲಿಸುತ್ತಿದ್ದ ಜನಪದ ಹಾಡುಗಳು, ಕೆಲವು ಆಚರಣೆಗಳಲ್ಲಿ ಹೇಳಲು ಬೇಕಾದ ದೇಶಭಕ್ತಿ ಗೀತೆಗಳು ಮತ್ತು ಭಕ್ತಿ ಗೀತೆಗಳನ್ನು ಮಾತ್ರ ಕಲಿತಿದ್ದಳು.

"ಅಮ್ಮ ನಾನೇನು ಸಂಗೀತ ಕಲಿತಿಲ್ಲ. ನಿಮ್ಗೆ ತುಂಬ... ತುಂಬ.. ಸಂಗೀತ

ಜ್ಞಾನ ಇದೆ" ಸಂಕೋಚದಿಂದ ಹೇಳಿದಳು. ಆಕೆಯ ಮುಖದಲ್ಲಿ ವಿಷಣತೆ ತೇಲಿತು.

"ಸಂಗೀತ ಜ್ಞಾನ ಈ ವರ್ಷದಲ್ಲಿ ಹೆಚ್ಚಿದೆ. ನನ್ನ ಕೈಕಾಲುಗಳು ಮಾತ್ರ ಕೆಲ್ಸ ಮಾಡೋಲ್ಲ. ಮಿದುಳು ಚೆನ್ನಾಗಿದೆ. ಮನಸ್ಸು ಸ್ವಸ್ಥವಾಗಿದ. ಅವೆರಡನ್ನು ತೂಗ್ಸಿಕೊಂಡು ನೆಮ್ದಿಯಾಗಿ ಸಮಯ ಕಳೀಬೇಕು. ಶಾಸ್ತ್ರೀಯ ಸಂಗೀತದ ಜಾಡು ಹಿಡಿದೆ. ನುಡಿಸೋ ವಾದ್ಯಗಳು, ಹಾಡುಗಾರಿಕೆಯ ಜಾಡು ಹಿಡಿದು ಪ್ರತಿಯೊಂದರ ರಾಗ, ತಾಳ, ಕೃತಿಗಾರರ ಬಗ್ಗೆ ತಿಳಿಯೋ ಪ್ರಯತ್ನ ಮಾಡ್ದೇ. ಕೇಳಿದನ್ನು ಮನನ ಮಾಡ್ದೇ. ಶುದ್ಧ ಸಂಗೀತವನ್ನು ಆಸ್ವಾದಿಸಿದೆ. ಹರಿದಾಸರು, ಪುರಂದರದಾಸರು, ಕನಕದಾಸರು, ತ್ಯಾಗರಾಜರ ಜೀವನ ಚರಿತ್ರೆಗಳನ್ನು ತರಿಸಿಕೊಂಡು ಓದಿಸಿ ತಿಳಿಯುತ್ತಿದ್ದೆ. ಯಾರಿಂದ ಗೊತ್ತಾ ? ಎಷ್ಟೋ ಸಲ ನಮ್ಮ ಚೈತನ್ಯ ಓದಿ ಹೇಳಿದ್ದಾನೆ. ನಿನ್ನ ಪೋಸ್ಟ್‌ಗೆ ಅಪಾಯಿಂಟ್ ಮಾಡಿಕೊಂಡಿದ್ದ ಹಿಂದಿನ ಹರಿಣಿ ಸ್ವಲ್ಪ ಇಂಟರೆಸ್ಟಾಗಿ ಓದ್ದೋಳು. ಕಾಮೆಂಟ್ಸ್ ಮಾಡೋಳು, ಅವ್ವಿಗೂ, ಸಿಸ್ಟರ್‌ಗೂ ಎಣ್ಣೆ ಸೀಗೆಕಾಯಿ. ಒಳಗೊಳಗೆ ಶೀತಲ ಯುದ್ಧ ಒಮ್ಮೆ ಬಾಲ್ಕನಿಯಲ್ಲಿ ಇಬ್ಬರು ಜುಟ್ಟುಗಳನ್ನು ಹಿಡಿದು ಕಾದಾಡಿ ಅದು ಚೈತನ್ಯನವರೆಗೂ ಮುಟ್ಟಿ ಅವ್ಳ ಕೆಲ್ಸ ಹೋಯ್ತು" ಹೇಳಿಕೊಂಡರು. ಆ ಸಮಯದಲ್ಲಿ ಆಕೆಯ ಮನಸ್ಥಿತಿ ಸರಳವಾಗಿತ್ತು. ಅಂತರ, ದೊಡ್ಡಸ್ಥಿಕೆ ಇರಲಿಲ್ಲ.

ತುಟಿ ಎರಡು ಮಾಡಲಿಲ್ಲ.

ಸುಬ್ಬಲಕ್ಷ್ಮಿ ತಮಗೆ ಶುದ್ಧ ಸಂಗೀತದ ಬಗ್ಗೆ ಇರುವ ಒಲವನ್ನು ವ್ಯಕ್ತಪಡಿಸಿದ್ದರಿಂದ, ಇನ್ನಷ್ಟು ಭಯ. ಸಂಗೀತದ ಬಗ್ಗೆ ಅವಳ ಜ್ಞಾನ ತೀರಾ ಅಲ್ಪ. ಅನಾಥಾಲಯಗಳಲ್ಲಿ ನಡೆಯುವ ಕಾರ್ಯಕ್ರಮಗಳ ಸಮಯದಲ್ಲಿ ಪ್ರಾರ್ಥನೆ ಮಾಡುವುದರ ಜೊತೆಗೆ ಚಿಕ್ಕವಳಿದ್ದಾಗ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಳು.

"ಹಾಡು, ಯಾಕೆ ಭಯ? ಹಾಡುವ ವ್ಯಕ್ತಿ ಎದುರಿಗಿದ್ದಾಗ ಸಿಗುವ ಆನಂದ, ಅನುಭವ ಬೇರೆ. ಮಂಚ ಹತ್ತಿ ಮಲಗದಿದ್ರೆ ಈ ಅಲ್ಪ ಸಂಗೀತ ಜ್ಞಾನವನ್ನು ಸಂಪಾದಿಸುವುದ ಕೂಡ ಸಾಧ್ಯವಿರ್ಲಿಲ್ಲ". ಕ್ಷಣ ಆವೇಗಕ್ಕೆ ಒಳಗಾದರು.

ಹತ್ತು ನಿಮಿಷದಷ್ಟು ದೀರ್ಘವಾದ ಮೌನ. ಉಸಿರಾಟದ ಜೊತೆ

ಎ.ಸಿ. ಸದ್ದು ಮಾತ್ರವಿತ್ತು.

"ಹಾಡು ಕಣ್ಮಣಿ...." ಎಂದರು ಸ್ವಲ್ಪ ಚೇತರಿಸಿಕೊಂಡು.

'ಬೃಂದಾವನ ಸ್ಥಿರ ರಾಘವೇಂದ್ರ ಗುರುವೇ....' ಎಂದು ಭಕ್ತಿಭಾವದಿಂದ ಹಾಡಿದಾಗ ತನ್ಮಯರಾದರು. ಎದುರಿಗೆ ಗುರು ರಾಘವೇಂದ್ರರು ನಿಂತು ಆಶೀರ್ವದಿಸಿದಂತಾಯಿತು. ಸುಬ್ಬಲಕ್ಷ್ಮಿಯ ಕಣ್ಣುಗಳಲ್ಲಿ ಆನಂದಾಶ್ರುಗಳು. ದೊಡ್ಡ ದೊಡ್ಡ ವಿದುಷಿಯರ ಕ್ಯಾಸೆಟ್‌ಗಳನ್ನ ಕೇಳಿ ಆಸ್ವಾದಿಸಿದವರು.

ಈ ಭಕ್ತಿಗೀತೆ ಅವರ ಹೃದಯದಲ್ಲಿ ಒಂದಿಷ್ಟು ಜಾಗ ಕಾದಿರಿಸಿದ್ದು ಕಣ್ಮಣಿಯ ಪುಣ್ಯ. ಒಂದು ಹೆಜ್ಜೆ ಸುಬ್ಬಲಕ್ಷ್ಮಿಯತ್ತ ಸರಿದಂತಾಯಿತು. ಬಹಳವಾಗಿ ಮೆಚ್ಚಿಕೊಂಡರು, ಅವಳ ಸಿರಿ ಕಂಠವನ್ನು.

"ಒಳ್ಳೆ ಕಂಠ ಇದೆ. ಆಗಾಗ ಹಾಡ್ತ ಇರು. ಬೇರೆಯವ್ರಿಗೋಸ್ಕರ ಅಂದುಕೊಳ್ಳದಿದ್ರೂ.. ನಿಂಗೋಸ್ಕರ ಅಂದ್ಕೋ, ಹಾಡುವುದು ಅನಿವಾರ್ಯ ಕರ್ಮ ನನಗೆ... ಅಂತ ಒಂದ್ಕಡೆ ಹೇಳಿದ್ದಾರೆ." ಎಂದರು.

ಆ ಸಂದರ್ಭದ ನಂತರ ಬಹಳ ಅಕ್ಕರೆಯಿಂದ ಕಾಣತೊಡಗಿದರು. ಸುಬ್ಬಲಕ್ಷ್ಮಿ. ಇಲ್ಲಿಗೆ ಬಂದು ಹದಿನೈದು ದಿನವಾಗಿತ್ತು. ದಿನಕ್ಕೊಮ್ಮೆ ವಾಸಂತಿ ಫೋನಾಯಿಸುತ್ತಿದ್ದಳು. ಬೆಳಗಿನ ಹನ್ನೊಂದರ ನಂತರ. ಅದು ಇವಳ ಸೂಚನೆಯೂ, ಹೌದು. ಎಷ್ಟೇ ಒತ್ತಡವಿದ್ದರೂ ಒಂಭತ್ತುವರೆಯ ನಂತರವೆ ಚೈತನ್ಯ ಮನೆ ಬಿಡುತ್ತಿದ್ದುದು. ಕೆಲವೊಮ್ಮೆ ತಾಯಿಯ ಜೊತೆ ಅರ್ಧಗಂಟೆ ಮಾತಾಡುತ್ತ ಕುಳಿತಿದ್ದುದ್ದುಂಟು. ಚುರುಕಾಗಿ ಬಂಗ್ಲೆಯಲ್ಲಿ ಓಡಾಡುತ್ತಿದ್ದ ಆಕೆ ಮತ್ತೆಂದು ಹಾಗೆ ಓಡಾಡುವುದು ಎನ್ನುವ ಧಾವಂತ. ಆ ದಿನಕ್ಕಾಗಿ ಕೆಲವು ಲಕ್ಷಗಳನ್ನು ಕಳೆದುಕೊಳ್ಳಲು ಸಿದ್ಧ. ಆದ್ದರಿಂದಲೇ ಹನ್ನೊಂದರ ನಂತರ ಫೋನ್ ಮಾಡಲು ತಿಳಿಸಿದ್ದು. ಒಮ್ಮೆ ಬಂದು ಹೋಗಿದ್ದಳು. ಆ ದಿನವಂತು ಕಂಠವೇರಿಸಿ 'ಅರ್ಧ ದಿನ ರಜ ಕೇಳ್ಕೊಂಡ್ಬಾ. ಇಲ್ಲ ನಾನೇ ಬಂದ್ಬಿಡ್ತೀನಿ. ಇಪ್ಪತ್ನಾಲ್ಕು ಗಂಟೆಗಳ ಕೆಲ್ಸದ ಜೊತೆ ರಜ ಇಲ್ಲಾಂದ್ರೆ, ಹೇಗೆ?' ದಬಾಯಿಸಿದ್ದಳು. ವಾಸಂತಿ ಬಂದು ಜಗಳವಾಡಿ, ದಬಾಯಿಸುವವಳೇ, ನಂತರದ ಪರಿಣಾಮ ಅವಳೆದೆ ನಡುಗತೊಡಗಿತು. ಇಲ್ಲಿಂದ ಯಾವುದೇ ಕಾರಣಕ್ಕೆ ಕಣ್ಮಣಿ ಹೊರ ಹೋಗಲು ಸಿದ್ಧವಿಲ್ಲ. ಬರೀ ಅವಳ ನೆನಪನ್ನು ಆಕ್ರಮಿಸಿದ್ದ ಚೈತನ್ಯ, ಈಗ ಅವಳ ಸಮಸ್ತವೂ ಆಗಿದ್ದ.

ಶನಿವಾರ ಸ್ವಲ್ಪ ಮೋಡ ಮುಸುಗಿದ ವಾತಾವರಣವಿತ್ತು. ಮೂರರ

ಸುಮಾರಿಗೆ ಮನೆಗೆ ಬಂದ ಚೈತನ್ಯ ತಾಯಿಯನ್ನು ಮಾತಾಡಿಸಿದವನು, ಊಟ ಕೂಡ ಮಾಡದೇ ಮುಂದಿನ ಆಫೀಸ್‌ನಲ್ಲಿ ಹೋಗಿ ಕೂತ ಫೈಲುಗಳನ್ನು ನೋಡುತ್ತ, ಮೊದಲೇ ಸುಬ್ಬಲಕ್ಷ್ಮಿಯವರ ಹತ್ತಿರ ಅರ್ಧ ದಿನದ ರಜದ ಪ್ರಸ್ತಾಪ ಮಾಡಿ ಪರ್ಮಿಷನ್ ಪಡೆದುಕೊಂಡಿದ್ದಳು. ಅಳುಕುತ್ತಲೇ ಆಫೀಸ್ ಕೋಣೆಯ ಬಳಿಯ ಸ್ವಿಚ್ ಒತ್ತಿದಳು.

"ಯೆಸ್, ಕಮಿನ್.." ಎಂದ ತಲೆಯೆತ್ತದೇ.

ಉಸಿರು ಕೂಡ ಬಿಗಿ ಹಿಡಿದು ಒಳಗೆ ಅಡಿಯಿಟ್ಟವಳು ನಿಂತಳು. ತಟ್ಟನೇ ತಲೆಯೆತ್ತಿದ. ನೇರವಾದ ನೋಟ. ಪುಲಕಿತಳಾದಳು. ಶತ ಶತಮಾನಗಳಿಂದ ಈ ನೋಟದ ಪರಿಚಯವಿದೆಯೆನಿಸಿತು. ನಿಧಾನವಾಗಿ ಅವನ ಹುಬ್ಬೇರಿತು.

"ಎಕ್ಸ್‌ಕ್ಯೂಜ್ ಮಿ ಸರ್, ನಾಳೆ ಭಾನುವಾರ ಅರ್ಧ ದಿನ ರಜ ಬೇಕು" ಎಂದಳು ಪ್ರಯತ್ನಪೂರ್ವಕ. ಹತ್ತು ಸೆಕೆಂಡ್‌ನ ಮೌನದ ನಂತರ "ಓಕೇ, ಯು ಕೆನ್ ಗೋ" ಎಂದು ಫೈಲ್‌ನಲ್ಲಿ ಮಗ್ನವಾದಾಗ ಹೊರಗೆ ಬಂದು ಭಾರವಾದ ಉಸಿರು ದಬ್ಬಿದಳು.

ರಾತ್ರಿ ಸಿಸ್ಟರ್ ಚೆಕ್ ಮಾಡಿದ ಟೆಂಪರೇಚರ್‌ಗೂ ನಂತರ ಚೈತನ್ಯ ಬಂದು ಚೆಕ್ ಮಾಡಿದ ಟೆಂಪರೇಚರ್‌ನ ನಡುವೆ ವ್ಯತ್ಯಾಸವಿತ್ತು.

"ಯಾವಾಗ ಟೆಂಪರೇಚರ್ ನೋಡಿದ್ರಿ?" ಕೇಳಿದ.

ಸಿಸ್ಟರ್ ಮುಖದಲ್ಲಿ ಬೆವರು ಹನಿಗಳು ಕಾಣಿಸಿಕೊಂಡವು. ವಾಚ್ ನೋಡಿ "ಎಂಟು ಹತ್ತಕ್ಕೆ ಸರ್" ಎಂದಳು. ಅಂದರೆ ಹತ್ತು ನಿಮಿಷಕ್ಕೆ ಮೊದಲು. ಈಗ ನಾರ್ಮಲ್ ಟೆಂಪರೇಚರ್‌ಗಿಂತ ಸ್ವಲ್ಪ ಜಾಸ್ತಿ ಇತ್ತು. ಸ್ವಲ್ಪ ಸೀರಿಯಸ್ಸಾಗಿ ದೀರ್ಘವಾಗಿ ಅವಳತ್ತ ನೋಡಿದ.

"ಸಾರಿ, ಸರ್! ಯಾಕೆ ಹೀಗಾಯ್ತೂಂತ ಗೊತ್ತಾಗ್ಲಿಲ್ಲ" ಹೇಳಿದಳು. ಅದಕ್ಕೆ ಐದು ನಿಮಿಷಕ್ಕೆ ಮುನ್ನ ಅವಳ ಬಾಯ್ ಫ್ರೆಂಡ್ ಫೋನ್ ಮಾಡಿ ಅವಳನ್ನು ವಿಚಲಿತಳನ್ನಾಗಿಸಿದ್ದ. ಬರೀ ನೋಡಿದ ಶಾಸ್ತ್ರ ಮಾಡಿದಳು.

"ಆಫೀಸ್‌ಗೆ ಬಂದು ನೋಡಿ" ಹೊರಗೆ ಹೋದ.

ನರ್ಸಿಂಗ್‌ಹೋಂನಲ್ಲಿ ಅವಳಿಗೆ ಸಿಗುತ್ತಿದ್ದ ಸಂಬಳದ ಎರಡರಷ್ಟು ಹಣ ಸಿಗುತ್ತಿತ್ತು. ಅತ್ಯುತ್ತಮವಾದ ಊಟ, ತಿಂಡಿ ಇರಲು ಸೌಲಭ್ಯದ ಜೊತೆ ಈ ಸಲ ಸುಬ್ಬಲಕ್ಷ್ಮಿಯ ಹುಟ್ಟಿದ ಹಬ್ಬದ ದಿನ ಅತ್ಯಂತ ಬೆಲೆ ಬಾಳುವ ಕಾಂಜೀವರಂ ಸೀರೆಯನ್ನು ಉಡುಗೊರೆಯಾಗಿ ನೀಡಿದ್ದ.

ಸಿಸ್ಟರ್ ಆಫೀಸ್ ರೂಮಿಗೆ ಹೋದಾಗ, ಕೂಡುವಂತೆ ಸನ್ನೆ ಮಾಡಿದ. "ಏನೀ ಪ್ರಾಬ್ಲಮ್?" ಎಂದ. ಆಕೆ ಉಗುಳು ನುಂಗಿದಳು. "ಒಂದಿಷ್ಟು ತಲೆ ನೋವಿತ್ತು. ಇನ್ನೆಂದು ಅಂಥ ತಪ್ಪು ಆಗೋಲ್ಲ. ಎಕ್ಸ್‌ಕ್ಯೂಜ್ ಮೀ ಸರ್" ಬೆವರುತ್ತ ಹೇಳಿದಾಗ ಆಕ್ಸೆಪ್ಟ್ ಮಾಡಿಕೊಂಡು ಹೋಗುವಂತೆ ಕಣ್ಣಲ್ಲಿಯೇ ಹೇಳಿದ.

ಅವಳ ಬಾಸ್ ಡಾ|| ನರಸಿಂಹಲು "ನಿಂಗೊಂದು ಅಪಾರ್ಚ್ಯುನಿಟಿ. ಖಂಡಿತ ಎಡವಟ್ಟು ಮಾಡ್ಕೋಬೇಡ. ಹೇಗೂ ಮನೆ ತಗೋಬೇಕನ್ನೋ ಕನಸು ನಿಂಗಿದೆ. ಚೈತನ್ಯ ಮನಸ್ಸು ಮಾಡಿದ್ರೆ ನಿಂಗೆ ಸಹಾಯ ಮಾಡ್ತಾನೆ. ಇದ್ನ ಮನಸ್ಸಿನಲ್ಲಿ ಇಟ್ಕೊಂಡ್, ಅಲ್ಲಿ ಕೆಲ್ಸ ಮಾಡು" ಬುದ್ಧಿ ಹೇಳಿದರು. ಅದಕ್ಕಾಗಿಯೇ ನಡೆ ನುಡಿಗಳಲ್ಲಿ ಸಾಕಷ್ಟು ವಿನಯ ನಟಿಸುತ್ತಿದ್ದಳು. ಆಕೆ ಒಬ್ಬ ಸಿನ್ಸಿಯರೇ, ಆ ಬಗ್ಗೆ ಎರಡು ಮಾತಿರಲಿಲ್ಲ. ಆದರೆ ಆಕೆಯು ಬಾಯ್ ಫ್ರೆಂಡ್ ಆಗಾಗ ಭೂತದಂತೆ ವಕ್ಕರಿಸಿ, ವಿಚಲಿತರನ್ನಾಗಿಸುತ್ತಿದ್ದ.

ಆ ಕೋಪನ ತೀರಿಸಿಕೊಂಡಿದ್ದು ಕಣ್ಮಣಿಯ ಮೇಲೆ. "ಒಂದಿಷ್ಟು ಫಸ್ಟ್ ಏಡ್, ನರ್ಸಿಂಗ್ ಓದ್ಕೋಬೇಕಿತ್ತು. ಇಲ್ದಿದ್ರೆ ಅನಾಹುತಗಳಾಗಿ ಬಿಡುತ್ತೆ".

ಯಾವ ವಿಷಯಕ್ಕೆ ಈ ಮಾತುಗಳೆಂದು ಕಣ್ಮಣಿಗೆ ತಿಳಿಯಲಿಲ್ಲ. ಆದರೆ ಸಿಸ್ಟರ್‌ಗೆ ಬೇಸರವಾಗಿದೆಯೆಂದು ಮಾತ್ರ ಅರ್ಥವಾಯಿತು. ಬಹಳ ಎಚ್ಚರದಿಂದ ಡಾಕ್ಟರ್ ಬಂದಾಗ, ಸಿಸ್ಟರ್‌ನ ಶುಶ್ರೂಷೆಯುನ್ನು ಗಮನಿಸುತ್ತಿದ್ದಳು. ಬಿ.ಪಿ. ಟೆಂಪರೇಚರ್ ಕೂಡ ಸ್ವತಃ ನೋಡಬಲ್ಲವಳಾಗಿದ್ದಳು.

ಮೆಲುವಾಗಿ ಹೇಳಿದರೂ ಸುಬ್ಬಲಕ್ಷ್ಮಿಯ ಕಿವಿಗೆ ಬಿತ್ತೇ ಬಿತ್ತು. ಸನ್ನೆಯಿಂದ ಕರೆದು "ಮೈಂಡ್ ಯುವರ್ ಬಿಜಿನೆಸ್. ಅವ್ಳನ್ನ ನಿನ್ನ ಸಹಾಯಕಳಾಗಿ ಅಪಾಯಿಂಟ್ ಮಾಡಿಲ್ಲ. ಅವ್ಳ ಡ್ಯೂಟಿನೇ ಬೇರೆ. ನಿನ್ನ ವರ್ಕ್ ಬೇರೆ" ಸ್ವಲ್ಪ ಸೀರಿಯಸ್ಸಾಗಿಯೇ ಹೇಳಿದರು.

ಹಿಂದೆ ಇದ್ದವಳೊಂದಿಗೆ ಇವಳದು ಸದಾ ಸಮರ, ಕುಟುಕಿ ಕುಟುಕಿ ಮಾತಾಡುತ್ತಿದ್ದನ್ನು ಆಕೆ ಸೂಕ್ಷ್ಮವಾಗಿ ಗಮನಿಸಿದ್ದರೂ ಮಗನವರೆಗೂ ಒಯ್ದಿರಲಿಲ್ಲ. ಹೊರಗಿನ ವಹಿವಾಟಿನ ನೂರು ಸಮಸ್ಯೆಗಳನ್ನು ಸುಲಭವಾಗಿ ಫೇಸ್ ಮಾಡುವವನು, ಈ ಒಂದು ವಿಷಯಕ್ಕೆ ಎಕ್ಸೈಟ್ ಆಗುತ್ತಾನೆಂದು ಆಕೆಗೆ ಗೊತ್ತು.

ಮುಖ ದಪ್ಪ ಮಾಡುವುದು ಇಲ್ಲಿ ಸಾಧ್ಯವಿರಲಿಲ್ಲವಾದ್ದರಿಂದ, ಪೆಚ್ಚಾಗಿ ಹೊರಗೆ ಹೋದಳು. ಒಂಬತ್ತರಿಂದ ಹತ್ತರವರೆಗೂ ಸಿಸ್ಟರ್ ಹೊರಗಿನ ಬಾಲ್ಕನಿಯಲ್ಲಿ ನಿಂತು ಫ್ರೆಶ್ಶಾದ ಗಾಳಿ ಕುಡಿಯುತ್ತಾರೆಂದು ಎಲ್ಲರಿಗೂ ಗೊತ್ತು. ಬಂಗ್ಲೆಯ ಆಳು, ಅಡಿಗೆಯವನಿಗೆ ಅದು ನಗೆಯಾಡುವ ವಿಷಯವಾಗಿತ್ತು. ಅದನೇನು ಬಾಡಿಯ ರೂಪದಲ್ಲಿ ಯಾರು ಸುಬ್ಬಲಕ್ಷ್ಮಿಯವರವರೆಗೆ ಒಯ್ದಿರಲಿಲ್ಲ - ಪಂಥರಿ ಊರಿನಲ್ಲಿ ಇಲ್ಲದ್ದು ಮುಖ್ಯ ಕಾರಣವಾಗಿತ್ತು..

ಬೆಳಗ್ಗೆ ಸುಬ್ಬಲಕ್ಷ್ಮಿಯವರ ಎಕ್ಸ್‌ಸೈಜ್, ಸ್ನಾನ, ಬ್ರೇಕ್‌ಫಾಸ್ಟ್ ಆದನಂತರವೇ ಮನೆ ಬಿಟ್ಟಿದ್ದು. "ಅಮ್ಮ ನಾಲ್ಕರ ವೇಳೆಗೆ ಬಂದ್ಬಿಡ್ತೀನಿ" ಆತುರಾತುರವಾಗಿಯೇ ಹೊರಟವಳು ಬಸ್ಸು, ನಡಿಗೆಗಾಗಿ ಸಮಯ ವ್ಯಯ ಮಾಡದೇ ಆಟೋ ಹತ್ತಿದಳು.

ಇನ್ನು ಬೆಳಗಿನ ಉಪಹಾರ ಮುಗಿಸದ ವಾಸಂತಿ ಇವಳಿಗಾಗಿ ಎದುರು ನೋಡುತ್ತಿದ್ದಳು, ಸಾವಿರ ಕಣ್ಣುಗಳಿಂದ. ಅವಳ ರೂಮಿಗೆ ಇನ್ನು ಯಾರೂ ಭರ್ತಿಯಾಗಿರಲಿಲ್ಲ. ಅಂಥ ರೂಮರ್ ಕೂಡ ಬೇಸರವೇ. ಮೂವತ್ತು ದಿನಗಳ ಒಳಗೆ ಕಣ್ಮಣಿ ಹಿಂದಿರುಗಿ ಬರುತ್ತಾಳೆ. ಅಕಸ್ಮಾತ್ ಕಚ್ಚಿಕೊಂಡರೇ ತಾನಾದರೂ ಬಲವಂತದಿಂದ ಎಳೆದುಕೊಂಡು ಬಿಡಬೇಕು. 'ಬೇರೆ ಯಾವುದಾದರೂ ಕೆಲಸ ಸಿಕ್ಕೇ ಸಿಗುತ್ತೆ' ಗೋಪಾಲನಿಗೆ ಇದೆಲ್ಲ ಪತ್ರದಲ್ಲಿ ಬರೆದಿದ್ದಳು.

ಇವಳನ್ನು ನೋಡಿದ ಕೂಡಲೇ ಅಪ್ಪಿಕೊಂಡೇಬಿಟ್ಟಳು. "ಎಷ್ಟೊಂದು ಸಣ್ಣವಾಗಿ ಬಿಟ್ಟಿದ್ದೀಯಾ! ಆ ಕೆಲ್ಸದ ಸಹವಾಸ ಬೇಡ. ನಿಂಗೆ ಬೇರೆ ಕೆಲ್ಸ ನೋಡಿದ್ದೀನಿ. ಒಳ್ಳೆ ಸ್ಯಾಲರಿನೇ" ಬಡ ಬಡ ಹೇಳಿದಳು.

ಅಲ್ಲಿ ಇಲ್ಲಿ ಇದ್ದು ಆ ವ್ಯಕ್ತಿಯ ಬಗ್ಗೆ ಚಡಪಡಿಸುವುದಕ್ಕಿಂತ ಅಲ್ಲೇ ಇದ್ದುಬಿಡುವುದು ಕಣ್ಮಣಿಗೆ ಸೂಕ್ತವಾಗಿ ಕಂಡಿತು.

"ಆ ವಿಷ್ಯ ಬಿಡು, ನೀನು ಹೇಗಿದ್ದೀಯಾ? ಗೋಪಾಲ ಪತ್ರ ಬರೆದಿದ್ರಾ?" ವಿಚಾರಿಸಿದಳು. ರೆಟ್ಟೆ ಹಿಡಿದು ಮಂಚದ ಮೇಲೆ ಕೂಡಿಸಿ "ನಾನು ಇಲ್ಲಿಗೆ ತರ್ತೀನಿ ತಿಂಡೀನಾ, ತಿಂತಾ... ಮಾತಾಡೋಣ" ಎರಡು ತಟ್ಟೆಗಳನ್ನು ಹಿಡಿದುಕೊಂಡು ಹೋದಳು.

ಬಿಸಿ ಬಿಸಿ ಇಡ್ಲಿ, ವಡೆ, ಸಾಂಬಾರ್ ಜೊತೆ ಕೇಸರಿಬಾತ್ ಕೂಡ ಬಂತು. ಹಬೆಯಾಡುವ ತಿಂಡಿ. ಇದಕ್ಕಿಂತ ಉತ್ತಮವಾದ ಊಟ,

ತಿಂಡಿ ಅವಳಿಗೆ ಸಿಗುತಿತ್ತು. ಊಟದ ನಂತರ ಹಣ್ಣು, ಹಂಪಲು ತಿನ್ನಲು ಸೂಚನೆ ಇತ್ತು. ಇಂಥ ತೊಂದರೆ ಇದೇ ಅಲ್ಲೀಂತ ಹೇಳುವಂತಿರಲಿಲ್ಲ.

"ನಾನು ಮಾತಾಡಿದ್ದೇ ಆಯ್ತು. ನೀನು ಏನಾದ್ರೂ ಹೇಳು" ಸಾಂಬಾರ್‌ನಲ್ಲಿ ವಡೆಯನ್ನು ಮುಳುಗಿಸುತ್ತ ಕೇಳಿದಾಗ, ತಣ್ಣಗೆ ನೋಡಿದಳು ಕಣ್ಮಣಿ "ಅಲ್ಲೇನು ತೊಂದರೇನು ಇಲ್ಲ. ಅಂಥ ಹೆಚ್ಚಿಗೆ ಕೆಲ್ಸವಿಲ್ಲ. ಓಡಾಟವಿಲ್ಲ, ಹೆಚ್ಚು ಮಾತು ಕೂಡ ಬೇಕಿಲ್ಲ."

ಗೆಳತಿಯ ಮಾತುಗಳನ್ನು ಕೇಳಿದ ಕೂಡಲೇ ಸಿಡಿದು ಬಿದ್ದಳು ವಾಸಂತಿ "ಅದ್ಕೆ ಅಲ್ಲೇ ಇದ್ಬಿಡ್ಬೇಕೂಂತ ಮಾಡ್ಕೊಂಡಿದ್ದೀಯ, ಸ್ವತಂತ್ರ ಇರೋಲ್ಲ, ಕಣೇ. ಹೇಗೂ ನಿಂಗೆ ಕೆಲವು ದಿನಗಳ ಅನುಭವ ಸಿಕ್ಕಿತಲ್ಲ, ಗುಡ್ ಬೈಯೊಡೆದು ಹೊರ್ಗಡೆ ಬಾ" ತಟ್ಟೆಯೆತ್ತಿಕೊಂಡು ಹೋದಳು ತೊಳೆದು ಬರಲು.

ಪೂರ್ತಿ ತಿನ್ನಲು ಕಣ್ಮಣಿಯಿಂದ ಸಾಧ್ಯವಿಲ್ಲ. ಆದರೂ ಕಷ್ಟಪಟ್ಟು ನೀರು ಕುಡಿದು ಕುಡಿದು ನುಂಗಿದಳು. ಅಷ್ಟರಲ್ಲಿ ಬಂದ ವಾಸಂತಿ ಇವಳ ಕೈಯನ್ನು ತಟ್ಟೆಯಲ್ಲಿಯೇ ತೊಳೆಸಿ ತಟ್ಟೆ ಒಯ್ದಾಗ ಅಳುವಂತಾಯಿತು ಅವಳಿಗೆ. ಇಂಥ ಪ್ರೀತಿ ಅವಳಿಗೆ ವಾಸಂತಿಯಿಂದಲೇ ಸಿಕ್ಕಿದ್ದು.

ಕಾಫಿ ಲೋಟಗಳನ್ನು ಹಿಡಿದು ಬಂದು ಅವಳಿಗೊಂದು ಕೊಟ್ಟು ತಾನೊಂದು ತಗೊಂಡು "ಈಗ ಹೇಳು" ಎದುರಿಗೆ ಕೂತಳು. ಲೋಟಗಳು ಖಾಲಿಯಾಗುವವರೆಗೂ ಮೌನ ಹೊರಳಾಡಿತು ಅವರಿಬ್ಬರ ನಡುವೆ.

"ನಿಂಗೆ ಒಂದೆರಡು ಸಲ ಒಬ್ಬ ವ್ಯಕ್ತಿಯ ಬಗ್ಗೆ ಹೇಳಿದ್ದೆ, ನೆನಪಿರಬೇಕಲ್ಲ. ಅವ್ರೆ ಎಸ್. ಮುರುಳಿ ಕೃಷ್ಣ ಚೈತನ್ಯ. ಅವರಲ್ಲೇ ನಾನು ಇರೋದು" ಎಂದ ಕೂಡಲೇ ವಾಸಂತಿ ಬೆಚ್ಚಿ ಬಿದ್ದಳು. ಎಷ್ಟೋ ಸಲ ಮತ್ತೆ ಆ ವ್ಯಕ್ತಿ ಕಣ್ಮಣಿಯ ಕಣ್ಣುಗಳಿಗೆ ಬೀಳದೇ ಇರಲೀಂತ ಅಂದುಕೊಂಡಿದ್ದುಂಟು. ಆದರೆ, ಆ ವ್ಯಕ್ತಿಯ ಭ್ರಮೆಯಲ್ಲಿದ್ದವಳು ವಾಸ್ತವವಾಗಿ ಅಲ್ಲಿಯೇ ಸೇರಿ ಹೋದಳು.

"ಛೇ, ಎಂಥ ಕೆಲ್ಸವಾಯ್ತು! ನಾನು ಆ ವ್ಯಕ್ತಿ ಎಲ್ಲೋ ಭೂತ, ಪ್ರೇತ ಅಂದ್ಕೊಂಡಿದ್ದೆ, ಸಾಕ್ಷಾತ್ ಮನುಷ್ಯನೇ. ನೀನು ಅಲ್ಲೇ ಹೋಗಿ ಸೇರಿರೋದರ ಹಿನ್ನೆಲೆ ಏನಾದರೂ ಇದ್ಯಾ? ಗಂಭೀರವಾಗಿ ಯೋಚ್ಸಬೇಕಾದ ವಿಷ್ಯ" ಚಿಂತಿತಳಾದಳು.

ಕಣ್ಮಣಿಗೆ ಏನು ಹೇಳಬೇಕೋ, ಗೊತ್ತಾಗಲಿಲ್ಲ. ಎಷ್ಟೇ ತಲೆ ಕೆಡಿಸಿಕೊಂಡರೂ ಆ ವ್ಯಕ್ತಿ ತನಗೇ ಎಲ್ಲಿ ಪರಿಚಯ? ಇಷ್ಟು ಆಳವಾದ ನೆನಪಿರಬೇಕಾದರೇ, ಆ ಪರಿಚಯದ ವಿಸ್ತಾರ ದೊಡ್ಡದೇ ಇರಬಹುದು. ಆದರೆ ಎಲ್ಲಿ, ಹೇಗೆ? ಅದನ್ನು ಮಾತ್ರ ಹೇಳಲಾರಳು.

"ನಂಗೂ ಅರ್ಥವಾಗಲಿಲ್ಲ. ವ್ಯಕ್ತಿಯ ಆಕಾರ, ರೂಪ ಮಾತ್ರವಲ್ಲ, ಕಂಠ, ಮಾತಾಡುವ ರೀತಿ, ನೋಡುವ ನೋಟ, ನಡಿಗೆ ಪ್ರತಿಯೊಂದು ನನಗೆ ಪರಿಚಿತವೇ. ಎಸ್. ಮುರುಳಿ ಕೃಷ್ಣ ಚೈತನ್ಯ ಎಂದೂ ಅನಾಥಾಶ್ರಮಕ್ಕೆ ಬಂದಿಲ್ಲ. ದೆಹಲಿಯಿಂದ ಅವ್ರ ವಾಸ್ತವ್ಯವನ್ನು ಇಲ್ಲಿಗೆ ಬದಲಾಯಿಸಿದ್ದು ಅವ್ರ ತಂದೆಯ ಸಾವಿನ ನಂತರವೇನಂತೆ. ಅಲ್ಲಿ ಹೋಗಿ ಉಳಿದ ಮೇಲೆ ಒಂದು ರೀತಿಯ ತೃಪ್ತಿ. ಆಂದೋಲನ ಕಡಿಮೆಯಾಗಿದೆ. ಇದನ್ನೆಲ್ಲ ನಿನ್ಹತ್ರ ಮಾತ್ರ ಹೇಳಿಕೊಳ್ಳಬಲ್ಲೆ" ವಿಸ್ತಾರವಾಗಿ ಬಿಡಿಸಿಟ್ಟಳು.

ವಾಸಂತಿ ಚಲನೆ ಇಲ್ಲದ ಬೊಂಬೆಯಾದಳು. ವಿಚಿತ್ರವೆನಿಸಿತು. ಮುಂದೇನು? ಈ ಭ್ರಮೆ ಬರೀ ಗುಪ್ತಗಾಮಿನಿ! ಯಾರೊಂದಿಗೂ ಹೇಳಿಕೊಳ್ಳಲಾರಳು. ಕೇಳಿದವರು ನಗಬೇಕಷ್ಟೆ, ಯಾರಾದರೂ ಮಾನಸಿಕ ತಜ್ಞರನ್ನು ಭೇಟಿಯಾದರೇ.

"ಒಮ್ಮೆ ಸೈಕಾಲಜಿಸ್ಟ್ ಹತ್ರ ಹೋಗ್ಬಂದ್ರೆ" ತನ್ನ ಅಭಿಪ್ರಾಯ ವ್ಯಕ್ತಪಡಿಸಿದಳು. ತಲೆಯಾಡಿಸಿದಳು ಕಣ್ಮಣಿ "ಮಾನಸಿಕವಾಗಿ ನಾನು ಆಲ್‌ರೈಟ್" ಎಂದ ಕೂಡಲೇ ಎಗರಿ ಬಿದ್ದಳು.

"ಇದ್ನ ಮತ್ತೆ ಏನೂಂತಾರೆ? ಎಂದೂ ನೋಡದ ವ್ಯಕ್ತಿನ ಒಮ್ಮೆ ನೋಡಿದ ಕೂಡಲೇ ತೀರಾ ಪರಿಚಿತನೆನಿಸುವುದು. ಇದೆಲ್ಲ ಏನು? ಯಾರಾದ್ರೂ ಕೇಳಿದ್ರೆ.. ಹುಚ್ಚು ಅಂದ್ಕೋತಾರಷ್ಟೆ. ಈಗ ಅಲ್ಲೇ ಬೇರೆ ಸೇರ್ಕೊಂಡಿದ್ದೀಯಾ! ಪೂರ್ತಿ ಹುಚ್ಚಿಯಾಗುವ ಮುನ್ನ ಬಿಟ್ಟು ಬಾ. ಕ್ರಮೇಣ ಮರುಹೋಗ್ತೀಯಾ, ನಮ್ಮಗಳ ಸ್ಥಿತಿ ತೀರಾ ಅಯೋಮಯ. ಇಂಥ ಭ್ರಾಂತಿಗಳ್ನ ಇಟ್ಕೊಂಡ್ ಬದುಕೋಕೆ ಆಗುತ್ತ? ಎಸ್.ಎಮ್.ಕೆ.ಸಿ.ಯಂಥ ದೊಡ್ಡ ಸಂಸ್ಥೆ ಮಾಲೀಕ ಕೋಟಿಗಟ್ಟಲೇ ಸರ್ಕಾರದ ತೆರಿಗೆ ಕೊಡುವ ವ್ಯಕ್ತಿ. ನೂರಾರು ಜನಕ್ಕೆ ಅನ್ನ ಕೊಡುವ ವ್ಯಕ್ತಿ. ಅಂಥ ವ್ಯಕ್ತಿಗಳ ಜೊತೆ ಹುಡ್ಗಾಟ ಬೇಡ. ಅವ್ರುಗಳಿಗೆ ದಯೆ, ದಾಕ್ಷಿಣ್ಯ ಇರೋಲ್ಲ. ನಿನ್ನ ಭ್ರಮೆಯ ವಿಚಾರವೇನಾದ್ರು ತಿಳಿದರೇ... ಆ ಮನುಷ್ಯ ಮುಲಾಜಿಲ್ಲದೆ ಹುಚ್ಚರ ಆಸ್ಪತ್ರೆಗೆ ತಳ್ಳಿಬಿಡ್ತಾನೆ. ಬಿ ಕೇರ್

ಫುಲ್. ಸಂಬಳ ಕೊಡದಿದ್ರೂ ಪರ್ವಾಗಿಲ್ಲ, ನಾಳೆ ನಿನ್ನ ಸೂಟ್‌ಕೇಸ್ ಎತ್ಕೊಂಡು ಬಂದ್ಬಿಡು" ಆವೇಶದಿಂದ ಹೇಳಿದಳು. ತಕ್ಷಣಕ್ಕೆ ಪ್ರತಿಕ್ರಯಿಸಲಿಲ್ಲ ಕಣ್ಮಣಿ.

"ಏನಾದ್ರೂ... ಹೇಳು" ಗೆಳತಿಯ ತೋಳಿಡಿದು ಅಲುಗಾಡಿಸಿದಳು.

"ನಂಗೆ ಹಿರಿಯರ ನೆರಳಲ್ಲಿ, ಮನೆಯ ವಾತಾವರಣದಲ್ಲಿ ಬೆಳೆಯುವ ಅದೃಷ್ಟವಿರಲಿಲ್ಲ. ಈಗ ಅದು ನಂಗೆ ಸಿಕ್ಕಿದೆ. ಸುಬ್ಬಲಕ್ಷ್ಮಿಯವರ ಸನ್ನಿಪ, ಮಾತಿನಿಂದ ನನ್ನ ಹೃದಯಕ್ಕೆ ಎಷ್ಟೋ ಆನಂದ. ನಾನು ಇಷ್ಟು ವರ್ಷ ಕಳೆದುಕೊಂಡಿದ್ದೆಲ್ಲ ಒಟ್ಟಾಗಿ ಸಿಕ್ಕಂತಾಗಿದೆ. ಇದ್ನ ಹೇಗೆ ಕಳ್ಕೊಳ್ಲಿ? ಅವರಾಗಿ ನನ್ನ ಕೆಲ್ಸದಿಂದ ವಜಾ ಮಾಡುವವರೆಗೂ ನಾನಾಗಿ ಬಿಡೋಲ್ಲ. ಪ್ಲೀಸ್ ಅರ್ಥ ಮಾಡ್ಕೋ ವಾಸಂತಿ", ಅವ್ಳ ಎರಡು ಕೈಗಳನ್ನ ಹಿಡಿದುಕೊಂಡಳು.

ಮೊದಲು ಕೋಪಗೊಂಡರೂ ಗೋಪಾಲನ ತಾಯಿ, ಅಲ್ಲಿನ ಮನೆ ಎಲ್ಲಾ ನೆನಪಾದ ಕೂಡಲೇ ಶಾಂತವಾದಳು.

"ಆಯ್ತು, ವಾರಕ್ಕೊಮ್ಮೆ ಬರ್ಬೇಕು. ನಾನು ಬರೋಕು ಅವಕಾಶ ಇರ್ಬೇಕು. ಇವೆರಡು ನನ್ನ ಷರತ್ತುಗಳು".

ತಕ್ಷಣ ಒಪ್ಪಿಕೊಳ್ಳುವುದು ಕಷ್ಟವೆನಿಸಿತು ಕಣ್ಮಣಿಗೆ "ಸದ್ಯಕ್ಕೆ ಅಮ್ಮನ್ನ ಕೇಳ್ಕೊಂಡ್ ಖಂಡಿತ ಆಗಾಗ್ಬರ್ತೀನಿ, ನೀನು ಬಾ. ಆದರೆ ಈ ಮೂವತ್ತು ದಿನ ತುಂಬಿ ಚೈತನ್ಯ ಒಪ್ಪುವವರೆಗೂ, ದಯವಿಟ್ಟು ಈ ಕರಾರು ಬೇಡ."

ಬಹಳ ಕಷ್ಟಪಟ್ಟು ಗೆಳತಿಯನ್ನು ಒಪ್ಪಿಸಿದಳು. ಅವಳಿಗಾಗಿ ತಂದ ಸೀರೆಯ ಪ್ಯಾಕೆಟ್‌ನ ಕಣ್ಮಣಿಗೆ ಕೊಟ್ಟು "ಇದು ನನ್ನ ಪ್ರಸೆಂಟೇಷನ್. ಯಾಕೋ, ಏನೋ ನಿನ್ನ ಬಿಟ್ಟಿರೋದು ಕಷ್ಟ. ರಕ್ತ ಸಂಬಂಧವಲ್ಲ, ಚಿಕ್ಕಂದಿನ ಒಡನಾಟವಲ್ಲ. ಈ ಗೆಳೆತನ ಜನ್ಮ ಜನ್ಮಾಂತರದ್ದು ಅನ್ನಿಸ್ಬಿಟ್ಟಿದೆ" ಬಿಕ್ಕಿ ಬಿಕ್ಕಿ ಅತ್ತಳು.

ಹೊರಗಡೆ ಒಂದೆರಡು ಗಂಟೆಗಳು ಸುತ್ತಾಡಿ ಹೋಟಲ್‌ನಲ್ಲಿ ಊಟ ಮಾಡಿ ದೀಪಾಂಕುರ ಬಳಿ ಬಂದಾಗ ವಾಸಂತಿ ಕಣ್ತುಂಬಿದರೇ ಗದ್ಗದಳಾದವಳು ಕಣ್ಮಣಿ. ಸ್ವರ ಹೊರಡಲಿಲ್ಲ. ಇಡೀ ಶರೀರವೇ ಭಾರವೆನಿಸಿತು. ಬಹುಶಃ ಅವ್ಯಕ್ತವಾದ, ಅಲೌಕಿಕವಾದ ಸೆಳೆತವಿಲ್ಲದಿದ್ದರೇ ವಾಸಂತಿಯೊಂದಿಗೆ ಹಿಂದಿರುಗಿಬಿಡುತ್ತಿದ್ದಳು.

"ಫೋನ್ ಮಾಡ್ತೀನಿ. ಮರೀಬೇಡ, ಕಣ್ಮಣಿ" ಕಣ್ಣೊರೆಸಿಕೊಂಡು

ನಿಲ್ಲದೇ ಹೋಗಿಬಿಟ್ಟಳು. ಅವಳು ಹೋದತ್ತಲೇ ನೋಡಿದಳು. ಅನಾಥಾಶ್ರಮದಲ್ಲಿ ಅಷ್ಟು ವರ್ಷ ಬೆಳೆದರೂ ಯಾವ ಬಂಧವು ಅವಳನ್ನು ಕಟ್ಟಿ ಹಾಕಿರಲಿಲ್ಲ. ಆದರೆ ವಾಸಂತಿಯ ಸ್ನೇಹ ಎಲ್ಲವನ್ನು ತುಂಬಿಕೊಡುವ ಮಟ್ಟ ತಲುಪಿತ್ತು.

"ಮೇಮ್ ಸಾಬ್..." ವಾಚ್‌ಮನ್ ಎಚ್ಚರಿಸಿದ.

ಚೇತರಿಸಿಕೊಂಡು ಗೇಟು ತೆರೆದಾಗ ಒಳಗಡಿ ಇಟ್ಟಳು. ಕಾರಿನ ಬಳಿ ನಿಂತ ಚೈತನ್ಯ ಯಾರೊಂದಿಗೋ ಮಾತಾಡುತ್ತಿದ್ದ ಪಕ್ಕಕ್ಕೆ ತಿರುಗಿ ನಿಂತಿದ್ದರಿಂದ ಬಲ ಪಾರ್ಶ್ವದ ನೋಟ ತುಂಬ ಇಷ್ಟವೆನಿಸಿತು. ಹಾಗೆಯೇ ನೋಡುತ್ತ ನಿಲ್ಲಬೇಕೆನಿಸಿತು. ಯಾರನ್ನು ನೋಡಿದರೂ ಮೂಡದ ಮಧುರ ಭಾವನೆಗಳು ಅವಳಲ್ಲಿ ಚೆಲ್ಲಾಡುತ್ತಿದ್ದವು. ಯಾಕೆ? ಒಮ್ಮೊಮ್ಮೆ ಅವಳಲ್ಲಿ ಭಯ ಆವರಿಸುತ್ತಿತ್ತು.

"ಮೇಮ್ ಸಾಬ್..." ಅದೇ ವಾಚ್‌ಮನ್ ಮತ್ತೆ ಎಚ್ಚರಿಸಬೇಕಾಯಿತು. ಬೆಚ್ಚಿಬಿದ್ದು ಚೇತರಿಸಿಕೊಂಡಳು "ಸಾಬ್..." ಎಂದವಳೇ ದಾರಿಯ ತುದಿಯಂಚಿನಿಂದ ತಲೆ ತಗ್ಗಿಸಿಕೊಂಡು ನಡೆಯುತ್ತಿದ್ದವಳ ಎದೆಯ ಬಡಿತ ನೂರು ಪಟ್ಟು ಹೆಚ್ಚಿತು. ಆವೇಗ, ಕಂಪನ, ಯಾವುದೋ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದಂತಾಯಿತು.

ತಟ್ಟನೇ ತಿರುಗಿದ ಚೈತನ್ಯಗೆ ವಿಶ್ ಮಾಡಿ ತಲೆ ತಗ್ಗಿಸಿಕೊಂಡು ಒಳಗೆ ನಡೆದುಬಿಟ್ಟಳು. ಇಂದು ಸುಬ್ಬಲಕ್ಷ್ಮಿ ಊಟ ಮಾಡಿರಲಿಲ್ಲ. ಕಾರಣ 'ಹಸಿವಿಲ್ಲ'. ಅದು ಇನ್ನು ಚೈತನ್ಯವರೆಗೂ ತಲುಪಿರಲಿಲ್ಲ. ಯಾವುದೋ ಮೀಟಿಂಗ್‌ಗೆ ಹೋದವನು ಹಿಂದಿರುಗೋ ವೇಳೆಗೆ ಮುಂಬಯಿನ ಓಬ್ಬ ಬಿಜಿನೆಸ್ ಮ್ಯಾನ್ ಅವನಿಗಾಗಿ ಕಾಯುತ್ತಿದ್ದರಿಂದ, ಮುಂದಿನ ಆಫೀಸ್‌ನಲ್ಲಿ ಮಾತುಕತೆ ಮುಗಿಸಿ ಕಳುಹಿಸಿಕೊಡಲು ಹೊರಟಿದ್ದ. ಸ್ವಲ್ಪ ವ್ಯವಹಾರಕ್ಕಿಂತ ಪರಿಚಯ ಜಾಸ್ತಿಯಾಗಿದ್ದುದರಿಂದ ಬಿ.ಕೆ. ಜೈನ್ ಬಗ್ಗೆ ಇಂಟರೆಸ್ಟ್ ತೋರಿಸಬೇಕಿತ್ತು.

"ಅಮ್ಮ ಊಟ ತರ್ಲಾ?" ವಿಚಾರಿಸಿದಳು ತಕ್ಷಣ.

"ಯಾಕೋ ಹಸಿವಿಲ್ಲ, ಬೇಡಾಂತ ಅನ್ನಿಸಿದೆ. ಒಂದ್ಲೋಟ ನೀರು ಕುಡ್ಸಿ ಬಿಡು" ಅಷ್ಟು ಹೇಳಿದರು ಸುಬ್ಬಲಕ್ಷ್ಮಿ.

ಸಿಸ್ಟರ್ ಕಡೆ ನೋಡಿದಳು. 'ವೀಕ್' ನಲ್ಲಿನ ಒಂದು ಸೌಂದರ್ಯಕ್ಕೆ ಸಂಬಂಧಪಟ್ಟ ಆರ್ಟಿಕಲ್‌ನ ಬಹಳ ಇಂಟರೆಸ್ಟಾಗಿ ಓದುತ್ತಿದ್ದರು. ನೋಟ

ತಿರುಗಿಸಿ 'ಹೋಗ್ಲಿ ಬಿಡು, ನಾವೇನು ಮಾಡೋಕ್ಕಾಗುತ್ತೆ' ಎನ್ನುವ ಭಾವ ಮುಖದಲ್ಲಿ ಪ್ರಕಟಿಸಿದ್ದು ಏನು ಸೋಜಿಗವಲ್ಲ. ಹೊಟ್ಟೆ ಪಾಡಿಗಾಗಿ ನರ್ಸ್ ಕೋರ್ಸ್ ಮುಗಿಸಿದ್ದರೇ ವಿನಃ ಸರ್ವಿಸ್ ಮೈಂಡ್ ನಿಂದೇನು ಅಲ್ಲ. ಸದಾ ಪೇಷಂಟ್‌ಗಳ ಜೊತೆ ಹೆಣಗಿರುವ ಆಕೆಗೂ, ಕಣ್ಮಣಿಗೂ ವ್ಯತ್ಯಾಸವಿತ್ತು.

ಗೋಡೆಯಂಚಿಗೆ ನಿಂತಿದ್ದ ಪಂಢರಿ ನಾಲ್ಕು ಹೆಜ್ಜೆ ಮುಂದಕ್ಕೆ ಬಂದ. "ಇಡೀ ದಿನ ಏನು ತಗೊಂಡಿಲ್ಲ. ಒಂದಷ್ಟು ದಿನ ಊರಿಗೆ ಹೋಗಿದ್ದೆ ಅನ್ನೋದು ಬಿಟ್ಟರೇ, ದೀಪಾಂಕುರದಲ್ಲೇ ಇದ್ದೋನು. ಅಮ್ಮಾವ್ರು ಏನು ತಿನ್ದೇ ಯಜಮಾನ್ರು ಒಂದ್ಲೋಟ ನೀರು ಕುಡ್ಯೋಲ್ಲ ! ಅವ್ರ ಊಟವಿಲ್ದೇ ನಾವುಗಳು ಊಟ ಮಾಡೋಕೆ ಪ್ರಾಣಿಗಳಾ ? ಅದಕ್ಕಾದ್ರೂ ನಿಯತ್ತು ಅನ್ನೋದು ಇರುತ್ತೆ ; ಮನುಷ್ಯ ಜನ್ಮಕ್ಕೆ ಇರೋಲ್ಲ" ಎಂದು ಕಣ್ಣಂಚು ತೇವ ಮಾಡಿಕೊಂಡ. ಇಷ್ಟು ಮಾತುಗಳನ್ನು ಸುಬ್ಬಲಕ್ಷ್ಮಿಯವರ ಮುಂದೆ ಆಡಲು ಅಧಿಕಾರ ಪಡೆದುಕೊಂಡಿದ್ದು ತನ್ನ ಸ್ವಾಮಿ ಭಕ್ತಿ-ನಿಯತ್ತಿನಿಂದ ಮಾತ್ರ.

ಸ್ವಲ್ಪ ಇರುಸು ಮುರುಸಿನಿಂದಲೆ ಸಿಸ್ಟರ್ ಮೇಲೆದ್ದರು. ಅಚ್ಚುಕಟ್ಟಾದ ಎರಡು ಹೊತ್ತಿನ ಊಟದ ಜೊತೆ, ಬೆಳಗಿನ ಬ್ರೇಕ್‌ಫಾಸ್ಟ್, ಸಂಜೆಯ ಸಣ್ಣ ಉಪಹಾರ, ನಡು ನಡುವೆ ಹಾರ್ಲಿಕ್ಸ್, ಬೂಸ್ಟ್, ಹಣ್ಣಿನ ರಸ ಇಂಥದ್ದು ನಡೆಯುತಿತ್ತು.

ಸ್ವಲ್ಪ ಮುಜುಗರವಾಯಿತು ಕಣ್ಮಣಿಗೂ. ಒಮ್ಮೆ ಪಂಢರಿಯತ್ತ ನೋಟ ಹರಿಸಿ ಸಿಸ್ಟರ್ ಹೊರಗೆ ಹೋದಾಗ ಸುಬ್ಬಲಕ್ಷ್ಮಿ ಬೇಸರಗೊಂಡರು.

"ಏನಿದೆಲ್ಲ.... ಪಂಢರಿ ! ಸ್ವಲ್ಪ ನಿನ್ನ ನಾಲಿಗೆಯ ಹರಿತಾ ಕಮ್ಮಿ ಮಾಡ್ತೀಯಾ ! ನಾನೇನೋ ಪೇಷಂಟ್. ಮಲಗಿದ ಕಡೆ ಇರೋದ್ರಿಂದ ಹೆಚ್ಚು ಊಟ, ತಿಂಡಿ ಬೇಕಾಗೋಲ್ಲ. ಅವ್ರಿಗೆ ಹೊರ ಕೆಲ್ಸ ಇರುತ್ತೆ. ನಿಂಗೆ ಬೈಯ್ದರೇ ಮೂರು ದಿನ ಊಟ ಬಿಡ್ತೀಯಾ" ಗದರಿಸಿಕೊಂಡರು.

ಅವನೇನು ಅಂದಿದಕ್ಕೆ ಪಶ್ಚಾತಾಪ ಪಡಲಿಲ್ಲ.

"ನಂಗೆ ಬೇಜಾರೇ ಆಯಮ್ಮನ ಬಗ್ಗೆ. ಈಗ ಕೆಲ್ಸ ಅಂಟಿಸಿಕೊಳ್ಳೋದೇ ಇಲ್ಲ. ಕಣ್ಮಣಿಯಮ್ಮ ಬಂದ್ಮೇಲೆ ಎಲ್ಲಾ ಆಯಮ್ಮನಿಗೆ ಬಿಟ್ಟು ಮೇಲುಸ್ತುವಾರಿ ನೋಡ್ತಾಳೆ. ಉಂಡ ಅನ್ನಕ್ಕೂ, ತಗೊಂಡ ಸಂಬಳಕ್ಕೂ ನಿಷ್ಠೆ ಬೇಡ್ವಾ?" ಇದು ಅವನ ವಾದ.

"ಹೇಳಿಕೊಳ್ಳಿ" ಹೊರಗೆ ಹೋದ ಪಂಢರಿ ಕಣ್ತುಂಬಿ.

"ಛೆ, ಇವನ್ನು ಏನು ಮಾಡ್ಬೇಕೋ ಗೊತ್ತಾಗೋಲ್ಲ. ಎಲ್ಲಾ ಸರಿ, ಬಾಯಿ ಮಾತ್ರ ಜಾಸ್ತಿ. ಈ ನಿಶಬ್ದದಲ್ಲಿ ಅವ್ನ ಮಾತುಗಳು ಕೂಡ ಇಲ್ಲದಿದ್ರೆ... ಬಂಗ್ಲೇ ನಿರ್ಜೀವವಾಗಿಬಿಡುತ್ತೆ' ನಿಟ್ಟುಸಿರು ಬಿಟ್ಟರು ಆಕೆ.

ಸದಾ ಮಲಗಿಯೇ ಇರುವ ಆಕೆಗೆ ಕನಸುಗಳು ಇಲ್ಲ! ಇದ್ದ ಒಂದೇ ಒಂದು ಕನಸು ನೆರವೇರದು! ಮಗನ ಒಂಟಿತನದ ಬಗ್ಗೆ ಆಕೆಗೆ ಹೆದರಿಕೆ, ಅವನ ಭವಿಷ್ಯದ ಬಗ್ಗೆ ಚಿಂತೆ. ಮುಂದೇನು? ಹೀಗೆಯೇ ಯಾಂತ್ರಿಕವಾಗಿ ಸಾಗಿ ಹೋಗಬಹುದು. ಆ ಬಗ್ಗೆ ಚೈತನ್ಯ ತಲೆ ಕೆಡಿಸಿಕೊಂಡಂಗೆ ಕಾಣಲಿಲ್ಲ. ಆಕೆಗೆ ತನ್ನ ದೀರ್ಘ ಆಯಸ್ಸಿನ ಬಗ್ಗೆ ಮೂಡಿದ ಭಯ ಹೊಗೆಯಂತೆ ವ್ಯಾಪಿಸಿ ಕಾಡುತ್ತಿತ್ತು. ಇಂಥ ಬದುಕು ಯಾರ ಪಾಲಿಗಾದರೂ ದುರ್ಭರವೆ. ಆಕೆಗಂತು ಜಿಗುಪ್ಸೆಯೇ. ಈ ಕ್ಷಣ ತಾನು ಯಾಕೆ ಸಾಯಬಾರದು? ಅದಕ್ಕಾಗಿ ಡಾಕ್ಟರ್, ಸಿಸ್ಟರ್ ನೆರವನ್ನು ಪಡೆಯಲು ಮನ ಪ್ರೇರೇಪಿಸುತ್ತಿದ್ದರೂ, ಮಗನ ಪ್ರೀತಿ ಅದಕ್ಕೆ ಅಡ್ಡಿಯಾಗಿತ್ತು. ಇಂಥ ದ್ವಂದ್ವದ ನರಳಿಕೆಯಲ್ಲಿ ದಿನ ದೂಡುತ್ತಿದ್ದುದು, ಪ್ರಯಾಸವಾಗಿಯೆ.

ಮತ್ತೆ ಒಳಗೆ ಬಂದ ಸಿಸ್ಟರ್ ನಗು ಮುಖವನ್ನು ಧರಿಸಿ, ಕಣ್ಮಣಿಯ ಸಹಾಯದಿಂದ ದಿಂಬಿಗೊರಸಿ ಕೂಡಿಸಿ ನೀರಿನ ಗ್ಲಾಸನ್ನ ಆಕೆಯ ತುಟಿಯಂಚಿನ ಬಳಿಗೆ ಒಯ್ದಾಗ, ಎಂದಿನಂತೆಯೇ ಕೈ ಎತ್ತಲು ಪ್ರಯತ್ನಿಸಿ ಸೋತಾಗ, ಕಣ್ಣಂಚಿನ ಕಂಬನಿ ಜಾರಿ ಗ್ಲಾಸ್‌ನ ಅಂಚನ್ನು ಸೋಕಿದಾಗ, ಕಣ್ಮಣಿಗೆ ಕರುಳು ಕಿತ್ತು ಬಂದಂತಾಯಿತು, ಆಕೆಯ ನಿಸ್ಸಹಾಯಕ ಸ್ಥಿತಿಗೆ.

ಅತ್ಯಂತ ಮೃದುವಾದ ಟವಲಿನಿಂದ ಆಕೆಯ ಕೆನ್ನೆಗಳನೊರೆಸಿ "ಅಮ್ಮ ಅಳ್ತಾ ಇದ್ದೀರಾ! ಪ್ಲೀಸ್, ಬೇಡಿಮ್ಮ" ಎಂದ ಅವಳ ಕಂಠ ಗದ್ಗದವಾಯಿತು. ಕಾಲುಗಳು ಇವೆ, ನಡೆಯಲಾರರು, ಕೈಗಳು ಇವೆ, ಉಪಯೋಗಕ್ಕೆ ಬಾರದು. ತನ್ನ ಕೈಯಲ್ಲಿ ತಾನು ಊಟ ಮಾಡಿ ಸುಬ್ಬಲಕ್ಷ್ಮಿ ವರ್ಷಗಳು ಉರುಳಿ ಹೋಗಿತ್ತು.

"ನಂದು ಡೆಡ್ ಲೈಫ್, ಅಪ್ರಯೋಜಕವಾದ ಬದ್ಕು ಬೇಗ ಕೊನೆಗೊಳ್ಳಬೇಕು. ಆಸೆಗಳು, ಕನಸುಗಳು, ಕಲ್ಪನೆಗಳು ಇಲ್ದೇ ಜೀವ್ನ ಸಾಗಿಸೋದು ಭಯಂಕರ ನರ್ಕ. ಯಾರ್ಗೆ ಬೇಕು? ಯಾಕಾಗಿ... ಬೇಕು?" ಮನದ ಮಾತುಗಳನ್ನ ಹೊರ ಚೆಲ್ಲಿ ಸುಬ್ಬಲಕ್ಷ್ಮಿ ಕಣ್ಣೀರು ಮಿಡಿದಾಗ "ನೀವು ಬದುಕೋದು ನಂಗೆ ಬೇಕು. ನೂರಾರು ಕುಟುಂಬಗಳಿಗೆ ಅನ್ನಭಾವಣೆ ಕೊಟ್ಟಿದ್ದೀರಾ" ಎಂದ ಚೈತನ್ಯನ ಮಾತುಗಳಿಗೆ ಸಿಸ್ಟರ್ ಮತ್ತು ಕಣ್ಮಣಿ

ಹಿಂದಕ್ಕೆ ಸರಿದರು. ಹೊರ ಹೋಗುವಂತೆ ಇಬ್ಬರಿಗೂ ಕಣ್ಣಲ್ಲಿಯೇ ಸನ್ನೆ ಮಾಡಿದ.

ಹೊರ ಬಂದ ಸಿಸ್ಟರ್ ಸ್ಕರ್ಟ್‌ನ ಜೇಬಿನಲ್ಲಿದ್ದ ಎರಡು ಚಾಕಲೇಟುಗಳನ್ನು ಹೊರ ತೆಗೆದು ಅವಳ ಕೈಯಲ್ಲೊಂದು ಇಟ್ಟು "ಒಂದಷ್ಟು ಹೊತ್ತು ಗಾಳಿಗೆ ಹೋಗೋಣ" ಹೊರಗೆ ಕರೆದೊಯ್ದವಳು ತನ್ನ ದುಗುಡ ಹೊರ ಚೆಲ್ಲಿದಳು.

ಪಾಟುಗಳನ್ನು ಸಾಲಾಗಿ ಪೇರಿಸಿಟ್ಟ ಹಿಂಭಾಗದ ಒಂದು ಸಿಮೆಂಟು ಆಸನದಲ್ಲಿ ಕೂತು "ಸದಾ ಈ ಮುದ್ಕೀ ಮುಖ ನೋಡ್ಕೊಂಡ್ ಹೇಗೆ ಕೂತಿರೋದು? ಒಳ್ಳೆ ಸಂಬ್ಳ.. ಒಪ್ಪಿಕೊಳ್ಳೋಣ. ಅಂಥ ಕೆಲ್ಸವು ಇಲ್ಲ! ಆಕೆ ಹತ್ರ ನಂಗೆ ಮಾತಾಡೋಕ್ಕೇನಿದೆ? ಬೌದ್ಧಿಕವಾಗಿ ಬೆಳ್ದವರು ಸುಬ್ಬಲಕ್ಷ್ಮಿ. ಕಾಸ್ಮಾಟಿಕ್ ಪ್ರಪಂಚದ ಮಾತುಗಳು ಆಕೆಗೆ ಹಿಡಿಸೋಲ್ಲ. ಬಹಳ ಓದಿಕೊಂಡೋಳು. ಮೂರು ಸಬ್ಜೆಕ್ಟ್‌ನಲ್ಲಿ ಎಂ.ಎ. ಮಾಡಿದ್ದಾರಂತೆ. ಎಷ್ಟು ನಿರರ್ಗಳವಾಗಿ ಇಂಗ್ಲಿಷ್ ಮಾಡ್ತಾರೇಂದ್ರೆ.... ನಮ್ಮ ಡಾಕ್ಟ್ರು ಕೂಡ ಬೆಚ್ಚಿಬೀಳ್ತಾರೆ. ಈಗ ಈಕೆ ಊಟ ಮಾಡ್ಲಿಲ್ಲ, ಆ ಮಗರಾಯನಿಗೆ ಅದೇ ದೊಡ್ಡ ವಿಷ್ಯವಾಗುತ್ತೆ. ಇಂಥಾ ಮಗಾ ಮಾತ್ರ ಕೋಟಿಗೊಬ್ರು... ಸಿಕ್ಕೋಲ್ಲ. ಒಮ್ಮೆ ಕೂಡ ತಾಯಿ ಬಗ್ಗೆ ಬೇಜಾರಾದ್ದಿಲ್ಲ. ಮದ್ವೆ ಇಲ್ಲ, ಹಾಗೇಂತ ಹೊರಗಿನ ಸಂಬಂಧಗಳು ಇದೇಂತ ಅಂದ್ಕೋಬೇಡ. ಅಂಥದೇನಿಲ್ಲ, ಆ ಮನುಷ್ಯನ್ನ ನೋಡಿದ್ರೆ... ಆಶ್ಚರ್ಯ ಅನ್ನಿಸೋಲ್ವಾ?" ದೀರ್ಘ ವಿವರಣೆಯನ್ನು ಕೇಳಿದಳೇ ವಿನಃ ಪ್ರತಿಕ್ರಯಿಸಲು ಹೋಗಲಿಲ್ಲ. ಚಾಕಲೇಟು ಇನ್ನು ಅವಳ ಕೈಯಲ್ಲಿಯೇ ಇತ್ತು.

"ಚಾಕಲೇಟು ಬಾಯಿಗೆ ಹಾಕ್ಕೋ" ಹೇಳಿದಳು.

ಆಕೆ ಅಂದ ಮಾತುಗಳನ್ನೆ ಮನಸ್ಸಿನಲ್ಲಿ ಮನನ ಮಾಡಿಕೊಳ್ಳ ತೊಡಗಿದಳು. 'ಚೈತನ್ಯ ಫಾರ್ಮಾಸೂಟಿಕಲ್ಸ್‌ನಿಂದ ಹಿಡಿದು ಚೈತನ್ಯ ಸಾಫ್ಟ್‌ವೇರ್'ವರೆಗೂ ವಿಸ್ತರಿಸಿದ್ದ ಅವನ ಸಾಮ್ರಾಜ್ಯ ಬೆರಗು ಹುಟ್ಟಿಸುವಂಥದ್ದೇ.

ಎರಡು ಸಲ ಬಂದ ಪಂಥರಿ ಹೊರಗೆ ಇಣುಕಿ, ಇವರುಗಳನ್ನು ನೋಡಿಕೊಂಡೇ ಒಳಗೆ ಹೋಗಿದ್ದು. "ಸಿ.ಬಿ.ಐ. ಡಿಪಾರ್ಟ್‌ಮೆಂಟ್‌ನಲ್ಲಿ ಇರ್ಬೇಕಿತ್ತು ಈ ಮನುಷ್ಯ. ಸದಾ ಒಬ್ಬರಲ್ಲ, ಒಬ್ಬರ ಮೇಲೆ ಕಣ್ಣಿಟ್ಕೊಂಡೇ.. ಓಡಾಡ್ತಾನೆ" ಗೊಣಗಿದರು ಸಿಸ್ಟರ್.

ಆಮೇಲೆ ಇವಳತ್ತ ತಿರುಗಿ "ನೀನು ಎಷ್ಟು ತಿಂಗ್ಳು ಇರ್ತೀನಿಂತ ಬರ್ದು ಕೊಟ್ಟಿದ್ದೀಯಾ? ಇದು ಕೆಲವು ತಿಂಗ್ಳುಗಳಷ್ಟು ಕೂಡ ಪರ್ಮನೆಂಟಾದ ನೌಕರಿ ಅಲ್ಲ. ಆ ಮನುಷ್ಯನಿಗೆ ಬೇಡಾಂತ ಅನ್ನಿಸ್ಬಿಟ್ರೆ... ಆಗ್ಲೇ ನಡೀತಾ ಇರ್ಬೇಕು. ತಕ್ಷಣ ನಿನ್ನ ಬಾಕಿ ಚುಕ್ತಾ ಮಾಡ್ಬಿಡ್ತಾನೆ. ಇದ್ನ ಮನಸ್ಸಿನಲ್ಲಿಟ್ಕೊ. ಮೊದ್ಲು... ಎಲ್ಲಿದ್ದೇ?" ಕೇಳಿದಳು. ಸುಳ್ಳು ಹೇಳುವ ಅಗತ್ಯ ಕಣ್ಮಣಿಗೆ ಇರಲಿಲ್ಲ.

"ಸಂಭ್ರಮ ಪತ್ರಿಕೆಯಲ್ಲಿ ಕೆಲ್ಸ ಮಾಡ್ತಾ ಇದ್ದೆ. ಅವ್ರ ಬಂಧುಗಳ ಮಗ್ಳಿಗೆ ಕೆಲ್ಸ ಬೇಕಿತ್ತು. ನನ್ನ ತೆಗ್ದು ಹಾಕಿದ್ರು". ಎಡಿಟರ್ ಬಗ್ಗೆ ಕೆಲವು ಮಾತುಗಳನ್ನು ಹೇಳಿಕೊಂಡಳು.

ಐದು ನಿಮಿಷದಷ್ಟು ದೀರ್ಘ ಕಾಲದಷ್ಟು ಮೌನವಾಗಿದ್ದು "ನೀನು ನರ್ಸ್ ಟ್ರೈನಿಂಗ್ ಮಾಡ್ಕೊಂಡ್ಬಿಡು. ಆರಾಮಾಗಿ ಸೌದಿಗೆ ಹೋಗ್ಬಿಡ್ಬಹ್ದು. ಅಲ್ಲಿ ನನ್ನ ಇಬ್ರು... ಅಂಕಲ್, ಅಂಟೀಗಳು ಇದ್ದಾರೆ. ಒಂದಿಷ್ಟು ದುಡ್ಡುಕಾಸು ಮಾಡ್ಕೊಂಡ್ಬಂದ್ ಸೆಟಲ್ ಆಗ್ಬಿಡ್ಬಹ್ದು." ಫ್ಯೂಚರ್ ಬಗ್ಗೆ ಒಂದು ಪ್ಲಾನ್ ಹಾಕಿಕೊಟ್ಟಳು.

'ನೀನ್ಯಾಕೆ ಹೋಗಲಿಲ್ಲ?' ಎಂದು ಪ್ರಶ್ನಿಸಬೇಕೆನಿಸಿದರೂ, ತುಟಿ ತೆರೆಯಲಿಲ್ಲ. ಅವಳ ಮಟ್ಟಿಗೆ ಅದು ಅನಗತ್ಯವಾದ ಪ್ರಶ್ನೆ. ಮೌನವಹಿಸಿದಳು, ಯಾಕೋ ಏನೋ ಅವಳಲ್ಲಿ ಎಷ್ಟು ತುಡಿತವಿತ್ತೆಂದರೇ, ಮುರುಳಿಕೃಷ್ಣ ಚೈತನ್ಯ ಇರುವ ಈ ಬಂಗ್ಲೆಯಲ್ಲಿ ಕೊನೆಯವರೆಗೂ ಇದ್ದು ಬಿಡಬೇಕೆಂಬ ಹಂಬಲ ಎಷ್ಟಿತ್ತೆಂದರೇ, ಯಾವುದೇ ಶ್ರೀಮಂತಿಕೆ ಅವಳನ್ನು ಕೈ ಬೀಸಿ ಕರೆದರೂ ಅತ್ತ ತಿರುಗಿ ನೋಡಳು. ಇದು ಅವಳಿಗೆ ಕೆಲವೊಮ್ಮೆ ಹುಚ್ಚಿನ ಅತಿರೇಕವೆನಿಸುತ್ತಿತ್ತು. ಇಂಥ ಭ್ರಮೆಗಳಿಂದ ಎಂಥ ಭಯಂಕರ ಆಪತ್ತು ಸಂಭವಿಸುತ್ತದೆಯೆಂದು ಅವಳಿಗೆ ಗೊತ್ತು.

"ಯಾಕೆ ಸುಮ್ಮನಾದೇ, ಇಷ್ಟವಾಗ್ಲಿಲ್ವಾ?" ಕೇಳಿದಳು ಸಿಸ್ಟರ್. ಅವಳ ತುಟಿಯಂಚಿನಲ್ಲಿ ವ್ಯಥೆಯ ನಗು ಇಣಕಿತು. "ಇಷ್ಟಗಳು ಕೆಲವರ ಪಾಲಿಗೆ ಮಾತ್ರ. ನನ್ನಂಥವರದು ಹೊಟ್ಟೆ ಬಟ್ಟೆಯ ನೆಲೆಯ ಪ್ರಶ್ನೆ. ಹಣ ಖರ್ಚು ಮಾಡ್ಕೊಂಡ್ ನರ್ಸಿಂಗ್ ಟ್ರೈನಿಂಗ್ ಮಾಡೋ ಸಾಮರ್ಥ್ಯವಿಲ್ಲ. ಅಂಥ ಆಸೆಗಳೇನು ಇಲ್ಲದಿದ್ದರಿಂದ ಮರ್ಯಾದೆಯಾಗಿ ಜೀವ್ನ ಸಾಗಿಸಲು ಒಂದು ಸಣ್ಣ ಪುಟ್ಟ ಕೆಲ್ಸ ಸಾಕು" ಎಂದಾಗ, ಅವಳು ಬೆರಗುಗಣ್ಣುಗಳಿಂದ ನೋಡಿದಳು. ಇಂಥ ವಿರಕ್ತಭಾವ ಇರುವ ಹೆಣ್ಣು, ಯಾಕೆ ನನ್ ಆಗಿ

ಸೇವೆ ಸಲ್ಲಿಸಬಾರದು? ಆ ಅನಿಸಿಕೆಯನ್ನು ಹೊರ ಹಾಕುವ ಮೊದಲೆ ಪಂಥರಿ ಬಂದ.

"ಏನು ಅಚ್ಚುಕಟ್ಟಾಗಿ ಮಾತಾಡಿಕೊಂಡ್ ಕೂತ್ಬಿಟ್ರಿ! ಯಜಮಾನ್ರು.. ಕರೀತಾರೆ" ವಿಷಯ ಮುಟ್ಟಿಸಿದವನು ಹೋಗದೆ ಅಲ್ಲಿಯೇ ನಿಂತ. ಗೊಣಗಿಕೊಂಡು ಎದ್ದು ಹೋದ ಸಿಸ್ಟರ್ ಒಮ್ಮೆ ರೋಡಿನ ಕಡೆ ನೋಟ ಬೀರುವುದನ್ನು ಮರೆಯಲಿಲ್ಲ. "ಅಂತು ಈ ಹೆಣ್ಣು ಮಗ್ಳು ಅಪಾಯದ ಅಂಚಿನಲ್ಲಿದ್ದಾಳೆ" ಎಂದರು ಜೋರಾಗಿಯೇ ಪಂಥರಿಯದು ಸ್ವಲ್ಪ ಅನುಮಾನದ ಸ್ವಭಾವವೇ.

"ಅಮ್ಮ ಕಣ್ಮಣಿ, ನೀನು ಈಕೆ ಮಾತು ಕೇಳಿ ನರ್ಸ್ ಟ್ರೈನಿಂಗೇನು ಹೋಗ್ಬೇಡ. ನಮ್ಮ ಅಮ್ಮಾವ್ರಿಗೆ ನರ್ಸ್ ಆಗಿ ಇದ್ಬಿಡು. ಒಂಟೀ ಹೆಣ್ಣು ಮಗ್ಳು, ಇಲ್ಲಿದ್ರೆ ಸೆಕ್ಯೂರಿಟಿ ಸಿಗುತ್ತೆ. ಯೋಚ್ನೆ ಮಾಡು. ನಿನ್ಕೆಲ್ಸ ಯಜಮಾನ್ರಿಗೆ ತೃಪ್ತಿ ತರಬೇಕಷ್ಟೆ" ಹೇಳಿ ಹೋದ.

ಇವಳು ರೂಮಿನ ಒಳಗೆ ಹೋಗುವ ವೇಳೆಗೆ ಸುಬ್ಬಲಕ್ಷ್ಮಿಗೆ ಹಣ್ಣಿನ ರಸ ಕುಡಿಸಿ ಮೂತಿಯೊರೆಸುತ್ತಿದ್ದ ಚೈತನ್ಯ, ಒಮ್ಮೆ ನೋಟ ಹರಿಸಿದ. ಆ ನೇರ ನೋಟಕ್ಕೆ ಚಲಿಸಿ ಹೋದಳು. ಆ ನೋಟಕ್ಕೆ ಅಷ್ಟು ಸೂಕ್ಷ್ಮತೆ, ಚುರುಕಿನ ಜೊತೆ ಹೆಚ್ಚಿದ ತೀಕ್ಷ್ಣತೆ ಕೂಡ ಇತ್ತು.

"ಸ್ವಲ್ಪ ಆಫೀಸ್ ರೂಮಿಗೆ ಬನ್ನಿ" ಹೇಳಿ ಹೋದ.

ಕಣ್ಮಣಿಗೆ ಅರ್ಥವಾಯಿತು. ಒಮ್ಮೆ ಸುಬ್ಬಲಕ್ಷ್ಮಿಯವರತ್ತ ನೋಟ ಹರಿಸಿ, ನಿಧಾನವಾಗಿ ಸರಿದು ಹೊರಕ್ಕೆ ಹೋದಳು. ತನ್ನ ರೂಮಿಗೆ ಹೋಗಿ ಬ್ಯಾಗ್ ರೆಡಿ ಮಾಡಿಟ್ಟೇ ಮುಂದಿನ ಆಫೀಸ್ ರೂಮಿನ ಬಳಿ ಹೋಗಿದ್ದು.

"ಗೆಟ್ ಇನ್... " ಎಂದ ಬೇಸರಗೊಂಡವನಂತೆ.

ಒಳಗೆ ಹೋಗಿ ಅವನ ಟೇಬಲ್ಲಿನಿಂದ ತುಸು ದೂರದಲ್ಲಿಯೆ ನಿಂತು ತಲೆಯೆತ್ತಿದಳು. 'ಕಣ್ಮಣಿ ಪರ್ವಾಗಿಲ್ಲ' ಅವನಮ್ಮನಿಂದ ಸರ್ಟಿಫಿಕೇಟ್ ಸಿಕ್ಕಿದ್ದರಿಂದ ಸ್ವಲ್ಪ ಮೆತ್ತಗಿದ್ದ.

"ಕೂತ್ಕೊಳ್ಳಿ... " ಎಂದ ಸ್ವಲ್ಪ ಕಟುವಾಗಿಯೇ.

"ಪರ್ವಾಗಿಲ್ಲ, ಸರ್.... " ನಿಂತೇ ಇದ್ದಳು.

"ಅಮ್ಮನ ಕೆಲ್ಸ ಮಾಡೋಕೆ, ನೋಡಿಕೊಳ್ಳೋಕೆ ಆಳು ಕಾಳುಗಳು, ಸಿಸ್ಟರ್ ಜೊತೆ ಡಾಕ್ಟ್ರು ಕೂಡ ಇದ್ದಾರೆ. ನಿಮ್ಮನ್ನು ನೇಮಿಸಿಕೊಂಡಿರೋದು,

ಒಂದೇ ಒಂದು ಉದ್ದೇಶದಿಂದ, ಷಿ ಈಸ್ ಆಲ್‌ರೈಟ್... ಅಂತಾರೆ ಎಲ್ಲಾ ಡಾಕ್ಟ್ರುಗಳು. ಇಂಥದ್ದೇ ಕಾಯಿಲೇಂತ ಯಾರು ಡೈಯಾಗ್ನೈಸ್ ಮಾಡಿಲ್ಲ. ಆಕೆಯ ಚೇತರಿಕೆಗೆ ಬೇಕಾಗಿರೋದು ಪ್ರೀತಿ, ವಿಶ್ವಾಸ, ಬದ್ಕಿನ ಬಗ್ಗೆ ಆಸಕ್ತಿ. ಅದ್ನ ನೀನು ಮಾಡಬೇಕು..... ಯು ಮಸ್ಟ್ ಡೂ... " ಹಲ್ಲುಗಳನ್ನು ಕಚ್ಚಿಡಿದು, ನಾಲಿಗೆಯಡಿಯಿಂದ ಹೇಳಿದ ಆವೇಗದಿಂದ.

ಅವಳ ಮೈ ಪೂರ್ತಿ ತಣ್ಣಗಾಗಿಬಿಟ್ಟಿತು. ಇದೊಂದು ವಿಚಿತ್ರವಾದ ಸುಳಿಯೆನಿಸಿತು.

"ನೀವೆಷ್ಟಾದ್ರೂ ಸಂಬಳ .. ಕೇಳಿ! ನಾನು ಕೊಡೋಕೆ ಸಿದ್ಧ. ನಮ್ಮಮ್ಮ ನಡೆಯುವಂತಾಗ್ಬೇಕು. ಅದ್ಕೇ ಸಹಕಾರ ನೀಡಿ ಯೂ ಅಂಡರ್‌ಸ್ಟ್ಯಾಂಡ್?" ಎಂದ. ತಾಯಿಯ ಕಣ್ಣೀರನ್ನು ಕಂಡು ಎಲ್ಲಾ ತಾಳ್ಮೆಯನ್ನು ಕಳೆದುಕೊಂಡು ಕೆಲವು ಬಾರಿ ಹುಚ್ಚನಂತಾದರೂ ತನ್ನನ್ನು ತಾನೇ ಕಂಟ್ರೋಲಿಗೆ ತಂದುಕೊಂಡಿದ್ದ.

"ಯೆಸ್ ಸರ್, ನೋ ಸರ್.... " ಒಟ್ಟಿಗೆ ಅಂದಾಗ ಗಂಭೀರವಾದ. "ನೌ ಯು ಕೆನ್ ಗೋ" ಹೇಳಿದ. ಹೊರಗೆ ಬಂದು ನಿಟ್ಟುಸಿರು ದಬ್ಬಿ ಮುಖದ ಬೆವರನ್ನು ತೊಡೆದುಕೊಂಡಳು. 'ಗೆಟ್ ಔಟ್', ಅನ್ನಲಿಲ್ಲ ಅಷ್ಟೆ. ಅದರೂ ತಿಂಗಳು ತುಂಬುವ ಮುನ್ನವೇ ಚೈತನ್ಯ ಹೊರದೂಡಬಹುದೆನಿಸಿತು. 'ತನಗಾಗಿ ಕೆಲಸ ಅನ್ವೇಷಿಸಬೇಕೆಂದು' ವಾಸಂತಿಗೆ ತಕ್ಷಣವೇ ತಿಳಿಸಬೇಕೆನಿಸಿತು.

ರೂಮಿನೊಳಗೆ ಬಂದಾಗ ಸಿಸ್ಟರ್ ಮ್ಯಾಗಝೀನ್ ಹಿಡಿದಿದ್ದರೇ, ಸುಬ್ಬಲಕ್ಷ್ಮಿ ಕಣ್ಮುಚ್ಚಿ ಮಲಗಿದ್ದರು. ತೆಪ್ಪಗೆ ಬಂದು ಗೋಡೆಯಂಚಿಗೆ ಹಾಕಿದ್ದ ಸ್ಟೂಲು ಮೇಲೆ ಕೂತಳು. 'ಸುಬ್ಬಲಕ್ಷ್ಮಿಯವರಿಗೆ ತಾನೇನು ಮಾಡಲು ಸಾಧ್ಯ?' ಚಿಂತಿಸಿ ಸೋತಳು. ಮತ್ತೆ ಚೈತನ್ಯ ಆಡಿದ ಮಾತುಗಳನ್ನು ನೆನಪು ಮಾಡಿಕೊಂಡಳು. 'ಇಂಥ ಕಾಯಿಲೇಂತ ಯಾರು ಡೈಯಗ್ನೈಸ್ ಮಾಡಿಲ್ಲ' ಎಂದಿದ್ದ. ಅದರಲ್ಲಿ ಸೈಕ್ರಿಯಾಟಿಸ್ಟ್‌ನ ಕೂಡ ಸೇರಿಸಿಕೊಂಡಿರಬೇಕು - ಯಾಕೋ, ಏನೋ ಮೈ ಪರಚಿಕೊಳ್ಳುವಂತಾಯಿತು.

* * * *

ವಾಸಂತಿ ಬಂದಾಗ ಒಂಬತ್ತರ ಸುಮಾರು. ಏಳರ ನಂತರ ಎಂಟರ ಒಳಗೆ ಗಿರಾಕಿಗಳು ಜಾಸ್ತಿಯೇ. ಲೈಟುಗಳ ಬೆಳಕಿನಲ್ಲಿ ಸೀರೆಗಳನ್ನು ಆರಿಸುವ

ಇಚ್ಛೆ ಕೆಲವರದಾದರೇ, ಕೆಲವರಿಗೆ ಆ ಸಮಯ ಸೂಕ್ತ. ಕೆಲವರದು 'ವಿಂಡೋ ಷಾಪಿಂಗ್' ಏನು ಕೊಳ್ಳದಿದ್ದರೂ ಪ್ರತಿಯೊಬ್ಬರ ವಸ್ತು ವಿನ್ಯಾಸ, ಕ್ವಾಲಿಟಿ, ಬೆಲೆಗಳನ್ನು ತಿಳಿಯುವ ಕುತೂಹಲ. ಅಂತಹವರನ್ನು ಕೂಡ ಉದಾಸೀನ ಮಾಡುವಂತಿರಲಿಲ್ಲ. ಅವರುಗಳೇ ಮುಂದಿನ ಗಿರಾಕಿಗಳು. ಎಂಟು ಮೂವತ್ತೈದಕ್ಕೆ ಬಿಡುಗಡೆಯ ಉಸಿರು ಬಿಟ್ಟು ಹೊರಗೆ ಬರಬಹುದಿತ್ತು. ಆ ವೇಳೆಗೆ ಬಲವಂತದ ನಗೆ ಬೀರಿ ಹಸನ್ಮುಖತೆಯನ್ನು ನಟಿಸಿ ಸೋತ ಮುಖ ಮುಂದಿನ ಕೆಲವು ಗಂಟೆಗಳಾದರೂ ಸಹಜವಾಗಿರಲು ಮುಷ್ಕರ ಹೂಡುತ್ತಿತ್ತು.

ಕೈಕಾಲು ತೊಳೆದು ಊಟದ ತಟ್ಟೆ, ಲೋಟ ಹಿಡಿದು ಡೈನಿಂಗ್ ಟೇಬಲಿಗೆ ಹೋದಾಗ ಕೆಲವರ ಊಟ ಮುಗಿದಿತ್ತು. ಒಂದಿಬ್ಬರು ಊಟ ಮಾಡುತ್ತಿದ್ದವರು ಮುಗುಳ್ನಗೆ ಬೀರುವ ಪ್ರಯತ್ನ ಮಾಡಿದರು

"ಹೇಗಿದೆ, ವ್ಯಾಪಾರ ?" ಪ್ರೈವೇಟ್ ಫೈನಾನ್ಸ್‌ನಲ್ಲಿ ಕ್ಯಾಷಿಯರ್ ಆಗಿದ್ದ ಸುಕನ್ಯ ಕೇಳಿದಾಗ "ಅವ್ರಿಗೇನು, ವ್ಯಾಪಾರ ಹೆಚ್ಚಾದಷ್ಟು ಸುಸ್ತಾಗೋರು ನಾವು. ಒಂದು ಸೀರೆ ಪರ್ಚೇಸಿಂಗ್‌ಗೆ ಹಿಂಡು ಜನ.... ಬರ್ತಾರೆ. ಇರೋ ಸೀರೆಗಳೆಲ್ಲ ಜಾಲಾಡಿ ಕಡೆಗೆ ಸುಮ್ನೇ ಹೊರಟರೇ, ನಮ್ಮತ್ರ ಯಜಮಾನರ ಕೆಂಗಣ್ಣು" ಎನ್ನುತ್ತ ತಟ್ಟೆ ಇಟ್ಟುಕೊಂಡು ಕೂತಳು. ಇನ್ನು ಮಾತಾಡುವುದು ಬೇಡವಾಗಿತ್ತು ಅವಳಿಗೆ. ಇನ್ನಿಬ್ಬರು ಕೇಳಿದಕ್ಕೆ 'ಹಾ', 'ಹ್ಞೂ' ಎಂದಳಷ್ಟೆ.

ಉಪ್ಪಿನಕಾಯಿ ಬಡಿಸಿದಾಗ ಬೆರಳಿನಲ್ಲಿ ಸವರಿ ನಾಲಿಗೆ ತುದಿಗೆ ಸೋಕಿಸಿ 'ಹಾ' ಎಂದಳು. ಶಬರಿಯ ಕೈಯ ಉಪ್ಪಿನ ಕಾಯಿಯ ರುಚಿಗೆ, ಎಂಥ ಮೋಡಿಯಿತ್ತೆಂದರೇ, ಅವಳು ಬರೀ ಉಪ್ಪಿನಕಾಯಿಯಲ್ಲಿ ಅನ್ನ ಕಲೆಸಿಕೊಂಡು ಆಕೆಯಿಂದ ಪ್ರೀತಿಯ ಬೈಗಳು ತಿಂದೇ ಮೇಲೇಳುತ್ತಿದ್ದದು. 'ಅಮ್ಮ ನೀನು ಹಾಕೋ ಉಪ್ಪಿನಕಾಯಿಯೆಲ್ಲ, ಇವಳೊಬ್ಬಳಿಗೆ ಸಾಕು' ಎನ್ನುತ್ತಿದ್ದ ಗೋಪಾಲ. ಇನ್ನು ಹಿರಿಯ ಸೊಸೆಯರದು ಮಾತಿಲ್ಲ, ಕತೆಯಿಲ್ಲ, ಈ ಸಂಬಂಧವಿಲ್ಲದವಳೊಂದಿಗೆ.

"ಅಮ್ಮ ಕೈ ತಟ್ಟೆಯಲ್ಲಿಟ್ಟರೇ ಅನ್ನ ಹೇಗೆ ಬಡಿಸೋದು ?" ಎಂದಾಗಲೇ ಅವಳು ನೆನಪುಗಳಿಂದ ಎಚ್ಚೆತ್ತುಕೊಂಡಿದ್ದು "ಸಾರಿ, ಬಡ್ಸಿ, ಬಡ್ಸಿ" ಎಂದಳು.

"ನಿಮ್ಗೆ ಕಣ್ಮಣಿಯಮ್ಮನವರದ್ದೇ ಚಿಂತೆ. ಒಳ್ಳೆ ಗೆಳತಿಯರಾಗ್ಬಿಟ್ಟಿದ್ರಿ. ಎಷ್ಟೋ ಜನನ ನೋಡಿದ್ದೀನಿ. ನಿಮ್ಮಷ್ಟು ಅನ್ಯೋನ್ಯವಾಗಿದ್ದ ಕಂಡೇ...

ಇರ್ಲಿಲ್ಲ." ಬಿಸಿ ಬಿಸಿ ಅನ್ನ ಬಡಿಸಿ, ಅದರ ಮೇಲೆ ಎರಡು ಸ್ಪೂನ್ ತುಪ್ಪ ಹಾಕಿ, ಎರಡು ಪಾತ್ರೆಗಳನ್ನು ಒಳಗೊಯ್ದಳು ಮೋನಕ್ಕ.

ಹಬೆಯಾಡುವ ಅನ್ನದ ಮೇಲೆ ಕೈಯಾಡಿಸಿದಳು. ಹಿತವೆನಿಸಿತು. ಇದು ಅವಳ ಸ್ವಂತ ಸಂಪಾದನೆ. ಇಲ್ಲಿ ಯಾರ ಇರಿಯುವ ನೋಟಗಳು ಇಲ್ಲದೇ, ಅಧಿಕಾರಯುತವಾಗಿ ಆರಾಮಾಗಿ ಊಟ ಮಾಡಬಹುದಿತ್ತು. ಆದರೆ ಬೇಸರ ತರಿಸಿದ್ದು, ಅದೇ ಬೂದುಕುಂಬಳ ಕೂಟು, ಕೋಸಿನ ಪಲ್ಯ. ಎರಡು ದಿನದಿಂದ ಅದೇ ತರಕಾರಿ ಉಪಯೋಗಿಸಿದ್ದರಿಂದ ಕೆಲವು ಟೀಕೆಗಳು ಅನಿವಾರ್ಯವಾಗಿದ್ದರೂ ಮೋನಕ್ಕ ಬಾಯಿ ತೆರೆಯುವಂತಿರಲಿಲ್ಲ.

"ಈ ಹೊತ್ತಿಗೆ ಕೋಸು, ಬೂದುಕುಂಬಳಕಾಯಿ ಮುಗಿಯಿತು. ಇನ್ನೊಂದ್ವಾರ, ಈ ತರಕಾರಿ ಹಾಕೋಲ್ಲಾಂತ ನಾನು ತಿರುಪತಿ ವೆಂಕಟರಮಣ ಸ್ವಾಮಿಯ ಮೇಲೆ ಪ್ರಮಾಣ ಮಾಡಿದ್ದೇನೆ, ಅಮ್ಮಾವ್ರ ಮುಂದೆ. ಇದೊಂದು ಹೊತ್ತು ಅಡ್ಜಸ್ಟ್ ಮಾಡಿಕೊಂಡ್ಬಿಡಿ" ಅನುನಯದ ದನಿಯಲ್ಲಿ ಬಡಿಸಿದಾಗ ಬಾಯಿ ತೆರೆಯುವಂತಿರಲಿಲ್ಲ.

ತಲೆ ಬಗ್ಗಿಸಿಕೊಂಡು ಸುಮ್ಮನೆ ಅನ್ನ ಕಲೆಸತೊಡಗಿದಾಗ, ಅವಳ ಕಣ್ ತುಂಬಿತು. ನೆತ್ತಿ ಹತ್ತಿದಾಗ ತಲೆಯ ಮೇಲೆ ತಟ್ಟಿ ನೀರು ಕುಡಿಸಿದ ಕಣ್ಮಣಿ, ಒಡ ಹುಟ್ಟಿದ ತಂಗಿಯಂತೆ ಜ್ವರ ಬಂದು ಮಲಗಿದಾಗ ಉಪಚರಿಸಿ, 'ತಾನು ಒಂಟಿ, ಅನಾಥೆ' ಎನ್ನುವುದನ್ನು ಮರೆಸಿದ್ದು ಅವಳ ಬಾಳಿನ ಸುಯೋಗ. ಇಂದು ತುತ್ತು ಬಾಯಿಯ ಬಳಿಗೆ ಹೋಗಲು ತಡವರಿಸಿ, ನಿಧಾನವಾಗಿಯಾದರೂ ಹಸಿದ ಹೊಟ್ಟೆ ಆಹಾರವನ್ನು ಸ್ವೀಕರಿಸಿತು. ರೂಮಿಗೆ ಮ್ಲಾನವದನಳಾಗಿ ಹಿಂದಿರುಗಿದಳು.

ಹಿಂದಕ್ಕೆ ಹೋಗಿ ಕಾರಿಡಾರ್‌ನ ಕೊನೆಯಲ್ಲಿದ್ದ ಫೋನ್‌ನ ಬಟನ್‌ಗಳನ್ನೊತ್ತಿ, ರಿಂಗಾದಾಗ ಇಟ್ಟಳು. ಮತ್ತೆ ಬಟನ್‌ಗಳನ್ನೊತ್ತಿದಳು. ಅಲ್ಲಿ ಕಣ್ಮಣಿ ಕೆಲಸಕ್ಕೆ ಜಾಯಿನ್ ಆಗಿ ಇಪ್ಪತ್ತೆಂಟು ದಿನಗಳಾಗಿತ್ತು ಅಂದರೆ ಮುವತ್ತು ದಿನಕ್ಕೆ ಎರಡು ದಿನವಿತ್ತು. ತನ್ನ ಒಂದು ಭಾಗವನ್ನೆ ಕಳೆದುಕೊಂಡಂತೆ ಪರಿತಪಿಸುತ್ತಿದ್ದಳು. ಹತ್ತು ನಿಮಿಷಗಳು ಫೋನೆತ್ತಿ ಇಟ್ಟು ಸಾಕಾಗಿ ಹಿಂದಕ್ಕೆ ತಿರುಗುವ ವೇಳೆಗೆ, ವಾರ್ಡನ್‌ನವರ ಕಣ್ಣುಗಳಲ್ಲಿ ಪ್ರಶ್ನೆ ಇತ್ತು.

"ಯಾರಿಗಾದ್ರೂ ಫೋನ್ ಮಾಡ್ಬೇಕಿತ್ತಾ?" ಕೇಳಿದರು.

ಏನಾದರೂ ಹೇಳಲೇ ಬೇಕಿತ್ತು. "ಕಣ್ಣಣಗೆ ಫೋನ್ ಮಾಡೋಣ ಅಂದ್ಕೊಂಡೇ. ಹೊಸ ಜಾಬ್, ಒಂದು ಕಂಡಿಷನ್ ಹಾಕಿಯೇ ಮೂವತ್ತು ದಿನ ಅಪಾಯಿಂಟ್ ಮಾಡ್ಕೊಂಡಿದ್ದಾರೆ. ಅಪ್ಪಿಗೂ ಆ ಕೆಲ್ಸ ಇಷ್ಟವಾಗಿದೆ. ಇಷ್ಟು ಹೊತ್ತಿನಲ್ಲಿ ಫೋನ್ ಮಾಡಿದರೇ.... ಅವ್ರುಗಳ ರಿಯಾಕ್ಷನ್ ಹೇಗಿರುತ್ತೋ, ಅಂತ" ಉಸುರಿದಳು ಮೆಲ್ಲಗೆ. ಸುಳ್ಳು ಯಾವಾಗಲೂ ಕೆಲವು ಪ್ರಶ್ನೆಗಳನ್ನು ಮಾತ್ರವಲ್ಲ, ಸಮಸ್ಯೆಗಳನ್ನು ಸೃಷ್ಟಿಸುತ್ತದೆಯೆಂದು ಅವಳಿಗೆ ಗೊತ್ತು.

"ಷೂರ್, ಬೆಳಿಗ್ಗೆ ಮಾಡು ಸುಮ್ನೆ ಯಾಕೆ ಇಲ್ದ ತೊಂದರೆಗಳಿಗೆ ಸಿಕ್ಕಿಹಾಕಿಕೊಳ್ಳೋದು" ಎಂದರು. ಒಂದು ರೀತಿಯ ಬುದ್ಧಿವಾದ.

ರೂಮಿಗೆ ಬಂದ ವಾಸಂತಿ ಮಲಗಿಕೊಂಡಳು. ಈಚೆಗೆ ಒಬ್ಬ ವ್ಯಕ್ತಿ ಒಂದು ವಾರದಿಂದ ನಿರಂತರವಾಗಿ ಬರುತ್ತಿದ್ದ ಏನಾದರೂ ಕೊಳ್ಳಲು, ಅದು ಇವಳಿದ್ದ ಕಡೆ. ಮಿಕ್ಕ ಸೇಲ್ಸ್ ಗರ್ಲ್ಸ್ ಮುಸಿ ಮುಸಿ ಎಂದು ಷುರು ಮಾಡಿದ್ದು, ಚಿಂತೆಗೆ ಕಾರಣವಾಗಿತ್ತು. ಯಾರೊಂದಿಗಾದರೂ ಹೇಳಿಕೊಳ್ಳಬೇಕಿತ್ತು. ಯಾರೊಂದಿಗೆ ? ಮಿಕ್ಕ ಸೇಲ್ಸ್ ಗರ್ಲ್ಸ್ ಸ್ನೇಹದಿಂದ ಇದ್ದರೂ ಯಾರೂ ಮನಸ್ಸಿಗೆ ಹತ್ತಿರವಾಗಿರಲಿಲ್ಲ. 'ನಿನ್ನ ಅನ್ನ ನೀನು ದುಡಿದುಕೋಬಹ್ದು. ಆದರೆ ಒಂಟಿಯಾಗಿರೋದು ಕಷ್ಟ. ನಾನು ಹೊರಾಟ ನಡ್ಸೀ ಗೋಪಾಲನಿಗೆ ನಿನ್ನ ಮಾಡ್ಕೊಂಡ್ರೂ....ಸುಖವಾಗಿರಲಾರೇ. ನೆಟ್ಟಗೆ ಅವ್ನಿಗೆ ಯಾವ್ದು ಕೆಲ್ಸ ಬರೋಲ್ಲ. ಮೊದ್ಲೇ ದುಸ ದುಸ ಅನ್ನೋ ಸೊಸೆಯರು ನಿನ್ನ ಉರಿದು ಮುಕ್ಕಿದ್ತಾರೆ. ಇಷ್ಟು ತಲೆನೋವುಗಳು ಇವೆ.'

ದುಡ್ಡ ಹುಚ್ಚನೇನು ಅಲ್ಲ, ಸ್ವಲ್ಪ ಪೆದ್ದ. ಎಕರೆಗಟ್ಲೇ ಅಡಿಕೆ, ಬಾಳೆತೋಟವಿದೆ. ಏಲಕ್ಕಿ ಬೆಳೆ ಬರುತ್ತೆ. ಮನೆಯಲ್ಲಿ ಚಿನ್ನ, ಬೆಳ್ಳಿ ಇದೆ. ಛತ್ರದಂಥ ಮನೆ. ಮುಂದೆ ಯಾವುದಕ್ಕೂ ನಿಂಗೆ ಪರದಾಟವಿಲ್ಲ. ರಾಣಿಯಂಗೆ ಇರ್ಬಹ್ದು. ಶಬರಿ ಕೂಡಿಸಿಕೊಂಡು ಬುದ್ಧಿ ಹೇಳಿದಾಗ, ಏಳು ಯೋಜನ ದೂರ ಹಾರಿಬಿಡಬೇಕೆನಿಸಿತು. ಎಲ್ಲಾ ತನ್ನ ಭವಿಷ್ಯಕ್ಕೆ ಕೊಳ್ಳಿ ಇಡುವಂಥ ಜನ ಅಂದುಕೊಂಡು ಚೀರಾಡಿದ್ದಳು. "ಹೆಂಗೋ ಪರದೇಶಿ ಮಗು ಸಿಕ್ತೂಂತ ಸಾಕಿ, ದೊಡ್ಡವಳ್ನ ಮಾಡಿದ್ರಿ. ಈ ಜನ್ಮದಲ್ಲಿ ಸಾಧ್ಯವಿಲ್ಲದಿದ್ರೆ ಮುಂದಿನ ಜನ್ಮದಲ್ಲಿ ನಿಮ್ಮ ಋಣ ತೀರಿಸ್ಕೋತೀನಿ. ನನ್ನ ನನ್ನ ಪಾಡಿಗೆ ... ಬಿಟ್ಬಿಡಿ."

ಮರುದಿನ ಹೊರಟು ಬಂದವಳು, ಮತ್ತೆ ಅತ್ತ ತಲೆ ಹಾಕಿರಲಿಲ್ಲ,

ಗೋಪಾಲನ ರಾಯಭಾರ ಕೂಡ ಫಲಕಾರಿಯಾಗಿರಲಿಲ್ಲ. ಆದರಿಂದ ಆ ಕಡೆಯ ಬಾಗಿಲು ಸಂಪೂರ್ಣವಾಗಿ ಮುಚ್ಚಿದಂತೆಯೇ! ಇಡೀ ರಾತ್ರಿ ಹೊರಳಿ ಹೊರಳಿ ನರಳಿ ಎದ್ದಿದ್ದು ಬೆಳಗಿನ ಜಾವ. ಕೆಲವರು ಎಂಟು ಗಂಟೆಗೆ ಹೋಗುವವರು, ಅದಕ್ಕೆ ಮುನ್ನ ಹಾಸ್ಟಲ್ ಬಿಡುವವರು ಬೇಗನೆ ಎದ್ದು ಸ್ನಾನ ಮುಗಿಸಿ ಡೈನಿಂಗ್ ಹಾಲ್‌ಗೆ ಹೋಗುತ್ತಿದ್ದರು. ಅವರನ್ನು ಮೊದಲ ಷಿಫ್ಟ್‌ನವರು ಎಂದು ಕರೆಯುತ್ತಿದ್ದುದ್ದು, ಇಂದು ಅವರುಗಳೊಂದಿಗೆ ಇವಳನ್ನು ಕಂಡಾಗ ಅಡಿಗೆಯ ಮೋನಕ್ಕ ಮೆಲುನಗೆ ಬೀರಿದ.

"ಊರಿಗೆ ಹೋಗುವವರಿದ್ದೀರಾ?" ಇಡ್ಲಿ ಬಡಿಸುತ್ತ ಕೇಳಿದಾಗ, ಇಲ್ಲವೆನ್ನುವಂತೆ ತಲೆಯಾಡಿಸಿದಳು ಮೌನವಾಗಿ. ಫೋನ್ ಮಾಡುವ ಮೊದಲು ಯಾಕೆ, ಒಮ್ಮೆ ಹೋಗಿ ಕಣ್ಮಣಿಯನ್ನು ಕಂಡು ಬರಬಾರದೆನ್ನುವ ಹಂಬಲ. ಅಂತು ಅದಕ್ಕೆ ಅನುಗುಣವಾಗಿ ಬೇಗ ಹೊರಡುವ ಸಿದ್ಧತೆಯಲ್ಲಿದ್ದಳು. "ಇವತ್ತು ಸಾಂಬಾರ್ ಫಸ್ಟ್ ಕ್ಲಾಸ್.... " ಉದ್ದಿನ ವಡೆಯೊಂದಿಗೆ ಲೊಟ್ಟೆಯೊಡೆದಿದ್ದು, ಕಣ್ಮಣಿಯನ್ನು ಹೋಗಿ ನೋಡಿಯೇ ಬಿಡಬೇಕೆನ್ನುವ ನಿರ್ಧಾರದಿಂದ.

ಎಂದಿಗಿಂತ ಹಾಸ್ಟಲ್‌ನ ಬೇಗ ಬಿಟ್ಟ ವಾಸಂತಿ ಬಸ್ಸು, ಕಾಲು ನಡಿಗೆಗೆ ಕಾಯದೇ ಆಟೋ ಹಿಡಿದಳು. ಗೇಟಿನವರೆಗೂ ಹೋಗಿ ಬೀಳ್ಕೊಟ್ಟಿದ್ದಳೇ ವಿನಃ ಒಳಗೆ ಹೋಗಿರಲಿಲ್ಲ. ಅದೂ ಅಲ್ಲದೆ ಕಣ್ಮಣಿಯ ಮನದಲ್ಲಿ ಸದಾ ನೆನಪಾಗಿ ಕಾಡುವ ಮುರುಳಿಕೃಷ್ಣ ಚೈತನ್ಯನನ್ನು ಒಮ್ಮೆ ನೋಡಿಯೇ ಬಿಡಬೇಕೆಂಬ ತವಕದಿಂದ ಧಾವಿಸಿದ್ದು. ಆ ಮನುಷ್ಯನಿಂದ ಗೆಳತಿಗೆ ಏನಾದರೂ ಅಪಾಯವುಂಟಾ, ಎನ್ನುವ ಚಿಂತನೆ ಕೂಡ.

ಆಟೋ ಇಳಿದು ಹಣ ಕೊಡುವ ಮುನ್ನ ಒಮ್ಮೆ ಯೋಚಿಸಿದಳು. ಕಣ್ಮಣಿಯನ್ನು ನೋಡಲು ಪರ್ಮೀಷನ್ ಸಿಗದಿದ್ದರೇ ಇದೇ ಆಟೋದಲ್ಲಿ ಹಿಂದಿರುಗಿ ಬಿಡೋಣ ಎಂದುಕೊಂಡರೂ, ಅರೆ ಮನಸ್ಸಿನಿಂದ ಹಣ ತೆತ್ತು ಗೇಟಿನ ಬಳಿ ಬಂದಳು. ಕನ್ನಡ, ಹಿಂದಿ, ಇಂಗ್ಲೀಷ್ ಬೆರೆಸಿಯೆ ತಾನು ಬಂದ ಉದ್ದೇಶ ತಿಳಿಸಿದಳು.

ಒಮ್ಮೆ ಅಡಿಯಿಂದ ಮುಡಿಯವರೆಗೂ ನೋಡಿದ. ಯಜಮಾನತಿಯ ಒಡನಾಟಕ್ಕೆಂದು ನೇಮಿಸಿಕೊಂಡವರು ಬೇಗ ಬೇಗ ಬದಲಾಗಿದ್ದು, ಅವನಿಗೆ ಶೇಷ ಪ್ರಶ್ನೆ.

ವಾಚ್‌ಮನ್ ದೊರೆಸ್ವಾಮಿ ಈ ಬಂಗ್ಲೆ ಕಾಯುವ ಕೆಲಸಕ್ಕೆ ಬಂದಾಗ ಇಪ್ಪತ್ತರ ಯುವಕ. ಮುರುಳಿ ಕೃಷ್ಣಚೈತನ್ಯರು ಬದುಕಿದ್ದ ಕಾಲ. ಮೆತ್ತಗಿನ ಹೃದಯದ ಸ್ಟ್ರಿಕ್ಟ್ ಮನುಷ್ಯ. ಕಷ್ಟದಲ್ಲಿದ್ದಾಗ ತಾವಾಗಿ ಸಹಾಯ ಮಾಡುವ ಮನುಷ್ಯ, ತಪ್ಪು ಮಾಡಿದಾಗ ಮಾತ್ರ ಶಿಕ್ಷೆ ಭಾರಿಯಾಗಿಯೇ ಇರುತ್ತಿತ್ತು. ದೀಪಾಂಕುರದ ಎಷ್ಟೋ ಜನ ಬದಲಾದರೂ ಅವನು ಮಾತ್ರ ಖಾಯಂ ಆಗಿದ್ದ. ಎಂಟು ದಿನ ಡೇ ಶಿಫ್ಟ್ ಎಂಟು ದಿನ ನೈಟ್ ಡ್ಯೂಟಿ. ದಿನಕ್ಕೆ ಎಂಟು ಗಂಟೆ ಮಾತ್ರ ಕೆಲಸ ಯಜಮಾನಿಯಮ್ಮನನ್ನು ಕಂಡರೆ ಎಷ್ಟು ಭಕ್ತಿಯೋ, ಚಿಕ್ಕೆಜಮಾನರನ್ನು ಕಂಡರೆ ಅಷ್ಟೇ ಭಯ.

ಎಷ್ಟೋ ಸಲ ಅಂದುಕೊಂಡಿದ್ದ. ಯಜಮಾನರು ಮದುವೆಯಾಗಿ ಒಂದು ಹೆಣ್ಣು ದೀಪಾಂಕುರಕ್ಕೆ ಬಂದರೇ ಚೆನ್ನ ಎಂದು. ಆದರೆ ಅದು ಸಾಧ್ಯವೇ ಇಲ್ಲವೆನಿಸಿತು. ಒಬ್ಬೊಬ್ಬರು ಒಂದೊಂದು ರೀತಿ ಆ ಬಗ್ಗೆ ಮಾತಾಡುತ್ತಿದ್ದರೇ ವಿನಃ ಸತ್ಯ ಯಾರಿಗೂ ಗೊತ್ತಿಲ್ಲ.

"ನೀವು ಅವ್ರಿಗೆ ಏನಾಗ್ಬೇಕು ?" ಎಂದ.

ಸ್ವಲ್ಪ ಕಸಿವಿಸಿಯೆನಿಸಿತು ವಾಸಂತಿಗೆ.

"ನಾನು ಅವ್ಳ....ಒಬ್ಳೇ ಕ್ಲೋಸ್ ಫ್ರೆಂಡ್. ಅಷ್ಟೊಂದು ಎನ್‌ಕ್ವೈರಿ ಮಾಡೋ ಅಗತ್ಯವಿಲ್ಲ. ಒಳ್ಗೆ ಬಿಡದಿದ್ದರೆ, ಬೇಡ, ಅವಳನ್ನೆ ಇಲ್ಲಿಗೆ ಕರೆಸಿದ್ರೂ ಸಾಕು" ಸ್ವಲ್ಪ ಸಿಡಿಮಿಡಿಗೊಂಡು ನುಡಿದಳು. ಸ್ವಲ್ಪ ಕೋಪ ಬಂತು ಕೂಡ ಕಣ್ಮಣಿಯ ಮೇಲೆ, ಅದು ಕ್ಷಣಗಳಷ್ಟು ಕಾಲ ಮಾತ್ರ. ಮರುಕ್ಷಣ ಮುದ್ದಾದ, ಶಾಂತವಾದ ಕಣ್ಮಣಿಯ ಮುಖ ನೆನಪಾದರೇ ಅವಳ ಮುಖದ ಬಿಗಿತ ಸಡಿಲವಾಗುತ್ತಿತ್ತು. ಕೆಲವೊಮ್ಮೆ ಕಣ್ಮಣಿಯ ಸ್ನೇಹ ಕೆಲವು ಜನ್ಮಗಳದೇನೋ, ಎಂದು ಭ್ರಮಿತಳಾಗುತ್ತಿದ್ದಳು.

"ಇಲ್ಲಿ ಅಪಾಯಿಂಟ್‌ಮೆಂಟ್ ಇಲ್ದೇ ಯಾರನ್ನು ಭೇಟಿ ಮಾಡೋಹಂಗಿಲ್ಲ. ಅದೂ ಅಲ್ದೇ ಯಜಮಾನ್ರು ಇನ್ನ ಬಂಗ್ಲೆಯಲ್ಲೇ ಇದ್ದಾರೆ" ಎಂದ.

ತಲೆ ಕೆಟ್ಟಂತಾಯಿತು ಅವಳಿಗೆ. ಈಗೇನು ಮಾಡುವುದು? ಕಣ್ಮಣಿಯನ್ನು ನೋಡದೇ ಹಿಂದಿರುಗಲೇ ಬಾರದು ಎನ್ನುವಷ್ಟರ ಮಟ್ಟಿಗಿನ ಒತ್ತಡ.

"ನಂಗೆ ಅದೆಲ್ಲ ಗೊತ್ತಿಲ್ಲ, ಅರ್ಜೆಂಟಾಗಿ ನೋಡಲೇ ಬೇಕಿದೆ." ಗೊಗರೆದು ಪರ್ಸ್‌ನ ಜಿಪ್ ತೆಗೆಯಲು ಹೋದಾಗ ವಾಚ್‌ಮನ್ ತಡೆದ

"ಅದೆಲ್ಲ ಇಲ್ಲಿ ನಡ್ಯೋಲ್ಲ ಮೇಮ್ ಸಾಬ್, ಕೈ ತುಂಬ ಸಂಬಳ ಕೊಡ್ತಾರೆ ಇಂಥ ವಿಷ್ಯ ಯಜಮಾನರವರೆಗೆ ಹೋದರೇ, ನಾನು ಈ ಕಡೆ ಮುಖ ಹಾಕೋಹಂಗಿಲ್ಲ ಗೇಟ್ ತೆರೆದುಕೊಂಡು ತನ್ನ ವಾಚ್ ರೂಮಿನತ್ತ ನಡೆದವನು ಹಿಂದಿರುಗಿ ಬಂದ."

"ಸ್ವಲ್ಪ ಹೊತ್ತು ಕಾಯಿರಿ, ಇಲ್ಲ ಸಂಜೆ ವೇಳೆಗಳಲ್ಲಿ ಬಂದು ಭೇಟಿ ಮಾಡಿ" ಕೈಯಾಡಿಸಿಬಿಟ್ಟ. ವಾಸಂತಿಗೆ ಎಷ್ಟು ರೇಗಿತೆಂದರೆ ಇಡೀ ಶ್ರೀಮಂತ ವರ್ಗಕ್ಕೆ ಛೀಮಾರಿ ಹಾಕುವಷ್ಟು. ಆದರೆ ಅವರ ನೈಜವಾದ ಸ್ಥಿತಿಯ ಬಗ್ಗೆ ಅರಿವಿಲ್ಲ. ಸೋಫಿಸ್ಟಿಕೇಟೆಡ್ ಆದರೂ ನಿರಾತಂಕವಾದ ಜೀವನವಲ್ಲ.

"ಎಷ್ಟು ಹೊತ್ತು ಕಾಯಬೇಕಾಗುತ್ತೆ" ಮತ್ತೆ ಕೇಳಿದಳು."ಒಳ್ಳೆ ಜನ! ದಿನಗಟ್ಟಲೇ ಕಾದವರು ಇದ್ದಾರೆ, ರೆಕಮಂಡೇಷನ್‌ಗೊಸ್ಕರ ಬಂದಿರೋದಾ? ಪಂಢರಿನ ಇಡ್ಕೊಳ್ಳಿ, ತಟ್ಟನೇ ಕೆಲ್ಸವಾಗುತ್ತೆ. ಅವ್ನ ಕಂಡರೆ ಯಜಮಾನರಿಗೆ ವಿಪರೀತ ಅಭಿಮಾನ. ಕೆಲವು ಕೆಲ್ಸಗಳು ಹೂವೆತ್ತಿದಂಗೆ ಆಗಿ ಹೋಗುತ್ತೆ. ಮನೆ ಕಟ್ಸೋಕೆ ಲೋನ್ ಕೊಡ್ಸಿದೋನೇ ಅವ್ನು" ಹೇಳಿದ, ಕಾಣದ ಪಂಢರಿಯ ಬಗ್ಗ ಅವಳಿಗೆ ಚಿಟ್ಟೆನಿಸಿತು.

"ಪ್ಲೀಸ್ ಅರ್ಥಮಾಡ್ಕೊಪ್ಪ! ನಂಗೆ ಖಂಡಿತ ಯಾರ್ದೇ ರೆಕಮಂಡೇಷನ್ ಬೇಡ. ಕಣ್ಣಣ ನನ್ನ ಫ್ರೆಂಡ್, ಅರ್ಜೆಂಟಾಗಿ ಅವ್ನನ ನೋಡೋಕ್ಬಂದೆ. ಸಾಧ್ಯವಾದರೇ, ಒಂದಿಷ್ಟು ಸಹಾಯ ಮಾಡು" ಎಂದಳು. ಒಂದಿಷ್ಟು ತಾಳ್ಮೆ ಕಳೆದುಕೊಂಡಳು ಕೂಡ. ಅದು ಅವಳಂಥವರಿಗೆ ಅಲ್ಲಿ ಹೆತ್ತವರ ಬೆಚ್ಚನೆಯ ಸ್ಪರ್ಶದಲ್ಲಿ, ಅಕ್ಕರೆಯಲ್ಲಿ ಬೆಳೆದಂಥವರಿಗೆ ಅಂಥದ್ರಲ್ಲಿ ವಾಸಂತಿಯಂಥವರಿಗೆ ಅದರಿಂದ ಆಪತ್ತೆ ಹೆಚ್ಚು.

"ಒಂದಿಷ್ಟು ಕಾಯಿರೀ, ಮೇಡಮ್" ಫೋನೆತ್ತಲು ಹೋದ.

ಅವನಿಗೆ ರಿಂಗ್ ಬಂತು. ಮ್ಯಾನೇಜರ್ ರಾತ್ರಿ ಡ್ಯೂಟಿಗೆ ಅವನನ್ನೆ ಇರುವಂತೆ ಆದೇಶಿಸಿ ಫೋನಿಟ್ಟಾಗ ಸುಮ್ಮನಾದ 'ಯಥಾ ರಾಜ, ತಥಾ ಪ್ರಜಾ' ಎನ್ನುವಂತೆ ಯಜಮಾನನಂತೆ, ಮ್ಯಾನೇಜರ್ ಕೂಡ ಸಿಟ್ಟಿನ ಮನುಷ್ಯ, ಅಷ್ಟೇ ಶಿಸ್ತಿನ ವ್ಯಕ್ತಿ.

ಹೊರಗೆ ಬಂದು ಮೌನವಾಗಿ ನಿಂತ. ವಾಸಂತಿ ಸುಮ್ಮನೆ ಅಡ್ಡಾಡಿದಳು. ಇಂಥ ದೊಡ್ಡ ಬಂಗಲೆಗಳ ಮುಂದೆ ಅಡ್ಡಾಡುವುದು ಅಪಾಯವೆಂದು ಅವಳಿಗೆ ಗೊತ್ತು. ಅರ್ಧ ಕಿಲೋಮೀಟರ್ ಮುಂದಕ್ಕೆ ಹೋದವಳು ಹಿಂದಿರುಗಿ ಬಂದು ನಿಂತಳು.

"ಇರೀ...." ಎಂದು ಒಳಗೆ ಹೋಗಿ ಫೋನ್‌ನಲ್ಲಿ ವಿಷಯ ಮುಟ್ಟಿಸಿದ. "ಅವ್ರು ಕಣ್ಮಣಿ ಮೇಮ್ ಸಾಬ್‌ನ ನೋಡ್ಬೇಕಂತೆ" ಅವರು ಫೋನ್‌ನ ವಾಸಂತಿಗೆ ಕೊಡಲು ತಿಳಿಸಿದರು. "ಈಗ ಭೇಟಿ ಮಾಡೋಕ್ಕಾಗೋಲ್ಲ, ಅಮ್ಮಾವ್ರಿಗೆ ಎಕ್ಸರ್‌ಸೈಜ್ ಮಾಡ್ಕೋ ಸಮಯ, ತೀರಾ ಅರ್ಜೆಂಟಾದ್ರೆ ಹನ್ನೊಂದುವರೆಗೆ ಬಂದು ಭೇಟಿ ಮಾಡಿ" ಫೋನಿಟ್ಟೇಬಿಟ್ಟರು. ಇಂಥ ಧಿಮಾಕುಗಳು ಸಹಜವೆಂದುಕೊಂಡರೂ, ಆ ಕ್ಷಣ ರೇಗಿತು. ರಿಸೀವರ್ ಇಟ್ಟು ಗೇಟಿನಿಂದ ಹೊರಗೆ ಬಂದು ಉದ್ದಕ್ಕೂ ನೋಡಿದಳು. ಸ್ವಚ್ಛವಾದ ಅಗಲವಾದ ಮುಚ್ಚಿದ ಚರಂಡಿ ರಸ್ತೆಯ ಎರಡು ಬದಿಗೂ ಅಲ್ಲಲ್ಲಿ ಮರಗಳನ್ನು ನೆಟ್ಟು ಸುಂದರವಾಗಿರಿಸಿದ್ದ ಸಿರಿವಂತರ ಬಡಾವಣೆ ನೋಡುವಂತಿತ್ತು.

ಸಮೀಪದ ಬಸ್ಸು ಸ್ಟಾಪ್‌ವರೆಗೂ ಬಂದವಳು ಹತ್ತಿರದ ಟೆಲಿಫೋನ್ ಬೂತ್‌ನಿಂದ ನಂದಾ ಟೆಕ್ಸ್‌ಟೈಲ್‌ಗೆ ಒಂದು ದೊಡ್ಡ ಸುಳ್ಳನ್ನು ಹೇಳಿ ಅರ್ಧ ದಿನ ರಜ ಪಡೆಯುವಲ್ಲಿ ಯಶಸ್ವಿಯಾದಳು. ಕಣ್ಮಣಿಯನ್ನು ನೋಡಿಯೇ ಹೋಗಬೇಕೆಂಬ ಪ್ರಬಲ ನಿರ್ಧಾರ ಅವಳದು. ಅದಕ್ಕಿಂತ ಇಂದು ಆ ವ್ಯಕ್ತಿಯನ್ನು ನೋಡಬೇಕು. ಕಣ್ಮಣಿಯ ನೆನಪಿನಲ್ಲಿ ಉಳಿದು ಕಾಡುವಂಥ ವಿಶೇಷತೆ ಅವನಲ್ಲಿ ಏನಿದೆ? ಮುಚ್ಚಿದ ವಿಂಡ್‌ಗಳ ಎ.ಸಿ. ಕಾರಿನಲ್ಲಿ ಓಡಾಡುವ ಆ ವ್ಯಕ್ತಿಯನ್ನು ರೋಡಿನಲ್ಲಿ ನೋಡುವುದು ಸುಲಭಾನಾ? ಆಫೀಸ್‌ನಲ್ಲಿ ಮೀಟ್ ಆಗಬೇಕು, ಅಥವಾ ಬಂಗ್ಲೆಯಲ್ಲಿ ನೋಡಬೇಕು. ಅದಕ್ಕೆ ಒಂದು ಸರಿಯಾದ ಕಾರಣ ಬೇಕು.

ಇಲ್ಲೆಲ್ಲ ಕಾಯುವುದರಲ್ಲಿ ಅರ್ಥವಿಲ್ಲವೆಂದುಕೊಂಡಾಗ ಬೇಸರದಿಂದ ಮತ್ತೆ ರೋಡಿನಲ್ಲಿ ಹೆಜ್ಜೆ ಹಾಕತೊಡಗಿದಳು. ಹಲವು ಸಲ ನೋಡಿದ ರಿಸ್ಟ್‌ವಾಚ್‌ನ ಕಡೆ ಮತ್ತೊಮ್ಮೆ ನೋಡಿ ತಲೆಯೆತ್ತುವ ವೇಳೆಗೆ ದೊಡ್ಡ ಗೇಟು ತೆರೆದುಕೊಂಡು ಮರ್ಸಿಡಿಸ್ ಬೆಂಜ್ ಕಾರು ಹೊರ ಹೋಗಿ ಮತ್ತೆ ಗೇಟು ಮುಚ್ಚಿಕೊಂಡಿತು. ಇದು ಕೆಲವು ಕ್ಷಣಗಳಲ್ಲಿ ನಡೆದು ಹೋಯಿತು. ಆಮೇಲೆ ಹತ್ತು ನಿಮಿಷಕ್ಕೆ ಒಂದು ಅಂಬಾಸಿಡರ್ ಕಾರು ಬಂದಿದ್ದು, ಇವಳಿಂದ ಎರಡು ಮೀಟರ್ ಮುಂದಕ್ಕೆ ಹೋದ ಕಾರು ಹಿಮ್ಮುಖವಾಗಿಯೆ ಹಿಂದಕ್ಕೆ ಬಂತು.

ಹಿಂದಿನ ಸೀಟಿನಲ್ಲಿ ಕೂತಿದ್ದ ವ್ಯಕ್ತಿ ತಲೆ ಹೊರಗೆ ಹಾಕಿ "ನೀನು ಕಣ್ಮಣಿಯ ಫ್ರೆಂಡಾ? ಈಗ ಹೋಗಿ ನೋಡು'' ಹೇಳಿದರು

ಉಸಿರೆಳೆದುಕೊಂಡು "ಥ್ಯಾಂಕ್ಯೂ ಸರ್." ಎಂದಳು. ಚೈತನ್ಯ ಅವರ ಪಿ. ಎ. ಅವರೆಂದು ಅವಳಿಗೆ ಗೊತ್ತಿಲ್ಲ.

ವಾಚ್‌ಮನ್‌ಗೆ ಮೊದಲೇ ಆರ್ಡರ್ ಆಗಿರಬಹುದು. ಮಾತಾಡದೆ ಗೇಟು ತೆರೆದ. ಒಳಗಿನ ದೃಶ್ಯ ನೋಡಿ ನಿಬ್ಬೆರಗಾದಳು. ಇಂಥ ಸುಂದರವಾದ ಹೊರ ಮೈ ಹೊಂದಿರುವ ಬಂಗ್ಲೆ, ಗಾರ್ಡನ್‌ನ ಅವಳು ನೋಡಿಯೇ ಇರಲಿಲ್ಲ. ದಿಟ್ಟವಾಗಿ ಒಳಗಡಿಯಿಟ್ಟ ಹೆಜ್ಜೆಗಳು ಸಂಕೋಚಿಸಿದವು. ಈ ಶ್ರೀಮಂತಿಕೆಗೂ, ತಾನು ವಾಸಿಸುತ್ತಿದ್ದ ವರ್ಕಿಂಗ್ ಉಮನ್ಸ್ ಹಾಸ್ಟಲ್‌ನ ವಾತಾವರಣ ನೆನಪಿಸಿಕೊಂಡಳು. ಎಲ್ಲಿಂದ ... ಎಲ್ಲಿಗೆ? ಭೂಮಿಗೂ ಆಕಾಶಕ್ಕೂ ಇರುವ ಅಂತರ.

ಕಾದಿದ್ದವಳಂತೆ ಎದುರಾಗಿ ತನ್ನ ರೂಮಿಗೆ ಕರೆದೊಯ್ದಳು. ಮಂಚ, ಡ್ರೆಸ್ಸಿಂಗ್ ಟೇಬಲ್, ಬೀರು, ಸೋಫಾ ಎಲ್ಲಾ ಇದ್ದ ಸೊಫಿಸ್ಟಿಕೇಟೆಡ್ ರೂಮು - ತನ್ನ ಇಡೀ ಸಂಬಳವನ್ನು ತೆತ್ತು ಎರಡು ಮೂರು ದಿನ ಇಂಥ ಕೋಣೆಯಲ್ಲಿ ವಾಸವಾಗಿರಬಹುದು ಎಂದುಕೊಂಡಳೇ ವಿನಃ 'ಸಾಧ್ಯ' ಅಂದುಕೊಳ್ಳಲಿಲ್ಲ. ಅವಳ ಬದುಕಿಗೆ ಒಂದು ಪರಿಮಿತಿ ಇತ್ತು. ಅದನ್ನು ವಿಷಯದ ಮೇಲೆ ಗಂಭೀರವಾಗಿ ವಾದ ಮಾಡುತ್ತಿದ್ದರು. ಅದು ಆಕೆಗೂ ಇಷ್ಟ. ಬೇರೆ ಬೇರೆ ವಿಷಯಗಳ ಪ್ರಸ್ತಾಪ ಸ್ವಂತದ ವೇದನೆ, ನೋವನ್ನು ಕೆಲವು ಕ್ಷಣಗಳಾದರೂ ಮರೆಸುತ್ತೆ. ಇದು ಆಕೆಗೆ ಕಡಿಮೆಯ ವಿಚಾರವಲ್ಲ.

"ಮನಸ್ಸು ಕನ್ನಡಿಯಂತೆ. ಸದಾ ನಿರ್ಮಲವಾಗಿರಬೇಕು. ಅಲ್ಪ ಸ್ವಲ್ಪ ಕೂಡ ಧೂಳು ಕಸ ಸೇರಬಾರದು. ಆಗಿನ ಪ್ರತಿಫಲನವೆ ಬೇರೆಯಾಗಿ ಬಿಡುತ್ತೆ". ಸಿಸ್ಟರ್ ಮಾತುಗಳನ್ನು ಎಲ್ಲರು ಒಪ್ಪಬೇಕಾದ್ದೆ. ಯಾವ ವಿಷಯದ ಮೇಲೆ ಮಾತುಕತೆ ಷುರುವಾಗಿದೆಯೆಂದು ಗೊತ್ತಿಲ್ಲದಿದ್ದರಿಂದ ಸುಮ್ಮನೆ ಕೂತಳು ಕಣ್ಮಣಿ.

"ಯು ಆರ್ ಕರೆಕ್ಟ್, ಆದರೆ ಸ್ವಚ್ಛ ಕನ್ನಡಿಗೆ ಒಂದು ಕಲ್ಲು ಎಸೆದರೇ ಚೂರು ಚೂರು. ಅದು ಉಪಯೋಗಕ್ಕೆ ಬರದಂತಾಗ್ಬಿಡುತ್ತೆ. ಬರೀ ಸ್ವಚ್ಛವಾಗಿದ್ದರೇ ಸಾಲ್ದು, ಬಹಳ ಎಚ್ಚರವಾಗಿ ಇರ್ಬೇಕು" ಹೇಳಿದರು ಸುಬ್ಬಲಕ್ಷ್ಮಿ. 'ಗುಡ್ ಲಾಜಿಕ್' ಎನಿಸಿತು ಅವಳಿಗೆ. ಅನುಭವಯುತ ಅವರುಗಳ ಮಾತುಗಳು ಹೆಚ್ಚು ಶ್ರೇಷ್ಠವೆನಿಸಿತು.

ಅವಳತ್ತ ನೋಟ ಹರಿಸಿದ ಸುಬ್ಬಲಕ್ಷ್ಮಿ "ನಿನ್ನ ಫ್ರೆಂಡ್ ಹೋಗಿ ಆಯ್ತಾ?" ವಿಚಾರಿಸಿದರು. ಅವರವರೆಗೆ ನ್ಯೂಸ್ ತಂದು ತಲುಪಿಸಿದವನು

ಪಂಢರಿಯೇ ಎಂದುಕೊಂಡು "ಈಗ ಹೋದ್ಲು!" ಸ್ವಲ್ಪ ಸಂಕೋಚಿಸಿತು ಅವಳ ದನಿ.

ಸಿಸ್ಟರ್ ಎದ್ದು ಹೊರಗೆ ಹೋದ ಮೇಲೆ "ಇನ್ನು ತಿಂಡಿ ತಗೊಂಡಿಲ್ಲಾಂತ, ಪಂಢರಿ ಹೇಳ್ದ. ಹೋಗಿ.. ತಗೋ" ಕಳಿಸಿದ. ಸುಬ್ಬಲಕ್ಷ್ಮಿ ನಿರ್ಜೀವವಾಗಿ ಮಲಗಿದ ತಮ್ಮ ಕೈಗಳತ್ತ ನೋಡಿಕೊಂಡರು. ಈ ಕೈಗಳಿಗೆ ಮೇಲೇಳುವ ಶಕ್ತಿ ಬಂದರೇ, ಲಕ್ಷಲಕ್ಷಗಳನ್ನು ದೇಣಿಗೆಯಾಗಿ ನೀಡಬಲ್ಲ ಮುರುಳಿ ಕೃಷ್ಣ ಚೈತನ್ಯ. ಲಕ್ಷಾಂತರ ರೂಪಾಯಿಗಳು ನೀರಿನಂತೆ ಖರ್ಚಾಗಿತ್ತೇ ವಿನ ಯಾವುದೇ ಪ್ರಯೋಜನವಾಗಿರಲಿಲ್ಲ. ಅಂಥ ಭರವಸೆಯನ್ನು ಕಳೆದುಕೊಂಡಿದ್ದರು. ಮಗನಿಗೊಂದು ಮದುವೆ ಯಾಗಬೇಕು. ಈ ಮನೆಗೆ ಸೊಸೆ ಬರಬೇಕು ಅನ್ನೋಂಥ ಒಂದು ಆಸೆ. ಅದು ಬರೀ ಆಸೆಯೆ!

ಇಂದು ಡಾಕ್ಟರ್ ಬಂದಿದ್ದು ಲೇಟಾಗಿಯೇ. ಮಾಮೂಲಿನಂತೆ ಚೆಕ್‌ಅಪ್ ಮುಗಿಯಿತು, ಆಕೆಯ ಫುಡ್‌ನಿಂದ ಹಿಡಿದು ಎಲ್ಲಾ ವಿಚಾರಿಕೊಂಡರು ಮಾಮೂಲಾಗಿ. ಸಿಸ್ಟರ್‌ನ ಕೇಳಿದರು. ಕೆಲವು ಸಜೆಷನ್ ನೀಡಿದರು.

"ನಿಮ್ಮ ಮಗ ಅಮೆರಿಕಾದಲ್ಲಿನ ನ್ಯೂರೋಸರ್ಜನ್ ಡಾ|| ಥಾಮಸ್ಸನ್ನು ಸಂಪರ್ಕಿಸಿದ್ರಂತೆ. ಒಂದಿಷ್ಟು ಹೋಪ್ಸ್ ಸಿಕ್ಕಿದೆ ಅಂದ್ರು" ಡಾಕ್ಟರ್ ತಿಳಿಸಿದಾಗ ಆಕೆಯ ತುಟಿಯಂಚಿನಲ್ಲಿ ವಿಷಣ್ಣತೆಯ ನಗು ಸದ್ದಿಲ್ಲದೆ ಕೂತಿತ್ತು. "ನಂಗೂ ಹೇಳಿ ಸಾಕಾಯ್ತು. ಭರವಸೆಯೇನಿಲ್ಲ. ಬದ್ಕಿರೋವರ್ಗ್ಗೂ ಇದೇ ತರಹ ಇರ್ಬೇಕೂಂತ ದೇವರು ನನ್ನ ಹಣೆಯಲ್ಲಿ ಬರೆದಿರ್ಬೇಕು" ಎಂದರು.

ತಕ್ಷಣ ಪ್ರತಿಕ್ರಿಯಿಸಲು ಡಾಕ್ಟರ್ ನಾಲಿಗೆ ತಡೆದರೂ ವೃತ್ತಿ ಧರ್ಮವನ್ನು ಪಾಲಿಸಬೇಕಿತ್ತು. "ನೋ, ಆ ರೀತಿ ಯೋಚಿಸಬಾರ್ದು. ಕಾಂಫಿಡೆನ್ಸ್ ಮಾತ್ರವೇ ನಿಮ್ಮ ಕೈಕಾಲುಗಳಿಗೆ ಶಕ್ತಿ ನೀಡಬಲ್ಲುದು". ಕರ್ತವ್ಯ ಪೂರೈಯಿಸಿದಂತೆ ನಡೆದರು. ಪ್ರತಿ ತಿಂಗಳು ದೊಡ್ಡ ಮೊತ್ತದ ಚೆಕ್ ಇವರ ಬ್ಯಾಂಕ್ ಆಕೌಂಟ್‌ಗೆ ಜಮೆಯಾಗುತ್ತಿತ್ತು. ಇಂಥ ಬೆರಳೆಣಿಕೆಯ ರೋಗಿಗಳ ಅಗತ್ಯ ಪ್ರತಿ ಡಾಕ್ಟರಿಗೂ ಇರುತ್ತದೆಯೆಂದು ಅವರ ಅಭಿಪ್ರಾಯ.

ಸಿಸ್ಟರ್ ಒಂದೆರಡು ಗಂಟೆಗಳ ಪರ್ಮಿಷನ್ ಪಡೆದು ಹೊರಟಾಗ ರೂಮಿನಲ್ಲಿ ಉಳಿದಿದ್ದು, ಕಣ್ಣಮ್ಮ, ಸುಬ್ಬಲಕ್ಷ್ಮಿ ಮಾತ್ರ. ಇಣಕಿದ ಪಂಢರಿ ನೇರವಾಗಿ ಬಂದು ಮಂಚದ ಬಳಿ ನಿಂತ.

"ಸಿಸ್ಟರ್ ಎಲ್ಹೋದ್ರು?" ಕೇಳಿದ.

"ನಾಯಿಯ ಹಾಗೆ ವಾಸ್ನೇ ಇಡ್ಕಂಡ್... ಬಂದ್ಬಿಡ್ತಿಯಲ್ಲ, ಸುಮ್ನೆ ಇಲ್ಲಿ ಕೂತು ಮ್ಯಾಗಝೀನ್ ತಿರುವಿಹಾಕೋ ಬದ್ಲು, ಹೊರ್ಗಡೆ ಹೋಗಿದ್ದಾಳೆ" ಸುಬ್ಬಲಕ್ಷ್ಮಿ ರೇಗಿದರು.

"ಅದ್ಕೆ ಯಜಮಾನರ ಪರ್ಮಿಷನ್ ಸಿಕ್ಕಿದ್ಯಾ?" ಪಾಟಿ ಸವಾಲಿಗೆ ನಿಂತ. ಆಕೆ ನಕ್ಕುಬಿಟ್ಟರು "ಹೋಗಿ, ಕೆಲ್ಸ ನೋಡ್ಕೋಗು ಪಂಢರಿ. ನಂಗೆ ಹೇಳಿ ಪರ್ಮಿಷನ್ ತಗೊಂಡ್ಹೋಗಿದ್ದಾಳೆ, ಹೋಗ್ಲಿ".

"ನಾನಂತು ಹೇಳೋನೇ! ಇವೆಲ್ಲ ಯಾರು ಹೇಳ್ಬೇಕು. ಮುವತ್ತು ದಿನಕ್ಕೆ ಇಷ್ಟೊಂದು ಸಂಬ್ಳ ತಗೋತಾಳೆ" ಗೊಣಗಿಕೊಂಡೇ ಹೋದ.

ಪಂಢರಿ ಪ್ರಾಮಾಣಿಕತೆಯ ಬಗ್ಗೆ ತಿಳಿದಿದ್ದ ಸುಬ್ಬಲಕ್ಷ್ಮಿ ಅವನನ್ನು ಏನು ಅನ್ನಲಾರದೆ ಹೋಗುತ್ತಿದ್ದರು. ಇಲ್ಲಿಗೆ ಅವನ ಅಗತ್ಯ ಎಷ್ಟಿದೆಯೆಂದು ಆಕೆಗೆ ಗೊತ್ತು.

"ನಿನ್ನ ಫ್ರೆಂಡ್ .. ಏನ್ಮಾಡ್ತಾಳೆ?" ಕೇಳಿದರು.

"ನಂದಿನಿ ಟೆಕ್ಸ್‌ಟೈಲ್‌ನಲ್ಲಿ ಸೇಲ್ಸ್ ಗರ್ಲ್ ಆಗಿದ್ದಾಳೆ. ಇಬ್ರೂ ಒಂದೇ ವರ್ಕಿಂಗ್ ವುಮನ್ಸ್ ಹಾಸ್ಟಲ್‌ನಲ್ಲಿ ಇದ್ದಿ". ಇನ್ನೊಂದು ಪ್ರಶ್ನೆ ಅನಗತ್ಯವೆಂದು ಸ್ವಲ್ಪ ವಿಸ್ತರಿಸಿಯೇ ಹೇಳಿದಳು.

ಸುಬ್ಬಲಕ್ಷ್ಮಿ ಕಣ್ಮುಚ್ಚಿಕೊಂಡರು. ನಿದ್ದೆ ಬರಲೀ ಬಿಡಲೀ ಒಂದೆರಡು ಗಂಟೆಗಳನ್ನು ಈ ರೀತಿ ಕಳೆಯುವುದು ಅಭ್ಯಾಸ. ಕಣ್ಮಣಿ ಹೊರಗೆದ್ದು ಬಂದಳು ನಿಶಬ್ಧವಾಗಿ. ಮೊದಲ ಸಲ ಅಡಿಗೆಯ ಮನೆಯ ಬಾಗಿಲಲ್ಲಿ ಇಣಕಿದಳು. ಇವಳತ್ತ ನೋಟವರಿಸದೆಯೇ ಪಂಢರಿ ಹಾಡು ಗುನುಗುತ್ತಿದ್ದವನು ನಿಲ್ಲಿಸಿದ.

"ಏನಾದ್ರೂ ಬೇಕಾಗಿತ್ತ, ತಾಯಿ? ಈ ಮನೆ ನೀರಿನ ಗುಣ ಅಂತಾರೆ. ಅವ್ರುಗಳು ಹಿಂದೆ ಹೀಗಾದ್ರೂ ಇರ್ಲಿ... ಇಲ್ಲಿಗ್ಬಂದ ಕೂಡ್ಲೆ ನೂರೆಂಟು ಬೇಡಿಕೆ. ಅಮ್ಮಾವ್ರು, ಯಾಜಮಾನ್ರು ಇದ್ನೆಲ್ಲ ಗಮನಿಸಲಾರರು. ಇದೆಲ್ಲ ಯಕಶ್ಚಿತ್ ವಿಷ್ಯಗಳು. ಆದರೆ ನಾನೊಬ್ಬ ಇದ್ದೀನಲ್ಲ, ಪ್ರತಿಯೊಂದನ್ನು ಗಮನಿಸ್ತೀನಿ" ಬಡಬಡಿಸಿದ. ಕಣ್ಮಣಿಯ ಗಂಟಲಲ್ಲಿ ತೇವವಾರಿತು. ಚುರುಕು ಮಾತಿನ ಈ ಮನುಷ್ಯನ ಮಾತಿನ ವರಸೆ ಚಾಟಿಯೇಟಿನಂತೆ. "ಏನಿಲ್ಲ, ಅಮ್ಮ ನಿದ್ದೆ ಮಾಡ್ತಾ ಇದ್ದಾರೆ. ಸುಮ್ನೆ ಕೂತು ಏನು ತೋಚಲಿಲ್ಲ. ಯಾವುದಾದ್ರೂ ಕೆಲ್ಸ ಮಾಡೋಣಾಂತ ಅಷ್ಟೆ" ಅಲ್ಲೇ ನಿಂತು ಉಸುರಿದಳು.

ಪಂಢರಿ ಒಬ್ಬನೇ ಹೆಡ್‌ಕುಕ್. ಅವನಿಗೆ ಅಸಿಸ್ಟೆಂಟಾಗಿ ಎಷ್ಟೋ ಜನರನ್ನು ನೇಮಕ ಮಾಡಿದರೂ, ಎರಡೇ ದಿನದಲ್ಲಿ ಹೊರಕ್ಕೆ ಕಳಿಸಿ ತಾನೊಬ್ಬನೆ ಉಳಿದುಕೊಂಡಿದ್ದ. ಅದಕ್ಕೆ ಶಿಕ್ಷೆಯೆನ್ನುವಂತೆ ಇಡೀ ಕೆಲಸವನ್ನು ತಾನೊಬ್ಬನೆ ನಿಭಾಯಿಸಿಕೊಳ್ಳುತ್ತಿದ್ದ.

"ನಾನು ಬಹಳ ಅಚ್ಚುಕಟ್ಟಿನ ಮನುಷ್ಯ. ಕೆಲ್ಸಮಾಡಿ ನನ್ನ ಮೆಚ್ಚಿಸೋದು ಕಷ್ಟಾಂತ ಅಮ್ಮಾವ್ರ ಆರೋಪ. ಆದ್ದರಿಂದ ನಾನು ಯಾರ್ಹತ್ರನು ಏನು ಮಾಡಿಸೋಲ್ಲ. ಆ ಸಿಸ್ಟರ್ ತರಹ ನೀನು ಏನಾದ್ರೂ ಓದ್ಕೋ. ಆದರೆ ಬಾಲ್ಕನಿಯಲ್ಲಿ ನಿಲ್ಲೋದಂತು ನಂಗಿಷ್ಟವಾಗೋಲ್ಲ" ಎಚ್ಚರಿಸುವಂತೆ ರಾಗವಾಗಿ ನುಡಿದ.

ಇಂಥ ಮನುಷ್ಯನನ್ನು ಹೇಗೆ ಇಟ್ಟುಕೊಂಡಿದ್ದಾನೆ ಎನ್ನುವಂತೆ ನೋಡಿದ್ದೇ ತಡ "ಏಯ್ ಹುಡ್ಗಿ! ನಾನು ಇಲ್ಲಿ ಇಷ್ಟು ವರ್ಷದಿಂದ ಇದ್ದೀನಿ, ಗೊತ್ತಲ್ಲ! ಹದಿನೈದು ವರ್ಷವಾಯ್ತು. ಎಷ್ಟೋ ಜನ ಬಂದ್ರೂ... ಎಷ್ಟೋ ಜನ ಹೋದ್ರು. ನಾನಂತು ಪರ್ಮನೆಂಟ್ ನಂಗೆ ರಿಟೈರ್ಡ್‌ಮೆಂಟ್, ಕೂಡ ಇಲ್ಲ" ಬಾಗಿಲವರೆಗೂ ಬಂದು ಹೇಳಿ ಹೋದಾಗ ತೆಪ್ಪಗೆ ಹಿಂದಿರುಗಿದಳು ಸುಬ್ಬಲಕ್ಷ್ಮಿಯ ರೂಮಿಗೆ.

ಅಲ್ಲಿ ಎಷ್ಟು ನಿಶಬ್ದವೆಂದರೆ ಸುಬ್ಬಲಕ್ಷ್ಮಿಯವರ ಉಸಿರಾಟ ಮಾತ್ರ ಕೇಳಿಸುತ್ತಿತ್ತು. ತನ್ನ ಉಸಿರಾಟದಿಂದ ಅವರಿಗೆಲ್ಲ ಎಚ್ಚರವಾಗುತ್ತದೆಯೇ ಎಂದು ಉಸಿರು ಬಿಗಿ ಹಿಡಿದು ಕೂತಿದ್ದಳು. ಯಾಕೋ ಆಕೆಯ ಕಾಲುಗಳ ಬಳಿ ಕುಸಿದು ಅಳಬೇಕೆನಿಸಿತು. ಜೀವನ ಪೂರ್ತಿ ತಾನು ಹೀಗೆಯೇ ಇರಬೇಕು. ಚೈತನ್ಯ ಇರೋ ಈ ಬಂಗ್ಲೆಯಿಂದ ಒಮ್ಮೆ ದೂರವಾಗಿಬಿಟ್ಟರೇ, ಮತ್ತೆಂದ್ಗೂ ನೋಡುವ ಅವಕಾಶವೇ ಇಲ್ಲವಾಗಬಹುದೆನಿಸಿದಾಗ, ತಾನು ಶೂನ್ಯದಲ್ಲಿ ಮುಳುಗಿಹೋದಂತೆ ಕಣ್ಮಣಿಗೆ ಭಾಸವಾಯಿತು.

"ಸ್ಟೀರಿಯೋ ಆನ್ ಮಾಡು, ಕಣ್ಮಣಿ" ಎಂದರು ಸುಬ್ಬಲಕ್ಷ್ಮಿ ನಿಶಬ್ದವನ್ನು ಸೀಳಿಕೊಂಡು ಬಂದ ಮಾತಿನಿಂದ ಗಲಿಬಿಲಿಗೊಂಡಳು ಕ್ಷಣ. "ಹಾ, ಹ್ಞೂ..." ಎದ್ದು ಆನ್ ಮಾಡಿ ನಿಂತಾಗ ಆಕೆ ಕರುಣೆಯಿಂದ ನೋಡಿದರು. 'ಅನಾಥೆ' ಹಣೆ ಪಟ್ಟಿಯೊಂದಿಗೆ ಬೆಳೆದ ಅವಳಿಗೆ ಹಿರಿಯರ ಮಮತೆ, ಕಿರಿಯರ ಪ್ರೀತಿ ಸಿಗದೆ ಒಂಟಿ ಗಿಡದಂತೆ ಕಂಡಳು. ಆದರೆ ಏನ್ನೂ ವ್ಯಕ್ತಪಡಿಸದೆ ಕಣ್ಮುಚ್ಚಿಕೊಂಡರು.

ಎರಡಕ್ಕೆ ಸರಿಯಾಗಿ ಫೋನ್ ರಿಂಗಾಯಿತು. ಇಲ್ಲ ಆ ಸಮಯಕ್ಕೆ

ಸುಬ್ಬಲಕ್ಷ್ಮಿಯ ತಲೆ ದಿಂಬಿನ ಬಳಿಯಲ್ಲಿದ್ದ ಪೇಜರ್ ಸದ್ದು ಮಾಡುತ್ತಿತ್ತು. ಇದು ಆಕೆಯ ಲಂಚ್ ಸಮಯ, ನೆನಪಿಸಲೇ ಈ ಕರೆ.

"ಹಲೋ...." ಎಂದಳು.

"ಕಣ್ಮಣಿನಾ? ಎಲ್ಲಿ... ಸಿಸ್ಟರ್? ಡಾಕ್ಟು ಬಂದಿದ್ರಾ?" ಒಂದೇ ಸಲಕ್ಕೆ ಮೂರು ಪ್ರಶ್ನೆಗಳು. "ಹೌದು ಸರ್, ಡಾಕ್ಟ್ರು ಬಂದಿದ್ರು. ಅಮ್ಮ ಮಾತಾಡ್ತಾರೆ" ಎರಡನೇ ಪ್ರಶ್ನೆಯ ಉತ್ತರವನ್ನು ನುಂಗಿ ಆಕೆಯ ಕಿವಿಯ ಬಳಿಗೆ ಸೆಲ್ಯೂಲರ್ ಫೋನ್ ಒಯ್ದು ಮಾತನಾಡಲು ಅನುವಾಗುವಂತೆ ಹಿಡಿದಳು. "ಅಮ್ಮ ಮರುಗೇಲರಾ ತ್ಯಾಗರಾಜನ ಕೀರ್ತನೆ ಕೇಳಿಸ್ತಾ ಇದೆ. ಹೇಗಿದ್ದೀಯಾ? ಈಗ ಸರ್ಯಾಗಿ ಎರ್ಡು ಗಂಟೆ. ನೀನು ಊಟ ತಗೋ. ನಾನು ಒಂದ್ಗಂಟೆ ತಡವಾಗಿ ಬರ್ತಿನಿ" ಮಾತಾಡಿದ. ಆಕೆಯ ಮಾತುಗಳು ಜೇನಿನ ಧಾರೆಯಂತಿತ್ತು. ಮಗನ ಬಗ್ಗೆ ಎಷ್ಟೊಂದು ಎಚ್ಚರ, ಕಾಳಜಿ, ಕಳವಳ - ತಾಯಿಯ ಪೂರ್ತಿ ಮಮತೆಯನ್ನು ಸವಿಯುವುದೊಂದು ಪುಣ್ಯ. ಅದು ಎಲ್ಲರಿಗೂ ಲಭ್ಯವಾಗದೆಂದೆನಿಸಿತು.

ಆ ವೇಳೆಗೆ ಟ್ರಾಲಿಯನ್ನು ತಳ್ಳಿಕೊಂಡು ಬಂದ ಪಂಢರಿ ಭುಜದ ಮೇಲಿನ ಟವಲನ್ನು ಸೊಂಟಕ್ಕೆ ಸುತ್ತಿಕೊಂಡು "ಇನ್ನು ಬರ್ಲಿಲ್ವಾ, ಸಿಸ್ಟರಮ್ಮ? ಅಮ್ಮಂಗೇ ಲಂಚ್ ಟೈಮ್ ಅನ್ನೋ ಕಾಮನ್‌ಸೆನ್ಸ್ ಕೂಡ ಇಲ್ಲ. ಈ ಪಾಟಿ ಕೆಲ್ಸಕ್ಕೆ ಎರ್ಡು ಪಟ್ಟು ಸಂಬಳ" ಗೊಣಗುಟ್ಟುತ್ತಲೇ ತಟ್ಟೆ ತೆಗೆದುಕೊಂಡ. ಅವನದು ವಿಪರೀತ ರುಚಿ, ರುಚಿ. ಪಂಢರಿಗೆ ಅವನೇ ಸಾಟಿ.

ಸ್ಪ್ರಿಂಗ್‌ಗಳನ್ನು ತಿರುವಿ ಮಂಚದ ಬೆನ್ನಿನ ಭಾಗವನ್ನು ಎತ್ತಿ ಕೂಡಿಸುವಂತೆ ನಿಲ್ಲಿಸಿ ಟೈಟ್ ಮಾಡಿದ್ದರು ಕಣ್ಮಣಿ, ಪಂಢರಿ.

"ಯಾಕೋ ಹಸಿವೇ ಇಲ್ಲ" ಎಂದರು ಆಕೆ.

"ಹುಳಿ ಪಾತ್ರ ಮೇಲಿನ ಮುಚ್ಚಳ ತೆಗ್ದು ಕೊಡ್ತೀ ನಿಮ್ಗೆ ಹಸಿವು ಷುರುವಾಗುತ್ತೆ ನೋಡಿ" ಟ್ರಾಲಿಯನ್ನು ಇನ್ನಷ್ಟು ಹತ್ತಿರಕ್ಕೆಳೆದುಕೊಂಡು ತಟ್ಟೆ ತರೆದ. ಹಬೆಯಾಡುವ ಬಿಸಿ ಬಿಸಿಯ ಪದಾರ್ಥಗಳೇ ಎಲ್ಲಾ. "ಪಂಢರಿ ನೀನು ಮಾತಾಡ್ದೇ ಸ್ವಲ್ಪ ಹೊರ್ಗೆ ಹೋಗಿ ನಂಗೆ ಕಣ್ಮಣಿ ಊಟ ಮಾಡಿಸ್ತಾಳೆ" ಎಂದರು. ಇನ್ನು ಸಿಸ್ಟರ್ ಬಗ್ಗೆ ನೂರು ಗೊಣಗುತ್ತಾನೆಂದು ಆಕೆಗೆ ಗೊತ್ತು.

"ನಾನು ಮಾತಾಡೋದೇ ನಿಮ್ಗೆ ಇಷ್ಟರಾಗೋಲ್ಲ. ಸ್ವಲ್ಪವಾದ್ರೂ ಹಣ ತಗೊಂಡ ಜನಕ್ಕೆ ಪ್ರಾಮಾಣಿಕತೆ ... ಬೇಡ್ವಾ? ಸದ್ಯ ನೀವು ಸರ್ಯಾಗಿ

ಊಟ ಮಾಡಿ" ಮತ್ತೆ ಟವಲು ಬಿಚ್ಚಿ ಹೆಗಲ ಮೇಲೆ ಹಾಕ್ಕೊಂಡು ಹೋದ.

ಅಂದು ಎರಡು ತುತ್ತು ಹೆಚ್ಚಾಗಿಯೇ ಅಕ್ಕರೆಯಿಂದ ತೃಪ್ತಿಯಿಂದ ತಿಂದರು ಸುಬ್ಬಲಕ್ಷ್ಮಿ. ಮಗಳ ಪ್ರೀತಿ ಗೊತ್ತಿಲ್ಲ. ಸೊಸೆಯನ್ನು ಕಂಡಿರಲಿಲ್ಲ. ಅವರಲ್ಲಿ ಒಪ್ಪಳಾಗಿ ಕಂಡಿದ್ದಳು ಕಣ್ಮಣಿ. ಅವಳು ಮಾಡುವ ಕೆಲಸದಲ್ಲಿ ಪ್ರೀತಿ, ಶ್ರದ್ಧ ಇತ್ತು. ಬರೀ ಸಂಬಳಕ್ಕಾಗಿ ಯಾಂತ್ರಿಕವಾಗಿ ಕೆಲಸ ಮಾಡುವ ಜನರನ್ನು ಇದುವರೆಗೆ ಕಂಡಿದ್ದರು. ಅವರಲ್ಲಿ ಕಣ್ಮಣಿ ಒಬ್ಬಳಾಗಿರಲಿಲ್ಲ. ನೀರು ಕುಡಿಸಿ ಮೂತಿಯೊರಸುವ ವೇಳೆಗೆ ಸಿಸ್ಟರ್ ಏದುಸಿರು ಬಿಡುತ್ತ ಬಂದಳು.

"ಸಾರಿ ಮೇಡಮ್, ಎಕ್ಸ್‌ಟ್ರೀಮ್ಲಿ... ಸಾರಿ! ಮತ್ತೆಂದೂ ಹೀಗಾಗೊಲ್ಲ. ಪಂಢರಿಯವ್ರು ಯಜಮಾನರವರ್ಗ್ಳ ದೂರನ್ನೊಯ್ದು ಬಿಡ್ತಾನೆ. ಕೆಲವನ್ನು ಕ್ಷಮಿಸೋಲ್ಲ" ಧಾವಂತದಿಂದ ಉಸುರಿದಳು.

ಹಿಂದೆಯೇ ಬಂದ ಪಂಢರಿ "ಮತ್ತೇನಾಗುತ್ತ, ಇಲ್ಲಿ ಇಡೀ ದಿನ ಕೂತು ಮ್ಯಾಗಝೀನ್ ಓದೋದೋ, ಇಲ್ಲ ಬಾಲ್ಕನಿಯಲ್ಲಿ ನಿಂತು ನೋಡುವುದು ತಪ್ಪಿಹೋಗಿ, ಆರಾಮಾಗಿ ಸರ್ವಿಂಗ್‌ಹೋಂನಲ್ಲಿ ಓಡಾಡಿಕೊಂಡಿರುತ್ತೀರಿ" ಪಟ್ಟಕ್ಕನೆ ಮುಖದ ಮೇಲೊಡೆದಂತೆ ಮಾತಾಡಿ ಮತ್ತೆ ಹೋದ.

"ಸಿಸ್ಟರ್, ಹೋಗಿ ಊಟ ಮಾಡ್ಕೋಗು. ಅವ್ನು ಮಾತಾಡೋದೇ.. ಹಾಗೇ! ಅವನ್ನ ಇಲ್ಲಿಗ ಕಳ್ಸು .. ನಾನು ಮಾತಾಡ್ತೀನಿ" ಕಳಿಸಿದರು ಬಲವಂತದಿಂದ. ವಿಪರೀತ ಮಾತಿನ ಪಂಢರಿಯ ಮನಸ್ಸು ಒಳ್ಳೆಯದೆಂದು ಅವರಿಗೆ ಗೊತ್ತು.

"ಅಮ್ಮ, ಮಂಚ ಸರಿ ಮಾಡ್ಲಾ?" ಕೇಳಿದಳು.

"ಹಾಗೇ ಇರ್ಲಿ, ಚೈತನ್ಯ ಬರೋವರ್ಗ್ಳೂ, ನೀನು ಹೋಗಿ ಊಟ ಮಾಡ್ಕೊಂಡ್ಬಾ" ಆದೇಶವಿತ್ತರು. "ಆಮೇಲೆ ಮಾಡ್ತೀನಿ. ಬಲವಂತ ಮಾಡಿ ಚಪಾತಿ ಒಂದರ ಮೇಲೊಂದು ಹಾಕ್ಬಿಟ್ರು... ಪಂಢರಿ" ಎಂದಳು. ಇದು ದೂರಲ್ಲ, ಮೆಚ್ಚಿಗೆಯ ಮಾತೇ.

ಆಕೆಯ ತುಟಿಯಂಚನ್ನು ಮುಗ್ಧ ಮಾಸದ ನಗು ಅಲಂಕರಿಸಿತು "ಬರೀ ಬಾಯಿ ಬಡಕ; ಮನಸ್ಸು ಮಾತ್ರ ಒಳ್ಳೇದು. ನಮ್ಮ ಚೈತನ್ಯಗೆ ಅವನೂಂದ್ರೆ... ಬಹಳ ಇಷ್ಟ. ಕೆಲವನ್ನು ಸೈರಿಸಿಕೊಂಡಿರೋದು, ಅದಕ್ಕೇನೇ. ಬಂಗ್ಲೆಯಲ್ಲಿನ ವಿಷ್ಯಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಕೊಡೋದು ಅವ್ನ ಮಾತಿಗೇನೇ. ಅದ್ಕೆ ಕಾರಣ... ಅವ್ನ ಪ್ರಾಮಾಣಿಕತೆ. ಈ ಮನೆಗೋಸ್ಕರ ಪ್ರಾಣ ಬೇಕಾದ್ರೂ ಕೊಡ್ತಾನೆ. ಅಂಥವರು ಎಲ್ಲಿ ಸಿಕ್ತಾರೆ?" ಮನದಲ್ಲಿದನು ತೋಡಿಕೊಂಡರು

ಮುಕ್ತವಾಗಿ. ಈಗಾಗಲೇ ವರ್ಷದಿಂದ ಇಲ್ಲೇ ಇರುವ ಸಿಸ್ಟರ್ ಮುಂದೆ ತೋಡಿಕೊಳ್ಳದ ಎಷ್ಟೋ ವಿಷಯಗಳನ್ನು ಬರೀ ಇಪ್ಪತ್ತೆಂಟು ದಿನಗಳಿಂದ ಇದ್ದ ಕಣ್ಮಣಿಯೊಂದಿಗೆ ಹೇಳಿಕೊಳ್ಳಲು ಅಷ್ಟು ದೊಡ್ಡ ಕಾರಣವಿಲ್ಲವೆಂದುಕೊಂಡರೂ ಆಕೆಯ ಮನಕ್ಕೆ ಸಮೀಪವಾಗಿದ್ದಳು.

ಕಣ್ಮಣಿ ಮೌನವಹಿಸಿದಳು. ಅವಳೇನಾದರೂ ಹೇಳಲು ಹೋದರೆ ಅಸಂಬದ್ಧವೇ. ಅಂಥ ಸಮಯದಲ್ಲಿ 'ಮೌನ' ವಹಿಸುವ ಪಾತ್ರ ತೀರಾ ಅರ್ಥಪೂರ್ಣ. ಅದಕ್ಕಾಗಿ ಕೆಲವು ಬುದ್ಧಿವಂತರು 'ಮೌನ'ವನ್ನು ಆಶ್ರಯಿಸುತ್ತಿದ್ದರು.

ಅಷ್ಟರಲ್ಲಿ ಬಾಗಿಲ ಬಳಿ ಸಿದ್ಧವಾದ ಪಂಥರಿ "ನೀವು, ಊಟ ಮಾಡೋದಿಲ್ವೊ?" ಹಿಂದುಗಡೆ ಕೈಕಟ್ಟಿಕೊಂಡು ನಿಂತ. ಅವನತ್ತ ನೋಟ ಹರಿಸಿದ ಸುಬ್ಬಲಕ್ಷ್ಮಿ "ನಿಂದು ತುಂಬ ಪಾರುಪತ್ಯವಾಯ್ತು. ನಾನು ಎದ್ದು ಓಡಾಡೋ ಹಂಗಾದ್ರೆ... ನಿನ್ನ ಮೊದ್ಲು ಹೊರ್ಗೆ ಹಾಕ್ತೀನಿ. ಎಷ್ಟೊಂದು ಮಾತಾಡ್ತೀಯಾ" ಮೃದುವಾಗಿ ಮೂದಲಿಸಿದರು.

ಮೂರು ಸುತ್ತು ತಿರುಗಿ ದೀರ್ಘ ದಂಡ ನಮಸ್ಕಾರ ಹಾಕಿ "ಆ ದಿನ ಬೇಗ ಬರ್ಲಿ. ನಾನು ತಿರುಪತಿ ವೆಂಕಟರಮಣನಿಗೆ ಒದ್ದೆ ಬಟ್ಟೆಯಲ್ಲಿ ಕಾಲ್ನಡಿಗೆಯಲ್ಲಿ ಬೆಟ್ಟ ಹತ್ತಿ ಬರ್ತೀನೀಂತ ಹರಕೆ ಮಾಡ್ಕೊಂಡಿದ್ದೀನಿ. ಮುಗ್ಸಿ ಕೊಂಡ್ಬಂದಂದು ಈ ಬಂಗ್ಲೆ ವಾಚ್‌ಮೆನ್ ಕೆಲ್ಸಕ್ಕೆ ಸೇರ್ಕೊಂಡ್‌ಬಿಡ್ತೀನಿ. ಹೊರ್ಗೆ ಹಾಕ್ತೀನೀಂತ ತಾನೇ ನೀವು ಹೇಳೋದು, ಹೊರಗಡೆ ಇರೋಕೆ ನಿಮ್ಮ ವಿರೋಧವೇನಿಲ್ಲವಲ್ಲ" ವಾದಕ್ಕೆ ನಿಂತ.

"ಸ್ವಲ್ಪ ಹೊತ್ತು ಸುಮ್ನೆ ಕೂತ್ಕೋ" ರೇಗಿದರು ಸುಬ್ಬಲಕ್ಷ್ಮಿ ಪದ್ಮಾಸನ ಹಾಕಿಕೊಂಡು ಗೋಡೆಗೆ ಒರಗಿಕೊಂಡು ಕೂತ. "ಹೋಗು ಅನ್ನೋವರ್ಗೂ ಹೋಗೋಲ್ಲ. ಸಾಕ್ಷಾತ್ ಮಹಾಲಕ್ಷ್ಮಿಯ ಮುಂದೆ ಕೂತ ಅನುಭವ ಆಗುತ್ತೆ" ಎಂದ.

ಕಣ್ಮಣಿಗೆ ನಗು ಬಂತು, ನಗಲಿಲ್ಲ. ಊಟ ಮಾಡುವಾಗ ಚೈತನ್ಯ ಪಂಥರಿಯೊಂದಿಗೆ ಮಾತ್ರ ಆತ್ಮೀಯವಾಗಿ ಹರಟುತ್ತಿದ್ದ. ಅವನ ಒತ್ತಾಯಕ್ಕೆ ಕೆಲವೊಮ್ಮೆ ಮಣಿಯುತ್ತಿದ್ದ. ಕೆಲವು ದಿನ ಉಳಿದ ಯಾರಿಗಾದರೂ ಇಂಥ ಸೂಕ್ಷ್ಮಗಳ ಅರಿವಾಗುತ್ತಿತ್ತು. ಒಂದೆರಡು ಸಲ ಸಿಸ್ಟರ್ ಅದನ್ನು ಬಾಯಿ ಬಿಟ್ಟು ಆಡಿದ್ದಳು 'ಅಫ್ಟಾಲ್ ಅವನೊಬ್ಬ ಕುಕ್. ಸದಾ ಹುಬ್ಬು ಗಂಟಿಕ್ಕಿರೋ ಮನುಷ್ಯ ಕೂಡ. ಅವ್ನ ಮಾತು ಕೇಳ್ತಾನೇಂದ್ರೆ.. ಏನರ್ಥ?

ದಿಸ್ ಈಸ್ ಟೂ ಮಚ್' ಅರ್ಥವಾಗದಂತೆ ಮುಖ ಮಾಡಿದ್ದಳು ಕಣ್ಮಣಿ. ದೂರದ ಬಂಧುವೇನೋ, ಬಡತನದಿಂದ ಇವರ ಮನೆಯಲ್ಲಿ 'ಕುಕ್' ಆಗಿ ನಿಂತಿರಬೇಕೆಂದುಕೊಂಡಳು.

ಸಿಸ್ಟರ್ ಊಟ ಮುಗಿಸಿ ರೂಮಿಗೆ ಹಿಂದಿರುಗಿದ ನಂತರವೇ ಹೋಗುವಂತೆ ಅವನಿಗೆ ಸನ್ನೆ ಮಾಡಿದ್ದು ಸುಬ್ಬಲಕ್ಷ್ಮಿ. "ಬರೀ ಬಾಯಿ ಬಡಕ .ಅಷ್ಟೆ, ಮನಸ್ಸು ಮಾತ್ರ ಒಳ್ಳೇದು. ಸ್ವಲ್ಪ ಅಡ್ಜೆಸ್ಟ್ ಮಾಡ್ಕೊಂಡ್ಹೋಗಿ" ಸಿಸ್ಟರ್‌ಗೆ ಒಂದು ಬುದ್ಧಿ ಮಾತು ಹೇಳಿದರು.

ಮೂರಕ್ಕೆ ಐದು ನಿಮಿಷ ಇದೆಯೆನ್ನುವಾಗಲೇ ಮನೆಗೆ ಬಂದವನು ನೇರವಾಗಿ ಹೋಗಿದ್ದು ತಾಯಿಯ ರೂಮಿಗೇನೇ. ಒಂದಿಷ್ಟು ಕುಶಲೋಪರಿ. ಆ ಕೋಣೆಯಲ್ಲಿ ಹುಬ್ಬುಗಳು ಎಂದೂ ಸಂಧಿಸವು, ಗಂಟಾಗದು, ಅಷ್ಟು ಎಚ್ಚರ ಚೈತನ್ಯನದು.

"ಇವತ್ತು ಒಂದೆರಡು ತುತ್ತು ಜಾಸ್ತಿ ಊಟ ಮಾಡಿದ್ದು ಹೆಚ್ಚೆನಿಸಿದರೂ, ತೃಪ್ತಿಯಾಗಿತ್ತು" ಒಂದು ಮಾತು ಹೇಳಿದರು ಮಗನಿಗೆ. ತಾಯಿಯ ನಿರ್ಜೀವ ಹಸ್ತದ ಮೇಲೆ ಕೈಯಿಟ್ಟ, ಅವನ ಕೈ ಹರ್ಷದಿಂದ ಕಂಪಿಸಿತು. "ಥ್ಯಾಂಕ್ಯೂ ಮಮ್ಮಿ... ಥ್ಯಾಂಕ್ಯೂ ವೆರಿ ಮಚ್.... ಇವತ್ತು ನಿನ್ನ ಕಣ್ಣುಗಳಲ್ಲಿ ಉತ್ಸಾಹದ ಹೊಳಪಿದೆ. 'ಹುರ್ರೆ...' ಎಂದು ಕುಣಿದಾಡಿಬಿಡುವಷ್ಟು ಸಂತೋಷ" ಬಗ್ಗಿ ಸುಬ್ಬಲಕ್ಷ್ಮಿಯವರ ಹಣೆಗೆ ಚುಂಬಿಸಿ ಹೊರ ನಡೆದ. ಅವನು ಬಂದ ಕೂಡಲೇ ಸಿಸ್ಟರ್ ಹೊರ ನಡೆದಿದ್ದಳು. ಅವನು ನಿಲ್ಲು ಎಂದಾಗ ಮಾತ್ರ ನಿಂತು ಕೇಳಿದಕ್ಕೆ ಮಾತ್ರ ಉತ್ತರಿಸಬೇಕಷ್ಟೆ. ಮಿಕ್ಕ ಸಮಯದಲ್ಲಿ ಚೈತನ್ಯ ಬಂದ ಕೂಡಲೇ ಹೊರಗೆ ಹೋಗುತ್ತಿದ್ದಳು.

ಬಟ್ಟೆ ಬದಲಾಯಿಸಿ ಡೈನಿಂಗ್ ಹಾಲ್‌ಗೆ ಬಂದ ಚೈತನ್ಯ ಮೊದಲು ಪ್ರಸ್ತಾಪಿಸಿದ್ದು ಆ ವಿಷಯವನ್ನೆ "ಅಮ್ಮನ ಕಣ್ಣಲ್ಲಿ ಹೊಳಪಿದೆ. ಆ ಹೊಳಪು, ಉತ್ಸಾಹವೇ ಕೈಕಾಲುಗಳಿಗೆ ಶಕ್ತಿ ತುಂಬಬೇಕು. ಅಮ್ಮ ನಾರ್ಮಲ್ ಮನುಷ್ಯರಾಗ್ತಾರೆ ಅನ್ನೋ ನಂಬ್ಕೇ ನಂದು" ಎಂದ ಉಲ್ಲಾಸದಿಂದ.

ಪಲ್ಯ ಬಡಿಸಿದ ಪಂಢರಿ "ನಂದೂ ಕೂಡ ಚಿಕ್ಕ ಯಜಮಾನ್ರೆ! ನೂರಕ್ಕೆ ಬೇಕಾದ್ರೆ... ನೂರಾಹತ್ತು ಹಾಕ್ಕೊಳ್ಳಿ, ಅಮ್ಮ ಓಡಾಡಿಕೊಂಡು ಅವ್ರ ಕೈಯಿಂದ್ಲೇ ಬಡಿಸ್ತಾರೆ. ಆ ದಿನ ಬಂದೇ ಬರುತ್ತೆ" ಸ್ವಲ್ಪ ಉದ್ವೇಗದಿಂದ ಹೇಳಿದ. ಚೈತನ್ಯ ನಿಶ್ಚಲನಾದ. ಒಂದು ರೀತಿಯಲ್ಲಿ ಸಮಾಧಿ ಸ್ಥಿತಿ. ಅಂಥ ಒಂದು ಕಲ್ಪನೆಯೇ, ಎಲ್ಲಿಂದ.... ಎಲ್ಲಿಗೋ ತಲುಪಿಸಿಬಿಟ್ಟಿತು.

ಎಷ್ಟೋ ಹೊತ್ತು ಅದೇ ಸ್ಥಿತಿಯಲ್ಲಿದ್ದ.

ಊಟ ಮುಗಿಯುವ ವೇಳೆಗೆ ಅವನ ಪಿ.ಎ. ಬಂದಾಗ "ಎಲ್ಲಾ ಪ್ರೋಗ್ರಾಂಗಳು ಕ್ಯಾನ್ಸಲ್. ಸಂಜೆ ಐದರ ನಂತರವೇ ಎಲ್ಲಾ" ಎಂದು ಉಸುರಿ ತನ್ನ ರೂಮಿಗೆ ಹೋಗಿಬಿಟ್ಟ. 'ಚೈತನ್ಯ ಗ್ರೂಪ್ಸ್ ಆಫ್ ಕಂಪನೀಸ್'ಗೆ ಅವನು ಮ್ಯಾನೇಜಿಂಗ್ ಡೈರೆಕ್ಟರ್, ಇಪ್ಪತ್ತೊಂದನೆ ವಯಸ್ಸಿಗೆ ಇಷ್ಟು ದೊಡ್ಡ ಜವಾಬ್ದಾರಿ ಅವನ ಕೊರಳಿಗೆ ಬಿದ್ದಿದ್ದು ತಂದೆಯ ಸಾವಿನಿಂದ. ಅವರ ಸಾವಿಗೆ ತಾನು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಕಾರಣ ಎನ್ನುವ ಅನಿಸಿಕೆ ಇಂದಿಗೂ ಅವನ ಮೈಂಡ್‌ನಲ್ಲಿ ಉಳಿದುಹೋಗಿತ್ತು.

ನಿಶ್ಚಲನ ಅವನು ಪ್ರೇಮಿಸಬಾರದಿತ್ತು. 'ಪ್ರೇಮ' ಎನ್ನುವ ಕಲ್ಪನೆ ಅತ್ಯಂತ ರೋಮಾಂಚಕಾರಿ. ಅವಳ ಪ್ರೀತಿಯಲ್ಲಿ ಹುಚ್ಚನಾಗಿದ್ದ. ಆ ಹುಚ್ಚು ಹೇಗೆ ವ್ಯಾಪಿಸಿತೆಂದರೆ ತಂದೆ ಅವನನ್ನು ವಿದೇಶಕ್ಕೆ ಕಳಿಸುವ ನಿರ್ಧಾರ ಮಾಡಿದಾಗಲೆಲ್ಲ ವಿರೋಧಿಸಿದ್ದ. 'ಒಬಿಡಿಯಂಟ್ ಸನ್' ಎನ್ನುವ ಮಗ ತಿರುಗಿ ಬಿದ್ದಾಗ ಷಾಕಾಗಿದ್ದರು. ವಿದ್ಯಾಭ್ಯಾಸವನ್ನು ಕಡೆಗಾಣಿಸಿದ್ದ. ತಾಯಿಯನ್ನು ನಿರ್ಲಕ್ಷಿಸಿದ್ದ.

"ಮೈ ಮ್ಯಾರೇಜ್...." ಇನ್ವಿಟೇಷನ್ ಹಿಡಿದು ನಿಶ್ಚಲ ಅವನ ಮುಂದೆ ನಿಂತಾಗ ಭೂಮಿ, ಆಕಾಶ ಒಂದಾಗಿತ್ತು. ಪ್ರೀತಿಯ ತಂಗಾಳಿಯಲ್ಲಿದ್ದವನನ್ನು ಬಿರುಗಾಳಿ... ಅತ್ಯಂತ ಭಯಂಕರ ಬಿರುಗಾಳಿ ಎಚ್ಚರಿಸಿತ್ತು "ನೋ." ಅಬ್ಬರಿಸಿದ್ದ. ಇದು ಸೈರಿಸಿಕೊಳ್ಳಲಾರದ ಹೊಡೆತ ಪ್ರೇಮದ ಅಲೆಗಳ ಮೇಲೆ ಮಲಗಿ ವಿಹರಿಸುತ್ತಿದ್ದ ಅವನಿಗೆ ಇನ್ನೊಂದು ಜಗತ್ತಿನ ಪರಿಚಯ ಮಾಡಿಸಿದಳು. ಅವಳ ಬಗ್ಗೆ ಎಷ್ಟು ಹುಚ್ಚನಾಗಿದ್ದನೆಂದರೆ ಇಷ್ಟು ಪ್ರೀತಿಸುವ ತಾಯಿಯನ್ನ ಒಂದು ಕಡೆ ಇಟ್ಟು ಅವಳನ್ನೊಂದು ಕಡೆ ಇರಿಸಿದರೇ, ಅವನ ಆಗಿನ ಸ್ಥಿತಿಯ ನಿಶ್ಚಲನ ಆರಿಸಿಕೊಳ್ಳುತ್ತಿದ್ದ. ಜಗತ್ತಿನ ಎಲ್ಲಾ ಪ್ರೇಮ ಕಾದಂಬರಿಗಳ ನಾಯಕನಾಗಿದ್ದ.

"ಪ್ಲೀಸ್ ಎಚ್ಚೆತ್ಕೋ! ನನ್ನದ್ದೆ ನಿಖಿಲ್‌ನೊಂದಿಗೆ ನಿಶ್ಚಯವಾಗಿ ಹತ್ತು ವರ್ಷಗಳೇ ಆಗಿದೆ. ಇದೇ ಎಂಗೇಜ್‌ಮೆಂಟ್ ರಿಂಗ್" ಅವನ ಮುಂದೆ ಕೈಹಿಡಿದಿದ್ದಳು. ಇದು ಸುಳ್ಳಲ್ಲ, ಸತ್ಯ. ಕೆಲವು ಬಿಜಿನೆಸ್‌ನಲ್ಲಿ ಪಾರ್ಟ್‌ನರ್‌ಗಳಾದ ನಿಖಿಲ್ ಮತ್ತು ನಿಶ್ಚಲ. ತಂದೆ ಅವನ್ನು ಸಂಬಂಧವಾಗಿರಿಸಿದ್ದರು ಹತ್ತು ವರ್ಷಗಳ ಹಿಂದೆಯೇ ದೊಡ್ಡ ಅದ್ದೂರಿ ಸಮಾರಂಭ ಏರ್ಪಡಿಸಿ ಎಂಗೇಜ್‌ಮೆಂಟ್ ಶಾಸ್ತ್ರ ಮುಗಿಸಿದ್ದರು.

"ಸುಳ್ಳು... ಯು ಆರ್ ಲೈಯಿಂಗ್... ನೀನು ಸುಳ್ಳು ಹೇಳ್ತಾ ಇದ್ದೀಯಾ! ಐ ಕಾಂಟ್ ಬಿಲೀವ್" ಸಿಸಿಮಾದ ಪ್ರೇಮಿಯಂತೆ ಅಬ್ಬರಿಸಿದ್ದ. ನಿಶ್ಚಲ ನಿಶ್ಚಲವಾಗಿ ನುಡಿದಿದ್ದಳು. "ಸುಳ್ಳಲ್ಲ, ಎಲ್ಲಾನು ನಿಜನೇ." ಪರ್ಸ್‌ನಲ್ಲಿದ್ದ ಫೋಟೋಗಳನ್ನು ಅವನ ಮುಂದೆ ಹಿಡಿದಾಗ ಜಗತ್ತೇ ಛಿದ್ರವಾದಂತೆ ಕಂಪಿಸಿದ್ದ. ಅರೆ ಹುಚ್ಚನಾಗಿದ್ದ ಮಗನಿಗಾಗಿ ತಮ್ಮ ಸ್ವಾಭಿಮಾನ ಒತ್ತೆ ಇಟ್ಟು ಹೋಗಿ ಹಿಂದಿರುಗಿ ಬಂದಾಗ ಹೇಳಿದ್ದು ಒಂದೇ ಮಾತು "Pearls before the swine, ಅಂಥ ವ್ಯಕ್ತಿಯ ಮುಂದೆ ಪ್ರೇಮದ ಬಗ್ಗೆ ಉಪದೇಶ ಮಾಡಲು ಹೋಗಿದ್ದು ನನ್ನದೇ ತಪ್ಪು" ಅಂದಿನ ರಾತ್ರಿ ಮಲಗಿದ ಅವರು ಬೆಳಿಗ್ಗೆ ಮೇಲೇಳಲಿಲ್ಲ. ಅವರ ಸಾವಿನಿಂದ ಪ್ರೇಮದ ಭ್ರಮೆಯಲ್ಲಿದ್ದ ಅವನು ಮುಕ್ತನಾದ. ಈ ವಿಷಯ ಇಂದಿಗೂ ಸುಬ್ಬಲಕ್ಷ್ಮಿಗೆ ತಿಳಿಯದು. ಆ ನೋವು ಪ್ರೇಮ, ಪ್ರೀತಿ ಮದುವೆಯಿಂದ ಬಹಳ ದೂರ ಒಯ್ದಿತ್ತು. ಇಂದಿಗೂ ಅದರಿಂದ ವಿಮುಖವಾಗಿರಲಿಲ್ಲ.

ಐದರ ವೇಳೆಗೆ ಸುಬ್ಬಲಕ್ಷ್ಮಿಯವರ ರೂಮಿಗೆ ಬಂದಾಗ ಹಣ್ಣಿನ ರಸ ಕುಡಿಸುತ್ತಿದ್ದ ಕಣ್ಮಣಿ ಅಲ್ಲಿಟ್ಟು ಹೊರಗೆ ಹೋದಳು. ಆ ಕೆಲಸಗಳನ್ನು ಮಾಡಲು ಅವನಿಗೆ ತುಂಬ ಇಷ್ಟ.

"ಒಂದೆರಡು ಗಂಟೆಗಳು ಫ್ರೀ. ಆರಾಮಾಗಿ ಕೂತು ನಿನ್ನೊಂದಿಗೆ ಸಂಗೀತ ಕೇಳ್ತೀನಿ. ಪಂಡಿತ ರವಿಶಂಕರ್‌ರ ಸಿತಾರ್ ವಾದನದ ಕ್ಯಾಸೆಟ್ ತುರುಕಿ ಬಂದು ತಾಯಿಯ ಪಕ್ಕದಲ್ಲಿ ಕೂತ. ಚಲನೆ ಇಲ್ಲದ ತಾಯಿಯ ಕೈಗಳು ಮೃದುವಾದ ಹತ್ತಿಯಂತಿರುತಿತ್ತು. ಆ ಹಸ್ತವನ್ನೇ ಸ್ಪರ್ಶಿಸಿದಾಗಲ್ಲ್ಲ ಏನಾದರೂ ಮಾರ್ಪಾಟಾಗಿದೆಯಾ, ಎಂದು ಪರೀಕ್ಷಿಸುತ್ತಿದ್ದ. ವರ್ಷಗಳು ಕಳೆದರೂ ಯಾವುದೇ ಬದಲಾವಣೆ ಕಾಣದಿದ್ದರೂ ಅವನಲ್ಲಿನ ಆಸೆ ಬತ್ತಿ ಹೋಗದು. ಮೃದುವಾಗಿ ಹತ್ತಿಯಂತಿರುವ ಕೈಗಳು ಪೆಡಸಾಗಿ ಬಲ ತುಂಬಿಕೊಳ್ಳುತ್ತೆ-ಆ ದಿನಕ್ಕಾಗಿ ಅವನ ಕಾಯಲು ಸಿದ್ಧ".

"ಅಮ್ಮ ಡಾಕ್ಟ್ರು..." ಎಂದ ಕೂಡಲೇ ಆಕೆ ಸಪ್ಪಗಾಗಿ "ಪ್ಲೀಸ್ ಚೈತನ್ಯ ಬೇರೆ ಏನಾದ್ರೂ ಮಾತಾಡು. ನನ್ನ ಕೈ ಕಾಲುಗಳು, ಡಾಕ್ಟ್ರು, ಸಿಸ್ಟರ್ ಬಿಟ್ಟು ಬೇರೇನಾದ್ರೂ ಮಾತಾಡು. ಅದೇ ಪಂಥರಿನ ನೋಡು, ಅವನ ಮಾತಗುಳ ಅಬ್ಬರ ಕೆಲವು ದಿನ ಅಡಗಿದಾಗ ಇಡೀ ಬಂಗ್ಲೇನೇ ನಿಶ್ಶಬ್ದದಲ್ಲಿ ಮುಳುಗಿ ಹೋಗಿದೆಯೆನೋಂತ ಅನ್ನಿಸ್ತು." ಮಾತುಗಳಿಂದ ಮಗನನ್ನ ಬೇರೆ ಕಡೆ ಎಳೆದರು.

ಕಣ್ಮಣಿಯನ್ನು ಅಪಾಯಿಂಟ್ ಮಾಡಿಕೊಂಡಾಗ ಪಂಢರಿ ಇಲ್ಲದ್ದು ಆಕಸ್ಮಿಕ. ಅಪರೂಪಕ್ಕೆ ಊರಿಗೆ ಹೋಗಿದ್ದ, ಅದು ಸುಬ್ಬಲಕ್ಷ್ಮಿಯ ಬಲವಂತಕ್ಕೆ. ಅವನಿಗೆ ಎಲ್ಲವು ಇವರೇ.

ಸ್ವಲ್ಪ ಜೋರಾಗಿಯೇ ನಕ್ಕು ಬಿಟ್ಟ ಚೈತನ್ಯ.

"ಅಂತು ನಿನ್ನ ಮೆಚ್ಚಿಗೆ, ಹೊಗಳಿಕೆಯಿಂದ್ಲೇ ಹಚ್ಚಿಕೊಂಡಿದ್ದಾನೆ. ಮಾಲಿಯಿಂದ ಹಿಡ್ದು ಸಿಸ್ಟರ್‌ವರ್ಗ್ಗೂ ಅವ್ನ ತಗಾದೆ ಇದೆ. ಕೆಲವೊಮ್ಮೆ ಅವ್ನ ಮಾತುಗಳಿಗೆ ತಲೆ ಸಿಡಿದು ಬಂಗ್ಲೆಯಿಂದ ಹೊರ್ಗ್ಗೆ ಹಾಕ್ಲಿ ಬಿಡಲೇ ಅನ್ನಿಸುತ್ತೆ. ಅಷ್ಟೊಂದು ತಲೆ ತಿಂತಾನೆ." ಬೇಸರ ವ್ಯಕ್ತಪಡಿಸಿದ.

ಆಕೆಯ ಕಣ್ಣುಗಳಲ್ಲಿ ವೇದನೆ ಇಣುಕಿತು. ಮಾಲಿಯೊಬ್ಬ ಬಿಟ್ಟು ಕೆಲಸಗಾರರೆಲ್ಲ ಆಗಾಗ ಬದಲಾಗುತ್ತಿದ್ದರು. ಅದಕ್ಕೆ ಎಷ್ಟೋ ಕಾರಣಗಳು ಇದ್ದವು. ಕೆಲವರನ್ನು ಹೊರ ಹಾಕೋಕೆ ಪಂಢರಿಯೇ ಕಾರಣ. ಈ ಬಂಗ್ಲೆಯ ಗುಟ್ಟು ಮತ್ತು ಚೈತನ್ಯನ ಬಗ್ಗೆ ವಿವರಗಳನ್ನು ತಿಳಿಯಲು ಬೇರೊಬ್ಬರು ನೇಮಿಸಿದ್ದ ವ್ಯಕ್ತಿಯನ್ನು ಹಿಡಿದು ಪೋಲೀಸರಿಗೆ ಒಪ್ಪಿಸಲು ಅವನೇ ಕಾರಣವಾಗಿದ್ದ.

"ಅವ್ನು ಹೋಗೋಲ್ಲ ಬಿಡು." ಎಂದರು ಮೌನವದನರಾಗಿ, ಆಮೇಲೆ ಪೂರ್ತಿ ಮಾತುಗಳನ್ನು ಬದಲಾಯಿಸಿದ ಚೈತನ್ಯ. ಷೇರ್ ಬಜಾರ್‌ನ ವಿಷಯದಿಂದ ಹಿಡಿದು ಇತ್ತೀಚಿನ ಆರ್ಥಿಕ ಬೆಳವಣಿಗೆ ಬಗ್ಗೆಯೆಲ್ಲ ಮಾತಾಡಿದ. ತಾಯಿಯೊಂದಿಗೆ ನಂತರ ವಿಷಯ ಹೊರಳಿದ್ದು ಸಂಗೀತದ ಬಗ್ಗೆ.

ಸಂಗೀತ ಸಾಮ್ರಾಟ್ ಸಿತಾರ್ ಲೋಕದಿಂದ ತಾಯಿ, ಮಗ ಹೊರ ಬಂದಾಗ ಅತ್ಯಂತ ಶಾಂತವಾಗಿದ್ದರು. ಹೋರಾಟ, ಆಂದೋಲನವಿಲ್ಲದ ನಿರ್ಲಿಪ್ತ ಭಾವ.

* * * *

ವಾಸಂತಿ ಬಂದಾಗ, ದಿನವು ಬರುವ ವ್ಯಕ್ತಿ ಇಂದು ನಂದಿನಿ ಟೆಕ್ಸ್‌ಟೈಲ್‌ನ ಮುಂಭಾಗದಲ್ಲಿಯೇ ಕಂಡಾಗ ಕಾಲಿನ ಚಪ್ಪಲಿ ಕೈಗೆ ತಗೊಂಡುಬಿಡಲೇ ಎಂದುಕೊಂಡಳು. ಆ ಮನುಷ್ಯ ದಿನವು ಬರುತ್ತಿದ್ದ, ಏನಾದರೂ ಕೊಳ್ಳುತ್ತಿದ್ದ. ಕನಿಷ್ಟ ಅರ್ಧ ಗಂಟೆಯಾದರೂ ಪ್ರತಿಯೊಂದು ವಿಭಾಗದಲ್ಲಿ ಓಡಾಡುತ್ತಿದ್ದ. ಓಡಾಡುವಾಗಲೆಲ್ಲ ಆಗಾಗ ಇವಳತ್ತ ನೋಟ ಹರಿಸುತ್ತಿದ್ದ. ಅದು ಕುಚೇಷ್ಟೆಯ ನೋಟವಲ್ಲ, ಪ್ರೇಮಭರಿತವಾದ ನಯನಗಳು ಇವಳನ್ನು

ಸ್ಪರ್ಶಿಸುತ್ತಿತ್ತು. ಅದಕ್ಕಾಗಿ ಸ್ವಲ್ಪ ಹಿಂಜರಿದಳು. ಮುಖ ಇಷ್ಟು ದಪ್ಪ ಮಾಡಿಕೊಂಡು ಒಳ ಹೋದಳಷ್ಟೆ. ಆಮೇಲೆ ನಾರ್ಮಲ್‌ನ ಚಟುವಟಿಕೆಯೇ.

"ಒಂದಿಷ್ಟು ಗಾರ್ಡನ್ ಸ್ಯಾರೀಸ್ ತೋರ್‍ಸಿ" ಬೆನ್ನು ಹಾಕಿ ಸೀರೆಗಳನ್ನು ಜೋಡಿಸಿಡುತ್ತಿದ್ದವಳು ತಟ್ಟನೇ ತಿರುಗಿದಳು. ಅದೇ ವ್ಯಕ್ತಿ "ಬಂದ ನ್ಯೂಸ್ಟಾಕೆಲ್ಲ ಹ್ಯಾಂಗರ್‍ಸ್‌ಗೆ ಹಾಕಿಟ್ಟಿದ್ದೀನಿ. ಅಲ್ಲಿ..ನೋಡಿ" ಎಂದಳು ಹಲ್ಲುಗಳನ್ನು ಕಚ್ಚಿಡಿದು. ಸಂಬಂಧವಿಲ್ಲದ ವ್ಯಕ್ತಿ ದಿನವು ಬರುವುದರಿಂದ ಗುಸ ಗುಸ, ನಗುವಿಗೆ ಬಲಿಯಾಗಬೇಕೆಂದು ಗೊತ್ತು. ಅತ್ತಿತ್ತ ನೋಟ ಹರಿಸಿ ಸಮಾಧಾನದ ಉಸಿರು ಬಿಟ್ಟಳು. ಜನ ವಿಪರೀತವಾಗಿದ್ದುದ್ದರಿಂದ ಎಲ್ಲರೂ ಅವರವರ ಕೆಲಸದಲ್ಲಿ ಮಗ್ನರಾಗಿದ್ದರು.

ಆ ವ್ಯಕ್ತಿ ಸರಿದು ಹೋಗದಿದ್ದಾಗ, ಕೋಪದಿಂದ ಒಮ್ಮೆ ನೋಟ ಬೀರಿದಳು "ನಾನು ಹೇಳಿದೆನಲ್ಲ, ಸರ್" ಎಂದು ಬೇರೆಯವರ ಕಡೆ ಗಮನವರಿಸಿದಳು. ಬಂದವರ ವ್ಯಾಪಾರ ಮುಗಿದರೂ ಆ ಮನುಷ್ಯ ಇನ್ನು ಸೀರೆಯ ಸೆಲೆಕ್ಷನ್‌ನಲ್ಲಿಯೇ ಇದ್ದಿದ್ದು ಬೇರೆಯುವರಿಗೆ ಸೋಜಿಗವಾದರೂ, ಕೌಂಟರ್‌ನಲ್ಲಿ ಕೂತ ವ್ಯಕ್ತಿ ಮಾತ್ರ ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳಲಾರ. ವ್ಯಾಪಾರ ಮಾತ್ರ ಮುಖ್ಯ. ಒಂದಲ್ಲ ಒಂದನ್ನು ಕೊಳ್ಳುವ ಇಂಥ ವ್ಯಕ್ತಿಗಳು ವ್ಯಾಪಾರಸ್ಥರಿಗೆ ಹೆಚ್ಚು ಮುಖ್ಯ. 'ಪರ್ಮನೆಂಟ್ ಕಸ್ಟಮರ್'ಗಳ ಬಗ್ಗೆ ಒಂದು ರೀತಿಯ ಆಸಕ್ತಿ ಕೂಡ.

ಸ್ವಲ್ಪ ಬೇಸರದಿಂದಲೇ ತೋರಿಸಿದ ಒಂದು ಸೀರೆಯನ್ನು ಸೆಲೆಕ್ಟ್ ಮಾಡಿಕೊಂಡ ವ್ಯಕ್ತಿ "ಪ್ಲೀಸ್....." ಎಂದು ಒಂದು ಚೀಟಿಯನ್ನು ಅವಳ ಮುಂದಿಟ್ಟು ಹೋದಾಗ, ಸೋಜಿಗವಾದರೂ ಮುಂದುವರಿದ ರೀತಿಗೆ ಕೆಂಡಾ ಮಂಡಲದಷ್ಟು ಕೋಪ. ಬಹುಶಃ ಅದನ್ನು ಓದದೇ ಹರಿದು ಹಾಕಿದರೇ ಒಂದು ಅಧ್ಯಾಯ ಪ್ರಾರಂಭವಾಗುತ್ತಿರಲಿಲ್ಲವೇನೋ! ಅದೃಷ್ಟವೋ, ದುರಾದುಷ್ಟವೋ ಅಥವಾ ಒಂದು ರೀತಿಯ ಅನುಭವವೋ- ಅಂತು ಆ ಚೀಟಿಯನ್ನು ಬಿಡಿಸಿ ಪಕ್ಕಕ್ಕೆ ಸರಿದು ನೋಡಿದಳು.

"ನನ್ನ ನೀವು ಪೋಲಿ, ಲಫಂಗ ಅಂತ ತಿಳೀಬೇಡಿ. ಒಮ್ಮೆ ನಿಮ್ಮೊಂದಿಗೆ ಮಾತಾಡುವ ಅವಕಾಶ ಕೊಡಿ." ಕೆಳಗಡೆ 'ಕರ್ಣ' ಎನ್ನುವ ಸಹಿ ಇತ್ತು. ಆವೇಶದಲ್ಲಿ ಹರಿದು ಕಸದ ಬುಟ್ಟಿಗೊಗೆದಳು. ಈಡಿಯಟ್ಸ್... ರೋಗ್ಸ್... ಇಂಥ ಜನನೇ ಜಾಸ್ತಿಯಾಗ್ಬಿಟ್ಟಿದ್ದಾರೆ, ಒಳಗೊಳಗೆ ಸಿಡುಕಿದರೂ, ಬಂದ

ಗಿರಾಕಿಗಳನ್ನು ನಗು ಮೊಗದಿಂದಲೇ ಬರಮಾಡಿಕೊಂಡಳು. ಆಮೇಲೆ ಸಮಯ ಸರಿದಿದ್ದೇ ಗೊತ್ತಾಗಲಿಲ್ಲ. ಲಂಚ್ ಬ್ರೇಕ್‌ನಲ್ಲಿ ಕಾಫಿಗೆ ಹೊರಟಾಗ, ಹೋಟಲ್‌ನಲ್ಲಿ ಇವಳ ಟೇಬಲ್ಲಿನಲ್ಲಿಯೇ ಎದುರಾಗಿ ಆ ವ್ಯಕ್ತಿ ಕೂತಾಗ, ಕಪಾಳಕ್ಕೆ ಬಾರಿಸಬೇಕೆನಿಸಿತು. ಆದರೆ ಆ ವ್ಯಕ್ತಿಯ ಕಣ್ಣುಗಳಲ್ಲಿನ ಮೋಹಕತೆ ತಡೆಯಿತು.

"ನನ್ನ ಹೆಸರು ಕರ್ಣ ಅಂಥ. ಒಂದು ಸ್ಮಾಲ್ ಬಿಜಿನೆಸ್ ಇದೆ. ಚೆನ್ನಾಗಿಯು ನಡೀತಾ ಇದೆ. ನಂಗೆ ವಯಸ್ಸಾದ ಅಮ್ಮ, ಅಪ್ಪ ಊರಿನಲ್ಲಿ ಇದ್ದಾರೆ. ಇಲ್ಲಿ, ನಾನು... ಒಂಟಿನೇ. ನೀವು ಒಪ್ಪಿಗೆ ಕೊಟ್ಟರೇ, ನಾವಿಬ್ರೂ ಮದ್ವೆ ಆಗೋಣ" ನೇರವಾಗಿಯೇ ಕೇಳಿದ.

ತಟ್ಟನೇ ಎದ್ದು ಬೇರೆ ಟೇಬಲ್ಲಿಗೆ ಹೋದಳು ವಾಸಂತಿ. ಈ ಮಾತು ಅವಳ ನಿರೀಕ್ಷೆ ಅಲ್ಲ. 'ದುದ್ದ' ಅವಳ ಮದುವೆ ವಿಷಯ ಮುರಿದು ಬಿದ್ದ ಮೇಲೆ ಇಂಥ ಯೋಚನೆ ಅವಳ ತಲೆಯಲ್ಲಿ ಬಂದಿದ್ದೇ ಇಲ್ಲ. ವೈಯಿಟರ್ ಬರೋ ವೇಳೆಗೆ ಆ ವ್ಯಕ್ತಿ ಕೂಡ ಅದೇ ಟೇಬಲ್‌ಗೆ ಬಂದ.

"ಪ್ಲೀಸ್, ಎದ್ದು ಹೋಗ್ಬೇಡಿ, ನನ್ನ ಮನಸ್ಸಿನಲ್ಲಿ ಇದ್ದಿದ್ನ ಹೇಳಿದ್ದೀನಿ. ಒಪ್ಪೋದು, ಬಿಡೋದು ನಿಮ್ಮಿಷ್ಟ. ಎದುರು ಬದುರು ಕೂತು ಕಾಫಿ ಕುಡ್ಯೋದೇನು ತಪ್ಪಲ್ಲ. ಖಂಡಿತ ಎದ್ದು ಹೋಗ್ಬೇಡಿ. ಕುಡ್ದ ಕಾಫಿ ದುಡ್ಡು ನೀವೇ ಬೇಕಾದ್ರೂ ಕೊಡಿ. ನಿಮ್ಮ ಆತ್ಮಾಭಿಮಾನಕ್ಕೆ ಧಕ್ಕೆ ಬರೋ ಹಾಗೆ ನಾನು ನಡಕೊಳ್ಳೋಲ್ಲ" ಬಹಳ ಮೃದುವಾಗಿ ಮಾತಾಡಿ ಮನವೊಲಿಸಿಕೊಂಡ ಸ್ವಲ್ಪ ಪ್ರಯಾಸದಿಂದಲೇ.

ಕಾಫಿ ಜೊತೆ ತಿಂಡಿ ಕೂಡ ಬಂತು. ಹೆಚ್ಚು ಸ್ನೇಹಪರನಾಗಿ ಕಂಡ, ಅವನು ಹೆಚ್ಚು ಮಾತಾಡಿದ್ದು. ಆಕರ್ಷಕವಾಗಿ ಮಾತನಾಡಬಲ್ಲ ಎಂದುಕೊಂಡಳು. ಹೊರ ಬರುವಾಗ ಹೆಜ್ಜೆಯ ವೇಗ ತಗ್ಗಿಸಿ ಒಂದೇ ಒಂದು ಪ್ರಶ್ನೆ ಕೇಳಿದಳು.

"ದಿನ ಬಂದು ಕೊಳ್ಳುತ್ತಿದ್ದ ಸೀರೆಗಳು, ಡ್ರೆಸ್ ಮೆಟೀರಿಯಲ್ ಯಾರಿಗೋಸ್ಕರ?"

ಕರ್ಣ ಮೋಹಕ ನೋಟದೊಂದಿಗೆ "ಕೊಂಡಿದ್ದು ನಿಮಗೋಸ್ಕರ, ನಿಮ್ಮ ಸ್ನೇಹಕ್ಕೋಸ್ಕರ. ನಮ್ಮ ತಾಯಿ ಸಂಪ್ರದಾಯವಾದಿ, ಹಳೆ ಕಾಲದ ಹೆಣ್ಣು, ಇಂಥ ಸೀರೆಗಳನ್ನೆಲ್ಲ ಉಡಲಾರಳು. ನಾನು ನಂದಿನಿ ಟೆಕ್ಸ್‌ಟೈಲ್‌ಗೆ ನಿಮಗಾಗಿ ಬರ್‍ತಾ ಇದ್ದಿದ್ದು. ಅದ್ರಿಂದ ನಿಮ್ಗೆ ತೊಂದರೆಯಾಗ್ತಾಇರ್‍ದ್ದಾಂತ....

ಅಪ್ನಲ್ಲ ಕೊಂಡೆ" ಎಂದಾಗ ಅವಳ ಮನ ಬೆಣ್ಣೆಯಂತೆ ಮೃದುವಾಯಿತು. ಇದೊಂದು ರೀತಿಯ ಮೈ ಪುಳಕಗೊಳಿಸುವ ಅನುಭವ. ತನ್ನನ್ನು ಇಷ್ಟು ಉತ್ಕಟವಾಗಿ ಬಯಸುವ ವ್ಯಕ್ತಿಯೊಬ್ಬನಿದ್ದಾನೆಂದುಕೊಂಡಾಗ, ಅವಳ ಹೃದಯ ತುಂಬಿ ಮಾತನಾಡಲು ಶಕ್ಯಳಾಗಲಿಲ್ಲ.

ಆಮೇಲೆ ಎಂಟೇ ದಿನದಲ್ಲಿ ಇಬ್ಬರೂ ಪ್ರೇಮಿಗಳಾದರು. ಜನ್ಮಜನ್ಮಾಂತರದ ಅನುಬಂಧ ಎನ್ನುವಷ್ಟರ ಮಟ್ಟಿಗೆ ಪ್ರೀತಿಸತೊಡಗಿದರು. ಇದು ವಯಸ್ಸಿನ ಮಹತ್ವವಿರಬಹುದು. ಒಂಟಿತನದ ಭೀಭತ್ಸನೆಯಿಂದ ಪಾರಾಗಬೇಕೆನ್ನುವ ತವಕ ಇರಬಹುದು. ಲಂಚ್ ಬ್ರೇಕ್‌ನಲ್ಲಿ ಒಂದೇ ಟೇಬಲ್ಲಿನಲ್ಲಿ ಕೂತು ತಿಂಡಿ ತಿನ್ನುತ್ತ ಹರಟತೊಡಗಿದರು. ಆದರೆ ಅಷ್ಟು ದಿನವು ಬಿಲ್ ಕೊಟ್ಟಿದ್ದು ವಾಸಂತಿಯೇ. ಪ್ರೇಮ ಸಮುದ್ರದಲ್ಲಿ ಮುಳುಗಿ ತೇಲುತ್ತಿದ್ದ ಅವಳಿಗೆ ಈ ಸಣ್ಣ ವಿಷಯದ ಅರಿವಿರಲಿಲ್ಲ.

ಅಂದು ಮಧ್ಯಾಹ್ನ ಫೋನ್‌ನಲ್ಲಿ ಸಂಪರ್ಕಿಸಿದಳು ಗೆಳತಿಯನ್ನು "ಹೇಗಿದ್ದೀಯಾ? ನಿಮ್ಮ ಬಾಸ್ ಆಫೀಸ್‌ಗೆ ಹೋದ್ರಾ? ಏನಾಯ್ತು ನಿನ್ನ ಕೆಲ್ಸದ್ದು?" ಮೊದಲು ವಿಚಾರಿಸಿದ್ದು ಅವಳ ಬಗ್ಗನೇ.

"ಚೆನ್ನಾಗಿದ್ದೀನಿ, ಯಾವ್ದೋ ಸೆಮಿನಾರ್‌ಗೆ ಹೋಗಿದ್ದೋರು ಬಂದಿದ್ದು ರಾತ್ರಿಯೇ. ಒಂದರ್ಧಗಂಟೆ ಹಾಸ್ಟಲ್‌ನ ಫೋನ್ ಬಟನೊತ್ತಿ ಸಾಕಾದೆ, ನೆನ್ನೆ ರಾತ್ರಿ. ನನ್ನ ಕೆಲ್ಸದ ಬಗ್ಗೆ ಏನೇನು ... ಗೊತ್ತಿಲ್ಲ. ಈ ಖಾತೆ ಯಜಮಾನ್ರೇ ಇಟ್ಕೊಂಡಿರೋದ್ರಿಂದ.. ಏನು ಹೇಳೋಕ್ಕಾಗೋಲ್ಲ ಅಂದರು ಮ್ಯಾನೇಜರ್. ನೀನು ... ಹೇಗಿದ್ದೀ?" ಅತ್ತಿತ್ತ ನೋಡಿದಳು. ಪಂಢರಿ ಇಣಕಿ ಹೋದ. ಅವನೊಬ್ಬ ಗೂಢಚಾರ (Spy) ಎನ್ನುತ್ತಿದ್ದಳು ಸಿಸ್ಟರ್. ಕೆಲವೊಮ್ಮೆ ಅದು ನಿಜವೆನಿಸುತ್ತಿತ್ತು ಕೂಡ.

"ನಿಂಗೊಂದು ವಿಷ್ಯ ಹೇಳ್ಬೇಕು. ತುಂಬ ಡೀಟೈಲ್ಲಾಗಿಯೇ ಹೇಳ್ಬೇಕು. ಫೋನ್‌ನಲ್ಲಿ ಸಾಧ್ಯನಾ?" ದನಿ ತಗ್ಗಿಸಿ ಪಿಸುಗುಟ್ಟಿದಂತೆ ಮಾತಾಡಿದಾಗ "ಭಾನುವಾರ ಮಧ್ಯಾಹ್ನ ಹಾಸ್ಟಲ್‌ಗೆ...ಬರ್ತೀನಿ. ಇಡ್ತಾ ಇದ್ದೀನಿ, ಫೋನ್" ಇಟ್ಟೇಬಿಟ್ಟಳು. ಢವಗುಟ್ಟುತ್ತಿತ್ತು ಕಣ್ಮಣಿಯ ಎದೆ. ಬಂಗ್ಲೆಯ ಆಫೀಸ್‌ನ ಮುಂಭಾಗದಲ್ಲಿದ್ದ ಫೋನ್‌ನ ಮಾತ್ರ ಉಪಯೋಗಿಸಬಹುದಿತ್ತು.

ಸುಬ್ಬಲಕ್ಷ್ಮಿಯವರ ರೂಮಿಗೆ ಬಂದಾಗ, ಸಿಸ್ಟರ್ ತುಂಬ ಅನುನಯದಿಂದ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದಳು "ನನ್ತಂಗಿ ಮಗುಗೆ ತುಂಬ ಟೆಂಪರೇಚರ್ ಇದೇಂತ ಇನ್‌ಫಾರ್ಮೆಷನ್ ಸಿಕ್ತು. ಒಂದಿಷ್ಟು ಹೋಗಿ ಬರಲೇ?" ಸುಬ್ಬಲಕ್ಷ್ಮಿ

ಒಂದು ತರಹ ನೋಡಿ ತುಟಿಯಂಚಿನಲ್ಲಿ ಕಿರು ನಗೆ ತೇಲಿಸಿದರು. "ಹೋಗ್ಬಾ, ಹೇಗೂ ಕಣ್ಮಣಿ ಇದ್ದಾಳಲ್ಲ" ಅಷ್ಟೇ ಹೇಳಿದ್ದು. ಈಚೆಗೆ ಇಂಥ ಪರ್ಮೀಷನ್‌ಗಳು ಜಾಸ್ತಿಯಾಗಿತ್ತು. ಕಣ್ಮಣಿ ಎಲ್ಲಾ ವಹಿಸಿಕೊಂಡ ಮೇಲೆ ಹಗುರಾಗಿ ಓಡಾಡಿಕೊಂಡಿದ್ದರೂ, ಚೈತನ್ಯ ಬಂಗ್ಲೆಯಲ್ಲಿರುವಷ್ಟು ವೇಳೆ ರೂಮು ಬಿಟ್ಟು ಕದಲುತ್ತಿರಲಿಲ್ಲ.

"ಥ್ಯಾಂಕ್ಯೂ ಮೇಡಮ್ ಥ್ಯಾಂಕ್ಯೂ, ಬೇಗ್ಬಂದ್ಬಿಡ್ತೀನಿ" ಮುಖದ ಮೇಲೆ ಕರ್ಚಿಫ್ ಆಡಿಸ್ತ್ತಲೇ ಹೊರಗೆ ಹೋಗುವ ವೇಳೆಗೆ ಪಂಢರಿ ಎದುರಾದ "ಇವತ್ತು ಪರ್ಮೀಷನ್! ಸಿಸ್ಟರ್ ನಿಮ್ಮ ಅಟೆಂಡೆನ್ಸ್ ರಿಜಿಸ್ಟರ್ ನನ್ಹತ್ರ ಇದೆ. 'ಹೊರೋ ಕತ್ತೆ ಇದ್ದರೇ, ಹೊರಸೋ ಜನ ಜಾಸ್ತಿನಂತೆ' ನಿಮ್ಮ ಕೆಲ್ಸನು ಕಣ್ಮಣಿಗೆ ವಹಿಸಿಬಿಟ್ಟಿದ್ದೀರಿ ಪೂರ್ತಿಯಾಗಿ. ಇದು ಟೂ ಬ್ಯಾಡ್' ಅಂದ್ಕೊಳ್ಳಿ" ಎಂದು ತನ್ನ ಪಾಡಿಗೆ ತಾನು ಹೋದ. ವ್ಯಂಗ್ಯವಿದೆಯೆನಿಸಿತು. ಸಿಸ್ಟರ್ ಸೋಮಾರಿಯಲ್ಲ, ಕೆಲವು ಸಮಸ್ಯೆಗಳನ್ನು ಕ್ರಿಯೇಟ್ ಮಾಡಿಕೊಂಡು ಒದ್ದಾಡುತ್ತಿದ್ದಳು.

ಲಂಚ್ ಟೈಮ್‌ಗೆ ಮೊದಲೇ ಬಂದ ಚೈತನ್ಯ ಬಂಗ್ಲೆಗೆ. ಅವನಿಗೆ ಕರ್ತವ್ಯದ ಅರಿವಿತ್ತು. ಮೂವತ್ತು ದಿನಗಳ ಮೇಲೆ ಬಂದು ಹತ್ತು ದಿನವಾಗಿತ್ತು, ಕಣ್ಮಣಿಯ ಅಪಾಯಿಂಟ್ ಮಾಡಿಕೊಂಡು, ತಾನಾಗಿ ಕೆಲಸ ಬಿಟ್ಟಿರಲಿಲ್ಲ. ಈಗ ಅವನಾಗಿ ಏನು ಹೇಳಿರಲಿಲ್ಲ. ಬಂದ ಕೂಡಲೇ ಮ್ಯಾನೇಜರ್‌ನ ಪ್ರಶ್ನಿಸಿದ್ದ "ಕಣ್ಮಣಿ, ಸ್ಯಾಲರಿ ಬಗ್ಗೆ ಏನಾದ್ರೂ ಕೇಳಿದ್ಲಾ?" ಇಲ್ಲವೆಂದು ತಲೆಯಾಡಿಸುವುದರ ಜೊತೆಗೆ ಒಂದು ಮಾತನ್ನು ಹೇಳಿದರು. "ಈ ಹುಡ್ಗಿ ಸ್ವಲ್ಪ ಸೂತ್ರ್. ಒಂದಿಷ್ಟು ಓದ್ದೋ ಗೀಳು, ಹಾಡೋ ಅಭ್ಯಾಸ ಇರೋದ್ರಿಂದ ಅಮ್ಮಾವರಿಗೆ ಸ್ವಲ್ಪ ಅಡ್ಜಸ್ಟ್ ಆಗಿದ್ದಾಳೆ. ಮೊದಲ ನಿರಾಶೆ ಮೇಡಮ್ ಮುಖದಲ್ಲಿ ಒಂದಿಷ್ಟು ಕಮ್ಮಿಯಾಗಿದೇಂತ ಅನ್ನಿಸುತ್ತೆ, ಸರ್" ಒಂದೊಂದು ಪದವನ್ನು ಮೆಲಕು ಹಾಕುವಂತೆ ಆಲಿಸಿದ, ತಾಯಿಯ ವಿಷಯದಲ್ಲಿ ಅಷ್ಟೊಂದು ಮುತುವರ್ಜಿ.

ಮುಂದಿನ ಆಫೀಸ್ ರೂಮಿಗೆ ಪಂಢರಿಯನ್ನು ಕರೆಸಿಕೊಂಡ "ಹೇಗೆ, ಕಣ್ಮಣಿ? ಅಮ್ಮನ್ನ ಚೆನ್ನಾಗಿ ನೋಡ್ಕೋತಾಳಾ?" ಅವನು ಯೋಚಿಸುವಂತೆ ನಿಂತ "ಆ ಸಿಸ್ಟರ್‌ಗಿಂತ ಹಂಡ್ರೆಡ್ ಪರ್ಸೆಂಟ್ ಬೆಟರ್. ಅಮ್ಮನ್ನ ಕಂಡರೇ ಆ ಹುಡ್ಗಿಗೆ ಇಷ್ಟ ಕೂಡ. ಬೇರೆಯವ್ರು ಅಂದರೆ ಹಿಂದೆ ಅಪಾಯಿಂಟ್ ಮಾಡಿಕೊಂಡವರಂತೆ ರೂಮಿಗೆ ಹೋಗಿ ಗೊರಕೆಯೊಡೆಯೋಲ್ಲ. ಅಮ್ಮನ ಹತ್ರ ಕೂತು ಅದೂ ಇದೂ ಮಾತಾಡ್ತಾಳೆ. ಏನಾದ್ರೂ ಹೇಳ್ತಾಳೆ. ದಿನವು

ನ್ಯೂಸ್ ಪೇಪರ್ ಓದಿ ಸೋಜಿಗವಾದ ವಿಷ್ಯಗಳ್ನ ಹೇಳ್ತಾಳೆ. ಇಷ್ಟೆಲ್ಲ ಮಾಡ್ತಾಳೆ. ಇದು ನನ್ನ ರಿಪೋರ್ಟ್" ಎಂದ. ತಲೆ ತಗ್ಗಿಸಿಕೊಂಡು ಚೈತನ್ಯ ನಕ್ಕುಬಿಟ್ಟ. ಇಂಗ್ಲೀಷ್ ಬೆರೆಸಿ ಅವನದೇ ಸ್ಟೈಲ್‌ನಲ್ಲಿ ಆಕರ್ಷಕವಾಗಿ ಮಾತಾಡುವುದು ಅವನ ಮ್ಯಾನರಿಸಂ.

"ಓಕೇ, ಯು ಕೆನ್ ಗೋ" ಅವನನ್ನು ಕಳುಹಿಸಿದ.

'ಚೈತನ್ಯ ಗ್ರೂಪ್ಸ್ ಆಫ್ ಕಂಪನೀಸ್'ನ ವಹಿವಾಟುಗಳನ್ನು ಲೀಲಾಜಾಲವಾಗಿ ಮ್ಯಾನೇಜ್ ಮಾಡುವ ಅವನು 'ಇಂದು ಪೋಸ್ಟ್'ನ ವಿಷಯವಾಗಿ ಚಿಂತಿತನಾಗುತ್ತಿದ್ದ. ಉತ್ಸಾಹ, ಉಲ್ಲಾಸ, ಬದುಕಿನ ಬಗ್ಗೆ ಪ್ರೀತಿ ತುಂಬುವಂಥ ಜನ ಬೇಕಿತ್ತು. ಆ ಬಗ್ಗೆ ಡಾಕ್ಟರೊಂದಿಗೆ ಸಾಕಷ್ಟು ಚರ್ಚಿಸಿದ್ದ 'ಅಂಥ ಡೆಡಿಕೇಷನ್ ಮೈಂಡ್ ಇರೊಂಥ ನರ್ಸ್‌ಗಳು ನಮ್ಮಲ್ಲಿಲ್ಲ. ಅದ್ಕಿಂತ ನಮ್ಮ ಡಿಪಾರ್ಟ್‌ಮೆಂಟ್‌ನವರನ್ನು ಬಿಟ್ಟು ಬೇರೊಬ್ಬ ಯುವತಿಯನ್ನು ಆಯ್ಕೆ ಮಾಡ್ಕೊಳ್ಳಿ' ಅವರೇ ಸಜೆಷನ್ ಕೊಟ್ಟಿದ್ದರು. ಅದಕ್ಕಾಗಿ ಒಂದು ಅನ್ವೇಷಣೆ. ಉತ್ತಮ ಫಲಕ್ಕಿಂತ ಸಮಸ್ಯೆಗಳೇ ಹೆಚ್ಚಾದಾಗ ಬದಲಾಯಿಸಿದ್ದ. ಪ್ರತಿಯೊಬ್ಬರ ಬಗ್ಗೆಯು ಒಂದೊಂದು ಪಟ್ಟಿ ತಯಾರಿಸಿಡುತ್ತಿದ್ದ ಪಂಢರಿ ಕಣ್ಮಣಿಯ ಬಗ್ಗೆಯೇ ಕೆಲವು ಒಳ್ಳೆಯ ಮಾತುಗಳನ್ನು ಹೇಳಿದ್ದು. ಇಲ್ಲಿ ತಾಯಿಯ ಅಭಿಪ್ರಾಯವು ಅಷ್ಟೆ ಮುಖ್ಯವೆಂದು ಗೊತ್ತು.

ಬಟ್ಟೆ ಬದಲಾಯಿಸಿ ತಾಯಿಯ ರೂಮಿಗೆ ಬಂದಾಗ ಶ್ರೀ ರಾಗದ 'ಎಂದರೋ ಮಹಾನುಭಾವಲು...' ಎನ್ನುವ ಭಕ್ತಿ ಪ್ರಧಾನವಾದ ತ್ಯಾಗರಾಜರ ಕೀರ್ತನೆ ಹಾಡುತ್ತಿದ್ದವಳು ತಟ್ಟನೇ ನಿಲ್ಲಿಸಿ ಮೇಲೆದ್ದಳು. ಒಂದು ರೀತಿಯ ರೋಮಾಂಚನ ಅವಳಲ್ಲಿ. ಚೈತನ್ಯನ ಸ್ವರ, ಬರುವು ಅವಳಲ್ಲಿ ಸಪ್ತ ಸ್ವರಗಳ ಕಾರಂಜಿಯನ್ನು ಚಿಮ್ಮಿಸುತ್ತಿತ್ತು. ಪ್ರಯತ್ನಪೂರ್ವಕವಾಗಿ ಹೆಜ್ಜೆಗಳನ್ನು ಎತ್ತಿಟ್ಟು ಹೊರಗೆ ಬಂದಳು. ಅವನನ್ನು ಅವಳ ಹೃದಯ ಗುರುತಿಸಿತ್ತು, ಮನ ಒಪ್ಪಿಕೊಂಡಿತ್ತು. ಮಿದುಳು ಉತ್ತರಕ್ಕಾಗಿ ಪೇಚಾಡುತ್ತಿತ್ತು. ಆದರೆ ಒಂದು ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿತ್ತು. ಚೈತನ್ಯ ಯಾರು? ಚೈತನ್ಯ ಗ್ರೂಪ್ಸ್ ಆಫ್ ಕಂಪನೀಸ್'ನ ಮ್ಯಾನೇಜಿಂಗ್ ಡೈರೆಕ್ಟರ್, ಸುಬ್ಬಲಕ್ಷ್ಮಿಯವರ ಮಗ, ದೀಪಾಂಕುರ ಬಂಗ್ಲೆಯ ಓನರ್- ಇಷ್ಟು ಮಾತ್ರ ಗೊತ್ತಿರೋದು. ಅಷ್ಟರಿಂದಲೇ ಕಣ್ಮಣಿಯನ್ನು ಸೆಳೆದವೇ? ಅವಳ ಮನ ಒಪ್ಪದು. ಅನಾಥೆಯಾಗಿ ಬೆಳೆದರೂ ಶ್ರೀಮಂತಿಕೆಯ

ವ್ಯಾಮೋಹ ಅವಳಿಗಿಲ್ಲ. ಮತ್ತೇನು... ಮತ್ತೇನು? ಅದರಲ್ಲಿ ಚೈತನ್ಯನ ದೋಷ ಕಿಂಚಿತ್ ಇಲ್ಲ.

ಏ"ಪಂಢರಿ ... " ಕೂಗು ಹರಿದು ಬಂದಾಗ, ಅಡಿಗೆಯ ಮನೆಯಲ್ಲಿದ್ದ ಅವನಿಗೆ ಪಿಷೆಯ ಮುಟ್ಟಿಸಿ, ತಾನು ಅವನು ಮಾಡುತ್ತಿದ್ದ ಕೆಲಸಕ್ಕೆ ನಿಂತಳು. ತುಳಿಯ ಮಸಾಲೆ ಪದಾರ್ಥವನ್ನು ರುಬ್ಬುಕಲ್ಲಿನ ಒರಳಿನಲ್ಲಿ ರುಬ್ಬುತ್ತಿದ್ದ. ಆಧುನಿಕ ಮಿಕ್ಸಿ, ಗ್ರೈಂಡರ್ ಅಂಥದ್ದು ಅಲ್ಲಿ ನಿಷಿದ್ಧ. ಅದೆಲ್ಲ ಪಂಢರಿಗೆ ಇಷ್ಟವಾಗದು. ಆ ವಿಷಯಗಳಲ್ಲಿ ತಾಯಿ, ಮಗ ಒತ್ತಯಾವೇರರು.

ಹತ್ತು ನಿಮಿಷದ ನಂತರ ಪಂಢರಿ ಬರುವ ವೇಳೆಗೆ ಮಸಾಲೆ ಅರೆದು ಮುಗಿಸಿ ಪಾತ್ರೆಗೆ ತೆಗೆದಿಟ್ಟು ಕೈ ತೊಳೆದಿದ್ದಳು. ಬಂದು ಕಣ್ಣರಳಿಸಿದ. "ನನ್ನ ಕೆಲ್ಸಗಳು ತುಂಬ... ತುಂಬ ಅಚ್ಚುಕಟ್ಟು. ಕಿಚನ್‌ನೊಳಕ್ಕೆ ಯಾರು ಬರೋದು ನಂಗೆ ಇಷ್ಟವಾಗೋಲ್ಲ. ಮೈಂಡ್ ... ಇಟ್" ಬೇಸರ ವ್ಯಕ್ತಪಡಿಸಿದಾಗ ಅವಳ ಮುಖ ಸಣ್ಣಗಾಯಿತು "ಸಾರಿ... ಸಾರಿ.. ಸಾರಿ.. ಯಜಮಾನ್ರು ಬಂದು ಬಿಟ್ಟಿದ್ದಾರಲ್ಲ, ಅಡಿಗೆ ತಡವಾಗ್ಬಾರ್ದುಂತ ರುಬ್ಬಿ ಇಟ್ಟೆ. ಅನಾಥಾಶ್ರಮದಲ್ಲಿ ಇದ್ನೆಲ್ಲ ರುಬ್ಬಿ ಅಭ್ಯಾಸವಿದೆ. ಅಲ್ಲಿ ಇಷ್ಟಿಷ್ಟು ಕೆಲ್ಸಾಂತ ಹಂಚಿ ಬಿಡ್ತಾಇದ್ರು. ಇನ್ನು ಮುಂದೆ ಆ ತಪ್ಪು ಆಗೋಲ್ಲ" ಎಂದು ಖಾಲಿ ಮಾಡಿದಳು. ಅವನಿಗೂ 'ಅಯ್ಯೋ' ಅನಿಸಿತು. ಅವನಿಗೆ ಯಾರೂ ಸಹಾಯ ಮಾಡಲು ಬರುತ್ತಿರಲಿಲ್ಲ. ಈ ಏಕ ಚಕ್ರಾಧಿಪತ್ಯಕ್ಕೆ ಅವನೇ ಸಾಮ್ರಾಟನಾದುದ್ದರಿಂದ ಬೇರೆಯುವರ ಪ್ರವೇಶವನ್ನು ಇಷ್ಟಪಡುತ್ತಿರಲಿಲ್ಲ. ತಾನು ಓದಿದವಳು, ತನ್ನ ಬಳಿ ವಿಶ್ವವಿದ್ಯಾಲಯದ ಡಿಗ್ರಿ ಸರ್ಟಿಫಿಕೇಟ್ ಇದೆ. ಅದರೊಂದಿಗೆ 'ಡಿಪ್ಲೋಮಾ-ಇನ್-ಜರ್ನಲಿಸಂ' ಕೋರ್ಸು ಮಾಡಿದ್ದೀನಿ ಎನ್ನುವ ಧಿಮಾಕ್ ಇಲ್ಲದೆ ಸರಳವಾಗಿ ವರ್ತಿಸುವ ಕಣ್ಮಣಿಯ ಬಗ್ಗೆ ಒಂದಿಷ್ಟು ಕರುಣೆಯು.

ಇನ್ನು ಚೈತನ್ಯ ತಾಯಿಯ ರೂಮಿನಲ್ಲಿಯೆ ಇದ್ದುದ್ದರಿಂದ ಅವಳು ಒಳಗೆ ಹೋಗಲಿಲ್ಲ. ತನ್ನ ರೂಮಿಗೆ ಹೋಗಿ ಹಿಂದಿನ ದಿನದ ಪೇಪರ್‌ನಲ್ಲಿ Classified ಕಾಲಂ ನೋಡುತ್ತಿದ್ದಳು. ಅಕಸ್ಮಾತ್ 'ಬೇಡ'ವೆಂದರೆ ಇನ್ನೊಂದು ಕೆಲಸ ಹುಡುಕಿಕೊಳ್ಳಬೇಕು. ಆದರೆ ಮನದ ಆಂದೋಲನ, ಅರ್ಥವಾಗದ ಆರ್ದ್ರತೆಗೆ ಮಾತ್ರ ಯಾವುದೇ ಪರಿಹಾರವಿಲ್ಲ. ಇಷ್ಟೊಂದು ಕಾಡುವ ಈ ಚೈತನ್ಯ ಯಾರು? ಮೇಲ್ನೋಟಕ್ಕೆ ಸಂಬಂಧವಿಲ್ಲದ ವ್ಯಕ್ತಿ ಹೃದಯಕ್ಕೆ ಹತ್ತಿರವಾಗಿದ್ದು ಯಾತಕ್ಕೆ?

ರೂಮಿನೊಳಗೆ ಇಣಕಿದ ಪಂಢರಿ "ಯಜಮಾನ್ರು ಆಫೀಸ್ ರೂಮಿನಲ್ಲಿದ್ದಾರೆ. ನಿಮ್ಮನ್ನು ಬರೋಕ್ಹೇಳಿದ್ದಾರೆ" ತಲೆಯನ್ನು ಹಿಂಪಕ್ಕಳೆದುಕೊಂಡ.

ಜೀವವನ್ನು ಕೈಯಲ್ಲಿಡಿದು ರೂಮನ್ನು ಪ್ರವೇಶಿಸಿದಾಗ ಫೈಲು ನೋಡುತ್ತಿದ್ದವನು ತಲೆಯೆತ್ತಿ 'ಬರುವಂತೆ' ತಲೆಯಾಡಿಸಿದ, ಟೇಬಲ್‌ನ ಹತ್ತಿರಕ್ಕೆ ಹೋಗಿ ನಿಂತಳು.

"ಸಿಟ್ ಡೌನ್..." ಎಂದ ಒಂದಿಂಚು ತಲೆಯೆತ್ತಿ.

ಅವಳು ಕೂಡಲಿಲ್ಲ. ಈ ಚೈತನ್ಯ ಬೇರೆಯಲ್ಲ. ತಾನು ಹತ್ತಿರದಿಂದ ಮಾತಾಡಿಸಿದ್ದು ಇದೆ. ಆ ಕಣ್ಣುಗಳನ್ನು ಬಲ್ಲೆ. ಅವು ಖಂಡಿತ ಅಪರಿಚಿತವಲ್ಲ. ಇಂಥದ್ದೇ ನೂರು ಮಾತುಗಳನ್ನು ಮನ ಪಿಸುಗುಟ್ಟುತ್ತಿದ್ದರಿಂದ ವಿಚಲಿತಳಾದಳು. ಬವಳಿ ಬಂದಂತಾಯಿತು. ಛೇರಿನ ಹಿಡಿಯನ್ನು ಆಸರೆಗಾಗಿ ಹಿಡಿದುಕೊಂಡದ್ದು ಬಿಗಿಯಾಗಿ.

ಒಂದಿಂಚು ಎತ್ತಿದ ಅವನ ತಲೆ ಇನ್ನು ಅರ್ಧ ಇಂಚು ಸರಿಯಿತು ಮೇಲಕ್ಕೆ "ವಾಟ್, ಯಾಕೆ ಅಷ್ಟೊಂದು ನರ್ವಸ್ ಆಗ್ತೀರಾ? ನೀವೇನು ಅಪ್ಪ ಅಮ್ಮನ ಬೆಚ್ಚನೆಯ ಆಸರೆಯಲ್ಲಿ ಬೆಳೆದವರಲ್ಲ. ಬೇರೆಯವರ ಗೈಡೆನ್ಸ್‌ಗಿಂತ ಹೆಚ್ಚಾಗಿ ನಿಮ್ಮಲ್ಲಿ ಸ್ವತಂತ್ರ ಮನೋಭಾವ, ಧೈರ್ಯ ಇರ್ಬೇಕಿತ್ತು" ಎಂದು ದುರುಗುಟ್ಟಿಕೊಂಡು ನೋಡಿದ. ಇದು ನಟನೆಯೆ ಎಂದು ಪರೀಕ್ಷಿಸುವಂತಿತ್ತು ಅವನ ನೋಟ. ಮತ್ತಷ್ಟು ಗಲಿಬಿಲಿಗೊಂಡರೂ ಕಣ್ಮಣಿ ಆ ನೋಟದಿಂದ ಆಕರ್ಷಿತಳಾದಳು. ಆ ಕಣ್ಣುಗಳು ತನಗೆ ಹೊಸವಲ್ಲ. ಬಹಳ ಪರಿಚಿತವಾದವು. ಹೇಗೆ? ಎಲ್ಲಿ? ಅದಕ್ಕೆ ಮಾತ್ರ ಅವಳಲ್ಲಿ ಉತ್ತರವಿಲ್ಲ.

"ನಾನು ಹೇಳಿದ್ದು, ಕೇಳಿಸ್ತಾ? ಸಿಟ್.... ಡೌನ್" ಎಂದ ಸ್ವಲ್ಪ ಕಟುವಾಗಿಯೇ. ಪಟ್ಟೆಂದು ಕೂತಳು. ಹಣೆಯ ಅಂಚನ್ನು ಬೆವರಿನ ಬಿಂದುಗಳು ಆಕ್ರಮಿಸಿದಾಗ, ಕರ್ಚಿಫ್‌ನಿಂದ ಅವನ್ನು ತೊಡೆಯಲು ಅಶಕ್ತಳಾದಳು. "ಇದು ಎ.ಸಿ.ರೂಮು..." ಎಂದವನೇ ಕಾಲಿಂಗ್ ಬೆಲ್ ಒತ್ತಿದ. ಬಂದವನು ಪಂಢರಿ "ನೀರು... ಕೊಡು" ಹೇಳಿದ.

ತಣ್ಣನೆಯ ನೀರನ್ನು ಗ್ಲಾಸಿಗೆ ಬಗ್ಗಿಸಿಕೊಂಡು ಬಂದು ಅವಳ ಮುಂದಿಟ್ಟು ಹೋದ. ಮಿಕ್ಕ ಒಂದಿಬ್ಬರು ಆಳುಗಳು ಇದ್ದರೂ ಪ್ರತಿಯೊಂದು 'ಕರೆ'ಗೂ ಪ್ರತ್ಯಕ್ಷನಾಗುತ್ತಿದ್ದುದ್ದು ಪಂಢರಿಯೆ. ಮಿಕ್ಕವರು ಅವನ ಅಸಿಸ್ಟೆಂಟ್‌ಗಳು.

ಅವರುಗಳಿಗೆ ಇಮ್ಮಿಡಿಯೇಟ್ 'ಬಾಸ್' ಅವನೇ.

"ಕುಡ್ದು... ರಿಲ್ಯಾಕ್ಸ್ ಮಾಡ್ಕೊಳ್ಳಿ. ಮನುಷ್ಯನಿಗೆ ಧೈರ್ಯ ಬಂದಿಲ್ಲದಿದ್ರೆ ಮಿಕ್ಕಿದೆಲ್ಲ 'ನಿಲ್' ಆಗಿಬಿಡುತ್ತೆ. ಹಾಗಾಗ್ಬಾರ್ದು. ನಿಮ್ಗೆ ಕೆಲ್ಸ ಹೇಗೆ ಅನ್ನಿಸ್ತು, ನೀರು ಕುಡ್ದು ಉತ್ತರಿಸಿ." ಫೈಲ್ ನೋಡತೊಡಗಿದವನು ಆಗಾಗ ಗಮನಿಸಿದ, ಅವಳ ಮುಖ ಚರ್ಯೆಯನ್ನು "ತುಂಬ ಇಷ್ಟವಾಯ್ತು" ಹೇಳಿಯೇ ನೀರು ಕುಡಿದಿದ್ದು. ಫೈಲ್ ಮುಚ್ಚಿದ.

"ಎಷ್ಟು ಸಂಬ್ಳ ಎಕ್ಸ್‌ಪೆಕ್ಟ್ ಮಾಡ್ತೀರಾ? ಯೋಚ್ಸಿ ಹೇಳಿ. ಇದು ತುಂಬ ಇಂಪಾರ್ಟೆಂಟ್. ಆರು ತಿಂಗಳ ಅಗ್ರಿಮೆಂಟ್‌ಗೆ ಸಹಿ ಹಾಕ್ಬೇಕಾಗುತ್ತೆ. ಅಲ್ಲಿವರ್ಗ್ಗೂ ನೀವು ಇಲ್ಲೇ ಕೆಲ್ಸ ಮಾಡ್ಬೇಕು. ಆವರೆಗೂ ನಿಮ್ಮ ಸಂಬಳದಲ್ಲಿ ಯಾವ್ದೇ ಬದಲಾವಣೆ ಇರೋಲ್ಲ" ಒತ್ತಿ ಹೇಳಿದ.

"ಥ್ಯಾಂಕ್ಯೂ ಸರ್, ನೀವು ಸಂಬ್ಳ ಎಷ್ಟು ಬೇಕಾದ್ರೂ ಕೊಡಿ". ಸಂತೋಷದಿಂದ ತಬ್ಬಿಬ್ಬಾಗಿ ನುಡಿದಳು. ಒಮ್ಮೆ ನೋಡಿದ. ಅವಳಿನ್ನು ಚೇತರಿಸಿಕೊಂಡಿಲ್ಲವೆನಿಸಿತು. "ಇನ್‌ಫಿಯಾರಿಟಿ ಕಾಂಪ್ಲೆಕ್ಸ್ ಒಳ್ಳೆದಲ್ಲ. ಅದ್ರಿಂದ ಹೊರ್ಗೆ ಬರೋ ಪ್ರಯತ್ನ ಮಾಡಿ. ನಿಮ್ಗೆ ಮೂರು ಸಾವಿರ ಸಂಬ್ಳ. ಹಿಂದಿನ ತಿಂಗಳಿನ ಸಂಬಳವನ್ನು ಮ್ಯಾನೇಜರ್ ಬಳಿ ತಗೊಳ್ಳಿ. ಅಮ್ಮನ ವಿಷ್ಯದಲ್ಲಿ ಒಂದು ಸಣ್ಣ ತಪ್ಪನ್ನು ಕೂಡ ನಾನು ಸಹಿಸೋಲ್ಲ, ಬಿ ಕೇರ್‌ಫುಲ್" ಎಚ್ಚರಿಸಿದ.

ಹೊರಗೆ ಬಂದು ಎದೆಯ ಮೇಲೆ ಕೈಯಿಟ್ಟುಕೊಂಡು ಭಾರವಾದ ಉಸಿರು ದಬ್ಬಿದಳು. ಅವಳಿಗೆ ಬಹಳ ಸಂತೋಷವಾಗಿತ್ತು. ದೊಡ್ಡ ಸಂಬಳವೆಂದೇನಲ್ಲ, ಆದರೆ ಆ ಆನಂದಕ್ಕೆ ನಿಜವಾದ ಕಾರಣ ಹುಡುಕಲಾರಳು. ತಕ್ಷಣ ಫೋನ್ ಮಾಡಿ ವಾಸಂತಿಗೆ ತಿಳಿಸಬೇಕೆನಿಸಿತು. ಅದು ಅಸಾಧ್ಯ. ಇಲ್ಲಿ ಕೂಡ ಅಂಥ ಸ್ವತಂತ್ರ ಉಪಯೋಗಿಸಿಕೊಳ್ಳುವುದು ತಪ್ಪು. ಅಲ್ಲಿ ವಾಸಂತಿಗೆ ಅಂಥ ಅವಕಾಶವಿಲ್ಲ. ಲಂಚ್‌ಟೈಮ್‌ನಲ್ಲಿ ಹೊರಗೆ ಬಂದಾಗ ಪ್ರೈವೇಟ್ ಟೆಲಿಫೋನ್ ಬೂತ್‌ನಿಂದ ಫೋನ್ ಮಾಡಬೇಕಿತ್ತು.

ರೂಮಿನೊಳಕ್ಕೆ ಓಡಿ ಬಂದವಳೇ ಸುಬ್ಬಲಕ್ಷ್ಮಿಯವರ ಮುಂದೆ ಕೂತು ಬಿಕ್ಕಿ ಬಿಕ್ಕಿ ಅತ್ತಳು. ಆಕೆಗೆ ಮಾತ್ರವಲ್ಲ, ಸಿಸ್ಟರ್‌ಗೂ ಗಾಬರಿ. "ಏನಾಯ್ತು... ಏನಾಯ್ತು? ನಿನ್ನ ಫ್ರೆಂಡ್ ಕ್ಷೇಮವಾಗಿದ್ದಾಳ?" ಆ ಪ್ರಶ್ನೆಗಳಿಗೆ ಏನು ಉತ್ತರಿಯಾಳು?.

"ಚೆನ್ನಾಗಿದ್ದಾಳೆ, ಏನೋ ನೆನಪು" ಸಾವರಿಸಿಕೊಂಡಳು.

ರೂಮಿನಲ್ಲಿ ಹೋಗಿ ಕೂತು ಅಳುವಿನಲ್ಲಿ ಸಂತೋಷ ಅನುಭವಿಸಿದಳು. ಇಂಥ ವಿಚಿತ್ರ ಮನಸ್ಥಿತಿಯನ್ನು ಯಾರೊಂದಿಗಾದರೂ ಹೇಳಿಕೊಂಡರೇ ನಗಬಹುದು, ಅಥವಾ ನಟನೆಯೆನ್ನಬಹುದು, ಇದೊಂದು ತಂತ್ರವೆಂದು ಮೂದಲಿಸಬಹುದು, ಇದು ಗುಪ್ತವಾಗಿದ್ದು ತನ್ನೊಳಗೆ ಸಾಯಬೇಕೆಂದುಕೊಂಡಳು.

ಅಂದು ಶುಕ್ರವಾರ, ಮಧ್ಯ ಬಂದ ಶನಿವಾರ ದಾಟಿ ಭಾನುವಾರ ಬಂದರೇ ಮಾತ್ರ ಅಂದು ಒಂದೆರಡು ಗಂಟೆಗಳು ಬಿಡುವು ಪಡೆಯಬಹುದು. ಇನ್ನು ಶನಿವಾರ ಸಿಸ್ಟರ್ ಅರ್ಧ ದಿನ ರಜೆ, ಮಧ್ಯಾಹ್ನದ ನಂತರ ಪಡೆದುಕೊಳ್ಳಬಹುದು.

ಇನ್ನಷ್ಟು ಮುತುವರ್ಜಿಯಿಂದ ಮಾತ್ರವಲ್ಲ ಪ್ರೀತಿಯಿಂದ ಸುಬ್ಬಲಕ್ಷ್ಮಿಯ ಕೆಲಸಗಳನ್ನು ಮಾಡುವುದರ ಜೊತೆಗೆ ಅವರಿಗೆ ಆಸಕ್ತಿ ಇರುವ ವಿಷಯಗಳನ್ನು ಓದಿ ಹೇಳುವುದು ಮಾತ್ರವಲ್ಲ, ಸಂದೇಹವಾದ ವಿಷಯಗಳನ್ನು ಚರ್ಚಿಸಿ ಸಲಹೆ ಪಡೆಯುತ್ತಿದ್ದಳು.

ಭಾನುವಾರ ಬಂದೇ ಬಂತು, ಸುಬ್ಬಲಕ್ಷ್ಮಿ ಎಕ್ಸರ್‌ಸೈಜ್, ಸ್ನಾನ, ಬ್ರೇಕ್‌ಫಾಸ್ಟ್ ಮುಗಿದ ಕೂಡಲೇ ಮ್ಯಾನೇಜರ್‌ನಿಂದ ಪಡೆದುಕೊಂಡ ಸಂಬಳದ ಕವರ್‌ನ ತನ್ನ ಪರ್ಸ್‌ಗೆ ಸೇರಿಸಿಕೊಂಡು ಪರ್ಮಿಷನ್ ಪಡೆದೇ ದೀಪಾಂಕುರ ಬಿಟ್ಟಿದ್ದು.

ಈಚೆಗೆ ಕೆಲಸ ಬಿಟ್ಟ ಮೇಲೆ ಆರ್ಥಿಕವಾಗಿ ಕಷ್ಟವೆನಿಸಿತು. ವಾಸಂತಿ ತಾನೇ ಅವಳ ಪರ್ಸ್‌ನಲ್ಲಿ ಹಣ ತುಂಬಿರುತ್ತಿದ್ದಳು. ಕೃತಜ್ಞತೆಯ ಭಾರದಿಂದ ಅವಳ ಆತ್ಮಬಲ ಕುಗ್ಗುತ್ತಿತ್ತು. ಇಂದು ಪೂರ್ತಿಯ ಖರ್ಚು ತನ್ನದೇ! ಅವಳಿಗೆ ತಾನೇನು ಕೊಡಿಸಬಹುದು? ಊಟ, ತಿಂಡಿ, ಇರುವಿಕೆ ಪೂರ್ತಿ ಮುಫ್ತಾದುದ್ದರಿಂದ ಸಂಬಳ ಗಂಟೇ! ಆದ್ದರಿಂದ ಮುಕ್ಕಾಲಷ್ಟಾದರೂ ಉಳಿಸಿಕೊಳ್ಳಬಹುದು. ಆ ಹಣವ ಏನು ಮಾಡಬಹುದು? ಈ ಪ್ರಶ್ನೆಗೆ ಅವಳಿಗೆ ನಗು ಬಂತು.

ಆಟೋ ಹಿಡಿದು ವುಮೆನ್ಸ್ ಹಾಸ್ಟಲ್ ಬಳಿ ಇಳಿಯೋ ವೇಳೆಗೆ ರಾತ್ರಿಯ ನೈಟಿಯಲ್ಲಿಯೇ ಇದ್ದ ವಾಸಂತಿ ಬಂದು ಅಪ್ಪಿಕೊಂಡಳು. "ಬೆಳಗ್ಗಿಂದ ನಿನ್ನ ಎದುರು ನೋಡೋದೇ ಆಯ್ತು." ಅನಂದದಿಂದ ಹಕ್ಕಿಯಾಗಿದ್ದಳು. "ಬೇಗ.... ಬಂದೇ, ನಂಗೆ ಸದ್ಯಕ್ಕೆ ಆರು ತಿಂಗ್ಳು ಕಾಲ

ಕೆಲ್ಸದಲ್ಲಿ ಮುಂದುವರಿಯೋ ಆರ್ಡರ್ ಆಗಿದೆ. ಎಷ್ಟೊಂದು ಸಂತೋಷದ ವಿಷ್ಯ. ನಿಂಗೋಸ್ಕರ ಚಾಕಲೇಟ್ ತಂದಿದ್ದೀನಿ" ಚಾಕಲೇಟು ಬಾರ್ ಪರ್ಸ್‌ನಿಂದ ತೆಗೆದಳು. ಇದು ವಾಸಂತಿಗೆ ಅಷ್ಟು ಸಂತೋಷದ ವಿಷಯವೇನು ಅಲ್ಲ, 'ಸದ್ಯಕ್ಕೆ ಕಣ್ಮಣಿ ತನ್ನಿಂದ ದೂರ' ಎನ್ನುವ ನೋವೇ ಹೆಚ್ಚು.

ಮೌನವಾಗಿ ಕೈ ಹಿಡಿದು ಕರೆದೊಯ್ದಳು. "ನನ್ನ ರೂಮಿಗೆ ರೂಪಾಂತ ಇನ್ನೊಬ್ಬಾಕೆ ಫಿಲಪ್ ಆಗಿದ್ದಾಳೆ. ಗೌರ್ನಮೆಂಟ್ ಜಾಬ್. ಪರ್ಮನೆಂಟ್ ಸಂಬಳಾಂದ್ರೆ, ನಮ್ಗಿಂತ ಉತ್ತಮವಾದ ಸ್ಥಿತಿಯಲ್ಲಿದ್ದಾಳೆ. ಸ್ವಲ್ಪ ರಿಸರ್ವ್ಡ್ ನೇಚರ್. ನಾನು ಊಟ ಮುಗ್ಸಿ ರೂಮಿಗೆ ಬರೋ ವೇಳೆಗೆ ಮಲಗಿರ್ತಾಳೆ. ಬೆಳಿಗ್ಗೆ ನಂಗೆ ಮೊದ್ಲು ಸ್ನಾನ, ಬ್ರೇಕ್‌ಫಾಸ್ಟ್ ಮುಗ್ಸಿಕೊಂಡಿರ್ತಾಳೆ. ಬರೀ ಹಲೋ.... ಹಲೋ... ಅಷ್ಟರಲ್ಲಿ ಮುಗ್ದುಹೋಗುತ್ತೆ". ರೂಮು ತಲುಪುವ ಮುನ್ನ ಇಷ್ಟು ಹೇಳಿ ಮುಗಿಸಿಬಿಟ್ಟಿದ್ದರಿಂದ, ಐರನ್ ಮಾಡುತ್ತಿದ್ದ ರೂಪನ ನೋಡಿ ಏನು ಅನ್ನಿಸಲಿಲ್ಲ. ಬರೀ ಮುಗುಳ್ನಗೆಯ ವಿನಿಮಯ.

"ಇವ್ಳೇ... ಕಣ್ಮಣಿ" ಪರಿಚಯಿಸಿದಳು.

ಈಗಲೂ ಬರೀ ಮುಗುಳ್ನಗೆ ಬೀರಿದಳಷ್ಟೆ. ಬ್ಲೌಸ್‌ಗಳನ್ನು ತೆಗೆದಿಟ್ಟು, ಐರನ್ ಬಾಕ್ಸ್ ಮಂಚದ ಕೆಳಕ್ಕೆ ಸರಿಸಿ ಕ್ಲಿಪ್ ಹಾಕಿದ್ದ ಕೂದಲನ್ನು ಸರಿಯಾಗಿ ಭುಜದ ಮೇಲೆ ಹರಡಿಕೊಂಡು ಕೂತ ನಂತರವೇ ಇವಳತ್ತ ನೋಟ ಹರಿಸಿದ್ದು.

"ನೀವು ಚೈತನ್ಯ ಗ್ರೂಪ್ಸ್ ಆಫ್ ಕಂಪನೀಸ್‌ನಲ್ಲಾ ಕೆಲ್ಸ ಮಾಡ್ತಾ ಇರೋದು?" ಕೇಳಿದಳು. ಕೇಳುವಿಕೆಯಲ್ಲಿ ಕೂಡ ಗತ್ತು ಇದೆಯೆನಿಸಿತು. "ಅಲ್ಲ, ಅವ್ರ ಬಂಗ್ಲೆಯಲ್ಲಿ... ಚೈತನ್ಯ ಅವ್ರ ತಾಯಿನ ನೋಡ್ಕೋತಾ ಇದ್ದೀನಿ" ಎಂದಳು ವಾಸಂತಿಯ ಮಂಚದ ಮೇಲೆ ಕೂರುತ್ತ.

"ಇನ್ನು ಒಳ್ಳೇದೇ ಆಯ್ತು! ಅವ್ರ ಕಂಪನಿಯ ಮಾರ್ಕೆಟಿಂಗ್ ಸೆಕ್ಷನ್‌ನ ಕೆಲವು ಪೋಸ್ಟ್‌ಗಳಿಗೆ ಇಂಟರ್‌ವ್ಯೂ ಕರೆದಿದ್ದಾರೆ. ನನ್ನ ತಮ್ಮ ಕೂಡ ಒಬ್ಬ ಕ್ಯಾಂಡಿಡೇಟ್ ನೀವೊಂದ್ಮಾತು ಹೇಳೋಕ್ಕಾಗುತ್ತ?" ನೇರವಾಗಿ ಕೇಳಿದಾಗ ಅವಳೇನು ತಬ್ಬಿಬ್ಬಾಗಲಿಲ್ಲ. "ಇಲ್ಲ, ನಾನು ರೀಸೆಂಟಾಗಿ ಸೇರ್ಕೊಂಡಿರೋದು. ಅಷ್ಟೆಲ್ಲ ಹೇಗೆ ಹೇಳೋಕ್ಕಾಗುತ್ತೆ?" ಉತ್ತರವು ಕೂಡ ನೇರವಾಗಿತ್ತು.

ರೂಪ ಮಾತೇ ಆಡಲಿಲ್ಲ. ಕೂದಲು ಒಣಗಿಸಿಕೊಳ್ಳುವ ಡ್ರೈಯರ್‌ನಿಂದ ತಲೆಯೊಣಗಿಸಿಕೊಳ್ಳತೊಡಗಿದಾಗ, ಹೊರಗೆ ಹೋಗೋಣವೆಂದು ಕಣ್ಣಲ್ಲಿಯೇ ಸನ್ನೆ ಮಾಡಿದ ವಾಸಂತಿ ಬೇಗ ಬೇಗನೆ ಸೀರೆಯುಟ್ಟು ಮುಖಕ್ಕೆ ಒಂದು ಚೂರು ಕ್ರೀಮ್ ಬಳೆದುಕೊಂಡು ಪೌಡರ್ ಲೇಪನ ಕೊಟ್ಟು, ಸ್ಟಿಕರ್ ಅಂಟಿಸಿಕೊಂಡು ಪರ್ಸ್ ಎತ್ತಿಕೊಂಡು ಚಪ್ಪಲಿ ಮೆಟ್ಟಿ ರೂಮಿನಿಂದ ಹೊರಬಿದ್ದಳು.

"ಬರ್ತೀನಿ....." ಸೌಜನ್ಯಕ್ಕಾಗಿ ಹೇಳಿದಳು. ಅವಳು 'ಹಾ' 'ಹ್ಞೂ' ಎರಡು ಅನ್ನಲಿಲ್ಲ.

ಹಾಸ್ಟಲ್‌ನ ಕಾಂಪೌಂಡ್‌ನಿಂದ ಹೊರ ಬೀಳುವ ವೇಳೆಗೆ ಎದುರಾದ ಕುಕ್ "ಹೇಗಿದ್ದೀಯಮ್ಮ ಕಣ್ಮಣಿ? ಮಧ್ಯಾಹ್ನದ ಊಟಕ್ಕೆ ಇಲ್ಲಿಗೆ ಬಂದ್ಬಿಡು. ಹಸಿ ಬಟಾಣಿ ಜೊತೆ ಎಲ್ಲಾ ತರಕಾರಿಗಳನ್ನು ಹಾಕಿ ಕೂಟು ಮಾಡ್ತೀನಿ" ಎಂದರು ಇಳಿಸುತ್ತಿದ್ದ ತರಕಾರಿಯ ಬುಟ್ಟಿಯ ಕಡೆ ತೋರಿಸುತ್ತ. "ಮೀಟರ್ ಚಾರ್ಜ್ ಹದಿನಾರು ಇಪ್ಪತ್ತು ಪೈಸೆನಂತೆ. ಬರೀ ಹದಿನಾರು ರೂಪಾಯಿಗೆ ಒಪ್ತಾ ಇಲ್ಲ. ಫಿರ್ಯಾದು ತಂದವನ ಕೈಯಲ್ಲಿನ ಹದಿನಾರು ರೂಪಾಯಿಗಳ ಜೊತೆ ಇನ್ನೊಂದು ರೂಪಾಯಿ ಸೇರಿಸಿ ಆಟೋ ಡ್ರೈವರ್ ಕೈಯಲ್ಲಿಟ್ಟ ಕಣ್ಮಣಿ ಹತ್ತು...." ಎಂದಳು. ಸಿಟಿ ಪಾರ್ಕ್‌ನ ಬಳಿ ಆಟೋ ನಿಂತಾಗ ಇಬ್ಬರು ಇಳಿದರು.

"ಆರಾಮಾಗಿ ಮಾತಾಡ್ಬೇಕು. ರೂಪ ಇಡೀ ಭಾನುವಾರ ರೂಮಿನಲ್ಲೇ ಇರ್ತಾಳೆ. ಒಂದಷ್ಟು ಇಂಗ್ಲೀಷ್ ಮ್ಯಾಗಝೀನ್‌ಗಳನ್ನು ಕೂಡಿ ಹಾಕಿಕೊಂಡು ಅಂದೆಲ್ಲ ಓದಿ ಮುಗಿಸ್ತಾಳೆ. ಊಟದ ಸಮಯದಲ್ಲೂ ಕೂಡ ಯಾರೊಂದಿಗೂ ಹೆಚ್ಚಿಗೆ ಮಾತಾಡೋಲ್ಲ. ಅವ್ಳ ತಂದೆ ಅಮಲ್ದಾರರಾಗಿದ್ರಂತೆ... ಅದ್ನ ಹೇಳಿದ್ದು ವಾರ್ಡನ್" ವಾಸಂತಿ ಹೇಳಿದಳು. ಅವಳು ಬಂದಾಗಿನಿಂದ ರೂಮಿನಲ್ಲಿ ಉಸಿರು ಬಿಡದಂತೆ ಚಡಪಡಿಸುತ್ತಿದ್ದಳು. "ಕಣ್ಮಣಿ ವಾಪಸ್ಸು ಬಂದರೇ, ಆಕೆನಾ ಬೇರೆ ಕಡೆ ಷಿಫ್ಟ್ ಮಾಡ್ತೀನಿ" ಓನರ್ ಹೇಳಿದ್ದರು. ಆದರೆ ಕಣ್ಮಣಿ ಬರುವು ಮುರಿದು ಬಿದ್ದಿದ್ದರಿಂದ ಸಧ್ಯಕ್ಕೆ ಆಕೆಯೇ ರೂಮುಮೇಟ್.

ಅಲ್ಲಲ್ಲಿ ಮರಗಳು, ಬಳ್ಳಿ ಹಬ್ಬಿಸಿದ ಕಮಾನುಗಳು ಇದ್ದುದ್ದರಿಂದ ನೆರಳಿಗೆ ಪರದಾಡಬೇಕಿರಲ್ಲಿಲ್ಲ. ಉದ್ದದ ಬಳ್ಳಿ ಹಬ್ಬಿಸಿದ ಕಮಾನಿನೊಳಗಿದ್ದ ಮುಂದಕ್ಕೆ ಹೋಗಿ ಪೂರ್ತಿ ಮರದ ನೆರಳಿದ್ದ ಕಲ್ಲು ಹಾಸಿನ ಮೇಲೆ ಕೂತರು.

ಈಗಾಗಲೇ ಜನರ ಓಡಾಟ ಜಾಸ್ತಿ ಆಗಿತ್ತು. ಮಕ್ಕಳು ಮರಿಗಳೊಂದಿಗೆ ತಿಂಡಿಯ ಡಬ್ಬಿಗಳನ್ನು ಹೊತ್ತುಕೊಂಡು ಬರುತ್ತಿದ್ದರು ಭಾನುವಾರಗಳನ್ನು ಕಳೆಯಲು ಪಾರ್ಕಿನಲ್ಲಿ.

ಪರ್ಸ್‌ನಿಂದ ಒಂದು ಕವರ್ ತೆಗೆದು ವಾಸಂತಿಯ ಕೈಯಲ್ಲಿಟ್ಟಳು. "ನನ್ನ ಹೋದ ತಿಂಗಳ ಸಂಬ್ಳ, ಸದ್ಯಕ್ಕೆ ಆರು ತಿಂಗಳವರ್ಗೂ ಅಲ್ಲಿರ್ಬಹ್ದು. ಮಧ್ಯೆ ತೆಗೆಯ್ಯೋ ಛಾನ್ಸ್ ಕಡ್ಮೆ".

ವಾಸಂತಿಯ ಕಣ್ಣಂಚು ಒದ್ದೆಯಾಯಿತು.

"ನಂಗ್ಯಾಕೇ ಕೊಟ್ಟೆ?" ಸಂಕೋಚದ ಮುಖ ಮಾಡಿದಳು.

"ಪತ್ರಿಕೆಯ ಕೆಲ್ಸಕ್ಕೆ ಸೇರಿದಾಗ ಮೊದಲ ತಿಂಗಳ ಸಂಬ್ಳ ಬಂದಾಗ ಕಕ್ಕಾಬಿಕ್ಕಿಯಾಗಿದ್ದೆ. ಆ ಸಂತೋಷವನ್ನು ಹಂಚಿಕೊಳ್ಳಲು ಯಾರಿರಲಿಲ್ಲ. ಹಣ ಕೂಡ ಜವಾಬ್ದಾರಿಯೆನಿಸಿತು. ಈಗ ನನ್ನ ಅದೃಷ್ಟಕ್ಕೆ ನೀನಿದ್ದೀಯಾ, ಹಣದ ಜವಾಬ್ದಾರಿ ನೀನು ಇಟ್ಕೋ".

ಕಣ್ಮಣಿಯ ಮಾತುಗಳಿಗೆ ಅತ್ತುಬಿಟ್ಟಳು. ಇಂಥ ಜವಾಬ್ದಾರಿಯೊರೆಸಲು ತನಗೇ ಯಾರಿದ್ದರು? ಅದೃಷ್ಟ ಅವಳದಲ್ಲ; ತನ್ನದು ಎಂದುಕೊಂಡಳು. ಗಂಟಲುಬ್ಬಿ ಮಾತುಗಳಿಗಾಗಿ ತಡವರಿದಳೇ ವಿನಃ ಮಾತಾಡಲು ಶಕ್ಯಳಾಗಲಿಲ್ಲ.

ಕೊಸರಾಟ, ಬಲವಂತಗಳ ನಡುವೆ ಗೆದ್ದಿದ್ದು ಕಣ್ಮಣಿಯೆ. "ಠೇವಣಿಯಾಗಿ ನಿನ್ನ ಹೆಸರಲ್ಲೇ ಇಡ್ತೀನಿ. ನಾವಿಬ್ರೂ ಒಂದೇ ದೋಣಿಯ ಪ್ರಯಾಣಿಕರು. ನಮ್ಮ ನಮ್ಮ ಭವಿಷ್ಯಗಳ್ನ ನಾವೇ ರೂಪಿಸ್ಕೋಬೇಕು. ಇದು 'ಸರಿ' ಇದು 'ತಪ್ಪುಂತ' ಹೇಳೋ ಹಿರಿಯರು ಕೂಡ ಇಲ್ಲ." ಆ ಕ್ಷಣ ಶಬರಿ, ಅವರ ಕುಟುಂಬ, ಗೋಪಾಲ ಸಮಸ್ತರನ್ನು ಮರೆತುಬಿಟ್ಟಳು. ಈಗ ಅವಳಿಗೆ ಯಾರ ಮೇಲು ನಂಬಿಕೆ ಇರಲಿಲ್ಲ ವಾಸಂತಿಗೆ.

ಹೋಗುತ್ತಿದ್ದ ಕಳ್ಳೇಕಾಯಿ ಮಂಕರಿಯವನಿಂದ ಒಂದಿಷ್ಟು ಕಳ್ಳೇಕಾಯಿ ಕೊಂಡು ಪೇಪರಿಗೆ ಹಾಕಿಸಿಕೊಂಡ ನಂತರ ಕರ್ಣ, ತನ್ನ ಪ್ರೇಮ ಪ್ರಕರಣದ ಆದ್ಯಂತವನ್ನು ಉಸುರಿದ್ದು. ಸಂತೋಷವೋ, ದುಃಖವೋ ಅರ್ಥವಾಗದ ಸ್ಥಿತಿ ತಲುಪಿದಳು ಕಣ್ಮಣಿ. ಅವಳಿದ್ದ ಅನಾಥಾಶ್ರಮದ ಒಂದಿಬ್ಬರು ಯುವತಿಯರಿಗೆ ಮದುವೆಯಾಗಿತ್ತು. ಇಬ್ಬರ ಬದುಕು ನರಕವಾಗಿ ಹಿಂದಿರುಗಿ ಅಲ್ಲೇ ಕೆಲಸ ಮಾಡಿಕೊಂಡಿದ್ದರು.

"ಕಂಗ್ರಾಟ್ಸ್ ಹೇಳೋಲ್ವಾ?" ವಾಸಂತಿ ಕೇಳಿದಾಗಲೇ ಎಚ್ಚೆತ್ತಿದ್ದು. "ನಂಗೆ ಭಯ ವಾಸಂತಿ. ಆ ಮನುಷ್ಯನ ಹಿನ್ನಲೆಯನ್ನು ಸ್ವಲ್ಪ ಚೆನ್ನಾಗಿ ತಿಳ್ಕೋಬೇಕಿತ್ತು. ಮುಂದೆ ಅನಾಹುತವಾದ್ರೆ... ಭವಿಷ್ಯನೇ ಇರೋಲ್ಲ. ನೀನು ಅವಸರಪಟ್ಟೆಯೇನೋ" ಎಂದಳು ಮೆಲ್ಲಗೆ.

ಸಂತೋಷದಿಂದ ಹಕ್ಕಿಯಂತೆ ಗಗನದಲ್ಲಿ ಹಾರಾಡುತ್ತಿದ್ದವಳು ರೆಕ್ಕೆ ಕತ್ತರಿಸಿಕೊಂಡು ನೆಲಕ್ಕೆ ಬಿದ್ದವಳಂತೆ ಪರಿತಪಿಸಿದಳು. ಇದೇ ಪಾರ್ಕ್‌ನಲ್ಲಿ ಹಿಂದಿನ ಭಾನುವಾರ ಅವಳ ತಲೆಯ ಮೇಲೆ ಕೈಯಿಟ್ಟು 'ನೀನಿಲ್ದೇ ನಾನು ಬದ್ಕಲಾರೆ' ಎಂದಿದ್ದ. ಅಂದು ಜಗತ್ತು ತುಂಬ ಸುಂದರವಾಗಿ ಕಂಡಿತ್ತು.

"ಇಲ್ಲ, ಕರ್ಣರ ಬಗ್ಗೆ ನಿಂಗೆ ಗೊತ್ತಿಲ್ಲ. ನನ್ನ ಎಷ್ಟು ಪ್ರೀತಿಸ್ತಾರೇಂದರೇ, ಅವ್ರಿಗೆ ಸಾಧ್ಯವಾದ್ರೆ... ನಂಗೋಸ್ಕರ ಒಂದು ತಾಜ್ ಮಹಲ್ ಕೂಡ ಕಟ್ಟಿ ಬಿಡ್ತಾರೆ." ತುಸು ಆವೇಶಭರಿತಳಾಗಿ ಹೇಳಿದಳು.

ಕಣ್ಮಣಿ ಮೌನವಾಗಿ ಅವಳನ್ನೇ ನೋಡುತ್ತ ಕೂತಳು. ಆತ್ಮಾಭಿ ಮಾನದಿಂದ ತನ್ನ ಅನ್ನವನ್ನು ತಾನೇ ಸಂಪಾದಿಸಿಕೊಂಡು ತಿನ್ನಬೇಕೆಂದು ಅನಾಥಾಶ್ರಮದಿಂದ ಹೊರ ಬಂದಿದ್ದಳು. ನಂತರ ಆಕಸ್ಮಿಕವಾಗಿ ಚೈತನ್ಯನನ್ನು ಕಂಡ ಮೇಲೆ ಬೇರೆಯವರನ್ನು ಪ್ರೀತಿಸುವುದು ಮದುವೆಯಾಗುವುದು ಬಹಳ ದೂರವೇ. ಅದನ್ನು ಯೋಚಿಸಲಾರಳು. ಅದೇ ಕರ್ಣ ಪ್ರೇಮ ಪ್ರೀತಿಯ ಮಾತುಗಳಿಂದ ಇವಳನ್ನು ಒಪ್ಪಿಸುವುದು ಸಾದ್ಯವಿರಲ್ಲಿಲ್ಲ.

"ಏನಾದ್ರೂ ಮಾತಾಡು ಕಣ್ಮಣಿ" ಅವಳ ತೋಳಿಡಿದು ಅಲುಗಾಡಿಸಿದಾಗ ಮತ್ತಷ್ಟು ಸಪ್ಪಗಾದಳು. "ಅಂಥ ಪ್ರೇಮವಿದ್ರೆ..... ಒಳ್ಳೇದೆ. ಅಕಸ್ಮಾತ್ ಮೋಸವಾದ್ರೆ ನಮ್ಮ ಪರ ಮಾತಾಡೋರು ಯಾರು? ನಂಗೆ ಭಯ ಅಷ್ಟೆ."

ವಾಸಂತಿ ಅವಳನ್ನು ನೋಡಿದಳು. ಮಾತುಗಳಲ್ಲಿ ಇದ್ದಿದ್ದೇ ಕಣ್ಣುಗಳಲ್ಲಿ ಕೂಡ. ಅವಳಲ್ಲಿನ ವಿವೇಕ ಜಾಗೃತವಾಗಿದ್ದುದರಿಂದ ಸರಿಯೆನಿಸಿತು ಕೂಡ.

"ನೀನು ಹೇಳೋದು ಕೂಡ ಕರೆಕ್ಟ್. ಒಂಟಿ ಹೆಣ್ಣನ್ನು ಮೋಸ ಮಾಡೋದು ಸುಲಭಾಂತ ಕೆಲವರು ತಿಳ್ಕೊಂಡ್ ಇರ್ತಾರೆ. ಕರ್ಣನ ಬಗ್ಗೆ ಹೇಗೆ ತಿಳಿಯೋದು? ವ್ಯಾಪಾರ ಮಾಡ್ತೀನಿ ಅಂತಾನೆ. ನಾನು ಏನು ಕೇಳಿಲ್ಲ" ತೋಡಿಕೊಂಡಳು.

"ಈಗೇನು ಮಾಡೋಣ? ಕರ್ಣನ ಬಗ್ಗೆ ಒಂದಿಷ್ಟು ತಿಳ್ಕೋಬೇಕು.

ಅಡ್ರೆಸ್ ತಗೋ, ನಾನು ನೀನು ಹುಡ್ಕಿಕೊಂಡ್ಹೋಗೋಣ. ಆ ಮನುಷ್ಯನಿಗೆ ವಿಷ್ಯ ತಿಳಿಯದ ಹಾಗೇ... ಒಂದಿಷ್ಟು ವಿಚಾರನ ಕಲೆ ಹಾಕಿಕೊಳ್ಳೋಣ. ಆಮೇಲೆ ಮಿಕ್ಕಿದ್ದು" ಕಣ್ಮಣಿ ಸೂಚಿಸಿದಳು.

ಅದು ವಾಸಂತಿಗೆ ಸರಿಯೆನಿಸಿತು. ಇವಳ ಬದಲು ಅವನೇ ವಿವಾಹಕ್ಕೆ ಒತ್ತಾಯಿಸುತ್ತಿದ್ದ. 'ದೇವಸ್ಥಾನ, ರಿಜಿಸ್ಟರ್ ಆಫೀಸ್' ಯಾವುದರಲ್ಲಾದರೂ ತಾಳಿ ಕಟ್ಟಲು ಸಿದ್ಧವೆಂದು ಧಾರಾಳವಾಗಿ ಘೋಷಿಸಿದ್ದ.

"ವಿವಾಹಕ್ಕೆ ತುಂಬ ಒತ್ತಾಯಿಸುತ್ತಿದ್ದಾನೆ. ನನ್ನ ಪರವಾಗಿ ನೀನೇ ಬರ್ಬೇಕು ಅಷ್ಟೆ." ಕಣ್ಣೀರು ಹಾಕಿಕೊಂಡಳು ವಾಸಂತಿ. ಗೋಪಾಲನ ನಗು ಮುಖ ತೇಲಿತು ಕಣ್ಮಣಿ ಅಕ್ಷಿಪಟಲದ ಮುಂದೆ. ಅವರನ್ನೆಲ್ಲ ಯಾಕೆ ಮರೆತಳು? "ಊರಿಗೆ ಒಂದು ಪತ್ರ ಹಾಕಿದ್ರೆ" ಪ್ರಸ್ತಾಪಿಸಿದಳು.

"ಬೇಡವೇ, ಬೇಡ! ನನ್ನ ಸಾಕಿ ದೊಡ್ಡವಳನ್ನಾಗಿ ಮಾಡಿದ್ದಾರೆ. ಈ ಜನ್ಮದಲ್ಲಿ ಅವರ ಋಣ ತೀರಿಸೋಕೆ ಸಾಧ್ಯವಿಲ್ಲದಿದ್ದರೇ, ಮುಂದಿನ ಜನ್ಮದಲ್ಲಿಯಾದ್ರೂ ತೀರಿಸ್ತೀನಿ. ಅಷ್ಟು ಸಾಕು.... ಅವರ ಸಂಬಂಧ" ನಿರಾಕರಿಸಿದಳು ವಾಸಂತಿ.

ಆಮೇಲೆ ಮಾತಾಡಿದ ಮಾತುಗಳೆಲ್ಲ ಕರ್ಣನಿಗೆ ಸಂಬಂಧಿಸಿದ್ದೆ. ಅವನ ನಗು, ಅವನಿಗೆ ಇಷ್ಟವಾದ ತಿಂಡಿ, ಎಷ್ಟು ಒಂದೇ ... ಎರಡೇ ಎಲ್ಲಾ ತಿಳಿದುಕೊಂಡಂತೆ ಪ್ರಸ್ತಾಪಿಸಿದಳು. ಆಶ್ಚರ್ಯಚಕಿತಳಾದಳು ಕಣ್ಮಣಿ. ಇಷ್ಟು ಕಡಿಮೆ ಸಮಯದಲ್ಲಿ ಬೆಳೆದ ಪ್ರೇಮದ ಕತೆ ಸುಂದರವಾದ ಮುಗಿಂಪು ಮಾತ್ರವಲ್ಲ ದೀರ್ಘಾಯುಸ್ಸು ಕೂಡ ಇರಲಿಯೆಂದು ದೇವರಲ್ಲಿ ಬೇಡಿಕೊಂಡಳು.

ತಟ್ಟನೇ ನೆನಪಿಸಿಕೊಂಡ ವಾಸಂತಿ "ಒಂದ್ಮಾತು, ಮೂರರ ಸುಮಾರಿಗೆ ಅರುಣ ಥಿಯೇಟರ್ ಬಳಿ ಇರಲು ತಿಳಿಸಿದ್ದಾರೆ. ಇನ್ನು ಸೆಕೆಂಡ್ ವೀಕ್, ಬಹುಶಃ ಟಿಕೆಟ್ ಸಿಕ್ಕುತ್ತೋ ಇಲ್ವೋ, ನೀನು ... ಬರ್ತೀಯಾ?" ಕೇಳಿದಳು ಉತ್ಸಾಹದಿಂದ, ಕರ್ಣನನ್ನು ತೋರಿಸಬಹುದೆಂದು.

"ಆಗೋಲ್ಲ ! ನಾನು ಬೇಗ್ನೇ ಹೋಗ್ಬೇಕು" ವಾಚ್ ಕಡೆ ನೋಡಿದ ಕಣ್ಮಣಿ "ಫೋನ್ ಮಾಡಿ ಬರೋದಿಕ್ಕೇಳು, ಅಥ್ವಾ ನಾವೇ ಹೋಗೋಣ" ಎಂದಳು. ಸಪ್ಪಗಾದಳು ವಾಸಂತಿ. ಅವನ ಫೋನ್ ನಂಬರ್, ಅಡ್ರಸ್ ಎರಡೂ ಅವಳಿಗೆ ಗೊತ್ತಿಲ್ಲ. ಪ್ರೇಮದ ವಿಷಯ ತಾಜ್‌ಮಹಲ್ ಕಟ್ಟುವವರೆಗೂ ಮುಂದುವರಿದಿತ್ತು, ರಿಜಿಸ್ಟರ್ ಆಫೀಸ್ ತಟ್ಟುವ

ಸ್ಥಿತಿಯಲ್ಲಿದ್ದ ಹೆಣ್ಣಿಗೆ, ಗಂಡಿನ ವಿಳಾಸ, ಫೋನ್ ನಂಬರ್ ಗೊತ್ತಿಲ್ಲ!

"ನಂಗೆ ಎರಡ್ಡು ಗೊತ್ತಿಲ್ಲ, ಕಣ್ಮಣಿ. ಲವ್ ಈಸ್ ಬ್ಲೈಂಡ್ ಅನ್ನೋದು ಅದಕ್ಕೆ. ಛೆ, ಎಷ್ಟು ಬೇಗ ಮೂರ್ಖಳಾಗ್ಬಿಟ್ಟೆ" ಚಡಪಡಿಸಿದಳು ವಾಸಂತಿ.

ಕಳ್ಳೇಕಾಯಿ ಸಿಪ್ಪೆಯನ್ನು ಕಾಗದದಲ್ಲಿ ಸುತ್ತಿಕೊಂಡ ಕಣ್ಮಣಿ "ಈಗ್ಲೂ ಏನು ಆಗಿಲ್ವಲ್ಲ! ಹೇಗೂ ಮಧ್ಯಾಹ್ನ ಸಿಕ್ಕಿಯೇ ಸಿಕ್ತಾರೆ ಕರ್ಣ ಭೂಪತಿಯವ್ರು, ವಿಚಾರಿಸ್ಕೊ. ಒಂದಿಷ್ಟು ಓಡಾಡಿಕೊಂಡು ಊಟ ಮುಗಿಸೋಣ ನಡೀ" ಕೈ ಹಿಡಿದು ಎಬ್ಬಿಸಿದಳು.

ವಾಸಂತಿ ನಿಜವಾಗಿಯೂ ಚಿಂತಿತಳಾದಳು. ಕರ್ಣನ ಎಲ್ಲಾ ಮಾತುಗಳನ್ನು ಜ್ಞಾಪಿಸಿಕೊಂಡಳು. ಪದರ ಪದರಾಗಿ ಅವಳ ಬಗ್ಗೆ ಎಲ್ಲಾ ವಿಚಾರಿಸಿಕೊಂಡಿದ್ದ ಬುದ್ಧಿವಂತ. ನಂದಿನಿ ಟೆಕ್ಸ್‌ಟೈಲ್‌ನಲ್ಲಿ ಇವಳಿಗೆ ಸಿಕ್ಕೋ ಸಂಬಳ, ಸಿಗುವ ಕಮೀಷನ್ ಇದೆಲ್ಲ ಕೇಳಿ ತಿಳಿದುಕೊಂಡಿದ್ದ ಪೂರ್ತಿ ಮಾಹಿತಿಯೊಂದಿಗೆ. ತಾನು ತೀರಾ ಬೆಪ್ಪು ಎಂದುಕೊಂಡಳು ಮೊದಲ ಸಲ.

ನಿಧಾನವಾಗಿ ಊಟ ಮುಗಿಸಿ ಹೊರಗೆ ಬರುವ ವೇಳೆಗೆ ಎರಡರ ಸುಮಾರು. ಆ ವೇಳೆಗೆ ನಾಲ್ಕಾರು ಸಲವಾದರೂ ವಾಚ್ ಕಡೆ ನೋಡಿದ್ದ ಕಣ್ಮಣಿ "ಇನ್ನು ಬರ್ತೀನಿ, ಈಗ ಹೇಳ್ತೀನಿ, ಕಂಗ್ರಾಟ್ಸ್ ಕರ್ಣ, ನೀನು ಜೀವನ ಸಂಗಾತಿಗಳು ಆಗೋ ಮೊದ್ಲು ಪರಸ್ಪರ ಅರಿತುಕೊಳ್ಳಿ. ಅಂದು ಗೋಪಾಲ ಅವ್ರ ತಂದೆ ಸಾಲಿಗ್ರಾಮದ ಬಗ್ಗೆ ಒಂದ್ಮಾತು ಹೇಳಿದ್ದರು. ಸ್ಪರ್ಶದಿಂದ ಪಾಪ ನಾಶವಾಗುತ್ತೆ. ವಿಷ್ಣು ಸಾನಿಧ್ಯ ಪಡೆದ ಸಾಲಿಗ್ರಾಮದಿಂದ ತುಂಬ ಒಳ್ಳೆದಾಗುತ್ತೇಂತ ಹೇಳಿದ್ರಲ್ಲ. ಅಭಿಷೇಕದ ನೀರನ್ನು ತೀರ್ಥದ ರೂಪದಲ್ಲಿ ಸ್ವೀಕರಿಸಿದರೆ ಕಾಯಿಲೆಗಳು ಕೂಡ ಉಪಶಮನವಾಗುತ್ತೇಂತ ಹೇಳಿದ್ದು ನೆನಪಿದ್ಯಾ?" ಕೇಳಿದಳು.

ಈಗಾಗಲೇ ಸ್ವಲ್ಪ ತಲೆ ಕೆಡಿಸಿಕೊಂಡಿದ್ದ ವಾಸಂತಿ "ಏನೋ ಹೇಳಿದ್ದುಂಟೇ ಸ್ಪಷ್ಟವಾಗಿ ಜ್ಞಾಪಕವಿಲ್ಲ" ಎಂದಳು ನಿರುತ್ಸಾಹದಿಂದ. ಮತ್ತೆ ಪ್ರಶ್ನಿಸಲಿಲ್ಲ ಕಣ್ಮಣಿ. "ರೂಮಿಗೆ ಹೋಗಿ ಹಿಂದಿರುಗೋದೊಂದ್ರೆ.. ಕಷ್ಟ! ಈಗ್ಲೇ ಹೋಗಿ ಕಾಯ್ತೀಯಾ? ನಾನು ಥಿಯೇಟರ್‌ವರೆಗೂ ಬಿಟ್ಟು ಹೋಗ್ತೀನಿ" ಬಲವಂತದಿಂದ ಆಟೋ ಹತ್ತಿಸಿಕೊಂಡಳು.

ಗೆಳತಿಯ ಮುದುಡಿದ ಮುಖ ಅರಳದ್ದು ನೋಡಿ "ಸಾರಿ, ಅಂತ ಕೇಳೋದು ಸರಿಯಲ್ಲ, ನಂಗೆ ತೋಚಿದ್ದು ಹೇಳ್ದೇ ಅಷ್ಟೇ. ನನ್ನಿಂದ

ಏನಾದ್ರೂ... ತಪ್ಪಾಯ್ತು?" ಎಂದ ಕೂಡಲೇ ಕಣ್ಮಣಿಯು ಕೈಯನ್ನು ಬಿಗಿಯಾಗಿ ಹಿಡಿದುಕೊಂಡು "ಖಂಡಿತ ಇಲ್ಲ, ನಾನು ಎಷ್ಟು ಬೇಗ ಮೂರ್ಖಳಾಗ್ಬಿಟ್ಟೆ... ಅಂದ್ಕೊಂಡೇ" ಕಂಪನದ ದನಿಯಲ್ಲಿ ಪಿಸುಗುಟ್ಟಿದಳು.

ಥಿಯೇಟರ್ ಬಳಿ ದೊಡ್ಡ ಕ್ಯೂ ಇದ್ದುದ್ದರಿಂದ ವಾಸಂತಿ ಇಳಿದು ಕೈ ಬೀಸಿದಳು. 'ಹೇಗೂ ಭಾನುವಾರ ರೂಮಿನಲ್ಲಿದ್ದು ಏನ್ಮಾಡ್ತೀಯಾ? ಬೇಗ್ಬಂದು ಟಿಕೆಟ್ ತಗೊಂಡ್ಬಿಡು' ಉಸುರಿದ್ದ ಕರ್ಣ ಆಗ ಏನು ಅನ್ನಿಸಿರಲಿಲ್ಲ. ಈಗ ಮಾತ್ರ ಸರಿಯೆನಿಸಲ್ಲಿಲ್ಲ. ಅವನು ಬಂದು ಟಿಕೆಟ್ ತಗೊಂಡು ಕಾಯುವುದು ಸರಿಯೆನಿಸಿತು. ಸ್ವಲ್ಪ ಮನಸ್ಸು ಕೆಟ್ಟರೂ ಪ್ರತಿಯೊಂದರಲ್ಲೂ ಲೋಪ ಎದ್ದು ಕಾಣುವುದು ಸಹಜವೆನಿಸಿತು.

ಅವಳಿಗೇನೋ ಟಿಕೆಟ್ ಸಿಕ್ಕಿತು. ಟಿಕೆಟ್ ಸಿಕ್ಕದ ಜನ ನಿರಾಶೆಯಿಂದ ಬ್ಲಾಕ್‌ನಲ್ಲಿ ಟಿಕೆಟ್‌ನ ಖರೀದಿಸಲು ಠಳಾಯಿಸತೊಡಗಿದ್ದು ಒಂದು ಸಾಮಾನ್ಯ ದೃಶ್ಯವಾಗಿತ್ತು. ಒಂಟಿಯಾಗಿ ನಿಂತ ಅವಳತ್ತ ಜೋಕ್‌ಗಳನ್ನು ಎಸೆದು ಮಾತಾಡುವ ಮಂದಿ ಕೂಡ ಇದ್ದರು ಅಲ್ಲಿ.

"ವಾಸಂತಿ... " ಅಷ್ಟು ದೂರದಿಂದಲೇ ಕೂಗಿಕೊಂಡು ಬಂದ ಕರ್ಣ "ಟಿಕೆಟ್ ಸಿಕ್ತಾ?" ವಿಚಾರಿಸಿದವನು ಅತ್ತಿತ್ತ ನೋಡುವ ವೇಳೆಗೆ ಒಂದಿಬ್ಬರು ಬಂದರು. ಅವರನ್ನು ಪಕ್ಕಕ್ಕೆ ಕರೆದು ವ್ಯಾಪಾರವನ್ನು ಕುದರಿಸಿ ಹಣವನ್ನು ಪರ್ಸಿಗೆ ಸೇರಿಸಿ ಆರಾಮಾಗಿ ಬಂದ "ಅವರಿಬ್ರೂ ನನ್ನ ಫ್ರೆಂಡ್ಸ್. ಟಿಕೆಟ್ ಸಿಕ್ಲಿಲ್ಲಾಂತ ಪೇಚಾಡಿಕೋತಾ ಇದ್ದರು. ನಾವು ಇನ್ನೊಂದು ದಿನ ಹೋದರಾಯ್ತುಂತ ಕೊಟ್ಟೆ" ನಿಶ್ಚಿಂತೆಯಿಂದ ಹೇಳಿದ ಅವನತ್ತ ಅಪರೂಪದ ನೋಟ ಹರಿಸಿದಳು. ಅವರಿಂದ ಹಣವನ್ನು ಪಡೆದಿದ್ದು ನೋಡಿದ್ದಳು. ಅವಳಿಗೆ ಕೊಡದೇ ಆರಾಮಾಗಿ ಪರ್ಸಿಗೆ ಸೇರಿಸಿದ ಈ ವ್ಯಕ್ತಿ ದೊಡ್ಡವನಾಗಿ ಕಂಡ.

"ನಮಗೋಸ್ಕರ ಟಿಕೆಟ್ ಖರೀದಿಸಿದ್ದು" ಎಂದಳು ಪ್ರತಿಭಟನೆ ಯೆನ್ನುವಂತೆ. "ಈಗೇನಾಯ್ತು, ಅವ್ರು ನನ್ನ ಆತ್ಮೀಯ ಗೆಳೆಯರು. ಜುಜುಬಿ ಟಿಕೆಟ್ಸ್ ವಿಷ್ಯದಲ್ಲಿ ಕಂಜೂಸ್‌ತನ ಮಾಡೋಕ್ಕಾಗುತ್ತ? ನಾನು ಇನ್ನು ಊಟ ಮಾಡಿಲ್ಲ. ನಿಂಗೋಸ್ಕರ ಓಡೋಡಿ ಬಂದೆ. ಹೋಟಲ್‌ಗೆ ಹೋಗೋಣ ನಡೀ" ಆತುರಪಡಿಸಿದ. ಅಂದರೆ ಕರ್ಣನಿಗೆ ಮೂವೀ ನೋಡುವ ಇರಾದೆ ಇಲ್ಲವೆಂದು ಸ್ಪಷ್ಟವಾಯಿತು. ಆದರೆ ತನ್ನನ್ನು ಬರಹೇಳಿದ್ದು ಯಾಕೆ?

ಪ್ರಶಾಂತವಾದ ಟೇಬಲ್ಲು ಆರಿಸಿಕೊಂಡು ಕೂತ ನಂತರ ಬಂದ ಬೇರರ್‌ಗೆ "ನಾರ್ತ್ ಇಂಡಿಯನ್ ಮೀಲ್ಸ್ ಎರಡು" ಎಂದ ಕೂಡಲೇ "ನಂದು ಆಯ್ತು, ನಿಮಗೊಬ್ಬರಿಗೆ ಮಾತ್ರ. ನಂಗೊಂದು ಐಸ್‌ಕ್ರೀಮ್ ಸಾಕು" ಹೇಳಿದಳು. ಅವಳ ಸಂಪಾದನೆಗೆ ಹೋಟಲ್‌ನಲ್ಲಿ ಊಟ ಮಾಡುವುದು ಕಷ್ಟ. ಹಾಸ್ಟಲ್‌ಗೆ ಕಟ್ಟಿ ಅವಳ ಕೈಯಲ್ಲಿ ಉಳಿಯುತ್ತಿದ್ದುದು ಕಡಿಮೆ ಹಣ. ಪರಿಚಯವಾದ ಮೇಲೆ ಎಲ್ಲಾ ಬಿಲ್‌ಗಳನ್ನು ಅವಳೇ ಕೊಟ್ಟಿದ್ದರೂ, ಇಂದು ಕನಿಷ್ಠ ಐಸ್‌ಕ್ರೀಮ್ ಬಿಲ್ ಕೊಡಲಿ ಎಂದುಕೊಂಡೇ ಹೇಳಿದ್ದು.

ಅತ್ಯಂತ ರಂಜಕವಾಗಿ ಮಾತಾಡುತ್ತ ಊಟ ಮಾಡುತ್ತಿದ್ದ ಕರ್ಣನನ್ನೆ ನೋಡಿದರು. ಅಡಿಯಿಂದ ಮುಡಿಯವರೆಗೂ ಆಗಾಗ ನೋಟವರಿಸಿದಳು.

"ಇನ್ನೊಂದು ಐಸ್‌ಕ್ರೀಮ್" ಎಂದು ಆರ್ಡರ್ ಮಾಡಿದಳು.

ಕೈ ತೊಳೆದು ಬಂದ ಕರ್ಣ ಕ್ರೀಮ್ ತಿನ್ನುವ ವೇಳೆಗೆ ಬಿಲ್ ತಂದಿತ್ತ, ಬೇರರ್. ವಾಸಂತಿ ಸುಮ್ಮನಿದ್ದಳು. ಅವನೇ ತೆಗೆಯಲೀ ಎಂದು ಅವಳ ಉದ್ದೇಶ. ಹರಟುತ್ತ ಸೊಂಪು ಬಾಯಿಗೆಸೆದುಕೊಳ್ಳುತ್ತಿದ್ದನೇ ವಿನಃ ಬಿಲ್ ಕಡೆಯಾಗಲೀ ಜೇಬಿನತ್ತಾಗಲೀ ಅವನ ಕೈ ಹೋಗದ್ದು ಗಮನಿಸಿ ಚಕಿತಳಾದಳು.

ಬೇರರ್ ಬಂದು ನಿಂತಾಗ ಮೇಲೆದ್ದು "ಯಾಕೆ ಇಷ್ಟೊಂದು ನಿಧಾನ ಮಾಡ್ದೇ? ಬಿಲ್... ಕೊಡು" ಎಂದವನೆ ಅವಳ ತೊಡೆಯ ಮೇಲಿದ್ದ ಪರ್ಸ್ ತಗೊಂಡು ನೂರರ ಒಂದು ನೋಟು ಹಾಕಿದವನು ಸುಮ್ಮನಿದ್ದಿದ್ದರೇ, ವಾಸಂತಿಯು ಬದುಕಿನ ತಿರುವು ಬದಲಾಗುತ್ತಿರಲಿಲ್ಲವೇನೋ! ಕಣ್ಣಿಗೆ ಕೊಟ್ಟಿದ್ದ ಕವರನ್ನೆಳೆದುಕೊಂಡು ತೆಗೆದವನು ನೋಟುಗಳನ್ನು ಎಣಿಸಿದವನ ಮುಖದಲ್ಲಿ ಹರ್ಷ ಚಿಮ್ಮಿತು. "ಬೋನಸ್ ಸಿಕ್ತಾ? ಅಥ್ವಾ ಮದ್ವೆಗಾಗಿ ಅಡ್ವಾನ್ಸ್ ಸಾಲ ತಗೊಂಡ್ಯಾ? ನನ್ಹತ್ರ ಇರ್‍ಲಿ, ಮಾಂಗಲ್ಯ ಮಾಡಿಸೋಕು ಕಡ್ಮೆ ಬೀಳುತ್ತೆ" ಕವರ್‌ನಲ್ಲಿಟ್ಟು ಆರಾಮಾಗಿ ಜೇಬಿನಲ್ಲಿಟ್ಟುಕೊಂಡ, ದಿಗ್ಭ್ರಾಂತಳಾದಳು. ಎಷ್ಟು ಈಸಿಯಾಗಿ ಹಣದ ಕವರನ್ನೆತ್ತಿಕೊಂಡು ಜೇಬಿನಲ್ಲಿಟ್ಟುಕೊಂಡ..... ಅವನ ಭಂಡತನಕ್ಕೆ 'ಶಬಾಷ್' ಎಂದುಕೊಂಡಳು. ಆದರೆ ಆ ಹಣ ಅವಳದಲ್ಲ. ಆಕಸ್ಮಾತ್ ಅದು ಅವಳದೇ ಆಗಿದ್ದರೂ ಕೊಡಲು ಸಮ್ಮತಿಸುತ್ತಿರಲಿಲ್ಲ.

ಅತ್ತಿತ್ತ ನೋಡಿ ಎದ್ದು ಹೊರ ಬಂದ ನಂತರ "ಆ ಹಣ ನನ್ನದಲ್ಲ;

ನನ್ನ ಫ್ರೆಂಡ್ ಕಣ್ಮಣಿಯ ಸಂಬಳದ ಹಣ" ಸಮರ್ಥಿಸಿದಳು. ತಕ್ಷಣ ಜೇಬಿನಿಂದ ತೆಗೆದು ಹಿಂದಕ್ಕೆ ಕೊಡಬಹುದೆಂಬ ಅಭಿಪ್ರಾಯ ಸುಳ್ಳಾಯಿತು. "ಇರ್ಲೀ, ಈಗೇನಾಯ್ತು! ನಿನ್ಹತ್ರ ಇರ್ಲಿಂತ ತಾನೇ ಕೊಟ್ಟಿರೋದು, ನೀನು ನಾನು ಪ್ರೇಮಿಗಳು, ಮದ್ವೆ ಆಗೋರು ಅಂಥದ್ದರಲ್ಲಿ ಯಾರ್ಹತ್ರ ಇದ್ದರೇನು? ನನ್ಹತ್ರ ಇರೋದೇ ... ಸೇಫ್!" ಉತ್ತಮ ತೀರ್ಮಾನ ತಗೊಂಡವನಂತೆ ಘೋಷಿಸಿದಾಗ ಬೆಪ್ಪಾದಳು.

"ಇರ್ಬಹ್ದು, ಅವ್ಳ ಹಣ ಅವ್ಳತ್ರ ಇದ್ದರೇನೇ ಸೇಫ್ ನಾಳೆ ಬ್ಯಾಂಕ್‌ನಲ್ಲಿ ಡಿಪಾಜಿಟ್ ಮಾಡೋದಿದೆ" ಸ್ವಲ್ಪ ಜೋರಾಗಿಯೇ ಕೇಳಿದಳು. ಕರ್ಣ ಕೈ ಜೇಬಿನವರೆಗೂ ಹೋಗಲೇ ಇಲ್ಲ. "ನಿಂಗ್ಯಾಕೆ, ನಾಳೆ ಕೊಡ್ತೀನಿ! ಯಾವ ಬ್ಯಾಂಕ್‌ನಲ್ಲಿ ಡಿಪಾಜಿಟ್ ಮಾಡೋದು? ಯಾವ ಮಹಾ ಬಡ್ಡಿ ಸಿಗುತ್ತೆ, ಅದ್ರಲ್ಲಿ. ನಂಗೆ ತಿಳ್ದ ಒಬ್ಬ ಫೈನಾನ್ಸಿಯರ್ ಇದ್ದಾರೆ. ಬೇರೆಯವ್ರಿಗೆ 5 ರಿಂದ 8 ಪರ್ಸೆಂಟ್‌ವರೆಗೆ ಬಡ್ಡಿ ಕೊಡ್ತಾರೆ. ಅಲ್ಲಿಟ್ರೆ, ನಾಲ್ಕು ಪರ್ಸೆಂಟ್ ಮುಲಾಜಿಲ್ಲದೆ ಕೊಡ್ತಾರೆ" ತಿಳಿ ಹೇಳಿದನೇ ವಿನ ಅವಳೇನು ಹೇಳಿದರೂ ಹಣದ ಕವರ್ ಅವಳ ಕೈಗೆ ಹಿಂದಿರುಗಲಿಲ್ಲ.

ಪಾರ್ಕ್‌ಗೆ ಬಂದಾಗ ಮ್ಲಾನವದನಳಾಗಿದ್ದಳು.

"ಎಕ್ಸ್‌ಕ್ಯೂಜ್ ಮೀ ಮೇಡಮ್! ಓದಕ್ಕೇಂತ ತೀರ್ಥಹಳ್ಳಿಯಿಂದ ಬಂದೆ. ನಾಳೆನೇ ಫೀಜು ಕಟ್ಟೋಕೆ ಕೊನೆಯ ತಾರೀಖು. ದಯವಿಟ್ಟು ನಿಮ್ಮ ಕೈಯಲ್ಲಾದಷ್ಟು ಸಹಾಯ ಮಾಡಿ" ಒಬ್ಬ ಅಚ್ಚುಕಟ್ಟಾದ ಬುದ್ಧಿವಂತನಂತೆ ಕಾಣುವ ಸೌಮ್ಯ ಸ್ವಭಾವದ ಹುಡುಗನೊಬ್ಬ ಬಂದು ನಿಂತ.

ಸುಳ್ಳು ಹೇಳುವಂತೆ ಕಾಣಲಿಲ್ಲ. ಬೇರೆ ಸಮಯದಲ್ಲಿ ಹೇಗೆ ಯೋಚಿಸುತ್ತಿದ್ದಳೋ, ಕರ್ಣ ಮಾಡಿದ ಊಟದ ಬಿಲ್‌ಗೆ ತನ್ನ ಐಸ್‌ಕ್ರೀಮ್ ಕೂಡ ಸೇರಿಸಿ ಎಂಬತ್ತಾರು ರೂಪಾಯಿ ತೆತ್ತಿದ್ದಳು. ಅಂಥದ್ದರಿಂದ ಈ ಹುಡುಗನಿಗೆ ಸಹಾಯ ಮಾಡಿದರೇ, ತಾನೇನು ಫುಟ್‌ಫಾತ್‌ಗೆ ಬೀಳುವುದಿಲ್ಲ ಎನ್ನುವ ರೋಷದಿಂದಲೇ ಕರ್ಣನತ್ತ ತಿರುಗಿ "ಏನಾದ್ರೂ ... ಕೊಡಿ" ಎಂದಳು.

"ಇಂಥ ಸುಳ್ಳು ಪೋಲಿ ಪಟಾಲಂ ಹುಡುಗರು ಸಿಟಿ ತುಂಬ ಇದ್ದಾರೆ. ಇವ್ರಿಗೆಲ್ಲ ಸಹಾಯ ಮಾಡೋಕೆ ನಾವೇನು ಕೋಟಿಗಟ್ಟಲೆ ಇಟ್ಕೊಂಡಿಲ್ಲ. ಸುಮ್ನೆ... ನಡೀ" ಅವಳ ಭುಜದ ಮೇಲೆ ಕೈಯಿಟ್ಟ. ಪಟ್ಟನೆ ಸರಿಸಿ

ಪರ್ಸ್‌ನಲ್ಲಿದ್ದ ಚಿಲ್ಲರೆ, ನೋಟುಗಳನ್ನೆಲ್ಲ ತೆಗೆದು ಆ ಹುಡುಗನ ಕೈಯಲ್ಲಿಟ್ಟಳು. "ಬೇಗ ಇಲ್ಲಿಂದ ಹೊರಟ್ಹೋಗು."

ಆ ಹುಡುಗನಿಗೆ ಗಾಬರಿಯೋ ಗಾಬರಿ. ಪೆಚ್ಚು ಪೆಚ್ಚಾಗಿ ನೋಡಿದ "ಅಕ್ಕ, ನಂಗೆ ಇಷ್ಟೊಂದೆಲ್ಲ ಬೇಡ" ಹುಚ್ಚಿಡಿದಂತಾಗಿತ್ತು ಅವಳಿಗೆ. "ಸುಮ್ನೆ ತಗೊಂಡ್... ಹೋಗ್ಬಿಡು" ಕೂಗಿದಳು, ಅತ್ತಿತ್ತ ಇರುವ ಜನ ನೋಡಿಯಾರೆಂಬ ಪರಿವೇ ಕೂಡ ಇಲ್ಲದೆ.

"ಕೊಡೋ ಇಲ್ಲಿ" ಕಸಿದುಕೊಳ್ಳಲು ಹೊರಟ ಕರ್ಣನ ಕೈ ಹಿಡಿದುಕೊಂಡಳು "ಸುಮ್ನೆ ಇದ್ಬಿಡಿ. ನೀನು ಹೋಗಪ್ಪ" ಎಂದಳು ಸಮಾಧಾನವಾಗಿ. ಆಯೋಮಯ ಸ್ಥಿತಿಯಲ್ಲಿದ್ದ ಆ ಹುಡುಗ ಒಂದ ಹಿಂಡು ಶಾಲಾ ಮಕ್ಕಳ ನಡುವೆ ಮರೆಯಾದಾಗ ಕರ್ಣನಿಗೆ ತಲೆ ಪರಚಿಕೊಳ್ಳುವಂತಾಯಿತು. ಏನಾಗಿದೆ... ಇವಳಿಗೆ?

"ಸ್ವಲ್ಪ ಕೂಡ ನಿಂಗೆ ಕಾಮನ್‌ಸೆನ್ಸ್ ಇಲ್ಲ. ಹಣದ ಬೆಲೆ ಗೊತ್ತಾ? ನಿಂದೇನು ಗೌರ್ನಮೆಂಟ್ ಪರ್ಮನೆಂಟ್ ನೌಕರಿನಾ?" ಗೊಣಗುಟ್ಟ ತೊಡಗಿದಾಗ, ಆ ಮಾತು ತನಗೆ ಸಂಬಂಧಪಟ್ಟೇ ಇಲ್ಲವೆನ್ನುವಂತೆ ದಾಪುಗಾಲು ಹಾಕತೊಡಗಿದಳು. ಒಂದು ರೀತಿಯ ಭ್ರಮನಿರಸನ. 'ತನಗೆ ಕಾಮನ್‌ಸೆನ್ಸ್ ಇಲ್ಲ, ಹಣದ ಬೆಲೆ ಗೊತ್ತಿಲ್ಲ, ತಾನು ಒಬ್ಬ ಫೂಲಿಶ್' ಇದನ್ನು ನೂರು ಸಲವಾದರೂ ಹೇಳಿಕೊಂಡು ನಡೆದೇ ಬಂದು ಹಾಸ್ಟಲ್ ತಲುಪಿದಾಗ ತೀರಾ ಸುಸ್ತಿನ ಜೊತೆ ಜೋರಾಗಿ ಅಳಬೇಕೆನಿಸಿತು. ಅಳು ಒಂದು ಪರಿಹಾರವೇ? ಅಲ್ಲ, ಆದರೂ ಮನದ ದುಗುಡವನ್ನು ಹೊರ ಚೆಲ್ಲಲ ಅಳುವೊಂದು ದಾರಿ.

ಮಲಗಿದ್ದ ರೂಪಳ ಸುತ್ತಲು ಪುಸ್ತಕಗಳು ಮಲಗಿದ್ದವು. ಅವಳು ಪುಸ್ತಕ ಪ್ರೇಮಿಯೆಂದು ಯಾರಾದರೂ ಹೇಳಬಹುದಿತ್ತು. ಅವಳು ಈ ರೂಮಿಗೆ ಬಂದ ಮೇಲೆ ಒಂದು ಸಣ್ಣ ಲೈಬ್ರರಿ ಸಂಗ್ರಹವಾಗಿತ್ತು. ಪ್ರತಿಯೊಂದರಲ್ಲೂ ಅಚ್ಚುಕಟ್ಟು. ಅವಳ ಬಿಡುವಿನ ಸಮಯ ಓದಲು ಅಥವಾ ಅವನ್ನು ಓರಣವಾಗಿಡಲು ಕಳೆಯುತ್ತಿದ್ದಳು.

ಚಪ್ಪಲಿಯನ್ನು ಪಕ್ಕಕ್ಕೆ ತಳ್ಳಿ ಹಾಸಿಗೆಯ ಮೇಲೆ ಬಿದ್ದುಕೊಂಡು ಗೋಡೆಯ ಕಡೆ ತಿರುಗಿ ಕಣ್ಣೀರು ಸುರಿಸತೊಡಗಿದಳು. ಮೂರು ಸಾವಿರದಷ್ಟು ದೊಡ್ಡ ಅಮೌಂಟ್‌ನ ಲೀಲಾಜಾಲವಾಗಿ ಜೇಬಿಗೆ ಸೇರಿಸಿದ ಕರ್ಣ ಒಬ್ಬ ಹಗಲು ದರೋಡೆಗಾರನಾಗಿ ಕಂಡ. ಎಷ್ಟು ಲೀಲಾಜಾಲವಾಗಿ ತನ್ನನ್ನು ಮರಳು

ಮಾಡಿದ. ಅದು ಮೋಸ.... ಮೋಸ - ಅವಳ ಮನ ಚೀರಿ ಬೊಬ್ಬೆ ಹಾಕುತ್ತಿತ್ತು. ನಿಧಾನವಾಗಿ ಷುರುವಾದ ಕಣ್ಣೀರು ಬಿಕ್ಕುವ ಹಂತ ತಲುಪಿದಾಗ ರೂಪಾಗೆ ಎಚ್ಚರವಾಯಿತು.

"ಯಾಕೆ ಅಳ್ತಾ, ಇದ್ದೀರಾ?" ಕೇಳಿದಳು.

ಬಾಯಿಗೆ ಕೈ ಅಡ್ಡ ಹಿಡಿದು ಬಿಕ್ಕ ತೊಡಗಿದಾಗ ರೂಪ ಸುಮ್ಮನಾದಳು. ಅವಳ ತುಟಿಯಂಚಿನಲ್ಲಿ ಉದಾಸ ನಗು ತೇಲಿತು. ಅನುಭವದ ಗೋದಾಮಿನಿಂದ ಹೆಕ್ಕಿ ತೆಗೆದಂಥ ನೆನಪುಗಳು ದಟ್ಟೈಯಿಸಿದರೂ ಒಂದು ಬಂಡೆಯನ್ನೆತ್ತಿ ಅದರ ಮೇಲಿಟ್ಟಳು. ಅಷ್ಟು ಗಟ್ಟಿ ಮನಸ್ಕಳಾಗಿದ್ದು ನಿರಂತರ ಪ್ರಯತ್ನದಿಂದ.

ನಿಧಾನವಾಗಿ ಅಳುವಿನ ಸದ್ದಡಗಿದಾಗ ರೂಪ "ಲವ್ ಅಫೇರಾ? ನೀವೇ ಅಯೋಮಯ ಸ್ಥಿತಿಯಲ್ಲಿರುವಾಗ ಇಂಥ ಪ್ರಪಾತನ ಯಾಕೆ ಹುಡ್ಕಿಕೋತೀರಾ? ವಯಸ್ಸಿಗೆ ಕಡಿವಾಣ ಹಾಕುವಂಥ ಗಟ್ಟಿತನ ಒಂಟಿ ಹೆಣ್ಣಿಗೆ ಬೇಕು. ಶತ ಶತಮಾನಗಳಿಂದ ಹೆಣ್ಣು ಅತ್ತು ಅತ್ತು ಈ ಭರತ ಖಂಡನ ತೊಳ್ದುಬಿಟ್ಟಿದ್ದಾಳೆ. ಆದ್ರೂ ಅವ್ಳ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲ, ಸಿಗೋದಿಲ್ಲ ಕೂಡ" ಬಹಳ ಕಠಿಣವಾಗಿ ಹೇಳಿ ಹೊರಗೆ ಹೋದಳು. ಎಂಥ ದಿಟ್ಟತನವಾದ ನುಡಿಗಳು! ಅಷ್ಟು ಕಠೋರವಾಗಲು ಹಲವಾರು ಕಾರಣಗಳು ಇರಬಹುದು.

ತಾನೇ ಸಮಾಧಾನವಾಗಿ ಹೋಗಿ ಮುಖ ತೊಳೆದು ಬಂದಳು. ತನ್ನ ಮೂರ್ಖತನವನ್ನು ಯಾರ ಮುಂದೂ ಪ್ರದರ್ಶನಕ್ಕೆ ಇಡಬಾರದೆಂಬ ತೀರ್ಮಾನಕ್ಕೆ ಬಂದಳು ಗಟ್ಟಿ ನಿಲುವಿನಿಂದ.

ಒಂಬತ್ತರ ಸುಮಾರಿಗೆ ಊಟಕ್ಕೆ ಮುನ್ನ ಅವಳಿಗೊಂದು ಫೋನಿತ್ತು. "ಯಾಕೆ, ಬಿರುಗಾಳಿ ತರಹ ಹೋಗ್ಬಿಟ್ಟೆ. ಯೂ ಆರ್ ಸಿಲ್ಲೀ! ನಿಂಗೇನಾಗಿತ್ತು ಅಷ್ಟೊಂದು ಹಣನ ಕೊಡೋಕೆ?'' ಆ ಕೊನೆಯಿಂದ ದಬಾಯಿಸತೊಡಗಿದಾಗ ಫೋನಿಟ್ಟು ಡೈನಿಂಗ್ ಹಾಲ್‌ನತ್ತ ನಡೆದಳು. ಮತ್ತೊಮ್ಮೆ ಒಂದು ಚಿಲ್ಲರೆ ಖರ್ಚು ಮಾಡಿ ಫೋನ್ ಮಾಡಲಾರನೆಂದುಕೊಂಡಿದ್ದು ಸುಳ್ಳಾಯಿತು. "ಊಟಕ್ಕೆ ಕೂತಿದ್ದಾರೆ, ಅರ್ಧ ಗಂಟೆ ಬಿಟ್ಟು ಫೋನ್ ಮಾಡಿ" ಆಡಿಟರ್ ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದ ಕಾತ್ಯಾಯಿನಿ ಅವಳನ್ನು ಪಾರು ಮಾಡಿದ್ದಳು.

ಇಡೀ ರಾತ್ರಿ ನಿದ್ದೆ ಇಲ್ಲದೆ ಒದ್ದಾಡಿದಳು. ಮುಂದೇನು? ನೂರು

ಕನಸುಗಳನ್ನು ಕಟ್ಟಿಕೊಂಡಿದ್ದಳು. ಕರ್ಣನ ಪರಿಚಯವಾದ ಮೇಲೆ ಅವೆಲ್ಲ ಛಿದ್ರ ಛಿದ್ರ., ಒಡೆದ ಕನ್ನಡಿಯಂತೆ ಒಂದರಲ್ಲು ಪ್ರತಿಬಿಂಬ ಸ್ಪಷ್ಟವಾಗಿ ಕಾಣದು.

ಬೆಳಿಗ್ಗೆ ಬೆಳಿಗ್ಗೆಯೇ ಅವಳಿಗೆ ಫೋನ್ ಸಿಡಿಯುತ್ತಿದ್ದ ತಲೆಯನ್ನು ಒಂದು ಕೈಯಲ್ಲಿ ಅದುಮಿಕೊಳ್ಳುತ್ತ ಫೋನೆತ್ತಿದಳು "ಹಲೋ, ನಾನು ಕಣ್ಮಣಿ, ಹೇಗಿದ್ದೀಯಾ? ಕರ್ಣ ಸಿಕ್ಕಿದ್ರಾ? ಸ್ವಲ್ಪ ನಿಧಾನಿಸಿ ಹೆಜ್ಜೆ ಇಡೀ" ತನ್ನ ಪಾಡಿಗೆ ತಾನು ಹೋದಳು ಹೊರಗೆ.

ಬೇಗ ಸ್ನಾನ ಮುಗಿಸಿ ರೆಡಿಯಾದಳು. ಇಡೀ ಪರ್ಸ್ ಖಾಲಿ. ಸೂಟುಕೇಸ್‌ನಲ್ಲಿದ್ದ ಸ್ವಲ್ಪ ಹಣವನ್ನು ತೆಗೆದು ಪರ್ಸಿಗೆ ಹಾಕಿಕೊಂಡ ನಂತರವೇ ಡೈನಿಂಗ್ ಹಾಲ್‌ಗೆ ಬಂದದ್ದು. ತಮ್ಮದೇ ಆದ ಕಷ್ಟಸುಖಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದರು. ಎಲ್ಲರಿಗೂ ಹೊರಡುವ ಅವಸರವೇ.

"ಇವತ್ತು ನೀವು ಲೇಟು!" ಕೈ ತೊಳೆಯಲು ಎದ್ದ ಕ್ಯಾತ್ಯಾಯಿನಿ ಹೇಳಿದಾಗ ಮುಗಳ್ನಗೆ ಬೀರಿದಳು. ಪೂರಿ, ಸಾಗು ಎಲ್ಲಾ ರುಚಿಯೇ-ಯಾಕೋ ಅವಳಿಗೆ ತಿನ್ನಲು ಮನಸ್ಸಾಗಲಿಲ್ಲ. ಅನ್ನ ಬಡಿಸಿಕೊಂಡು ಊಟ ಮಾಡಿ ಮೊಸರನ್ನವನ್ನು ಡಬ್ಬಿಗೆ ತುಂಬಿಸಿಕೊಂಡಳು. ಕಣ್ಮಣಿಯ ಮೂರು ಸಾವಿರ ಕರ್ಣನಿಂದ ವಾಪಾಸು ಬಂದಿತೇ? ಆ ನಂಬಿಕೆ ಇರಲಿಲ್ಲ. ಅಂಥದ್ದರಲ್ಲಿ ತನ್ನ ಬದುಕು ಅವನಿಗೆ ಒತ್ತೆಯಾಗಿಬಿಟ್ಟರೇ, ಬಿಡುಗಡೆ ಇಲ್ಲ. ಇಡೀ ಜೀವನ ಪೂರ್ತಿ ಜೀತದಾಳು! ಅಂಥ ಬಾಳು ತನಗೆ ಬೇಕೆ?".

ಯೋಚನೆಯಲ್ಲಿ ಬಸ್‌ಸ್ಟಾಪ್ ತಲುಪಿದಳು. ಅಲ್ಲೇ ಕಾದಿದ್ದ ಕರ್ಣ "ರಾತ್ರಿ ಪೂರ ನಿದ್ದೆ ಬಂದಂಗಿಲ್ಲ" ಹಾಸ್ಯ ಮಾಡಿದ. ರೋಷವನ್ನು ಅದುಮಿಡಿದು ಮುಗುಳ್ನಗೆ ಬೀರಿ "ನಾನು ಇರ್ಲೀ, ನಿಮ್ಮ ಮುಖನ ನೋಡ್ಕೊಳ್ಳಿ, ಕನ್ನಡಿಯಲ್ಲಿ" ಪ್ರಯತ್ನಪೂರ್ವಕವಾಗಿಯೇ ಕೇಳಿದ್ದು.

ಆ ವೇಳೆಗೆ ಬಸ್ಸು ಬಂದಿದ್ದರಿಂದ ಮಾತುಗಳಿಗೆ ಬ್ರೇಕ್ ಬಿತ್ತು. ಅವನು ಮುಂದೆ ಅವಳು ಹಿಂದೆ ಹತ್ತಿಕೊಂಡರು.

ಮುಂದೆ ಹತ್ತಿಕೊಂಡ ಕಂಡಕ್ಟರ್ ಗೊಣಗುತ್ತಲೇ "ಇದೆಂಥ ಬದಲಾವಣೆ! ಹಿಂದೆ ಹೆಂಗಸರು ಬಸ್ಸು ಹತ್ತಿದರೇ ಟಿಕೆಟ್‌ನ ಹಣಕ್ಕೊಸ್ಕರ ಗಂಡಸರ ಕಡೆ ತೋರಿಸ್ತಾ ಇದ್ರು. ಈಗ ಗಂಡಸರು ಹೆಂಗಸರ ಕಡೆ

ತೋರಿಸ್ತಾರೆ. ಸ್ವಾಮಿ ಇನ್ಮೇಲೆ ನಿಮ್ಮಾಕ್ಕೆಯ ಪರ್ಸ್ ನೀವೇ ಇಟ್ಕೊಂಡ್ಬಿಡಿ" ಹಿಂದಕ್ಕೆ ತಿರುಗಿ ಕೂಗಿ ಹೇಳಿದ. "ಎರಡು ಟಿಕೆಟ್‌ನ ಹಣ ಕೊಡಿ" ಎಂದ ಪರಿಹಾಸ್ಯವಾಗಿ. ಅವಳಲ್ಲಿನ ಚಲನೆ ಸತ್ತುಹೋಗಿತ್ತು. ಇದು ಯಾವ ವರಸೆ? ನಿಶಬ್ದವಾಗಿ ಹತ್ತರ ನೋಟನ್ನು ತೆಗೆದು ಕೊಟ್ಟಳು.

ಇವಳು ಇಳಿದ ಬಸ್ಸು ಸ್ಟಾಪ್‌ನಲ್ಲಿಯೇ ಕರ್ಣ ಕೂಡ ಇಳಿದ. ಜೊತೆ ಜೊತೆಯಾಗಿಯೇ ಹೊರಟಾಗ ನಿಂತಳು "ಹಣ ತಂದಿದ್ದೀರಾ, ಬ್ಯಾಂಕ್‌ಗೆ ಹೋಗೋದಿದೆ. ಫೈನಾನ್ಸಿಯರ್ ಹತ್ತಿರ ಹಣ ಇಡೋಕೆ ಕಣ್ಮಣಿ ಒಪ್ಪೋಲ್ಲ, ಇಲ್ದ ಜವಾಬ್ದಾರಿಗಳು ನಮಗ್ಯಾಕೆ?" ಸಹಜವಾಗಿ ಹೇಳಿದಳು.

"ಈಗಾಗ್ಲೇ, ನಾನು ಫೈನಾನ್ಸಿಯರ್ ಬಳಿ ಕೊಟ್ಟಾಗಿದೆ. ಮತ್ತೆಲ್ಲಿ ಸಿಗುತ್ತೆ, ಹಣ" ಕೈಯಾಡಿಸಿಬಿಟ್ಟ. ನಿರ್ದಾಕ್ಷಿಣ್ಯವಾಗಿ ಅವಳ ತಲೆ 'ಧೀಂ' ಎಂದಿತು. "ನಾನು ಅರ್ಧ ದಿನ ರಜ ಹಾಕ್ಬರ್ತೀನಿ. ಏನಾದ್ರೂ ಒಂದಿಷ್ಟು ಹಿಡಕೊಂಡು ಹಣ ವಾಪಸ್ಸು ಕೊಡ್ಲಿ" ಉಪಾಯ ಸೂಚಿಸಿದಾಗ ತಲೆ ಕೊಡವಿದ "ಒಂದ್ಸಲ ಇಟ್ಮೇಲೆ ಮುಗ್ದೋಯ್ತು. ಅಸಲು ಅವ್ರ ಹತ್ತಿರಾನೇ ಇರುತ್ತೆ. ತಿಂಗ್ಳು... ತಿಂಗ್ಳು ಹೋಗಿ ಬಡ್ಡಿ ತಗೋಬಹ್ದು" ಎಂದ. ಎಳ್ಳು, ನೀರು ಬಿಟ್ಟ ಅನುಭವವಾಯಿತು ಅವಳಿಗೆ.

"ಬರ್ತೀನಿ..." ನಡದೇಬಿಟ್ಟಳು.

ಕೆಲವೊಮ್ಮೆ ಒಂದು ರೂಪಾಯಿ.. ನೂರು ಪೈಸೆ ಉಳಿಸಲು ಎಷ್ಟೋ ಪರದಾಡಬೇಕಾದ ಸ್ಥಿತಿಯಲ್ಲಿದ್ದು ಈಗ ಮೂರು ಸಾವಿರದಷ್ಟು ಹಣವನ್ನು ಒಮ್ಮೆಲೆ ಕಳೆದುಕೊಳ್ಳುವುದೆಂದರೇ, ನೆಲದಲ್ಲಿ ಹೊರಳಾಡಿ ಅಳಬೇಕೆನಿಸಿತು.

ಅರೆ ಮನಸ್ಸಿನಿಂದ ಕೆಲಸ ಷುರು ಮಾಡಿದರೂ ನಂತರ ಚೇತರಿಸಿಕೊಂಡಳು. ಬಂದು ಹೋಗುವ ಗಿರಾಕಿಗಳ ನಡುವೆ ಎಲ್ಲಾ ಮರೆಯಬೇಕಾದ್ದು ಅನಿವಾರ್ಯ.

ಆಮೇಲೆ ವಾರದಲ್ಲಿ ನಾಲ್ಕಾರು ಸಲ ಕರ್ಣ ಬಂದು ಭೇಟಿ ಮಾಡಿದ. "ರಿಜಿಸ್ಟರ್ ಆಫೀಸ್‌ನಲ್ಲಿ ಕೆಲವೊಂದು ಫಾರ್ಮಾಲಿಟೀಸ್ ಇದೆ. ನೀನು 'ಹ್ಞೂ' ಅಂದರೇ ದೇವಸ್ಥಾನದಲ್ಲಿ ಹಾರ ಬದಲಾಯ್ಸಿಕೊಳ್ಳೋಣ" ಪ್ರತಿ ಸಲವು ಇಂಥ ತಗಾದೆಯೇ. ಆದರೆ ಅವನ ವ್ಯಾಪಾರ, ವಹಿವಾಟಿನ ಬಗ್ಗೆ ಪ್ರಶ್ನಿಸಿದರೇ ಮಾತು ಜಾರಿಸುತ್ತಿದ್ದ. "ಅವೆಲ್ಲ ಮುಖ್ಯವಲ್ಲ, ನಿಂಗ್ಯಾಕೆ... ಕೂಡ! ನಾವಿಬ್ರೂ ಒಬ್ಬರನೊಬ್ಬರು ಪ್ರೇಮಿಸಿಕೊಂಡಿದ್ದೇವೆ. ವಿವಾಹವಾಗೋಕೆ ಅಷ್ಟು ಸಾಕು" ಇದನ್ನೆ ಪದೇ ಪದೇ ಪದಗಳನ್ನು,

ವಾಕ್ಯಗಳನ್ನಾಗಿ ಬದಲಾಯಿಸಿ ಹೇಳುತ್ತಿದ್ದ.

ಅಂದು ಮಧ್ಯಾಹ್ನದ ಲಂಚ್ ಬ್ರೇಕ್‌ಗೆ ಬಂದ.

"ನಾನಂತು ಊಟ ಮಾಡ್ಬೇಕು" ಹೇಳಿದ.

ಹ್ಯಾಂಡ್ ಬ್ಯಾಗ್‌ನಲ್ಲಿದ್ದ ಡಬ್ಬಿಯ ಮೇಲೆ ಬೆರಳಾಡಿಸುತ್ತ "ನಾನು ಡಬ್ಬಿ ತಂದಿದ್ದೀನಿ. ದಿನ ಹೋಟಲ್‌ಗೆ ಹಣ ಹಾಕೋಷ್ಟು ಶ್ರೀಮಂತಳಲ್ಲ. ನಾನು ಬರೀ ಸೇಲ್ಸ್ ಗರ್ಲ್., ಅದು ಈ ದಿನ ನಿನ್ನ ಬಿಜಿನೆಸ್, ಅಂಗಡಿ, ಮನೆ ನೋಡ್ಬೇಕೂಂತ ಅರ್ಧ ದಿನಕ್ಕೆ ಪರ್ಮಿಷನ್ ತಗೊಂಡಿದ್ದೀನಿ. ನೇರವಾಗಿ ಈಗ ಅಲ್ಲಿಗೆ ಹೋಗೋಣ" ಪಟ್ಟು ಹಿಡಿದಳು.

ಇದನ್ನು ಅವನು ನಿರೀಕ್ಷಿಸಿರಲಿಲ್ಲ.

"ಮದ್ವೆ ಆಗೋವರ್ಗೂ ನೋಡೋದ್ಬೇಡ. ಆಮೇಲೆ ಅಲ್ಲೇ ತಾನೇ ಇರೋದು" ಛೇಡಿಸುತ್ತ ಅವಳ ನಗ್ನ ಸೊಂಟಕ್ಕೆ ಕೈ ಹಾಕಿ ಚಿಗುಟಿದಾಗ ಅಷ್ಟು ದೂರಕ್ಕೆ ಸರಿದಳು. "ವಿವಾಹಕ್ಕೆ ಮೊದ್ಲು ನಂಗೆ ಇಂಥದ್ದೆಲ್ಲ ಇಷ್ಟವಾಗೋಲ್ಲ. ನಾನು ಅನಾಥೆಯಾದರೂ ಶಬರಿಯಂಥ ಹೆಣ್ಣಿನ ಕೈಯಲ್ಲಿ ಬೆಳೆದೋಳು. ಫಸ್ಟ್ ನಾನು ನಿಮ್ಮನೆ ನೋಡ್ಬೇಕು" ಹಟ ಮಾಡಿದಳು.

"ಈಗಂತು ಆಗೋಲ್ಲ, ಇನ್ನೊಂದು ದಿನ ನೋಡೋಣ. ಈಗ ಹೋಟಲ್‌ಗೆ ನಡೀ" ಕೈ ಹಿಡಿದುಕೊಂಡು ಎಳೆದೊಯ್ದು. ಆ ಬೆಚ್ಚನೆಯ ಸ್ಪರ್ಶಕ್ಕೆ ಪುಳಕಿತಳಾಗುತ್ತಿದ್ದವಳ ಕೈ ತಣ್ಣಗೆ ಕೊರೆಯಿತು.

ಕೂತ ಕೂಡಲೇ ವಾಸಂತಿ "ನನ್ನ ಪರ್ಸ್‌ನಲ್ಲಿ ಹಣ ಇಲ್ಲ . ನಂಗೋಸ್ಕರ ಏನು ತರಿಸ್ಬೇಡಿ" ಎಂದಳು. ಕರ್ಣ ಮುಖವನ್ನು ಒಂದು ತರಹ ಮಾಡಿ ಕೈ ಚಾಚಿ ಅವಳ ಪರ್ಸನ್ನು ಎಳೆದುಕೊಂಡು ಪ್ರತಿಯೊಂದು ಜಿಪ್ಪನ್ನು ಎಳೆದು ನೋಡಿದ. ಸಿಕ್ಕಿದ ಹದಿನೈದರ ಚಿಲ್ಲರೆಯನ್ನೆತ್ತಿಕೊಂಡು, ಒಂದೇ ... ಒಂದು ಪ್ಲೇಟು ಊಟಕ್ಕೆ ಆರ್ಡರ್ ನೀಡಿದ. "ನೀನು ಬೇಕಾದ್ರೆ ಹೋಗು. ನಾನು ಊಟ ಮಾಡ್ಕೊಂಡ್ ಬರ್ತೀನಿ" ಧಾರಾಳವಾಗಿ ಹೇಳಿದಾಗ ಎದ್ದು ಹೊರ ಬಂದವಳ ಕಣ್ಣಲ್ಲಿ ತುಂತುರು ಇತ್ತು. 'ಇದು ಜುಗ್ಗಾತನವಾ? ಅಥವಾ ಆರ್ಥಿಕವಾಗಿ ಊಟಕ್ಕೂ ಇಲ್ಲದಷ್ಟು ಸಂಕಷ್ಟ ಸ್ಥಿತಿಯಲ್ಲಿದ್ದಾನ? ಏನೋ, ಅವಳಿಗಂತು ಅರ್ಥವಾಗಲಿಲ್ಲ'. ಇಂಥ ಪುಣ್ಯಾತ್ಮನಿಗೆ 'ಕರ್ಣ' ಎಂದು ಹೆಸರಿಟ್ಟವರು ಯಾರು?

ಮೊಸರನ್ನದ ಡಬ್ಬಿ ಹೊರ ಬರಲಿಲ್ಲ ಹ್ಯಾಂಡ್ ಬ್ಯಾಗ್‌ನಿಂದ. ಅಂಗಡಿಗೆ ಹಿಂದಿರುಗಿದ ನಂತರವೆ ನೀರು ಕುಡಿದಿದ್ದು. 'ಒಂಟಿ ಹೆಣ್ಣಿನ ಬದುಕು

ಗಂಭೀರ, ದುಡ್ಡನ್ನ ಮದ್ವೆ ಮಾಡ್ಕೊಂಡ್ರೆ ಭವಿಷ್ಯದಲ್ಲಿ ಯಾವ್ದೇ ಆಪತ್ತು ಇರೋಲ್ಲ' ಕಣ್ಣೀರು ಮಿಡಿಯುತ್ತ ಶಬರಿ ಹೇಳಿದಾಗ 'ಅವ್ನೇ ಆಪತ್ತು, ಅಷ್ಟು ಸಾಕು' ಎಂದಿದ್ದಳು.

ಮೂರರ ಸುಮಾರಿಗೆ ಕಣ್ಮಣಿ ಕಾಣಿಸಿಕೊಂಡಾಗ, ಅವಳಿಗೆ ಆಶ್ಚರ್ಯವೋ ಆಶ್ಚರ್ಯ. ಅತ್ತಿತ್ತ ನೋಡಿದಳು. ಅರ್ಧ ದಿನ ಪರ್ಮಿಷನ್ ಪಡೆದಿದ್ದರೂ ಕರ್ಣನ ನಿರಾಕರಣೆಯಿಂದ ಕೆಲಸಕ್ಕೆ ಬಂದಿದ್ದಳು. ಪಕ್ಕದಲ್ಲಿದ್ದ ಸೇಲ್ಸ್‌ಗರ್ಲ್ ಹತ್ರ ಪಿಸಿಪಿಸಿ ಮಾತಾಡಿ, ಕೌಂಟರ್ ಬಳಿ ಹೋಗಿ ನಿಂತು ಏನೇನೋ ಸಮಾಜಾಯಿಷಿ ನೀಡಿ ಕಣ್ಮಣಿಯೊಂದಿಗೆ ಹೊರಗೆ ಬಂದಳು.

"ನೀನು ಬಂದಿದ್ದು ಒಳ್ಳೆದಾಯ್ತು, ಇಲ್ಲದಿದ್ರೆ ನನ್ನೆದೆಯೊಡೆದು ಹೋಗ್ತಾ ಇತ್ತು. ನನ್ನ ಬಗ್ಗೆ ನಂಗೆ ಜಿಗುಪ್ಸೆಯಾಗಿದೆ" ಕಣ್ಣೀರು ಮಿಡಿದಾಗ, ಕಣ್ಮಣಿ "ಬೀದಿಯಲ್ಲಿ ಅಳೋದು ಡೀಸೆನ್ಸಿಯಲ್ಲ ಅಂತಾರೆ. ಹೇಗೂ, ರೂಪ ಇರೋಲ್ಲ, ಹಾಸ್ಟಲ್‌ಗೆ ಹೋಗ್ಬಿಡೋಣ" ಸಲಹೆ ಕೊಟ್ಟಳು.

ಇವರಿಬ್ಬರು ಹಾಸ್ಟಲ್‌ಗೆ ಹಿಂದಿರುಗಿದಾಗ ಎಲ್ಲಾ ಖಾಲಿ... ಖಾಲಿ ವಾರ್ಡನ್ ಆಫೀಸ್ ರೂಮಿನಲ್ಲಿದ್ದರೇ, ಕ್ಲೀನ್ ಮಾಡುವ ಮಲ್ಲಿ ಮುಂದಿನ ಗಾರ್ಡನ್ ಚೊಕ್ಕಟ ಮಾಡುತ್ತಿದ್ದಳು.

"ಇದೇನು, ಇಷ್ಟು ಬೇಗ್ಬಂದ್ರಿ? ಎಲೆಯಡಿಕೆ ಇಲ್ದೇ ಬಾಯೆಲ್ಲ ನಾರ್‍ತಾ ಇದೆ" ಎಂದು ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಎಲೆಯಡಿಕೆ ಚೀಲ ಕೊಡವುತ್ತ ಬಂದಳು. ಮಾತಾಡದೇ ವಾಸಂತಿ ಹೋಗಿಬಿಟ್ಟಾಗ ಎರಡರ ಹಳೆಯ ನೋಟನ್ನು ತೆಗೆದು ಕಣ್ಮಣಿ ಕೊಟ್ಟು "ಚೆನ್ನಾಗಿದ್ದೀಯಾ?" ಕೇಳುತ್ತಲೇ ನಡೆದು ಬಿಟ್ಟಳು ಒಳಕ್ಕೆ. ಅವಳು ಹೇಳುವ ಪುರಾಣ ಕೇಳಲು ಸಿದ್ಧವಿರಲಿಲ್ಲ.

ದಿಂಬಿನಲ್ಲಿ ಮುಖವನ್ನುದುಗಿಸಿ ಬಿಕ್ಕುತ್ತಿದ್ದ ವಾಸಂತಿಯನ್ನು ನೋಡಿ ಹೆದರಿದಳು. ಚಲನಚಿತ್ರದ ರೀಲುಗಳಂತೆ ಹಲವಾರು ಕೆಟ್ಟ ದೃಶ್ಯಗಳು ಬಿಚ್ಚಿಕೊಂಡು ಮತ್ತಷ್ಟು ಆತಂಕಗೊಳಿಸಿತು. ಪಕ್ಕದಲ್ಲಿ ಹೋಗಿ ಕೂತು ಅವಳ ಬೆನ್ನಿನ ಮೇಲೆ ಕೈಯಿಟ್ಟಳು.

"ಏನಾಯ್ತು?" ಅಷ್ಟೇ ಕೇಳಿದ್ದು.

ಮತ್ತಷ್ಟು ಬಿಕ್ಕಿ ಬಿಕ್ಕಿ ಅಳತೊಡಗಿದಳು. ನಿಂತು ನಿಂತು ಸುರಿಯುವ ಮಳೆಯಂತೆ ಅಳುತ್ತಿದ್ದಳು. ಕಣ್ಣಿನಿಂದ ಉದುರುವ ಕಂಬನಿಯ ಬಿಂದುಗಳು ಆಲಿಕಲ್ಲುಗಳಂತೆ ನಿಧಾನವಾಗಿ ಕರಗಿ ಭೂಮಿಯಲ್ಲಿ ಹಿಂಗುವಂತೆ ದಿಂಬಿನಲ್ಲಿ ಸೇರಿ ಹೋಗುತ್ತಿತ್ತು. ಈ ದೃಶ್ಯ ನೋಡಲಾರದೆ ಕಣ್ಮಣಿ ಗುಬ್ಬಚ್ಚಿಯಂತೆ

ಮುದುಡಿಕೊಂಡರೂ ಕ್ರಮೇಣ ರೆಕ್ಕೆಗಳನ್ನು ಕೊಡವಿ ಹಾರಲು ಉದ್ಯುಕ್ತವಾದ ಪಕ್ಷಿಯಂತಾದಳು.

"ಪ್ಲೀಸ್, ವಾಸಂತಿ ಅಳು ನಿಲ್ಸಿ ಮಾತಾಡು. ಈ ಅಳುವಿನಿಂದ ಪ್ರಯೋಜನವೇನು? ಶತ ಶತಮಾನಗಳಿಂದ ಅಳುವ ಹೆಂಗಸರು ಏನಾದರೂ ಸಾಧಿಸಿದ್ದುಂಟಾ? ಅದೇನು... ಹೇಳು? ಕರ್ಣ ಏನಾದ್ರೂ ನಿರಾಕರಿಸಿದರಾ?" ದಿಂಬಿನಿಂದ ಅವಳ ಮುಖವನ್ನೆತ್ತಿ ಕಣ್ಣೀರು ತೊಡೆದಾಗ ಇವಳಿಗೆ ತೆಕ್ಕೆ ಬಿದ್ದಳು. ಸ್ನೇಹಮಯ ಆಸರೆಯಲ್ಲಿ ಅವಳ ದುಃಖ, ವ್ಯಥೆ ಬಹಳಷ್ಟು ಕಡಿಮೆ ಆಯಿತು.

ಕಣ್ಣೊರೆಸಿಕೊಂಡು ಮೇಲೆದ್ದ ವಾಸಂತಿ ಮುಖ ತೊಳೆದು ಬಂದಾಗ, ಅವಳ ಕೆನ್ನೆಗಳು ಊದಿ ಸುಮಾರು ಸೈಜಿನ ಟೊಮಾಟೋಗಳಾಗಿತ್ತು.

"ಕರ್ಣ... ಒಳ್ಳೆಯವನಲ್ಲ!" ಹೇಳಿದಳು.

"ಹೇಗೆ?" ಕೇಳಿದಳು.

ವಾಸಂತಿ ಅತ್ಯಂತ ಸಮಾಧಾನವಾಗಿಯೇ ಎಲ್ಲಾ ವಿವರಿಸಿದಾಗ, ಕಣ್ಮಣಿ ವಿಸ್ಮಿತಳಾದಳು. 'ಕಂಜೂಸ್, ಜಿಪುಣ, ಜುಗ್ಗ ಇವೆಲ್ಲವನ್ನು ಮೀರಿಸುವ ಸ್ವಭಾವ ಹೊಂದಿದ್ದ ವ್ಯಕ್ತಿ ಕರ್ಣ ಇರಬೇಕು' ಇಂಥ ನಿಲುವಿಗೆ ಬಂದಳು.

"ಅಂತು ಕರ್ಣನ ವ್ಯಕ್ತಿತ್ವ ವಿವರಿಸೋಕೆ ಒಬ್ಬ ಪವರ್‌ಫುಲ್ ರೈಟರ್ ಬೇಕು. ನಾನಂತು ಲಾಜಿಕ್ ಮಾಡಲಾರೆ. ಹೇಗೂ ಸಂಜೆವರ್ಗೂ... ಫ್ರೀನೇ, ಯಾವುದಾದ್ರೂ ಕ್ಲೂ ಇದ್ದರೇ ಆ ವ್ಯಕ್ತಿಯ ವಿಳಾಸವನ್ನು ತಲಾಷ್ ಮಾಡ್ಬಹುದ್ದು. ಮತ್ತಷ್ಟು ಮೋಸಹೋಗುವ ಮುನ್ನ ಎಚ್ಚೆತ್ತುಕೋಬೇಕು."

ಮುಖ ಒಂದು ತರಹ ಮಾಡಿದಳು ವಾಸಂತಿ "ಈಗ ಸಾಕಷ್ಟು ಮೋಸ ಹೋಗಿಯಾಗಿದೆ. ಆ ಮನುಷ್ಯನನ್ನ ಹಿಡ್ಯೋ ಪುರಸತ್ತು ನಮಗೆಲ್ಲಿದೇ? ಇನ್ನೊಮ್ಮೆ ಕಂಡರೇ ಕಾಲಿನಲ್ಲಿರೋ ಚಪ್ಪಲಿ ಕಳಚಿಕೊಂಡು ನಾಲ್ಕು ಬಾರಿಸಿ, ನನ್ನ ನೋವು, ವ್ಯಥೆಯನ್ನು ಶಮನ ಮಾಡಿಕೊಳ್ಳುತ್ತೇನೆ" ಆವೇಶದಿಂದ ನುಡಿದಳು. ಅಂಥ ದೊಡ್ಡ ಖರ್ಚೇನು ಅಲ್ಲದಿದ್ದರೂ ಉಳಿಸಿದ್ದ ಹಣವೆಲ್ಲ ಅವನಿಗೆ ಧಾರೆಯೆರೆಯುವುದರ ಜೊತೆಗೆ, ಕಣ್ಮಣಿಯ ಮೂರು ಸಾವಿರದ ಹುಂಡಿಯನ್ನು ಸಮರ್ಪಿಸಿ ಕೈ ತೊಳೆದುಕೊಂಡುಬಿಟ್ಟಿದ್ದಳು.

"ಸ್ವಲ್ಪ ಕರ್ಣನ ಬಗ್ಗೆ ಪೂರ್ತಿ ತಿಳಿಯದೇ ಒಂದು ನಿರ್ಧಾರಕ್ಕೆ ಬರೋದ್ಬೇಡ. ಅವನ ಸ್ವಭಾವ ಯಾವುದಾದರೂ ಒಂದು ಮುಖ್ಯವಾದ ಕಾರಣ ಇರಬಹುದ್ದು. ಒಂದು ಸಲ ಆತುರ ಪಟ್ಟಿದ್ದಾಗಿದೆ. ಮತ್ತೆ ಅದೇ

ಅವಸರದ ನಿರ್ಧಾರ ಬೇಡ. ವಿಳಾಸ.. ಫೋನ್ ನಂಬರ್.... ಅವೆರಡನ್ನು ಕಂಡು ಹಿಡಿಯುವಂಥ ಕ್ಲೂ ಏನಾದ್ರೂ ಇದ್ಯಾ?".

ಕಣ್ಮಣಿಯ ಮಾತಿಗೆ ಸೂಟುಕೇಸ್ ತೆಗೆದು ಮುಂದೆ ಹಾಕಿಕೊಂಡು ಒಂದು ಸಣ್ಣ ಅತಿ ಸಣ್ಣ ಫೋನ್ ನಂಬರ್‌ಗಳನ್ನು ಬರೆದಿಡುವಂಥ ಕೆಂಪು ರಟ್ಟಿನ ಪುಸ್ತಕ ತೆಗೆದಳು. ಅದರಲ್ಲಿ ಇದ್ದಿದ್ದು ಬರೀ ಐದೇ ಫೇಜು, ನಾಲ್ಕು ಪೂರ್ತಿ ಖಾಲಿ. ಕೊನೆಯದರಲ್ಲಿ ಆರು ಅಂಕಿಯ ಒಂದು ಫೋನ್ ನಂಬರ್ ಇದ್ದಿದ್ದು ಅದೃಷ್ಟ. ಅದು ಯಾವ ಏರಿಯಾನಲ್ಲಿ ಬರಬಹುದು.

ವಾರ್ಡನ್ ಟೇಬಲ್ ಮೇಲಿದ್ದ ಡೈರೆಕ್ಟರಿ ತಂದು ಹುಡುಕಾಡಿದರು. ಆ ನಂಬರ್ ರಾಣಿ ನಗರಕ್ಕೆ ಸೇರಿದ ಒಂದು ಮೆಡಿಕಲ್ ಸ್ಟೋರ್‌ನದು.

"ರಾಣಿ ನಗರ ಇಲ್ಲಿಂದ ಹದಿನಾಲ್ಕು ಕಿಲೋಮೀಟರ್. ಒಂದ್ಸಲ ಇಂಟರ್‌ವ್ಯೂಗೆ ಹೋಗ್ಬಂದಿದ್ದೆ. ಆಟೋ ಹಿಡಿದೇ ಹೋಗ್ಬೇಕು. ಮತ್ತೆ ಇಂಥ ಪ್ರಯತ್ನ ಮಾಡೋಕೆ ಕೆಲವು ದಿನಗಳೇ ಬೇಕಾಗ್ಬಹ್ದು. ಬೇಗ ಹೋಗ್ಬೇಕು, ಹುಡುಕಾಟಕ್ಕೆ ಒಂದಿಷ್ಟು ಸಮಯ ಬೇಕಾಗುತ್ತೆ" ಅವಸರಿಸಿದಳು ಕಣ್ಮಣಿ.

"ಈ ಸಲ ಹಣವೆಲ್ಲ ಖಾಲಿ. ಆಟೋ ದುಬಾರಿ ಖರ್ಚು, ಹಾಳಾಗ್ಲಿ ಬಿಡು" ವಾಸಂತಿ ಸಪ್ಪೆ ಮುಖದಿಂದ ಹೇಳಿದಳು. "ನನ್ನ ಹಣದ ಜೊತೆ, ನಿನ್ನ ಮೂರು ಸಾವಿರ ಕೂಡ ಹೋಯ್ತು, ನಮ್ಮಂತವರ ಹಣದಿಂದ ಅವನೆಲ್ಲಿ ಉದ್ಧಾರ ಆಗ್ತಾನೆ."

"ಇದ್ನ ಆಮೇಲೆ ಮಾತಾಡ್ಬಹ್ದು, ನಡೀ" ಹೊರಡಿಸಿದಳು ಬಲವಂತದಿಂದ. ಎಷ್ಟು ವೇಗವಾಗಿ ಹೊರಗೆ ಬಂದರೆಂದರೆ ಅಲ್ಲಿ ಅದೃಶ್ಯರಾಗಿ ಆಟೋದಲ್ಲಿ ಪ್ರತ್ಯಕ್ಷರಾದರು.

ರಾಣಿ ನಗರ ತಲುಪಿದಾಗ ಒಮ್ಮೆ ವಾಚ್ ನೋಡಿ ಟೆಲಿಫೋನ್ ಬೂತ್ ಇದ್ದ ಕಡೆ ಆಟೋ ನಿಲ್ಲಿಸಿ ಇಳಿದರು. ಹಣ ಕೊಟ್ಟಿದ್ದು ಕಣ್ಮಣಿಯೇ. ಒಂದಿಷ್ಟು ಇನ್‌ಫಾರ್ಮೇಷನ್ ಕಲೆಕ್ಟ್ ಮಾಡಿಕೊಂಡು ಬಂದ ಕಣ್ಮಣಿ ಸಪ್ಪಗಿದ್ದಳು. ಆ ಮೆಡಿಕಲ್ ಸೆಂಟರ್ ಒಡೆಯ ಕರ್ಣ ಅಲ್ಲ. ಮತ್ತೇನು ಅವನ ಬಿಜಿನೆಸ್? ವಾಸಂತಿಯ ಕಡೆ ನೋಡಿದಾಗ ಅವಳ ಮುಖದಲ್ಲಿ ಇದ್ದಿದ್ದು ಜಿಗುಪ್ಸೆ. ಒಂದು ರೀತಿಯ ಅಪರಾಧ ಭಾವ. ಇವೆರಡನ್ನು ಮೀರಿಸುವಂತೆ 'ತಾನು ಮೂರ್ಖಳು' ಎಂದು ತನ್ನನ್ನು ತಾನು ನಿಂದಿಸಿ ಕೊಳ್ಳುತ್ತಿದ್ದಳು.

ಮತ್ತೆ ಆಟೋ ಹಿಡಿದು ಆ ಮೆಡಿಕಲ್ ಸೆಂಟರ್ ಬಳಿ ಇಳಿದ ಕಣ್ಮಣಿ ಆಟೋದವನಿಗೆ ಹಣ ತೆತ್ತು "ಒಂದಿಷ್ಟು ಮೆಡಿಸಿನ್ ಬೇಕು" ಎಂದು ಆ ಮೆಡಿಕಲ್ ಸೆಂಟರ್‌ನೊಳಗೆ ಹೋದಳು. ಲಕ್ಷಾಂತರ ರೂಪಾಯಿ ಇನ್‌ವೆಸ್ಟ್ ಮಾಡಿ ವಿಸ್ತರಿಸಿದ್ದ ಅಲ್ಲಿ ಅಲೋಪತಿ, ಹೋಮಿಯೋಪತಿ ಮತ್ತು ಆಯುರ್ವೇದಿಕ್‌ನ ಮೆಡಿಸಿನ್‌ಗಳ ವಿಭಾಗಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿದ್ದರು. ಬೇಕಿಲ್ಲದಿದ್ದರು ನಿತ್ಯ ಬಳಕೆಗೆ ಬರುವಂಥ ವಿಕ್ಸ್, ಅಮೃತಾಂಜನ, ನೊವಾಲಿಜಿನ್ ಅಂಥದ್ದನ್ನು ಖರೀದಿಸಿ ಹಣ ತೆತ್ತು ಹಾಗೇ ನಿಂತಳು.

"ಇಲ್ಲಿ ಕರ್ಣ ಅನ್ನೋರು ಬೇಕಲ್ಲ!" ಎಂದಳು ಸ್ವಲ್ಪ ಅನುಮಾನಿಸುತ್ತ. ಬೇರೆಯವರ ಮೆಡಿಸಿನ್ ಚೀಟಿ ನೋಡುತ್ತಿದ್ದವನು "ಇಲ್ಲಿ ಆ ಹೆಸರಿನೋರು ಯಾರಿಲ್ಲ" ಕೈಯಾಡಿಸಿದ. ಅಷ್ಟಕ್ಕೆ ಸುಮ್ಮನಾಗದೇ ಕೌಂಟರ್ ಬಳಿ ಹೋಗಿ "ಕರ್ಣ ಅನ್ನೋರಿಗೆ ಒಂದು ಅರ್ಜೆಂಟ್ ಇನ್‌ಫಾರ್ಮೇಷನ್ ಕೊಡ್ಬೇಕು. ಅವ್ರ ಅಂಕಲ್ ನಿಮ್ಮನ್ನ ಕೇಳಿದ್ರೆ... ಹೇಳ್ಬಹುದು ಅಂದ್ರು" ಕ್ಯಾಲಿಕ್ಲೇಟರ್ ಹಿಡಿದಿದ್ದ ವ್ಯಕ್ತಿ ಸ್ವಲ್ಪ ಉದಾಸವಾಗಿಯೇ ತಲೆಯೆತ್ತಿ "ಇದೇ ರೋಡುನಲ್ಲಿ ಕೊನೆಯ ಹಳದಿ ಬಣ್ಣದ ಒಂದು ಸಣ್ಣ ಅಂಗ್ಡೀಯಲ್ಲಿ ವಿಚಾರ್ಸಿ" ಎಂದವನೆ ತನ್ನ ಕೆಲಸದಲ್ಲಿ ನಿರತನಾದ.

ಮೆಟ್ಟಲು ಇಳಿದು ಕೆಳಗೆ ಬಂದ ಕಣ್ಮಣಿ "ವಿಳಾಸ ಸಿಕ್ಕಿದೆ, ಸ್ವಲ್ಪ ಹೆಜ್ಜೆಯ ವೇಗ ಹೆಚ್ಚಿಸು" ದಾಪುಗಾಲು ಹಾಕುತ್ತ ನಡೆದಾಗ ಆ ಇಂಟರ್‌ವ್ಯೂನಲ್ಲಿ ಮೀಟ್ ಆಗಿದ್ದ ಶ್ವೇತ ಬಾಯಿ ತುಂಬ ನಕ್ಕು ಕೈಗಳನ್ನು ಹಿಡಿದು ಕುಶಲೋಪರಿ ವಿಚಾರಿಸಿ "ಇಲ್ಲೇ ಐ ಕ್ಯೂ ಫೋಟೋಸ್‌ನಲ್ಲಿ ರಿಸೆಪ್ಷನಿಸ್ಟ್ ಆಗಿದ್ದೀನಿ. ನೀನು ಎಲ್ಲಿದ್ದೀಯಾ?" ವಿಚಾರಿಸಿಕೊಂಡಳು. ವಾಸಂತಿಯ ನೋಟ ಅವಳು ಉಟ್ಟಿದ್ದ ಸೀರೆಯನ್ನೇ ವಿಮರ್ಶಿಸಿತು, ನಂದಿನಿ ಟೆಕ್ಸ್‌ಟೈಲ್‌ನಲ್ಲಿ ಕರ್ಣ ಕೊಂಡ ಸೀರೆ, ಅದನ್ನು ದೃಢಪಡಿಸಿದ್ದು ಸೆರಗು. "ತುಂಬ ಚೆನ್ನಾಗಿದೆ ಸೀರೆ" ಮೆಚ್ಚಿಗೆ ಸೂಚಿಸಿದಳು.

"ಇಷ್ಟ ಆಯ್ತ? ಇನ್‌ಸ್ಟಾಲ್‌ಮೆಂಟ್‌ನಲ್ಲಿ ಕರ್ಣನಿಂದ ಕೊಂಡ ಸೀರೆ. ಅಸಲು ತಕ್ಷಣ ಕೊಡ್ಬೇಕು. ಲಾಭ ಮಾತ್ರ ಇನ್‌ಸ್ಟಾಲ್‌ಮೆಂಟ್" ಕಿಲ ಕಿಲ ನಕ್ಕಳು. ವಾಸಂತಿಯ ಅನುಮಾನ ದೃಢವಾದರೇ, ಕಣ್ಮಣಿಯ ಕಿವಿ ಚುರುಕಾಯಿತು. "ನಾವು ಬಂದಿದ್ದು ಕೂಡ ಅವ್ರನ್ನ ಹುಡ್ಕಿಕೊಂಡೇ, ಎಲ್ಲಿದೆ ಅವ್ರ ಮನೆ" ಇವಳ ಕೇಳಿಕೆಗೆ ಮತ್ತಷ್ಟು ನಕ್ಕಳು ಶ್ವೇತ.

"ಆ ಮನುಷ್ಯನಿಗೆ ಹಣದ ಅಗತ್ಯವಿದೆಯೇ ಹೊರತು ಮನೆ ಮಠ... ಬೇರೇನು ಅಲ್ಲ. ಸಿಕ್ಕಿದಾಗಲ್ಲೆಲ್ಲ ಖರ್ಚು ಮಾಡಿಸ್ತಾನೆ ನನ್ನತ್ರ ಕೂಡ. ಮಹಾನ್ ಜುಗ್ಗ.... ಇರೋದೊಂದು ಪುಟ್ಟ ಮನೆ. ಅದರಲ್ಲಿರೋ ಪ್ರತಿಯೊಂದು ಸಾಮಾನನ್ನು ಕೂಡ ಬಾಡಿಗೆಗೆ ಕೊಡ್ತಾನೆ. ನಾಳೆ ಇವ್ನ ಪುಣ್ಯಕ್ಕೆ ಯಾರಾದ್ರೂ ಹೆಣ್ಣು ಕೊಟ್ರರೆ, ಅವ್ಳನ್ನು ಕೂಡ ಬಾಡಿಗೆಗೆ ಕೇಳಿದ್ರೆ ಕೊಟ್ಟು ಬಿಡ್ತಾನೆ, ಹಣದ ಮನುಷ್ಯ" ವ್ಯಂಗವಾಡಿದಳು.

ವಾಸಂತಿ ನೋಟ ನೆಲದಲ್ಲಿ ನೆಟ್ಟರೇ, ಕಣ್ಮಣಿ ಕರ್ಣನನ್ನ ಮನದಲ್ಲಿಯೇ ಕಲ್ಪಿಸಿಕೊಳ್ಳುತ್ತಿದ್ದಳು. ಅವಳಿಂದಲೇ ಅವನು ವಾಸಿಸುವ ಜಾಗದ ವಿಳಾಸ ಪಡೆದು ಅವರಿಬ್ಬರು ಅಲ್ಲಿಗೆ ಬಂದರೇ, ಮಧ್ಯ ಒಬ್ಬ ನುಸುಳಿ ಹೋಗುವಂಥ ಸಣ್ಣ ಓಣಿಯ ಒಂದು ಕಡೆ ಲಾಂಡ್ರಿ, ಇನ್ನೊಂದು ಕಡೆ ಬಾಳೆಹಣ್ಣು ಬೀಡಾ, ಪಾನ್‌ಪರಾಗ್, ಗುಟ್ಕಾ ಮಾರುವ ಪೆಟ್ಟಿಗೆ ಅಂಗಡಿ, ತಲೆ ಬಗ್ಗಿಸಿಕೊಂಡು ಹೋಗುವಂಥ ತಲೆ ಬಾಗಿಲು.

"ಬರ್ತೀನಿ" ಅವಳನ್ನು ಬೀಳ್ಕೊಟ್ಟಳು.

ಇಬ್ಬರು ಪೆಟ್ಟಿಗೆ ಅಂಗಡಿಯ ಬಳಿ ಹೋಗಿ ಬಾಳೆ ಹಣ್ಣು ಕೊಂಡ ನಂತರ "ಕರ್ಣ ಅವರು ಎಲ್ಲಿರೋದು?" ಕೇಳಿದಳು ಕಣ್ಮಣಿ. ಅವನು ಹುಬ್ಬು ಕುಣಿಸಿ ನಗೆ ಬೀರಿದ "ಅವ್ರಿಂದ, ನೀವೇನಾದ್ರೂ ಕಂತಿಗೆ ಸಾಮಾನು ಪಡೆದುಕೊಳ್ಳೋಕೆ ಬಂದಿದ್ದೀರಾ? ಹುಷಾರ್, ಎಲ್ಲಾ ಸೆಕೆಂಡ್ ಹ್ಯಾಂಡ್, ಏನು ಸಿಗೋಲ್ಲ! ಸೀತಾಲಕ್ಷ್ಮಿ ಹಾಲ್‌ನ ರೇಶಿಮೆ ಸೀರೆಯಿಂದ ಹಿಡಿದು ಸಣ್ಣ ಗುಜರಿಯಲ್ಲಿ ಮಾರೋ ಚಪ್ಪಲಿಗೆ ಹೊಡ್ಯೋ ಮಳೆಯವರ್‍ಗೂ ಸಿಗುತ್ತೆ. ನಾವು ಅಂಗಡಿ ಇಟ್ಟಿರೋ ಜಾಗ ಕೂಡ ಅವರದ್ದೇ. ಇವ್ನಿಗೆ ಯಾರು ಇಟ್ಟರೋ, ಈ ಹೆಸರು !. ಎಂದಾದ್ರೂ ಒಬ್ಬ ಫ್ರೆಂಡ್‌ಗೆ ಅರ್ಧ ಕಪ್ ಕಾಫೀ ಕೊಡ್ಸಿದ್ದುಂಟಾ? ಅಬ್ಬ... ಅಬ್ಬ... ಇಂಥ ಮನುಷ್ಯನ್ನು ಕಂಡದ್ದೇ ಇಲ್ಲ" ಎಲ್ಲಾ ಮಾಹಿತಿಯನ್ನು ಬದರಿ ಉಪಕಾರವನ್ನೆ ಮಾಡಿದ್ದ. ವಾಸಂತಿ ಗೆಳತಿಯ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಅವಳ ಕೈ ಕಂಪಿಸುವ ಅನುಭವವಾಗಿತ್ತು.

"ತುಂಬ... ತುಂಬ.... ಥ್ಯಾಂಕ್ಯೂ" ಕಣ್ಮಣಿ ಬಾಳೆ ಹಣ್ಣುಗಳನ್ನು ಹಿಡಿದೇ ಆ ಗಿಡ್ಡ ಬಾಗಿಲನ್ನು ತಟ್ಟಿದಳು. ಒಬ್ಬ ವ್ಯಕ್ತಿ ಬಂದು ತೆರೆದ ಅವನೇ ಕರ್ಣ. "ಯಾರು.... ನೀವು?" ಎಂದವನು ವಾಸಂತಿಯನ್ನು ನೋಡಿ "ನಾನೇ ಬಂದು ಭೇಟಿ ಮಾಡ್ತಾ ಇದ್ದೆನಲ್ಲ, ನೀನ್ಯಾಕೆ ಬರೋದಿಕ್ಕೆ ಹೋದೆ?" ಅಯಿಷ್ಟವನ್ನು ಪ್ರಕಟಿಸಿದ. ಅವನಿಗೆ ತುಂಬ ತುಂಬ ಬೇಜಾರಾಗಿದೆಯೆಂದು

ಅವನ ಮುಖದ ಮೇಲಿನ ಭಾವವೇ ಒತ್ತಿ ಹೇಳಿತು.

"ನೀನ್ಬಂದು ಭೇಟಿ ಮಾಡೋದು, ಸರಿ. ಈ ಕಡೆ ಬಂದಿದ್ವಿ, ಶ್ವೇತ ನಿಮ್ಮಲ್ಲಿ ಸೀರೆಗಳು ಕಂತಿಗೆ ಸಿಗುತ್ತೇಂತ ಅಂದಳು. ಆದರೆ ನೀವು ವಾಸಂತಿ ಫ್ರೆಂಡ್ ಕರ್ಣಾಂತ ಅಂದುಕೊಳ್ಳಿಲ್ಲ" ಸಮಾಜಾಯಿಸಿ ನೀಡಿದಳು. ನಂತರವೆ ಅವನು ಹಿಂದಕ್ಕೆ ಸರಿದು ಇವರಿಗೆ ಒಳಗೆ ಬರಲು ದಾರಿ ಮಾಡಿ ಕೊಟ್ಟಿದ್ದು.

ಹತ್ತು ಹನ್ನೆರಡರ ಹಾಲ್‌ನಲ್ಲಿ ಖಾಲಿ ಇದ್ದ ಜಾಗವೇ ಕಡಿಮೆ. ಹಾಲ್ ಕವರ್‌ಗಳಿಂದ ಹಿಡಿದು ಪೊರಕೆ, ಹಳೇ ಮಿಷನ್‌ಗಳವರೆಗೂ ಇತ್ತು. ಅದು ಮನೆಯಾಗಿ ಕಾಣಲಿಲ್ಲ, ಸಣ್ಣ ಗುಜರಿ ಅಂಗಡಿ ಅದರ ನಡುವೆ ವಾಸಿಸುವ ಕರ್ಣನ ಉಡುಗೆ ತೊಡುಗೆಗಳಿಂದ ಅಲ್ಲಿಯ ವ್ಯಾಪಾರಿಯಾಗಿಯೇ ಕಂಡ.

"ಕುತ್ಕೊಳ್ಳಿ...." ಒಂದು ಹಳೆಯ ಚಾಪೆ ತಂದು ಹಾಸಿದ.

ವಾಸಂತಿ ಬಾಯಿ ಬಿಚ್ಚಲಿಲ್ಲ. ಅವಳೆದೆಯಲ್ಲಿ ಮೂಡಿದ ಪ್ರೇಮ ಪರಾಗಗಳು ಸತ್ತು ನಾಮಾವಶೇಷವಾಗಿತ್ತು. ಅಲ್ಲಿ ಈಗ ಬರೀಯ ಬಂಜರು. 'ಪ್ರೇಮ ಇಷ್ಟೊಂದು ಕುರುಡೇ?' ತನ್ನನ್ನು ತಾನೇ ಪ್ರಶ್ನಿಸಿಕೊಂಡಳು. ಇನ್ನು ಎಷ್ಟೋ ವಿಲಕ್ಷಣ ಪ್ರೇಮ ಘಟನೆಯಿಂದ ಸಾಮ್ರಾಜ್ಯಗಳು ಹಾಳಾಗಿ ಹೋಗಿದ್ದವು. ಪ್ರೇಮ ಅತ್ಯಂತ ಸುನೀತವಾದ್ದುದ್ದು. ಅದರ ಅನುಭವವೆ ವಿಶಿಷ್ಟವಾದ್ದುದ್ದು 'ಯಾವುದೇನೇ ಇರಲಿ ಪ್ರೀತಿಯಂಥಾ ವಸ್ತು ಭವದಲ್ಲಿ ಕಾಣೆ ಮನಗಂಡ ಮಾತು' ಮಧುರ ಚೆನ್ನರ ಕವನದ ಸಾಲಿನ ನೆನಪಾಯಿತು.

"ನಿನ್ನ ಫ್ರೆಂಡ್ ಕಣ್ಮಣಿ ಇವರೇನಾ? ಬಹಳ ಚೆನ್ನಾಗಿದ್ದಾರೆ" ಪ್ರಶ್ನೆಯೊಂದಿಗೆ ಇನ್ನೊಂದು ಮಾತು ಸೇರಿಸಿದ "ಯಾವ ರೇಟಿನ ಸೀರೆಗಳು ಬೇಕು? ಕಂತಿಗೆ ಅಂದರೆ ಸ್ಯಾಲರಿ ಸರ್ಟಿಫಿಕೇಟ್ ಕೊಡ್ಬೇಕಾಗುತ್ತೆ. ಎಲ್ಲಿ ನೀವು ಕೆಲ್ಸ ಮಾಡೋದು? ಚೈತನ್ಯ ಕಂಪನೀಸ್ ಅವ್ರ ಮನೆಯಲ್ಲೀಂತ ಕೇಳ್ದ ನೆನಪು. ಸ್ಯಾಲರಿ ಎಷ್ಟು?" ಎಲ್ಲಾ ಒಂದೇ ಸಲ ಕೇಳಿದಾಗ ತಬ್ಬಿಬಾದರು ಚಲಿಸಿ ಹೋಗಲಿಲ್ಲ ಕಣ್ಮಣಿ.

"ಸ್ಯಾಲರಿ ಸರ್ಟಿಫಿಕೇಟ್ ಅಂಥದೆಲ್ಲ ಕೊಡೋಕೆ ನಂದು ಸರ್ಕಾರಿ ಕೆಲ್ಸವಲ್ಲ. ಯಾವ ಕ್ಷಣದಲ್ಲಿ ಬೇಕಾದ್ರೂ ತೆಗ್ದು ಹಾಕ್ಬಹುದ್ದು. ವಾಸಂತಿ ಷ್ಯೂರಿಟಿ ಸಾಲ್ದ?".

ಕಣ್ಮಣಿಯು ಕೇಳಿಕೆಗೆ ಖಡಖಂಡಿತವಾಗಿ ನಿರಾಕರಿಸಿದ "ಇಲ್ಲ, ಆಗೋಲ್ಲ! ಅವಳದು ಕೂಡ ಪರ್ಮನೆಂಟ್ ಕೆಲ್ಸವಲ್ಲ. ಸೀರೆಗಳ್ನ ಕೊಡೋಕ್ಕಾಗೋಲ್ಲ. ಶ್ವೇತನ ಬೇಕಾದ್ರೆ ಕರ್ಕೊಂಡ್ಬನ್ನಿ. ಅವ್ಳು ಐ.ಕ್ಯೂ

ಫೋಟೋಸ್‌ನಲ್ಲಿರೋದು. ಅವ್ರು ಕಂತು ಕೊಡೋಕೆ ಒಪ್ಪಿದ್ರೆ... ಸೀರೆಗಳ್ನ ತೋರಿಸ್ತೀನಿ" ಕಡ್ಡಿ ಎರಡು ತುಂಡು ಮಾಡಿದಂತಿತ್ತು ಮಾತು.

"ಆಯ್ತು, ಕರ್ಕೊಂಡ್ಬರ್ತೀನಿ" ಮೇಲೆದ್ದಳು.

ವಾಸಂತಿ ಇನ್ನೊಂದು ಮಾತು ಆಡಲಿಲ್ಲ. ಈ ಕೊಪದಿಂದ ಹೊರಗೆ ಹೋಗುವುದು ಬೇಕಿತ್ತು ಅವಳಿಗೆ. ಅತ್ತ ತಿರುಗಿಯು ಕೂಡ ನೋಡದೇ ಹೊರ ಬಂದಳು. ಬದುಕು ಎಷ್ಟೊಂದು ವಿಚಿತ್ರ. ಅದರ ಸೊಗಸನ್ನು ಮರೆ ಮಾಚಿ ಇಂಥ ಜೀವನವನ್ನು ಅಪ್ಪಿಕೊಳ್ಳುವ ಜನಕ್ಕೆ ಏನೆನ್ನಬೇಕು?.

"ಓಹೋ, ಬಾಳೆಹಣ್ಣು ತಗೊಂಡಿದ್ರಾ? ತೀರಾ ಹಣ್ಣಾಗಿರೋದಿಂದ್ರ ... ನಿಮ್ಮ ಕೈಯಲ್ಲೇ ಹಾಳಾಗ್ಬಿಡುತ್ತೆ. ಇಲ್ಲೇ ಇರ್ಲಿ ಬಿಡಿ" ಬಾಳೆ ಹಣ್ಣುಗಳನ್ನು ತೆಗೆದಿಟ್ಟುಕೊಂಡ ಕರ್ಣ.

ಕಣ್ಮಣಿ ಮಾತಾಡಲಿಲ್ಲ. ಹೊರಗಿನ ಗಾಳಿ ಸೋಕಿದ ನಂತರವೆ ಅವಳಲ್ಲಿ ಚಲನೆಯುಂಟಾಗಿದ್ದು. 'ಕರ್ಣ' ಮಹಾಭಾರತದ ಪಾತ್ರಧಾರಿ, ಅಸಾಧಾರಣ ಸಾಹಸಿ, ಕೊಟ್ಟ ಮಾತಿಗೆ ತಪ್ಪದ ದಾನಶೂರ ಕರ್ಣ ಜಗತ್ತು ಇರೋವರೆಗೂ ಜನರ ಪ್ರೀತಿ, ಅಭಿಮಾನಗಳನ್ನು ಪಡೆದುಕೊಳ್ಳುವ ಅದ್ಭುತ ವ್ಯಕ್ತಿ ಹೆಸರು ಇಲ್ಲಿ ಛಿದ್ರ ಛಿದ್ರವಾಗಿತ್ತು. ಧಾನ ಎಂದರೇನು ಅಂತ ಕೇಳಿದರೇ ಈ ಕಲಿಯುಗದ ಕರ್ಣ ಉತ್ತರಿಸಲಾರ.

ಬಸ್‌ಸ್ಟಾಪ್‌ಗೆ ಬಂದವರೆ ಕಲ್ಲಿನ ಬೆಂಚಿನ ಮೇಲೆ ಕೂತರು. ಒಬ್ಬರ ಮೈಯಲ್ಲೂ ಒಂದಿಷ್ಟು ಶಕ್ತಿ ಇಲ್ಲವೆನಿಸಿತು. ಮುಂದೇನು? ಅವನಿಗೆ ಖರ್ಚು ಮಾಡಿದ ಹಣದ ಜೊತೆಗೆ ದಕ್ಷಿಣೆಯಂತೆ ಸಂದಾಯವಾಗಿತ್ತು ಮೂರು ಸಾವಿರ. ಅದು ಹಿಂದಕ್ಕೆ ಬರಲಾರದ ಹಣ.

"ಆ ಹಣ ನಾನು ಕೊಡ್ತೀನಿ, ಕಣ್ಮಣಿ" ಕೈ ಹಿಡಿದು ಗದ್ಗದಿಸಿದಳು ಕಣ್ಮಣಿ. "ಅರೇ, ಯಾವ ಹಣ? ನಂಗೆ ನಂದು, ನಿಂದು ಎನ್ನುವ ಭೇದ ಭಾವವಿದ್ದರೇ ನಾನು ಖಂಡಿತ ನಿನ್ನೆಯಲ್ಲಿ ಕೊಡ್ತಾ ಇರ್ಲಿಲ್ಲ. ಅದಕೊಸ್ಕರ ತಲೆ ಕೆಡ್ಸಿಕೊಳ್ಳುವುದ್ಬೇಡ, ಮುಂದೇನು? ನಿನ್ನ ಪ್ರೇಮದ ಮುಕ್ತಾಯ ಹೇಗೆ? ಎಚ್ಚರದಿಂದ ಆಲೋಚಿಸಿ ದೃಡವಾದ ಹೆಜ್ಜೆ ಇಡು" ವಿವೇಚಿಸಿದಳು. "ಆ ಮನುಷ್ಯನ ಜೊತೆ ಅಷ್ಟೊಂದು ಕೆಟ್ಟದಾಗಿ ಬದ್ಕೋ ಇಚ್ಛೆ ನಂಗಿಲ್ಲ. ಇನ್ನು ನನ್ನ ಪಾಲಿಗೆ ಕರ್ಣ ಮರೆತ ವ್ಯಕ್ತಿ" ಎಂದಳು.

ಅಷ್ಟರಲ್ಲಿ ಬಸ್ಸು ಬಂದಿದ್ದರಿಂದ "ನಾನು ಬರ್ತೀನಿ..." ಓಡಿ ಹೋಗಿ

ಬಸ್ಸು ಹತ್ತಿಕೊಂಡಳು. ಒಂಟಿಯಾಗಿ ನಿಂತ ಅವಳ ಬಗ್ಗೆ ಕನಿಕರವೇನು ಮೂಡಲಿಲ್ಲ. ಕರ್ಣನಂಥ ವ್ಯಕ್ತಿ ಮಾತ್ರ ಗೆಳತಿಯು ಪಕ್ಕ ಇರಬಾರದೆಂದುಕೊಂಡಳು.

* * * *

ಸುಬ್ಬಲಕ್ಷ್ಮಿಯವರ ಕೋಣೆಗೆ ಬಂದ ಚೈತನ್ಯ ದಿಗ್ಭ್ರಮೆಗೊಂಡ. ಅವರ ಹಣೆಯಲ್ಲಿ ಕುಂಕುಮದ ಬೊಟ್ಟಿತ್ತು. ಬಹಳ ತೇಜೋಃಪುಂಜವಾಗಿ ಕಾಣುವ ಅಮ್ಮನನ್ನು ದಿಟ್ಟಿಸಿ ನೋಡಿದ. ಸಂಪ್ರದಾಯದ ಸಂಕೋಲೆಯನ್ನು ಕಳಚಿಕೊಂಡ ಆಕೆಯ ಮುಖದಲ್ಲಿ ಹೊಸ ಕಾಂತಿ ಇತ್ತು. ಆದರೆ ಆಕೆಯೇ ಸಂಕೋಚಿಸಿದರು.

"ಇದೆಲ್ಲ ಕಣ್ಮಣಿ ಕೆಲ್ಸ. ಇಷ್ಟೊಂದು ಹೊಸ ಚಿಂತನೆಗಳನ್ನು ತುಂಬಿಕೊಂಡ ನೀವು ಈ ಮೌಢ್ಯಕ್ಕೆ ಹೇಗೆ ಒಳಗಾದಿರೀಂತ ಒಂದ್ವಾರದಿಂದ ಹಿಂಸೆ ಮಾಡಿ ಒಪ್ಪಿಸಿದ್ಲು" ಕೇಳಿದರು.

ತಾಯಿ ಪಕ್ಕ ಹೋಗಿ ಕೂತವನು ಬಗ್ಗಿ ಆಕೆಯ ಹಣೆಗೆ ಚುಂಬಿಸಿದ. "ಐಯಾಮ್ ವೆರಿ ಹ್ಯಾಪಿ, ಎಷ್ಟೋ ವರ್ಷಗಳಿಂದ ಕಳ್ದುಕೊಂಡ ಒಂದು ಅಮೂಲ್ಯವಾದ್ದು ಇಂದು ಸಿಕ್ಕಿದೆ. ನಂಗ್ಯಾಕೆ ಇಷ್ಟೊಂದು ಸಣ್ಣ ವಿಷ್ಯ ತೋಚಲಿಲ್ಲ" ಸಂಭ್ರಮದಿಂದ ನುಡಿದ. ಹತ್ತು ಕೋಟಿ ಲಾಭ ಬಂದಿದ್ದರೂ ಇಷ್ಟೊಂದು ಹರ್ಷಿತನಾಗುತ್ತಿರಲಿಲ್ಲ. ವಾತಾವರಣದಲ್ಲಿಯೇ ದೊಡ್ಡ ಬದಲಾವಣೆ ಬಂದಿದೆಯೆನಿಸಿತು ಚೈತನ್ಯನಿಗೆ. ಇಷ್ಟೇ ಕಳೆಯಾಗಿ, ಇದಕ್ಕಿಂತ ಹೆಚ್ಚು ಕಳೆಯಾಗಿ ದೀಪಾಂಕುರದಲ್ಲಿಯೆಲ್ಲ ಓಡಾಡುತ್ತಿದ್ದ ಅಮ್ಮನನ್ನು ನೆನಪು ಮಾಡಿಕೊಂಡಾಗ ಅವನೆದೆ ಭಾರವಾಯಿತು.

ಆಕೆಯ ನಿರ್ಜೀವ ಕೈಯನ್ನು ತೆಗೆದುಕೊಂಡು ಕೆನ್ನೆಗೊತ್ತಿಕೊಂಡ. ತಾಯಿ, ಮಗುವಿನ ಸಂಬಂಧ ಜಗತ್ತಿನ ಎಲ್ಲಾ ಸಂಬಂಧಗಳಿಗಿಂತ ಅನನ್ಯವಾದ್ದುದು. ದೈವ ತನ್ನ ಚಮತ್ಕಾರ ತೋರಿದ್ದೇ ಅಲ್ಲಿ.

"ಅಮ್ಮ ಹೇಗೆ ಅನ್ನಿಸುತ್ತೆ?" ಎನ್ನುತ್ತ ಅಂದಿನ ಚೆಕ್‌ಅಪ್‌ನ ಚಾರ್ಟ್ ತೆಗೆದುಕೊಂಡ. "ಬಿ.ಪಿ. ನಾರ್ಮಲ್ಲಾಗಿದೆ. ಟೆಂಪರೇಚರ್ ಕೂಡ ನಾರ್ಮಲ್. ನೆನ್ನೆಗಿಂತ ಒಂದು ಔನ್ಸ್ ಹೆಚ್ಚಾಗಿ ಫುಡ್ ತಗೊಂಡಿದ್ದಾರೆ" ಒಳಗೆ ಬಂದ ಸಿಸ್ಟರ್ ಹೇಳಿದಳು, ಬರೀ 'ಹ್ಞೂ' ಗುಟ್ಟಿದ.

"ಅಮ್ಮ ಮೇಲೆ ನನ್ನ ರೂಮಿಗೆ ಹೋಗೋಣ" ಎಂದವನೇ ಆಕೆಯ ಪ್ರತಿಕ್ರಿಯೆಗೂ ಕಾಯದೇ ಎರಡು ಕೈಗಳಲ್ಲೂ ಎತ್ತಿಕೊಂಡು ಮೇಲಿನ

ತನ್ನ ಬೆಡ್‌ರೂಂಗೆ ಒಯ್ದು ಮಂಚದ ಮೇಲೆ ಮಲಗಿಸುವ ವೇಳೆಗೆ ಬಂದ ಸಿಸ್ಟರ್ ಪಂಢರಿ ದಿಂಬನ್ನು ಸರಿ ಮಾಡಿದರು.

ಸುಬ್ಬಲಕ್ಷ್ಮಿಗೆ ಮಗನ ತಲೆಯ ಮೇಲೆ ಪ್ರೀತಿಯಿಂದ ಮೊಟಕ ಬೇಕೆನಿಸಿತು. ಆದರೆ ಸಾಧ್ಯವಿಲ್ಲವೆಂದುಕೊಂಡಾಗ ಆಕೆಯ ಕಣ್ಣಂಚು ಒದ್ದೆ ಆಯಿತು.

"ನಂಗಂತು ತುಂಬ ಸಂತೋಷವಾಗಿದೆ. ದಿನವು ನಿನ್ನ ಹಣೆಯಲ್ಲಿ ಬೊಟ್ಟು ಇರ್ಬೇಕು" ಹೇಳಿದ.

ಮಗ ಇಂದು ಸಂತೋಷಚಿತ್ತನಾಗಿದ್ದಾನೆಂದು ಗಮನಿಸಿ ಎಷ್ಟೋ ಸಲದ ಪ್ರಯತ್ನವನ್ನು ಇಂದು ಕೂಡ ಮಾಡಲು ನಿರ್ಧರಿಸಿದರು. "ಚೈತನ್ಯ, ಒಂದ್ಮಾತು ಹೇಳ್ಲಾ?" ತಾಯಿಯ ಕೇಳಿಕೆಗೆ ನಕ್ಕುಬಿಟ್ಟ "ಒಂದೇನು ನೂರು ಕೇಳಬಹುದು ಮದುವೆಯ ವಿಷ್ಯ ಒಂದನ್ನು ಬಿಟ್ಟು. ನನ್ನ ಕ್ರಾಪ್‌ನಲ್ಲಿ ಒಂದೊಂದು ನರೆಕೂದಲು ಕಾಣಿಸ್ತಾ ಇದೆ. ಅದು ವಯಸ್ಸು ಮೀರಿದೆಯೆಂದು ಮಾತ್ರ ತೋರಿಸೋದಿಕ್ಕಲ್ಲ, ಇನ್ನಷ್ಟು ಬೌದ್ಧಿಕವಾಗಿ ಬೆಳೆಯಬೇಕೆಂಬ ಸೂಚನೆ."

ಮಗನ ಮಾತುಗಳಿಂದ ಆಕೆಯ ಉತ್ಸಾಹವೇನು ತಗ್ಗಲಿಲ್ಲ. "ಏನೇನೋ, ಮಾತುಗಳು ಬೇಡ. ಈಗ್ಲೂ ಎಷ್ಟೋ ಸಂಬಂಧಗಳು ಮನೆ ಬಾಗಿಲವರೆಗೂ ಬರ್ತಾ ಇವೆ. ಒಂದ್ಸಲ ಮನಸ್ಸು ಮಾಡು, ಸದಾ ಬಿಕೋ ಅನ್ನೋ ಬಂಗ್ಲೆಗೆ ನಗುವಿನ ಅಗತ್ಯವಿದೆ."

ನಿಧಾನವಾಗಿ ಆಲಿಸಿದವನು ದೀರ್ಘವಾಗಿ ನಿಟ್ಟುಸಿರು ಚೆಲ್ಲಿದ. "ನಿಂಗೋಸ್ಕರನಾದ್ರೂ ಒಂದು ಹೆಣ್ಣನ್ನು ಮನೆಗೆ ತರಬೇಕೆಂದು ಎಷ್ಟೋ ಸಲ ಯೋಚ್ಸಿದ್ದೀನಿ. ಬಹುಶಃ ಈ ಜನ್ಮದಲ್ಲಿ ಅದು ಸಾಧ್ಯವಿಲ್ಲ, ಅದು ನನ್ನ ಮಟ್ಟಿಗೆ ಅಪರಾಧ. ಯಾವ ಹೆಣ್ಣನ್ನು ಪ್ರೀತಿಸಲಾರೆ. ವೃಥಾ ಪ್ರಯತ್ನ ಮಾಡಿದರೇ ಇಲ್ಲಿ ಪ್ರೀತಿ ನಟನೆ ಆಗುತ್ತೆ. ಅದು ನನ್ನಿಂದ ಸಾಧ್ಯವಿಲ್ಲ, ಕೂಡ. ಆ ವಿಷ್ಯನ ಪೂರ್ತಿಯಾಗಿ ನಿನ್ನ ಮನಸ್ಸಿನಿಂದ ತೆಗ್ದುಹಾಕ್ಬಿಡು. ಅದು ಮುಖ್ಯ ಕೂಡ ಅಲ್ಲ" ಕೂತಿದ್ದವನು ಎದ್ದು ಹೋಗಿ ಎ.ಸಿ. ಆಫ್ ಮಾಡಿ ಬಂದ.

"ಪ್ಲೀಸ್ ಚೈತನ್ಯ, ನನ್ಮಾತು ಕೇಳು" ನಿವೇದನೆ ಎನ್ನುವಂತೆ ನುಡಿದರು. ಹಿಂದಕ್ಕೆ ಬಂದು ತಾಯಿಯ ಕೈ ಹಿಡಿದುಕೊಂಡು "ಹೆಣ್ಣಿನ ಬಗ್ಗೆ ನಂಗೆ ಗೌರವ. ಯಾವ್ದೇ ಹೆಣ್ಣಿಗೆ ನನ್ನಿಂದ ಅನ್ಯಾಯವಾಗ್ಬಾರ್ದು. ಇದಕ್ಕೆ ನಿನ್ನ

ವಿರೋಧವಿದ್ಯಾ? ಖಂಡಿತ ಇರೋಲ್ಲ. ನಿನ್ಮಗನಿಗೆ ಖಂಡಿತ ಬೋರ್ ಇಲ್ಲ. ಕೈ ತುಂಬ ಕೆಲ್ಸವಿದೆ. ತಲೆ ತುಂಬ ಯೋಜನೆಗಳು ಇವೆ. ಅದ್ನ ಕಾರ್ಯಗತ ಮಾಡಬೇಕೆನ್ನೋ ಛಲವಿದೆ. ಅದು ಬರೀ ಸ್ವಾರ್ಥಕ್ಕಾಗಿ ಅಲ್ಲ, ನಾನು ಹುಟ್ಟಿ ಬೆಳೆದ ಸಮಾಜಕ್ಕೆ, ಅದರಲ್ಲಿರುವ ಜನಕ್ಕೆ ಒಂದಿಷ್ಟು ಪ್ರಯೋಜನವಾಗ್ಬೇಕು" ದೀರ್ಘವಾಗಿ ತಾಯಿಯ ಕಣ್ಣೊಳಗೆ ನೋಡುತ್ತ ನುಡಿದ.

ಸುಬ್ಬಲಕ್ಷ್ಮಿ ಸ್ವರ ಉಡುಗಿತು. ಮಗನ ಬಗ್ಗೆ ಹೆಮ್ಮೆಯೆನಿಸಿತು. ಬಾಯಿ ಬಿಟ್ಟು ಹೇಳಲಾರದ ಸ್ಥಿತಿ ತಲುಪಿದರು. ಒಬ್ಬ ಮಹಾ ಕವಿಯ ಮಾತುಗಳನ್ನು ನೆನಪು ಮಾಡಿಕೊಂಡರು.

*``I slept and dreamed that life was beauty*

*I woke, and found that life was duty"*

ನಿದ್ರಿಸುತ್ತಿದ್ದಾಗ ಕನವರಿಸುತ್ತಿದ್ದೆ; ಜೀವನವು ಸೌಂದರ್ಯವೆಂದು.

ಎಚ್ಚರಿಕೆಯಾಗಿ ನಾ ಕಂಡೆ; ಜೀವನವು ಕರ್ತವ್ಯವೆಂದು.

ಹೆಮ್ಮೆಯಿಂದ ಮಗನ ಕಡೆ ನೋಡಿದರು. ಅವನ ತಲೆ, ಕೆನ್ನೆ ಸವರಿ ತನ್ನ ಮಮತೆಯನ್ನು ವ್ಯಕ್ತಪಡಿಸಬೇಕೆಂದುಕೊಂಡು ನಿರ್ಜೀವವಾಗಿ ಮಲಗಿದ್ದ ಕೈಗಳ ಕಡೆ ನೋಡಿದರು. ಒಂದೇ ಒಂದು ಸಲ ಕೈಯೆತ್ತಿ ಮಗನ ಮೈದಡವುವಂತಿದ್ದರೇ - ಅದು ಬರೀ 'ರೆ' ಪ್ರಪಂಚದ ಆಸೆಯೇನೋ ಅಂದುಕೊಂಡರು. ಮಗನನ್ನು ಸಂಧಿಗ್ದದಲ್ಲಿ ಸಿಕ್ಕಿಸದೇ ತಾವೇ ರಾಜಿಯಾದರು. ಎಷ್ಟೋ ಮಾತಾಡಿದರು ಉತ್ಸಾಹದಿಂದ.

ಬಂದ ಕಣ್ಮಣಿಗೆ ಸಿಸ್ಟರ್ ಒಂದು ವಿಷಯ ಮುಟ್ಟಿಸಿ ಅವಳ ಆತಂಕ ದೂರ ಮಾಡಿದರು. "ಮೇಡಮ್‌ನೋರ ಹಣೆಯಲ್ಲಿದ್ದ ಬೊಟ್ಟು ನೋಡಿ ಬಾಸ್ ತುಂಬ ಖುಷಿಯಾದರು. ನಿಂಗೆ ಇನ್‌ಕ್ರಿಮೆಂಟ್ ಸಿಕ್ಕರೂ ಹೆಚ್ಚಲ್ಲ. ರಿಯಲೀ ಮೇಡಮ್ ತುಂಬ ಬ್ಯೂಟಿಯಾಗಿ ಕಾಣ್ತಾರೆ" ಅವಳದೊಂದು ಮೆಚ್ಚಿಗೆಯ ಮಾತು ಕೊನೆಯಲ್ಲಿ.

"ಥ್ಯಾಂಕ್ಯೂ ಗಾಡ್" ಎಂದು ಎದೆಯ ಮೇಲೆ ಕೈ ಇಟ್ಟುಕೊಂಡಳು. ಅವಳಿಗೆ ಭಯವಿತ್ತು. ಚೇತನಹೀನವಾಗಿ ಕಾಣುವ ಸುಬ್ಬಲಕ್ಷ್ಮಿಯವರ ಹಣೆಯ ಮೇಲಿನ ಬೊಟ್ಟಿನಿಂದ ಒಂದು ವಿಶಿಷ್ಟವಾದ ಕಳೆ ತುಂಬಿಕೊಂಡಿದ್ದರು. "ಅಮ್ಮ ನಂಗೆ ಯಜಮಾನರದೇ ಭಯ" ಎಂದು ಪಿಸುಗುಟ್ಟಿದಾಗ "ಹುಬ್ಬು ಗಂಟಿಕ್ಕಿ ಕಠಿಣವಾಗಿ ಮಾತಾಡಿದರೂ ಅವನಿಗೆ

ಒಳ್ಳೆಯ ಹೃದಯವಿದೆ" ಎಂದಿದ್ದರು.

"ಮೇಡಮ್ ನಿನ್ನ ಹಚ್ಚಿಕೊಂಡಿದ್ದಾರೆ" ಸಿಸ್ಟರ್ ಇನ್ನೊಂದು ಮಾತು ಸೇರಿಸಿದಾಗ ಕಣ್ಮಣಿಗೆ ಅಳುಕು. ಸಿಸ್ಟರ್ ಒಂದೆರಡು ಸಲ ಮೂದಲಿಸಿದ್ದಳು. "ನೀನೇನು ತರಬೇತಿ ಪಡೆದ ನರ್ಸು ಅಲ್ಲ. ನಂಗೆ ಹೆಲ್ಪ್ ಮಾಡು. ನೀನೇ ಏನು ಮಾಡೋಕೆ ಹೋಗ್ಬೇಡ" ಅದನ್ನು ಮರೆತಿರಲಿಲ್ಲ "ಸ್ವಲ್ಪ ಹಾಡ್ತೀನಲ್ಲ... ಅದಕ್ಕೇ ಇರ್ಬಹುದು" ಸಣ್ಣದನಿಯಲ್ಲಿ ಹೇಳಲೋ ಬೇಡವೋ ಎಂದು ಉಸುರಿದಳು.

"ಯು ಆರ್ ಕರೆಕ್ಟ್, ನಂಗೂ ಹಾಗೇ ಅನ್ನಿಸ್ತು. ಮೂರ್ಹೊತ್ತು ಸ್ಟೀರಿಯೋ, ರೇಡಿಯೋ ಕೇಳೋಕ್ಕಿಂತ... ಪ್ರತ್ಯಕ್ಷವಾಗಿ ಹಾಡೋರ್ನ ಎದುರಿಗೆ ಕೂಡ್ಸಿಕೊಂಡು ಕೇಳೋದು ಅವರು ಇರೋ ಸ್ಥಿತಿಯಲ್ಲಿ ಬಹಳ ಒಳ್ಳೇದು" ನಗುವಿನಲ್ಲಿ ಹೇಳಿದರು. ಆದರೂ ಕೊಂಚ ಅಸೂಯೆ.

ತಾನು ಇದ್ದ ಸ್ಥಿತಿ, ಬಹು ಮಾತಿನ ಸಿಸ್ಟರ್, ಚೈತನ್ಯರ ಬಗ್ಗೆ ತನಗೇ ಇರುವ ಸೆಳೆತ ಮೂರನ್ನು ಮನಸ್ಸಿನಲ್ಲಿಟ್ಟುಕೊಂಡು ಬಹಳ ಎಚ್ಚರದಿಂದಿರುವುದರ ಜೊತೆಗೆ ಆಗಾಗ ಮೌನವನ್ನು ಆಶ್ರಯಿಸುತ್ತಿದ್ದಳು.

ಅಂದು ರಾತ್ರಿ ಡಿನ್ನರ್‌ನ ನಂತರ ಪಂಢರಿ ಬಂದು "ಯಜಮಾನ್ರು ಆಫೀಸ್ ರೂಮಿನಲ್ಲಿದ್ದಾರೆ, ನಿಮ್ಮನ್ನ ಕರೀತಾರೆ" ಎಂದವನು ಇಂಟರ್‌ಕಾಮ್‌ನಲ್ಲಿ ಸಂಪರ್ಕಿಸಿದವನು "ಈಗ್ಬೇಡ, ಬೆಳಿಗ್ಗೆ ನೋಡೂಂದ್ರು" ಹೇಳಿ ಹೋದಾಗ ಅವಳಿಗೆ ಎಚ್ಚರ ತಪ್ಪಿದಂತಾಯಿತು. ಏನಾದರೂ ಹೆಚ್ಚು, ಕಡಿಮೆ ಸುಬ್ಬಲಕ್ಷ್ಮಿಯವರ ರೂಮಿಗೆ ಬಂದಳು. ಕಿತ್ತಲೆ ಬಣ್ಣ ಮಂಕಾದ ದೀಪದ ಬೆಳಕು ತಣ್ಣನೆಯ ಆಹ್ಲಾದವನ್ನು ನೀಡಿದರೇ, ಸ್ಟೀರಿಯೋಯಿಂದ ಮೆಲ್ಲನೆ ಹರಡುತ್ತಿದ್ದ ಲಾಲ್‌ಗುಡಿ ಜಯರಾಮನ್ ಅವರ ಪಿಟೀಲಿನ ತರಂಗಗಳು ಅದ್ಭುತ ವಾತಾವರಣ ಸೃಷ್ಟಿಸಿತ್ತು.

"ಕಣ್ಮಣಿ, ನಿದ್ದೆ ಬರ್ಲಿಲ್ವಾ?" ಸುಬ್ಬಲಕ್ಷ್ಮಿ ಪ್ರಶ್ನಿಸಿದಾಗ ಬೆಚ್ಚಿ ಬಿದ್ದಳು. ದಿನವು ಸಿಸ್ಟರ್ ಆಕೆ ಮಲಗಲೆಂದೇ ನಿದ್ದೆಯ ಮಾತ್ರೆ ಕೊಡುತ್ತಿದ್ದಳು. ಅವು ಕೂಡ ಕೆಲವೊಮ್ಮೆ ಕೆಲಸ ಮಾಡದು.

"ಸುಮ್ನೆ ನೋಡಿಕೊಂಡು ಹೋಗೋಣಾಂತ್ಬಂದೆ" ಎಂದಳು.

ಸಿಸ್ಟರ್ ಅಲಾರಂ ಇಟ್ಟುಕೊಂಡು ಕಡ್ಡಾಯವಾಗಿ ಬಂದು ಮೂರು ಸಲ ಸುಬ್ಬಲಕ್ಷ್ಮಿಯವರನ್ನು ನೋಡಿ ಹೋಗಬೇಕಿತ್ತು. ಮಧ್ಯೆ ಒಮ್ಮೆ ಚೈತನ್ಯ ಬರುತ್ತಿದ್ದ. ತಾಯಿ ಎಚ್ಚರವಾಗಿದ್ದರೇ ಸ್ವಲ್ಪ ಕೂಡುತ್ತಿದ್ದ. ಇಂಥ ಕಾನೂನಿನ

ಮಿತಿಗೆ ಅವಳನ್ನು ಒಳಪಡಿಸಿಲ್ಲವಾದರೂ, ಅವಳ ಅಗತ್ಯವಿತ್ತು.

"ಬಾಯಾರಿಕೆಯೆನಿಸಿದೆ, ಒಂದಿಷ್ಟು ನೀರು ಕುಡ್ಸು" ಹೇಳಿದರು. ಆ ವೇಳೆಗೆ ಚೈತನ್ಯ ಕೂಡ ಬಂದ. "ನಾನು ಕುಡುಸ್ತೀನಿ" ತಾಯಿಯ ಕೆಲಸವೆಂದರೆ ಅವನಿಗೆ ಅತಿಯಾದ ಮುತುವರ್ಜಿ.

ನೀರಿನ ಗ್ಲಾಸ್‌ನ ಅವನ ಕೈಗೆ ಕೊಟ್ಟು ನಿಂತಳು.

"ನೀನ್ಹೋಗಿ ಮಲಕ್ಕೋ, ಕಣ್ಮಣಿ. ನೀನು ತುಂಬ ಚೆನ್ನಾಗಿ ಹಾಡ್ತೀ ಅಂತ ಅಮ್ಮ ಹೇಳಿದ್ಲು. ಇನ್ನಷ್ಟು ಕಲೀ, ಅಭ್ಯಾಸ ಮಾಡು. ಅದ್ಕೇ ಅಗತ್ಯವಾದ ಸಹಾಯ ಸಿಗುತ್ತೆ" ಹೇಳಿದ ಗಂಭೀರವಾಗಿ. ಸದ್ದಿಲ್ಲದೆ ಹೊರಗೆ ಬಂದಿದ್ದು.

ನೀರು ಕುಡಿದ ಸುಬ್ಬಲಕ್ಷ್ಮಿ "ನಂಗೆ ಇದೆಲ್ಲ ಇಷ್ಟವಾಗೋಲ್ಲ ಚೈತನ್ಯ. ನನ್ನ ನೋಡಿಕೊಳ್ಳೋಕೊಸ್ಕರ ಇಬ್ಬರನ್ನು ನೇಮಿಸಿದ್ದಿ. ಮತ್ತೆ ರಾತ್ರಿಯೆಲ್ಲ ತಲೆಕೆಡ್ಸಿಕೊಂಡು ಯಾಕೆ ಎದ್ದು ಬರ್ತೀ. ಮೂರ್ಹೊತ್ತು ದಣಿಯೋ ದೇಹಕ್ಕೆ ವಿಶ್ರಾಂತಿ ಬೇಡ್ವಾ!" ಮೃದುವಾಗಿ ಗದರಿಸಿದರು.

"ನಿಮ್ಮುಂದೆ ಕೂತಾಗ ನನ್ನ ಆಯಾಸವೆಲ್ಲ ಪರಿಹಾರವಾಗುತ್ತೆ. ಮಾಡೋ ಕೆಲ್ಸದ ಬಗ್ಗೆ ಪ್ರೀತಿ ಇರೋವಾಗ ದಣಿವಾಗೋಲ್ಲ. ಮಾತ್ರೆ ಕೊಡ್ಲಿಲ್ವಾ? ಡೋಸೇಜ್ ಏನಾದ್ರೂ ಹೆಚ್ಚು ಕಡ್ಮೇ ಆಯ್ತು?" ಚಾರ್ಟ್ ತೆಗೆದು ನೋಡುವುದರ ಜೊತೆಗೆ ಮಾತ್ರೆಗಳನ್ನು ತೆಗೆದು ಒಮ್ಮೆ ಪರೀಕ್ಷಿಸಿದ. ಇದು ಅವನ ಪದ್ಧತಿ.

ಆಮೇಲೆ ಸುಬ್ಬಲಕ್ಷ್ಮಿಯೇ ನಿದ್ದೆ ಬರುವಂತೆ ನಟಿಸಿದಾಗ, ತನ್ನ ಬೆಡ್ ರೂಮಿಗೆ ಹೋಗಿ ಮಲಗಿದ. ಚೈತನ್ಯ ಗ್ರೂಪ್ಸ್ ಆಫ್ ಕಂಪನೀಸ್ ವ್ಯವಹಾರ ಕೋಟಿಗಳು ದಾಟಿ ಹೋಗಿತ್ತು. ಇಂಟರ್‌ನ್ಯಾಷನಲ್ ಲೆವಲ್‌ನಲ್ಲಿ ಮಾರುಕಟ್ಟೆಯ ಜೊತೆ ಹೆಸರು ಇತ್ತು.

ಬೆಳಿಗ್ಗೆ ಇವನು ಮೆಟ್ಟಿಲು ಇಳಿದು ಬರುವ ವೇಳೆಗೆ ದೇವರ ಮನೆಯಿಂದ ಒಂದು ಬೆಳ್ಳಿ ಲೋಟದಲ್ಲಿ ನೀರು ಹಿಡಿದು ಹೋಗುತ್ತಿದ್ದ ಕಣ್ಮಣಿಯನ್ನು ಕಂಡ. ಅಲ್ಪ ಸ್ವಲ್ಪ ವ್ಯತ್ಯಾಸ, ಬದಲಾವಣೆಗಳು ಕಂಡರೂ ಅವನ ಬಳಿಗೆ ನೇರವಾಗಿ ದೂರು ಒಯ್ಯುವ ಪಂಢರಿ ಒಂದೇ ಒಂದು ಮಾತನ್ನು ಹೇಳದಿದ್ದಿದ್ದು ಆಶ್ಚರ್ಯ.

ಇಂದು ಮಗ ರೂಮಿಗೆ ಬಂದಾಗ ಸುಬ್ಬಲಕ್ಷ್ಮಿ ಒಂದು ಬೇಡಿಕೆಯನ್ನು ಅವನ ಮುಂದಿಟ್ಟರು. "ಪ್ಲೀಸ್, ಒಂದು ಸಣ್ಣ ಹೆಲ್ಪ್ ಮಾಡು. ಹಾಕ್ತು,

ಸಿಸ್ಟರ್, ಚೆಕ್‌ಅಪ್, ಚಾರ್ಟ್, ಮಾತ್ರೆ ಇವೆಲ್ಲವನ್ನು ಕೆಲವು ದಿನ ನನ್ನಿಂದ ದೂರ ಇಡು. ನಾನು ರೋಗಿ ಅನ್ನೋ ಗಿಲ್ಟಿ ನನ್ನಲ್ಲಿಯೇ ಇದೆ. ಅದ್ರಿಂದ ಮೊದ್ಲು ವಿಮುಕ್ತಳಾಗ್ಬೇಕು. ಮಾನಸಿಕವಾಗಿ ಚೇತರ್ಸಿಕೊಳ್ದೇ ದೈಹಿಕವಾಗಿ ಹೇಗೆ ಚೇತರಿಸಿಕೊಳ್ಳಬಲ್ಲೆ" ಸವಾಲ್ ಹಾಕಿದರು.

"ಸ್ವಲ್ಪ ದಿನ ಡಾಕ್ಟ್ರು, ಸಿಸ್ಟರ್, ಟ್ರೀಟ್‌ಮೆಂಟ್ ಎಲ್ಲಾ ಅನಿವಾರ್ಯ" ಮೆಲ್ಲಗೆ ನುಡಿದ. ಅದಕ್ಕೆ ಅವನ ಸಮ್ಮತಿ ಇಲ್ಲ. "ಅರ್ಜೆಂಟ್ ಮೀಟಿಂಗ್ ಇದೆ. ಸಂಜೆ ಬಂದಾಗ ಮಾತಾಡ್ಬಹುದ್ದು" ಹೊರ ನಡೆದ.

ರಾತ್ರಿಯೇ ಪಂಢರಿ ಹೇಳಿದ್ದರಿಂದ ಕಣ್ಮಣಿ ಚೈತನ್ಯನನ್ನು ಭೇಟಿ ಮಾಡಲೇ ಬೇಕಿತ್ತು. ಹೊರಡುವ ಮುನ್ನ ಹತ್ತು ನಿಮಿಷವಾದರೂ ಮನೆಯಲ್ಲಿನ ಆಫೀಸ್ ರೂಮಿಗೆ ಹೋಗಿಯೇ ಹೋಗುತ್ತಿದ್ದ.

"ಮೆ ಐ ಕಮಿನ್, ಸರ್" ಎಂದಳು.

"ಯೆಸ್, ಕಮಿನ್... " ಎಂದ ಸೆಲ್ಯೂಲರ್ ಫೋನ್ ಹಿಡಿದೇ "ಜಸ್ಟ್ ವೆಯಿಟ್... " ಎಂದವನು ಮಾತಾಡತೊಡಗಿ ನಂತರ ಇಟ್ಟು ನೇರವಾಗಿ ಅವಳನ್ನು ನೋಡಿದ ಮೊದಲ ಸಲ ಎನ್ನುವಂತೆ. ಮುದ್ದಾದ ಹುಡುಗಿಯೇ. ಕಣ್ಣುಗಳಲ್ಲಿ ಭಯದ ಗಲಿಬಿಲಿ. ಅವನ ತುಟಿಯಂಚಿನಲ್ಲಿ ಅಪರೂಪದ ನಗು ಅರಳಿತು. "ಥ್ಯಾಂಕ್ಯೂ, ಥ್ಯಾಂಕ್ಯೂ ಫಾರ್ ದ ಲಾಟ್. ಅಮ್ಮನ ಹಣೆಯ ಬೊಟ್ಟು ನೋಡಿ ಸಂತೋಷವಾಯಿತು, ಐಯಾಮ್ ಎವರ್ ಗ್ರೇಟ್‌ಫುಲ್ ಟು ಯು" ನಿಸ್ಸಂಕೋಚದಿಂದ ಕೃತಜ್ಞತೆ ಅರ್ಪಿಸಿದ. ಅವನ ಮಟ್ಟಿಗೆ ಅದೊಂದು ದೊಡ್ಡ ಸಹಾಯವೇ.

ಕಣ್ಮಣಿ ಮಾತನಾಡಲಿಲ್ಲ. ಕೈಕಾಲುಗಳಲ್ಲಿ ಒಂದು ರೀತಿಯ ಕಂಪನ "ನಿಂಗೇನಾದ್ರೂ ಅಗತ್ಯ ಸಹಾಯ ಬೇಕಿದ್ದರೇ ನನ್ನ ಕೇಳ್ಬಹುದ್ದು" ಎಂದ ನಂತರ ಹೊರಗೆ ಬಂದಳು.

ರೂಮಿಗೆ ಹೋದವಳೇ ಒಂದು ಕಡೆಕೂತು ಬಿಟ್ಟಳು. ಈ ಚೈತನ್ಯ ಯಾರು? ಚೈತನ್ಯ ಗ್ರೂಪ್ ಆಫ್ ಕಂಪನೀಸ್‌ನ ಮ್ಯಾನೇಜಿಂಗ್ ಡೈರೆಕ್ಟರ್, ಸುಬ್ಬಲಕ್ಷ್ಮಿಯವರ ಮಗ, ಈಗ ತನಗೇ ಸಂಬಳ ಕೊಡುತ್ತಿದ್ದ ಧಣಿ 'ಇಷ್ಟೆ ಅಲ್ಲ, ಇಷ್ಟೆ ಅಲ್ಲ ಚೈತನ್ಯ ನಿನ್ನವನು' ಮನಸ್ಸು ಕೂಗಿ ಹೇಳಿದಾಗ ಬೆದರಿ ಅತ್ತಿತ್ತ ನೋಡಿದಳು. ಈ ಮಾತನ್ನು ಯಾರಾದರೂ ಕೇಳಿಸಿಕೊಂಡರಾ ಅಂತ.

"ಅಮ್ಮ.. ಕರೀತಾರೆ" ಪಂಢರಿ ಬಂದ.

ಗಾಬರಿಯಾದವಳಂತೆ ಮೇಲೆದ್ದಾಗ ಅವನಿಗೆ ಆಶ್ಚರ್ಯ "ಯಜಮಾನ್ರು ಏನಾದ್ರೂ... ಅಂದರಾ? ವಿತ್ ಔಟ್ ಮೈ ನಾಲೆಡ್ಜ್ ಅವರೇನು ಅನ್ನೋಕೆ ಸಾಧ್ಯವಿಲ್ಲ. ನನ್ನ ರಿಪೋರ್ಟ್ ನೋಡಿಕೊಂಡೇ ಅವರು ಆಕ್ಷನ್ ತಗೋಳೋದು. ಏನು ಸಮಾಚಾರ?" ಕೇಳಿದ ನೇರವಾಗಿಯೇ.

"ಪಂಢರಿನ ಒಬ್ಬ ನೌಕರ ಎಂದು ನಾವೆಂದೂ ಅಂದುಕೊಂಡಿಲ್ಲ. ಈ ಬಂಗ್ಲೆಯಲ್ಲಿ ಅವ್ನು ಇಲ್ದೇ ಹೋಗಿದ್ರೆ... ಏನಾಗಿಹೋಗ್ತಾ ಇತ್ತೋ ಏನೋ, ಮಾತು ಜಾಸ್ತಿಯಾದ್ರೂ ಅವ್ನ ಸ್ವಾಮಿಭಕ್ತಿ ಅಸಾಧಾರಣವಾದುದ್ದು" ಇದನ್ನು ಸುಬ್ಬಲಕ್ಷ್ಮಿಯವರೇ ಹೇಳಿದ್ದರು.

ಈ ಬಂಗ್ಲೆಯಲ್ಲಿ ಯಾರಾದರೂ ಉಳಿದುಕೊಳ್ಳಬೇಕಾದರೇ, ಅವರು ಪಂಢರಿಗೆ ಮೆಚ್ಚುಗೆ ಆಗಬೇಕು. ಅವರ ಅರ್ಹತೆ, ಪ್ರಾಮಾಣಿಕತೆಯ ಬಗ್ಗೆ ಯಜಮಾನರಿಗೆ ಸರ್ಟಿಫಿಕೇಟ್ ಕೊಡುವವನು ಅವನೇ. ಅವನೊಂದಿಗೆ ಮನ ಬಿಚ್ಚಿ ಮಾತಾಡಬಹುದಿತ್ತು.

"ಅಮ್ಮನ ಹಣೆಗೆ ಬೊಟ್ಟು ಇಟ್ಟಿದ್ದು ಇಷ್ಟವಾಯ್ತು, ಯಜಮಾನರಿಗೆ" ತಿಳಿಸಿದಳು. ಸೊಂಟಕ್ಕೆ ಸುತ್ತಿದ ಟವಲನ್ನು ಬಿಚ್ಚಿ ಹೆಗಲ ಮೇಲೆ ಹಾಕಿಕೊಂಡ "ನಂಗೇ ಗೊತ್ತಿತ್ತು, ಬಿಡಿ. ಇಂಥ ಒತ್ತಾಯ ಮಾಡಬೇಕಾದರೇ ಹೆಣ್ಣೇ ಬೇಕಾಗಿತ್ತು. ನಮ್ಮಂಥವರ ತಲೆಗೆ ಇದೆಲ್ಲ ತೋಚೋಲ್ಲ. ಒಳ್ಳೇ ಕೆಲ್ಸ ಮಾಡಿದ್ರಿ, ಅಮ್ಮ ಎಷ್ಟೋಂದು ಲಕ್ಷಣವಾಗಿ ಕಾಣ್ತಾರೆ" ಕಣ್ಣೊರೆಸಿಕೊಂಡ.

"ಕಣ್ಮಣಿ..." ಸಿಸ್ಟರ್ ಕೂಗಿಕೊಂಡು ಬಂದವಳು "ಪಂಢರಿ ಬಿ ಕ್ವಿಕ್, ಇವತ್ತು ಎಲ್ಲಾ ಕೆಲ್ಸಗಳು ಲೇಟು. ಇಷ್ಟೊಂದು ಸೋಮಾರಿತನ ಯಾಕೆ, ಕಣ್ಮಣಿ! ಬೇಗ್ಬಾ..." ಹೇಳಿ ಹೋದಳು.

"ನೀನ್ಬಂದ್ಮೇಲೆ ಈಯಮ್ಮನ ಕೆಲ್ಸ ಆರಾಮಾಗಿಹೋಯ್ತು ಬರೀ ಅಧಿಕಾರ ಚಲಾಯಿಸೋದೇ" ಗೊಣಗಿಕೊಂಡು ಹೊರಹೋದ.

ಸ್ನಾನಕ್ಕೆ ಮೊದಲು ಒಂದಿಷ್ಟು ವ್ಯಾಯಾಮ, ಆ ಕೈಕಾಲುಗಳನ್ನು ನಿಧಾನವಾಗಿ ಎತ್ತಿ ಇಳಿಸುವುದು. ಒಂದಿಷ್ಟು ಮಡಿಚುವ ಎಕ್ಸರ್‌ಸೈಜ್, ತೈಲ ಲೇಪಿಸಿ ನಿಧಾನವಾಗಿ ಹಂತ ಹಂತ ಮಸಾಜು ಮಾಡಿಸುವ ಕೆಲಸ ಸಿಸ್ಟರ್‌ನ ಮುಖ್ಯ ಕೆಲಸಗಳಲ್ಲಿ ಒಂದು ಅದನ್ನು ಈಗ ಮಾಡಿಸುತ್ತಿದ್ದುದು ಕಣ್ಮಣಿ. ಕೆಲವೊಮ್ಮೆ ಚೈತನ್ಯ ಬಂದು ಮೃದುವಾದ ಮಾತುಗಳಿಂದ ತಾಯಿಯನ್ನು ಮಾತಾಡಿಸುತ್ತ ಹಿತವಾಗಿ ಮಸಾಜು ಮಾಡಿಸುತ್ತಿದ್ದ.

"ಇದೆಲ್ಲ ಯಾಕೋ?" ಎಷ್ಟೆ ಸಲ ಕಣ್ಣೀರಿಟ್ಟಿದ್ದರು ಆಕೆ. "ಏನಮ್ಮ ಹಾಗಂದರೇ, ಅರ್ಥ? ಕೆಲವು ವಾಸಿಯಾಗಲು ಸಾಕಷ್ಟು ಸಮಯ ಬೇಕಾಗುತ್ತೆ" ತಾಯಿಯನ್ನು ಸುಮ್ಮನಾಗಿಸುತ್ತಿದ್ದ.

ಸಾಲಿಗ್ರಾಮ ತೊಳೆದ ನೀರನ್ನು ತೈಲಕ್ಕೆ ಸೇರಿಸುತ್ತಿದ್ದಳು. ಕಣ್ಮಣಿ ಎರಡು ದಿನದಿಂದ 'ವಿಷ್ಣು ಸಾನಿಧ್ಯ ಪಡೆದಿರುವ ಸರ್ವರೋಗ ನಿವಾರಿಣಿ. ಅದರ ಸ್ಪರ್ಶದಿಂದಲೇ ಎಷ್ಟೋ ಪಾಪಗಳ ನಿವಾರಣೆ' ಗೋಪಾಲನ ತಂದೆ ಹೇಳಿದ್ದು ನೆನಪಿನಲ್ಲಿತ್ತು. ಸಾಲಿಗ್ರಾಮವನ್ನು ತೊಳೆದು ತುಳಸೀದಳ ಇಟ್ಟು ಆ ನೀರನ್ನು ತಂದು ಬೆಳಿಗ್ಗೆ ಸುಬ್ಬಲಕ್ಷ್ಮಿಗೆ ಕುಡಿಸುತ್ತಿದ್ದಳು. 'ದೈವದ ಕೃಪೆಯಿಂದಲಾದರೂ ಈ ತಾಯಿಯ ಕೈಕಾಲುಗಳು ಸರಿ ಹೋಗಿ ನಡೆಯುವಂತಾಗಲಿಯೆಂಬುದೆ ಅವಳ ಪ್ರಾರ್ಥನೆ'.

* * * *

ಅಂದು ಭಾನುವಾರ ಇವಳು ಸುಬ್ಬಲಕ್ಷ್ಮಿಗೆ ಹೇಳಿ ಹೊರ ಬರುವ ವೇಳೆಗೆ ಕಾರು ಹತ್ತುತ್ತಿದ್ದ ಚೈತನ್ಯ ಇವಳತ್ತ ನೋಡಿ 'ಎಲ್ಲಿಗೆ?' ಎಂದು ಅವನ ಕಣ್ಣುಗಳೇ ಪ್ರಶ್ನಿಸಿತು.

"ಹಾಸ್ಟಲ್‌ಗೆ... " ಎಂದಳು.

ಎರಡು ನಿಮಿಷದ ನಂತರ "ಡ್ರಾಪ್ ಮಾಡ್ತೀನಿ, ಬಾ" ಎಂದ. ಅವಳೆದೆ ಢವಗುಟ್ಟಿತು. ಜೀವವನ್ನು ಅಂಗೈನಲ್ಲಿಡಿದು "ಸಾರಿ ಸರ್, ಈಗ ಬಸ್ಸು ಸಿಗುತ್ತೆ" ಎಂದಳು. ಆದರೂ ಅವಳೆದೆಯಲ್ಲಿ ನವರಾಗಗಳ ಕಾರಂಜಿ ಚಿಮ್ಮುತ್ತಿತ್ತು. ಏಳು ಬಣ್ಣ.... ಏಳು ರಾಗಗಳ ಚೆಲುವಿನ ಚಿತ್ತಾರದ ವೈಭವದ ಮಧುರನಾದ.

"ಕಮಿನ್..." ಎಂದು ಕಾರಿನೊಳಗೆ ತೂರಿದ.

ಡ್ರೈವರ್ ಮುಖದ ಭಾವದಿಂದಲೇ ಇನ್ನೊಂದು ಕಡೆಯ ಡೋರ್ ತೆರೆದಾಗ ತೂರಿ ಕೂತಳು. ಈ ಅನುಭವಕ್ಕಾಗಿಯೇ ಜನ್ಮ ಜನ್ಮಗಳಿಂದ ಕಾತರಿಸುತ್ತಿದ್ದಂತೆ ಅವಳ ಹೃದಯ ಹರ್ಷಿಸುತ್ತಿದ್ದರೇ, ಮನದಲ್ಲಿ ತಳಮಳ, ಭಯ. ಪಕ್ಕದಲ್ಲಿಯೇ ಚೈತನ್ಯ ಕೂತಿದ್ದ. ಆದರೆ ಇದು ಮೊದಲ ಅನುಭವ ಅನ್ನಿಸಲಿಲ್ಲ. ಹಿಂದೆ ತಾನು ಅವನ ಸಾವಿಧ್ಯ, ಸಾಮೀಪ್ಯದಲ್ಲಿಯೇ ಇದ್ದವಳು. ಕೆಲವು ದಿನ, ವರ್ಷಗಳು ತನ್ನಿಂದ ಅವನು ದೂರವಾಗಿದ್ದಾನಷ್ಟೆ ಇಂಥ ಹೊಯ್ದಾಟದಲ್ಲಿತ್ತು ಅವಳ ಮನ.

ನವಿರಾದ ಸೆಂಟಿನ ಪರಿಮಳ. ಚೈತನ್ಯನಂಥ ವ್ಯಕ್ತಿ ಪಕ್ಕದಲ್ಲಿ ಯಾವ

ಹೆಣ್ಣಾದರೂ ಮೈ ಮರೆಯುವುದು ಸಹಜವೇ. ಅಲೌಕಿಕವಾದ ರೋಮಾಂಚನಗೊಳ್ಳುವಂಥ ಅನುಭವ ಕಣ್ಮಣಿಗೆ.

ಕಾರು ನಿಂತ ಕೂಡಲೇ ಹೇಳಿದ "ಬೇಗ ಬಂಗ್ಲೆಗೆ ಹಿಂದಿರುಗು" ತಲೆದೂಗಿ ಕೆಳಗೆ ಇಳಿದ ಕೂಡಲೇ ಕಾರು ವೇಗದಿಂದ ಮುಂದಕ್ಕೆ ಹೋಯಿತು. ಸ್ವರ್ಗದಿಂದ ಹೊರಗೆ ಬಂದಂತೆ ನಿಶಬ್ದವಾಗಿ ನಿಂತವಳ ಭುಜದ ಮೇಲೆ ವಾಸಂತಿ ಕೈಯಿಟ್ಟಾಗಲೇ ವಾಸ್ತವಕ್ಕೆ.

"ಬೆಳಗ್ಗಿಂದ ಕಾಯ್ತ ಇದ್ದೆ. ಕಾರಿನಿಂದ ಇಳಿದ ಕೂಡಲೇ ಬೆಚ್ಚಿ ಬಿದ್ದೆ. ಒಳ್ಳೆ ಮೂಮೆಂಟ್ಸೇ. ಅದೂ ನಮ್ಮ ಹುಷಾರಿನಲ್ಲಿ ನಾವಿರಬೇಕು". ಒಂದು ಬುದ್ಧಿ ಮಾತನ್ನು ಸೇರಿಸಿದರೂ ಅದರ ಅಗತ್ಯ ಅವಳಿಗೆ ಕಾಣಲಿಲ್ಲ. "ಚೈತನ್ಯ ಒಬ್ಬ ಗ್ರೇಟ್ ವ್ಯಕ್ತಿ. ಹೆತ್ತ ತಾಯಿಯನ್ನು ಅಷ್ಟೊಂದು ಮಮತೆಯಿಂದ, ಗೌರವದಿಂದ ಕಾಣುವ ಅಂಥ ವ್ಯಕ್ತಿಯಿಂದ ಯಾವ ಹೆಣ್ಣಿಗೂ ಅನ್ಯಾಯವಾಗದು. ನಂಗೂ ಅವರು ಕಾರು ಹತ್ತು ಅಂದಾಗ ಆಶ್ಚರ್ಯ. ಬಹುಶಃ ತನ್ನನ್ನು ಬೇಗ ಹಿಂದಿರುಗುವಂತೆ ಹೇಳಿದಕ್ಕೆ ಕಾರಣವಿರುತ್ತೆ." ಎಂದಳು ಕಾರು ಹೋದ ದಿಕ್ಕನ್ನೆ ನೋಡುತ್ತ.

"ಇವತ್ತು ರೂಪಾ ಇಲ್ಲ. ಆರಾಮಾಗಿ ರೂಮಿನಲ್ಲೇ ಕೂತು ಮಾತಾಡ್ಬಹ್ದು" ಎಂದ ವಾಸಂತಿಯ ಮುಖ ದಿಟ್ಟಿಸಿದಾಗ ಕಣ್ಣುಗಳು ಆಳಕ್ಕೆ ಹೋಗಿದ್ದನ್ನು ಗಮನಿಸಿ ಖೇದಗೊಂಡಳು. "ಯಾಕೆ, ಇಷ್ಟೊಂದು ಬಡವಾಗಿದ್ದೀಯಾ? ಕರ್ಣ.. ಬಂದಿದ್ರಾ?" ವಿಚಾರಿಸಿದಳು.

"ಆ ಮನುಷ್ಯನಿಗ್ಯಾಕೆ ಬಹುವಚನ ಪ್ರಯೋಗ. ಒಂದು ಹತ್ತು ಸಲವಾದ್ರೂ ಬಂದಿದ್ದಾನೆ. ಅದಷ್ಟು ಬೇಗ ಮದ್ವೆ ಆಗಬೇಕನ್ನೋ ಮಾತುಗಳನ್ನೇ ಆಡ್ತಾನೆ. ಬೇಸರ, ನಿರುತ್ಸಾಹ, ಸಿಡುಕು ಇಂಥದೆಲ್ಲ ವ್ಯಕ್ತಪಡಿಸಿದರೂ ಕರ್ಣನಿಗೆ ತಟ್ಟಿದಂತಿಲ್ಲ."

ತಕ್ಷಣ ಕಣ್ಮಣಿ ಕೂಡ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ವಾಸಂತಿ ದ್ವಂದ್ವದಲ್ಲಿ ಇದ್ದಾಳೆನಿಸಿತು. 'ಚಪ್ಪಲಿಯಲ್ಲೊಡೆದು ಹೇಳ್ತೀನಿ' ಎಂದ ಅವಳು ಇನ್ನು ನೇರವಾಗಿ ಹೇಳಿಲ್ಲ ಯಾಕೆ?

ರೂಮಿನ ಕಡೆ ಹೊರಟ ಇಬ್ಬರನ್ನು ಕರೆದು ಅಡಿಗೆಯವನು ತಿಂಡಿ ಕೊಟ್ಟು ಮಾತಾಡಿಸಿದ "ನಿನ್ನ ಸ್ನೇಹಿತೆಯನ್ನು ನೋಡಿದ್ಯಾ, ಅಮ್ಮ! ಎಷ್ಟೊಂದು ಬಡವಾಗ್ಬಿಟ್ಟಿದ್ದಾರೆ. ಗೆಳೆತನ ಅಂದರೇ ಹಿಂಗಿರಬೇಕು" ಬರೀ ತುಟಿಯ ಮೇಲೆ ನಗುವನ್ನು ಅರಳಿಸಿದ ಅವಳಿಗೆ ಗೊತ್ತು, ಇದೊಂದೇ ಕಾರಣವಲ್ಲವೆಂದು.

ರೂಮಿನ ಚಿಲಕ ಹಾಕಿ ಕಣ್ಮಣಿಯ ಎದುರು ಕೂತಳು "ಒಂದೆರಡು ಸಲ ಫೋನ್ ಮಾಡಿದರೂ ಏನು ಮಾತಾಡಬೇಕೆಂದು ಗೊತ್ತಾಗದೇ ರಿಸೀವರ್ ಇಟ್ಟೆ, ನಂಗೇನೋ ಆಗಿದೆ, ಕಣ್ಮಣಿ" ಗಳ ಗಳ ಅತ್ತಳು.

"ಅಂಥದೇನಾಗಿಲ್ಲ! ನೀನು ಕರ್ಣನ ತುಂಬ ಪ್ರೀತಿಸ್ದೆ. ಬದ್ಕಿನ ಬಗ್ಗೆ ಕನಸು ಕಂಡೆ. ಈಗ ಷಾಕಾಗಿದೆ. ನಿನ್ನ ಪ್ರೇಮ ಯಾವುದನ್ನು ಬೇಕಾದ್ರೂ ಅರಗಿಸಿಕೊಳ್ಳುವಂಥ ಶಕ್ತಿಯುತವಾಗಿದ್ರೆ ಮದ್ವೆಯಾಗ್ಬಿಡು. ಮೊದಲು ಸ್ವಲ್ಪ ಇರುಸು ಮುರುಸಾದರೂ ಕಾಲಕ್ರಮೇಣ ಹೊಂದಿಕೊಳ್ಳುತ್ತೀಯಾ. ಒತ್ತಡವಿಲ್ಲವಲ್ಲ. ನಿಂಗೆ ಇಷ್ಟವಾಗೋ ದಾರಿನ ಆರಿಸ್ಕೋ" ತೋಚಿದ್ದನ್ನು ಸ್ಪಷ್ಟಪಡಿಸಿದಳು.

ಮತ್ತಷ್ಟು ಕಣ್ಣೀರು ಸುರಿಸಿದಳು ವಾಸಂತಿ. ಯಾವುದೇ ಪ್ರಯತ್ನ, ಪ್ರಯಾಸವಿಲ್ಲದೇ ಕೈಗೆ ಸಿಕ್ಕ ವ್ಯಕ್ತಿಯನ್ನು ಮದುವೆಯಾಗಿ ಬದುಕನ್ನು ಚಾಲೆಂಜಾಗಿ ತೆಗೆದುಕೊಳ್ಳುವುದೇ?

"ಕರ್ಣನ ಮದ್ವೆಯಾಗಿ ಬದ್ಕನ್ನು ಛಾಲೆಂಜಾಗಿ ತೆಗೆದುಕೊಳ್ಲಾ?" ಸಜೆಷನ್ ಕೇಳಿದಳು. ಏನೇನು ಅರ್ಥವಾಗಲಿಲ್ಲ ಕಣ್ಮಣಿಗೆ. "ಎಲ್ಲಿದೆ ಛಾಲೆಂಜ್? ಯಾರ್ಮೇಲೆ ಛಾಲೆಂಜ್? ನಿಂಗೆ ಪ್ರೇಮಿಸೋ ಇನ್ನೊಬ್ಬ ವ್ಯಕ್ತಿ ಸಿಗಲಾರನೇನೋ ಎನ್ನುವ ಭಯದ ಜೊತೆ, ಎಲ್ಲಿ ಒಂಟಿಯಾಗಿ ಉಳಿದು ಬಿಡಬೇಕಾಗುತ್ತೇನೋ ಎನ್ನುವ ಭೀತಿ." ಅವಳೆದೆಯಲ್ಲಿ ಅಡಗಿದ್ದ ರಹಸ್ಯವನ್ನು ಕಣ್ಮಣಿ ಚೆಲ್ಲಿದಾಗ ಒಪ್ಪಿಕೊಳ್ಳಲು ಸಾಧ್ಯವಾಗದೇ, ನಿರಾಕರಿಸಲು ಸಾಧ್ಯವಾಗದೆ ಒದ್ದಾಡಿದಳು ವಾಸಂತಿ.

"ಒಂದು ಕರಿಯ ಕಲ್ಲನ್ನು ಹುಣಿಸೇಹಣ್ಣು ಹಚ್ಚಿ ತೊಳೆದರೂ ಬೆಳ್ಳಗಾಗಲು ಅದು ಹಿತ್ತಾಳೆಯಲ್ಲ. ಕರ್ಣ ಎಂದೂ ಬದಲಾಗದ ವ್ಯಕ್ತಿ! ಘರ್ಷಣೆ, ಪ್ರಯಾಸ ಬಿಟ್ಟು ನೀನೇ ಹೊಂದಿಕೊಂಡು ಹೋಗೋ ಹಾಗಿದ್ರೆ.. ಮದ್ವೆಯಾಗ್ಬಿಡು" ಅತ್ಯಂತ ಸೂಕ್ತವಾದ ಸಲಹೆ ನೀಡಿದಳು.

ಬಹಳ ಹೊತ್ತು ಗೆಳತಿಯರು ಚರ್ಚಿಸಿ ಒಂದು ನಿರ್ಧಾರಕ್ಕೆ ಬಂದರು. "ಕರ್ಣನ್ನ ನೆಗ್ಲೆಕ್ಟ್ ಮಾಡ್ತೀನಿ. ಸ್ಪಷ್ಟವಾಗಿ ಹೇಳ್ತೀನಿ" ವಾಸಂತಿಯ ಮಾತಿನಲ್ಲಿ ಅಚಲತೆ ಇತ್ತು. ಅಂಥ ಬದುಕು ಬೇಡವಾಗಿತ್ತು.

ಆಮೇಲೆ ವಿಷಯ ತಿರುಗಿದ್ದು ಚೈತನ್ಯನ ಕಡೆಗೆ.

"ನನಗೆ ಇಂದಿಗೂ ಆ ಮನುಷ್ಯನನ್ನು ನೋಡಲಾಗಲಿಲ್ಲ. ಸ್ವಭಾವದಲ್ಲಿ ಹೇಗೆ?'' ಗದ್ದಕ್ಕೆ ಕೈಯೊತ್ತಿ ಪ್ರಶ್ನಿಸಿದಾಗ ಕಣ್ಮಣಿಯ ಮುಖ

ಗಂಭೀರವಾಯಿತು. "ಹೇಗೆ... ಹೇಳ್ಲಿ? ತಾಯಿಯ ಬಗ್ಗೆಯಂತು ವಿಪರೀತ ಪ್ರೇಮ, ಮಮತೆ. ಬಂಗ್ಲೆಯಲ್ಲಿ ಬಹಳ ಡೀಸೆಂಟಾಗಿ ನಡ್ಕೋತಾರೆ. ಪಂಢರಿಯನ್ನು ಬಿಟ್ಟು ಯಾರು ಎದುರು ನಿಂತು ಮಾತಾಡೋ ಸಾಹಸ ಮಾಡೋಲ್ಲ. ಅಷ್ಟು ಬಿಟ್ಟು ಏನು ಗೊತ್ತಿಲ್ಲ. ಆದರೂ ಅವ್ರ ಪರಿಚಯ ನಂಗೆ ಈ ಜನ್ಮದ್ದಲ್ಲ, ಜನ್ಮ ಜನ್ಮಾಂತರದ್ದು. ಯೋಚ್ಸಿ ಯೋಚ್ಸಿ ಈ ನಿರ್ಧಾರಕ್ಕೆ ಬಂದಿದ್ದೀನಿ. ಹಿಂದೆಂದೂ ನಾನು ಮುರುಳಿ ಕೃಷ್ಣ ಚೈತನ್ಯ ಅವರನ್ನು ನೋಡಿದ್ದಿಲ್ಲ. ಇನ್ನು ಯಾವ ಭಾಗ್ಯವಿಲ್ಲದಿದ್ದರೂ ಕನಿಷ್ಟ ಅವರು ವಾಸಿಸುವ ಬಂಗ್ಲೆಯಲ್ಲಿರುವುದೇ ಒಂದು ತೃಪ್ತಿ" ಹೇಳಿಕೊಂಡಳು.

ವಾಸಂತಿಯ ಬಾಯಿಂದ ಮಾತುಗಳು ಹೊರಡಲಿಲ್ಲ. ಇದು ನಟನೆಯೋ, ಭ್ರಮೆಯೋ, ಹುಚ್ಚೋ? ಒಂದು ರೀತಿಯ ಆತಂಕ ಅವಳಿಗೆ.

"ಒಂದ್ಸಲ ಸೈಕ್ರಿಯಾಟ್ರಿಸ್ಟ್ ಬಳಿ ಹೋಗ್ಬರೋಣ" ಸೂಚಿಸಿದಾಗ ನಿರಾಕರಿಸಿದಳು. "ಅಗತ್ಯವಿಲ್ಲ. ಅದ್ರಿಂದ ಬರೀ ಓಡಾಟ, ವಿಷಯ ಮೂರನೆಯವರಿಗೆ ತಿಳಿದರೇ ಅಪಾಯ. ನಾನು 'ದೀಪಾಂಕುರ'ದಿಂದ ಕೂಡ ಹೊರಬೀಳಬೇಕಾಗುತ್ತೋ ಏನೋ. ಅವೆಲ್ಲ ಬೇಡ. ಇದೆಲ್ಲ ನನ್ನ ನಿನ್ನ ನಡ್ವೆ ಉಳ್ದುಹೋಗ್ಲಿ. ಯಾರ್ಗೂ ... ಹೇಳ್ಬೇಡ" ಅವಳ ಕೈಗಳನ್ನು ಹಿಡಿದುಕೊಂಡು ಪ್ರಾಮಿಸ್ ಮಾಡಿಸಿಕೊಂಡಳು.

ಅಲ್ಲೇ ಊಟ ಮಾಡಿಕೊಂಡು ಹೊರಟಾಗ ಗೇಟಿನವರೆಗೂ ಬಂದ ವಾಸಂತಿ "ನಂಗೆ ಏನೇನು ಅರ್ಥವಾಗ್ಲಿಲ್ಲ. ಪೂರ್ವ ಜನ್ಮದ ಸ್ಮರಣೆಯ ಕೆಲವು ಘಟನೆಗಳನ್ನು ಪೇಪರ್‌ನಲ್ಲಿ ಓದಿದ್ದೆ. ಎಸ್.ಎಲ್. ಭೈರಪ್ಪನವರ 'ನಾಯಿ ನೆರಳು' ಕೂಡ ಇಂಥ ವಸ್ತುವನ್ನು ಆಧರಿಸಿದ್ದೆ. ನಿನ್ನ ನೆನಪಿನಲ್ಲಿ ಉಳಿದಿರೋದು ಬರೀ ಚೈತನ್ಯರು ಮಾತ್ರ. ಇಂಥ ಭೌಗೋಳಿಕ ಪರಿಸರ, ಘಟನೆಗಳು ಅಂಥದೇನು ನಿನ್ನ ನೆನಪಿನಲ್ಲಿಲ್ಲ" ವಿಸ್ಮಯ ವ್ಯಕ್ತಪಡಿಸಿದಳು.

ಒಂದೆರಡು ನಿಮಿಷ ಸುಮ್ಮನಿದ್ದ ಕಣ್ಮಣಿ "ಅದೇ ಮಲೆನಾಡಿನ ಆ ಪಾಳು ಬಿದ್ದ ವಾಡೆನೇ ಹಿಂದೆಂದೋ ನೋಡಿದ ನೆನಪು. ಆ ಸೆಳೆತದಿಂದಲೇ ಅಂದು ಅಂಥ ಹಟ ಮಾಡಿದ್ದು. ನಾನೇನು ಅಂಥ ಧೈರ್ಯದ ಹೆಣ್ಣಲ್ಲ, ಆದರೂ ಯಾಕೆ ಅಂಥ ಸಾಹಸಕ್ಕೆ ಮುಂದಾದೇಂತ ನಂಗೆ ಇನ್ನು ಅರ್ಥವಾಗಿಲ್ಲ. ಈಗ್ಲೂ ನೆನಪಾದರೇ ಎಂಥದ್ದೋ ಆಪ್ಯಾಯಮಾನ, ಆಂದೋಳನ, ಮನದಲ್ಲಿ ಭಯಂಕರ ಬಿರುಗಾಳಿ. ಆಗ ನಾನು ಹೊಯ್ದಾಡುವ ತರಗೆಲೆಯಾಗಿಬಿಡ್ತೀನಿ. "ಅವಳ ಕಣ್ಣಂಚಿನಲ್ಲಿ ತುಂತುರು

ಕಾಣಿಸಿಕೊಂಡಾಗ ವಾಸಂತಿ ಕೈ ಹಿಡಿದುಕೊಂಡಳು ಇಬ್ರೂ ವಿಚಿತ್ರ ಪರಿಸ್ಥಿತಿಯಲ್ಲಿದ್ದೀವಿ. ನಂದು ಬೇಕಾದ್ರೆ ಕೊಡವಿಕೊಳ್ಳಬಹ್ದು. ನಿಂದು... ಸುಲಭವಲ್ಲ! ಪರಿಹಾರ ನಮ್ಮ ಮಟ್ಟಕ್ಕೆ ಮೀರಿದ್ದು" ವ್ಯಥೆಯಾವರಿಸಿತು ಅವಳ ಸ್ವರದಲ್ಲಿ.

ಕಾಲ ನಿರ್ಧರಿಸಬೇಕು ಅಥವಾ ಇದೇ ರೀತಿ ಮುಗಿದುಹೋಗಬಹುದು. ಹೊರ ಜಗತ್ತಿಗೆ ಪ್ರಕಟವಾದರೇ ಹಾಸ್ಯಾಸ್ಪದವಾಗಬಹುದಷ್ಟೆ. ಅವಳಂಥ ಹೆಣ್ಣಿನ ಮಾತುಗಳನ್ನು ಯಾರೂ ನಂಬಲಾರರು.

"ಪರಿಹಾರ ಅಂಥದೆಲ್ಲ.... ಏನು ಬೇಡ. ದಯವಿಟ್ಟು ಈ ವಿಷ್ಯ ಯಾರ್ಗೂ ತಿಳಿಸ್ಬೇಡ. ಜೀವನ ತಾನೇ ಎಷ್ಟು ದಿನದ್ದು. ದಿನಗಳು ಉರುಳಿ ಒಂದು ದಿನ ಮುಕ್ತಾಯವಾಗಿ ಹೋಗುತ್ತೆ" ಎಂದಳು ಕಣ್ಮಣಿ. ಅಲ್ಲಿ ನುಸುಳಿದ್ದು ವೇದಾಂತ. ಪರಿಣಾಮವೇನೇ ಇರಲೀ, ಆ ಹಂತ ಎಷ್ಟೇ ಅಪತ್ತುಗಳಿಂದ, ದುರಾಸೆಗಳಿಂದ, ದುಃಖದಿಂದ ಮಾನವ ಕುಲವನ್ನು ರಕ್ಷಿಸಬಲ್ಲದು.

ಇವಳು ಹಿಂದಿರುಗಿದಾಗ ಚೈತನ್ಯ ಬಂಗ್ಲೆಯಲ್ಲಿಯೇ ಇದ್ದ. ಅವನ ಮುಂದಿನ ಆಫೀಸ್ ರೂಮಿನಲ್ಲಿ ಒಂದು ಸಣ್ಣ, ಅತಿ ಮುಖ್ಯವಾದ ಮೀಟಿಂಗ್ ನಡೆಯುತ್ತಿತ್ತು.

ಎದುರಾದ ಪಂಥರಿ "ನೀವು ಬಂದಿದ್ದು ಒಳ್ಳೆದಾಯ್ತು" ಎಂದು ಆತುರಾತುರವಾಗಿ ಮುಂದಕ್ಕೆ ಹೋದವನ ಹಿಂದೆ ಇಬ್ಬರೂ ಬಿಳಿಯ ಯೂನಿಫಾರಂ ತೊಟ್ಟ ಮನೆ ಕೆಲಸದವರು ಟ್ರೇಗಳನ್ನು ಟ್ರಾಲಿನಲ್ಲಿ ಇಟ್ಟುಕೊಂಡು ನೂಕಿಕೊಂಡು ಹೋಗುತ್ತಿದ್ದರು. ಮಿಕ್ಕ ನೌಕರರಿಗೆ ಇರುವಂಥ ಯೂನಿಫಾರಂ ನಿರ್ಬಂಧ ಪಂಥರಿಗಿಲ್ಲ.

'ವುಮನ್ ಎರಾ' (Women Era) ತಿರುವುತ್ತಿದ್ದ ಸಿಸ್ಟರ್ ಮುಗುಳ್ನಗೆ ಬೀರಿ "ನಿನ್ನಷ್ಟು ಪಂಕ್ಚುಯಾಲಿಟಿ ಇರೋರ್ನ ನಾನು ನೋಡಿಯೇ ಇಲ್ಲ. ಯಾವುದಾದ್ರೂ ಮೂವೀಗೆ ಹೋಗಿದ್ಯಾ?" ಕೇಳಿದಳು ಪಿಸು ದನಿಯಲ್ಲಿ.

"ಇಲ್ಲ, ಹೊರಗೆಲ್ಲು ಹೋಗಿಲ್ಲ. ಹಾಸ್ಟಲ್‌ನಲ್ಲಿಯೇ ಊಟ ಮಾಡಿದ್ದು. ಅಮ್ಮನ ಊಟ ಆಯ್ತ?" ವಿಚಾರಿಸಿದಳು. "ಡೋಂಟ್ ಬಾದರ್, ಆಕೆ ನಿದ್ದೆ ಮಾಡ್ತಾ ಇದ್ದಾರೆ. ಹೋಗಿ ಡಿಸ್ಟರ್ಬ್ ಮಾಡದೇ ನಿನ್ನ ರೂಮಿಗೆ ಹೋಗಿ ಬಂದು ನಿದ್ದೆ ತೆಗೀ. ವರ್ಕ್ಸ್‌ನ ಇಷ್ಟೊಂದು ಹಚ್ಕೋಬಾರ್ದು" ಒಂದು ಬುದ್ಧಿ ಮಾತು ಹೇಳಲು ಮರೆಯಲಿಲ್ಲ ಸಿಸ್ಟರ್. ಅವಳ ಬಗ್ಗೆ

ಒಂದು ರೀತಿಯ ಅನುಕಂಪ ಹಿಂದೆ ಬಂದ ಬೇರೆಯವರು ಇವಳನ್ನು ಪ್ರತಿಸ್ಪರ್ಧಿ ಎನ್ನುವಂತೆ ನೋಡಿದರೇ ಕಣ್ಮಣಿ ಮಾತ್ರ ಅವಳಿಗೆ ವಿಧೇಯಳಾಗಿದ್ದೇ ಕಾರಣ.

ಆದರೆ ಕಣ್ಮಣಿ ಒಮ್ಮೆ ಸುಬ್ಬಲಕ್ಷ್ಮಿಯ ರೂಮಿನಲ್ಲಿ ಇಣಕಿದಾಗ ಕಣ್ಣು ತೆರೆದುಕೊಂಡು ತಾರಸಿಯನ್ನು ದಿಟ್ಟಿಸುತ್ತಿದ್ದ ಆಕೆಯ ದೃಷ್ಟಿ ಇವಳತ್ತ ಹೊರಳಿ ತುಟಿಯಂಚಿನಲ್ಲಿ ಕಿರುನಗು ಮೂಡಿತು.

"ಆಗ್ಲೇ ಬಂದೇಬಿಟ್ಟಿದ್ದೀಯಾ! ಸಂಜೆ ಪೂರ್ತಿ ಅಡ್ಡಾಡಿಕೊಂಡು ಬರ್ಬಹುದಿತ್ತು, ನಿಂಗೆ ಇದು ಸೆರೆಮನೆ ಅನ್ನಿಸೋಲ್ವಾ?" ಕೊನೆಯ ವಾಕ್ಯವನ್ನು ಬಾಯಿ ತಪ್ಪಿ ನುಡಿದರಷ್ಟೆ.

"ಹಾಗೇನಿಲ್ಲ! ನಂಗೆ ತುಂಬ ಇಷ್ಟವಾಗಿದೆ. ಅನಾಥಾಶ್ರಮದಲ್ಲಿ ಬೆಳ್ದ ನಂಗೆ, ವಾಸಂತಿ ಸಿಗೋವರ್ಗೂ ಒಂಟಿತನ ಕಾಡ್ತಾ ಇತ್ತು. ನೀವು ಸಿಕ್ಕಮೇಲೆ... ಹುಟ್ಟಿನಿಂದ್ಲೇ ಕಳ್ದುಕೊಂಡಿದ್ದೆಲ್ಲ ಸಿಕ್ಕಿದೆಯೆನಿಸಿದೆ. ಈಗ ನನ್ನ ಬದ್ಕಿಗೂ ಅರ್ಥ ಇದೆ" ಅವರ ಕಾಲುಗಳ ಬಳಿ ಕುಸಿದು ಕಣ್ಣೀರು ಸುರಿಸಿದಳು. ತಲೆ ತಡವಬೇಕೆನಿಸಿತು ಸುಬ್ಬಲಕ್ಷ್ಮಿಗೆ. ಅದು ಅಸಾಧ್ಯವಾದರೂ ನಾಲಿಗೆ ಆ ಕೆಲಸ ವಹಿಸಿಕೊಂಡಿತು.

"ಹುಚ್ಚು ಹುಡ್ಗಿ! ನಿನ್ನ ಬದ್ಕಿಗೆ ಖಂಡಿತ ಒಂದು ನೆಲೆ ಕಲ್ಪಿಸಿಕೊಡ್ತೀನಿ. ನಿಂಗೆ ಆಸಕ್ತಿ ಇರೋ ವಿಷ್ಯಗಳ್ನ ಕಲೀ. ಬರೀ ನನ್ನ ನೋಡಿಕೊಳ್ಳೋದ್ಬಿಟ್ಟು ಮತ್ತೇನಾದ್ರೂ ನಿನ್ನಿಂದ ಮಾಡೋಕೆ ಸಾಧ್ಯವೇನೋ ಯೋಚ್ಸು" ಮಮತೆಯಿಂದ ನುಡಿದರು.

ಅಷ್ಟರಲ್ಲಿ ಬಂದ ಪಂಢರಿ "ಖಂಡಿತ ಮಾಡ್ಬಹುದು. ಕೋಸಂಬರಿಗೆ ಸೌತೆಕಾಯಿ ಚೆನ್ನಾಗಿ ಹಚ್ತಾಳೆ. ಹದವಾಗಿ ರುಬ್ಬೋದ್ನ ಕೂಡ ಕಲೀತಿದ್ದಾಳೆ." ತನ್ನ ಮಾತುಗಳನ್ನು ಸೇರಿಸಿದ.

"ಇದು ಅವ್ನ ಪುಣ್ಯ ಅಷ್ಟೆ. ಯಾರಾದ್ರೂ ನಿನ್ನ ಕೈ ಕೆಳ್ಗೆ ಕೆಲ್ಸ ಮಾಡೋಕ್ಕಾಗುತ್ತ? ಅಷ್ಟೊಂದು ಪಿರಿಪಿರಿ ಮನುಷ್ಯ" ಮೂದಲಿಸಿದರು ಸುಬ್ಬಲಕ್ಷ್ಮಿ. "ಕಣ್ಮಣಿ, ಇವ್ನು ಬಹಳ ಡೇಂಜರ್, ಪ್ರತಿಯೊಂದನ್ನು ರಿಪೋರ್ಟ್ ಮಾಡ್ತಾನೆ, ಹುಷಾರಾಗಿರು" ನಗೆಯಾಡಿದರು. ಇಂಥ ಪ್ರಸಂಗಗಳು ಅಪರೂಪವೇ. ಪಂಢರಿಗಂತು ತುಂಬ ... ತುಂಬ ಸಂತೋಷ. "ಅಮ್ಮ ಮುಗ್ದೇಹೋಯ್ತು. ಪ್ರತಿಯೊಬ್ರು ನನ್ಕಡೆನೇ ಬೆಟ್ಟು ಮಾಡ್ತಾರೆ. ನಂಗೆ ನಿಯತ್ತೇ ಮುಖ್ಯ" ದೊಡ್ಡದಾಗಿ ರಾಗ ಹಾಡಿ ನಡೆದ.

ಮರುದಿನ ಸುಬ್ಬಲಕ್ಷ್ಮಿಯವರ ಗಂಡ, ಮುರುಳಿ ಕೃಷ್ಣ ಚೈತನ್ಯನವರ ತಂದೆಯ ಹುಟ್ಟು ಹಬ್ಬ. ಅಂದು ಕೃಷ್ಣನ ಟೆಂಪಲ್‌ನಲ್ಲಿ ವಿಶೇಷವಾದ ಪೂಜೆ. ಅದನ್ನು ಇಂದಿಗೂ ತಪ್ಪಿಸಿರಲಿಲ್ಲ. ಆ ದಿನ ಹೇಗಾದರೂ ಸರಿ, ತಾಯಿಯನ್ನು ಕರೆದೊಯ್ಯುತ್ತಿದ್ದ ಚೈತನ್ಯ. ಕೈಕಾಲುಗಳ ಸ್ವಾಧೀನ ಕಳೆದುಕೊಂಡ ನಂತರ ಎತ್ತಿ ಒಯ್ಯುತ್ತಿದ್ದ.

ವ್ಯಾಯಾಮ, ಸ್ನಾನ ಮುಗಿದ ನಂತರ ಕಣ್ಮಣಿಯೇ ಅವರ ಕೂದಲನ್ನೆಲ್ಲ ಎತ್ತಿ ಗಂಟು ಕಟ್ಟಿ ಕ್ಲಿಪ್ ಹಾಕಿ ಒಂದು ತುಂಡು ಮಲ್ಲಿಗೆ ಹೂ ಸುತ್ತಿದಾಗ, ಆಕೆ ಆತಂಕಗೊಂಡರು.

"ಛೆ, ಇದೆಲ್ಲ ಹೊಸ್ದು ಅನ್ನಿಸುತ್ತೆ. ಬೇರೆಯವ್ರಿಗೆ ಇದೆಲ್ಲ ಚೆಂದ ಕಾಣದಿರಬಹುದ್ದು" ಆಕೆ ಮುಸಿ ಮುಸಿಯೆಂದಾಗ "ನಮಗಾಗಿ ನಮ್ಮ ಬದ್ಕು ಅಂದಿರಿ. ಅಪ್ಪಾಜಿಯವ್ರ ಬರ್ತ್‌ಡೇ ಅಲ್ವಾ! ಸ್ವರ್ಗಲ್ಲಿರೋ ಅವ್ರಿಗೆ ಸಂತೋಷನೇ ಆಗುತ್ತೆ" ಧೈರ್ಯ ಮಾಡಿ ಸಲಿಗೆ ತಗೊಂಡು ಅಷ್ಟು ಹೇಳಿದಳು.

"ವಂಡರ್‌ಫುಲ್ ಮೇಡಮ್? ದೇವತೆ ತರಹ ಕಾಣ್ತೀರಾ!" ಸಿಸ್ಟರ್ ಒಂದು ಮಾತು ಸೇರಿಸಿದಳು. "ಯಸ್, ಯೂ ಆರ್ ಕರೆಕ್ಟ್" ಒಳಗೆ ಬಂದ ಚೈತನ್ಯ ಕಣ್ಣುಗಳಲ್ಲಿ ಮೆಚ್ಚಿಗೆ, ಗೌರವ, ಪ್ರೀತಿ ಬೆರೆತ ಆಹ್ಲಾದ ತುಂಬಿ ತುಳುಕುತಿತ್ತು.

ತಾಯಿಯನ್ನು ತಾನೇ ಎತ್ತಿಕೊಂಡು ಹೋಗಿ ಕಾರಿನಲ್ಲಿ ಕೂಡಿಸಿದ. ಸಿಸ್ಟರ್, ಕಣ್ಮಣಿ ಒಂದೊಂದು ಪಕ್ಕದಲ್ಲಿ ಕೂತರು, ನಡೆದಾಡದ, ಹೆಚ್ಚು ವ್ಯಾಯಾಮವಿಲ್ಲದ ಆಕೆಯ ಸೊಂಟದಲ್ಲಿ ಬಲ ಕಮ್ಮಿ ಆಗಿತ್ತು. ಸ್ವಲ್ಪ ಹೊತ್ತು ಇಕ್ಕಡೆಯಲ್ಲಿ ನೋವು ಷುರುವಾಗುತ್ತಿತ್ತು.

ಮೂವತ್ತಕ್ಕೂ ಮೀರಿದ ಮೆಟ್ಟಲುಗಳು ದೇವಸ್ಥಾನದ್ದು. ಸುಬ್ಬಲಕ್ಷ್ಮಿಯನ್ನು ಎತ್ತಿ ಒಯ್ದಾಗ ಬಾಡಿ ಗಾರ್ಡ್ ಆಕೆಗಾಗಿಯೇ ಮಾಡಿಸಿದ ಛೇರ್ ಎತ್ತಿಕೊಂಡು ನಡೆದ. ಪಂಢರಿ ಇವರಿಬ್ಬರಿಗೂ ಮೊದಲು ಮೇಲೇರತೊಡಗಿದ. ಹಿಂಬಾಲಿಸಿದ್ದು ಇವರಿಬ್ಬರಾದರೇ, 'ಚೈತನ್ಯ ಗ್ರೂಪ್ಸ್ ಆಫ್ ಕಂಪನೀಸ್'ನ ಹಲವು ಗಣ್ಯರು ಕಾದಿದ್ದು ಸ್ವಾಗತಿಸಿದ್ದು ಇವಳ ಮಟ್ಟಿಗೆ ಅಪರೂಪದ ದೃಶ್ಯ. ಭವ್ಯವಾದ ನಾಲ್ಕು ಅಡಿಯ ಮುದ್ದಾದ ಕಪ್ಪು ಕೃಷ್ಣನ ಮೂರ್ತಿ. ತೇಜೋ ಪುಂಜವಾಗಿತ್ತು. ಷೋಡಶೋಪಚಾರ ಪೂಜೆಯ ನಂತರ ಮಂಗಳಾರತಿ, ತೀರ್ಥ, ಪ್ರಸಾದಗಳ ವಿನಿಯೋಗದ

ನಂತರ ತಾಯಿಯತ್ತ ನೋಡಿದ. ಆಕೆ ಕಳೆಕಳೆಯಾಗಿ ನಡೆದು ಬರುತ್ತಿದ್ದ ನೆನಪುಗಳೊಂದಿಗೆ ಅವನೆದೆ ಭಾರವಾಯಿತು. ಮಾತನಾಡಲಾರದ ಸ್ಥಿತಿ ಆಕೆಯದು. ಪತಿ ಚಿನ್ಮಯ ಚೈತನ್ಯ ನಿಲುವು ಕಣ್ಣಿಗೆ ತಟ್ಟಿದಂತಿತ್ತು. ತಂದೆಯ ತಪ್ರೂಪು ಮಗ.

"ಹೋಗೋಣ..." ಎಂದರು.

ಹತ್ತಾರು ಆಳುಗಳಿದ್ದರು. ಆಕೆಯನ್ನು ಎತ್ತಿ ಒಯ್ಯುವ ಕೆಲಸ ಅವರು ಮಾಡಲು ಬಿಡುತ್ತಿರಲಿಲ್ಲ ಚೈತನ್ಯ. ಅವನ ಪ್ರೀತಿ, ಗೌರವ ನಿಷ್ಠೆಯಲ್ಲಿ ದಿನಗಳು ಕಳೆದರೂ ಅನಾದರ ಕಾಣದು.

ಬರುವಾಗ ಮುರುಳಿ ಕೃಷ್ಣ ಚೈತನ್ಯ ತಾಯಿಯ ಪಕ್ಕದಲ್ಲಿ ಕೂತಿದ್ದರಿಂದ ಮ್ಯಾನೇಜರ್ ಕಾರಿನಲ್ಲಿ ಬಂಗ್ಲೆಗೆ ಬಂದರು. ಕಣ್ಮಣಿ, ಸಿಸ್ಟರ್. ಅಂದೇ 'ಚೈತನ್ಯ ಗ್ರೂಪ್ ಆಫ್ ಕಂಪನೀಸ್' ನ ಎಲ್ಲಾ ವರ್ಗದ ಜನರಿಗೂ ಬೋನಸ್ ಸಂದಾಯವಾಗುತಿತ್ತು. ಇದು ಹಿಂದಿನಿಂದಲೂ ನಡೆದು ಬರುತ್ತಿದ್ದುದು.

ಸುಬ್ಬಲಕ್ಷ್ಮಿಯನ್ನು ಮಲಗಿಸಿದ ಮೇಲೆ ಎಂದಿನಂತೆ ಆಕೆಯ ಕೈಯನ್ನು ಸ್ಪರ್ಶಿಸಿದವನು ಷಾಕಾದ, ತುಸು ಬದಲಾವಣೆ ಕಂಡುಬಂತು. ತೀರಾ ಬೆಣ್ಣೆಯಂತೆ ಮೆತ್ತಗಿದ್ದ ಕೈ ಸ್ವಲ್ಪ ಗಡುಸಾಗಿದೆಯೆನಿಸಿತು. ಇದು ಬೇರೊಬ್ಬರ ಅನುಭವಕ್ಕೆ ಬರದು. ದಿನದಲ್ಲಿ ಎರಡು ಸಲವಾದರೂ ಕೈಗಳನ್ನು ನೇವರಿಸುತ್ತಿದ್ದ. ಕೆನ್ನೆಗೊತ್ತಿಕೊಳ್ಳುತ್ತಿದ್ದ, ಅವುಗಳ ಸ್ಪರ್ಶ ಸಂಪೂರ್ಣ ಅನುಭವ ಅವನಿಗಿತ್ತು.

ತಕ್ಷಣವೇ ಚಾರ್ಟ್ ತೆಗೆದುಕೊಂಡು ನೋಡಿದ. ಯಾವುದೇ ಬದಲಾವಣೆ ಇಲ್ಲ. ಅದೇ ಮಾತ್ರೆ, ಕ್ಯಾಪ್‌ಸೂಲ್, ಟಾನಿಕ್ ವಗೈರ... ವಗೈರ. ವ್ಯಾಯಮ, ತೈಲದ ಮಸಾಜು ಅಷ್ಟೆ ಮತ್ತೆ ತಾಯಿಯ ಬಲಗೈಯೆತ್ತಿಕೊಂಡು ಎಡಗೈ ಹಸ್ತದ ಮೇಲಿರಿಸಿಕೊಂಡು ಬಲಗೈ ಬೆರಳುಗಳಿಂದ ಮೃದುವಾಗಿ ಸವರತೊಡಗಿದ ಪರೀಕ್ಷಾರ್ಥವಾಗಿ ಒಂದಿಷ್ಟು ಬದಲಾವಣೆ ಕಂಡಿತು. ಸಂತೋಷದಿಂದ ತಬ್ಬಿಬ್ಬಾದ ಮನಸ್ಥಿತಿಯನ್ನು ಸ್ವಲ್ಪ ನಿಧಾನವಾಗಿಯಾದರೂ ಸಮಸ್ಥಿತಿಗೆ ತಂದುಕೊಂಡ.

"ನಿಂಗೆ ಬೇಗ ಗುಣವಾಗುತ್ತೆ" ಹೇಳಿದ.

ಆಕೆಯ ತುಟಿಯಂಚಿನಲ್ಲಿ ಮಗುವಿನ ನಗೆ ಅರಳಿತು. ಮಗನ ಮಾತಿಗೆ

ವಿರುದ್ಧವಾದ ಪ್ರತಿಕ್ರಿಯೆ ಆಕೆಯದಲ್ಲ. "ನಿನ್ನ ಅನಿಸಿಕೆ ನಿಜವಾಗ್ಲಿ" ಎಂದರು ಮೆಲುವಾಗಿ.

ರೂಮಿಗೆ ಹಿಂದಿರುಗಿದ ಚೈತನ್ಯ ಚಡಪಡಿಸಿದ. ಅಮೆರಿಕಾದ ಹೆಸರಾಂತ ಎಲ್ಲಾ ವಿಭಾಗದ ವೈದ್ಯರ ಜೊತೆ ಮತ್ತು ಚೀನಾಗೂ ಹೋಗಿದ್ದ ತಾಯಿಯ ಕೇಸ್ ಹಿಸ್ಟರಿಗೆ ಸಂಬಂಧಪಟ್ಟಂಥವು ಹಿಡಿದು 'ಇಂಥ ಕಾಯಿಲೆ, ಅದಕ್ಕೆ ಇಂಥ ಟ್ರೀಟ್‌ಮೆಂಟ್' ಎಂದು ಯಾರು ಡೈಯಾಗ್ನಸ್ ಮಾಡಲಿಲ್ಲ. ಎಷ್ಟೋ ರೀತಿಯ ಔಷಧೋಪಚಾರ ಆಕೆಯನ್ನು ಮೇಲಕ್ಕೆಳುವಂತೆ ಮಾಡಿರಲಿಲ್ಲ. ಈಗ ತಾಯಿಯ ನಿರ್ಜೀವ ಕೈಯಲ್ಲಿ ಬಲ ವೃದ್ಧಿಯಾಗುವಂತೆ ಕಂಡಿದ್ದು ಭ್ರಮೆಯಾ? ಫೋನ್‌ನ ಬಟನ್‌ಗಳನ್ನು ಒತ್ತಿ ಡಾಕ್ಟರನ್ನು ಸಂಪರ್ಕಿಸಬೇಕೆಂದುಕೊಂಡವನು ಸುಮ್ಮನಾದ.

"ಏನು ಹೇಳೋಕ್ಕಾಗೋಲ್ಲ. ಅವ್ರ ಮುಂದಿನ ದಿನಗಳು ಹಾಸಿಗೆಯ ಮೇಲೆಯೇ ಸವೆದುಹೋಗಬಹ್ದು. ನಿಮ್ಮಂಥ ಮಗ ಇರೋದು ಅವ್ರ ಪುಣ್ಯ" ಹೆಸರಾಂತ ಫ್ಯಾಮಿಲಿ ಡಾಕ್ಟರ್ ಶರ್ಮ ವ್ಯಕ್ತಪಡಿಸಿದ ರೀತಿ ಇದಾಗಿತ್ತು.

ಹಾಸಿಗೆಯ ಮೇಲೆ ಕೂತ. 'ದೈವ ಅನ್ನೋದು ಒಂದಿದೆ. ಅಸಾಧ್ಯ ಎನ್ನುವುದು ಅಲ್ಲಿಲ್ಲ. ನಿಮ್ಮ ತಾಯಿ ಗುಣಮುಖರಾಗಿ ಓಡಾಡ್ಬಹ್ದು' ತಂದೆಯ ಹಳೆಯ ಸ್ನೇಹಿತರು, ಪ್ರಕಾಂಡ ಪಂಡಿತರು ಆದ ಜೋಷಿಯವರ ಅಭಿಪ್ರಾಯ ಇದು.

ದೃಢ ಮನಸ್ಸಿನ ಮುರುಳಿ ಕೃಷ್ಣ ಚೈತನ್ಯ ತಾಯಿಯ ವಿಷಯ ಬಂದಾಗ ಮಾತ್ರ ಒಂದಿಷ್ಟು ದುರ್ಬಲರಾಗಿಬಿಡುತ್ತಿದ್ದರು. ಪಂಢರಿ, ಸಿಸ್ಟರ್, ಕಣ್ಮಣಿಯವರನ್ನು ಒಮ್ಮೆ ಯಾಕೆ ಕೇಳಬಾರದು? ಅದಕ್ಕೆ ಮುನ್ನ ಒಮ್ಮೆ ತಾಯಿಯನ್ನು ಚೆಕ್‌ಅಪ್‌ಗೆ ಒಳಪಡಿಸಬೇಕೆನ್ನುವ ತೀರ್ಮಾನಕ್ಕೆ ಬಂದವನೆ ದಢದಢನೆ ಕೆಳಗಿಳಿದು ಬಂದ.

ತಾಯಿಯ ರೂಮಿಗೆ ನುಗ್ಗಿದ, ಕಣ್ಮಣಿ ಆಕೆಯ ಕೈಯನ್ನು ದಿಂಬಿನ ಮೇಲಿರಿಸಿ ಬೆರಳುಗಳಿಂದ ಸವರುತ್ತಿದ್ದಳು. ಸಾಲಿಗ್ರಾಮವನ್ನು ಮುಟ್ಟಿ ಕಣ್ಣಿಗೊತ್ತಿಕೊಂಡು ಬಂದು ಅದೇ ಕೈನಿಂದ ಆಕೆಯ ದುರ್ಬಲವಾದ ಕೈ ಕಾಲುಗಳನ್ನು ಸ್ಪರ್ಶಿಸುತ್ತಿದ್ದಳು. ಆಗ ಅವಳಿಗೆ ವಾಡೆಯಲ್ಲಿ ಹೆಡೆ ಎತ್ತಿ ನಿಂತಿದ್ದ ವಯಸ್ಸಾದ ಸರ್ಪದ ನೆನಪಾಗುತಿತ್ತು. ಒಂದೆರಡು ಸಲ ರಸ್ತೆಗಳಲ್ಲಿ ಹಾವಾಡಿಸುವಾಗ ಹೆಡೆಯೆತ್ತಿ ಪುಂಗಿಯ ನಾದಕ್ಕೆ ತಲೆದೂಗುವ

ಹಾವುಗಳನ್ನು ನೋಡುವುದರ ಜೊತೆಗೆ, ಹಿಂದೆ ಅನಾಥಾಲಯದ ಪಕ್ಕದಲ್ಲಿನ ಜಮೀನನ್ನು ಹಸನುಗೊಳಿಸುವಾಗ ಅಲ್ಲಿನ ಕಾಂಪೌಂಡ್‌ನಲ್ಲಿ ಹಾವು ಕಾಣಿಸಿಕೊಂಡು ಎರಡು ದಿನ ಕಣ್ಣು ಮುಚ್ಚಾಲೆಯಾಡಿ ಮೂರನೆ ದಿನ ಯಾರೋ ಒಬ್ಬ ಹಾವಾಡಿಗ ಬಂದು ಹಿಡಿದು ಒಯ್ದಿದ್ದ. ಆ ಹಾವುಗಳು ನೆನಪಿಗೆ ಬರುತ್ತಿರಲಿಲ್ಲ. ಆದರೆ ವಾಡೆಯಲ್ಲಿ ಕಂಡ ವಯಸ್ಸಾದ ಹಾವು ಅವಳ ಮನದಲ್ಲಿ ಉಳಿದುಬಿಟ್ಟಿತ್ತು.

ಚೈತನ್ಯನನ್ನು ನೋಡಿದ ಕೂಡಲೇ ಕೈ ಹಿಂದೆಗೆದುಕೊಂಡಳು ಕೈಯನ್ನು. "ಮಾಲಿಶ್ ಮಾಡ್ತಾ ಇದ್ದೀಯಾ?" ಕೇಳಿದ. 'ಹಾ ಹ್ಞೂ' ಎನ್ನುವ ಮುನ್ನ ಸುಬ್ಬಲಕ್ಷ್ಮಿ ತುಟಿ ತೆರೆಯುವ ಮುನ್ನ ಅವಳತ್ತ ನೋಡಿದರು. ಅರಿತವಳಂತೆ ಹೊರಗೆ ಹೋದಳು.

"ಸಿಸ್ಟರ್ ಆ ಕೆಲ್ಸ ಮಾಡ್ತಾ ಇಲ್ವಾ? ಯಾವ್ದೇ ನರ್ಸಿಂಗ್ ಟ್ರೈನಿಂಗ್ ಆಗದ ಕಣ್ಮಣಿ ಕೈಯಲ್ಲಿ ಕೆಲವನ್ನು ಮಾಡಿಸೋದು ತಪ್ಪಾಗುತ್ತೆ" ಎಂದ ಗಂಭೀರವಾಗಿ.

"ಆ ಭಯ ಬೇಡ. ಆ ಹುಡ್ಗಿ ವ್ಯಾಯಾಮ, ಮಾಲೀಶ್ ಮಾಡೋದ್ನ ಕಲಿತಿದ್ದಾಳೆ, ಕಡ್ಮೇ ಸಮಯದಲ್ಲೇ, ಒಂದು ರೀತಿಯ ಅಮೃತ ಸ್ಪರ್ಶ ಅವ್ಳ ಕರಗಳಲ್ಲಿ ಹಿತವೆನಿಸುತ್ತೆ. ಆರಾಮಾಗಿ ಕಣ್ಣು ಮುಚ್ಚಿ ಮಲಗ್ತೀನಿ. ಎಷ್ಟು ಚೆನ್ನಾಗಿ ಹಾಡ್ತಾಳೆ. ಅವ್ಳ ಬದ್ಕಿಗೆ ಒಂದು ದಾರಿ ಮಾಡ್ಬೇಕು ಚೈತನ್ಯ" ಎಂದರು ಭಾರವಾದ ದನಿಯಲ್ಲಿ.

"ನೀನು ಅಷ್ಟು ಹೇಳ್ಬೇಕಾ, ಅಮ್ಮ" ಆಕೆಯ ಕೈ ಮೇಲೆ ಹಸ್ತವನ್ನಿಸಿದ. ಸ್ಪರ್ಶಿಸಿದಾಗಲೆಲ್ಲ ಜಡವಾದ ಅನುಭವವಾಗುತ್ತಿದ್ದ ಕೈ ನರಗಳು ಅಲ್ಪ ಸ್ವಲ್ಪ ಉಸಿರು ತುಂಬಿಕೊಂಡು ಉಸಿರಾಡುತ್ತಿದ್ದಂತೆ ಕಂಡಿತು. ಎಲ್ಲೋ ತೀರಾ ಆಳದಲ್ಲಿನ ಉಸಿರಾಟ ಬೇರೆಯವರ ಅನುಭವಕ್ಕೆ ಕಷ್ಟ. ಆ ಕ್ಷಣ ಅವನ ಉಸಿರಾಟವೇ ಏರುಪೇರಾಯಿತು.

"ಅಮ್ಮ ಒಂದ್ಸಲ ಫುಲ್ ಚೆಕ್ ಅಪ್ ಮಾಡ್ಸಿದರೇ ಹೇಗೆ?" ಸೂಚಿಸಿದ. ಆಕೆಯ ನಿರಾಕರಣೆ ಪ್ರಬಲವಾಗಿತ್ತು. "ಇಂಥ ಓವರ್ ಪ್ರೀತಿ, ಕಾಳಜಿಯಿಂದ ನಾನು ಹಿಂಸೆಗೊಳಗಾಬೇಕಾಗುತ್ತೆ. ಜೊತೆಗೆ ಒಂದು ಸಣ್ಣ ರಿಕ್ವೆಸ್ಟ್. ಡಾಕ್ಟ್ರು, ಸಿಸ್ಟರ್, ಪ್ರತೀ ದಿನ ಚೆಕ್ ಅಪ್ ಇವೆಲ್ಲದರಿಂದ ನಂಗೆ ನರ್ಸಿಂಗ್ ಹೋಂನಲ್ಲಿದ್ದಂಗೆ ಆಗಿದೆ. ಇದ್ರಿಂದ ನನ್ನ ಬಿಡುಗಡೆ ಮಾಡು. ಚೈತನ್ಯ ನಂಗೆ ನೆಮ್ಮದಿ ಬೇಕಾಗಿದೆ" ಒದ್ದೆಯಾದ ದನಿಯಲ್ಲಿ

ಕೇಳಿಕೊಂಡಾಗ, ಆ ಪ್ರಯತ್ನ ಯಾಕೆ ಮಾಡಬಾರದೆನ್ನುವ ವಿಚಾರ ಅವನ ಮೈಂಡ್ ಬಂದಿದ್ದು ಆಕಸ್ಮಿಕವೆ.

"ಷೂರ್, ಡೆಫಿನೆಟ್ಲಿ" ಭರವಸೆಯಿಂದ ನುಡಿದ.

ಮರುದಿನದಿಂದಲೇ ಇದು ಜಾರಿಗೆ ಬಂತು "ನಾಳೆಯಿಂದ ನರ್ಸಿಂಗ್ ಹೋಂಗೆ ಬಂದ್ಬಿಡಿ" ಸಿಸ್ಟರ್‌ಗೆ ಈ ಆಜ್ಞೆ ಡಾಕ್ಟರಿಂದಲೇ ಬಂದಾಗ ಅವಳಿಗೆ ಗಾಬರಿ. "ನನ್ನಿಂದೇನು ತಪ್ಪಾಗಿದೆ?" ಕಳವಳದ ಪ್ರಶ್ನೆಗೆ ಉತ್ತರಿಸಲಿಲ್ಲ.

ಬೆಳಿಗ್ಗೆಯೇ ಆಫೀಸ್ ರೂಂಗೆ ಕರೆಸಿಕೊಂಡ ಚೈತನ್ಯ "ಕಣ್ಮಣಿ, ಈ ದಿನದಿಂದ ಸಿಸ್ಟರ್ ಬರೋಲ್ಲ. ಅಮ್ಮನ ಪೂರ್ತಿ ಹೊಣೆ ನಿಂದೇ. ಅದಕ್ಕಾಗಿ ಮನೆಯ ಕೆಲ್ಸದವರು, ಪಂಢರಿಯ ಸಹಕಾರ ಸಹಾಯ ಪಡ್ಕೋಬಹುದ್ದು. ಬಹಳ ದೊಡ್ಡ ಕೆಲ್ಸನಾ ನಿಂಗೆ ವಹಿಸ್ತಾ ಇರೋದು. ಬಿ ಕೇರ್ ಫುಲ್" ಎಚ್ಚರಿಸುವುದನ್ನು ಮರೆಯಲಿಲ್ಲ.

"ಡೋಂಟ್ ವರೀ, ನಿನ್ನ ಸಂಬಳ ಕೂಡ ಹೆಚ್ಚು ಮಾಡ್ತೀನಿ. ಅಮ್ಮ ನಿರಾಶರಾಗ್ಬಾರ್ದು. ಬದ್ಕೀನ ಬಗ್ಗೆ ಆಸೆ, ಆಸಕ್ತಿ ಮೂಡುವಂಥ ವಿಷ್ಯಗಳ್ನ ಅವ್ರ ಬಳಿಯಲ್ಲಿ ಮಾತಾಡ್ಬೇಕು. ಅಮ್ಮ ತುಂಬ... ತುಂಬ ಓದಿಕೊಂಡ ಸುಸಂಸತ ಹೆಣ್ಣು. ಇದೆಲ್ಲ ನಿನ್ನ ಮನಸ್ಸಿನಲ್ಲಿ ಇರ್ಲಿ" ಇನ್ನಷ್ಟು ಹೇಳಿದ.

ನಿಂತು ತಲೆ ಬಗ್ಗಿಸಿಕೊಂಡಿದ್ದ ಅವಳನ್ನು ನೋಡಿ ಅವನಿಗೆ ಆಶ್ಚರ್ಯ. "ವಿಧೇಯತೆ ಬೇಕು, ಇಷ್ಟೊಂದು ಅಗತ್ಯವಿಲ್ಲ. ಮುಂದಿನ ರೂಂನಲ್ಲಿ ಅಮ್ಮ ಒಂದು ಒಳ್ಳೆ ಲೈಬ್ರರಿ ಮಾಡಿದ್ರು. ಅದ್ನ ನೋಡೋಕೆ ಕೂಡ ನಂಗೆ ಪುರಸತ್ತಿಲ್ಲ. ನೀನು ಉಪಯೋಗಿಸ್ಕೋ. ಹೇಗೂ ಜರ್ನಲಿಸಂ ಮಾಡಿದ್ದೀ, ಫ್ರೀಲಾನ್ಸರ್ ಆಗಿ ವರ್ಕ್ ಮಾಡು. ಇದೆಲ್ಲ ಒಳ್ಳೆ ಹಾಬಿಗಳೇ, ಸ್ವಲ್ಪ ತಲೆ ಎತ್ತಿ ನನ್ಕಡೆ ನೋಡು. ಮಾತಿನ ರೂಪದಲ್ಲಿಯಾದ್ರೂ ಭರವಸೆ ಸಿಗ್ಬೇಕು, ಅಥ್ವಾ ನಿನ್ನ ಕಣ್ಣುಗಳಲ್ಲಿಯಾದ್ರೂ ಭರವಸೆ ಮೂಡಬೇಕು" ಎಂದ. ಅಷ್ಟರಲ್ಲಿ ಫೋನ್ ಸದ್ದಾದುದ್ದರಿಂದ ಅತ್ತ ಗಮನ ಹರಿಸಿ ಇವಳನ್ನು ಹೋಗುವಂತೆ ಸನ್ನೆ ಮಾಡಿದ. 'ವಿಧೇಯತೆ ಬೇಕು, ಇಷ್ಟೊಂದು ಅಗತ್ಯವಿಲ್ಲ'ವೆಂದು ನುಡಿದಿದ್ದ. ಆದರೆ ಅವನ ಕಣ್ಣುಗಳನ್ನು ನೋಡಲು ಹಿಂಜರಿಯುತ್ತಿದ್ದಳು. ಮೊದಲ ಸಲ ಅವನನ್ನು ಕಂಡಾಗ ಮಂತ್ರಕ್ಕೆ ಒಳಗಾದವಳಂತೆ ಅರೆ ನಿಂತ ಬಸ್ಸಿನಿಂದ ವಾಹನಗಳ ಸಮೂಹವನ್ನು ಲೆಕ್ಕಿಸದೇ ಓಡಿದ್ದಳು ಯಾಕೆ? ಯೋಚಿಸಿ ಯೋಚಿಸಿ ಕೆಲವು ಪುಸ್ತಕಗಳನ್ನು ಓದಿ ಒಂದು ನಿರ್ಣಯಕ್ಕೆ ಬಂದಿದ್ದಳು 'ಚೈತನ್ಯರ ಅನುಬಂಧ ಈ ಜನ್ಮದ್ದಲ್ಲ

ಹಿಂದಿನ ಜನ್ಮದ ನಂಟು ತನ್ನನ್ನು ಕಾಡುತ್ತಿದೆ.'

ಮತ್ತಷ್ಟು ಅನ್ಯೋನ್ಯತೆ ಮೂಡಿತು ಸುಬ್ಬಲಕ್ಷ್ಮಿ ಅವಳ ನಡುವೆ ದಿನ ಕಳೆದಂತೆ.

ಅಂದು ವ್ಹೀಲ್ ಛೇರ್ ತಳ್ಳಿಕೊಂಡು ಬಂದು ಮಂಚದ ಬಳಿ ನಿಲ್ಲಿಸಿ "ಅಮ್ಮ ಹೊರಗಡೆ ಗಾರ್ಡನ್‌ನಲ್ಲಿ ಅಡ್ಡಾಡಬಹುದು" ಹೇಳಿದಾಗ ಆಕೆ ವಿಸ್ಮಯದಿಂದ ಅವಳ ಮುಖ ನೋಡಿದರು. ಹಿಂದೆ ಇಂಥ ಪ್ರಯತ್ನಗಳಾದರೂ ಫಲಕಾರಿಯಾಗಿರಲ್ಲಿಲ್ಲ. ಪೂರ್ತಿ ಶಕ್ತಿ ಇಲ್ಲದ ಕೈಕಾಲುಗಳುಳ್ಳ ದೇಹ ಒಂದು ರೀಯಲ್ಲಿ ಶುಷ್ಕವಾಗಿತ್ತು. ಯಾವುದಕ್ಕೂ ಸಹಕಾರ ಸಿಗೋಲ್ಲ.

"ಆಗೋಲ್ಲ.... " ಕಣ್ಣಲ್ಲಿ ನೀರು ತುಂಬಿಕೊಂಡರು.

"ಅಮ್ಮ ಪ್ರಯತ್ನ ಮಾಡೋಣ. ನೆನ್ನೆ ಮೊನ್ನೆ ಮಳೆ ಬಿದ್ದು ಗಾರ್ಡನ್ ಎಷ್ಟು ಚೆಲುವಾಗಿದೆ, ಗೊತ್ತಾ. ಪ್ಲೀಸ್...." ಗೋಗರೆದಳು ಪ್ರೀತಿಯಿಂದ.

ಕೆಲಸದ ಹೆಣ್ಣಾಳು ಮಲ್ಲಿ ಮತ್ತು ಪಂಢರಿಯ ಸಹಾಯದಿಂದ ವಿಶೇಷವಾಗಿ ತಯಾರಿಸಿದ ವ್ಹೀಲ್ ಛೇಲ್ ಮೇಲೆ ಕೂಡಿಸಿದಾಗ ಅವಳೆದೆಯ ಬಡಿತ ನೂರುಪಟ್ಟು ಹೆಚ್ಚಿತ್ತು. ವಿಪರೀತ ಭಯ! ಅಲ್ಪ ಸ್ವಲ್ಪ ಹೆಚ್ಚು ಕಮ್ಮಿಯಾದರೂ ಷೂಟ್ ಮಾಡಿಬಿಡಬಲ್ಲ ಚೈತನ್ಯ.

"ಅಮ್ಮ... " ಹಿಂದಕ್ಕೆ ತಲೆಯೊರಗಿಸಿದರು, ತೀರಾ ನೇತಾಡಿ ಅದರ ಹಿಂದಿನ ಭಾಗಗಳಿಗೆ ಜೋತುಬಿದ್ದು ಹಿಂಸೆಯೆನಿಸುತ್ತ ಕೈಕಾಲುಗಳಲ್ಲಿ ಕನಿಷ್ಟ ನೂರಕ್ಕೆ ಒಂದು ಭಾಗವಾದರೂ ಶಕ್ತಿ ಸಂಚಯವಾಗಿದೆಯೆನಿಸಿತು ಮೊದಲ ಸಲ. ಇದು ನಿಜವಾ ಅಥವಾ ಭ್ರಮೆಯಾ? ಭ್ರಮೆ ಕೂಡ ಆಪ್ಟಿಮಿಸ್ಟ್ ಆಗಿರೋಕೆ ಸಹಕಾರ ನೀಡುತ್ತೆ. ಅದು ಹಾಗೆಯೇ ಉಳಿಯಲಿ ಎಂದು ಕೊಂಡರು. ಪ್ರತಿಯೊಂದು ಗಿಡದ ಬಳಿಯು ಛೇರ್‌ನ ತಂದು ನಿಲ್ಲಿಸಿ, ಎಷ್ಟೋ ಹೇಳುತ್ತಿದ್ದರು. ಸುಬ್ಬಲಕ್ಷ್ಮಿ ಕೂಡ ಮಂಕುತನದಿಂದ ತುಸುವಾದರೂ ವಿಮುಕ್ತಿಗೊಂಡವರಂತೆ ಸಲಹೆ ನೀಡಿದರು. ಇಡೀ ದೀಪಾಂಕುರದ ಆಳುಕಾಳುಗಳೆಲ್ಲ ನೆರೆದರು ಸಂತೋಷ, ಸಂಭ್ರಮದಿಂದ. ಪಂಢರಿ ಪೇಜರ್‌ನಲ್ಲಿ ಸಂದೇಶ ಮುಟ್ಟಿಸಿದ ಯಜಮಾನನಿಗೆ. ಅರ್ಧ ಗಂಟೆಯಲ್ಲಿ ಹಾಜರಾದವನು ಈ ದೃಶ್ಯವನ್ನು ನೋಡಿ ವಿಸ್ಮಿತನಾದ. ಇಂಥ ಸಂತೋಷವನ್ನು ತಾಳಿಕೊಳ್ಳಲಾರದೆ ಹೋದರೂ ಪ್ರಯಾಸದಿಂದ ಸಮಸ್ಥಿತಿಯನ್ನು ಕಾಪಾಡಿಕೊಂಡ.

"ಅಮ್ಮ...." ತಾಯಿಯ ಬಳಿಗೆ ಮೂರು ವರ್ಷದ ಮಗುವಿನಂತೆ ಓಡಿ ಹೋದ. ಆಕೆಯ ಕಣ್ಣುಗಳಲ್ಲಿ ಹೊಸ ಬೆಳಕು ಜೊತೆಗೆ ಗಾಬರಿ ಕೂಡ "ನೋ... ನೋ.... ನಂಗೆ ತುಂಬ.... ತುಂಬ ಸಂತೋಷವಾಗಿದೆ." ವ್ಹೀಲ್ ಛೇರ್‌ನ ಎರಡು ಹಿಡಿಗಳ ಮೇಲು ಕೈಯೂರಿ ಬಗ್ಗಿ ಹೇಳಿದಾಗ, ಅವನ ಕಣ್ಣುಗಳಲ್ಲಿ ಹರ್ಷದ ಬಿಂದುಗಳು ಇದ್ದವು. ಆ ಸಮಯದಲ್ಲಿ ಮಗನ ಕೆನ್ನೆ ಸವರುವಂತಾಗಿದ್ದರೇ, ಕ್ಷಣ ಅನ್ನಿಸಿ ಕೈ ಕಡೆ ನೋಡಿಕೊಂಡರೂ, ಒಂದಲ್ಲ ಒಂದು ದಿನ ಸಾಧ್ಯವಾಗಬಹುದೇನೋ ಎನ್ನುವ ಗಟ್ಟಿ ಆಸೆ ತುಸು ಹೊತ್ತಾದರೂಆಕೆಯಲ್ಲಿ ಮೂಡಿತು.

ಕಣ್ಮಣಿ ವ್ಹೀಲ್ ಛೇರ್‌ನ ಹಿಂದಿನ ಭಾಗದ ಹಿಡಿಯನ್ನು ಬಿಟ್ಟು ದೂರ ಸರಿದಾಗ ಅವನೇ ಸ್ವಲ್ಪ ಹೊತ್ತು ತಳ್ಳಿದ. ಪುಟ್ಟ ಹುಡುಗನಂತೆ ಹರಟಿದ. ಹಿಂದಿನ ದಿನಗಳನ್ನು ನೆನಪಿಸಿಕೊಂಡ. ಹೀಗೆ ಸಂಭ್ರಮಿಸಿದ್ದು ಒಂದು ಅಪರೂಪದ ದೃಶ್ಯವೆ ಆಳುಕಾಳುಗಳಿಗೆ.

ಇಂದು ನೀರಸವಾಗಲಿ, ಕೈಕಾಲುಗಳ ಭಾಗಗಳನ್ನು ನೇರವಾಗಿ ಹೊತ್ತ ಅವಯವಗಳಲ್ಲಿ ನೋವಾಗಲಿ ಕಾಣದ್ದು, ಸುಬ್ಬಲಕ್ಷ್ಮಿಗೆ ಮರು ಹುಟ್ಟೆನಿಸಿತು. ಕೃತಜ್ಞತೆಯಿಂದ ಆಕೆ ನೋಡಿದ್ದು ಕಣ್ಮಣಿಯ ಕಡೆಗೆ. ಕಣ್ಣು ತುಂಬಿತು. ಮನದ ಮಾತಿಗೆ ಭಾಷೆ ಇರಲಿಲ್ಲ. ಅಕ್ಷರಗಳನ್ನು ಕೂಡಿಸಿ ವಾಕ್ಯಗಳನ್ನು ಮಾಡುವ ಕಷ್ಟ ಕೊಡದೇ ನಾಲಿಗೆಗೆ ಕಣ್ಣುಗಳು ತಾವೇ ವಹಿಸಿಕೊಂಡವು ಆ ಜವಾಬ್ದಾರಿಯನ್ನು. ತಲೆ ತಗ್ಗಿತು. ಈ ಸಂತೋಷವನ್ನು ಎಲ್ಲರಿಗಿಂತ ಹೆಚ್ಚಾಗಿ ಅನುಭವಿಸುತ್ತಿದ್ದಳು ಕಣ್ಮಣಿ.

"ಫೋನಿದೆ.... ಫೋನಿದೆ" ಪಂಢರಿ ಓಡಿ ಬಂದು ಅವಳಿಗೆ ಮಾತ್ರ ಕೇಳುವಂತೆ ವಿಷಯ ಮುಟ್ಟಿಸಿದನು "ತುಂಬ ಗಾಬ್ರಿಯಾಗಿದ್ದಂತೆ ಕಂಡಿತು, ಆ ಹುಡ್ಗಿ, ಯಾಕೋ ಅಳ್ತಾ ಇದ್ಲು" ಇನ್ನಷ್ಟು ವಿಷಯ ತಿಳಿಸಿದ. ಅತ್ತಿತ್ತ ನೋಡಿದಳು. ಬಗ್ಗಿ ತಾಯಿಯೊಂದಿಗೆ ಚೈತನ್ಯ ಮಾತಾಡುತ್ತಿದ್ದುದ್ದರಿಂದ ಈ ಕಡೆ ಇರಲಿಲ್ಲ ಗಮನ. ಮೆಲ್ಲಗೆ ಸರಿದು ಒಳಗೆ ಹೋದಾಗ ಪಂಢರಿ ಹಿಂಬಾಲಿಸಿದ.

"ಹಲೋ... ವಾಸಂತಿ" ಎಂದಳು.

"ಪ್ಲೀಸ್ ಕಣ್ಮಣಿ, ಬೇಗ್ಬಾ" ಅಳಲು ಶುರು ಮಾಡಿದಳು. "ಯಾಕೆ, ಏನಾಗಿದೆ?" ಇವಳ ಪ್ರಶ್ನೆಗೆ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ "ಈಗ್ಬರ್ತೀನಿ" ಫೋನಿಟ್ಟು ಪಂಢರಿಯ ಕಡೆ ಹರಿಸಿದಳು ದೀನ ನೋಟ.

"ವಿಷ್ಯ ಏನೇ ಇದ್ದರೂ ಇದ್ದಕ್ಕಿದ್ದಂತೆ ಹೊರಡೋದು ಕಷ್ಟ. ಈ ವಿಚಾರದಲ್ಲಿ ಹೇಗೆ ಸಹಾಯ ಮಾಡ್ಲಿ? ಅಮ್ಮನ ಕಿವಿಗೆ ಒಂದ್ಮಾತು ಹಾಕಿ ಹೋಗ್ಬಿಟ್ರೆ... ಅವರು ಮ್ಯಾನೇಜ್ ಮಾಡ್ಕೋತಾರೆ. ಸದ್ಯಕ್ಕೆ ಅದೊಂದೇ ದಾರಿ" ಸೂಕ್ತವಾದ ಸಲಹೆ ಕೊಟ್ಟ.

ಈಗ ಸಿಸ್ಟರ್ ಕೂಡ ಇಲ್ಲದಿದ್ದರಿಂದ ಸುಬ್ಬಲಕ್ಷ್ಮಿಯ ಎಲ್ಲಾ ಜವಾಬ್ದಾರಿ ಇವಳದೇ ಆಗಿತ್ತು. ಯಾಕೋ ಏನೋ ಒಂದು ರೀತಿಯ ಭಯ. ಸಂಧಿಗ್ದತೆಯನ್ನು ಅರಿತ ಪಂಢರಿ ಆ ಹೊಣೆಯನ್ನು ತಾನು ಹೊತ್ತ.

"ನಾನ್ಹೇಳಿ, ಪರ್ಮಿಷನ್ ತಗೊಂಡ್ಬರ್ತೀನಿ" ಹೋದ.

ಹಿಂದಿರುಗಿದ್ದು ಹತ್ತು ನಿಮಿಷಗಳ ತರುವಾಯ "ಹೇಳ್ದ ಕೂಡ್ಲೆ, ಯಜಮಾನರ ಹುಬ್ಬು ಹೇಗೆ ಗಂಟು ಆಯಿತೂಂತೀರಾ? ಅಮ್ಮಾವರು ಒಂದ್ಮಾತು ಹೇಳಿದ್ಮೇಲೆ ಒಪ್ಪಿಗೆ ಸಿಕ್ಕಿದ್ದು. ಹೋಗಿ, ಬೇಗ ಹಿಂದಿರುಗೋಕೆ ಹೇಳಿದ್ದಾರೆ. ಡ್ರೈವರ್‌ಗೆ ಹೇಳಿದ್ದೀನಿ, ಕಾರಿನಲ್ಲಿ ಹೋಗಿ ಕಾರಿನಲ್ಲಿ ಬಂದ್ಬಿಡ್ತೀನಿ. ಈಗ ಔಷ್ಧಿಯಿಂದ ವ್ಯಾಯಾಮದವರ್ಗೂ ಅಮ್ಮನಿಗೆ ನೀವೇ ಮಾಡ್ಬೇಕು. ಕೆಲವು ಲಕ್ಷಗಳು ಲಾಸ್ ಆದರೂ ತಡೆದುಕೊಂಡಾರು. ಇದ್ನ ಮಾತ್ರ ಸೈರಿಸರು. ಅದ್ನ ನೆನಪಿನಲ್ಲಿ ಇಟ್ಕೊಳ್ಳಿ" ಎಚ್ಚರಿಕೆಯ ಜೊತೆಗೆ ಎರಡು ಬುದ್ಧಿ ಮಾತುಗಳನ್ನು ಸೇರಿಸಿದ.

ಕಣ್ಣೀರು ತೊಡೆದುಕೊಂಡು ಅವಸರದಿಂದ ಹೊರಗೆ ಬಂದ ಕಣ್ಮಣಿ ಸುಬ್ಬಲಕ್ಷ್ಮಿಯವರ ಬಳಿಗೆ ಧಾವಿಸಿದಾಗ "ಹೋಗ್ಬಾ, ಚೈತನ್ಯ ಇದ್ದಾನೆ" ಮಗನತ್ತ ನೋಡಿದರು. ಅವಳು ಮಾತ್ರ ಆ ಕಡೆ ನೋಟ ಹರಿಸುವ ಧೈರ್ಯ ತೋರಲಿಲ್ಲ.

ಕಾರಿನಲ್ಲಿ ಚೈತನ್ಯ ತಂದೆಯ ಹುಟ್ಟಿದ ಹಬ್ಬದ ದಿನ ದೇವಸ್ಥಾನಕ್ಕೆ ಹೋಗಿದ್ದಷ್ಟೆ. ಇಂದು ಕಂಪನಿಯ ಕಾರು ಏರುವ ಯೋಗ ಬಂದಿತ್ತು. ಆ ಹರ್ಷವನ್ನು ಅನುಭವಿಸುವ ಸ್ಥಿತಿಯಲ್ಲಿರಲಿಲ್ಲ. ವಾಸಂತಿ 'ಬಾ....' ಎಂದಿದ್ದಳೇ ವಿನಃ ಎಲ್ಲಿಗೆ ಏನೂಂತ ಹೇಳಿರಲಿಲ್ಲ. ನಂದಿನಿ ಟೆಕ್ಸ್‌ಟೈಲ್‌ಗೆ ಹೋಗುವುದಾ, ಅಥವಾ ಹಾಸ್ಟಲ್ ಮುಂದೆ ಇಳಿಯುವುದಾ? ಸದ್ಯ ಎರಡರಲ್ಲಿ ಒಂದು ಕಡೆ ಇಳಿದು ಕಾರನ್ನು ವಾಪಸು ಕಳಿಸಿ ನಂತರ ಯೋಚಿಸುವ ತೀರ್ಮಾನಕ್ಕೆ ಬಂದವಳೇ, ಹಾಸ್ಟಲ್ ಅಡ್ರೆಸ್ ಹೇಳಿದವಳು ಅಲ್ಲಿ ಇಳಿದು ಹಿಂದಕ್ಕೆ ಹೋಗುವಂತೆ ಹೇಳಿದಳು.

"ಹಾಗೇ ಕರ್ಕೊಂಡ್ಬರೋಕೆ ಹೇಳಿದ್ದಾರೆ" ಎಂದು ಇಂಜಿನ್ ಆಫ್

ಮಾಡಿದ. ಅವಳಿಗೆ ಪ್ರಾಣಸಂಕಟ. ಅವಳಿನ್ನು ವಾಸಂತಿಯನ್ನು ಭೇಟಿ ಮಾಡಿಯೇ ಇಲ್ಲ. ಅಂಥದ್ದರಲ್ಲಿ ಕಾರನ್ನು ಎಷ್ಟು ಹೊತ್ತು ನಿಲ್ಲಿಸಿಕೊಳ್ಳುವುದು "ಏನು ಬೇಡ, ನನ್ನ ಫ್ರೆಂಡ್ ಹತ್ರ ಟೂ - ವೀಲರ್ ಇದೆ. ಅದ್ರಲ್ಲಿ.... ಬರ್ತೀನಿ" ಹೇಳಿದಳು. ಐದು ನಿಮಿಷ ಸುಮ್ಮನಿದ್ದ. ಅಲ್ಲಿ ಕಾರು ಖಾಲಿಯಾಗುವುದು ಅವಳಿಗೆ ಬೇಕಿತ್ತು.

"ಆದಷ್ಟು ಬೇಗ್ಬರ್ತೀನಿ" ಇನ್ನೊಮ್ಮೆ ಹೇಳಿದಳು.

ಕಾರಿನ ಚಕ್ರಗಳು ಮುಂದಕ್ಕೆ ಉರುಳಿದಾಗ ಎದೆಯ ಮೇಲೆ ಕೈಯಿಟ್ಟುಕೊಂಡು ಸಮಾಧಾನದ ಉಸಿರು ದಬ್ಬಿ ಹಾಸ್ಟಲ್ ಗೇಟು ತೆರೆದುಕೊಂಡು ಒಳಗೆ ಹೋದಾಗ, ಆಗಲೇ ಕೆಲವರು ಬಂದಿದ್ದರು. ಮಾತು, ನಗು ಜೊತೆ ಅಡಿಗೆ ಮನೆಯಿಂದ ಕಾಫಿಯ ಘಮಲು ಎಲ್ಲಾ ಇತ್ತು. ಹೇಗೆ ಹೋಗಿ ರೂಮನ್ನು ತಲುಪಿದಳೋ, ಬಾಗಿಲು ತೆರೆದ ವಾಸಂತಿಯನ್ನು ದಂಗುಬಡಿದು ಹೋದಳು. ಅಸ್ತವ್ಯಸ್ತ ಕೂದಲು, ಕಳೆಗೆಟ್ಟ ಮುಖ, ಅತ್ತು ಬಾತುಕೊಂಡ ಕೆನ್ನೆಗಳು. ಏನಾಗಿದೆ ಇವಳಿಗೆ? ಪ್ರಶ್ನಿಸಲಾರದೆ ಹೋದಳು.

ಇವಳಿಗೆ ಜೋತುಬಿದ್ದು ವಾಸಂತಿ ಅಳತೊಡಗಿದಳು. "ನನ್ನ ಬ್ಲಾಕ್‌ಮೇಲ್ ಮಾಡ್ತಾ ಇದ್ದಾನೆ, ಕರ್ಣ. ನಾನು ಅವ್ನ ಮಾತು ಕೇಳದಿದ್ದರೇ, ನನ್ನ ಹಾಳು ಮಾಡ್ತಾನಂತೆ".

ಕಣ್ಮಣಿ ಸ್ತಬ್ಧವಾದಳು. ಕರ್ಣ ಒಬ್ಬ ಪೆಕ್ಯೂಲಿಯರ್ ವ್ಯಕ್ತಿಯೆಂದುಕೊಂಡಿದ್ದರೂ, ಬುದ್ಧಿವಂತ ಅಂದುಕೊಂಡೇನು ಇರಲಿಲ್ಲ. ಇವಳ ಮೇಲಿನ ಪ್ರೇಮದಿಂದಲೋ, ಮೋಹದಿಂದಲೋ ಈ ದಾರಿ ಆರಿಸಿಕೊಂಡಿದ್ದಾನೆ? ಅಥವಾ ತನಗೇ ಹೆಚ್ಚು ಉಪಯೋಗಕ್ಕೆ ಬರಬಹುದು ಎನ್ನುವ ಕಾರಣದಿಂದ ಅವಳನ್ನು ಬೆದರಿಕೆಯಾಡ್ದಾದರೂ ಮದುವೆಯಾಗುವ ಇಚ್ಛೆ ಹೊಂದಿದ್ದಾನೆ?

"ನಮ್ಮ ಹುಟ್ಟು, ಬದ್ಕು ಎಲ್ಲಾ ಪಾರದರ್ಶಕ. ಅಂಥದ್ದರಲ್ಲಿ ಬ್ಲಾಕ್‌ಮೇಲ್ ಮಾಡೋಕ್ಕೇನಿದೇ? ಅವ್ನು ಸೈಕಿಕ್ ಅಷ್ಟೆ. ನೀನು ಹೇಳಿದಂತೆ ಕಾಲಿನದು ಕಳಚಿಕೊಳ್ಳಬೇಕಿತ್ತು. ಬೇರೆ ಹೆಣ್ಣು ಮಕ್ಕಿಗಿಂತ ನಾಲ್ಕು ಪಟ್ಟು ಧೈರ್ಯ ನಮ್ಮಗಳಿಗೆ ಇರ್ಬೇಕೂಂತ ಹೇಳ್ತಾ ಇದ್ದೆ" ಧೈರ್ಯದ ಮಾತುಗಳನ್ನು ಹೇಳಿದಳು.

ವಾಸಂತಿ ಬಡಬಡಿಸುತ್ತಿದ್ದ ಅವಳೇ ಏನಃ ಏನು ಮಾತಾಡಲಿಲ್ಲ.

ಕರ್ಣನಿಗೆ ಬಹಳ ಹೆದರುವಂತೆ ಕಂಡದ್ದು ಸೋಜಿಗವೆನಿಸಿತು. ಬಿಕ್ಕುತ್ತಲೇ ಅವನು ಕೊಡುವ ಕಿರುಕುಳ ಹಾಕುವ ಬೆದರಿಕೆಗಳನ್ನು ಹೇಳಿಕೊಂಡಳು.

"ಅವ್ನು ಸುಮ್ನೆ ಪದೇ ಪದೇ ಬಂದರೇ, ತಮಗೆ ರಿಸ್ಕ್ ಬೇಡವೆಂದು ಕೆಲಸದಿಂದ ತೆಗ್ದು ಬಿಡ್ಬಹ್ದು. ಮುಂದೆ ನನ್ಗತಿ ಫುಟ್‌ಪಾತ್" ನಿಸ್ಸಹಾಯಕತೆಯ ದಟ್ಟ ಛಾಯೆಯಲ್ಲಿ ಮಿಂದಂತೆ ಉಸುರಿದಳು.

ಕಣ್ಮಣಿ ಅವಳ ಕೈ ಹಿಡಿದುಕೊಂಡು "ನಂಗೆ ಕೆಲ್ಸವಿದೆ, ನೀನು ಫುಟ್‌ಪಾತ್‌ಗೆ ಬೀಳಬೇಕಿಲ್ಲ. ಜಗತ್ತು ವಿಶಾಲವಾಗಿದೆ, ಬೇರೆ ಕಡೆ ಕೆಲ್ಸಕ್ಕಾಗಿ ಪ್ರಯತ್ನ ಮಾಡೋಣ. ಸುಮ್ನೆ ದಿಕ್ಕೆಟ್ಟು ಕರ್ಣನ ಬೆದರಿಕೆಗಳಿಗೆ ಅಂಜೋದು ಬೇಡ" ಧೈರ್ಯ ಹೇಳಿದಳು. ಆದರೂ ವಾಸಂತಿ ಚೇತರಿಸಿಕೊಳ್ಳಲಿಲ್ಲ.

ಆಗಾಗ ವಾಚ್‌ನ ಕಡೆನೆ ನೋಡುತ್ತಿದ್ದ ಗೆಳತಿಯ ಕೈ ಹಿಡಿದುಕೊಂಡು "ಪ್ಲೀಸ್, ಒಂದೆರಡು ದಿನವಾದ್ರೂ ರಜ ಹಾಕಿ ನನ್ಜೊತೆ ಇದ್ಬಿಡು, ರೂಪ ಊರಿಗೆ ಹೋಗಿದ್ದಾಳೆ" ರಿಕ್ವೆಸ್ಟ್ ಮಾಡಿಕೊಂಡಳು. ಸಾಧ್ಯನಾ? ಖಂಡಿತ ಸಾಧ್ಯವಿಲ್ಲವೆನಿಸಿತು. ಸಿಸ್ಟರ್‌ನ ಕೆಲಸದಿಂದ ತೆಗೆಯುವ ಮುನ್ನ ಸುಬ್ಬಲಕ್ಷ್ಮಿಯ ಪೂರ್ತಿ ಜವಾಬ್ದಾರಿಯನ್ನು ಒಪ್ಪಿಸಿದ್ದ. ಸಮ್ಮತಿಸಿದ್ದಳು. ಈಗ ಕಳಚಿಕೊಳ್ಳುವ ಯಾವ ಪ್ರಯತ್ನ ಮಾಡಿದರೂ ಬೇರೆ ವಿಧದಲ್ಲಿ ಇವಳನ್ನು ತರಿಸಿ ತಾಯಿಯ ಮುಂದೆ ನಿಲ್ಲಿಸುವಂಥ ಮಗ ಚೈತನ್ಯ. ಅಲ್ಲಿ ಬದುಕಿನ ಅರ್ಥ ಕಂಡುಕೊಂಡಿದ್ದ ಕಣ್ಮಣಿ ಯಾವುದೇ ಕಾರಣಕ್ಕೆ, ಯಾವುದೇ ಸಮಯದಲ್ಲಿ ಹೊರಗೆ ಉಳಿಯಲಾರಳು.

"ಪ್ಲೀಸ್ ಅರ್ಥ ಮಾಡ್ಕೋ, ಸುಬ್ಬಲಕ್ಷ್ಮಿ ನನ್ಮೇಲೆ ಹೇಗೆ ನಂಬಿಕೆ ಇಟ್ಟರೋ, ಡಾಕ್ಟರ್-ನರ್ಸ್‌ನ ಕೂಡ ಬೇಡಾಂದ್ರು. ಅಂಥದ್ದರಲ್ಲಿ ಚೈತನ್ಯ ನ್ಯಾಯಾಲಯದಲ್ಲಿ ನಂಗೆ ಮರಣದಂಡನೆ ವಿಧಿಸಿದ್ದರೂ ಹೆಚ್ಚಲ್ಲ. ಅಮ್ಮ ಇನ್ನಷ್ಟು ಚೇತರ್ಸಿಕೊಳ್ಳೋವರ್ಗೂ ನಾನು ಇಲ್ಲಿಗೆ ಬರೋದು ಕೂಡ ಕಷ್ಟವಾಗುತ್ತೆ" ತನ್ನ ಸ್ಥಿತಿಯನ್ನು ತೋಡಿಕೊಂಡಳು.

ವಾಸಂತಿಗೆ ಒಂದಿಷ್ಟು ಕೋಪ, ಬೇಸರವೇ ಕಣ್ಮಣಿಯ ಬಗ್ಗೆ. ಅದಕ್ಕೆ ಮುಖ್ಯ ಕಾರಣ ಗೊತ್ತಿದ್ದರಿಂದ ಹಿಂಜರಿದಳು. ಎರಡನೆ, ಮೂರನೆ ತಿಂಗಳ ಸಂಬಳವನ್ನು ಕೂಡ ತಂದು ಇವಳ ಕೈಯಲ್ಲಿಟ್ಟಂಥ ಶುದ್ಧ ಸ್ನೇಹ ಅವಳದು. ಎಷ್ಟೇ ಬೇಗ ಅಂದುಕೊಂಡರೂ ರಾತ್ರಿಯ ಎಂಟು. ಎಂಟು-ಎಂಟೂವರೆಯ ಮಧ್ಯ ಸುಬ್ಬಲಕ್ಷ್ಮಿಯವರ ರಾತ್ರಿಯ ಊಟ.

ಮೈನ್ ಗೇಟು ದಾಟಿದವಳು ಓಡಿಯೆ ಬಾಲ್ಕನಿ ತಲುಪಿದ್ದು. ಮೆಲ್ಲಗೆ ಅವಳ ನೋಟ ಮುಂದಿದ್ದ ಆಫೀಸ್‌ನ ಕಡೆ ಹರಿಯಿತು. ಚೈತನ್ಯ ತುಂಬ ಬಿಜಿಯಾಗಿದ್ದಾರೆಯೆನ್ನುವುದಕ್ಕೆ ಹೊರಗಿನ ಕಿತ್ತಲೆ ಬಣ್ಣದ ಪುಟ್ಟ ಬಲ್ಬ್ ಮಿಣಕ್ ಮಿಣಕ್ ಎನ್ನುತಿತ್ತು. ರೂಮಿಗೆ ಹೋಗಿ ಕೈಕಾಲು ಮುಖ ತೊಳೆದು ಬಟ್ಟೆ ಬದಲಾಯಿಸಿಯೇ ಸುಬ್ಬಲಕ್ಷ್ಮಿಯ ರೂಮಿಗೆ ನುಗ್ಗಿದ್ದು. ಆ ಕೋಣೆಯ ಶುಚಿತ್ವ ಕಾಪಾಡುವ ದೃಷ್ಟಿಯಿಂದಲೇ ಹೊರಗಿನ ಉಡುಪುಗಳು ಅಲ್ಲಿಗೆ ಸಲ್ಲುತ್ತಿರಲಿಲ್ಲ.

ದೇವಿ ಸ್ತುತಿಯನ್ನು ಕೇಳುತ್ತಿದ್ದ ಆಕೆ ಕಣ್ಣು ಮುಚ್ಚಿದ್ದರಿಂದ ಪ್ರಶಾಂತವಾಗಿ ಕಂಡರು. ತುಸು ಹೊತ್ತೇನು ಆ ಟೇಪ್ ಮುಗಿಯುವವರೆಗೂ ಕಣ್ತೆರೆಯಲಿಲ್ಲ.

"ಆಗ್ಲೇ ಬಂದ್ಯಾ?" ಎಂದಾಗಲೇ ತಲೆ ಎತ್ತಿದ್ದು. "ಬಂದೇ, ಡಿನ್ನರ್ ವೇಳೆ ಆಯ್ತು" ದಢ ದಢ ಒಳಗೆ ಹೋಗಿ ಪಂಢರಿ ರೆಡಿ ಮಾಡಿಟ್ಟಿದ್ದ ಟ್ರಾಲಿಯನ್ನು ತಳ್ಳಿಕೊಂಡು ಬಂದಳು. ಹಾಲು, ಹಣ್ಣು, ಚಪಾತಿ ಅಂಥದಿದ್ದರೇನಾದರೂ ತಿನ್ನುತ್ತಿದ್ದರು ಸ್ವಲ್ಪ. ಇಷ್ಟು ಫುಡ್ ತಗೊಂಡರು, ಇಂಥದನ್ನ ತಿಂದರು ಎಂದು ಚಾರ್ಟ್‌ನಲ್ಲಿ ನಮೂದಾಗಬೇಕು. ಚಾರ್ಟ್ ಹಿಂದೆ ಆಕೆಯ ಪಕ್ಕದ ಟೇಬಲು ಮೇಲಿರುತ್ತಿತ್ತು. ಈಗ ಕಣ್ಮಣಿಯ ರೂಮಿನಲ್ಲಿರುತ್ತಿತ್ತು. ಮಾಹಿತಿಯ ಚಾರ್ಟನ್ನು ಪ್ರತಿ ದಿನ ಬೆಳಿಗ್ಗೆ ಚೈತನ್ಯಗೆ ಒಪ್ಪಿಸಿ ಅವನ ಸಲಹೆ, ಸೂಚನೆಗಳನ್ನು ಪಡೆದುಕೊಳ್ಳಬೇಕಿತ್ತು.

ಅಷ್ಟರಲ್ಲಿ ಮಲ್ಲಿ ಬಂದಳು. ಅವಳ ಸಹಾಯದಿಂದ ಸ್ವಲ್ಪ ಒರಗಿರುವಂತೆ ಮಂಚವನ್ನು ಮೇಲೆತ್ತಿ, ಬಿಳಿಯ ಸ್ವಚ್ಛವಾಗಿ ಹೊದಿಕೆ ಹೊದ್ದಿಸಿ, ಮೊದಲು ನೀರು ಕುಡಿಸಿ ಬಿಸಿ ಬಿಸಿ ಚಪಾತಿಯೊಂದನ್ನು ತಿನ್ನಿಸಿ, ಪಂಢರಿ ತಯಾರು ಮಾಡಿದ ಸಾಸ್ ಕುಡಿಸಿ ನಂತರ ಹಾಲು ಕುಡಿಸಿದಾಗ ಆಕೆಯ ಊಟ ಮುಗಿಯಿತು.

ಬಂದ ಪಂಢರಿಯನ್ನು ವಿಚಾರಿಸಿದರು "ಮೀಟಿಂಗ್ ಮುಗೀತಾ? ಯಾವ್ದೇ ಟೆನ್‌ಷನ್ ಇರಲೀ... ಚೈತನ್ಯನ ಊಟದ ಬಗ್ಗೆ ನಿಗಾ ಇರಲೀ. ಅವ್ನಿಗೊಂದು ಮದ್ವೆಯಾಗಿದ್ರೆ ನನ್ನ ಚಿಂತೆ ಕಡ್ಮೆಯಾಗಿರೋದು" ತೋಡಿಕೊಂಡರು. ಪಂಢರಿ ಈ ಮಾತಿಗೆ ಪ್ರತಿಕ್ರಿಯಿಸಲಾರ ಮುಂದೆ ಯಜಮಾನರು ವಿವಾಹವಾಗಬಹುದೆನ್ನುವುದು ಅವನ ಮಟ್ಟಿಗೆ ಸಂದೇಹ.

"ನೋಡ್ಕೋತೀನಿ, ಅಮ್ಮ" ಹೊರಗೆ ಹೋದ.

ಆಮೇಲೆ ಕಣ್ಮಣಿಯ ಕಡೆ ಗಮನ ಹರಿಸಿದರು "ಏನಾಗಿದೆ... ನಿನ್ನ ಫ್ರೆಂಡ್‌ಗೆ?" ಹೇಳಲೋ ಬೇಡವೋ ಎಂದು ಸಂಕೋಚಿಸಿದಾಗ "ಪರ್ವಾಗಿಲ್ಲ ಹೇಳು! ನನ್ನಿಂದ ಸಹಾಯವಾಗ್ದಿದ್ರೂ ಅಪಕಾರವಂತೂ ಆಗೋಲ್ಲ" ಕೇಳುವ ಉತ್ಸಾಹ ವ್ಯಕ್ತಪಡಿಸಿದರು.

ಬಹಳ ಸಂಕ್ಷಿಪ್ತವಾಗಿಯೆಂದರೆ ನಾಲ್ಕಾರು ವಾಕ್ಯಗಳಲ್ಲಿ ವಾಸಂತಿ ಪರಿಸ್ಥಿತಿ, ಮನಃಸ್ಥಿತಿ, ಕರ್ಣನ ಬಗ್ಗೆ ಸ್ವಲ್ಪ ಡೀಟೈಲ್ಲಾಗಿಯೇ ಹೇಳಿದಾಗ ಆಕೆ ನಕ್ಕುಬಿಟ್ಟರು.

"ಪ್ರೇಮಕ್ಕೆ ಕಣ್ಣಿಲ್ಲ ಅಂತಾರೆ. ಅವ್ನ ಬಗ್ಗೆ ಏನು ಗೊತ್ತಿಲ್ದೆ ಈ ಹೆಣ್ಣು ಹೇಗೆ ಬಿದ್ಲು, ಬಲೆಯಲ್ಲಿ? ಆರ್ಥಿಕ ಸ್ವಾವಲಂಬನೆಯತ್ತ ಗಮನ ಕೊಡಬೇಕಿತ್ತು. ವಿವಾಹಿತ ಜೀವನ ಬೇಸರವಾಗಿ ಹೊರಗೆ ಬಂದರೂ ಜೀವಿಸಬಲ್ಲೆ ಎನ್ನುವ ಮನೋ ಧೈರ್ಯಕ್ಕೆ ಇಂಬಾಗಿ ಸಂಪಾದನೆ ಬೇಕು. ಸರಿಯಾದ ದೃಷ್ಟಿಯಲ್ಲಿ ಜೀವನವನ್ನು ನೋಡದಿದ್ದರೇ ಬರೀ ಗೋಜಲು.... ಗೋಜಲು" ಅವಳ ಬಗ್ಗೆ ಪರಿತಾಪಪಟ್ಟರು.

ಮಾರನೆಯ ದಿನ ಸುಬ್ಬಲಕ್ಷ್ಮಿಯವರಿಗೆ ವ್ಯಾಯಾಮ ಮುಗಿಸಿ ರೂಮಿನಿಂದ ಹೊರ ಬರುತ್ತಿದ್ದಾಗ ಎದುರಾದ ಚೈತನ್ಯ ರಾತ್ರಿಯ ನಿಲುವಂಗಿಯಲ್ಲಿಯೇ ಇದ್ದ. "ನಿನ್ನ ಫ್ರೆಂಡ್‌ನ ಬಯೋಡಟಾ ತಗೊಂಡ್ಬಂದು ನಾಳೆ ಹನ್ನೆರಡು ಗಂಟೆಗೆ ಆಫೀಸ್‌ನಲ್ಲಿ ನೋಡೋಕೆ ಹೇಳು. ಡೋಂಟ್ ಫರ್‌ಗೆಟ್" ಎಂದ. ಸರಿಯೆನ್ನುವಂತೆ ತಲೆಯಾಡಿಸಿದವಳಿಗೆ ಕುಣಿದಾಡು ವಷ್ಟು ಸಂತೋಷ. ವಾಸಂತಿಗೆ ಒಂದು ಕೆಲಸ ಸಿಗಬಹುದು. ತಕ್ಷಣ ಫೋನಾಯಿಸಲು ಮುಂದಿನ ವರಾಂಡಕ್ಕೆ ಬಂದಳು. ಅದು ಸಫರೇಟ್ ಲೈನ್.

"ಸ್ವಲ್ಪ ವಾಸಂತಿನಾ ಕರೀರೀ ಮೇಡಮ್" ಹಾಸ್ಟಲ್‌ನ ವಾರ್ಡನ್‌ಗೆ ಹೇಳಿದಳು. "ಅಕಸ್ಮಾತ್ ಸಿಗದಿದ್ರೆ ಮತ್ತೆ ಫೋನ್ ಮಾಡ್ತೀನಿ. ಅಥವಾ ತಕ್ಷಣ ಮಧ್ಯಾಹ್ನ ಲಂಚ್ ಬ್ರೇಕ್‌ನಲ್ಲಿ 'ದೀಪಾಂಕುರ'ಕ್ಕೆ ಬರೋಕೆ ಹೇಳಿ. ತೀರಾ ಪರ್ಸನಲ್..... ತೀರಾ ಅರ್ಜೆಂಟ್!" ಹೇಳಿ ಇಟ್ಟೇ ಬಿಟ್ಟಳು.

'ಯಜಮಾನರು ಎಷ್ಟು ಧಾರಾಳಿಯೋ, ಅಷ್ಟೇ ಸೂಕ್ಷ್ಮ ಅಶಿಸ್ತನ ಸಹಿಸೋದೆ ಇಲ್ಲ' ಪಂಢರಿ ಹೇಳಿದ ಮಾತುಗಳು. ತಾನು ಹೊರ ಹೋಗಬೇಕಾಗಿ ಬಂದರೇ, 'ನೋ' ಅದನ್ನು ಅವಳು ಸಹಿಸಳು. ಚೈತನ್ಯ ಇರುವ ಬಂಗ್ಲೆಯಲ್ಲಿಯೇ ಇದ್ದು, ಅಲ್ಲೇ ಸಾಯುವ ಆಸೆ. ಅವನನ್ನು

ಮೊದಲ ಸಲ ನೋಡಿದ ನಂತರ ಅವಳಲ್ಲಿ ಬೇರೆ ಯಾವುದೇ ಕನಸುಗಳು ಉಳಿಯಲಿಲ್ಲ. ಮತ್ತೆ ಕನಸುಗಳು ಚಿಗುರೊಡೆಯಲು ಸಾಧ್ಯವಿಲ್ಲವೆಂದು ನಿಖರವಾಗಿ ಹೇಳಬಲ್ಲಳು.

ವಿಷಯ ಮುಟ್ಟಿದ ವಾಸಂತಿ ನೇರವಾಗಿ ಅನುಮಾನಿಸುತ್ತಲೇ ಬಂದಳು ದೀಪಾಂಕುರಕ್ಕೆ. ಕೋಟ್ಯಾಧಿಪತಿಯ ಬಂಗ್ಲೆ. ಆರಾಮಾಗಿ ಒಳಗೆ ಹೋಗಲು ಸಾಧ್ಯವಿಲ್ಲ. ವಾಚ್‌ಮನ್‌ಗೆ ಇನ್‌ಫಾರ್ಮೇಷನ್ ಕೊಟ್ಟು ಅವನು ಪಂಢರಿಯ ಜೊತೆ ಸಂಭಾಷಣೆ ನಡೆಸಿದ ನಂತರವೇ ಗೇಟ್ ಓಪನ್ ಆಗಿದ್ದು. ಇಬ್ಬರು ಸೆಕ್ಯೂರಿಟಿಯವರಿದ್ದರು ಒಳ ಭಾಗದಲ್ಲಿ. ಇವಳು ಬಾಲ್ಕನಿ ತಲುಪುವ ವೇಳೆಗೆ ಕಣ್ಮಣಿಗೆ ವಿಷಯ ಮುಟ್ಟಿ ಹೊರಗೆ ಬಂದಿದ್ದಳು.

ಕೈ ಹಿಡಿದು ಗಾರ್ಡನ್ ಒಂದು ಭಾಗಕ್ಕೆ ಕರೆದೊಯ್ದು. "ನಾಳೆ ಹನ್ನೆರಡು ಗಂಟೆಗೆ ಸರ್ಯಾಗಿ ಹೋಗಿ. 'ಚೈತನ್ಯ ಗ್ರೂಪ್ ಆಫ್ ಕಂಪನೀಸ್'ನ ಮ್ಯಾನೇಜಿಂಗ್ ಡೈರೆಕ್ಟರ್ ಮುರುಳಿ ಕೃಷ್ಣ ಚೈತನ್ಯ ಅವರ್ನ ನೋಡೋಕೆ ಅಪಾಯಿಂಟ್‌ಮೆಂಟ್ ಸಿಕ್ಕಿದೆ. ಮಿಸ್ ಮಾಡಿಕೊಳ್ಳದೇ ಹೋಗಿ ನೋಡು. ನಿಂಗೆ ಅಪಾಯಿಂಟ್‌ಮೆಂಟ್ ಸಿಗ್ಬಹುದ್ದು" ತಮಟೆಯೊಡೆದಂತೆ ಹೇಳಿ ಮುಗಿಸಿದರೂ ಮೃದಂಗದ ವಾದನದಂತೆ ಗೋಚರವಾಯಿತು ಅವಳಿಗೆ.

"ನಿಜನಾ ಹೇಳ್ತಾ ಇರೋದು? ಆ ಮನುಷ್ಯ ಬೆಂಕಿ ನವಾಬ ಅಂತಾರೆ. ಅಷ್ಟಿಷ್ಟು ವಿಚಾರ್ಸಿಕೊಂಡಿದ್ದೀನಿ. ವಯಸ್ಸು ನಲವತ್ತಾದ್ರೂ ಬ್ರಹ್ಮಚಾರಿ. ಇದೆಲ್ಲ ಹೇಗೆ ಗೊತ್ತಾಯ್ತೂಂತ ಅಂದ್ಕೋಬೇಡ. ಚೈತನ್ಯ ಗ್ರೂಪ್ ಆಫ್ ಕಂಪನೀಸ್‌ನ ಮೈನ್ ಆಫೀಸ್‌ನಲ್ಲಿ ಕೆಲ್ಸ ಮಾಡೋ ಸ್ಟೆನೋ.... ನಮ್ಮ ಅಂಗಡಿಯ ಪರ್ಮನೆಂಟ್ ಕಸ್ಟಮರ್. ನಿಂಗೋಸ್ಕರನೆ ಒಂದಿಷ್ಟು ವಿಷ್ಯ ಸಂಗ್ರಹ ಮಾಡ್ಕೊಂಡೆ" ಮೆಲು ದನಿಯಲ್ಲಿ ಹೇಳಿದಳು.

"ಅವೆಲ್ಲ ಬಿಡು! ಒಂದು ಒಳ್ಳೆ ಕೆಲ್ಸ ಇದ್ದರೇ ಭವಿಷ್ಯದ ಬಗ್ಗೆ ಆತಂಕ ಇರೋಲ್ಲ. ಕರ್ಣನನ್ನು ಧೈರ್ಯವಾಗಿ ಎದುರಿಸಬಲ್ಲೆ."

ಕಣ್ಮಣಿಯ ಮಾತು ಸರಿಯೆನಿಸಿತು ಅವಳಿಗೆ.

ಅಷ್ಟರಲ್ಲಿ ಬಂದು ಇಣುಕಿದ ಪಂಢರಿ ಕೈ ಸನ್ನೆಯಿಂದ ಬರಲು ಹೇಳಿ, "ನಿನ್ನ ಫ್ರೆಂಡ್‌ಗೆ ಟೀ ಕೊಟ್ಟು ಕಳ್ಸೂಂತ ಅಮ್ಮ ಹೇಳಿದರು. ಯಾರ್ದೂ ಇಲ್ದ ಸೌಭಾಗ್ಯ ನಿಂದು. ವೆಯಿಟಿಂಗ್ ರೂಮಿನಲ್ಲಿ ಕೂಡ್ಸು".

ಅವನು ಹೋದತ್ತಲೇ ಇಬ್ಬರು ನೋಡಿದರು.

"ಯಾರು ಈ ಮನುಷ್ಯ?" ವಾಸಂತಿ ಪ್ರಶ್ನಿಸಿದಳು.

"ಕುಕ್ ಅಂತ ಕನ್‌ಸಿಡರ್ ಮಾಡ್ಬಹ್ದು. ಹಾಗಂತ ಪೂರ್ತಿ ಅಂದುಕೊಳ್ಳೋಕ್ಕಾಗೋಲ್ಲ. ಈ ಬಂಗ್ಲೆಯಲ್ಲಿ ಕೆಲ್ಸ ಮಾಡುವ ಎಲ್ಲರಿಗೂ ಇಮ್ಮಿಡಿಯೇಟ್ ಆಫೀಸರ್, ಜೊತೆಗೆ ವರದಿಗಾರ ಕೂಡ. ಇನ್‌ಕ್ರಿಮೆಂಟ್, ಪರ್ಮನೆಂಟ್, ಲೀವ್, ಎಲ್ಲಾ ಈ ಮನುಷ್ಯನ ರೆಕಮೆಂಡೇಷನ್‌ನಿಂದ್ಲೇ ಸಾಕ್ಷನ್ ಆಗೋದು. ಬಹಳ ಒಳ್ಳೆಯ ವ್ಯಕ್ತಿ. ಅಮ್ಮ ಬಿಟ್ಟರೇ ಸ್ವಲ್ಪ ಯಜಮಾನರೊಂದಿಗೆ ಮಾತನಾಡಬಲ್ಲವನು ಪಂಢರಿ ಮಾತ್ರ" ವಿವರಣೆ ನೀಡಿದಳು.

ಟೀ ಜೊತೆ ಒಂದಿಷ್ಟು ತಿಂಡಿ ಕೂಡ ಆಯಿತು. ವಾಸಂತಿಗೆ ಏನೇ ಆಗಲೀ ಅಂಥ ಟೆನ್‌ಷನ್ ಏನು ಇಲ್ಲದ ಆಕರ್ಷಕ ಕೆಲಸ ಅವಳದಾಗಿತ್ತು. ಈಗ ಒಂದೇ ಕಡೆ ಕೂತು ಫೈಲುಗಳನ್ನು ತಿರುವಿ ಹಾಕುವ ಆಫೀಸ್ ಕೆಲಸವೆಂದರೆ ಬೋರೆನಿಸುತಿತ್ತು.

"ಆಯ್ತು, ಹೋಗಿ ನೋಡ್ತೀನಿ. ಯಾಕೋ ನಂಗೆ ತುಂಬ ಭಯ ಕಣೇ, ಕಣ್ಮಣಿ! ಕರ್ಣನ್ನೆ ವಿವಾಹವಾಗಿಬಿಡ್ಲಾ?" ಇಂಥದೊಂದು ವಿಷಯ ಮಂಡಿಸಿದಾಗ ದಂಗಾದಳು. ಎರಡು ರೆಕ್ಕೆಗಳನ್ನು ಕಳೆದುಕೊಂಡ ಪಕ್ಷಿ ಆಕ್ರಂದನ ಮಾಡಿದಂತಿತ್ತು. "ಆ ಬಗ್ಗೆ ಪೂರ್ತಿ ಸ್ವತಂತ್ರ ಇದೆ. ಹೇಳೋರು, ಕೇಳೋರು ಯಾರಿದ್ದಾರೆ? ಇಷ್ಟೊಂದು ಗೊಂದಲ ಯಾಕೆ? ಆ ವ್ಯಕ್ತಿಯೊಂದಿಗೆ ಜೀವನ ನಿರ್ವಹಿಸುವ ಧೈರ್ಯವಿದ್ದರೇ ಮುಗೀತು. ಬೇಗ ಯಾವುದಾದ್ರೂ ಒಂದು ತೀರ್ಮಾನಕ್ಕೆ ಬರದಿದ್ರೆ... ನೆಮ್ದಿ ಕಳ್ಕೋತೀಯಾ" ಕಣ್ಮಣಿ ತನ್ನ ಅಭಿಪ್ರಾಯ ವ್ಯಕ್ತಪಡಿಸಿದಳು. ತಕ್ಷಣ ಗೋಪಾಲನ ನೆನಪಾಯಿತು.

"ನೀನು ಇಲ್ಲ ಅಂದ್ಕೊಂಡ್ರು ನನ್ನ ಹಾಗೇ ಅನಾಥಾಶ್ರಮದಲ್ಲಿ ಬೆಳೀಲಿಲ್ಲ, ನೀನು ಅಮ್ಮನಂತೆ ಸಾಕಿದ ಶಬರಿನ ಒಂದ್ಮಾತು ಕೇಳು. ಗೋಪಾಲ ನಿನ್ನ ಮಾತಿಗೆ ಸ್ಪಂದಿಸ್ತಾನೆ. ನಿನ್ನ ಪರ ನಿಂತು ಕರ್ಣನೊಂದಿಗೆ ಮಾತಾಡ್ತಾನೆ."

ಅವಳ ಮಾತುಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸದೆ ಮೇಲೆದ್ದಳು. "ನಾಳೆ ಹೋಗಿ ನೋಡ್ತೀನಿ" ದಢ ದಢ ನಡೆದುಬಿಟ್ಟವಳನ್ನು ಕಣ್ಮಣಿ ನೋಡಿ ನಿಟ್ಟುಸಿರು ದಬ್ಬಿದಳು. 'ತಾನು ಯಾಕೆ ಗೋಪಾಲನಿಗೆ ಪತ್ರ ಬರೆಯಬಾರದು' ಅನಿಸಿತು.

ನೇರವಾಗಿ ಸುಬ್ಬಲಕ್ಷ್ಮಿಯ ರೂಮಿಗೆ ಬಂದಳು. ಟೀವಿ, ರೇಡಿಯೋ ನ್ಯೂಸ್ ಕೇಳಿದರೂ ದಿನ ನಿತ್ಯದ ಪೇಪರ್‌ನ ಮುಖ್ಯ ವಿಷಯಗಳನ್ನು

ತಿಳಿಯುವುದು ಅವರಿಗೆ ಆಸಕ್ತಿ. ಬಿಡುಗಡೆಯಾದ ಸಾಹಿತ್ಯ ಕೃತಿಗಳು, ಅವುಗಳ ವಿಮರ್ಶೆ ಇಂಥದೆಲ್ಲ ಆಸಕ್ತಿಯಿಂದ ಓದಿ ಹೇಳುವ ಕೆಲಸ ಕಣ್ಮಣಿಯದು.

"ನಿನ್ನ ಫ್ರೆಂಡ್ ಚೇತರ್‍ಸಿಕೊಂಡಿದ್ದಾಳ?" ಕೇಳಿದಳು.

"ಒಂದು ರೀತಿಯ ಕನ್‌ಫ್ಯೂಷನ್ ಅವಳದು" ಎಂದಳು.

ಸಾಲಿಗ್ರಾಮಕ್ಕೆ ಅಭಿಷೇಕ ಮಾಡಿ ತಂದ ನೀರಿನಿಂದ ಅವರ ಚಲನಹೀನ ತೋಳು, ಕೈಗಳಿಗೆ ಸವರತೊಡಗಿದಳು. ಮನದಲ್ಲಿ ವಿಷ್ಣು ಜಪ, ನಾರಾಯಣ ಸ್ತುತಿ. ಆಕೆ ಎದ್ದು ಓಡಾಡುವಂತಾಗಬೇಕೆಂಬುದೇ ಅವಳ ಪ್ರಾರ್ಥನೆ.

"ಕಣ್ಮಣಿ, ಮೊದ್ಲು ಈ ತೋಳುಗಳು, ಕಾಲುಗಳು ಹೆಚ್ಚು ಭಾರವೆನಿಸುತಿತ್ತು. ಈಗ ಕಮ್ಮಿಯಾಗಿದೆ ಏನಿಸುತ್ತೆ. ಅವು ಮತ್ತಷ್ಟು ನಿರ್ಜೀವವಾಗಿಹೋಯಿತೇನೋ" ಹತಾಶೆಯಿಂದ ನುಡಿದರು. ಅವು ಸರಿ ಹೋಗಬಹುದೆಂಬ ಆಸೆ ಎಂದೋ ಕಳೆದುಕೊಂಡುಬಿಟ್ಟಿದ್ದರು ಆಕೆ. ಕಣ್ಮಣಿಯ ಮೈ ಕಂಪಿಸಿತು. ಇದನ್ನು ಅವಳೆಂದೂ ಸಹಿಸಳು.

"ಇಲ್ಲಮ್ಮ, ನೀವು ಬೇಗ ಸರಿಹೋಗ್ತೀರಾ! ಎಂಟು ವರ್ಷ ಕೋಮಾದಲ್ಲಿದ್ದ ವ್ಯಕ್ತಿ ಚೇತರ್‍ಸಿಕೊಂಡಿದ್ದಾರೆ ಎನ್ನುವ ವಿಸ್ಮಯ ಸುದ್ದಿ ಓದ್ದೇ! ನಿರ್ಜೀವವಾದರೇ ಭಾರವೆನಿಸುತ್ತೆ. ಚಲನೆ ಕೂಡಿಕೊಂಡಾಗ ಅದು ಇನ್ನೊಂದು ಭಾಗಕ್ಕೆ ಭಾರವೆನಿಸದು" ಬೆರಳುಗಳಿಂದ ಕೈ, ಬೆರಳುಗಳನ್ನು ನೀವ ತೊಡಗಿದಳು. ಕೊರಡಿನ ಅನುಭವ ನೀಡುತ್ತಿದ್ದ ಕೈ ಕಾಲುಗಳಲ್ಲಿ ನರಗಳ ಬಡಿತ, ರಕ್ತದ ಚಲನೆ ಸ್ಪರ್ಶದಿಂದ ಗೊತ್ತಾಗುತಿತ್ತು. ಅದನ್ನು ಹೇಳಲು ಸ್ವಲ್ಪ ಹಿಂಜರಿಕೆ.

ಅಂದು ರಾತ್ರಿ ಸುಬ್ಬಲಕ್ಷ್ಮಿಯವರ ಡಿನ್ನರ್ ಮುಗಿಸಿ ಡೈನಿಂಗ್ ಹಾಲ್‌ಗೆ ಹೊರಟಾಗ ಚೈತನ್ಯ ಕೂತಿದ್ದನ್ನು ನೋಡಿ ಹಿಂದಕ್ಕೆ ಹೊರಟಾಗ "ಬಾ.... ಕೂತ್ಕೋ" ಎಂದ. ಮನ ಹಕ್ಕಿಯಾದರೂ, ತೊಡೆಗಳಲ್ಲಿ ನಡುಕ ಷುರುವಾಯಿತು.

"ಸಿಟ್ ಡೌನ್....." ಇನ್ನೊಮ್ಮೆ ಹೇಳಿದ.

ಉಗುಳು ನುಂಗಿ ಪಂಢರಿಯತ್ತ ನೋಡಿದಾಗ ಕೂಡುವಂತೆ ಕಣ್ಣಲ್ಲಿಯೇ ಹೇಳಿದ. ಗಡಿಯಾರದ ಕಡೆ ಒಮ್ಮೆ ಹರಿದ ಅವನ ನೋಟ ಕೈಯಲ್ಲಿನ

ವಾಚ್‌ನತ್ತ ಇಣಕಿತು. ಒಂದೆರಡು ಸಲ ಕಣ್ಮಣಿಯತ್ತ ವಾರೆ ನೋಟ ಬೀರಿದ ಕೂಡ. 'ಈ ಸೌಮ್ಯ ಮುಖದ ಚೆಲುವೆ ಮಗುವಾಗಿದ್ದಾಗ ಎಷ್ಟು ಮುದ್ದಾಗಿರಬೇಕು. ಎಸೆದ ಜನ ಎಷ್ಟು ಕಟುಕರು, ಅನಿಸಿತು ಒಂದು ಗಳಿಗೆ. ಬೇಗ ತನ್ನ ಊಟ ಮುಗಿಸಿ ಎದ್ದು ಹೋದ ತಾಯಿಯ ರೂಮಿಗೆ.'

"ಈಗ ನಿಧಾನವಾಗಿ ಊಟ ಮಾಡಿ. ಯಾರ್ದೂ ಇಂಥ ಅದೃಷ್ಟ ಇರಲಿಲ್ಲ. ಅಮ್ಮ ಮಂಚ ಸೇರಿದ್ಮೇಲೆ ಒಂಟಿಯಾಗಿಯೇ ಅವರ ಊಟ, ತಿಂಡಿಗಳೆಲ್ಲ. ನ ಈ ಸವುಯುದಲ್ಲೆ ನನ್ನೊಂದಿಗೆ ನಾಲ್ಕಾರು ಮಾತುಗಳನ್ನಾಡುವುದು." ತೊಡಿಕೊಳ್ಳುತ್ತಲೇ ಪಂಢರಿ ಇನ್ನಷ್ಟು ಪಲ್ಯ ಬಡಿಸಿದ ಉದ್ವೇಗದಿಂದ.

ಊಟ ಮುಗಿಸಿ ಬಂದಾಗ ಸುಬ್ಬಲಕ್ಷ್ಮಿಯವರೊಂದಿಗೆ ಮಾತಾಡುತ್ತಿದ್ದ ಚೈತನ್ಯನ ನೋಡಿ ವುುಂದಿದ್ದ ಲೈಬ್ರರಿಗೆ ಹೋದಳು. ಅದನ್ನು ಉಪಯೋಗಿಸಿಕೊಳ್ಳುವಂತೆ ತಾಯಿ, ಮಗ ಹೇಳಿದ್ದರು. ಒಂದೆರಡು ಸಲ ಬಂದು ಪುಸ್ತಕಗಳನ್ನು ನೋಡಿ ಹೋಗಿದ್ದಳಷ್ಟೆ. ಸಂಗೀತಕ್ಕೆ ಸಂಬಂಧಪಟ್ಟ ಕೃತಿಗಳು ಒಂದು ಕಡೆಯಾದರೇ, ಸಾಹಿತ್ಯಕ್ಕೆ ಸಂಬಂಧಪಟ್ಟ ಕೃತಿಗಳು ಇನ್ನೊಂದು ಕಡೆ.

"ಕಣ್ಮಣಿ...." ಹತ್ತಿರದಲ್ಲಿಯೇ ಸ್ವರ. ಬೆಚ್ಚಿಬಿದ್ದಳು ಒಮ್ಮೆಲೆ. "ಒಂದಿಷ್ಟು ವಾತಾಡೋದಿದೆ" ಕರೆದೊಯ್ದು, ಅಲ್ಲಿದ್ದ ಕುಷನ್ ಅಳವಡಿಸಿದ್ದ ಕರಿಯ ಬೆತ್ತದ ಆಸನದ ಮೇಲೆ ಕೂತು ಕಣ್ಸನ್ನೆಯಿಂದಲೇ ಕೂಡಲು ಅಪ್ಪಣೆ ಕೊಟ್ಟ. "ನಿನ್ನ ಕೈಗಳಲ್ಲಿ ಏನಾದ್ರೂ ಮಾಂತ್ರಿಕತೆ ಇದ್ಯಾ?" ಕೇಳಿದ ಕೂಡಲೇ ತನ್ನ ಕೈಗಳನ್ನು ಚಾಚಿ ನೋಡಿಕೊಂಡಳು. "ನಂಗೆ ಇದೆಯೆನಿಸುತ್ತೆ. ಅಮ್ಮನ ಕೈಕಾಲುಗಳು ಸೆಟೆದುಕೊಂಡರೂ, ಚರ್ಮ ಸುಕ್ಕಾಗಿ ಹತ್ತಿಯಂತಾಗಿತ್ತು. ಸ್ಪರ್ಶಿಸಿದಾಗ ಜೀವಂತಿಕೆ ಇದೆಯೆನಿ ಸುತ್ತಿರಲಿಲ್ಲ. ಅವಕ್ಕೆ ಜೀವ ಬರಲು ಎಲ್ಲಾ ವೈದ್ಯ ಪದ್ಧತಿಗಳ ಮೂಲಕನು ಚಿಕಿತ್ಸೆ ಕೊಡಲಾಗಿತ್ತು. ಪ್ರಯೋಜನವೆನಿಸಿರಲಿಲ್ಲ. ಈಗ ಸ್ವಲ್ಪ ಬದಲಾವಣೆಯಾಗ್ತಾ ಇರೋದು ನನ್ನ ಅನುಭವಕ್ಕೆ ಬಂದಿದೆ. ನೀನೇನು ಹೇಳ್ತೀಯಾ?" ಬಹಳ ನಿಧಾನವಾಗಿ ವಿವರವಾಗಿ ಪ್ರಸ್ತಾಪಿಸಿದ.

ತಕ್ಷಣ ಅವಳಿಂದೇನು ಹೇಳಲಾಗಲಿಲ್ಲ. ಸುಬ್ಬಲಕ್ಷ್ಮಿಯವರು ಹೇಳಿದಮಾತು ನೆನಪಾಯಿತು. ಹರ್ಷದಿಂದ ತಬ್ಬಿಬ್ಬಾದಳು.

"ಅಮ್ಮ ಕೂಡ ಒಂದ್ಸಾರ್ತಿ ಹೇಳಿದ್ರು" ಆಕೆ ಹೇಳಿದ್ದನ್ನು ವಿವರಿಸಿ ಹೇಳಿದಾಗ, ಅವನಿಗೆ ತನ್ನದು ಭ್ರಮೆಯಲ್ಲವೆನಿಸಿತು. "ಗುಡ್, ಇದೊಂದು ದೊಡ್ಡ ಬದಲಾವಣೆಯೇ. ಥ್ಯಾಂಕ್ಯೂ, ಥ್ಯಾಂಕ್ಯೂ ವೆರಿಮಚ್, ಕಣ್ಮಣಿ. ಥ್ಯಾಂಕ್ಸ್ ಫಾರ್‌ದ ಲಾಟ್" ಹತ್ತಿರ ಬಂದವನು ಆವೇಶದಿಂದ ಕೈ ಕುಲುಕಿಬಿಟ್ಟ. ಆ ಸ್ಪರ್ಶ ಕೂಡ ಅಪರಿಚಿತವೆನಿಸಲಿಲ್ಲ. ಕಳೆದಿದ್ದನ್ನು ಪಡೆದುಕೊಂಡ ಭಾವೋದ್ವೇಗವೊಂದೇ.

ತಕ್ಷಣ ಹೊರ ಬಂದ ಚೈತನ್ಯ ತಾಯಿಯ ಕೋಣೆಗೆ ನುಗ್ಗಿದ. ಮಂಪರಿನಲ್ಲಿದ್ದ ಆಕೆ ಮುಗುಳ್ನಗೆ ಬೀರಿದರು.

"ಇನ್ನು ನಿದ್ದೆ ಬರ್‍ಲಿಲ್ವಾ? ಇಡೀ ದಿನ ಬಿಜಿ, ಟೆನ್‌ಷನ್.... ರಾತ್ರಿಯಾದ್ರೂ ಒಳ್ಳೆ ನಿದ್ದೆ ಬೇಡ್ವಾ? ಈಗ್ಲೂ ನಿಂಗೆ ವಿವಾಹದ ವಯಸ್ಸು ದಾಟಿ ಹೋಗಿಲ್ಲ. ನೀನು ಒಪ್ಕೊಂಡ್ರೆ... ನಿಂಗೆ ಅನುರೂಪರಾದ ನೂರು ಕನ್ಯೆಯರ ಫೋಟೋಗಳ್ನ ತರಿಸ್ತೀನಿ" ಎಂದರು.

ಮಾತಾಡದೇ ತಾಯಿಯ ಕೈ ಕಾಲುಗಳನ್ನು ಪರೀಕ್ಷಿಸಿ ಪರೀಕ್ಷಿಸಿ ನೋಡತೊಡಗಿದ. ಹತ್ತರಷ್ಟಿನ ಬದಲಾವಣೆ ಹದಿನೈದು ಆಗಿದೆನಿಸಿದಾಗ ಅವನಿಗೆ ಸಂತೋಷವಾಯಿತು. ಅದನ್ನು ತಾಯಿಯೊಂದಿಗೆ ಹಂಚಿಕೊಳ್ಳಲು ಸಕಾಲವಲ್ಲವೆನಿಸಿತು. ಆಕೆ ವಿರುದ್ಧ ದಿಕ್ಕಿನಲ್ಲಿ ಯೋಚಿಸಿದರೇ, ಬದಲಾವಣೆ ಕುಂಠಿತಗೊಳ್ಳಬಹುದು ಅಥವಾ ಹಾಗೆಯೇ ನಿಂತುಹೋಗಬಹುದು. ಆದ್ದರಿಂದ ಸುಮ್ಮನಾದ. ಇಂದು ಕಂಪನಿಗೆ ಸಂಬಂಧಪಟ್ಟ ಎಷ್ಟೋ ವಿಷಯಗಳನ್ನು ಹೇಳಿದ.

"ಮಾತು ಮರೆಸಬೇಡ, ಚೈತನ್ಯ. ವಿವಾಹ ವಿಷ್ಯದ ಬಗ್ಗೆ ಏನು ಹೇಳ್ತೀ?" ತಲೆಯಾಡಿಸಿಬಿಟ್ಟ. ಅವನ ಅಭಿಪ್ರಾಯ ಬದಲಾಗದು. "ಹೇಳೋಕೆ, ಕೇಳೋಕೆ... ಏನಿಲ್ಲ! ಕೊನೆಯ ಅಧ್ಯಾಯ ಬರ್‍ದು ಆಗಿದೆ. ಮುಂದುವರಿಸೋಕೆ ಸಾಧ್ಯವಿಲ್ಲ. ಸ್ವಲ್ಪ ಡಿಫರೆಂಟಾಗಿ ಚಿಂತಿಸು. ಸುಮ್ನೆ ಡಿಸ್ಟರ್ಬ್ ಮಾಡ್ದೇ, ಆರಾಮಾಗಿ ನಿದ್ದೆ ಮಾಡು" ಎದ್ದವನು ತಾಯಿಯ ಕೈಯನ್ನೆತ್ತಿ ತುಟಿಗೊತ್ತಿಕೊಂಡ. ಆ ಕೈ ಅವನ ಕೆನ್ನೆಯನ್ನು ನೇವರಿಸುವಂತಾಗಬೇಕು; ತಲೆಯ ಮೇಲಿಟ್ಟು ಆಶೀರ್ವದಿಸಬೇಕು. ಆ ದಿನಕ್ಕಾಗಿ ಅವನ ಕಾಯುವಿಕೆ.

ಮಹಾಲಿಂಗಂ ಕೊರಳು ವಾದನದ ಕ್ಯಾಸೆಟ್ ಹಾಕಿ ರೂಮಿನಿಂದ ಹೊರಗೆ ಬಂದ. ಮೆಟ್ಟಲು ಬಳಿ ಕಾದು ನಿಂತಿದ್ದ ಪಂಢರಿ ಅವನನ್ನು

ಹಿಂಬಾಲಿಸಿ ಇವನು ಫೈಲುಗಳನ್ನು ನೋಡುವಾಗ ಎರಡು ಮಾತಾಡಿ ಅವನು ಮಲಗಿದ ನಂತರ ಬೆಡ್‌ಲ್ಯಾಂಪ್ ಹಾಕಿ, ಮಿಕ್ಕ ಲೈಟುಗಳನ್ನು ಆಫ್ ಮಾಡಿಕೊಂಡು ಕೆಳಗಿಳಿದು ಬರುತ್ತಿದ್ದ. ಈ ನಿಷ್ಠೆಗೆ ಬೆಲೆ ಕಟ್ಟಲಾಗದು.

******

ರಾತ್ರಿಯೆ ಬಸ್ಸಿಗೆ ಹೊರಟ ಗೋಪಾಲ ನಸುಕಿನಲ್ಲಿ ಬಂದಿಳಿದ. ವಾಸಂತಿ ಲೇಡಿಸ್ ಹಾಸ್ಟಲ್‌ನಲ್ಲಿ ಕಣ್ಮಣಿಗೆ ಲಾಡ್ಜಿಂಗ್ ಬೋರ್ಡಿಂಗ್ ಎಲ್ಲಾ ದೀಪಾಂಕುರದಲ್ಲಿ. ಎಲ್ಲಿಗೆ ಹೋಗುವುದು? ದೂರದ ನೆಂಟರೂ ಅನ್ನೋ ಜನರಿದ್ದರೂ ಹೋಗಲು ಮನಸು ಮಾಡಲಿಲ್ಲ. ಮದುವೆಯಾಗುವ ಹೆಣ್ಣು ಮಕ್ಕಳಿದ್ದರೆ ಸ್ವಲ್ಪ ಹೆಚ್ಚಿನ ಉಪಚಾರ. ಇಲ್ಲದಿದ್ದರೆ ಮನೆಗಳಲ್ಲಿ 'ಇವನು ಯಾಕೆ ಬಂದ?' ಎನ್ನುವ ಪ್ರಶ್ನೆ ಮುಖದ ಮೇಲೆ. ಈಗ ಹಾಸ್ಟಲ್‌ಗೆ ಹತ್ತಿರವಾದ ಲಾಡ್ಜ್‌ನಲ್ಲಿ ರೂಮು ಹಿಡಿಯಲೇ? ಪತ್ರ ಬರೆದಿದ್ದು ಕಣ್ಮಣಿಯಾದುದ್ದರಿಂದ ಅವಳನ್ನು ಭೇಟಿ ಮಾಡಿದ ನಂತರವೆ ಹಾಸ್ಟಲ್, ನಂದಿನಿ ಟೆಕ್ಸ್‌ಟೈಲ್ ಬಗ್ಗೆ ಯೋಚಿಸಬೇಕೆಂದುಕೊಂಡು ಜೇಬಿನಿಂದ ವಿಳಾಸ ತೆಗೆದ. ಅತ್ಯಂತ ಶ್ರೀಮಂತ ಬಡಾವಣೆಯಲ್ಲಿನ ಬಂಗ್ಲೆಯೇ. ಮನದಲ್ಲಿ ಏನೋ ಲೆಕ್ಕ ಹಾಕುತ್ತ ಬ್ಯಾಗನ್ನು ಭುಜದ ಮೇಲೆ ಹಾಕಿಕೊಂಡು ಆಟೋ ಹತ್ತಿದ. 'ದೀಪಾಂಕುರ' ಮುಂದೆ ಆಟೋ ನಿಂತಾಗ ಮೀಟರ್ 'ಒನ್ಲೀ ಫಾರ್ಟೀ' ತೋರಿಸುತಿತ್ತು. ಒಮ್ಮೆ ಡ್ರೈವರ್ ಅತ್ತ ನೋಡಿ ಐವತ್ತರ ಒಂದು ನೋಟು ಅವನ ಕೈಯಲ್ಲಿಟ್ಟ. ಅವನು ಎರಡೆರಡು ಸಲ ಮೀಟರ್‌ನ ನೋಡಿ ಜೇಬುಗಳನ್ನೆಲ್ಲ ತಡಕಿ ಐದರ ಒಂದು ನೋಟು ತೆಗೆದು ಕೊಟ್ಟ. 'ಎರಡು ರೂಪಾಯಿ' ಚಿಲ್ಲರೆ ಇಲ್ಲ ಎನ್ನುವ ಮುದ್ರೆ ಮುಖದ ಮೇಲಿತ್ತು.

"ನಿಮ್ಹತ್ರ ಎಷ್ಟಿದೆ, ನೋಡಿ" ಎಂದ. ಜೇಬಿನೊಳಗೆ ಕೈ ತುರುಕುತ್ತ "ಚಿಲ್ಲರೆ ಇಲ್ಲ, ಸರ್, ಈಗ ಎರಡು, ಒಂದು ರೂಪಾಯಿನ ನೋಟುಗಳು ಸಿಕ್ತಾ ಇಲ್ಲ. ಚಿಲ್ಲರೆಯಂತು ಸಿಕ್ಕೋದೆ ಇಲ್ಲ. ಇನ್ಮೇಲೆ ನೋಟು, ಚಿಲ್ಲರೆಯ ನಾಣ್ಯಗಳನ್ನು ವಿದೇಶದಿಂದ ತರಿಸಿಕೊಳ್ಳುತ್ತಾರಂತೆ ಸರ್. ಏನು ದುರ್ಗತಿ ಬಂತು, ಈ ದೇಶಕ್ಕೆ! ಬರೀ ಕೆಟ್ಟ ರಾಜಕೀಯ ಮಾಡೂಂದ್ರೆ ಮಾಡ್ತಾರೆ." ಎಂದ ಮೂರು ರೂಪಾಯಿನ ಉಳಿಸುವ ಸಲುವಾಗಿ. ಅದು ಅರ್ಥವಾಯಿತು ಅವನಿಗೆ ಚಿಕಿತ್ಸೆಗೊಂಡ ಎರಡರ ಒಂದು ನೋಟಿನ ಮೇಲೆ ಒಂದರ ಒಂದು ನಾಣ್ಯ ಇಟ್ಟು ಅವನ ಮುಂದೆ ಹಿಡಿದವನು ನಾಣ್ಯನ ಎತ್ತಿಕೊಂಡು "ಆ ಐದು ರೂಪಾಯಿ ಕೊಟ್ಟರೇ ಬರಾಬರಿ ಆಗುತ್ತೆ. ನಂಗಿಂತ

ನಿಂಗೆ ಚಿಲ್ಲರೆ ಅಗತ್ಯ ಇರುತ್ತೆ" ಹುಬ್ಬು ಕುಣಿಸಿ 'ಏನೋ ಅಮ್ಮ' ಅನ್ನೋ ತರಹ ನೋಡಿದ. "ಇಂಥ ಚಿಲ್ಲರೆನ ಯಾರು ಕೇಳೋಕೆ ಹೋಗೋಲ್ಲ" ಗೊಣಗುತ್ತ ಐದರ ನೋಟನ್ನು ಕೊಟ್ಟ.

"ಸ್ವಲ್ಪ ತಾಳು" ಅವನ ಭುಜದ ಮೇಲೆ ಕೈಯಿಟ್ಟ. "ಆಟೋದಲ್ಲಿ ಬರೋ ಜನರೆಲ್ಲ ಮಧ್ಯಮ ದರ್ಜೆ, ಕೆಳ ಮಧ್ಯಮ ದರ್ಜೆ ಜನರು. ಅದು ಏಮರ್ಜನ್ಸಿ ಇದ್ದಾಗ, ರೂಟ್ ಬಸ್ ನಂಬರ್ ಗೊತ್ತಿಲ್ಲದಾಗ ಆಟೋ ಹತ್ತುತ್ತಾರೆ. ಈಗಾಗ್ಲೇ ಆರ್ಥಿಕ ಮುಗ್ಗಟ್ಟಿನಿಂದ ಉದ್ದಿನ ಹಪ್ಪಳವಾಗ್ಬಿಟ್ಟಿದ್ದಾರೆ! ನೀವುಗಳು ಚಿಲ್ಲರೆ ಇಲ್ಲಾಂತ ಒಂದು, ಎರಡು ಇಸ್ಕೊಂಡ್ಬಿಟ್ರೆ ಅವ್ರ ಗತಿಯೇನು ? ಈ ಚಿಂತನೆ ನಿನ್ನ ತಲೆಯಲ್ಲಿರಲಿ ಯಂಗ್ ಫ್ರೆಂಡ್" ಎಂದು ಐದರ ನೋಟನ್ನು ಅವನ ಜೇಬಿನಲ್ಲಿಟ್ಟು ಅದೇ ಹಳೆಯ ಎರಡರ ನೋಟನ್ನು ಎರಡು ಬೆರಳುಗಳಿಂದೆತ್ತಿಕೊಂಡು ಭುಜ ತಟ್ಟಿ ಸ್ನೇಹದ ನಗು ಬೀರಿ ತನ್ನ ಬ್ಯಾಗೆತ್ತಿಕೊಂಡ.

'ದೀಪಾಂಕುರ' ಅವನ ನಿರೀಕ್ಷೆಗೂ ಮೀರಿ ಶ್ರೀಮಂತವಾಗಿತ್ತು. ಆದರೆ ಒಂದೇ ಒಂದು ಡೌಟು. ಅಲ್ಲಿರುವ ವಾಡೆಗೂ ಈ ಬಿಲ್ಡಿಂಗ್‌ನ ವಾಸ್ತುವಿನ್ಯಾಸಕ್ಕೂ ಸಾಮ್ಯವಿದೆಯೆನಿಸಿತು. ಹೇಗೆ? ಅಡ್ಡಾಡಿದ. 'ಧೈರೆಕ್ಟಾಗಿ ಬಂದು ನೋಡುವುದು ಸಾಧ್ಯವಿಲ್ಲ.' ಅವಳೇ ಪತ್ರದಲ್ಲಿ ತಿಳಿಸಿ ಫೋನ್ ನಂಬರನ್ನು ನಮೂದಿಸಿದ್ದಳು. ಹುಡುಕಿಕೊಂಡು ಹೋಗಿ ಪಬ್ಲಿಕ್ ಟೆಲಿಫೋನ್ ಬೂತ್‌ನಿಂದ ಫೋನಾಯಿಸಿದ. ಆ ಫೋನ್ ನಂಬರ್ ವಾಸಂತಿಗೆ ಮಾತ್ರ ಗೊತ್ತಿತ್ತು. ಈಗ ಇವನಿಗೆ ತಿಳಿಸಿದ್ದಳು. ಯಾವುದೇ ಹೊರಗಿನ ಕಾಲ್‌ಗಳು ಆ ಲೈನ್‌ನಲ್ಲಿ ಬರಬೇಕಾದರೂ ಪಂಢರಿಯನ್ನು ಹಾದು ಹೋಗಬೇಕಿತ್ತು. ಅಷ್ಟು ಕಟ್ಟೆಚ್ಚರ.

"ಹಲೋ...." ಎಂದ.

"ಯಾರು ಬೇಕಿತ್ತು?" ಪಂಢರಿ ವಿಚಾರಿಸಿದ.

"ಸಾರಿ, ಸ್ವಲ್ಪ ಕಣ್ಮಣಿ ಹತ್ರ ಮಾತಾಡ್ಬೇಕಿತ್ತಲ್ಲ. ಅದೇ ಅವ್ರಿಗೆ ಅಲ್ಲೇನು ಕೆಲ್ಸಾಂತ ಗೊತ್ತಿಲ್ಲ. ಅಂತು ಕಣ್ಮಣಿನ ನೋಡ್ಬೇಕು" ಹೇಳಿದ.

"ನೀವು ಯಾರು?" ಮತ್ತೆ ಅದೇ ಪ್ರಶ್ನೆ.

"ಗೋಪಾಲ ಅಂತ್ಹೇಳಿ" ಎಂದ ಸೋತ ದನಿಯಲ್ಲಿ.

"ಈಗ ಲೈನ್‌ನಲ್ಲಿ ಸಿಕ್ಕೋಲ್ಲ. ಒಂದರ ಸುಮಾರಿಗೆ ಮಾಡಿ" ಫೋನಿಟ್ಟೇ ಬಿಟ್ಟ. ಗೋಪಾಲ ತಲೆ ಕೆರೆದುಕೊಂಡ "ಡ್ಯಾಮಿಟ್, ಪರದೇಸಿ ಸ್ಥಿತಿ

ವೇಳೆಗೆ ಹನ್ನೆರಡು ಐವತ್ತು ಆಗಿಯೆ ಹೋಯಿತು. 'ಆ ಮನುಷ್ಯ ಇನ್ನೊಂದು ಟೈಮ್ ಕೊಡೋದ್ಬೇಡ' ಫೋನೆತ್ತಿ ಬಟನ್‌ಗಳನ್ನೊತ್ತಿದ. ಮೊದಲು ಮಾತಾಡಿದ್ದು ಪಂಢರಿಯೆ.

"ನೀವು ಬಂದಿದ್ದು ತುಂಬ ಒಳ್ಳೆದಾಯ್ತು. ವಾಸಂತಿ ವಿವಾಹದ ವಿಷ್ಯದಲ್ಲಿ ಒಂದಿಷ್ಟು ಗೊಂದಲ ಮಾಡಿಕೊಂಡಿದ್ದಾಳೆ. ಮೂರರ ಸುಮಾರಿಗೆ ಭೇಟಿ ಮಾಡ್ತೀನಿ" ಜೊತೆಗೆ ಗೋಪಾಲನ ತಾಯಿ ತಂದೆ ಇನ್ನಷ್ಟು ವಿಷಯ ತಿಳಿದು ಫೋನಿಟ್ಟಳು.

ಅಷ್ಟಿಷ್ಟು ಕೇಳಿಸಿಕೊಂಡ ಪಂಢರಿ ಒಂದು ಗೊಂದಲ ತಂದು ಹಾಕಿ ಅವಳ ಬದುಕಿಗೆ ಒಂದು ತಿರುವು ಕೊಡುತ್ತಾನೆಂದುಕೊಳ್ಳಲಿಲ್ಲ.

"ವಾಸಂತಿ ಮಾವ ಬಂದಿದ್ದಾರೆ. ನಂಗೆ ಒಂದೆರಡು ಗಂಟೆ ಪರ್ಮಿಷನ್ ಬೇಕು" ಪಂಢರಿಯತ್ತ ನೋಡಿದಳು. ಅವನ ಮುಖ ಬಿಗಿದುಕೊಂಡಿತ್ತು. "ಲೀವ್, ಪರ್ಮಿಷನ್‌ನ ಮೊದಲೇ ಸಾಕ್ಷನ್ ಮಾಡ್ಸಿಕೊಳ್ಳಬೇಕು. ಈಗ ನಾನೇನ್ಮಾಡ್ಲಿ?" ಕೈಯಾಡಿಸಿಬಿಟ್ಟ. ಗಾಬರಿ ಅವಳಿಗೆ. ಪತ್ರ ಬರೆದು ಕರೆಸಿ ನಿರ್ಲಕ್ಷಿಸೋದು ಎಷ್ಟು ಸರಿ? ದ್ವಂದ್ವ ಮನಸ್ಥಿತಿಯಲ್ಲಿರುವ ವಾಸಂತಿ ಕರ್ಣನಿಗೆ ಮಾಲೆ ಹಾಕಿ ಸಮಸ್ಯೆ ತಂದುಕೊಂಡರೇ.

"ಈಗೇನ್ಮಾಡೋದು? ನಾನು ಅಗತ್ಯವಾಗಿ ಮೀಟ್ ಮಾಡ್ಬೇಕು. ಪತ್ರ ಬರ್ದು ಅವ್ರನ್ನ ಕರೆಸಿಕೊಂಡು ಈಗ ಭೇಟಿಯಾಗದಿದ್ರೆ ದೊಡ್ಡ ಪ್ರಮಾದವಾಗುತ್ತೆ. ಅಮ್ಮನಿಗೆ ನಾನು ಹೇಳ್ತೀನಿ. ಅವ್ರಿಗೆ ಊಟ ಮಾಡ್ಸಿದ ನಂತರವೇ ನಾನು ಹೋಗೋದು. ಯಜಮಾನರಿಗೆ ಒಂದ್ಮಾತು ಹೇಳಿದ್ರೆ ಸಾಕು" ರಿಕ್ವೆಸ್ಟ್ ಮಾಡಿಕೊಂಡಳು. ಪಂಢರಿ ಈ ಜವಾಬ್ದಾರಿ ಹೊರಲು ಸಿದ್ಧವಿಲ್ಲ.

"ಹೇಗೂ ಯಜಮಾನ್ರು ಲಂಚ್‌ಗೆ ಮನೆಗೆ ಬರ್ತಾರೆ ಆಗ ನೀವೇ ಒಂದ್ಮಾತು ಹೇಳಿದ್ರೆ ಸಾಕು."

ಪಂಢರಿಯ ಮಾತು ಸರಿಯೆನಿಸಿತು. ಗೋಪಾಲ ನಿಷ್ಠೂರ ವಾದಿಯೆಂದು ಅವನ ಮಾತುಗಳಿಂದ ಗೊತ್ತಾಗಿತ್ತು. ಈಗ ವಾಸಂತಿಯನ್ನು ಯದ್ವಾ ತದ್ವಾ ತರಾಟೆಗೆ ತಗೋಬಹುದು. ಇದಕ್ಕೆ ಅವಳ ಪ್ರತಿಕ್ರಿಯೆ ಹೇಗೆ?

ಎರಡರ ಸುಮಾರಿಗೆ ಬರಬೇಕಾದ ಚೈತನ್ಯ ಫೋನ್‌ನಲ್ಲಿ ವಿಚಾರಿಸಿದ್ದ "ಅಮ್ಮನ ಊಟ ಆಯ್ತು? ಹೇಗೆ?" ಅವನಿಗೆ ಪೂರ್ತಿಯಾಗಿ ವಿವರಣೆ

ನೀಡಬೇಕಾದವಳು ಕಣ್ಮಣಿಯೆ "ಆಯ್ತು, ಇವತ್ತು ಪಲ್ಯ ಬೇಡಾಂದು ಅನ್ನ, ತಿಳಿ ಸಾರು ಜೊತೆ ಒಂದಿಷ್ಟು ಫ್ರೂಟ್ ಸಾಲಿಡ್ ತಿನ್ನಿಸಿದೆ" ಎಂದ ಕೂಡಲೇ ಪಂಢರಿಗೆ ಫೋನ್ ಕೊಡಲು ತಿಳಿಸಿದ.

"ಯಾರೋ ಗೆಸ್ಟ್ ಬಂದಿದ್ದಾರೆ. ನಾನು ಬರೋದು ಸಂಜೆಗೇನೇ, ಅಮ್ಮನಿಗೆ ತಿಳ್ಸು. ಮಧ್ಯೆ ಫೋನ್ ಮಾಡಿ ಮಾತಾಡ್ತೀನಿ, ಈಗ ಡಿಸ್ಟರ್ಬ್ ಮಾಡೋದ್ಬೇಡ" ಲೈನ್ ಕಟ್ಟಾಯಿತು.

"ಸಂಜೆನಂತೆ ಬರೋದು. ನಾಳೆ ಹೋಗಿ ಮೀಟ್ ಮಾಡಿ" ಕೈ ಚೆಲ್ಲಿ ತನ್ನ ಪಾಡಿಗೆ ತಾನು ಹೋದ. ಈಗೇನು ಮಾಡುವುದು? ಅವಳು ಹೊತ್ತಿದ್ದು ದೊಡ್ಡ ಜವಾಬ್ದಾರಿ. ಈ ಮನೆಯ ಸಂಪೂರ್ಣ ಸಂಪತ್ತು ಅವಳ ಮೇಲಿತ್ತು. ಕಿಂಚಿತ್ ಹೆಚ್ಚು ಕಡಿಮೆಯಾದರೂ ಶಿಕ್ಷೆ ಬಹಳ ಭಯಂಕರವೆಂದು ಅವಳಿಗೆ ಗೊತ್ತು. ಲಕ್ಷಾಂತರ ಮೋಸವಾದರೇ ಕ್ಷಮಿಸಬಲ್ಲ. ಇದನ್ನು ಮಾತ್ರ ಕ್ಷಮಿಸಲಾರ.

ಮೂರರ ವೇಳೆಗೆ ನಾಲ್ಕು ಸಲ ಗೋಪಾಲನಿಂದ ಫೋನ್ ಬಂದು, ಐದನೆ ಸಲ ಫೋನ್ ಬಂದಾಗ "ಮತ್ತೆ ಫೋನ್ ಮಾಡ್ಬೇಡಿ" ಎಚ್ಚರಿಸಿ ಫೋನಿಟ್ಟ ಪಂಢರಿ. ಆರಾಮಾಗಿ ಸುಬ್ಬಲಕ್ಷ್ಮಿಯವರ ಕೆಲಸಗಳನ್ನು ಮಾಡಿಕೊಂಡು ನಗುನಗುತ್ತಾ ಓಡಾಡಿಕೊಂಡಿದ್ದ ಈ ಹುಡುಗಿಗೆ ಗೋಪಾಲ ಯಾಕೆ ಗಂಟುಬಿದ್ದ? ಸ್ವಲ್ಪ ಇರುಸು ಮುರುಸೇ ಪಂಢರಿಗೆ. ಹಿಂದೆ ಹಾಸಿಗೆಗೆ ಅಂಟಿಕೊಂಡು ಹತಾಶೆ ನೋಟ ಬೀರುತ್ತಿದ್ದ ಯಜಮಾನಿ ಈಗ ಸ್ವಲ್ಪ ಉತ್ಸಾಹದಿಂದ ಮಾತಾಡುತ್ತಿರುವುದು ಈ ಮನೆಯ ಸೌಭಾಗ್ಯ. ಅಂಥದ್ದರಲ್ಲಿ ಈ ಧೂಮಕೇತು ಯಾರು? ಚಿಂತೆಗೊಳಗಾದ.

ಇಂದು ಸುಬ್ಬಲಕ್ಷ್ಮಿಯವರು ಕೂಡ ನಿದ್ರಿಸುತ್ತಿದ್ದರಿಂದ ಬರೀ ಕೈಕೈ ಹಿಸುಕಿಕೊಂಡಳೇ ವಿನಃ ಹೇಗೆ ಪರಿಸ್ಥಿತಿಯನ್ನು ನಿಭಾಯಿಸುವುದೆಂದು ತಳಮಳಕ್ಕೆ ಒಳಗಾದಳು.

ಬೇಸತ್ತು ಗೋಪಾಲ ಹಿಂದಿರುಗಿಬಿಟ್ಟರೇ, ತಾನು ದೊಡ್ಡ ಅಪರಾಧ ಮಾಡಿದಂತಾಗುತ್ತದೆ. ಬಹಳ ಪ್ರಯತ್ನಪಟ್ಟು ಧೈರ್ಯ ತುಂಬಿಕೊಂಡು ಚೈತನ್ಯನ ಪರ್ಸನಲ್ ಫೋನ್‌ನ ಗುಂಡಿಗಳನ್ನೊತ್ತಿದಳು. ಜೀವ ಹಿಡಿದಲ್ಲಿತ್ತು.

"ಹಲೋ..." ಎಂದ ಕೂಡಲೇ ಅವನ ಸಿರಿಯಸ್ಸಾದ ಗಂಟು ಮುಖ ತೇಲಿತು. "ನಾನು ... ಕಣ್ಮಣಿ" ಅಂದ ಕೂಡಲೇ ಗಾಬರಿಯಿಂದ "ಅಮ್ಮ

ಹೇಗಿದ್ದಾರೆ?" ಕೇಳಿದ.

"ನಾರ್ಮಲ್ಲಾಗಿದ್ದಾರೆ. ನಂಗೆ ಒಂದೆರಡು ಗಂಟೆಗಳ ಪರ್ಮಿಷನ್ ಬೇಕು" ರಿಕ್ವೆಸ್ಟ್ ಮಾಡಿಕೊಂಡಾಗ "ಫೋನಿಡು...." ಅಷ್ಟೇ ಹೇಳಿದ್ದು. ಆಮೇಲೆ ಹತ್ತು ನಿಮಿಷದ ತರುವಾಯ ಪಂಢರಿ "ಕಣ್ಮಣಿ ಹೋಗ್ಬಾ, ಯಜಮಾನರಿಂದ ಪರ್ಮಿಷನ್ ಸಿಕ್ಕಿದೆ" ಹೇಳಿ ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಿದ.

ಮತ್ತೊಮ್ಮೆ ಸುಬ್ಬಲಕ್ಷ್ಮಿಯವರ ರೂಮಿನಲ್ಲಿ ಇಣಕಿ ಮೈನ್ ಗೇಟಿನಿಂದ ಹೊರ ಬಂದಾಗ, ಅಷ್ಟು ದೂರದಲ್ಲಿದ್ದ ವಿಶಾಲವಾದ ಹಳೆಯ ಮರದ ಕೆಳಗೆ ನಿಂತಿದ್ದ ಗೋಪಾಲನ ನೋಡಿ ಅತ್ತ ಧಾವಿಸುವ ವೇಳೆಗೆ ಚೈತನ್ಯನ ಕಾರು ಬಂದಿದ್ದು ಮಾತ್ರವಲ್ಲ ಕಣ್ಮಣಿಯನ್ನು ನೋಡಿದ. ಇದು ಆಕಸ್ಮಿಕವೋ, ದೈವಸಂಕಲ್ಪವೋ, ಚೈತನ್ಯನ ಜೀವನಕ್ಕೆ ಬೇರೊಂದು ತಿರುವನ್ನು ನೀಡಿತು. ಅದರಲ್ಲಿ ಪಂಢರಿ ಬಹು ದೊಡ್ಡ ಪಾತ್ರ ವಹಿಸಿದ್ದು ಕೂಡ ಆಕಸ್ಮಿಕವೆ.

ದುರುಗುಟ್ಟಿಕೊಂಡು ನೋಡಿದ ಗೋಪಾಲ "ಮಹಾತಾಯಿ, ಸೆಂಟ್ರಲ್ ಜೈಲು ಮುಂದೆ ಕಾದಂತಾಯಿತು. ಬೆಳಿಗ್ಗೆ ಕ್ಯೂನಲ್ಲಿ ನಿಂತಿದ್ದರೇ, ಜನ ಕಡಿಮೆ ಇದ್ದ ದಿನ ತಿರುಪತಿ ಶ್ರೀನಿವಾಸನ ದರ್ಶನವಾಗ್ತ ಇತ್ತು. ನಿಂದು ಮಾತ್ರ ತುಂಬ ದುಬಾರಿ. ಏನು ಈ ವಿಪರೀತದ ಕಟ್ಟುಪಾಡುಗಳು, ಸದ್ಯ ನಮಸ್ಕಾರ" ಎರಡು ಕೈಗಳನ್ನು ಜೋಡಿಸಿದ.

"ಸಾರಿ... ಸಾರಿ.... ಏನು ತಿಳ್ಕೋಬೇಡ" ಎಂದು ತೀರಾ ಸಂಕ್ಷಿಪ್ತವಾಗಿ ತನ್ನ ಕೆಲಸದ ಜವಾಬ್ದಾರಿಯನ್ನು ತಿಳಿಸಿದಳು. "ನಾನು ಅವ್ರ ಹತ್ರ ಇರಲೇ ಬೇಕು. ಅಮ್ಮ ತುಂಬ ಒಳ್ಳೆಯವ್ರು. ಹಿರಿಯರ ಹದ್ದು ಬಸ್ತು, ಪ್ರೀತಿಯಲ್ಲಿ ಬದುಕದ ನಂಗೆ, ಈಗ ಅವನ್ನೆಲ್ಲ ತುಂಬಿಕೊಂಡ ಅನುಭವ" ಉದ್ವೇಗದಿಂದ ಹೇಳಿದಾಗ ಅವನಿಗೆ ಅರ್ಥವಾಯಿತು ಪೂರ್ತಿಯಾಗಿ.

"ಆ ಬಗ್ಗೆ ಆಮೇಲೆ ಮಾತಾಡ್ಬಹುದು. ಬಾ ಅಂತ ಪತ್ರ ಬರೆದಿದ್ದೇಯಲ್ಲ, ಯಾಕೆ? ಹೇಗಿದ್ದಾಳೆ ವಾಸಂತಿ? ನಾವು ಅವ್ಳ ಪಾಲಿಗೆ ಶತ್ರುಗಳು ಆಗ್ಬಿಟ್ವಿ" ಬೇಸರ ವ್ಯಕ್ತಪಡಿಸಿದ.

ಸುತ್ತಲು ನೋಟವರಿಸಿದಳು. ಸರಿಯಾದ ರೀತಿಯಲ್ಲಿ ಗೋಪಾಲನಿಗೆ ತಿಳಿಸಿ ಹೇಳಿದರೇ ಮಾತ್ರ ಪ್ರಯೋಜನವಾಗಬಹುದು. ಕರ್ಣನಂಥವನ ಕೈಯಲ್ಲಿ ಗೆಳತಿಯ ಬದುಕು ಕ್ಷೇಮವಲ್ಲವೆಂದು ಅವಳ ನಿರ್ಧಾರ.

"ಅಲ್ಲೊಂದು ರೆಸ್ಟೋರೆಂಟ್ ಇದೆ. ಕೂತು ಮಾತಾಡೋಣ"

ಕರೆದೊಯ್ದಳು. ಅದನ್ನು ಒಂದು ಜೊತೆ ಕಣ್ಣುಗಳು ಗಮನಿಸಿದ್ದು ಗೊತ್ತಾಗಲಿಲ್ಲ ಕಣ್ಮಣಿಗೆ.

ಮಂಗಳೂರು ಬೋಂಡ, ಸಾಗುಗೆ ಆರ್ಡರ್ ಮಾಡಿದ ನಂತರ ಕಣ್ಮಣಿ ಹೇಳಲು ಷುರು ಮಾಡಿದ್ದು. ಮಧ್ಯೆ ಮಧ್ಯೆ ಪ್ರಶ್ನೆಗಳನ್ನು ಹಾಕಿ ಮತ್ತಿಷ್ಟು ತಿಳಿದುಕೊಂಡವನು ಜೋರಾಗಿ ನಕ್ಕ.

"ಒಂದ್ಸಲ, ಆ ಪುಣ್ಯಾತ್ಮನ್ನ ನೋಡ್ಕೊಂಡ್ ಬಂದ್ಬಿಡ್ತೀನಿ. ಆಮೇಲೆ ವಾಸಂತಿನ ನೋಡೋ ಪ್ರೋಗ್ರಾಂ. ಅಮ್ಮ ನಿಂಗಂತು ಫೋನ್ ಕೂಡ ಮಾಡೋಕ್ಕಾಗೋಲ್ಲ. ನಾಳೆ ರಾತ್ರಿ ನಾನು ಹಿಂದಿರುಗಬೇಕು. ನೀನು ಯಾವಾಗ ಸಿಕ್ತಿ?" ಕರ್ಚಿಫ್‌ಗೆ ತೊಳೆದ, ಕೈಯನ್ನೊರೆಸುತ್ತ ಕೇಳಿದ.

ಪರ್ಸ್ ಜೇಬ್ ಸರಿಸಲು ನೋಡಿದಾಗ ತಡೆದ ಗೋಪಾಲ "ತಾನು ಹೆಣ್ಣಿಗಿಂತ ಮೇಲು, ದುಡಿಯುವವನು ಎನ್ನುವ ಧಿಮಾಕು ಈ ಗಂಡು ಪ್ರಾಣಿಗೆ ಕಡ್ಮೆ ಆಗಿಲ್ಲ. ಕರ್ಣನಂಥೋರು ಅಪರೂಪ" ಎನ್ನುತ್ತ ಹೋಗಿ ಬಿಲ್ ಕೊಟ್ಟು ಹೊರಗೆ ನಡೆದವನನ್ನು ಹಿಂಬಾಲಿಸಿದಳು.

ಕಣ್ಮಣಿಯಿಂದಲೇ ಕರ್ಣನ ನಿವಾಸ ಮಿಕ್ಕ ಮಾಹಿತಿಗಳನ್ನು ಪಡೆದುಕೊಂಡು ಅವಳ ಜೊತೆಯಲ್ಲಿಯೇ ದೀಪಾಂಕುರದವರೆಗೂ ಬಂದು ಕೈ ಬೀಸಿ ಮುಂದಕ್ಕೆ ಹೋದ. 'ಕರ್ಣ' ಎಂಥ ವ್ಯಕ್ತಿಗೆ ಎಂಥ ಹೆಸರು. ಅವನಪ್ಪ, ಅಮ್ಮ ತಾತ ಮಹಾಭಾರತದ ಸಣ್ಣ ಪುಟ್ಟ ಘಟನೆಗಳನ್ನು ಅರೆದು ಕುಡಿಸಿಬಿಟ್ಟಿದ್ದರು. ಅದ್ದರಿಂದ ಕುಂತಿಯ ಪುತ್ರ ರಾಧೇಯನಾದ ಕರ್ಣನ ದಾನ ಶೂರತ್ವದ ಬಗ್ಗೆ ಅವನಿಗೆ ಚೆನ್ನಾಗಿ ಗೊತ್ತು. ನಗುತ್ತಲೇ ನಡೆದ.

ಮಾರನೆಯ ದಿನ ಸಂಜೆ ಐದಕ್ಕೆ ನಂದಿನಿ ಟೆಕ್ಸ್‌ಟೈಲ್ ಬಳಿಗೆ ಬರುವುದಾಗಿ ಕಣ್ಮಣಿ ಹೇಳಿದ್ದಳು. ಭಯ ಭಯದಿಂದಲೇ, ಅಕಸ್ಮಾತ್ ಸಾಧ್ಯವಾಗದಿದ್ದರೇ, ಗೋಪಾಲ ಇಳಿದುಕೊಂಡಿದ್ದ ಲಾಡ್ಜ್‌ನ ಫೋನ್ ನಂಬರ್ ಪಡೆದುಕೊಂಡಿದ್ದಳು.

ಬಾಲ್ಕನಿಯಲ್ಲಿಯೇ ನಿಂತು ಆಳುಗಳಿಂದ ನೆಲವನ್ನು ಸ್ವಚ್ಛ ಮಾಡಿಸುತ್ತಿದ್ದ ಪಂಢರಿ ಹೊಸಬಳನ್ನು ನೋಡುವಂತೆ ಅಡಿಯಿಂದ ಮುಡಿಯವರೆಗೂ ನೋಟ ಹರಿಸಿದಾಗ ಅವಳಿಗೆ ದಿಗ್ಭ್ರಮೆ.

"ಅಮ್ಮ ಎದ್ದಿದ್ದಾರ?" ಅವನ ಉತ್ತರಕ್ಕೆ ನಿರೀಕ್ಷಿಸದೇ ಒಳಕ್ಕೆ ಓಡಿದಳು.

ಕಣ್ಣು ಬಿಟ್ಟುಕೊಂಡು ಮಲಗಿದ್ದ ಸುಬ್ಬಲಕ್ಷ್ಮಿ ಶೀತಲ ನೋಟ ಬೀರಿ "ಯಾಕೋ, ಮೈಯೆಲ್ಲ ಬಿಸಿ ಬಿಸಿಯೆನಿಸುತ್ತೆ" ಎಂದಾಗ, ಅವಳ ಉಸಿರು ನಿಂತಂತಾಯಿತು. ತಕ್ಷಣ ಟೆಂಪರೇಚರ್, ಬಿ.ಪಿ. ಚೆಕ್ ಮಾಡಿದಳು. ನಾರ್ಮಲ್‌ಗಿಂತ ಸ್ವಲ್ಪ ಹೆಚ್ಚಿತ್ತು.

"ಒಂದರ್ಧ ಡಿಗ್ರಿ ಟೆಂಪರೇಚರ್ ಜಾಸ್ತಿ ಇದೆ. ಡಾಕ್ಟ್ರಿಗೆ ಫೋನ್ ಮಾಡ್ಲಾ?" ಗಾಬರಿಯಿಂದ ಹೇಳಿದಾಗ ಆಕೆ "ಬೇಡ, ಅಪ್ಪಿಗೆ ಈ ವಿಷ್ಯ ತಿಳ್ಸೋದ್ಬೇಡ. ಮತ್ತೆ ಪೇಷಂಟ್‌ನ ಮಾಡ್ಬಿಡ್ತಾನೆ" ಎಂದರು ಮೃದುವಾಗಿ.

ಆದರೆ ಅವಳಿಗೆ ಭಯವೇ. ಮುಖ ಒಂದು ತರಹ ಮಾಡಿದಳು. ಸಾಂತ್ವನಿಸುವಂತೆ ನಸು ನಗೆ ಬೀರಿದರು ಸುಬ್ಬಲಕ್ಷ್ಮಿ.

"ಮಾತ್ರೆ ಜೊತೆ ನೀರು ಕುಡ್ಸು, ಒಂದೆರಡು ಗಂಟೆಗಳಲ್ಲಿ ಟೆಂಪರೇಚರ್ ನಾರ್ಮಲಿಗೆ ಬರುತ್ತೆ."

ಸಂಜೆ ವೇಳೆಗೆ, ಪೂರ್ತಿ ಕತ್ತಲಾಗಿ ಚಂದ್ರ ಆಕಾಶದಲ್ಲಿ ಸ್ವಚ್ಛವಾಗಿ ಕಾಣುವ ವೇಳೆಗೆ ನಾಲ್ಕು ಸಲವಾದರೂ ಆಕೆಯ ಟೆಂಪರೇಚರ್ ಚೆಕ್ ಮಾಡಿದ್ದಳು ಆತಂಕದಿಂದ. ಎಂಟೂವರೆಗೆ ಚೆಕ್ ಮಾಡಿದಾಗ ನಾರ್ಮಲ್‌ಗೆ ಬಂದು ಅವಳೆದೆಯ ಭಾರವನ್ನು ಕಮ್ಮಿ ಮಾಡಿತು.

"ನಾನು ಹೇಳಲಿಲ್ವಾ? ಇವತ್ತು ಇನ್ನು ಚೈತನ್ಯ ಬರ್ಲಿಲ್ವಾ? ಸ್ವಲ್ಪ ಬಾಲ್ಕನಿಯಲ್ಲಿ ಕೂತ್ಕೋತೀನಿ" ತಾವೇ ಅಂಥ ಆಸೆ ವ್ಯಕ್ತಪಡಿಸಿದಾಗ ಹಕ್ಕಿಯಾದಳು. ದಿನ ಸಂಜೆಯ ಸಮಯದಲ್ಲಿ ವಿಲ್‌ಛೇರ್‌ನ ಮೇಲೆ ಕೂಡಿಸಿದಂತೆ ಮಲಗಿಸಿಕೊಂಡು ಸುತ್ತಾಡಿಸುತ್ತಿದ್ದರಿಂದ ಅಲ್ಪಸ್ವಲ್ಪ ಚೇತನ ತುಂಬಿಕೊಂಡಿತ್ತು ಅವರ ಶರೀರದಲ್ಲಿ.

ಮಲ್ಲಿಯ ಸಹಾಯದಿಂದ ಕೂಡಿಸಿಕೊಂಡು ಹೊರಗೆ ತಳ್ಳಿಕೊಂಡು ಬಂದರು. ಎ.ಸಿ.ಯ ಕೋಣೆಯಾದರೂ ಹೊರಗಿನ ಪರಿಶುಭ್ರ ಶೀತಲ ಗಾಳಿ ಹಾಯೆನಿಸಿತು. ಮನೆಯ ಸಮಸ್ತ ಕೆಲಸಗಾರರು ಅಲ್ಲಿ ಸೇರಿದರು ಸಂಭ್ರಮದಿಂದ.

"ಅಮ್ಮ, ಈ ಹೊಸ ಕೆಲ್ಸಗಾರ ಚಾರ್ಲಿ ಚಾಪ್ಲಿನ್ ತರಹ ಕಾಣಿಸೋಲ್ವಾ?" ಪಂಢರಿ ಬಂದು ಅವನತ್ತ ಕೈ ಮಾಡಿದಾಗ ನಾಚಿಕೊಂಡವನು "ಅವ್ರು ಯಾರು?" ಎಂದ ಕೆಳದನಿಯಲ್ಲಿ.

"ನಮ್ಮ ಇಂಡಿಯಾ ದೇಶದ ಪ್ರೈ ಮಿನಿಸ್ಟರ್!" ಎಲ್ಲರೂ ಜೋರಾಗಿ ನಕ್ಕರು ಅವನ ಮಾತಿಗೆ, ಇಂದಿನ ಪ್ರಧಾನ ಮಂತ್ರಿ.

ನೆನಪಿಸಿಕೊಂಡಿದ್ದು ಕಣ್ಮಣಿಯೊಬ್ಬಳೇ.

ಪ್ರತಿಯೊಬ್ಬರು ಸಡಗರ, ಸಂಭ್ರಮದಿಂದ ತಮ್ಮ ತಮ್ಮ ಅನುಭವಗಳನ್ನು ಹೇಳಿಕೊಳ್ಳತೊಡಗಿದಾಗ ಪಂಢರಿ ತನ್ನ ಕಾಲೇಜು ದಿನಗಳ ಒಂದು ಘಟನೆಯನ್ನು ಮುಂದಿಟ್ಟ.

"ಅಮ್ಮ ನಾನು ಡ್ರೆಸ್ ಕಾಂಪಿಟೇಷನ್‌ನಲ್ಲಿ ಚಾರ್ಲಿ ಚಾಪ್ಲಿನ್ ಪಾತ್ರ ಮಾಡಿ ಮೊದಲ್ನೇ ಬಹುಮಾನ ಗಿಟ್ಟಿಸಿಕೊಂಡೆ. ಎಷ್ಟು ಚೆನ್ನಾಗಿ ಡ್ರೆಸ್ ಮಾಡ್ಕೊಂಡಿದ್ದೆ, ಹೇಗೆ ಅಭಿನಯಿಸಿದೆ" ಕಾಲೇಜಿನ ದಿನಗಳನ್ನು ಜ್ಞಾಪಿಸಿಕೊಂಡ.

"ಖಂಡಿತ ಬಂದಿರುತ್ತೆ, ನಿಂದು ಅದೇ ಪರ್ಸನಾಲಿಟಿ ಒಂದು ಸಲ ಫ್ಯಾನ್ಸಿ ಡ್ರೆಸ್ ಕಾಂಪಿಟೇಷನ್‌ನಲ್ಲಿ ಸ್ವಂತಃ ಚಾರ್ಲಿ ಚಾಪ್ಲಿನ್ ಬಂದರೂ ಬೇರೊಬ್ಬರಿಗೆ ಬಹುಮಾನ ಸಿಕ್ಕಿತಂತೆ. ಅನುಕರಣೆಯಲ್ಲಿ ನಿನ್ನನ್ನು ಮೀರಿಸಿದೋರಿಲ್ಲ" ಮೆಚ್ಚಿಗೆಯೊಂದಿಗೆ ಬಯ್ದಾಗ ಪಂಢರಿ ಉತ್ಸಾಹದಿಂದ ಆ ಮಹಾ ನಟನ ಅಭಿನಯವನ್ನು ಅಭಿನಯಿಸಿ ತೋರಿಸತೊಡಗಿದಾಗ ಚೈತನ್ಯನ ಕಾರು ಬಂದಿದ್ದು ಯಾರಿಗೂ ಗೊತ್ತಾಗಲಿಲ್ಲ. ಇಂಥ ಅಪರೂಪದ ದೃಶ್ಯ ನೋಡಿ ದಂಗಾದ ವ್ಹೀಲ್ ಛೇರ್‌ನ ಹಿಂದೆ ನಿಂತಿದ್ದ ಕಣ್ಮಣಿಯ ಮುಖ ನಗುವಿನಿಂದ ಮುಕ್ಕಳಿಸುತ್ತಿದ್ದರೇ, ಮುಕ್ತವಾಗಿ ನಗೆ ಚೆಲ್ಲಿದ್ದರು ಸುಬ್ಬಲಕ್ಷ್ಮಿ. ಇಂಥ ಒಂದು ದಿನ ಬರಬಹುದೆಂಬ ಕಲ್ಪನೆ ಅವಳಿಗಿರಲಿಲ್ಲ, ತನ್ಮಯನಾಗಿ ನೋಡಿದ.

"ಯಜಮಾನ್ರು...." ಎಲ್ಲಿಂದಲೋ ದನಿ ಹೊರಟಾಗ ಎಲ್ಲಾ ಚೆಲ್ಲಾಪಿಲ್ಲಿಯಾದರು ಪಂಢರಿ, ಸುಬ್ಬಲಕ್ಷ್ಮಿಯನ್ನು ಬಿಟ್ಟು.

ಮೆಟ್ಟಿಲುಗಳನ್ನೇರಿ ತಾಯಿಯ ಬಳಿಗೆ ಹೋದವನು ಆಕೆಯ ಕೆನ್ನೆ ಸವರಿ "ಚಳಿ ಅನ್ನಿಸೋಲ್ವಾ? ಪಂಢರಿ ಶಾಲು, ಕಣ್ಮಣಿ ಎಲ್ಲಿ?" ಕೇಳುವ ವೇಳೆಗೆ ಶಾಲಿನಿಂದ ಪ್ರತ್ಯಕ್ಷಳಾಗಿದ್ದಳು. ತಾನೇ ಹೊದ್ದಿಸಿ ವ್ಹೀಲ್ ಛೇರನ್ನು ತಳ್ಳಿಕೊಂಡು ಹೊರಟ.

ಇಡೀ ರಾತ್ರಿ ಯೋಚಿಸಿದರು ಮತ್ತೆ ಒಂದೆರಡು ಗಂಟೆಗಳ ಪರ್ಮಿಷನ್ ಚೈತನ್ಯನ ಕೇಳುವ ಧೈರ್ಯ ಅವಳಿಗಾಗಲಿಲ್ಲ. ಹೇಗೆ ವಸ್ತು ಸ್ಥಿತಿಯಲ್ಲಿ ಸಮಾಳಿಸುವುದು? ಬರೀ ಸುಬ್ಬಲಕ್ಷ್ಮಿಯವರ ಬಳಿ ಮಾತ್ರ ಪ್ರಸ್ತಾಪಿಸಿ ಎರಡು ಗಂಟೆ ಪರ್ಮಿಷನ್ ಪಡೆದುಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದಳು.

ಸ್ವಲ್ಪ ನೀರಸವಾಗಿದ್ದ ಸುಬ್ಬಲಕ್ಷ್ಮಿ ಸರಿಯಾಗಿ ಊಟ ಮಾಡಲಿಲ್ಲ. "ಯಾಕೋ ಈಗ ಬೇಡಾಂತ ಅನ್ನಿಸುತ್ತೆ, ಸಂಜೆ ಸುಮಾರಿಗೆ ಏನಾದ್ರೂ ತಿಂತೀನಿ" ಎಂದರು.

ಟ್ರಾಲಿಯನ್ನು ತಳ್ಳಿ ಗೋಪಾಲ ಇಳಿದುಕೊಂಡ ಲಾಡ್ಜ್‌ಗೆ ಫೋನ್ ಹಚ್ಚಿದಳು "ಇದ್ದೀನಿ, ಸಾಧ್ಯವಾದರೆ ಈಗ್ಲೇ ಬಾ, ಕರ್ಣನ್ನ ನೋಡಿ ಆಯ್ತು. ವಾಸಂತಿ ಕೂಡ ಅರ್ಧ ದಿನ ರಜ. ಬಂದಿದ್ದಕ್ಕೆ ಮೂವರು ಒಟ್ಟಿಗೆ ಕೂತಾದ್ರೂ ಊಟ ಮಾಡೋಣ" ಸಲಹೆ ನೀಡಿದ. ಅವಳಿಗೂ ಕೂಡ ಬೇಗ ಹೋಗಿ ಬೇಗ ಬಂದುಬಿಡಬೇಕೆನಿಸಿತು. "ಬರ್ತೀನಿ...." ಮತ್ತೊಮ್ಮೆ ಲಾಡ್ಜ್‌ನ ವಿಳಾಸ ತಿಳಿದುಕೊಂಡು ಫೋನಿಟ್ಟಳು.

"ಅಮ್ಮ ನನ್ನ ಫ್ರೆಂಡ್‌ನ ಅರ್ಜೆಂಟಾಗಿ ನೋಡೋದಿದೆ" ವಿನಮ್ರಳಾಗಿ ಹೇಳಿದಳು. "ಹೋಗ್ಬಾ, ನಾನು ಮಲಗ್ತೀನಿ. ಏನು ತೊಂದರೆ" ಎಂದು ಹೇಳಿದರು ಅನುಮಾನಿಸುತ್ತ ನಿಂತಳು. ಆಕೆಗೆ ನಗು "ನಾನು ಹೇಳಿದ್ದೀನಲ್ಲ. ಇವತ್ತು ಕಂಪನಿಯ ನೋಡೋಕೆ ಯಾರೋ ವಿದೇಶೀಯರು ಬಂದಿದ್ದಾರಂತೆ. ಅವ್ನು ಬರೋದು ರಾತ್ರಿಗೇನಾ". ಸಂಜೆಯ ವ್ಯಾಯಾಮದ ವೇಳೆಗೆ ನೀನಿದ್ರೆ... ಸಾಕು ಧಾರಾಳವಾಗಿ ಹೇಳಿದರು.

ಇವಳು 'ದೀಪಾಂಕರು' ಬಿಟ್ಬಾಗಲೇ ಸಣ್ಣಗೆ ಮಳೆ ಹನಿಯತೊಡಗಿತು. ಎಷ್ಟೋ ಆಟೋಗಳಿಗೆ ಕೈ ಅಡ್ಡ ಹಿಡಿದರೂ ನಿಲ್ಲಲಿಲ್ಲ. ಕಡೆಗೆ ಬಿ.ಟಿ.ಎಸ್. ಹತ್ತಿ ಅಲ್ಲಿ ತಲುಪುವ ವೇಳೆಗೆ ವಾಸಂತಿ, ಗೋಪಾಲ ಎಷ್ಟು ಸಾಧ್ಯವೋ ಅಷ್ಟು ಟೀಕೆ, ಟಿಪ್ಪಣಿಗಳನ್ನು ಮಾಡಿದ್ದರು. ಇಷ್ಟವೆನಿಸಲಿಲ್ಲ ಅವಳ ಕೆಲಸ.

"ಅಮ್ಮ ತಾಯಿ ಸೆಂಟ್ರಲ್ ಜೈಲಿನಿಂದ ಪೆರೋಲ್ ಮೇಲೆ ಖೈದಿಯನ್ನು ಹೊರಗಡೆ ತಂದಂತಾಗಿದೆ, ನಮ್ಮ ಸ್ಥಿತಿ. ಸ್ವತಂತ್ರ ಬೇಡ್ವಾ? ಎಷ್ಟೇ ಸಂಬಳ ಕೊಟ್ಟರೂ ಈ ಕೆಲ್ಸ ಬೇಡ. ನಿಂಗೆ ಸೇವಾ ಮನೋಭಾವವಿದ್ರೆ... ಕೆಲ್ಸ ಮಾಡ್ಕಿಕೊಳ್ಳೋಕೆ ಎಷ್ಟೋ ಆಸ್ಪತ್ರೆ, ನರ್ಸಿಂಗ್ ಹೋಂಗಳಿವೆ" ಗೋಪಾಲನ ದೀರ್ಘ ವಿವರಣೆಗೆ ಅವಳ ಮೌನವೆ ಉತ್ತರವಾಯಿತು.

ಮೂವರು ಹೋಟಲ್‌ನಲ್ಲಿ ಊಟ ಮಾಡಿದರು. ಗೋಪಾಲ ಊರಿನ ಸಮಾಚಾರವೆಲ್ಲ ಹೇಳುತ್ತಿದ್ದ. ಇವರು ಕೇಳುತ್ತಿದ್ದರು. ಮಧ್ಯೆ ಮಾತಾಡಿದ್ದೇ ಇಲ್ಲ. ಅವಳಿಗೆ ಬೇಗ ಹೋಗಬೇಕೆಂಬ ಯೋಚನೆಯಾದರೆ, ವಾಸಂತಿಗೆ ಕಾಡುವ ಕರ್ಣನ ಚಿಂತೆ.

ಬಿಲ್ ತೆತ್ತು ಹೊರಗೆ ಬರುವ ಬದಲು ಮುಂದಿನ ರಿಸ್ಪೆಷ್ಷನ್

ಕೌಂಟರ್‌ನಲ್ಲಿ ಹಾಕಿದ್ದ ಸೋಫಾ ಮೇಲೆ ಕೂತ ಗೋಪಾಲ ಅವರನ್ನು ಕೂಡುವಂತೆ ಸನ್ನೆ ಮಾಡಿದ. ಹೊರಗಡೆ ಮಳೆ 'ಧೋ' ಎಂದು ಸುರಿಯುತ್ತಿತ್ತು.

"ಮಳೆ ಬ್ರಹ್ಮಾಂಡವಾಗಿ ಸುರೀತಾ ಇದೆ. ನಮ್ಮ ಕಡೆಗಿಂತ, ಈ ಕಡೆಗೆ ಮಳೆ ಜಾಸ್ತಿಯಾಗಿದೆ. ಕಾರಣ ... ಗೊತ್ತಾ?" ಇಬ್ಬರತ್ರಲೂ ನೋಡಿ ಕಣ್ಣೊಡೆದ.

"ಬಂದ ಕಾರಣನೇ ಹೇಳ್ಲಿಲ್ಲ" ವಾಸಂತಿ ಷುರು ಹಚ್ಚಿದಳು.

"ನೇರವಾಗಿ ವಿಷ್ಯಕ್ಕೆ ಬಂದುಬಿಡ್ತೀನಿ. ವಾಸಂತಿ ಒಂದು ಸೀರೆ ತಗೋಬೇಕೂಂದರೇ ಹತ್ತು ಸಲ ಯೋಚಿಸ್ತೀರಾ, ಕೆಲವರ ಸಲಹೆ ಕೇಳ್ತೀರಾ! ಜೀವನದ ಪಾರ್ಟನರ್‌ನ ಸೆಲೆಕ್ಟ್ ಮಾಡಿಕೊಳ್ಳೋವಾಗ ಒಂದಿಷ್ಟು ಮುತುವರ್ಜಿ ಬೇಡ್ವಾ? ನೀನು ಕರ್ಣನ್ನು ಮದ್ವೆ ಆಗೋ ಬದಲು ದುದ್ದನ್ನು ವಿವಾಹವಾಗು. ಭವಿಷ್ಯದಲ್ಲಿಯಾದ್ರೂ ನಿಶ್ಚಿಂತೆಯಾಗಿ ಇರ್ತೀಯಾ? ಮೇಲ್ನೋಟಕ್ಕೆ ದುದ್ದ ದಡ್ಡ, ಕೊಳಕನಾಗಿ ಕಾಣ್ಬಹ್ದು, ಆ ಕರ್ಣ ಮೂಗು ಮುಚ್ಚಿಕೋಬೇಕು, ಅವ್ನ ಅಂತರಂಗದ ಸೌಂದರ್ಯಕ್ಕೆ. ಇದು ನನ್ನ ಸಲಹೆ, ಒಪ್ಪೋದು ಬಿಡೋದು ನಿನ್ನಿಷ್ಟ. ನೀನು ಬೆಳೆದಿದ್ದು ನಮ್ಮಮ್ಮನ ತೊಡೆಯ ಮೇಲೆ. ಒಂದಿಷ್ಟು ನಿಯತ್ತು ಅನ್ನೋದ್ಬೇಡ್ವಾ? ನಾವೇನು ನಿಂಗೆ ಮಾಡ್ಬಾರದ್ದು ಮಾಡಿರೋದು, ಹೋಗ್ಲಿ ಬಿಡು. ಅದು ನಾನಾಗಿ ಬಂದು ನಿನಗೆ ಸಲಹೆ ಕೊಡ್ತಾ ಇದ್ದೀನೀಂತ ತಪ್ಪು ತಿಳ್ಕೋಬೇಡ. ನಿನ್ನ ಫ್ರೆಂಡ್ ಪತ್ರ ಹಾಕಿ ಕರೆಸಿಕೊಂಡಿದ್ಲು, ಕರ್ಣನ ಬಗ್ಗೆ ಸರ್ರ್ಯಾಗಿ ತಿಳಿದು ಸಲಹೆ ಕೊಡೋಕೆ. ತೀರಾ ಕೊಳಕು ಮನುಷ್ಯ. ಅವ್ನ ಮದ್ವೆಯಾಗಿ ನರ್ಕ ಅನುಭವಿಸೋ ಬದ್ಲು ಆತ್ಮಹತ್ಯೆ ಮಾಡ್ಕೊಂಡ್‌ಬಿಡು. ಹೇಗೂ ಬಂದಿದ್ದೀನಿ, ಅನಾಥ ಹೆಣವಾಗೋಕೆ ಬಿಡದೇ ಅಂತಿಮ ಸಂಸ್ಕಾರ ಮುಗ್ಸಿಕೊಂಡೇ ಹೋಗ್ತೀನಿ" ಎಂದ. ಒಂದೊಂದು ಮಾತು ಚಾಟಿಯೇಟನಂತಿತ್ತು, ತತ್ತರಿಸಿ ಹೋದಳು.

ಕಣ್ತುಂಬಿತು. ಬಾಯಿಗೆ ಕರ್ಚಿಪ್ ಅಡ್ಡ ಹಿಡಿದಾಗ ಮೇಲೆದ್ದ ಗೋಪಾಲ "ಅದು ಲೇಡಿಸ್ ಕರ್ಚಿಪ್, ಬರೀ ಮುಖದ ಮೇಕಪ್ ಸರಿ ಮಾಡಿಕೊಳ್ಳೋಕೆ. ಇದು ದೊಡ್ಡದಾಗಿದೆ, ಇಟ್ಕೋ" ತನ್ನ ಜೇಬಿನಲ್ಲಿದ್ದ ದೊಡ್ಡ ಸೈಜಿನ ಕರ್ಚಿಪ್ ತೆಗೆದು ಅವಳ ಮುಂದೆ ಹಾಕಿದ.

ಹೇಳಿದ್ದು ಮುಗಿದಿತ್ತು. ಇನ್ನೇನು ಕೆಲಸವಿರಲಿಲ್ಲ. ಹೊರಗೆ ಸುರಿಯುವ

ಮಳೆ ಇನ್ನಷ್ಟು ಬಿರುಸಿನಿಂದ ಕೂಡಿತ್ತು. ಒಮ್ಮೆ ಕಣ್ಮಣಿಯ ಕಡೆ ನೋಟ ಬೀರಿ ಕಣ್ಣಲ್ಲಿಯೇ ಹೇಳಿದ್ದು ಸರಿಯೇ ಅಂತ ಪ್ರಶ್ನಿಸಿದ. ಅವಳದು ಅಯೋಮಯ ಸ್ಥಿತಿ. ಮುಂದೇನು? ಪೆದ್ದ ದುದ್ದನಿಗಿಂತ ಕರ್ಣ ನಾಲಾಯಕ್ ಎಂದು ಘೋಷಿಸಿದ್ದ ತಣ್ಣನೆಯ ನೋಟ ಹರಿಸಿದವಳು ಮೇಲೆದ್ದಳು.

"ಇನ್ನು ಹೋಗೋಣ! ನಾನೇ ಗೋಪಾಲರಿಗೆ ಪತ್ರ ಬರೆದಿದ್ದು. ಸದ್ಯಕ್ಕೆ ನಂಗೆ ತೋಚಿದ್ದು ಅಷ್ಟೆ. ನಿಂಗೆ ವಿವಾಹ ತೀರಾ ಅಗತ್ಯವೆನಿಸಿದರೆ, ಕರ್ಣನಿಗಿಂತ ದುದ್ದನನ್ನೆ ಮದ್ವೆಯಾಗ್ಬಿಡು. ಅವ್ನ ರೋಪ್‌ಗಳಿಗೆ ಹೆದರೋದ್ಬೇಡ."

ಗೆಳತಿಯ ಮಾತುಗಳಿಗೆ ಕಣ್ಣೊರೆಸಿಕೊಂಡು ಮೇಲೆದ್ದವಳು ಅವಳ ಕೈ ಹಿಡಿದುಕೊಂಡು "ತುಂಬ ಥ್ಯಾಂಕ್ಸ್, ಇಷ್ಟು ಗಟ್ಟಿಯಾಗಿ ಬುದ್ಧಿ ಹೇಳೋರು ಬೇಕಿತ್ತು" ಎಂದಳು. ಅಂತೂ ಒಂದು ವಿಷಯಕ್ಕೆ ಪೂರ್ಣ ವಿರಾಮ ಬಿದ್ದಿತು.

ಮೂವರು ಬಂದು ಹೊರಗಿನ ಬಾಲ್ಕನಿಯಲ್ಲಿ ನಿಂತರು. ಗುಡುಗು, ಮಿಂಚಿನ ಅರ್ಭಟದೊಂದಿಗೆ ಎಷ್ಟು ಜೋರಾಗಿ ಮಳೆ ಸುರಿಯುತ್ತಿದ್ದೆಂದರೇ, ಆಕಾಶ-ಭೂಮಿ ಒಂದಾದಂತೆ.

"ನಾನು ಹೋಗ್ಬೇಕಿತ್ತು" ಮೆಲ್ಲಗೆ ಹೇಳಿದಳು.

ಈಗಾಗಲೇ ಮಳೆಯಿಂದ ಹೊರಗೆ ಹೋಗಲಾರದ ಜನರೆಲ್ಲ ತುಂಬಿಕೊಂಡು ಗಜಿಬಿಜಿಯೆನ್ನುತ್ತಿದ್ದರಿಂದ, ಅವಳ ಮಾತು ಗೋಪಾಲನಿಗೆ ಮಾತ್ರ ಕೇಳಿಸಿತು. 'ಹೇಗೆ ಹೋಗ್ತೀಯಾ?' ಎನ್ನುವ ನೋಟ ಬೀರಿದ. ಕೆಲವನ್ನು ಮನಸ್ಸು ಬಿಚ್ಚಿ ಹೇಳಿಕೊಳ್ಳುವುದರಿಂದ ಹಲವು ಪ್ರಶ್ನೆಗಳು ಉದ್ಭವವಾಗುತ್ತದೆಯೇ ಹೊರತು ಪರಿಸ್ಥಿತಿಯಂತೂ ಸುಧಾರಿಸುವುದಿಲ್ಲವೆಂದು ಅವಳಿಗೆ ಗೊತ್ತು. ಕ್ಷಣಗಳು ನಿಮಿಷಗಳು ಕೂಡ ತೀರಾ ದೊಡ್ಡದಾಗಿ ಕಂಡವು. ಅಷ್ಟರಲ್ಲಿ ಕರೆಂಟ್ ಹೋಗಿ ಜನರೇಟರ್ ಸದ್ದು ಮಾಡತೊಡಗಿತು.

ಮೆಲ್ಲಗೆ ವಾಸಂತಿಯ ತೋಳು ಹಿಡಿದು "ನಾನು ಹೋಗ್ಬೇಕು, ಸಂಜೆಯ ವ್ಯಾಯಾಮ, ಮಸಾಜ್ ಎಲ್ಲಾ ತಪ್ಪಿಹೋದರೇ ದೇವರೇ ಗತಿ. ಆ ಮನುಷ್ಯ ಕೆಂಡಮಂಡಲವಾಗಿ ಬಿಡ್ತಾನೆ." ಮೆಲ್ಲಗೆ ಉಸುರಿದಳು.

"ಇಷ್ಟೊಂದು ಅತಿಯಾದರೇ ಹೇಗೆ ? ಬೇಕಾದ್ರೆ ಒಂದು ರಜಾಂತ ನಮೂದಿಸಿಕೊಂಡು ವಿತ್-ಔಟ್ ಪ್ಲೇ ಆಗಿಬಿಡು." ಸುಲಭವಾಗಿ ಹೇಳಿದಳು

ವಾಸಂತಿ.

ಅವಳಿಗೆ ಹೇಳಿ ಉಪಯೋಗವಿಲ್ಲವೆಂದು ರಿಸ್ಪೆಷ್ಷನ್ ಕೌಂಟರ್‌ಗೆ ಬಂದು ಆಟೋ, ಟ್ಯಾಕ್ಸಿ ತರಿಸಿಕೊಡಲು ಸಾಧ್ಯವೇ ಎಂದು ವಿಚಾರಿಸಿದಳು. ಈಗಾಗಲೇ ಅವರ ಸುಪರ್ದಿನಲ್ಲಿರೋ ಟ್ಯಾಕ್ಸಿಗಳನ್ನು ಕಳಿಸಿಕೊಟ್ಟಿದ್ದರಿಂದ 'ಸಾರಿ' ಎಂದರಷ್ಟೆ.

"ಎಷ್ಟಾದರಾಗ್ಲೀ ಒಂದು ಆಟೋನಾದ್ರೂ ತರ್ಸಿ ಕೊಡಿ" ರಿಕ್ವೆಸ್ಟ್ ಮಾಡಿಕೊಂಡಳು. ಒಂದೆರಡು ಕಡೆಗೆ ಫೋನ್ ಮಾಡಿದ ರಿಸ್ಪೆಷ್ಷನಿಸ್ಟ್ "ಸಾರಿ, ಸಿಕ್ತಾ ಇಲ್ಲ" ಕೈ ಅಲ್ಲಾಡಿಸಿ ಬಿಟ್ಟಳು.

ಮತ್ತೆ ಒಂದು ಹತ್ತು ನಿಮಿಷ, ಅರ್ಧ ಗಂಟೆ ಕಾದಳು, ಮಳೆಯ ಬಿರುಸು ಮತ್ತಷ್ಟು ಹೆಚ್ಚಾಯಿತೇ ವಿನಃ ತಗ್ಗಲಿಲ್ಲ. ನಿಂತವರ ಸಂಖ್ಯೆ ಮತ್ತಷ್ಟು ಗುಂಪಾಯಿತು.

"ಇನ್ನು ಇಲ್ಲಿ ನಿಂತು ಪ್ರಯೋಜನವಿಲ್ಲ, ಒಳ್ಗಡೆಯ ಸೀಟುಗಳು ಕೂಡ ಫಿಲಪ್ ಆಗ್ಬಿಟ್ಟರೇ, ಈ ನಿಲು ಸೇವೇನೇ ಗತಿಯಾಗುತ್ತೆ. ಒಳ್ಗಡೆ ಹೋಗಿ ಮತ್ತೇನಾದ್ರೂ ತರ್ಸಿಕೊಂಡು ತಿನ್ನೋಣ" ಗೋಪಾಲ ಒಂದು ಅತ್ಯುತ್ತಮ ಸಲಹೆಯನ್ನು ಕೊಟ್ಟ ವಾಸಂತಿಗೆ ಸಮ್ಮತವೇ. ಕಣ್ಣಣೆ ಹೆದರಿಬಿಟ್ಟಿದ್ದಳು. ಪೂರ್ತಿ. ಕೆಲವು ದಿನಗಳಿಂದ ಆಕೆಯ ಕೈಕಾಲುಗಳಿಗೆ ಸ್ವಲ್ಪ ಜೀವ ಬಂದಂತೆ ಕಾಣುತ್ತಿತ್ತು. ಅಂತ ಸಮಯದಲ್ಲಿ ಇಂಥ ತಪ್ಪನ್ನು ಕ್ಷಮಿಸಲಾರ ಚೈತನ್ಯ.

ಮತ್ತೆ ರಿಸ್ಪೆಷ್ಷನಿಸ್ಟ್ ಕೌಂಟರ್ ಬಳಿಗೆ ಹೋಗಿ ದೀಪಾಂಕುರಕ್ಕೆ ಫೋನಾಯಿಸಿದಳು. ಆ ಕಡೆಯ ಕೊನೆಯಲ್ಲಿದ್ದವನು ಪಂಢರಿ-ಇವಳು ಹೇಳಿದ್ದನ್ನು ನಿಧಾನವಾಗಿ ಕೇಳಿಸಿಕೊಂಡ.

"ಈಗೇನಾಡ್ತೀರಾ? ಈಗಾಗ್ಲೇ ಫೋನ್ ಮಾಡಿ ವಿಚಾರ್ಸಿಕೊಂಡ್ರು". ಪೂರ್ತಿ ಮಾಡದೆಯೇ ಫೋನಿಟ್ಟುಬಿಟ್ಟ. ಚೈತನ್ಯ ಬಂಗ್ಲೆಯಲ್ಲಿ ಮಾತ್ರವಲ್ಲ ತಾಯಿಯ ರೂಮಿನಲ್ಲಿಯೇ ಇದ್ದ.

ಮುಕ್ಕಾಲು ಗಂಟೆ ಕಳೆಯುವ ವೇಳೆಗೆ ಕಂಪನಿ ಕಾರು ಬಂದೆಬಿಟ್ಟಿತು ಅವಳನ್ನು ಕರೆದೊಯಲು. ಅವಳಿದ್ದ ಗಾಬರಿಯಲ್ಲಿ ಇವರುಗಳ ಬಗ್ಗೆ ಯೋಚಿಸದೆಯೇ ಕಾರು ಹತ್ತಿಬಿಟ್ಟಳು.

ಗೋಪಾಲ ದಿಗ್ಮೂಢನಾದ. ವಾಸಂತಿಗೆ ಹಾಗೇನು ಅನ್ನಿಸಲಿಲ್ಲ. ಕಣ್ಣಣೆ ಸ್ವಭಾವ ಬಲ್ಲ ಅವಳು ಅವಳ ಮಾತುಗಳನ್ನು ಅಷ್ಟಿಷ್ಟು ನಂಬಿದ್ದಳು.

* * * *

ರಾತ್ರಿ ಹತ್ತರ ಸುಮಾರಿಗೆ ಡಿನ್ನರ್ ಮುಗಿಸಿಕೊಂಡು ರೂಮಿಗೆ ಹಿಂದಿರುಗುತ್ತಿದ್ದವಳನ್ನು ಪಂಢರಿ "ಯಜಮಾನ್ರು ನಿಮ್ಮನ್ನ ನೋಡೋಕೆ ಹೇಳಿದ್ದಾರೆ" ವಿಷಯ ಮುಟ್ಟಿಸಿ ತನ್ನ ಪಾಡಿಗೆ ತಾನು ಹೋದ.

ಅಂದು ಇವಳು ಬಂದಾಗ ಚೈತನ್ಯ ರೂಮಿನಲ್ಲಿಯೇ ಇದ್ದ. ಸಂಜೆಯ ವ್ಯಾಯಾಮ, ಮಸಾಜು ಎರಡು ತಪ್ಪಿಹೋಗಿದ್ದರಿಂದ ಅವಳೆದೆ ಢವಗುಟ್ಟುತ್ತಿತ್ತು. ಒಂದು ಮಾತಾಡದೇ ಹಿಂದಕ್ಕೆ ಬಂದಿದ್ದಳು. ಆಮೇಲೆ ಆದಷ್ಟು ಮುಖ ತಪ್ಪಿಸಿ ಓಡಾಡಿದರೂ ಸುಬ್ಬಲಕ್ಷ್ಮಿ ಶರೀರದ ಏರಿಳಿತಗಳ ಬಗ್ಗೆ ಅವನಿಗೆ ಪೂರ್ತಿ ಮಾಹಿತಿಯನ್ನು ಒದಗಿಸಿ ಕೊಡಬೇಕಿತ್ತು.

ಇವಳಿಗಾಗಿಯೇ ಕಾದಿರುವವನಂತೆ ಬಾಲ್ಕನಿಯಲ್ಲಿ ಅಡ್ಡಾಡುತ್ತಿದ್ದ ಚೈತನ್ಯ ಬರುವಂತೆ ಸನ್ನೆ ಮಾಡಿ ಆಫೀಸ್ ರೂಮಿಗೆ ಹೋದವನು ಎಂದಿನಂತೆ ತನ್ನ ಛೇಂಬರ್ ಪ್ರವೇಶಿಸಿ ಸೀಟಿನಲ್ಲಿ ಕೂಡಲಿಲ್ಲ. ರಿಲ್ಯಾಕ್ಸ್‌ಗಾಗಿ ಗೆಸ್ಟ್, ಫ್ರೆಂಡ್ಸ್‌ಗಳೊಂದಿಗೆ ಸಂಭಾಷಿಸಲು ಅನುವಾಗಿ ಆಸನ ವ್ಯವಸ್ಥೆ ಮಾಡಿದ್ದ ಕುಷನ್ ಸೋಫಾ ಮೇಲೆ ಕೂತ.

"ಕೂತ್ಕೋ....." ಎಂದ.

ಅವಳಿಗೆ ಗಾಬರಿಯ ಜೊತೆ ಒಂದು ರೀತಿಯ ರೋಮಾಂಚನ. ಮಧುರವಾದ ಸುವಾಸನೆಯ ಕಂಪು ಹರಡಿದಂತಾಯಿತು. ಆದರೆ ಕೂರುವ ಧೈರ್ಯ ಬರಲಿಲ್ಲ.

"ಸಿಟ್ ಡೌನ್....." ಎಂದು ಸೀರಿಯಸ್ಸಾಗಿ.

ಹೆದರುತಲ್ಲೇ ಅಷ್ಟು ದೂರದಲ್ಲಿ ಕೂತಳು. ಐದು ನಿಮಿಷದಷ್ಟು ದೀರ್ಘವಾದ ಮೌನದ ನಂತರ "ಆ ಕವರ್ ತೆಗ್ದು ನೋಡು" ಎಂದ. ಎಂದಿಗಿಂತ ಇವತ್ತು ಬಹಳ ಸೀರಿಯಸ್ಸಾಗಿ ಕಂಡ. ಬಹಳ ಒದ್ದಾಟ, ಮಾನಸಿಕ ಹೋರಾಟದ ನಂತರ ಒಂದು ದೃಢ ನಿರ್ಧಾರಕ್ಕೆ ಬಂದಿದ್ದ.

ಕವರ್ ಬಿಚ್ಚಿ ನೋಡಿದಳು. ಆಹ್ವಾನ ಪತ್ರಿಕೆಗಳ ಒಂದು ಬಂಡಲ್ ಇತ್ತು. ಮೆಲ್ಲಗೆ ನೋಟವೆತ್ತಿದಳು. "ಬಿಡ್ಸಿ ನೋಡು, ಜಸ್ಟ್ ಎ ಮಿನಿಟ್.... ನಿನ್ನ ಹಾರ್ಟ್ ಬೀಟ್‌ನ ಸಮತೋಲನ ಕಾಪಾಡಿಕೋ ಅದು ನಿನ್ನ ವಿವಾಹದ ಆಹ್ವಾನ ಪತ್ರಿಕೆ" ಸ್ಪಷ್ಟವಾಗಿ ಹೇಳಿದ. ಅವಳಿಗೆ ಪ್ರಜ್ಞೆ ತಪ್ಪುವಂತಾಯಿತು. ತಮಾಷೇನಾ ? ಹಾಗೆಂದುಕೊಳ್ಳುವುದು ಮೂರ್ಖತನವೆನಿಸಿತು. ಆದರೆ ಇದೊಂದು ವಿಷಯದಲ್ಲಿ ರಾಜಿಯಾಗಳು. ಅವಳಿಗೆ ಯಾರನ್ನೂ

ಮದುವೆಯಾಗುವ ಇಚ್ಛೆ ಇರಲಿಲ್ಲ "ದಯವಿಟ್ಟು ಕ್ಷಮ್ಸಿ, ನಂಗೆ ವಿವಾಹವಾಗೋ ಉದ್ದೇಶವಿಲ್ಲ" ಎಂದಳು ಸ್ಪಷ್ಟವಾಗಿ.

"ತೆಗ್ದು ನೋಡಿ, ಇದೇ ಉತ್ತರವನ್ನು ಆಮೇಲೆ ಹೇಳ್ಬಹ್ದು. ಪರಿಣಾಮವೇನಾಗುತ್ತೇಂತ ಕಾದು ನೋಡ್ಬೇಕಾಗುತ್ತೆ" ಕಟುವಾಗಿ ಹೇಳಿದ.

[illegible]ಸುವ ಕೈನಿಂದಲೇ ಕವರ್ ಬಿಡಿಸಿದಳು. ವಧುವಿನ ಜಾಗದಲ್ಲಿ ಇವಳ ಹೆಸರಾದರೇ ವರನ ಹೆಸರಿನ ಜಾಗದಲ್ಲಿ ಮುರುಳಿ ಕೃಷ್ಣ ಚೈತನ್ಯ ಎಂದಿತ್ತು. ಒತ್ತು ಕ್ರಾಪಿನ ಅಂಚಿನಲ್ಲಿದ್ದ ಬಿಳಿ ಕೂದಲು ನಕ್ಕಂತಾಯಿತು. ಆದರೆ ಅವನಾಗಲೀ, ಕಣ್ಮಣಿಯಾಗಲೀ ನಗಲಿಲ್ಲ. ಆಹ್ವಾನ ಪತ್ರಿಕೆ ವಿಸ್ಮಯಗಳ ವಿಶಿಷ್ಟ ಸಂಕಲನವೆನಿಸಿತು.

"ನೋಡಿದ್ದೀಯಲ್ಲ, ಹತ್ತು ನಿಮಿಷದಲ್ಲಿ ನಂಗೆ ನಿನ್ನ ಒಪ್ಪಿಗೆ ಬೇಕು. ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ನಾಮ್ಮಿಬ್ರ ವಿವಾಹ. ಶಾಸ್ತ್ರರೀತ್ಯಾ. ಇಲ್ಲಿ ನಿನ್ನ ಫ್ರೆಂಡ್, ಬೇರೆಯವರನ್ನಾಗ್ಲೀ ಕೇಳಿ ಸಲಹೆ ಪಡ್ಯೋ ಅವಕಾಶವಿಲ್ಲ. ವಿವಾಹಗಳು ನಡೆಯೋದು ಬೇರೆ ಬೇರೆ ಕಾರಣಗಳಿಗಾಗಿಯಾದ್ರೂ ಉದ್ದೇಶ ಒಂದೇ ಆಗಿರುತ್ತೆ. ಇಲ್ಲಿ ಸ್ವಲ್ಪ ಡಿಫರೆಂಟ್. ನಿನ್ನ, ನನ್ನ ಮಧ್ಯೆ ಹತ್ತೊಂಬತ್ತು ವರ್ಷಗಳಷ್ಟು ಅಂತರ. ಈಗ್ಲೇಳು ನಿಂಗೆ ಒಪ್ಪಿಗೆ ಇದೆ ತಾನೆ?" ಕೇಳಿದ.

ಗಲಿಬಿಲಿ, ದಿಗ್ಭ್ರಮೆಗೆ ಮೀರಿದ ಯಾವುದೋ ಮಧುರ ಭಾವ ಅವಳ ನರನಾಡಿಗಳನ್ನು ಸ್ಪರ್ಶಿಸಿ ಮಧುರ ಅನುರಾಗದ ಚಿಲುಮೆಯನ್ನು ಉಕ್ಕಿಸಿತು. ಯಾವುದೋ ಕಾಣದ ಶಕ್ತಿಯ ಕೈವಾಡವೋ, ಅವನು ಒತ್ತಾಯವೇರುವ ಮುನ್ನವೇ ಸಮ್ಮತಿಸಿದಳು.

"ಗುಡ್, ಹೋಗಿ ಮಲಕ್ಕೋ" ಎಂದ.

ಆ ಆಹ್ವಾನ ಪತ್ರಿಕೆಗಳು ರಾತ್ರಿ ರಾತ್ರಿಯೇ ಕೆಲವರ ಕೈ ಸೇರಿತು. ಚೈತನ್ಯನ ತಂದೆ ಕಟ್ಟಿಸಿದ್ದ ಮುರುಳಿ ಕೃಷ್ಣನ ದೇವಸ್ಥಾನದಲ್ಲಿ ಅವರಿಬ್ಬರ ವಿವಾಹ ನಡೆದು ಹೋಯಿತು. ಅದರಲ್ಲಿ ಅವನ ಕಂಪನಿಯ ಡೈರೆಕ್ಟರ್, ಸಿಬ್ಬಂದಿ ವರ್ಗ ಮುಂತಾದವರು ಭಾಗವಹಿಸಿದ್ದರು. 'ದೀಪಾಂಕುರ' ದಲ್ಲಿ ಅವರಿಗೆಲ್ಲ ದೊಡ್ಡ ಔತಣ ಕೂಟ. ವಾಸಂತಿ ಇನ್ವಿಟೇಷನ್ ಹಿಡಿದು ಬರುವ ವೇಳೆಗೆ ಮದುವೆ ಮುಗಿದುಹೋಗಿತ್ತು.

ಮಡದಿಯ ಜೊತೆ ಸುಬ್ಬಲಕ್ಷ್ಮಿಯವರ ರೂಮಿಗೆ ಚೈತನ್ಯ ಬಂದಾಗ ಆಕೆಯ ಕಣ್ಣುಗಳು ತೇವವಾಗಿತ್ತು. ವರ್ಷಗಳಷ್ಟು ಕಾಲ ಮಂಚಕ್ಕೆ

ಅಂಟಿಕೊಂಡು ನರಳಿದ್ದ ಆಕೆಗೆ ಆಸ್ತಿ, ಅಂತಸ್ತು ಎನ್ನುವ ತಾರತಮ್ಯದ ಭ್ರಮೆಯೇನು ಇರಲಿಲ್ಲ. 'ಸಾಧ್ಯವಿಲ್ಲ ಎಂದದ್ದು ಸಾಧ್ಯವಾಗಿತ್ತು. ಈ ಮನೆಗೊಬ್ಬ ಕಣ್ಮಣಿಯಂಥ ಹೆಣ್ಣು' ಅತ್ಯಂತ ಸಂತೋಷದ ವಿಷಯವೇ.

"ನಂಗೆ ತುಂಬ ಸಂತೋಷವಾಗಿದೆಯೋ ಚೈತನ್ಯ" ಕಣ್ತುಂಬಿ ಹರಸಿದಾಗ, ಅವನ ಕಣ್ಣುಗಳು ಗಮನಿಸುತ್ತಿದ್ದುದು ಹಾಸಿಗೆಯ ಮೇಲೆ ಮಲಗಿದ್ದ ಕೈಗಳನ್ನು. ಅವು ಕಿಂಚಿತ್ ಚಲಿಸಿದ್ದು ಅವನ ಗಮನಕ್ಕೆ ಬಂತು. "ಥ್ಯಾಂಕ್ಯೂ ಅಮ್ಮ......" ಆಕೆಯ ಕೈಯನ್ನು ಮೃದುವಾಗಿ ಸ್ಪರ್ಶಿಸಿದ.

ಅಚ್ಚ ಬಿಳಿಯ ಕಂಜೀವರಂ ಪೀತಾಂಬರದಲ್ಲಿ ಲಕ್ಷಣವಾಗಿ ಕಾಣುವ ಕಣ್ಮಣಿಯನ್ನು ನೋಡಿ ಕಣ್ಣಲ್ಲಿಯೇ ಹತ್ತಿರಕ್ಕೆ ಬರುವಂತೆ ಸನ್ನೆ ಮಾಡಿದರು. ಚೈತನ್ಯ ಹೊರಗೆ ಹೋದ.

"ಕಣ್ಮಣಿ, ಚೈತನ್ಯನ ಸ್ವಭಾವ ನಿಂಗೆ ಗೊತ್ತು. ತಾಳ್ಮೆ ಇರಲೀ" ಎಂದರು ಮೃದುವಾಗಿ ಗದ್ಗದಿತರಾಗಿ. ತುಟಿ ಬಿಚ್ಚಲಿಲ್ಲ. ಯಾವುದೋ ಮಂಪರಿನಲ್ಲಿದ್ದಳು. ಚೈತನ್ಯ ಅವಳ ಮಧ್ಯದ ಸಂಬಂಧ ಈ ಜನ್ಮದಲ್ಲ ಅಪರಿಚಿತವಾದ ಮಾತು, ನಗು, ಹೃದಯಕ್ಕೆ ಸಮೀಪವಾದ ಮನಸ್ಸು ಆದರೆ ಏನು ಹೇಳಲಾರದ ಸ್ಥಿತಿ. ಸಮತೋಲನ ಕಾಯ್ದುಕೊಳ್ಳುವಷ್ಟು ದೃಢತೆ ಅವಳಲ್ಲಿತ್ತು.

ಬಂದ ಪಂಥರಿ ಅಷ್ಟು ದೂರದಲ್ಲಿ ನಿಂತ. ಈಗ 'ಕಣ್ಮಣಿಯಮ್ಮ' ಅಲ್ಲ. ಬಂಗ್ಲೆಯ ಒಡತಿ. ಚಿಕ್ಕ ಯಜಮಾನಿ. ಇದರಲ್ಲಿ ಅವನದೇ ಬಹು ಪಾಲು ಇದೆಯೆಂಬ ಅರಿವಿದೆಯೋ ಇಲ್ಲವೋ.

"ಅಮ್ಮ ನಿಮ್ಮ ಫ್ರೆಂಡ್ ಕಾಯ್ತ ಇದ್ದಾರೆ" ಮೆಲ್ಲಗೆ ಉಸುರಿದ. "ಹೋಗಿ ನೋಡು ಕಣ್ಮಣಿ. ಹೋಗೋ ಮೊದ್ಲು ಇಲ್ಲಿಗೆ ಕರ್ಕೊಂಡ್ಬಾ" ಹೇಳಿದರು. ಈಗ ವಾಸಂತಿ ಚೈತನ್ಯ ಹೆಡ್ ಆಫೀಸ್‌ನ ಅಕೌಂಟ್ ಸೆಕ್ಷನ್‌ನಲ್ಲಿ ಜೂನಿಯರ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದಳು. ಆದರೆ ಇನ್ವಿಟೇಷನ್ ತಲುಪಿದಾಗ ಅವಳಿಗಂತು ಷಾಕ್. ಇಂಥ ಒಂದು ಬೆಳವಣಿಗೆ ಸಾಧ್ಯವೆಂದು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಮಿಲಿಯನಾಧಿಪತಿ ಒಬ್ಬ ಸಾಧಾರಣ ಅನಾಥ ಹೆಣ್ಣನ್ನು ಮದುವೆಯಾಗುವುದು ಚಲನಚಿತ್ರಗಳಲ್ಲಿ ಮಾತ್ರ ಸಾಧ್ಯವಾಗಬಹುದೇನೋ!.

ಗಲಿಬಿಲಿ, ಕಲರವ ಅಡಗಿ ಬಂಗ್ಲೆ ಮೊದಲ ನಿಶಬ್ದ ಸ್ಥಿತಿಗೆ ಮರಳಿತ್ತು. ಒಂಟಿಯಾಗಿ ಮುಂದಿನ ಹಜಾರದಲ್ಲಿ ನಿಂತ ಅವಳನ್ನು ಕೈ ಹಿಡಿದು ತನ್ನ

ರೂಮಿಗೆ ಕರೆದೊಯ್ದಳು.

"ಇದೆಲ್ಲ ಹೇಗಾಯ್ತು? ಈ ಆತುರಕ್ಕೆ ನಿನ್ನ ಚೈತನ್ಯನವರ ನಡ್ವೇ ಏನಾದ್ರೂ ಅಚಾತುರ್ಯ ನಡೆಯಿತಾ? ಇನ್ವಿಟೇಷನ್ ನನ್ನ ಕೈಗೆ ಸಿಕ್ಕಿದ್ದೇ, ಒಂಬತ್ತೂ ಮುಕ್ಕಾಲಿಗೆ. ನಾನು ಆಗ ತಾನೇ ಆಫೀಸ್‌ಗೆ ಬಂದಿದ್ದೆ. ಕೇಳ್ದ ಕೂಡಲೇ ರಜ ಸಿಕ್ಕಿದ್ದರಿಂದ ಟ್ಯಾಕ್ಸಿ ಮಾಡ್ಕೊಂಡೇ ಬಂದೆ. ಏನೇನು ಪ್ರಯೋಜನವಾಗಲಿಲ್ಲ. ವಿಶ್ ಯು ಹ್ಯಾಪಿ ಮ್ಯಾರೀಡ್ ಲೈಫ್' ಕೈ ಹಿಡಿದುಕೊಂಡಳು.

ಕಣ್ಮಣಿ ಮಾತಾಡಲಿಲ್ಲ. ಅವಳಿಗೆ ಹೇಗೆ ಪ್ರತಿಕ್ರಿಯಿಸುವುದೆಂದು ತಿಳಿಯದೇ ಹೋಯಿತು.

"ಏನಾದ್ರೂ ಮಾತಾಡು" ರೆಟ್ಟೆ ಹಿಡಿದುಕೊಂಡಳು.

"ಏನು ಹೇಳ್ಬೇಕೂಂತ ಗೊತ್ತಾಗ್ತ ಇಲ್ಲ. ಬದ್ಕಿನ ಬಗ್ಗೆ ಕಂಗಾಲಾಗಿದ್ದ ನಂಗೆ ಗಮ್ಯ ಸಿಕ್ತು. ನನ್ನ ಪಾಲಿಗೆ ನೋಡಿದಾಗಿನಿಂದ ಚೈತನ್ಯ ಎಂದೂ ಅಪರಿಚಿತರಾಗಿ ಇರ್ಲಿಲ್ಲ. ಅದು ಹುಚ್ಚಾಗಿ ಪರಿವರ್ತನೆ ಆಗೋಕೆ ಬಿಡ್ಲಿಲ್ಲ. 'ದೀಪಾಂಕುರ'ದಲ್ಲಿ ಇರೋಕೆ ನಂಗೊಂದು ಸ್ಥಾನ ಸಿಕ್ತು, ಅಷ್ಟು ಸಾಕು" ಗಂಭೀರವಾಗಿ ನುಡಿದ ಕಣ್ಮಣಿಯ ಮುಖದಲ್ಲಿ ಅಪರೂಪವಾದ ಬೆಳಕಿದೆಯೆನಿಸಿತು.

ತಕ್ಷಣ ಅವಳಿಗೆ ಕರ್ಣನ ನೆನಪಾಯಿತು. ತುಂಬ.... ತುಂಬ ಕಾಡುತ್ತ ಇದ್ದಾನೆಂದು ಫೋನ್ ಮಾಡಿದ್ದಳು ಒಂದೆರಡು ಸಲ. "ಕರ್ಣ ಮತ್ತೆ ಬಂದಿದ್ರಾ?" ವಿಚಾರಿಸಿದಳು.

"ಅಲ್ಲಿ ಅಂಗ್ಡೀಗೆ ಏನೋ ನೆವ ಮಾಡ್ಕೊಂಡ್ ಬರ್ತಾ ಇದ್ದ. ಇಲ್ಲಿ ಒಳ್ಗೇ ಡ್ಯೂಟಿ ಅವರ್ಸ್‌ನಲ್ಲಿ ಬರೋ ಹಂಗಿಲ್ಲ. ಲಂಚ್ ಬ್ರೇಕ್‌ನಲ್ಲು ನಾನು ಹೊರ್ಗಡೆ ಹೋಗೋಲ್ಲ. ವಿಸಿಟರ್ ಪುಸ್ತಕದಲ್ಲಿ ಹೆಸರು ನಮೂದಿಸಿಯೇ ಒಳ್ಗಡೆ ಬರ್ಬೇಕು. ಸೆಕ್ಯೂರಿಟಿ ಸೆಕ್ಷನ್‌ನವರು ತಲಾಷ್ ಮಾಡದೇ ವಿಚಾರಿಸ್ದೇ ಒಳ್ಗೆ ಬಿಡೋಲ್ಲ. ಇವೆಲ್ಲ ಅವ್ನ ಪಾಲಿಗೆ ರಿಸ್ಕ್. ಇನ್ನು ಹಾಸ್ಟಲ್ ವಾರ್ಡನ್‌ಗೆ ಹೇಳಿರೋದ್ರಿಂದ.... ಅವ್ನ ಫೋನ್ ಕೂಡ ಕೊಡೋಲ್ಲ. ಒಂದೆರಡ್ಮೂರು ಪತ್ರ ಬಂದಿದ್ದಾಗ ಡ್ಯೂ ಕೊಟ್ಟು ತಗೊಂಡಿದ್ದು ತಪ್ಪಾಯಿತೆಂದು ಸುಮ್ಮನಾದೆ. ಅರ್ಧ ಬರ್ಧ ಪೀಡೆ ತೊಲಗಿಹೋದಂಗೆ" ಅಸಹಿಸಿಕೊಂಡು ನುಡಿದಳು. ಗೋಪಾಲ ಎಚ್ಚರಿಸಿದ ನಂತರವೆ ಇಷ್ಟು ಧೈರ್ಯ ಇವಳಿಗೆ ಬಂದಿದೆಯೆನಿಸಿತು.

"ಅಮ್ಮ ನಿನ್ನ ಕರ್ಕಂಡ್ ಬಾ ಅಂದ್ರು. ಸ್ವಲ್ಪ ಒಳಗಡೆ ಬಾ" ಕರೆದೊಯ್ದಳು ಜೊತೆಯಲ್ಲಿ ಸುಬ್ಬಲಕ್ಷ್ಮಿಯ ರೂಮಿಗೆ. ಆ ವೇಳೆಗೆ ಪಂಢರಿ ಒಂದು ತಟ್ಟೆ ಸಿದ್ಧ ಮಾಡಿದ್ದ ವಾಸಂತಿಗೆ ಕೊಡಲು ಹೂ, ಹಣ್ಣು, ತಾಂಬೂಲದ ಜೊತೆ ದೊಡ್ಡ ಅಂಚಿನ ಬೆಲೆ ಬಾಳುವ ರೇಶಿಮೆ ಸೀರೆಯ ಉಡುಗೊರೆ ಇತ್ತು.

"ಬಾ... ಕೂತ್ಕೋ" ಎಂದರು ವಾಸಂತಿಯನ್ನು.

ಸದ್ಯಕ್ಕೆ ಕಣ್ಮಣಿಯ ಪರ ಇರುವ ಏಕೈಕ ಬಂಧು ಗೆಳತಿಯೆನ್ನುವ ಅಭಿಮಾನ. ಅವಳ ಕೆಲಸ, ಹಾಸ್ಟಲ್ ಬಗ್ಗೆಯೆಲ್ಲ ವಿಚಾರಿಸಿದ ನಂತರ ಕಣ್ಮಣಿಯ ಕಡೆ ನೋಡಿದರು.

"ಅದ್ನ ನಿನ್ನ ಗೆಳತಿಗೆ ಕೊಡು" ಹೇಳಿದರು.

ಇಬ್ಬರಿಗೂ ಗಲಿಬಿಲಿಯೇ. ಕಣ್ಮಣಿಯ ತುಟಿಗಳು ಬಿಗಿದು ಕೂತವು ಸ್ವರ ಹೊರಡಿಸದಂತೆ ಒಂದಿಷ್ಟು ಚೇತರಿಸಿಕೊಂಡಿದ್ದು ವಾಸಂತಿಯೇ "ಅಮ್ಮ ನಂಗೆ ಇದೆಲ್ಲ ಯಾಕೆ?" ಎಂದಳು ಸಂಕೋಚಿಸುತ್ತ.

"ಏನು ಹಾಗೆಂದರೇ ! ನಿನ್ನ ಸ್ನೇಹಿತೆಯ ವಿವಾಹದ ಉಡುಗೊರೆ ಬೇಡ್ವಾ ! ಪರ್ವಾಗಿಲ್ಲ ತಗೋ, ಎಂದಾದ್ರೂ ಬರ್‍ತಾ ಇರು ಕಣ್ಮಣಿಯನ್ನು ನೋಡಲು" ಎಂದು ಮೌನವಹಿಸಿದರು.

ಅದನ್ನೆಲ್ಲ ದೊಡ್ಡ ಕವರ್‌ಗೆ ತುಂಬಿ ಪ್ಯಾಕ್ ಮಾಡಿ ಕೆಲಸದವನೊಂದಿಗೆ ಕಾರಿನಲ್ಲಿ ಇರಿಸಿ "ಕಾರಿನಲ್ಲಿ ನಿಮ್ಮನ್ನ ಹಾಸ್ಟಲ್ ಹತ್ರ ಬಿಡೋಕೆ ಹೇಳಿದ್ದಾರೆ" ಎಂದ. ವಾಸಂತಿ ಕಣ್ತುಂಬಿ ಕಾರು ಹತ್ತಿ ಕೈ ಬೀಸಿದಳು.

ಅಂದು ರಾತ್ರಿಯ ಫ್ಲೈಟ್‌ಗೆ ಒಂದು ವಿಶೇಷವಾದ ಮೀಟಿಂಗ್‌ನಲ್ಲಿ ಭಾಗವಹಿಸಲು ಹೊರಡುವ ಮುನ್ನ ತಾಯಿಯ ರೂಮಿಗೆ ಬಂದಾಗ ಆಕೆ ಮುಖ ಚಿಕ್ಕದು ಮಾಡಿದರು.

"ಇದು ಸರಿಯೆನಿಸಲಿಲ್ಲ !" ಎಂದರು ವ್ಯಥೆಯಿಂದ.

"ಯಾವ್ದೂ, ಈ ಮೀಟಿಂಗ್ ಮೂರು ತಿಂಗ್ಳ ಹಿಂದೆಯೇ ಫಿಕ್ಸ್ ಆಗಿತ್ತು. ಈಗ ಇನ್ನು ಸ್ವಲ್ಪ ನಿರಾತಂಕ. ಕಣ್ಮಣಿ ನಿನ್ನ ಜೊತೆಗೆ ಇರ್‍ತಾಳೆ, ಹೋಣ್ತಾಯ್ತು."

ಮಗನ ಕೆಲಸದ ಒತ್ತಡದ ಅರಿವಿದ್ದರಿಂದ ಆಕೆಯೇನು ಭಾವಿಸಲಿಲ್ಲ. ಒಂದು ಹೆಣ್ಣನ್ನು ತನ್ನ ಸಂಗಾತಿಯಾಗಿ ಸ್ವೀಕರಿಸಿದ್ದ ಅಷ್ಟೇ ಸಾಕು, ಮುಂದಿನ

ಬದಲಾವಣೆಗಳನ್ನು ತರಲು ಅಂಥ ತೃಪ್ತ ಭಾವ ಆಕೆಯದು.

ಆಮೇಲೆ ಸುಬ್ಬಲಕ್ಷ್ಮಿ ಅತ್ಯಂತ ಸ್ನೇಹದಿಂದ, ಸಲಿಗೆಯಿಂದ ಎಷ್ಟೋ ಮಾತುಗಳನ್ನು ಆಡಿದರು. ಬರೀ ಕೇಳಿದಳಷ್ಟೆ. ಆಕೆಗೆ ಮಂಪರು ಹತ್ತಿದ ಮೇಲೆ ತನ್ನ ರೂಮಿಗೆ ಹಿಂದಿರುಗದೆ ಅಲ್ಲೇ ಸೋಫಾ ಮೇಲೆ ಮಲಗಿ ಬಿಟ್ಟಳು. ಚೈತನ್ಯ ಕಟ್ಟಿದ್ದ ಮಾಂಗಲ್ಯ ಎದೆಯ ಮೇಲೆ ಮಲಗಿ ಯಾವುದೋ ನೆನಪಿನ ಗುಂಗಿನಲ್ಲಿ ಅವಳನ್ನು ಕೆಡವಿತ್ತು. ಅವನೆದೆಯ ಬಲಭಾಗದಲ್ಲಿ ಅವರೆಕಾಳು ಗಾತ್ರದ ಕರಿಯ ಮಚ್ಚೆಯ ಜ್ಞಾಪಕ. ಅದು ನಿಜವೋ, ಸುಳ್ಳೋ ! ಎಂದೂ ಅವನನ್ನು ಪೂರ್ತಿ ಡ್ರೆಸ್‌ನಲ್ಲಿದ್ದಾಗಲೇ ನೋಡಿದ್ದು, ನೋಡುತ್ತಿರುವುದು. ಫುಲ್ ಸೂಟ್‌ನಲ್ಲಿರುತ್ತಿದ್ದ. ರಾತ್ರಿಯ ಹೊತ್ತು ಮಾತ್ರ ತುಂಬು ತೋಳಿನ ಉದ್ದದ ರಾತ್ರಿಯ ಉಡುಪನ್ನು ಧರಿಸುತ್ತಿದ್ದ. ಅದರಿಂದ ಅವನ ಎದೆಯ ಮೇಲಿನ ಕರಿಯ ಹುಟ್ಟು ಮಚ್ಚೆಯನ್ನು ನೋಡಲು ಸಾಧ್ಯವೇ ಇರಲಿಲ್ಲ.

ತಟ್ಟನೇ ಮೇಲೆದ್ದವಳು ನಿದ್ರಿಸುತ್ತಿದ್ದ ಸುಬ್ಬಲಕ್ಷ್ಮಿಯವರನ್ನು ಒಮ್ಮೆ ನೋಡಿ ಸದ್ದಾಗದಂತೆ ತನ್ನ ರೂಮಿಗೆ ಬಂದಾಗ ಹಾಲ್‌ನಲ್ಲಿ ಮಲಗಿದ್ದ ಪಂಢರಿ ಗಮನಿಸಿದ್ದಾನೆಂದು ಅವಳ ಅರಿವಿಗೆ ಬರಲಿಲ್ಲ.

ಮನದ ಭಾವನೆಗಳನ್ನು ಡೈರಿಯಲ್ಲಿ ನಮೂದಿಸಿಟ್ಟಳು. ಮೊದಲ ಸಲ ವಿಸ್ಮಯಕರವಾಗಿ ಚೈತನ್ಯನನ್ನು ನೋಡಿದಾಗ ತನ್ನಲ್ಲಿ ಉಂಟಾದ ಭಾವೋದ್ವೇಗ, ಆಂದೋಲನವನ್ನು ಅಂದಿನಿಂದಲೇ ಡೈರಿಯಲ್ಲಿ ಬರೆದಿಡಲು ಷುರು ಮಾಡಿದವಳು ಆಗಾಗ ತಾನೇ ಬಿಡುವಾಗಿದ್ದಾಗ ಓದಿ ವಿಮರ್ಶಿಸಿಕೊಳ್ಳುತ್ತಿದ್ದವಳು. ಒಮ್ಮೆ ಸೈಕ್ರಿಯಾಟಿಸ್ಟ್ ಸಂಪರ್ಕಿಸಬೇಕೆಂದು ಕೊಂಡವಳು ಸುಮ್ಮನಾಗಿದ್ದಳು. ಪೂರ್ತಿಯಲ್ಲ ಅವಳಿಗೆ ಅಲ್ಪಸ್ವಲ್ಪ ಪೂರ್ವ ಜನ್ಮದ ಸ್ಮರಣೆಯಿಂದಲೇ ಚೈತನ್ಯನನ್ನು ಗುರುತಿಸಿದ್ದಳು. ಅದು ದಿನ ಕಳೆದಂತೆ ದೃಢವಾಗಿತ್ತು, ಸ್ಪಷ್ಟವಾಗಿತ್ತು. ಘಂಟಾಘೋಷವಾಗಿ ಕನಿಷ್ಠ ಚೈತನ್ಯನಲ್ಲಿ ಯಾಕೆ ಬೇರೆ ಯಾರಲ್ಲಿಯೂ ಹೇಳಿಕೊಳ್ಳುವುದು ಬೇಡವಾಗಿತ್ತು. ಜಗತ್ತು ಹಲವು ವಿಸ್ಮಯಗಳ ಭಂಡಾರವಾದರೂ, ಕೆಲವಷ್ಟು ನಂಬಲಾರರು.

ಮಾರನೆ ದಿನದ ಬೆಳಗು ಅತ್ಯಂತ ಚೇತೋಹಾರಿಯಾದರೂ ಅವಳ ದಿನಚರಿಯಲ್ಲಿ ಅಂಥ ದೊಡ್ಡ ಬದಲಾವಣೆಯೇನು ಇಲ್ಲ. ಮನೆಯ ಕೆಲಸಗಾರರು ತಮ್ಮ ಮಾತಿನ ವೈಖರಿ, ನಡಾವಳಿಯನ್ನು ಬದಲಾಯಿಸಿಕೊಂಡು ಯಜಮಾನಿಗೆ ತೋರುವ ಎಲ್ಲಾ ಗೌರವಾದರಗಳ ಚೌಕಟ್ಟಿನಲ್ಲಿಯೇ ನಡೆದುಕೊಳ್ಳತೊಡಗಿದರು.

ಬದಲಾಯಿಸಿಕೊಂಡು ಯಜಮಾನಿಗೆ ತೋರುವ ಎಲ್ಲಾ ಗೌರವಾದರಗಳ ಚೌಕಟ್ಟಿನಲ್ಲಿಯೇ ನಡೆದುಕೊಳ್ಳತೊಡಗಿದರು.

ಅವಳ ಸೂಟ್‌ಕೇಸ್‌ನಲ್ಲಿದ್ದ ಸಾಲಿಗ್ರಾಮ ಮಾತ್ರ ದೇವರ ಮನೆಯಲ್ಲಿ ವಿರಾಜಮಾನವಾಯಿತು. ತಾನೇ ಪೂಜಿಸಿ ಸಾಲಿಗ್ರಾಮ ತೊಳೆದ ನೀರನ್ನು ಎಂದಿನಂತೆ ತಂದು ಸುಬ್ಬಲಕ್ಷ್ಮಿಗೆ ಕುಡಿಸುತ್ತಿದ್ದಳು.

ಸಂಜೆಯ ಪೇಜರ್ ಮೆಸೇಜ್‌ನಂತೆ ದೆಹಲಿಯಿಂದ ಹೊರಟಿದ್ದ ಚೈತನ್ಯ ನೇರವಾಗಿ ಮನೆಗೆ ಬರುವವನಿದ್ದ. ಒಂದು ರೀತಿಯ ಸಂಭ್ರಮದ ಜೊತೆ ಕೆಲಸಗಾರರಲ್ಲಿ ಭಯ. ಎಂಟು ದಿನ ಸಿಂಗಾಪೂರ್, ಹಾಂಕಾಂಗ್ ನಡುವೆ ಓಡಾಡಿ ಹಿಂದಿರುಗುವವನಿದ್ದ. ದಿನದಲ್ಲಿ ನಾಲ್ಕು ಸಲವಾದರೂ ತಾಯಿಯೊಂದಿಗೆ ಮಾತಾಡುವುದರ ಜೊತೆಗೆ ಕಣ್ಮಣಿಯ ಬಳಿ ಎಲ್ಲಾ ವಿವರಗಳನ್ನು ತಿಳಿಯುತ್ತಿದ್ದ. ಅವನ ಕಾಳಜಿ ಅಲ್ಪಸ್ವಲ್ಪವಾದರೂ ಕಡಿಮೆಯಾಗಿದ್ದು ಅವಳ ಗಮನಕ್ಕೆ ಬಂದಿರಲಿಲ್ಲ.

ಒಂದೊಂದೇ ಕೈ ಬೆರಳನ್ನು ಪ್ರತ್ಯೇಕವಾಗಿಸಿ ಸವರುತ್ತಿದ್ದ ಕಣ್ಮಣಿಯನ್ನು ನೋಡಿ ಅಕ್ಕರೆ ತುಂಬಿ ಬಂತು ಸುಬ್ಬಲಕ್ಷ್ಮಿಗೆ. ಎಲ್ಲಿ ಬಂಧ... ಯಾವ ಋಣಾನುಬಂಧ, ಈ ಹೆಣ್ಣು ತಮ್ಮ ಕುಟುಂಬಕ್ಕೆ ಬರಲು.

"ಕಣ್ಮಣಿ, ನೀನೇನು ಮೋಡಿ ಮಾಡಿದೇ ಚೈತನ್ಯನಿಗೆ? ಈ ಜನ್ಮಕ್ಕೆ ವಿವಾಹವಿಲ್ಲ. ನನ್ನ ಜಾತ್ಕದಲ್ಲಿ ಮದ್ವೆಯ ಯೋಗನೇ ಇಲ್ಲ ಎಂದು ತಮಾಷೆಯಾಗಿ ವಾದಿಸುತ್ತಿದ್ದ ಅವನು ಎಷ್ಟು ನಿಶಬ್ದವಾಗಿ ನಿನ್ನ ಕೊರಳಿಗೆ ತಾಳಿ ಬಿಗಿದ. ಇದೆಲ್ಲ ನನ್ನಿಂದ ನಂಬೋಕೆ ಇದಿಗೂ ಸಾಧ್ಯವಾಗ್ತ ಇಲ್ಲ" ಎಂದು ಮೆಚ್ಚು ನುಡಿದರು. ಅವಳೇನು ಹೇಳಿಯಾಳು? ಮಿಂಚಿನಂಥ ನಗುವಿನ ಎಸಳೊಂದು ಅವಳ ತುಟಿಯನ್ನು ಕ್ಷಣ ಕಾಲ ಅಲಂಕರಿಸಿ ಮಾಯವಾಯಿತು.

"ಅಮ್ಮ ನನ್ನ ಕೈನಾ ಸ್ವಲ್ಪ ಹಿಡಿದುಕೊಳ್ಳೋ ಪ್ರಯತ್ನ ಮಾಡಿ" ಆಕೆಯ ಹಸ್ತದಲ್ಲಿ ತನ್ನ ಕೈಯಿಟ್ಟಳು. ಮೊದಲ ಸಲ ಬೆರಳುಗಳಲ್ಲಿ ಚಲನೆ ಮೂಡಿ ಅರ್ಧ ಇಂಚು ಮೇಲಕ್ಕೆ ಬಂದಾಗ, ಹರ್ಷ ತಡೆದುಕೊಳ್ಳಲಾರದೆ ಕಂಪಿಸಿದಳು ಕಣ್ಮಣಿ "ಅಮ್ಮ ಇನ್ನ ಸ್ವಲ್ಪ ಪ್ರಯತ್ನ ಮಾಡಿ" ಉತ್ಸಾಹಿಸಲು ನೋಡಿದಾಗ ಇನ್ನು ಕಾಲು ಇಂಚು ಬಿಚ್ಚಿಕೊಂಡ ಬೆರಳುಗಳು ತಟಸ್ಥವಾಗಿ ಮಲಗಿದಾಗ ಅವಳೇನು ನಿರುತ್ಸಾಹಿತಳಾಗಲಿಲ್ಲ. "ಅಮ್ಮ ನಿಮ್ಮ ಕೈಗಳು ಮೊದಲಿನ ಸ್ಥಿತಿಗೆ ಬರಲು ಬಹಳ ದಿನ ಹಿಡಿಸೋಲ್ಲ" ಸಾರ್ಥಕದ

ಕ್ಷಣವೆನಿಸಿತು.

ಬಂದ ಕೂಡಲೇ ಕಣ್ಮಣಿ ಕೊಟ್ಟ ವಿವರಗಳೊಂದಿಗೆ ಪರೀಕ್ಷಿಸಿದ್ದು ತಾಯಿಯ ಕೈ ಕಾಲುಗಳು ಪೇಲವ ತಟಸ್ಥವಾಗಿದ್ದ ಅವುಗಳಲ್ಲಿ ಕನಿಷ್ಟ ಇಪ್ಪತ್ತು ಪರ್ಸೆಂಟಾದರೂ ಶಕ್ತಿ ಸಂಚಯವಾಗಿದೆಯೆನಿಸಿದಾಗ, ತಕ್ಷಣ ಡಾಕ್ಟರ್‌ಗಳ ಒಂದು ಯೂನಿಟನ್ನೆ ಮನೆಗೆ ಕರೆಸಿಕೊಂಡ. ಎಲ್ಲಾ ರೀತಿಯ ಚೆಕ್‌ಅಪ್‌ಗಳೊಂದಿಗೆ ಅವನ ನಂಬಿಕೆಯನ್ನು ಬಲಪಡಿಸಿದಾಗ ಸ್ವರ್ಗಕ್ಕೆ ಕೇವಲ ಎರಡಿಂಚು ಇತ್ತು.

* * * *

ಅಂದು ಭಾನುವಾರವಾದುದ್ದರಿಂದ ಸ್ವಲ್ಪ ನಿಧಾನವಾಗಿಯೇ ಎದ್ದಿದ್ದು ಚೈತನ್ಯ. ಡೈರೆಕ್ಟರ್‌ಗಳ ಮೀಟಿಂಗ್ ನಂತರ ಸಿಂಗಪುರ್, ಹಾಂಕಾಂಗ್ ಸುತ್ತಿ ಬಂದವನಿಗೆ ಒಂದು ರೀತಿಯ ಬಿಜಿನೆಸ್ ಟೆನ್‌ಷನ್, ಮಾರ್ಕೆಟಿಂಗ್ ಸೆಕ್ಷನ್‌ನ ಫೈನಲ್ ರಿಟರ್ನ್ ತರಿಸಿಕೊಂಡ ನಂತರವೇ ರಿಲೀಫ್ ಸಿಕ್ಕಿದ್ದು.

ವ್ಯಾಯಾಮ ಮುಗಿಸಿ ತಾಯಿಯ ರೂಮಿಗೆ ಬಂದಾಗ ವ್ಯಾಯಾಮ, ಮಸಾಜ್, ಸ್ನಾನ ಎಲ್ಲಾ ಮುಗಿಸಿದ್ದ ಆಕೆ ತುಂಬ ಫ್ರೆಷ್ಷಾಗಿ ಕಂಡರು.

"ಹೇಗಿದ್ದೀರಾ? ಒಂದತ್ತು ನಿಮಿಷ ನಿಮ್ಮೊಂದಿಗೆ ಮಾತಾಡುತ್ತ ಕಳೆಯಬಹುದ್ದು" ಎನ್ನುತ್ತ ಪಕ್ಕದಲ್ಲಿಯೇ ಕೂತು ಆಕೆಯ ಬೆರಳುಗಳನ್ನು ಸವರತೊಡಗಿದ. ತಾವಾಗಿಯೇ ಆ ಬೆರಳುಗಳನ್ನು ಚಲಿಸುತ್ತಿದ್ದದು ಒಂದು ಭಾಗ್ಯ "ಪೂರ್ತಿ ನಿರ್ಜೀವ ಅಂದ್ಕೊಂಡ ಅವಯವಗಳಲ್ಲಿ ಶಕ್ತಿ ಸಂಚಯವಾಗ್ತ ಇದೆ. ಇದೇನು ಕಡ್ಮೇ ವಿಷ್ಯನಾ? ಇದೇನು ವಿಪರೀತದ ತಿರ್‍ಗಾಟ, ಒಂದಿಷ್ಟು ಬ್ರೇಕ್ ಹಾಕ್ಬಾರ್ದಾ?" ಸಣ್ಣಗೆ ಆಕ್ಷೇಪಿಸಿದಾಗ ಬರೀ ಮುಗುಳ್ನಗೆ ಬೀರಿದ.

"ಹೇಗೆ ಸಾಧ್ಯ? ಇಲ್ಲ..... ಅಂದ್ಕೋ. ಹೊಸ ಆರ್ಥಿಕ ನೀತಿಯಿಂದ ಒಂದಿಷ್ಟು ಏರುಪೇರು, ಟೆನ್‌ಷನ್. ಒಂದು ಹಂತಕ್ಕೆ ನಿಂತವನು ಅರ್ಧ ಇಂಚು ಕೂಡ ಕೆಳಗೆ ಇಳಿಯಲಾರ. ಇವೆಲ್ಲ ಮಾಮೂಲೇ. ನಂಗೆ ಒಮ್ಮೊಮ್ಮೆ ಇವೆಲ್ಲ ಬಿಟ್ಟು ಪುಟ್ಟ ಹುಡ್ಗನಾಗಿ ನಿನ್ಹತ್ರ ಕತೆ ಕೇಳ್ಬೇಕೂಂತ ಅನ್ನಿಸುತ್ತೆ. ಹೇಗೆ ಸಾಧ್ಯ? ನೆನ್ನೆಯ ಒಂದೇ ಒಂದು ಕ್ಷಣವನ್ನು ಇಂದು ಪಡೆಯಲು ಸಾಧ್ಯವೇ? ಆ ಕ್ಷಣ ಆಗ ಏನು ಅಲ್ಲವಾಗಿ ಕಂಡಿರಬಹುದ್ದು. ಅದೆಷ್ಟು ಅಮೂಲ್ಯ? ಅದನ್ನೆಂದಾದರೂ ಗಳಿಸೋಕೆ ಸಾಧ್ಯನಾ? ಆಳಕ್ಕೆ ಇಳಿದು ಚಿಂತಿಸಿದಷ್ಟೇ ನಾವು ಎಷ್ಟು ಸಮಯವನ್ನು ನಿರರ್ಥಕವಾಗಿ

ಕಳೆಯುತ್ತಿದ್ದೆನೆನಿಸುತ್ತೆ" ಅತ್ಯಂತ ಗಂಭೀರವಾಗಿ ದಾರ್ಶನಿಕನಂತೆ ಮಾತಾಡಿದ.

"ಒಂದ್ಮಾತು ಕೇಳ್ಲಾ? ನೀನು ಕಣ್ಮಣಿಯನ್ನು ಯಾಕೆ ಮದ್ವೆ ಆದೇ? ಪ್ರೇಮದಿಂದಾನಾ? ಅಥ್ವಾ ಬೇರೆ ಯಾವ್ದೇ ಉದ್ದೇಶದಿಂದಾನಾ?" ಮೌನಚಾಗಿ ಪ್ರಶ್ನಿಸಿದರು ಅವರಿಗೆ ಮಗನ ಬಗ್ಗೆ ತೀರಾ ಬೇಜಾರಾಗಿತ್ತು. ಕಣ್ಮಣಿ, ಅವನ ಮಧ್ಯದ ಮಾತು, ವ್ಯವಹಾರ, ನಡಾವಳಿ ಎಲ್ಲಾ ಹಾಗೆಯೇ ಇತ್ತು, ಅಂಥದ್ದರಲ್ಲಿ ಮದುವೆಯ ಕುಣಿಕೆಯಿಂದ ಅವಳನ್ನು ಬಂಧಿಸಿದ್ದು ಯಾಕೆ? ಈ ಪ್ರಶ್ನೆ ಬೃಹದಾಕಾರವಾಗಿ ಕಾಡುತ್ತಿತ್ತು.

ತಾಯಿಯ ಪ್ರಶ್ನೆಗಳಿಗೆ ಅವನೇನು ವಿಚಲಿತನಾಗಲಿಲ್ಲ. ಅದೇ ಮಗುವಿನಂಥ ನಸು ನಗು "ಡೋಂಟ್ ವರೀ ಮಮ್ಮಿ ನಿನ್ನಗ ಯಾರ್ಗೂ ಅನ್ಯಾಯ ಮಾಡೋಲ್ಲ. ಆ ಭರವಸೆಯನ್ನು ಇಟ್ಕೋ" ತಾಯಿಯ ಕೈ ಮೇಲೆ ಹಸ್ತವನ್ನಿಟ್ಟ.

"ನನ್ನ ಪ್ರಶ್ನೆಗೆ ಉತ್ತರ ಸಿಗ್ಲಿಲ್ಲ" ಎಂದರು ಆಕೆ.

"ಅದು ಪ್ರಶ್ನೆನೇ ಅಲ್ಲ. ಹಿಂದೆ ವಂಶ ವೃದ್ಧಿಗಾಗಿ ವಿವಾಹ ಅಂತ ಇದ್ರು. ಈಗ ನಾನಾ ಕಾರಣಗಳು, ನಮ್ಮ ಮ್ಯಾನೇಜರ್ ಮಗ ಅರುಣ ಎಷ್ಟು ಬೋಲ್ಡಾಗಿ ಹೇಳ್ದ ಗೊತ್ತಾ! ನಂಗೆ ತುಂಬ ಹಣದ ಅಗತ್ಯ ಇರೋದ್ರಿಂದ ಮದ್ವೇಂತ. ಈಗ ನೀನು ರೆಸ್ಟ್ ತಗೋ" ಎದ್ದು ಹೊರಗೆ ಹೋದ.

ಅವನ ಪ್ರೇಮದ ವಿಷಯ ಹಳೆಯದಾಗಿ ಹೋಗಿದ್ದರೂ, ಅವನೆಂದೂ ಹೆಣ್ಣು, ವಿವಾಹ, ದಾಂಪತ್ಯದ ಬಗ್ಗೆ ಸುಮುಖವಾಗಿರಲಿಲ್ಲ. ಅಂಥ ವ್ಯಕ್ತಿ ಕಣ್ಮಣಿಯನ್ನು ಕೈ ಹಿಡಿದಿದ್ದ ಶಾಸ್ತ್ರೋಕ್ತವಾಗಿ. ಆದರೆ ಅವನ ಮುಖ, ನಡತೆಯಲ್ಲಿ ಯಾವುದೇ ಬದಲಾವಣೆ ಕಂಡಿರಲಿಲ್ಲ. ಈಗಲೇ ಕಣ್ಮಣಿಯ ಕೋಣೆ ಕೆಳಗಡೆಯೇ ಚೈತನ್ಯ ಕೂಡ ಅಗತ್ಯವಿಲ್ಲದೆ ಒಂದು ಮಾತು ಕೂಡ ಅವಳೊಂದಿಗೆ ಆಡುತ್ತಿರಲಿಲ್ಲ. ಅವಳು ಅಷ್ಟೇ ಹಿಂದಿನ ವಿನಯ, ವಿಧೇಯತೆಯಿಂದ ವರ್ತಿಸುತ್ತಿದ್ದಳು. ಹಿರಿಯರಾಗಿ ತನ್ನ ಕರ್ತವ್ಯವಿದೆಯೆಂದುಕೊಂಡರು, ಸುಬ್ಬಲಕ್ಷ್ಮಿ.

ಬ್ರೇಕ್‌ಫಾಸ್ಟ್ ಮುಗಿದ ನಂತರ ಕಣ್ಮಣಿಯನ್ನು ಹತ್ತಿರಕ್ಕೆ ಕರೆದು "ನೀನು ಚೈತನ್ಯನಿಗೆ ಬ್ರೇಕ್‌ಫಾಸ್ಟ್ ತಗೊಂಡ್ಹೋಗು, ಅವ್ನ ಸ್ವಭಾವ ಒಂದು ತರಹ. ನೀನಾದ್ರೂ ಸ್ವಲ್ಪ ಹತ್ತಿರ ಸರಿಯಬೇಕು. ತಾಳಿ ಕಟ್ಟಿದ ಕ್ಷಣದಿಂದಲೇ

ಅಂತರ ಕಳಚಿ ಅವ್ನ ಅಂತಸ್ತು ನಿನ್ನದಾಯ್ತು. ಸಂಕೋಚ ಅಂಥದೇನು ಬೇಡ" ಬುದ್ಧಿ ಹೇಳಿದರು.

ಅಷ್ಟಕ್ಕೆ ಸುಮ್ಮನಾಗಲಿಲ್ಲ ಸುಬ್ಬಲಕ್ಷ್ಮಿ ಪಂಢರಿನ ಕರೆದು ಅಧಿಕಾರದಿಂದ ಕೆಲವು ಸಲಹೆಗಳನ್ನು ಕೊಟ್ಟರು.

"ಇನ್ಮೇಲೆ ನಿನ್ಕೆಲ್ಸ ಬರೀ ಕೆಳಗಡೆನೇ. ಕಣ್ಮಣಿ ಚೈತನ್ಯನ್ನ ಗಮನಿಸ್ಕೋತಾಳೆ" ವಿನಯ ವಿದ್ಯಾರ್ಥಿಯಂತೆ 'ಹ್ಞೂ' ಗುಟ್ಟಿದ. ಇದು ಅವನಿಗೆ ಸಮ್ಮತ್ರ ಮಾತ್ರವಲ್ಲ, ಸಂತೋಷವು ಕೂಡ. ಅವನೊಬ್ಬ ಪ್ರಾಮಾಣಿಕ ಸೇವಕ, ಬಂಧು.

ಬ್ರೇಕ್‌ಫಾಸ್ಟ್ ಒಯ್ಯುವ ತೊಂದರೆಯನ್ನೆ ಕೊಡದೇ ಕೆಳಗಿನ ಡೈನಿಂಗ್ ಹಾಲ್‌ಗೆ ಬಂದವನು ಕಣ್ಮಣಿಯನ್ನು ನೋಡಿ "ಅಮ್ಮನ ಬ್ರೇಕ್‌ಫಾಸ್ಟ್ ಆಯ್ತ? ನೀನು... ತಗೋ...." ಎಂದ ಸಹಜವಾಗಿ. ಹಿಂದೆ ಕೆಲವು ಸಲ ಒಂದೇ ಟೇಬಲ್‌ನಲ್ಲಿ ಅವನ ಜೊತೆ ಕೂತು ತಿಂಡಿ ತಿನ್ನುವ, ಡಿನ್ನರ್ ತೆಗೆದುಕೊಳ್ಳುವ ಅವಕಾಶ ಕೂಡಿ ಬಂದಿತ್ತು. ಇಂದು ಸ್ವಲ್ಪ ಭಿನ್ನ. ಅವನ ದೃಷ್ಟಿ ಏನಾದರೂ ಇರಲೀ, ಅವಳಿಂದು ಅವನ ಸಹಧರ್ಮಿಣಿ, ಮನೆಯ ಯಜಮಾನಿ, ಮುಂದಿನ ಸಂತಾನದ ವಾರಸುಧಾರಿಣಿ, ಗೃಹಿಣಿ - ಒಂದೇ ಪಟ್ಟದಿಂದ ಇಷ್ಟೆಲ್ಲ ಅಧಿಕಾರಗಳು, ಕರ್ತವ್ಯಗಳು ಲಭ್ಯವಾಗುತ್ತದೆ ಹೆಣ್ಣಿಗೆ.

ಎರಡೇ ನಿಮಿಷಕ್ಕೆ ಬ್ರೇಕ್‌ಫಾಸ್ಟ್ ಮುಗಿಸಿ ಮೇಲೆದ್ದವನು "ಕಣ್ಮಣಿ ನಿಧಾನವಾಗಿ ನಿನ್ನ ಬ್ರೇಕ್‌ಫಾಸ್ಟ್ ಮುಗ್ಸಿಕೊಂಡು ಬಾ". ಹೇಳಿ ಹೋದ, ಪಂಢರಿಯ ಮುಖ ಅರಳಿತು. ತಕ್ಷಣ ತನ್ನ ಸಂತೋಷವನ್ನು ಕಣ್ಮಣಿಯ ಮುಂದೆ ವ್ಯಕ್ತಪಡಿಸಲು ಹಿಂಜರಿದ.

ಆಮೇಲೆ ಅವಳಿಗೂ ಏನು ತಿನ್ನಲಾಗಲಿಲ್ಲ. ನವಿರಾದ ಕಂಪನವಿಲ್ಲದಿದ್ದರೂ ಸಪ್ತ ಸ್ವರಗಳ ಮಧುರವಾದ ರಾಗಾಲಾಪನೆ ಹೃದಯದಾಳದಲ್ಲಿ ಚೈತನ್ಯ ಇದೆಲ್ಲದರಿಂದ ವಿಮುಕ್ತನೆಂದು ಅವಳಿಗೇನು ಗೊತ್ತು?.

ಮೆಟ್ಟಲೇರುವಾಗ ಅವಳ ಮೈ ಕಂಪಿಸಿತು "ಅಮ್ಮ ಒಮ್ಮೊಮ್ಮೆ ಹಣ್ಣಿನ ರಸ ಕುಡೀತಾರೆ" ಹಣ್ಣಿನ ರಸದ ಗ್ಲಾಸ್ ಇದ್ದ ಟ್ರೇ ತಂದಿತ್ತ ಪಂಢರಿಯ ಕಣ್ಣುಗಳಲ್ಲಿ ಹರ್ಷದ ತುಂತುರು ಇತ್ತು.

ನಿಧಾನವಾಗಿ ಮೆಟ್ಟಲೇರಿದಳು. ಮೊದಲ ಸಲ ಅವನ ಪರ್ಸನಲ್

ಡ್ರಾಯಿಂಗ್ ರೂಮ್ ಪ್ರವೇಶ. ಗೋಡೆಗಳ ಮೇಲಿನ ಪೈಂಟ್‌ನಿಂದ ಹಿಡಿದು ಕಾರ್ಪೆಟ್ ಆಸನ ವ್ಯವಸ್ಥೆ ಪ್ರತಿಯೊಂದು ನವಿರಾದ ಗುಲಾಬಿ ರಂಗಿನಿಂದ ತುಂಬಿತ್ತು. ಮೇಲೆ ತೂಗಾಡುವ ಶಾಂಡಲಿಯರ್ ಬಣ್ಣ ಕೂಡ ಅದೇ. ಅತ್ಯಂತ ಆಹ್ಲಾದಕರವೆನಿಸಿತು.

"ಕಮಿನ್......" ಒಳಗೆ ಕರೆದ.

ಬಂಗಾರದ ಹಿಡಿ, ಚಿತ್ತಾರವಿರುವ ಸೋಪಾಗಳನ್ನು ಮೆತ್ತೆಗಳಿಂದ ಅಲಂಕರಿಸಿದ್ದು ಗುಲಾಬಿ ರಂಗಿನಿಂದಲೇ. ಅದರ ಮೇಲೆ ಗಂಭೀರವಾಗಿ ಕೂತ ಚೈತನ್ಯ ಪುರುಷಸಿಂಹನಂತೆ ಗೋಚರಿಸಿದ.

"ಕೂತ್ಕೋ ಕಣ್ಮಣಿ" ಮತ್ತೊಮ್ಮೆ ಹೇಳಿದ.

ಅಲ್ಲೇ ಅಂಚಿಗೆ ಅಂಟಿದಂತೆ ಕೂತಾಗ ಅವನಿಗೆ ನಗು ಬಂತು. ಇವನು ಕೊಡಲೀ ಬಿಡಲೀ ಕೆಲವು ಹಕ್ಕುಗಳಿಗೆ ಒಡೆಯಳು. ಆ ಹೆಣ್ಣಿನ ಸೌಜನ್ಯ ಇಷ್ಟವಾಯಿತು. ತಲೆ ಕೆಡಿಸಿಕೊಳ್ಳದೇ ಗ್ಲಾಸ್ ಖಾಲಿ ಮಾಡಿಟ್ಟ.

"ನನ್ನ ದಿಢೀರ್ ವಿವಾಹ ಘೋಷಣೆ, ನಂತರದ ಮದುವೆ ಇವೆಲ್ಲ ಷಾಕ್..... ಆಘಾತ... ಆಶ್ಚರ್ಯ.... ಏನಾದ್ರೂ ಆಗಿರಬಹುದು. ನಿನ್ನ ಕೋಆಪರೇಷನ್ ಹಿಂದಿರೋ ವಿಚಾರಗಳ್ನ ಕೆದಕೋಕೆ ಹೋಗೋಲ್ಲ. ನಾನು ಕೋಟ್ಯಾಧಿಪತಿಯಾಗಿರಬಹ್ದು. ಕೈ ಕುಲುಕೋ ಜನ ಇರ್ಬಹ್ದು. ಕಾಲಿಗೆ ಬೀಳೋ ಜನ ಇರ್ಬಹ್ದು. ಆದರೆ ನನ್ನ ಸಮಸ್ತವು ನನ್ನ ತಾಯಿನೇ. ಆಕೆ ಮೊದಲಿನಂತೆ ಆರೋಗ್ಯವಾಗಲು ನಾನು ಏನು ಬೇಕಾದ್ರೂ ಮಾಡಲು ಸಿದ್ಧವಿದ್ದೆ. ಈ ಮಧ್ಯೆ ಒಂದು ಸಣ್ಣ ಪ್ರಯೋಗ. ನೀನು ನನ್ನಮ್ಮ ಉಪಚಾರಕ್ಕೆ ನಿಂತ್ಮೇಲೆ ಆಕೆ ಸುಧಾರಿಸಿದ್ದು. ಪ್ರೇಮ, ವಿವಾಹ ಇಂಥದ್ದರಿಂದ ನೀನು ದೂರ ಹೋಗುವುದು ಬೇಡವಾಗಿಯೇ ಈ ಸರಪಣಿ ಹಾಕಿದ್ದು, ಇದು ಬ್ರಹ್ಮಾಂಡವಾದ ಸ್ವಾರ್ಥವೇ ಇಲ್ಬಹ್ದು. ಆ ಬಗ್ಗೆ ನಂಗೆ ಪಶ್ಚಾತಾಪವಿಲ್ಲ. ನಿನ್ನ ಹೆಸರಲ್ಲಿ ಹತ್ತು ಲಕ್ಷ ರೂಪಾಯಿ ಫಿಕ್ಸೆಡ್‌ಗೆ ಹಾಕಿದ್ದೀನಿ, ಒಂದು ಫ್ಲಾಟ್ ಕೊಂಡಿದ್ದೀನಿ. ಅಮ್ಮ ಪೂರ್ತಿ ಸುಧಾರಿಸಿದ್ಮೇಲೆ ಸಂಪೂರ್ಣವಾಗಿ ಸ್ವತಂತ್ರಳು. ನೀನು ಪ್ರೇಮಿಸಿದವ್ರನ್ನ ವಿವಾಹವಾಗಿ ಸುಖವಾಗಿ ಇರ್ಬಹ್ದು. ನಿಂಗೆ ತಪ್ಪಾಗಿ ಕಂಡರೇ ಅದ್ಕೆ ಇದು ಪ್ರಾಯಶ್ಚಿತ. ನನ್ನಮ್ಮ ಮೊದಲಿನಂತೆ ಎದ್ದು ಓಡಾಡಬೇಕು. ಅದ್ನ ನಾನು ಉಪಕಾರಂತ ತಿಳ್ಕೋತೀನಿ . ಇಡೀ ವಿಷಯವನ್ನ ವಿಸ್ತಾರವಾಗಿ ಅವಳ ಮುಂದಿಟ್ಟ! ಮಹಾ ಸ್ವಾರ್ಥಿಯಂತೆ ಕಂಡ.

ಚೈತನ್ಯನ ಭ್ರಮೆಯಲ್ಲೆ ಇದ್ದ ಕಣ್ಮಣಿಗೆ ಪವಾಡ ಸದೃಶವಾಗಿ ನಡೆದು ಹೋದ ವಿವಾಹದ ಹಿಂದೆ ಒಂದು ಮಹಾ ಶಕ್ತಿಯ ಕೃಪೆಯಿದೆಯೆನಿಸಿತು. ಮುಜುಗರವಿಲ್ಲ, ಕೋಪವಿಲ್ಲ. ಬಾಯಿ ಬಿಟ್ಟು ಹೇಳಿದ್ದರಿಂದ ಅವನೆದೆಯ ಪ್ರೀತಿ, ತೋಳುಗಳು ಮರೀಚಿಕೆಯೇ. ಆತಂಕವೆನಿಸಲಿಲ್ಲ.

"ಬರ್ತೀನಿ...." ಮೇಲೆದ್ದಳು.

ಅಡಿಯಿಂದ ಮುಡಿಯವರೆಗೂ ನೋಟ ಹರಿಸಿದ ಮುದ್ದಾದ ಹುಡುಗಿ ಸೌಂದರ್ಯದ ಖನಿಯೇ, ಷಾಡಾಗಿದ್ದ ಅವಳ ಕುತ್ತಿಗೆಯಿಂದ ಎದೆಯ ಮೇಲೆ ತೂಗಿ ಬಿದ್ದ ಮಾಂಗಲ್ಯ ನೋಡಿ ತಟ್ಟನೆ ಬಡಿದೆಬ್ಬಿಸಿತು ಅವನೆದೆಯ ಭಾವನೆಗಳು. ತಾಳಿ ಕಟ್ಟಿದ್ದ. 'ನಾತಿ ಚರಾಮಿ' ಪ್ರಮಾಣ ಮಾಡಿದ್ದ. ಸಪ್ತಪದಿ ತುಳಿದಿದ್ದ - ಇದೆಲ್ಲದರಿಂದ ಸಹ ಭಾಗಿತ್ವ ಪಟ್ಟಿ ಲಭ್ಯವಾಗಿತ್ತು ಸುಲಭವಾಗಿ. ಅದನ್ನೆಲ್ಲ ಲೆಕ್ಕ ಹಾಕಲು ಹೋಗಲಿಲ್ಲ.

"ಓಕೇ, ವಿಶ್ ಯು ಬೆಸ್ಟ್ ಆಫ್ ಲಕ್. ಅಮ್ಮ ಬೇಗ ಗುಣವಾಗ್ತಾಳೇಂತ ನನ್ನ ನಂಬಿಕೆ." ಒಂದು ಮಾತು ಸೇರಿಸಿದ.

"ಖಂಡಿತ..."ಅಷ್ಟು ಹೇಳಿ ಹೊರಗೆ ಬಂದಳು.

ಆಕಾಶವೆ ತಲೆಯ ಮೇಲೆ ಆವರಿಸಿದಂತಾಯಿತು. ದೊಡ್ಡ ಭಾರವನ್ನು ನಿರ್ದಾಕ್ಷಿಣ್ಯವಾಗಿ ಹೊರೆಸಿದ್ದ. ಹೊರಲು ದೈವ ತನಗೇ ಶಕ್ತಿ ಕೊಡಬೇಕು ಮಾತ್ರವಲ್ಲ ಅದರಲ್ಲಿ ಜಯಶೀಲಳಾಗಬೇಕು.

ಕೆಳಗಿದ್ದ ಪಂಢರಿ ಅವಳ ಕಣ್ಣುಗಳಲ್ಲಿ ವಾಗೋ ಹುಡುಕಿ ನಿರಾಶನಾದ. ಯಜಮಾನನ ಮುಂಭಾಗದ ಕ್ರಾಪ್‌ನಲ್ಲಿ ಒಂದು ಬಿಳಿ ಕೂದಲು ಕಂಡಾಗ ಹೌಹಾರಿದ್ದ. ನಲ್ವತ್ತನೇ ವರ್ಷಕ್ಕೆ ಕಾಲಿಟ್ಟ ನೆನಪಾದಾಗ ಅವನ ಕನಸುಗಳು ಚದುರಿ ಹೋಗಿದ್ದವು. ಇಷ್ಟರ ನಡುವೆಯೂ ಬಂಗ್ಲೆ ಮುಳುಗಿ ಹೋಗಬೇಕಾ? ಹೊಸತನದ ಪ್ರವೇಶ ಬೇಡವೆ?

"ಹಣ್ಣಿನ ರಸ ಕುಡಿದ್ರಾ? ಕಾಲು ಸ್ಪೂನ್ ಸಕ್ಕರೆ ಸೇರಿಸ ಬೇಕಿತ್ತು, ಹಾಗೆ ಕೊಟ್ಟೆ. ಕೋಪ ಮಾಡಿಕೊಳ್ಳಲಿಲ್ಲ ತಾನೇ?" ಬೆದರಿದಂತೆ ಕೇಳಿದಾಗ ಕಣ್ಮಣಿ ನಸುನಗೆ ಬೀರಿದಳು "ನಂಗೇನು ಹಾಗೆ ಅನ್ನಿಸಲಿಲ್ಲ." ಸರಿದು ಹೋದ ಯಜಮಾನಿಯನ್ನೆ ದಿಟ್ಟಿಸಿದ.

ಎರಡು ದಿನದ ನಂತರ ಗೋಪಾಲನಿಂದ ಒಂದು ದೊಡ್ಡ ಪತ್ರ ಬಂದಿತ್ತು. ಬಹಳ ನಿಷ್ಠೂರ ಮಾಡುವುದುರ ಜೊತೆಗೆ ಕೆಲವು ಮಾತು ಸೇರಿಸಿದ್ದ. 'ಒಂದೆರಡು ಸಲ ಒಂಟಿಯಾಗಿದ್ದಾಗ ನಾನು ಯಾಕೆ ನಿನ್ನ

ಮದ್ವೆಯಾಗಬಾರದೂಂತ ಯೋಚಿಸಿದ್ದು ಇದೆ. ಆಮೇಲೆ ನಕ್ಕು ಸುಮ್ಮನಾಗಿದ್ದೆ. ಈಗ ಬರೆದಿದ್ದು ತಪ್ಪೋ ಸರಿಯೋ ಬರೆದಿದ್ದೀನಿ. ವಾಸಂತಿ ಪತ್ರ ಬಂದ ಮೇಲೆಯೇ ನಿಂಗೆ ವಿವಾಹವಾಗಿದ್ದು ತಿಳಿದಿದ್ದು ಇಲ್ಲಿಂದಲೇ ಅಕ್ಷತೆ ಕಾಳು ಎಸೆದು ಆಶೀರ್ವಾದ ಮಾಡಬೇಕೂಂತ ಇದ್ದೆ. ಅದು ಬೇಡಾಂತ ಅನ್ನಿಸಿ ಕವರ್‌ನಲ್ಲಿ ಹಾಕಿ ಕಳ್ಸಿದ್ದೀನಿ. ಸ್ವೀಕರಿಸಿ, ಅದ್ನ ಚೈತನ್ಯರಿಗೂ ತಲುಪಿಸಿ. ಹೇಗೆ ಅನ್ನಿಸುತ್ತೆ ವೈವಾಹಿಕ ಜೀವನ ? ಕಾಗದ ದೊಡ್ಡದಾಯಿತು. ಇದಕ್ಕೆ ರೀಪ್ಲೇ ಕೊಡಲು ಸಾಧ್ಯವೇ' ಅನ್ನೋ ಪ್ರಶ್ನೆ ಕೂಡ ಇತ್ತು.

ಒಂದಲ್ಲ ನಾಲ್ಕು ಸಲ ಪತ್ರ ಓದಿದ್ದಳು. ಇಷ್ಟರ ಮಟ್ಟಿನ ಆತ್ಮೀಯತೆಯಿಂದ ಪತ್ರ ಬರೆದವರು ಯಾರಿದ್ದರು? ಗೋಪಾಲನ ಕಟು ಮಾತಿನಲ್ಲಿ ಕೂಡ ಪ್ರೀತಿ, ವಿಶ್ವಾಸ ಇದೆಯೆನಿಸಿತು. ಒಮ್ಮೆ ಅಲ್ಲಿಗೆ ಹೋಗುವಂತಾದರೆ, ಸಾಧ್ಯವಿಲ್ಲವೆನಿಸಿತು. ವಿವಾಹದ ಸರಪಣಿಯನ್ನು ಬಿಗಿದಿದ್ದ ತಾಯಿಯ ಆರೋಗ್ಯದ ಸುಧಾರಣೆಗಾಗಿ ಒಬ್ಬ ಒಳ್ಳೆಯ ಮಗ!

ಸಂಜೆ ಸುಬ್ಬಲಕ್ಷ್ಮಿಯವರನ್ನು ವ್ಹೀಲ್ ಛೇರ್‌ನಲ್ಲಿ ಕೂಡಿಸಿಕೊಂಡು ಮುಂದಿನ ಗಾರ್ಡನ್‌ಗೆ ತಳ್ಳಿಕೊಂಡು ಹೋದಾಗ ನಿತ್ಯಕ್ಕಿಂತ ಖುಷಿಯಾಗಿದ್ದಳು ಕಣ್ಮಣಿ.

"ಅಮ್ಮ ಗುಬಾಬಿ ಗಿಡಗಳಲ್ಲಿ ತುಂಬ ಹೂ ಕಡ್ಮೆಯಾಗಿದೆ. ಅದ್ನ ತೆಗ್ಸಿ ಬೇರೆ ಹಾಕ್ಸಿದರೇ ಹೇಗೆ?" ಸ್ವತಂತ್ರವಹಿಸಿ ಇದೊಂದು ಮಾತು ಹೇಳಲು ಸಮರ್ಥಳಾದಾಗ, ಇದೊಂದು ಒಳ್ಳೆಯ ಬದಲಾವಣೆಯನಿಸಿ ಸುಬ್ಬಲಕ್ಷ್ಮಿಯ ತುಟಿಯಂಚಿನಲ್ಲಿ ತೆಳುನಗು ತೇಲಿತು. "ಇದ್ನ ಚೈತನ್ಯನ ಮುಂದೆ ಹೇಳಬಹುದಿತ್ತು. ಅಂಥ ಅಗತ್ಯವೂ ನಿಂಗಿಲ್ಲ. ಸ್ವತಃ ಅದ್ನಲ್ಲಿ ನೀನೇ ಮಾಡ್ಸಬಹುದು" ಎಂದಿದ್ದಕ್ಕೆ ನಿರುಕ್ತಳಾಗಿದ್ದಳು.

ಇಡೀ ಬಂಗ್ಲೆಯ ಸುತ್ತ ವ್ಹೀಲ್ ಛೇರ್ ಹಾದು ಹೋಗಲು ದಾರಿಯನ್ನು ಮಾಡಿಸಿದ್ದರು. ಆ ಪ್ರಯೋಗ ಹಿಂದೆ ಯಶಸ್ವಿಯಾಗಿಲ್ಲದಿದ್ದರೂ ಈಗ ಪ್ರಯೋಜನಕ್ಕೆ ಬಂದಿತ್ತು. ತೀರಾ ನೇತಾಡುತ್ತಿದ್ದ ಕಾಲುಗಳು ಅಲ್ಪಸ್ವಲ್ಪ ನೆಲವನ್ನು ತಾಕಲು ಸಮರ್ಥವಾಗಿತ್ತು. ಹಂತ ಹಂತವಾದ ಹೆಳವಣಿಗೆ.

ಹಿಂದಿನ ನಂದಿ ಬಟ್ಟಲ ದೊಡ್ಡ ಗಿಡದ ಬಳಿ ನಿಲ್ಲಿಸಿದಳು ವ್ಹೀಲ್ ಛೇರನ್ನ. ಹದವಾದ ಸುವಾಸನೆ. ಆಹ್ಲಾದಕರವಾದ ಗಾಳಿ. ಈ ವಾತಾವರಣದಿಂದ ತೀರಾ ಸಂತೋಷಿತರಾಗಿದ್ದ ಸುಬ್ಬಲಕ್ಷ್ಮಿ ವ್ಹೀಲ್ ಛೇರ್‌ನ

ಬೆನ್ನಿನ ಹಿಡಿ ಹಿಡಿದು ನಿಂತಿದ್ದ ಕಣ್ಮಣಿಯನ್ನು ಕತ್ತು ತಿರುಗಿಸಿ ನೋಡಿದರು. ಕುತ್ತಿಗೆಯಲ್ಲಿ ಮಾಂಗಲ್ಯದೊಂದಿತ್ತೆ ವಿನಃ ಯಾವುದೇ ಮಾರ್ಪಾಡಿಲ್ಲ ಅವಳ ವೇಷ ಭೂಷಣಗಳಲ್ಲಿ.

"ಕಣ್ಮಣಿ ...." ಎಂದರು.

ಬೆನ್ನಿನ ಹಿಡಿಯಿಂದ ಮುಂದೆ ಬಂದು ಆಕೆಯ ಕಾಲುಗಳ ಬಳಿ ಕೂತಳು. ಅನಾಥಳಿಗೆ ಒಂದು ಆಸರೆ, ಪದವಿಯನ್ನು ಗಳಿಸಲು ಕಾರಣಳಾಗಿದ್ದ ಆಕೆ ದೈವ ಸ್ವರೂಪಳು ಅವಳ ಪಾಲಿಗೆ.

ಯಾವ ಬಲ, ಸ್ಥೈರ್ಯ ಪ್ರಚೋದಿಸಿತೋ ಸುಬ್ಬಲಕ್ಷ್ಮಿಯವರನ್ನು ತಮ್ಮ ಬಲಗೈಯನ್ನು ಪೂರ್ತಿಯಾಗಿ ಎತ್ತಿ ಅವಳ ಕೈ ಮೇಲಿಟ್ಟರು ಹಾಗೆಯೇ ಹಿಡಿದುಕೊಂಡರು. ತಡೆಯಲಾರದ ಆಶ್ಚರ್ಯ, ಸಂತೋಷ. ಆ ಕೈಯನ್ನು ಕೆನ್ನೆ, ತುಟಿಗಳಿಗೆ ಒತ್ತಿಕೊಂಡಳು.

"ಅಮ್ಮ ನಿಮ್ಮ ಕೈಗೆ ಶಕ್ತಿ ಬಂದಿದೆ. ಚಲನೆ ರೂಢಿಸಿದೆ. ಇನ್ಮೇಲೆ ನಿಮ್ಮ ಕೈಯಿಂದ ನೀವೆ ಊಟ ಮಾಡ್ಬಹ್ದು. ನಮ್ಮನ್ನು ಆಶೀರ್ವದಿಸ್ಬಹ್ದು" ಹರ್ಷದಿಂದ ಉದ್ಗರಿಸಿದ್ದು ದೀಪಾಂಕುರದ ಮೂಲೆ ಮೂಲೆಯಲ್ಲೆಲ್ಲ ಧ್ವನಿಸಿ ಗಾಳಿಯ ವೇಗದಲ್ಲಿ ಚೈತನ್ಯನನ್ನ ಮುಟ್ಟಿ ಧಾವಿಸಿಯೇ ಬಿಟ್ಟ. ಅವನ ಹತ್ತು ಕಂಪನಿಗಳು ಹತ್ತು ಹತ್ತು ಕೋಟಿ ಲಾಭ ಗಳಿಸಿದ್ದರೂ ಇಷ್ಟು ಸಂತೇಷ ಲಭಿಸುತ್ತಿರಲಿಲ್ಲ.

ಸ್ವಲ್ಪ ಹೆಚ್ಚಿನ ಪ್ರಯಾಸದಿಂದಲೇ ಮಗನ ಕೈಯನ್ನ ಸವರಿದರು, ಪೂರ್ತಿ ಮೇಲಕ್ಕೆತ್ತಲು ಸಾಧ್ಯವಿಲ್ಲದಿದ್ದರೂ "ಗ್ರೇಟ್... ಗ್ರೇಟ್ ಐ ಯಾಮ್ ವೆರಿ ಹ್ಯಾಪಿ" ತಾಯಿಯ ಕೈಯನ್ನು ಕೆನ್ನೆ ತುಟಿಗಳಿಗೆ ಒತ್ತಿಕೊಂಡು ಕಣ್ಣೀರು ತುಂಬಿ ಗದ್ಗದಿಸಿದ.

ದೀಪಾಂಕುರದ ಇಡೀ ನೌಕರ ವೃಂದ ಸುತ್ತಲು ನೆರೆದು ಆ ದೃಶ್ಯ ನೋಡಿ ಸಂತೋಷಿಸಿದರು. ಪಂಢರಿ ಸಿಹಿಯ ಫೇಡಾಗಳನ್ನು ಹಿಡಿದು ಬಂದೇಬಿಟ್ಟ.

"ಯಜಮಾನ್ರೆ ಸಿಹಿ ತಕ್ಕಳ್ಳಿ, ನಮ್ಗೆ ಇದ್ಕಿಂತ ದೊಡ್ಡ ಒಳ್ಳೆಯ ಸುದ್ದಿ ಇದ್ಯಾ" ಒಂದಿಷ್ಟು ಅತ್ತ, ನಾಜೋಕಾಗಿ ಪೇರಿಸಿದ್ದ ಫೇಡಾಗಳ ಟ್ರೇಯನ್ನು ಚೈತನ್ಯನ ಮುಂದಕ್ಕೆ ತಗೊಂಡು, ಒಂದು ಫೇಡಾ ತಗೊಂಡು ತಾಯಿಯ ಬಾಯಿಗಿಡಲು ಹೋದಾಗ ತಲೆಯಾಡಿಸಿ ನಿರಾಕರಿಸಿದರು. "ಕಣ್ಮಣಿಯ ಬಾಯಿಗೆ ಇಡು" ಆಜ್ಞೆ ಇತ್ತು ಆಕೆಯ ದನಿಯಲ್ಲಿ. ಅದನ್ನು ಪಾಲಿಸಲೇ

ಬೇಕಿತ್ತು. ಸಹಜವಾಗಿ ಅವಳ ತುಟಿಯ ಬಳಿಗೆ ಒಯ್ದಾಗ ಮಿಂಚುವ ತುಟಿಗಳು ಒಂದೇ ಒಂದು ಕ್ಷಣ ಅವನನ್ನು ಅಲುಗಾಡಿಸಿತು. ಕಾರಣವೇನು? ಪ್ರೇಮದ ಪ್ರಕರಣದ ನಂತರ ಅವನೆಂದು ಹೆಣ್ಣಿನ ದೌರ್ಬಲ್ಯಕ್ಕೆ ಒಳಗಾಗದಷ್ಟು ಅಂತರ್ ಶಕ್ತಿ ಅವನದು.

ಕಂಪಿಸುವ ಅಧರಗಳನ್ನು ಮೆಲ್ಲಗೆ ತೆಗೆದಾಗ, ಅವಳ ಮುಖ ಕೆಂದಾವರೆಯ ಬಣ್ಣದಲ್ಲಿ ಅದ್ದಿ ಅದ್ದಿ ತೆಗೆದಂತಾಯಿತು. ಆಗ ಆ ಮುಖದ ಚೆಲುವು ನೂರುಪಟ್ಟು ಇಮ್ಮಡಿಸಿತು. ಅಪಾರವಾದ ಮಾತೃ ಪ್ರೇಮ ಹೊಂದಿದ್ದ ಅವನು ತಾಯಿಯ ವಾಕ್ಯವನ್ನು ವಿನಯದಿಂದ ಪಾಲಿಸಿದ್ದ. ಎಲ್ಲರ ಕೈಗೂ ಫೇಡೆಗಳ ರವಾನೆಯಾಯಿತು. ಸ್ವತಃ ಸುಬ್ಬಲಕ್ಷ್ಮಿಯವರ ಅಂಗೈಯ ಮೇಲೆ ಫೇಡೆ ಇರಿಸಿ ಮೆಲ್ಲಗೆ ಬಗ್ಗಿ ಬಾಯಿಂದ ಎತ್ತಿಕೊಂಡ. ಅತ್ಯಂತ ಅಮೂಲ್ಯವಾದ ಕ್ಷಣ.

ಆ ಸಂತೋಷ ಪೂರ್ತಿ ಸವಿಯುವ ಮುನ್ನವೇ ಒಂದು ಸುದ್ದಿ ಹಿಡಿದು ಬಂದಳು ವಾಸಂತಿ "ಗೋಪಾಲ, ತೆಂಗಿನ ಮರ ಹತ್ತಿ ಕಾಯಿ ಕೀಳೋವಾಗ ಆಸರೆ ತಪ್ಪಿ ಬಿದ್ದು ತಲೆಗೆ ಪೆಟ್ಟಾಗಿದೆಯಂತೆ."

ಅಧಿಕಾರದಿಂದ ಟೀಕೆ ಮಾಡಿದ ವ್ಯಕ್ತಿ ಅಷ್ಟೇ ಸ್ನೇಹ ತೋರಿದ್ದ, ಕೀಟಲೆ ಮಾಡಿದ್ದ. ಅಲ್ಲಿ ಕಳೆದ ದಿನಗಳು ಮರೆಯಲಾರದ್ದು.

"ಛೆ, ಈಗೇನ್ಮಾಡ್ತ ಇದ್ದೀಯಾ?" ಗಲಿಬಿಲಿಗೊಂಡು ಪ್ರಶ್ನಿಸಿದಳು. ಗೋಪಾಲನನ್ನು ಹೋಗಿ ನೋಡುವ ತವಕ ಕಣ್ಮಣಿಗೆ. "ಹೋಗಿ ಬರ್ಬೇಕೂಂತ ತೀರ್ಮಾನಿಸಿದ್ದೀನಿ. ನೀನು ಬರ್ತೀಯೇನೋಂತ ವಿಚಾರಿಸೋಕ್ಬಂದೆ. ಆದರೆ ಈಗಿನ ಸ್ಥಿತಿ ಬೇರೆ" ಅನುಮಾನ ವ್ಯಕ್ತಪಡಿಸಿದಳು ವಾಸಂತಿ.

ಕಣ್ಮಣಿಯ ಉತ್ಸಾಹ ಅಡಗಿತು. ಏನೇ ಆಗಲಿ, ಹೇಗೆಯೇ ಇರಲಿ, ದೀಪಾಂಕುರದ ಸೊಸೆ, ಮುರುಳಿ ಕೃಷ್ಣ ಚೈತನ್ಯರ ಮಡದಿ. ಅವರ ಪರ್ಮಿಷನ್ ಇಲ್ಲದೆ ಹೊರಗೆ ಹೋಗುವುದು ಕಷ್ಟ ಮಾತ್ರವಲ್ಲ, ಒಂದು ವ್ಯವಸ್ಥೆಗೆ ವಿರುದ್ಧ.

"ನಂಗೂ ನೋಡ್ಬೇಕೂಂತ ಅನ್ನಿಸಿದೆ, ಹೇಗೆ?" ನಿಸ್ಸಹಾಯಕತೆ ಮಿನುಗಿತು ಕಣ್ಮಣಿಯ ದನಿಯಲ್ಲಿ. "ರಾತ್ರಿ ಕೇಳು, ವಿವಾಹವಾದ ಮಾತ್ರಕ್ಕೆ ಸ್ವತಂತ್ರವೇನು ಮಾರಿ ಹೋಗೋಲ್ಲ" ಸ್ವಲ್ಪ ಜೋರಾಗಿಯೇ ಹೇಳಿ ತುಟಿ ಕಚ್ಚಿಕೊಂಡಳು. ಇಂಟರ್‌ವ್ಯೂ ದಿನದ ನಂತರ ಇಂದಿಗೂ ಚೈತನ್ಯನನ್ನು

ಭೇಟಿಯಾಗುವ ಅವಕಾಶ ಅವಳಿಗೆ ಕೂಡಿ ಬಂದಿರಲಿಲ್ಲ. ಅವನ ಸ್ಥಾನ ಅಷ್ಟು ಮಟ್ಟಿನದು.

"ನಾನಂತು ಬೆಳಗಿನ ಬಸ್ಸಿಗೆ ಹೋಗ್ತೀನಿ. ನಿನ್ನ ಫೋನ್‌ಗೆ ಕಾಯಲಾ? ನಾವಿಬ್ರೂ ಗೆಳತಿಯರಾದ್ರೂ ಒಂದು ಅಂತರ ಬೆಳ್ದುಹೋಗಿದೆ. ಮೊದಲಿನ ಹಾಗೆ ಮಾತಾಡೋಕೆ ನನ್ನ ನಾಲಿಗೆ ಕೂಡ ತಡವರಿಸುತ್ತೆ" ಮತ್ತೆ ಕಣ್ಮಣಿಯೆ ಹೇಳಿದಳು.

"ಆಯ್ತು ಫೋನ್ ಮಾಡ್ತೀನಿ" ಉಸುರಿದಳು.

ಆಮೇಲೆ ಸುಬ್ಬಲಕ್ಷ್ಮಿಯವರ ಬಳಿಗೆ ಕರೆದೊಯ್ದಳು. ಆತ್ಮೀಯವಾಗಿ ಮಾತನಾಡಿಸಿದ ನಂತರ ಕಣ್ಮಣಿಯೆ ಯಾವುದೋ ಸೂಚನೆ ಇತ್ತರು.

"ಅಮ್ಮ ಗೋಪಾಲ ಮರದಿಂದ ಬಿದ್ದಿದ್ದಾರಂತೆ" ಹೇಳಿದಳು ಮೆಲ್ಲಗೆ. 'ಯಾವ ಗೋಪಾಲ?' ಆಕೆಯ ಕಣ್ಣಿನಲ್ಲಿ ಪ್ರಶ್ನೆ ಇಣಕಿತು. ಅದಕ್ಕೆ ತಕ್ಷಣ ಪ್ರತಿಕ್ರಿಯಿಸಿದ್ದು ವಾಸಂತಿ "ನನ್ನ ಸಾಕಿದ ಶಬರಿಯಮ್ಮನ ಮಗ, ಮಾವ ಅಂತಲೇ ಕರೀತಾ ಇದ್ದಿದ್ದು. ಕಣ್ಮಣಿಯನ್ನು ಕರ್ಕೊಂಡ್ಹೋಗಿದ್ದೆ ಒಂದ್ಸಲ. ಅಲ್ಲಿನವರೆಲ್ಲ ಇವಳ್ನ ತುಂಬ ಹಚ್ಚಿಕೊಂಡಿದ್ರು. ಗೋಪಾಲನಂತೂ ಇವಳನ್ನು ಕಂಡರೆ ತುಂಬ ಇಷ್ಟ" ಕಡೆಯ ಮಾತು ತುಟಿ ಮೀರಿ ಬಂದದ್ದೇನಲ್ಲ ಅವನು ವ್ಯಕ್ತಪಡಿಸಿದನ್ನು ಧೈರೆಕ್ಟಾಗಿ ಹೇಳಿದಳಷ್ಟೆ.

ಸುಬ್ಬಲಕ್ಷ್ಮಿಯದು ಮೃದುವಾದ ಒಳ್ಳೆಯ ಮನಸ್ಸಾದುದರಿಂದ ನೆಗೆಟಿವ್ ಆಗಿ ಯೋಚಿಸಲಿಲ್ಲ. "ಕಣ್ಮಣಿಯು ಸ್ವಭಾವ ಎಲ್ಲರಿಗೂ ಇಷ್ಟವಾಗುವಂಥದ್ದೇ" ಎಂದರು.

"ಬೆಳಿಗ್ಗೆ ನಾನು ಹೋಗ್ತಾ ಇದ್ದೀನಿ. ಕಣ್ಮಣಿನ ಕೂಡ ಕರ್ಕೊಂಡ್ಹೋಗೋಣಾಂತ" ತೀರಾ ಸಂಕೋಚದಿಂದ ಬಂದ ವಿಷಯವನ್ನು ಅರುಹಿದಳು. ಆಕೆ ಪೂರ್ತಿ ಜವಾಬ್ದಾರಿ ತಮ್ಮ ಮೇಲೆ ಹಾಕಿಕೊಳ್ಳಲಿಲ್ಲ ಚೈತನ್ಯನನ್ನು ಕೇಳ್ಲಿ.

ಹೊರಗೆ ಬಂದ ಮೇಲೆ ಪಿಸು ದನಿಯಲ್ಲಿ ಗೊಣಗಿದಳು. "ಅಡ್ಡ ಗೋಡೆಯ ಮೇಲೆ ದೀಪವಿಟ್ಟ ವರಸೆ ಇದು. ನಮ್ಮ ಅವ್ರ ನಡ್ವೇ ದೊಡ್ಡ ಅಂತರವಿರೋದ್ರಿಂದ ಕನಿಷ್ಟ ಕೈಗೆ ಎಟುಕಿಸಿಕೊಳ್ಳೋದು ಕೂಡ ಕಷ್ಟ. ಈಗ್ಲೂ ನಂಗೆ ನಿಜವಾ, ಕನಸ್ಸಾ ಅನ್ನಿಸುತ್ತೆ. ನಿರಂತರವಾಗಿ ಅವ್ರ ವಿವಾಹದ ಪ್ರಯತ್ನಗಳು ನಡೆದಾಗ್ಲೂ ನಿರಾಕರಿಸಿದ ಮಹಾಪುರುಷ

ಆರಾಮಾಗಿ ಈ ಕುತ್ತಿಗೆಗೆ ತಾಳಿ ಕಟ್ಟಿದ ಅಂದ್ರೆ ಪವಾಡವಲ್ವಾ? ಹಿಂದೆ ನೀನು ಹೇಳ್ತಾ ಇದ್ದ ಮಾತುಗಳಿಗೆ ಈಗ ಅರ್ಥ ಸಿಕ್ತಾ ಇದೆ. ಬಹುಶಃ ನಿಮ್ಮಿಬ್ಬರ ಸಂಬಂಧ ಈ ಜನ್ಮದಲ್ಲ, ಹಿಂದಿನ ಜನ್ಮದಲ್ಲಿ ಚೈತನ್ಯ ನಿನ್ನ ಸಂಗಾತಿಯಾಗಿರ್ಬಹುದ್ದು. ಅದರ ಕನಿಷ್ಟ ಅರಿವು ನಿನಗಿದ್ದರಿಂದ್ಲೇ, ಅವ್ರನ್ನ ನೋಡಿದ ಕೂಡಲೇ ನಿನ್ನಲ್ಲಿನ ಆವೇದನೆ ಪುಟಿದಿದ್ದು."

ಒಂದು ಸ್ಪಷ್ಟವಾದ ರೂಪುಕೊಟ್ಟಳು ವಾಸಂತಿ, ಮಾತಾಡಲಿಲ್ಲ ಕಣ್ಮಣಿ. ಗೆಳತಿಯ ಮಾತುಗಳಲ್ಲಿ ನೂರಕ್ಕೆ ನೂರರಷ್ಟು ಸತ್ಯವಿದೆಯೆನಿಸಿತು.

"ನಿನ್ನ ಫೋನ್‌ಗೆ ಕಾಯ್ತ ಇರ್ತೀನಿ" ಹೇಳಿ ಹೋದಳು.

ಇಂದು ಸುಬ್ಬಲಕ್ಷ್ಮಿ ಕೂಡ ಸಂತೋಷದಿಂದ ಇದ್ದುದ್ದರಿಂದ ಎರಡು ಸ್ಪೂನ್ ಮೊಸರನ್ನ ಹೆಚ್ಚಿಗೆ ತಿಂದಿದ್ದು ಕೂಡ ವಿಶೇಷವೇ, ಪಂಡಿತ್ ರವಿಶಂಕರ್‌ರ ಸಿತಾರ್ ವಾದನದ ಕ್ಯಾಸೆಟ್ಟು ಹಚ್ಚಿ ಹೊರಗೆ ಬಂದಳು. ಯಾವುದೋ ಪಾರ್ಟಿಗೆ ಹೋಗಿದ್ದ ಚೈತನ್ಯ ಬಂದವನೆ ನೇರವಾಗಿ ತಾಯಿಯ ನೋಡಿ ತನ್ನ ಬೆಡ್‌ರೂಂಗೆ ಹೋಗಿಬಿಟ್ಟ.

"ಅಮ್ಮ ಹಾಲು ಕೊಟ್ಬಿಡಿ" ಪಂಢರಿ ಹಾಲಿನ ಗ್ಲಾಸ್ ಇದ್ದ ಟ್ರೇಯನ್ನು ಅವಳ ಮುಂದೆ ಹಿಡಿದಾಗ ಚೈತನ್ಯ ಹೇಳಿದ ಮಾತಿನ ನೆನಪಾಯಿತು. "ಈ ಕೆಲ್ಸಗಳ್ನ ಮಾಡೋಕೆ ಬೇರೆ ಜನರಿದ್ದಾರೆ. ನೀನು ಯಾಕೆ ಮಾಡ್ತೀಯಾ?" ನಿರಾಕರಿಸದೆ ತಗೊಂಡಳು.

ಬಾಗಿಲ ಮೇಲೆ ಕೈಯಿಟ್ಟಾಗ ಒಂದು ರೀತಿಯ ವೀಣೆಯ ಝೇಂಕಾರದಂಥ ಶಬ್ದ. "ಯೆಸ್.... ಕಮಿನ್" ಎಂದ. ಅವನು ಪಂಢರಿಯೆಂದು ಭಾವಿಸಿದ್ದ. ಅವನು ರೂಮಿನಲ್ಲಿದ್ದಾಗ ಬರುತ್ತಿದ್ದವನು, ನಾಲ್ಕು ಮಾತು ಆಡುತ್ತಿದ್ದವನು ಅವನೊಬ್ಬನೇ.

ಒಳಗಡಿ ಇಟ್ಟವಳು ಸಶಬ್ದವಾಗಿ ನಿಂತಳು. ಪಿ.ಸಿ.ಯ ಮುಂದೆ ಕೂತಿದ್ದವನು ಹಿಂದಕ್ಕೆ ತಿರುಗಿದ. ಅವನ ಹುಬ್ಬುಗಳು ಮೇಲೇರಿದ್ದವು. ಅವನನ್ನು ಆಕರ್ಷಿಸಲು ಕನಿಷ್ಟ ಕುಡಿಮಿಂಚು ಹರಿಸಿದ ಹುಡುಗಿಯಲ್ಲ.

"ಪರ್ಮಿಷನ್ ಬೇಕಾಗಿತ್ತು" ಎಂದು ಉಗುಳು ನುಂಗಿದಳು.

"ಯಾಕೆ?" ಅವನು ಹುಬ್ಬುಗಳು ಗಂಟಾಯಿತು ನಿಧಾನವಾಗಿ.

ಅವಳು ಇಲ್ಲಿ ಬರೀ ವರ್ಕರ್ ಆಗಿದ್ದರೇ ಲೀವ್ ಲೆಟರ್ ಮುಂದಿಟ್ಟು ಸುಳ್ಳು ಸೃಷ್ಟಿಸಿ ಹೋಗಬಹುದಿತ್ತು. ಅದನ್ನೆಲ್ಲವನ್ನು ಊಹಿಸಿಯೇ ಅವಳ

ಕಾಲುಗಳಿಗೆ ಬೇಡಿಯನ್ನು ತೊಡಿಸಿದ್ದ.

"ಗೋಪಾಲ ಮರದಿಂದ ಬಿದ್ದು ತಲೆಗೆ ತುಂಬ ಪೆಟ್ಟಾಗಿದೆಯಂತೆ. ವಾಸಂತಿ ಹೋಗ್ತಾ ಇದ್ದಾಳೆ, ಅವ್ರನ್ನ ನೋಡೋಕೆ" ಅಷ್ಟು ಹೇಳಿದ ಕೂಡಲೇ ಅವನಲ್ಲಿ ನೂರು ಪ್ರಶ್ನೆಗಳು. 'ಯಾರು ಆ ಗೋಪಾಲ?' ಆ ಹೆಸರಿನ ಪ್ರಸ್ತಾಪ ಪಂಢರಿ ಮಾಡಿದ ನಂತರವೇ 'ರಿಸ್ಕ್' ತಗೊಂಡಿದ್ದು.

ಅವನು ಮುಖದ ಭಾವನೆಯನ್ನ ಅರಿತೇ ನುಡಿದಳು "ಅಮ್ಮನಿಗೆ ಮಾರ್ನಿಂಗ್ ವ್ಯಾಯಾಮ, ಸ್ನಾನ ಮುಗ್ಸಿದ ನಂತರ ಹೊರಟು, ರಾತ್ರಿಯ ಬಸ್ಸಿಗೆ ಅಲ್ಲಿಂದ ವಾಪಸ್ಸಾದರೇ ಬೆಳಗಿನ ಜಾವ ಇಲ್ಲಿರಬಹುದು ಪ್ಲೀಸ್...." ಎಂದಳು.

"ಓಕೇ, ಕಾರಿನಲ್ಲಿ ಹೊರಟು ರಾತ್ರಿ ಹಿಂದಿರುಗಿಬಿಡು" ಅಂತು ಪರ್ಮಿಷನ್ ಕೊಟ್ಟ "ಐ ಎವರ್ ಗ್ರೇಟ್ ಫುಲ್ ಟು ಯು. ಇಂದು ಅಮ್ಮನ ಕೈಯಲ್ಲಿ ತಿಂದ ಫೇಡಾಗೆ ಯಾವ್ದು ಸಮವಲ್ಲ" ಕೃತಜ್ಞತೆ ತಿಳಿಸಿದ. ಅವಳ ಬಾಯಿಂದ ಮಾತುಗಳು ಹೊರಡಲಿಲ್ಲ.

ಫೋನ್‌ನಲ್ಲಿ ವಾಸಂತಿಗೆ ವಿಷಯ ಮುಟ್ಟಿಸಿದಳು "ನೀನು ರೆಡಿಯಾಗಿರು. ಕಾರಿನಲ್ಲಿ ಹೋಗಿ ರಾತ್ರಿ ವಾಪಸ್ಸು ಆಗ್ಬಹುದು" ಅವಳು ಅಪಸ್ವರವೆತ್ತಿದಳು "ಕಾರೇನು ಬೇಕಿರಲಿಲ್ಲ. ನಾಲ್ಕು ದಿನ ಬಿಟ್ಟು ಬರಬಹುದಿತ್ತು. ಆತುರಾತುರವಾಗಿ ಹೋಗಿ ಬರೋದೊಂದ್ರೆ.... ತಲೆನೋವು."

"ಏನೂ ಮಾಡೋಕ್ಕಾಗೋಲ್ಲ. ಇಲ್ಲಿ ಅಮ್ಮನ ಹತ್ರ ನಾನು ಇರಲೇಬೇಕು" ಫೋನಿಟ್ಟೇ ಬಿಟ್ಟಳು. ಇದೇನು ಮಹಾ ಬದಲಾವಣೆಯಾಗಿ ಕಾಣಲಿಲ್ಲ. ಒಮ್ಮೆ ಚೈತನ್ಯನನ್ನ ನೋಡಿದಾಗಲೇ ಅವನಿಗಾಗಿ ಕನವರಿಸಿದ್ದ ಹೆಣ್ಣು ಈಗ ಅವನ ಬೆಚ್ಚನೆಯ ನೆರಳಿನಿಂದ ಹೊರ ಬಂದಾಳಾ?

ಐದರ ಸುಮಾರಿಗೆ ಹೊರಡುವುದೆಂದು ತೀರ್ಮಾನಿಸಿದ್ದರಿಂದ, ರಾತ್ರಿಯೆಲ್ಲ ನಿದ್ರಿಸಲಾಗಲಿಲ್ಲ. ಈಗ ಕೆಲವು ಜವಾಬ್ದಾರಿಗಳು ಇದ್ದವು. ಹಂಸ ತೂಲಿಕದಂತೆ ತೇಲುತ್ತಿದ್ದ ಕಾರು ಮಲೆನಾಡಿನ ಸೆರಗಿನತ್ತ ಧಾವಿಸತೊಡಗಿದಾಗ ಗೋಪಾಲನ ಬಗ್ಗೆ ಆತಂಕದ ಜೊತೆ ಎರಡು ಹಣ್ಣಿನ ಬುಟ್ಟಿಗಳನ್ನು ಡಿಕ್ಕಿಯಲ್ಲಿ ತಂದಿರಿಸಿದ್ದ ಪಂಢರಿ ಜ್ಞಾಪಿಸಿದ ಮೆಲು ದನಿಯಲ್ಲಿ.

"ಅಮ್ಮ ಚೇತರಿಸಿಕೊಂಡಿದ್ದು ಯಜಮಾನರಿಗೆ ಸಂತಸ ತಂದಿದೆ" ಇದು ಒಂದು ವಿಧದಲ್ಲಿ ಎಚ್ಚರಿಕೆ ಕೂಡ. ತಲೆದೂಗಿದ್ದಳು.

ಚೈತನ್ಯನ ನೆಚ್ಚಿನ ಬಂಟ ಬಾಡಿಗಾರ್ಡ್ ಹಿಂದಿನ ಕಾರಿನಲ್ಲಿ ಡಾಕ್ಟರ್ ಜೊತೆ ಹಿಂಬಾಲಿಸುತ್ತಿದ್ದುದು ತಲುಪಿದ ನಂತರವೇ ಗೊತ್ತಾಗಿದ್ದು. ಮನೆಯ ಮುಂದೆ ಇಳಿದಾಗ ಅವಳ ನೋಟ ಒಮ್ಮೆ ವಾಡೆಯತ್ತ ಹೊರಳಿತು. ಸಾಲಿಗ್ರಾಮ, ಹಾವು, ಬೆಳ್ಳಿ ತಟ್ಟೆ ಬಾವುಲಿಗಳು, ಧೂಳು, ಒಳಗೆ ಭಯ ಹುಟ್ಟಿಸುವ ವಾತವರಣ ಎಲ್ಲಾ ನೆನಪಾಯಿತು.

"ಈಗಲೇನಾ.... ಬಂದಿದ್ದು?" ಗೋಪಾಲನ ಅತ್ತಿಗೆ ಬಂದು ಕಾರಿನ ಚಂದವನ್ನು ಕಣ್ಣಿನಿಂದಲೇ ಸವಿಯುತ್ತ ಒಮ್ಮೆ ಅಸೂಯೆಯ ನೋಟ ಬೀರಿದಳು. ಅತೃಪ್ತ ಹೆಣ್ಣು "ಹೌದು...." ಎಂದಳು ಕಣ್ಮಣಿ. ಮುಖ ತಿರುಗಿಸಿದಳು ವಾಸಂತಿ.

ಡ್ರೈವರ್ ಹಣ್ಣಿನ ಬುಟ್ಟಿಗಳನ್ನ ಇಳಿಸಿ ವಿನಯದಿಂದ ಕಣ್ಮಣಿಯತ್ತ ನೋಡಿದಾಗ, ಅವಳಿಗೆ ಸಂಕೋಚದ ಜೊತೆ ಮುಜುಗರವೆ ಇಂಥ ಮರ್ಯಾದೆಯಿಂದ ಕೊಟ್ಟು ಅಭ್ಯಾಸವಾಗಿತ್ತೇ ವಿನಃ ಪಡೆದಿದ್ದಿಲ್ಲ.

"ಒಳ್ಗಡೆ ಇಡು" ಎಂದಳು ಮೆಲುವಾಗಿ.

ಅವನು ಒಯ್ದು ಒಳಗಡೆ ಇಟ್ಟು ಬಂದು ಕಾರನ್ನು ಪಕ್ಕದ ಮರದ ನೆರಳಿಗೆ ಒಯ್ಯುವ ವೇಳೆಗೆ ಶಬರಿ, ಪತಿಯೊಡಗೂಡಿ ಹೊರಗೆ ಬಂದವರು ಕಣ್ಣೀರು ತುಂಬಿದರು.

"ಹೇಗಾಯ್ತು, ನೋಡು. ಬರೀ ಹುಡ್ಗಾಟದ ಹುಡ್ಗ."

"ಹೇಗಿದ್ದಾರೆ?" ಎಂದಳು ಆತಂಕದಿಂದ.

ಕೈಹಿಡಿದು ಗೋಪಾಲ ಇದ್ದ ಕೋಣೆಗೆ ಕರೆದೊಯ್ದರು. ತಲೆ ಕೈ ಕಾಲುಗಳಿಗೆ ಪಟ್ಟಿ ಹಾಕಿಕೊಂಡು ಮಲಗಿದ್ದ ಅವನ ಮುಖದಲ್ಲಿ ನೋವಿನ ಜೊತೆ ತುಂಟತನ ಕೂಡ ಇದೆಯೆನಿಸಿತು.

"ಗೋಪಾಲ ಯಾರು ಬಂದಾರೆ, ನೋಡು" ಶಬರಿ ಮೃದುವಾಗಿ ಅವನ ತೋಳು ತಟ್ಟಿದಾಗ ಕಣ್ಮಣಿ "ಬೇಡ, ಎಚ್ಚರಿಸ್ಬೇಡಿ. ನಿದ್ದೆ ಮಾಡೋ ಹಂಗಿದೆ" ಹೊರಗೆ ಕರೆದೊಯ್ದರು.

ಬಿದ್ದಾಗಿನಿಂದ ತಾವು ಪಟ್ಟ ಪಾಡನ್ನು ವಿವರಿಸಿದ ಆಕೆ ಹಿಂದಿನ ದಿನ ಮನೆಗೆ ಕರೆದೊಯ್ಯಬೇಕೆಂದು ಹಟ ಹಿಡಿದ ಮಗನ ಬಗ್ಗೆ ಬೇಸರ ವ್ಯಕ್ತಪಡಿಸಿದರು. "ಆಸ್ಪತ್ರೆಯಲ್ಲಿದ್ದರೇ ಒಂದಿಷ್ಟು ಧೈರ್ಯ. ಇವ್ನು ಕೇಳಬೇಕಲ್ಲ. ನಂಗೆ ಮನೆಯಲ್ಲಿ ಕೈಕಾಲು ಆಡೋಲ್ಲ, ಮೂರ್ಹೊತ್ತು ಇವ್ನ

ಬದಿಯಲ್ಲಿ ಕೂಡೋಂಗಾಗಿದೆ" ಮೂಗೊರೆಸಿಕೊಂಡರು.

ಕಣ್ಮಣಿಗೆ ಮಾಡೋ ಉಪಚಾರದ ವೈಖರಿಯೇ ಬದಲಾಯಿತು. ಶಬರಿಯ ಸೊಸೆಯರು ಅವಳನ್ನು ಸುತ್ತಿಕೊಂಡು ಮುಟ್ಟಿ ಮುಟ್ಟಿ ಮಾತಾಡಿಸಿದರು.

"ತುಂಬ ಶ್ರೀಮಂತರಂತೆ. ಅವರತ್ರ ಇರೋ ಹಣಕ್ಕೆ ಲೆಕ್ಕವೇ ಇಲ್ವಂತೆ. ನೀನು ಪುಣ್ಯವಂತೆ ಬಿಡು" ಒಬ್ಬಳ ಉದ್ಗಾರ.

"ಮೈಮೇಲೆ ಸ್ವಲ್ಪನೇ ಚಿನ್ನ ಇದೆ" ಹಿರಿಯವಳು ಅವಳನ್ನು ತಪಾಸಿಸಿ ನುಡಿದಳು. "ನಮ್ಮಂಗೇ ಬೇಜವಾಬ್ದಾರಿ ಇರುತ್ತ ಅವ್ರಿಗೆ! ಒಡ್ವೆಯಲ್ಲ ತೆಗೆದಿಟ್ಟೇ ಬಂದಿದ್ದಾಳೆ" ಎರಡನೆಯವಳ ಸಮಾಧಾನ.

ಅವರುಗಳ ಮಾತುಗಳು ತಲೆನೋವು ಬರೆಸಿದರೂ ಕೇಳುವುದು ಅನಿವಾರ್ಯವಾಗಿತ್ತು ಕಣ್ಮಣಿಗೆ. ಆ ಸಮಯದಲ್ಲಿ ಮೌನವನ್ನು ಆಶ್ರಯಿಸಿದಳು.

ಗೋಪಾಲನಿಗೆ ಎಚ್ಚರವಾಗಿದೆಯೆಂದು ಶಬರಿ ಕರೆದೊಯ್ದಾಗ ಮುಲಾಜಿಲ್ಲದೆ ಕಣ್ಣೊಡೆದ "ಹೇಗಿದ, ಮ್ಯಾರೀಡ್ ಲೈಫ್? ಅಲ್ಲಿ ಶ್ರೀಮಂತಿಕೇನೆ ಕಲರ್‌ಫುಲ್" ಅಚ್ಚ ಕನ್ನಡದಲ್ಲಿ ಮಾತಾಡುತ್ತಿದ್ದವನು ಮೂರು ಇಂಗ್ಲೀಷ್ ಪದಗಳನ್ನು ಬಳಸಿ ಅಚ್ಚರಿಗೊಳಿಸಿದ.

"ಹೇಗಿದ್ದೀರಾ?" ಕೇಳಿದಳು ಕಣ್ಮಣಿ.

"ನೋಡಿದ್ರೆ ಗೊತ್ತಾಗ್ತ ಇದೆಯಲ್ಲ, ನನ್ನ ಪತ್ರಕ್ಕೆ ನೀವು ಉತ್ತರ ಬರೆಯಬಹುದೆಂದುಕೊಂಡಿದ್ದು ಆಮೇಲೆ ಸರಿಯಲ್ಲಾಂತ ಅನ್ನಿಸ್ತು. ಏನಿವೇ ನೀವು ಬಂದಿದ್ದು ಸಂತೋಷ" ಎಂದವನು ವಾಸಂತಿಯತ್ತ ನೋಟ ಹರಿಸಿ "ಏಯ್ ಹೇಗಿದ್ದಿ? ಹೇಗಿದ್ದಾನೆ, 'ನಿನ್ನ' ಬೇಡ ಕರ್ಣ" ಕಣ್ಣು ಮಿಟುಕಿಸಿ ಛೇಡಿಸಿದ.

"ಯಾರು ಕರ್ಣ?" ಮೂಸಂಬಿ ರಸ ತೆಗೆಯುತ್ತಿದ್ದ ಶಬರಿ ಕತ್ತು ತಿರುಗಿಸಿ ಕೇಳಿದಾಗ 'ಹೇಳಲಾ?' ಎನ್ನುವಂತೆ ಅವಳತ್ತ ನೋಡಿದವನು "ಈ ಕಲಿಯುಗದಲ್ಲಿ ಒಬ್ಬ ದಾನಶೂರ ಕರ್ಣ ಹುಟ್ಟಿಕೊಂಡಿದ್ದಾನೆ. ಅವ್ನ ಬಗ್ಗೆ ಬಿಡು" ಅಲ್ಲಿಗೆ ಆ ವಿಷಯನ ಮರೆಸಿದ ಗೋಪಾಲ.

ವಾಸಂತಿ ಒಂದಿಷ್ಟು ಅತ್ತಳು. ಯಾಕೆ? ಎಲ್ಲರ ಮನಸ್ಸಿನಲ್ಲು ಪ್ರಶ್ನೆ ಮೂಡಿದರೂ ಯಾರು ಕೇಳಲಿಲ್ಲ. ಗೋಪಾಲ ಛೇಡಿಸಿದ.

"ಯಾಕೆ ಆ ಅಳು? ಪೆಟ್ಟು ಮಾಡಿಕೊಂಡು ಬಿದ್ದಿರುವ ಗೋಪಾಲನಿಗಾಗಿಯೋ ಅಥವಾ ದಾನಶೂರ ಕರ್ಣನಿಗಾಗಿಯೋ, ಇಲ್ಲ ನಮ್ಮ ದುದ್ದನಿಗಾಗಿಯೋ?"

ಹಣ್ಣಿನ ರಸ ಹಿಂಡಿಕೊಂಡು ಬಂದ ಶಬರಿ ರೇಗಿದರು. "ಹೆಚ್ಚು ಮಾತು ಬೇಡಾಂತ ಡಾಕ್ಟು ಹೇಳಿಲ್ವಾ? ಯಾರು ಆ ಕರ್ಣ? ದುದ್ದನ ವಿಷ್ಯ ಯಾಕೆ ಬಿಡು! ಈ ಮನೆಗೂ ಆ ಮನೆಗೂ ವಿರಸ ಬಂದು ಹೋಯಿತಲ್ಲ. ನಿಂಗೋಸ್ಕರ ಕಣ್ಮಣಿ ತಾಜಾ ಹಣ್ಣು ತಂದಿದ್ದಾಳೆ. ಒಂದು ಹಣ್ಣಿಗೇನೇ ಗ್ಲಾಸ್ ಭರ್ತೀರಸ" ಮಗನಿಗೆ ಕುಡಿಸಲು ಮುಂದಾದಾಗ, ಗೋಪಾಲನನ್ನು ದಿಂಬಿಗೆ ಒರಗಿಸಲು ಇಬ್ಬರೂ ಸಹಾಯ ಮಾಡಿದರು.

ಅರ್ಧ ರಸ ಕುಡಿದ ಗೋಪಾಲ "ಅಮ್ಮ ಭರ್ಜರಿ ಔತಣದ ಅಡಿಗೆ ಮಾಡ್ಸು. ಕಣ್ಮಣಿ ಮದ್ವೆಯಾದ್ಮೇಲೆ ಮೊದಲನೇ ಸಲ ಬಂದಿದ್ದಾಳೆ" ಹೇಳಿದ. ಖುಷಿಯಿಂದ ಎದೆಯಾಳದಲ್ಲಿ ಎಲ್ಲೋ ನೋವಿದೆಯೆನಿಸಿತು ಅವನಿಗೆ. ಪತ್ರದಲ್ಲಿ ಅವಳಿಗೆ ಉತ್ಪ್ರೇಕ್ಷೆಯ ಮಾತನ್ನು ಬರೆದಿರಲಿಲ್ಲ. 'ಕೆಲವೊಮ್ಮೆ ಅವಳನ್ನು ಯಾಕೆ ತಾನು ವಿವಾಹವಾಗಬಾರದು?' ಎಂದು ಕೊಂಡಿದ್ದುಂಟು.

"ಎಲ್ಲಾ ಹೇಳಿ ಬಂದಿದ್ದೀನಿ. ನಾನೊಮ್ಮೆ ಹೋಗಿ ಮಾತಾಡ್ತೀನಿ. ಹೆಚ್ಚು ಮಾತಾಡ್ಬೇಡ" ಶಬರಿ ಹೊರಗೆ ಹೋದರು. ತಾಯಿಯ ಮಾತಿಗೆ ನಕ್ಕ "ಸಾರಿ, ವಾಸಂತಿ ! ಇನ್ನ ದುದ್ದನ ವಿಷ್ಯ ಪ್ರಸ್ತಾಪವಾಗೋಲ್ಲ, ಬಿಡು. ಆ ಮನೆಗೂ ಈ ಮನೆಗೂ ಜಗಳವಾಗಿ ಹೋಗಿ ಬರೋದು ಕೂಡ ಬಂದ್. ಆದ್ರೂ ನಂಗೂ, ದುದ್ದನಿಗೂ ಇದು ಅನ್ವಯಿಸೋಲ್ಲ. ನಾನು ಆಗಾಗ ಹೋಗೋದು ಮನೆಯವ್ರಿಗೆ ಇಷ್ಟವಿಲ್ಲ. ಕೆಲವನ್ನು ನಾನು ಪಾಲಿಸೋಲ್ಲ. ದುದ್ದ ಮಗುವಿನಂತೋನು, ಬಂದರೇ ನನ್ನ ಹಿಂದೆ ಓಡಾಡಿಕೊಂಡು ಇರ್ತಾನೆ. ಅವ್ನ ಮನೆ ಆಳುಗಳು ಬಂದ್ ಕರ್ಕಂಡ್ ಹೋಗ್ತಾರೆ. ಇಲ್ಲ ನಾನೇ ಕರ್ಕಂಡ್ಹೋಗಿ ಬಿಟ್ಟುರ್ತೀನಿ. ಆ ವಿಷ್ಯಕ್ಕೆ ಪೂರ್ತಿ ವಿರಾಮ. ಕರ್ಣನ ವಿಷ್ಯ ಎಲ್ಲಿವರ್ಗೆ ಬಂತು?" ಎಂದ ನೋವಿನ ಉಸಿರನ್ನು ದಬ್ಬುತ್ತ.

ಅವನ ಹೆಚ್ಚು ಮಾತು ಕಣ್ಮಣಿಗೆ ಇಷ್ಟವಾಗಲಿಲ್ಲ.

"ಹೆಚ್ಚು ಮಾತಾಡೋದ್ಬೇಡ. ಈಗ ಕರ್ಣನ ಕಾಟ ಕಮ್ಮಿಯಾಗಿದೆ. ಚೈತನ್ಯ ಗ್ರೂಪ್ಸ್ ಆಫ್ ಕಂಪನೀಸ್‌ನ ಹೆಡ್ ಆಫೀಸ್ ಅಕೌಂಟ್ ಸೆಕ್ಷನ್‌ನಲ್ಲಿ ವಾಸಂತಿ ಕೆಲ್ಸದಲ್ಲಿರೋದು. ಅಲ್ಲಿ ಬಿಗಿ ಬಂದೋಬಸ್ತು. ಸೆಕ್ಯೂರಿಟಿ

ಪರ್ಮಿಷನ್ ಇಲ್ದೇ ಒಳ್ಗೇ ಹೋಗೋ ಹಾಗಿಲ್ಲ. ಆ ವಿಷ್ಯಕ್ಕೂ ಫುಲ್ ಸ್ಟಾಫ್" ಎಲ್ಲಾ ಒಂದೇ ಸಲ ಹೇಳಿ ಮುಗಿಸಿದ ಕಣ್ಮಣಿಯನ್ನು ಕಣ್ಣರಳಿಸಿ ನೋಡಿದವನು ಮುಗುಳ್ನಕ್ಕ.

ಶಬರಿ ಬಂದು ಅವರನ್ನು ಊಟಕ್ಕೆ ಕರೆದೊಯ್ದಳು. ಹುಳಿ ಸೊಪ್ಪಿನ ತಂಬುಳಿ, ಬಾಳೆಕಾಯಿ ಉಪ್ಪೇರಿ, ಎಳ್ಳಿಕಾಯಿ ಗೊಜ್ಜು ,ಹಲಸಿನ ಹಪ್ಪಳ, ಚಿತ್ರಾನ್ನ ಪಾಯಸದ ಜೊತೆ ಒಂದಿಷ್ಟು ಹಾಲು ಕೀರು - ಬಹಳ ಅಕ್ಕರೆಯಿಂದ ಕೂಡಿಸಿ ಬಡಿಸಿ ಅವಳ ಕಣ್ಣನ್ನು ತೇವವಾಗಿಸಿದರು.

ಡ್ರೈವರ್‌ಗೆ ಕರೆದೊಯ್ದು ಊಟ ಹಾಕುವ ವೇಳೆಗೆ ಕಂಪನಿಯ ಕಾರಿನಲ್ಲಿ ಚೈತನ್ಯನ ಬಾಡಿಗಾರ್ಡ್ ಡಾಕ್ಟರೊಂದಿಗೆ ಬಂದು ಪರಿಚಯಿಸಿಕೊಂಡಾಗ ಮನೆಯವರಿಗೆ ಮಾತ್ರವಲ್ಲ ಕಣ್ಮಣಿಗೂ ದಿಗ್ಭ್ರಮೆಯೇ. ಏನೇನು ಅರ್ಥವಾಗಲಿಲ್ಲ. ಕೂಲಂಕುಷವಾಗಿ ಪರೀಕ್ಷಿಸಿದ ಡಾಕ್ಟರ್ ಮೆಡಿಸಿನ್‌ಗಳನ್ನು ಬರೆದುಕೊಡುವ ಬದಲು ತಾವೇ ಸ್ಟಾಕ್ ತಂದಿದ್ದವರಂತೆ ಕೊಟ್ಟರು.

"ಒಂದೆಂಟು ದಿನ ಬೆಡ್ ರೆಸ್ಟ್ ತಗೊಂಡರೇ ನಾರ್ಮಲ್‌ಗೆ ಬಂದ್ಬಿಡ್ತೀರಾ, ಡೋಂಟ್ ವರಿ."

ಕಣ್ಮಣಿಯ ಬಾಯಿಂದ ಒಂದೇ ಒಂದು ಮಾತು ಹೊರಡಲಿಲ್ಲ. 'ನೋಡಿದ್ಯಾ?' ಎನ್ನುವಂತೆ ಹುಬ್ಬು ಹಾರಿಸಿದ ಗೋಪಾಲ "ಈ ಸಲ ಬರೋವಾಗ ಅಭಿನಂದನೆ, ಕೃತಜ್ಞತೆ ಎರ್ಡು ಹೊತ್ಕೊಂಡ್ ಬರ್ತೀನಿ" ಎಂದ ಕಣ್ಣು ಮಿಟುಕಿಸುತ್ತ.

ಅಲ್ಲೇ ಹತ್ತಿರದ ಬಂಧುಗಳನ್ನು ನೋಡಲು ಡಾಕ್ಟರ್ ಹೊರಟಾಗ ಬಾಡಿಗಾರ್ಡ್ ಅಲ್ಲಿಯೇ ಉಳಿದುಕೊಂಡ ಡ್ರೈವರ್ ಜೊತೆ. ಅವನಿಗೆ ಬಿಗಿಯಾದ ಆಜ್ಞೆ ಆಗಿತ್ತು. "ಬಿ ಕೇರ್‌ಫುಲ್, ಸೇಫಾಗಿ ಬಂದು ಬಂಗ್ಲೆ ತಲುಪಬೇಕು" ಎಚ್ಚರಿಸಿದ್ದ ಚೈತನ್ಯ. ಶ್ರೀಮಂತಿಕೆ, ಏಳಿಗೆಯೇ ಹಲವಾರು ಶತ್ರುಗಳನ್ನು ಹುಟ್ಟು ಹಾಕೋದು ಎಲ್ಲರಿಗೂ ತಿಳಿದ ವಿಷಯ. ಅದಕ್ಕೆ ಹೆಚ್ಚಿನ ಕಾರಣಗಳು ಬೇಕಿರಲಿಲ್ಲ.

ಸಂಜೆ ಕಣ್ಮಣಿ ಹೊರಟು ನಿಂತಾಗ ಶಬರಿ "ಒಂದೆರಡು ದಿನ ಉಳ್ದು ಹೋಗಬಹುದಿತ್ತು. ಇವತ್ತು ಎಷ್ಟೋ ಗೆಲುವಾಗಿದ್ದ ಗೋಪಾಲ" ಕಣ್ತುಂಬಿದರು.

ಅದಕ್ಕೆ ಸಮಾಧಾನ ಹೇಳಿದ್ದು ಗೋಪಾಲನ ತಂದೆಯೇ. "ಬೇಡ, ಇನ್ನೊಮ್ಮೆ ಜೋಡಿಯಾಗಿಯೇ ಬರ್ಲಿ, ಈ ಹುಡ್ಗಿಗೆ ಸಾಲಿಗ್ರಾಮ ಸಿಕ್ಕಾಗ್ಲೇ

ಅಂದ್ಕೊಂಡಿದ್ದೆ, ಅದೃಷ್ಟ ಬೆನ್ನಿಗೆ ಬಿದ್ದಿದೆಯೆಂದು ಆ ವಾಡೆಗೆ ಹೋಗಿ ಉಳ್ದು ಬಂದೋರುಂಟ!" ಅವರಿಗೆ ಸತ್ಯ ಸಂಗತಿಯನ್ನು ಗೋಪಾಲ ತಿಳಿಸಿದ್ದ.

ಆಮೇಲೆ ಅವಳಿಗೆ ವಿಷಯ ತಿಳಿದಿದ್ದು. ಆ ವಾಡೆಯ ಕಾಂಪೌಂಡ್ ಗೋಡೆ ಹಾರಿ ಹೋದ ಒಂದಿಬ್ಬರು ಹಾವು ಕಡಿದು ಮರಣ ಹೊಂದಿದ್ದರು. ಕಾಗೆ, ರಣಹದ್ದುಗಳ ಹಾರಾಟ ನೋಡಿ ಪೊಲೀಸ್‌ಗೆ ವಿಷಯ ಮುಟ್ಟಿ ಬಿಗಿ ಬಂದೋಬಸ್ತಿನಿಂದ ಕಿಲುಬು ಹಿಡಿದ ಗೇಟನ್ನ ತೆರೆದು ಒಳಗೆ ಪ್ರವೇಶಿಸಿದಾಗ ಗುರುತು ಸಿಕ್ಕದ ಎರಡು ಹೆಣಗಳು ಸಿಕ್ಕಿದ್ದವು. ಅತ್ಯಂತ ವಯಸ್ಸಾದ ಹಾವು ಕೆಲವರಿಗೆ ದರ್ಶನವಿತ್ತುದ್ದರಿಂದ ಹುಡುಕಾಡಿ ಸೋತ ಸಿಬ್ಬಂದಿ ತೆಪ್ಪಗೆ ಹೊರಗೆ ಬಂದಿತ್ತು. ಮತ್ತೆ ಗೇಟಿಗೆ ಬೀಗ, ಇಷ್ಟು ನಡೆದ ವಿಷಯ.

"ಇದೆಲ್ಲ ಹೇಗಾಯ್ತು!" ಎಂದಳು ಅಯೋಮಯವಾಗಿ.

ಹಾವನ್ನು ಜ್ಞಾಪಿಸಿಕೊಂಡ ವಾಸಂತಿ ಬಿಳಿಚಿಕೊಂಡಳು. ವಾಸಂತಿ "ಅಂಥ ಭಯಂಕರ ಹಾವನ್ನು ನಾನು ನೋಡೇ ಇರ್ಲಿಲ್ಲ ಅಪ್ಪಯ್ಯ. ನಾವು ಮೂರು ಜನ ಉಳ್ದು ಹೊರ್ಗೆ ಬಂದಿದ್ದೊಂದು ಪವಾಡ. ಒಂದು ಮಾರು ಮೇಲಿತ್ತು ಹಾವು. ಅದು ಹೆಡೆ ಎತ್ತಿದರೇ ನಮ್ಮ ದೇವರ ಮನೆಯ ಬೆಳ್ಳಿ ತಟ್ಟೆಯ ಅಗಲ, ನಂಗೆ ರಾತ್ರಿ ಹೊತ್ತು ನೆನಪಾದ್ರೆ.. ಪೂರ್ತಿ ಜಾಗರಣೆಯೇ. ನಮ್ಮ ಕಣ್ಮಣಿಗೆ ಸಾಲಿಗ್ರಾಮ ಸಿಗೋಕೆ ಏನಾದ್ರೂ ಕಾರಣ ಇರಬಹುದೇನೋ!" ಅನುಮಾನಿಸಿದಳು.

ವರ್ಷಗಳ ಹಿಂದೆ ಕೊಲೆಯಾದ ದಂಪತಿಗಳನ್ನು ಜ್ಞಾಪಿಸಿಕೊಂಡ ಜೋಷಿಗಳು "ಹೇಗೆ ಹೇಳಲಿಕ್ಕೆ ಬರುತ್ತೆ. ವಾಡೆಯ ಸೆಳೆತ ಕೂಡ ಹಿಂದಿನ ಜನ್ಮಕ್ಕೆ ಸಂಬಂಧಿಸಿದ್ದೆ ಇರಬಹುದು" ಇಂಥ ಒಂದು ಮಾತನ್ನು ಸೇರಿಸಿದರೂ ಕೂಡ.

ಪ್ರತಿಕ್ರಿಯಿಸದೆ ಗೋಪಾಲನ ಕೋಣೆಗೆ ಹೇಳಿ ಬರಲು ಹೋದಾಗ ಮಲಗಿದ್ದಲ್ಲಿಂದಲೇ ಮುಗುಳ್ನಗೆ ಬೀರಿದ "ಹೊರಟಿದ್ದೀಯಾ, ಸಂತೋಷವಾಗಿ ಹೋಗ್ಬಾ, ಕೆಲವು ಪ್ರಶ್ನೆಗಳಿಗೆ ಉತ್ತರವೇ ಇಲ್ಲ. ಬಹುಶಃ ಅವು ಪ್ರಶ್ನೆಗಳೇ ಅಲ್ಲವೇನೋ! ಈ ಸಲ ಚೈತನ್ಯ ಅವ್ರನ್ನ ಕರ್ಕೊಂಡ್ಬಾ ಮತ್ತೊಂದು ಸಾಹಸ ಮಾಡಿ ವಾಡೆಗೆ ನುಗ್ಗಿ ಬಿಡೋಣ. ನೀನು ಜೊತೆಯಲ್ಲಿರೋದ್ರಿಂದ ಹಾವೇನು ಮಾಡಾಲಾರ್ದು" ನಗೆ ಚಾಟಿಕೆ ಹಾರಿಸಿದ.

"ನಾನು ...." ಮುಂದಿನ ಮಾತುಗಳನ್ನು ಆಡಲಾರದೆ ಹೋದಳು.

"ಹೌದು.. ಹೌದ.. ಅಪ್ಪಯ್ಯ ಅದ್ನೇ ಹೇಳಿದ್ರು, ಇಲ್ಲದಿದ್ರೆ ನೀನು ಸಾಲಿಗ್ರಾಮ ಎತ್ತಿಕೊಂಡಾಗ, ಅದು ನಮ್ಮನ್ನ ಸುಮ್ನೆ ಬಿಡ್ತಾ ಇರ್ಲಿಲ್ಲ. ಇಂಥ ರಹಸ್ಯಗಳು ಜಗತ್ತಿನಲ್ಲಿ ಎಷ್ಟಿದೆಯೋ! ನಂಬೋದು ಬಿಡೋದು, ಅವರವ್ರ ಇಷ್ಟಕ್ಕೆ ಸಂಬಂಧಿಸಿದ್ದು" ಎಂದ ಗೋಪಾಲ.

ಮೌನವಾಗಿ ನಿಂತಳು.

ತಲೆಯೊಡೆದ ಜಾಗದ ಮೇಲೆ ಕೈಯಿಟ್ಟುಕೊಂಡು ಜೋರಾಗಿ ನಕ್ಕು ಬಿಟ್ಟ ಗೋಪಾಲ "ನಿಂಗೆ ಮಾತಾಡೋಕೆ ಆಗ್ತಾ ಇಲ್ಲ. ಆಡೋಕೆ ಮಾತೇ ಇಲ್ಲ! ಸರಿ ತಾನೇ? ನಾಲ್ಕು ದಿನ ನಿನ್ನ ಇರ್‍ಸಿಕೊಂಡು ಹರಟೋಣ ಅಂದ್ಕೊಂಡ್ರು ಸಾಧ್ಯನಾ? ಮೂರು ನಾಲ್ಕು ಗಂಟೆಗಳಷ್ಟು ಹೋತ್ತಾದ್ರೂ ಇದ್ದೆಯಲ್ಲ, ಅಷ್ಟು ಸಾಕು. ಈ ಮಧುರವಾದ ಸ್ನೇಹ ಕೊನೆಯವರ್ರೂ ಇರ್ಲಿ" ಎಂದ ಗದ್ಗದವಾಗಿ.

"ನೋವಿದ್ಯಾ? " ಕೇಳಿದಳು ಮೃದುವಾಗಿ.

"ಸ್ವಲ್ಪ ಜೋರಾಗಿ, ಸ್ಪಷ್ಟವಾಗಿ ಮಾತಾಡೋದ್ನ ಅಭ್ಯಾಸ ಮಾಡ್ಕೋ, ಕಣ್ಮಣಿ. ಇಲ್ಲದಿದ್ರೆ ಚೈತನ್ಯರ ಗತಿಯೇನು? ಹೋಗ್ಬಾ..." ಎಂದ.

ಕಣ್ಮಣಿ ಅಲ್ಲೇ ಮಂಚದ ಪಕ್ಕದಲ್ಲಿದ್ದ ಕೊಳಲಿನತ್ತ ನೋಡಿದಳು. ತಟ್ಟನೇ ಹೊರಗೆ ಬಂದಳು. ವಾಸಂತಿಗೆ ನಾಲ್ಕು ದಿನ ಇಲ್ಲಿರುವ ಮನಸ್ಸಿದ್ದರೂ ಶಬರಿ ಒಪ್ಪಲಿಲ್ಲ.

"ಆ ಹುಡ್ಗಿ ಒಬ್ಳೇ ಆಗ್ತಾಳೆ. ನೀನು ಹೋಗು. ರಜ ಸಿಕ್ಕಾಗ ಮತ್ತೆ ಬರ್‍ಬಹ್ದು."

ಸೀರೆ, ಕುಬುಸದೊಂದಿಗೆ ಮಡಿಲು ತುಂಬಿದರು ಕಣ್ಮಣಿ. ಅವಳ ಬದುಕಿನಲ್ಲಿನ ದೊಡ್ಡ ಕೊರತೆಯನ್ನು ತುಂಬಿಕೊಟ್ಟ ಆ ತಾಯಿಯ ಪಾದಗಳಿಗೆರಗಿ ಬಿಕ್ಕಿದಳು. "ಅಳ್ಬಾರ್‍ದು, ಎಂಥ ಮನೆ ಸಿಕ್ಕಿದೆ. ನಿನ್ನ ಗಂಡ ನೂರಾರು ಜನಕ್ಕೆ ಕೆಲ್ಸ ಕೊಟ್ಟಿದ್ದಾನೆ. ಸಮಾಜದಲ್ಲಿ ಎಂಥ ಗೌರವ ಕಷ್ಟ ಹೇಳ್ಕೊಂಡ್ ಬರೋ ಜನಕ್ಕೆ ನಾಲ್ಕು ಕಾಸಿನ ಸಹಾಯ ಮಾಡ್ಬಹ್ದು. ಇಷ್ಟಕ್ಕಿಂತ ಇನ್ನೇನು ಬೇಕು. ನಂಗೆ ವಾಸಂತಿ, ನೀನು ಬೇರೆ ಬೇರೆಯಲ್ಲ. ನಿನ್ನ ಶ್ರೀಮಂತನ ನಾನೇ ಮಾಡ್ತೀನಿ" ಶಬರಿ ತುಂಬು ಹೃದಯದಿಂದ ಹರಸಿ ಹೇಳಿದರು.

ಇಡೀ ಮನೆಯವರೆಲ್ಲ ಬಂದು ಕಾರು ಹತ್ತಿಸಿದರು. ಇನ್ನೊಂದು ಕಾರು ಹಿಂಬಾಲಿಸಿತು.

* * * *

ವಿದೇಶಕ್ಕೆ ಹೋಗಿ ಬಂದ ಚೈತನ್ಯನಿಗೆ ತಾಯಿಯ ಕೈಕಾಲುಗಳಲ್ಲಿ ಮತ್ತಷ್ಟು ಸುಧಾರಣೆ ಕಂಡುಬಂದಿದ್ದು ಹೆಚ್ಚು ಸಂತಸವೆನಿಸಿತು. ಬೆರಳುಗಳನ್ನು ಸ್ವತ ಆಡಿಸುವುದು ಮಾತ್ರವಲ್ಲದೆ, ಪಾದಗಳನ್ನು ನೆಲದಲ್ಲೂರಲು ಒಂದೆರಡು ನಿಮಿಷಗಳಷ್ಟು ಸಮರ್ಥರಾಗಿದ್ದರು.

ಭಾನುವಾರವಾದ್ದರಿಂದ ಅಂದಿನ ಎಲ್ಲಾ ಪ್ರೋಗ್ರಾಂಗಳನ್ನು ಕ್ಯಾನ್ಸಲ್ ಮಾಡಿಕೊಂಡು ದೀಪಾಂಕುರದಲ್ಲೇ ಉಳಿದಿದ್ದ. ಅವನು ಬ್ರೇಕ್‌ಫಾಸ್ಟ್‌ಗೆ ಕೂತಾಗ ಸುಬ್ಬಲಕ್ಷ್ಮಿಯನ್ನು ವ್ಹೀಲ್ ಛೇರ್‌ನಲ್ಲಿ ಕೂಡಿಸಿಕೊಂಡು ತಳ್ಳಿಕೊಂಡು ಬಂದಳು ಕಣ್ಮಣಿ.

"ಅಮ್ಮ...." ಉದ್ಗರಿಸಿದ.

ಇಲ್ಲಿಗೆ ಆಕೆ ಬಂದು ವರ್ಷಗಳೇ ಉರುಳಿಹೋಗಿತ್ತು. ಬೆಳಿಗ್ಗೆ, ಸಂಜೆ ಮುಂದಿನ ಗಾರ್ಡನ್‌ಗೆ ವ್ಹೀಲ್ ಛೇರ್ ಮೇಲೆ ಕೂಡಿಸಿಕೊಂಡು ತಳ್ಳಿಕೊಂಡು ಹೋಗುತ್ತಿದ್ದಳು. ಇಂದು ಆಕೆಯೇ ಈ ಇರಾದೆಯನ್ನು ವ್ಯಕ್ತಪಡಿಸಿದ್ದು.

"ನನ್ನ ಬ್ರೇಕ್ ಫಾಸ್ಟ್ ಆಯ್ತು, ಇನ್ಮೇಲೆ ನಾನೇ ನಿನ್ನ, ಊಟ ತಿಂಡಿ ಕಡೆ ಗಮನ ಕೊಡ್ತೀನಿ. ನೀನು ಕುತ್ಕೋ ಕಣ್ಮಣಿ" ಅಧಿಕಾರದ ದನಿಯಲ್ಲಿ ಹೇಳಿದರು.

ತಲೆ ತಗ್ಗಿಸಿ ಚೈತನ್ಯನ ಎದುರು ಕೂತಳು, ಅದನ್ನು ಅವನೇನು ಗಮನಿಸಲಿಲ್ಲ. ಇಂದಿನ ಸಂತಸ ತಬ್ಬಿಬ್ಬು ಮಾಡಿತ್ತು ಅವನನ್ನು. ಸುಬ್ಬಲಕ್ಷ್ಮಿಗೆ ಮಾತ್ರ ಮಗನ ಮೇಲೆ ಅಸಮಾಧಾನ. ಇಬ್ಬರನ್ನು ಗಮನಿಸುತ್ತಲೇ ಇದ್ದರು. ಒಬ್ಬ ಯಜಮಾನನ ಬಳಿ ಹೇಗೆ ನಡೆದುಕೊಳ್ಳಬೇಕೋ, ಹಾಗಿತ್ತು ಅವಳ ವರ್ತನೆ. ಮಗನ ಬಗ್ಗೆ ಮಾತ್ರ ಯಾವುದೇ ನಿಲುವಿಗೆ ಬರಲಾರದೆ ಹೋಗಿದ್ದರು.

ಬೆಣ್ಣೆ ಬಡಿಸಲು ಬಂದ ಪಂಢರಿಗೆ "ನೀನು ಎಷ್ಟು ದಿನ ಆಯ್ತು, ಊರಿನ ಕಡೆ ಹೋಗಿ. ಬರೀ ಹಣ ಕಳ್ಸಿದರೇ ಸಾಕಾ? ಒಂದ್ನಾಲ್ಕು ದಿನ ಹೋಗ್ಬಾ" ಸುಬ್ಬಲಕ್ಷ್ಮಿ ಆಣತಿ ಇತ್ತಾಗ ಅವನು ಕಣ್ಣು ಕಣ್ಣು ಬಿಟ್ಟ. ತನ್ನ

ಕಿವಿಗಳನ್ನೆ ನಂಬಲಾರದೆ ಹೋದ. 'ದೀಪಾಂಕುರ ಬಿಟ್ಟು ಹೊರ್ಗೆ ಹೋಗೋ ಸುದ್ದಿ ಮಾತ್ರ ಬೇಡ' ಖಡಾಖಂಡಿತವಾಗಿ ಆಕೆಯೆ ಹೇಳಿದ್ದರು. ನಿಧಾನವಾಗಿ ಯಜಮಾನನ ಕಡೆ ನೋಟ ಹರಿಸಿದ. ವೆಜಿಟೆಬಲ್ ಸಮೋಸಾ ತಿನ್ನುತ್ತಿದ್ದ ಅವನು ಈ ಮಾತುಗಳನ್ನು ಕೇಳಿಸಿಕೊಂಡಂತೆ ಕಾಣಲಿಲ್ಲ. ಇಂಥ ದಿವ್ಯ ನಿರ್ಲಕ್ಷ್ಯ ಯಾಕೆ?

ಹಾರ್ಲಿಕ್ಸ್ ಕುಡಿದು ಎದ್ದ ಚೈತನ್ಯ ತಾನೇ ವ್ಹೀಲ್ ಛೇರ್ ತಳ್ಳಿಕೊಂಡು ತಾಯಿಯ ರೂಮಿಗೆ ಹೋದವನು ಎತ್ತಿ ಕೂತಂತೆ ದಿಂಬಿಗೊರಗಿಸಿ ಮಲಗಿಸಿದ.

"ಮಾತಾಡೋದಿದೆ" ಎಂದರು ಸುಬ್ಬಲಕ್ಷ್ಮಿ ಸೀರಿಯಸ್ಸಾಗಿ,

ಈ ಕೋಪ, ಅಧಿಕಾರ, ಮಾತು ಎಲ್ಲಾ ಇಷ್ಟವಾಯಿತು ಅವನಿಗೆ. ಸ್ವಲ್ಪ ಸದ್ದಾಗುವಂತೆ ನಕ್ಕ. ತಾಯಿಯ ಬಳಿಯಲ್ಲಿ ಮಾತ್ರವೆ ಇಷ್ಟು ಮುಕ್ತವಾಗಿ ನಗಬಲ್ಲ.

"ವಿವಾಹದ ಅರ್ಥವೇನು?" ಬಾಣದಂತೆ ಬಂತು ಪ್ರಶ್ನೆ.

"ಆ ವಿಷ್ಯನ ಡೀಟೈಲ್ಲಾಗಿ ಹೇಳೋಷ್ಟು ಪ್ರಜ್ಞಾವಂತನಲ್ಲ. ನನ್ನ ಬಿಜಿನೆಸ್ ಬಗ್ಗೆ ಕೇಳು. ಇವೆಲ್ಲ ಏನು ಪ್ರಶ್ನೆಗಳು!" ನುಣುಚಿಕೊಳ್ಳಲು ನೋಡಿದ. ಆಕೆಯ ನಿರ್ಧಾರ ದೃಢವಾಗಿತ್ತು. "ಬರೀ ಪ್ರಜ್ಞಾವಂತರು ಮಾತ್ರ ಮದ್ವೆಯಾಗೋಲ್ಲ. ವಿವಾಹದಲ್ಲಿ ಪ್ರೀತಿಯಷ್ಟೇ ಕರ್ತವ್ಯನು ಮುಖ್ಯವಾಗುತ್ತೆ. ನಿನ್ನ ಪ್ರೇಮದ ಅರಿವು ನಂಗಿಲ್ಲ. ಯಾರ್ದೇ ಒತ್ತಡವಿಲ್ದೆ ಕಣ್ಮಣಿನ ಮದ್ವೆಯಾದೆ. ಆದರೆ ನಿನ್ನ ಬದ್ಕಿನಿಂದ ದೂರವಿಟ್ಟಿದ್ದರ ಅರ್ಥವೇನು?" ಸ್ವಲ್ಪ ಕಟುವಾಗಿಯೆ ಕೇಳಿದರು. ಅವನಲ್ಲಿ ಅದಕ್ಕೆ ಉತ್ತರವಿಲ್ಲ.

ಮೌನವಹಿಸಿದ. ಅಂದಿನ ನಿರ್ಧಾರ ಆತುರದ್ದು ಎಂದುಕೊಳ್ಳಲಾರ. ಅವನಿಗೆ 'ಅಮ್ಮ' ಮುಖ್ಯವಾಗಿದ್ದರು. ಅದಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧವಿದ್ದವನು ವಿವಾಹವಾಗಲು ಹಿಂಜರಿಯಲಿಲ್ಲ. ಅಮ್ಮನ ಆರೋಗ್ಯದ ಸುಧಾರಣೆ ಬಿಟ್ಟು ಮಿಕ್ಕಿದ್ದೆಲ್ಲ ಮುಖ್ಯವಾಗಿ ಕಂಡಿರಲಿಲ್ಲ. ಅದು ಫಲ ಕೊಟ್ಟಿದ್ದರಿಂದ ಅವನಿಗೆ ಪಶ್ಚಾತಾಪವಿರಲಿಲ್ಲ.

"ಪ್ಲೀಸ್, ಬಿಡು, ಇಂದು ರಿಲ್ಯಾಕ್ಸ್‌ಗಾಗಿ ಮನೆಯಲ್ಲಿ ಉಳಿದಿದ್ದೀನಿ. ನಿನ್ನ ಪ್ರಶ್ನೆಗೆ ಉತ್ತರ, ಸಮಾಧಾನ, ಪರಿಹಾರಕ್ಕೆ ಒಂದಷ್ಟು ಕಾಲಾವಕಾಶ ಬೇಕಾಗುತ್ತೆ. ಒಂದಿಷ್ಟು ಅವಕಾಶ ಮಾಡಿಕೊಡು" ರಿಕ್ವೆಸ್ಟ್ ಮಾಡಿಕೊಂಡ,

ಶಾಲೆಗೆ ಹೋಗಲು ನಿರಾಕರಿಸುವ ಪುಟ್ಟ ಬಾಲಕನಂತೆ ಕಂಡ. ಮಗನ ಬಾಲ್ಯ ನೆನಪು ಮಾಡಿಕೊಂಡು ಹಸನ್ಮುಖಿರಾದರು ಸುಬ್ಬಲಕ್ಷ್ಮಿ.

"ನಿನ್ನ ಉದ್ದೇಶ ಹೇಗೆ ಇರಲೀ, ಕಣ್ಮಣಿಗೆ ಅನ್ಯಾಯವಾಗೋದು ನಂಗಿಷ್ಟವಿಲ್ಲ. ಅವ್ಳು ನಿನ್ನ ಮಡದಿ, ನನ್ನ ಸೊಸೆ, ಈ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯನ್ನು ಕೊಡಬಲ್ಲ ಹೆಣ್ಣು. ಅಷ್ಟು ಮಾತ್ರ ನಿನ್ನ ನೆನಪಿನಲ್ಲಿ ಇರ್ಲೀ" ಎಂದರು. ತಾಯಿಯ ಮಾತುಗಳಿಂದ ಅವನ ಮನಸ್ಸತ್ವವೇ ಅಲುಗಿತು.

ಹೆಚ್ಚು ಹೊತ್ತು ತಾಯಿಯ ಬಳಿ ಕೂಡಲಾಗದೆ ಎದ್ದು ಹೊರಬಂದಾಗ ಹೂದಾನಿಯಲ್ಲಿ ಹೂಗಳನ್ನು ಜೋಡಿಸುತ್ತಿದ್ದ ಕಣ್ಮಣಿ ಇತ್ತ ನೋಟ ಹರಿಸಿದಳು. ಎರಡು ಕಣ್ಣುಗಳು ಸಂಧಿಸಿದ್ದು ಕೆಲವೇ ಕ್ಷಣ. ಅವಳ ತಣ್ಣನೆಯ ನೋಟ ಕೂಡ ವಿಚಲಿತನನ್ನಾಗಿಸಿತು. ಏನಾದರೂ ಮಾತಾಡಬೇಕೆನಿಸಿತು ಅವನಿಗೆ.

"ನನ್ನ ರೂಮಿಗೆ ಬಾ" ಹೊರಟ.

ಸಮಾಜ ಅವನೊಂದಿಗಿನ ಪ್ರೈವೆಸಿ ಹಕ್ಕನ್ನು ನೀಡಿದ್ದರಿಂದ ಯಾರು ಆಕ್ಷೇಪಿಸುವಂತಿರಲಿಲ್ಲ. ಅಂಜಬೇಕಿರಲಿಲ್ಲ, ಭಯಕೂಡ ಮುಟ್ಟದು ಅವಳನ್ನು.

ನಿಧಾನವಾಗಿ ಮೇಲೇರಿ ಹೋದಳು. ಬೆಡ್‌ರೂಂಗೆ ಅಂಟಿಕೊಂಡಂತೆ ಇದ್ದ ಬಿಸಿಲು ಮೇಲ್ಛಾವಣಿ ಹೊದ್ದಿಸಿ ಅತ್ಯಂತ ನವೀನವಾಗಿ, ಕಲಾತ್ಮಕವಾಗಿ ಕಾಣುವ ಹೊರಗಿನ ಬಾಲ್ಕನಿ ಅತ್ಯಂತ ಸುಂದರವೂ ಹೌದು. ಇನ್ ಡೋರ್ ಪ್ಲಾಂಟ್‌ಗಳು ಅದರ ಸೊಬಗನ್ನು ಹೆಚ್ಚಿಸಿದ್ದರಿಂದ ಆ ಸ್ಥಳ ಆಹ್ಲಾದಕರವಾಗಿತ್ತು.

ಅಲ್ಲಿ ಇದ್ದಿದ್ದು ವಿಶಾಲವಾದ ತೂಗುಯ್ಯಾಲೆ ಮಾತ್ರ. ಆಟೋಮ್ಯಾಟಿಕ್ ವ್ಯವಸ್ಥೆ ಅಳವಡಿಸಿದ್ದರಿಂದ ಸಣ್ಣಗೆ ತೂಗುತ್ತಿತ್ತು. ತೀರಾ ಬೇಸತ್ತಾಗ ಬಂದು ಇಲ್ಲಿ ಮಲಗುತ್ತಿದ್ದ.

ತೂಗುವ ಉಯ್ಯಾಲೆ ಮೇಲೆ ಕೂತ ಅವನು ಒಳ ಬರುವಂತೆ ಸನ್ನೆ ಮಾಡಿ "ಕೂತ್ಕೋ, ಕಣ್ಮಣಿ" ಹೇಳಿದ.

ಅತ್ತಿತ್ತ ಕಣ್ಣಾಡಿಸಿದಳು. ಚೈತನ್ಯ ಕೂತ ಉಯ್ಯಾಲೆಯ ಅಂಚಿಗೆ ಕೂಡಬೇಕು, ಅಥವಾ ಕೆಳಗಡೆ ಕೂಡಬೇಕು. ಹೇಗೆ? ಅವಳ ಸಮಸ್ಯೆ ಅರಿತೇ ನಕ್ಕುಬಿಟ್ಟ.

"ಅಷ್ಟು ಯಾಕೆ ಹಿಂಜರಿಕೆ? ಸಮಾಜ, ಕಾನೂನು ನಿಂಗೆ ನಾನು ತಾಳಿ ಕಟ್ಟಿದ ದಿನವೇ ಕೆಲವು ಹಕ್ಕುಗಳನ್ನು ಒದಗಿಸಿ ಕೊಟ್ಟಿದೆ. ಸಿಟ್ ಡೌನ್..." ಎಂದ. ಅವಳ ಮುಖ ಮತ್ತಷ್ಟು ಗಂಭೀರವಾಯಿತು ತುಟಿಗಳು ತೆರೆದುಕೊಳ್ಳಲಿಲ್ಲ. ಸಂಕೋಚದಿಂದಲೇ ಕೂತಳು.

"ಥ್ಯಾಂಕ್ಸ್ ಫಾರ್‌ದ ಲಾಟ್, ಕಣ್ಮಣಿ. ಅಮ್ಮ ಡೈನಿಂಗ್ ಹಾಲ್ ಪ್ರವೇಶಿಸಿ ವರ್ಷಗಳೇ ಆಗಿಹೋಗಿತ್ತು. ವ್ಹೀಲ್ ಛೇರ್ ಮೇಲೆ ಕೂಡುವ ಶಕ್ತಿ ಕೂಡ ಇರಲಿಲ್ಲ. ಅದೇನು ಪವಾಡ ಮಾಡಿಬಿಟ್ಟೆ. ಈ ಬಗ್ಗೆ ಆರ್ಟಿಕಲ್ ಬರೆದರೇ ಜಗತ್‌ಪ್ರಸಿದ್ಧಿಯಾಗಿಬಿಡ್ತೀಯಾ" ಉತ್ಸಾಹದಿಂದ ನುಡಿದ.

ಕಣ್ಮಣಿಯ ಮುಖದಲ್ಲಿ ಭಯ ಇಣಕಿತು. ರೆಪ್ಪೆಗಳು ಪಟಪಟನೊಡೆದುಕೊಂಡವು. "ಖಂಡಿತ ಬೇಡ! ಅಂಥದೇನು ನಾನು ಮಾಡಿಲ್ಲ. ಅವ್ರು ಮಾನಸಿಕವಾಗಿ ಚೇತರಿಸಿಕೊಂಡಿದ್ದೆ ಕೈಕಾಲುಗಳಿಗೆ ಶಕ್ತಿ ತಂದಿದೆ. ಆರಾಮಾಗಿ ನಡೆದಾಡಬಲ್ಲರು."

"ಅದು ಒಂದು ಇಪ್ಪತ್ತೈದು ಪರ್ಸೆಂಟ್ ಸರಿ ಇರಬಹುದು, ಇನ್ನು ಎಪ್ಪತ್ತೈದು ಪರ್ಸೆಂಟ್‌ಗೆ ಪೂರ್ತಿಯಾಗಿ ನೀನೇ ಕಾರಣ ಜೊತೆಗೆ ಇಪ್ಪತ್ತೈದು ಪರ್ಸೆಂಟ್‌ನಲ್ಲೂ ನಿನಗೆ ಭಾಗವಿದೆ. ಇದಕ್ಕೆ ಹೇಗೆ ಕೃತಜ್ಞತೆ ಸಲ್ಲಿಸೋದು?" ಅವನ ದನಿ ಸ್ವಲ್ಪ ಭಾರವಾಯಿತು.

ಚೈತನ್ಯ ಅಂಥ ವ್ಯಕ್ತಿ ತನ್ನ ನಿಸ್ಸಾಯಕತೆ ತೋಡಿಕೊಂಡಾಗ ಫಕ್ಕನೆ ನಕ್ಕುಬಿಟ್ಟಳು. ಅಮಾವಾಸೆಯ ರಾತ್ರಿಯಂದು ಬೆಳದಿಂಗಳನ್ನು ಕಂಡಂತಾಯಿತು.

"ಮಾಂಗಲ್ಯ ಕಟ್ಟಿ ಸಮಾಜದಲ್ಲಿ ನಂಗೆ ನಿಮ್ಮ ಮಡದಿಯ ಸ್ಥಾನ ಕಲ್ಪಿಸಿ ಕೊಟ್ಟಿದ್ದೀರಾ. ಇದು ಕಡಿಮೆಯ ವಿಷ್ಯವೇನಲ್ಲ" ಸ್ಪಷ್ಟವಾಗಿ ನುಡಿದಳು ಕಣ್ಮಣಿ.

'ಹೌದಾ' ಎನ್ನುವಂತೆ ದೀರ್ಘವಾಗಿ ನೋಡಿದ ಚೈತನ್ಯ 'ಇನ್ನೊಬ್ಬ ಗಂಡಿನಿಂದ ತಾಳಿ ಕಟ್ಟಿಸಿಕೊಂಡು ಪರಾರಿಯಾಗಬಾರದೆಂದೇ ಇಲ್ಲಿ ಕಟ್ಟಿ ಹಾಕಿದ್ದ.'

"ಮುಂದೇನು ಮಾಡ್ಬೇಕೂಂತ ಇದ್ದೀಯಾ? ಲೋ ಎಯ್ ಈಸ್ ಕ್ರೈಮ್ (Low aim is crime) ಅಂತಾರೆ. ಅಲ್ಪ ಗುರಿ ಅಪರಾಧವೆ. ಹೇಗೂ ಜರ್ನಲಿಸಂ ಮಾಡಿದ್ದೀಯಾ ಅಲ್ಪಸ್ವಲ್ಪ ಸಿಗೋ ಬಿಡುವಿನ ಸಮಯವನ್ನು ಅದಕ್ಕಾಗಿ ಉಪಯೋಗಿಸ್ಕೋ. ಬೇಕಾದ ಸಹಾಯ ನಾನ್ಮಾಡ್ತೀನಿ" ಭರವಸೆ ಕೊಟ್ಟ. ಆತ್ಮವಿಶ್ವಾಸ ತುಂಬುವಂತಿತ್ತು ಅವನ

ಮಾತು.

ಇಂದು ಮುಕ್ತ ಮನಸ್ಸಿನಿಂದ ಮಾತಾಡಿದ. ಅವೆಲ್ಲ ಸುಬ್ಬಲಕ್ಷ್ಮಿಗೆ ಸಂಬಂಧಿಸಿದ್ದೇ. ತಾಯಿಯ ಮೇಲಿನ ಅವನ ಪ್ರೀತಿ ಯಾವುದೇ ಲೆಕ್ಕಕ್ಕೆ ಸಿಗದೆನಿಸಿತು.

"ಬರ್ತೀನಿ...." ಮೇಲೆದ್ದಳು.

ಕೆಳಗೆ ಬಂದಾಗ ಪಂಢರಿಯ ಕಣ್ಣುಗಳು ಏನನ್ನೋ ನಿರೀಕ್ಷಿಸುತಿತ್ತು. "ಅಮ್ಮನಿಗೆ ನಿದ್ದೆ ಬಂದಿದ್ಯಾ?" ಕೇಳಿ ಉತ್ತರವನ್ನು ನಿರೀಕ್ಷಿಸದೆ ಸುಬ್ಬಲಕ್ಷ್ಮಿಯ ರೂಮಿಗೆ ಹೋದಳು. ಹೆಚ್ಚು ವೇಳೆ ಕಳೆದುಹೋಗುತ್ತಿದ್ದುದು ಅಲ್ಲಿಯೇ.

ಬಹುಶಃ ಆಕೆಗೆ ವಿಷಯ ಮುಟ್ಟಿತೇನೋ, ಸ್ವಲ್ಪ ಪ್ರಸನ್ನಚಿತ್ತರಾಗಿದ್ದರು "ಆಗ್ಲೇ ಮುಗೀತಾ ನಿಮ್ಮಿಬ್ಬರ ಮಾತುಕತೆ? ಕ್ಯಾಸೆಟ್ ಬದಲಾಯಿಸು" ಎಂದರು. ವಿದೇಶಕ್ಕೆ ಹೋದಾಗ ತಂದ ಅತಿಬೆಲೆ ಬಾಳುವ ವಿಶೇಷ ತಾಂತ್ರಿಕತೆಯನ್ನೊಳಗೊಂಡ ಸ್ಟೀರಿಯೋ ಡೆಕ್. ನಾಲ್ಕು ವಿಭಾಗಗಳಾಗಿ ಹೊರ ಹೊಮ್ಮುವ ವಾದನಗಳ ಜೊತೆಗೂಡುವ ಸಂಗೀತ ಅತ್ಯಂತ ಮೆಲುವಾಗಿ ಮಧುರವಾಗಿ ಇರುತಿತ್ತು, ಒಟ್ಟಿಗೆ.

ಮುದುಡಿ ಕೂತ ಅವಳನ್ನ ನೋಡಿ ಅಪರೂಪವಾಗಿ ಜೋರಾಗಿಯೇ ನಕ್ಕುಬಿಟ್ಟರು "ಚೈತನ್ಯನ ಮುಂದೇನು ಹೀಗೇ ಕೂತಿದ್ಯಾ? ನೀನು ಸ್ವಲ್ಪ ಘಾಟಿ ಆಗ್ಬೇಕು. ಚೈತನ್ಯ ಶಾಲಾ, ಕಾಲೇಜುಗಳಲ್ಲಿ ಮಾತ್ರವಲ್ಲ ವ್ಯಾಪಾರ, ವ್ಯವಹಾರದಲ್ಲೂ ಕೂಡ ತೀರಾ ಬುದ್ಧಿವಂತ. ಈಗ ಏನು ಮಾತಾಡಿಕೊಂಡ್ರಿ? ಕೇಳಬಾರದಾದ್ರೂ ಕೇಳ್ಬೇಕೂಂತ ಅನ್ನಿಸಿದೆ" ಎಂದಾಗ ಅವಳಿಗೆ ಗಾಬರಿಯೋ ಗಾಬರಿ.

ಆಕೆ ಪೂರ್ತಿ ಗುಣ ಮುಖರಾಗಬೇಕೆಂದರೇ ಮಾನಸಿಕವಾಗಿ ಸಂಪೂರ್ಣವಾಗಿ ಚೇತರಿಸಿಕೊಳ್ಳಬೇಕು. ನಾಚಿದಂತೆ ನಟಿಸಿದಳು ಪ್ರಯತ್ನಪೂರ್ವಕವಾಗಿ. ಆ ಮುಖಕ್ಕೆ ಇನ್ನು ಕೆಂಪು ಸಾಲದೆನಿಸಿತು.

"ಒಂಟಿತನದ ಬದ್ಕು ಅವ್ನಿಗೆ ಅಭ್ಯಾಸವಾಗಿದೆ. ಅದ್ನೇ ಮುಂದುವರಿಯೋಕೆ ಬಿಡ್ಬಾರ್ದು" ಬುದ್ಧಿ ಹೇಳಿದರು. ಆದರೆ ಒಂದು ಪ್ರಶ್ನೆಗೆ ಅವರಿಗಿನ್ನು ಉತ್ತರ ಸಿಕ್ಕಿರಲಿಲ್ಲ.

"ನಮ್ಮ ಚೈತನ್ಯನಿಗೆ ಹೆಣ್ಣು ಕೊಡಲು ಬಂದ ಸಂಬಂಧಗಳು ಎಷ್ಟೋ. ಫೋಟೋಗಳು, ಹೆಣ್ಣುಗಳ ವಿಡಿಯೋ ಕ್ಯಾಸೆಟ್‌ಗಳು ಬಂದು ಬಿದ್ದವೇ ಹೊರತು ಅತ್ತ ಕಣ್ಣು ಹಾಯಿಸಲಿಲ್ಲ. ನಮ್ಮ ಮ್ಯಾನೇಜರ್ ಬಂದು ದೊಡ್ಡ

ಉದ್ದೇಶವನ್ನೆ ಇಟ್ಟುಕೊಂಡೇ ಮಗಳನ್ನು ಯಜಮಾನನಿಗೆ ಪರ್ಸನಲ್ ಸ್ಟೆನೋಗ್ರಾಫರ್‌ನ ಮಾಡಿ ನಂತರ ಪಿ.ಎ. ವರೆಗೂ ಏರಿಸಿದರು. ಪರೋಕ್ಷವಾಗಿ ನನ್ನೊಂದಿಗೂ ಪ್ರಸ್ತಾಪಿಸಿದರು. ಮಗಳ ಮುಖಾಂತರ ಪ್ರೇಮನಿವೇದನೆ ಮಾಡಿದರೂ ಅವನೇನು ಕರಗಲಿಲ್ಲ. ನಿನ್ನ ಕೈ ಹಿಡಿದಿದ್ದು ಮಾತ್ರ ಪವಾಡ. ವಿವಾಹಕ್ಕೆ ಮುನ್ನ ಅವ್ನು ತನ್ನ ಪ್ರೀತಿಯನ್ನು ಎಂದಾದ್ರೂ ತೋರ್ಪಡಿಸಿದ್ದನಾ?" ಬಹಳ ಮುಖ್ಯವಾದ ಪ್ರಶ್ನೆಯನ್ನೆ ಎತ್ತಿದರು. ಬೆಚ್ಚಿ ಬಿದ್ದಳಷ್ಟೆ. 'ಹಾ, ಹ್ಞೂ' ಎನ್ನಲಿಲ್ಲ ತುಟಿ ಬಿಚ್ಚಿದರೇ ಬರೀ ಅನಾಹುತವೆಂದು ಅವಳ ಅರಿವಿಗೆ ಬಂತು.

ಸುಬ್ಬಲಕ್ಷ್ಮಿ ಸುಮ್ಮನಾದರು

ಮರು ದಿನ ಗೋಪಾಲನಿಂದ ಅವಳಿಗೊಂದು ಪತ್ರ ಬಂದಿದ್ದರೇ ವಾಸಂತಿಯೊಂದು ಪತ್ರವಿಡಿದು ಬಂದಳು.

"ಗೋಪಾಲ ಪತ್ರ ಬರೆದಿದ್ದಾನೆ" ಎಂದ ಕೂಡಲೇ ತನಗೇ ಬಂದಿದ್ದ ಪತ್ರವನ್ನು ಗೆಳತಿಯ ಮುಂದಿಡಿದಳು "ಆರೋಗ್ಯ ಸುಧಾರಿಸಿದೆಯಂತೆ. ಸತತವಾಗಿ ಮಳೆ ಬರುತ್ತಿದ್ದರಿಂದ, ಅದರಿಂದ ಆಗುವ ಆನಂದ, ಅನಾಹುತ ಎರಡನ್ನೂ ಬರೆದಿದ್ದಾನೆ."

"ನಂಗೂ ಅದರದೇ ಜೆರಾಕ್ಸ್ ಕಾಪಿ. ಅವ್ನು ಕೊಳಲುವಾದಕ ಆಗೋ ಬದ್ಲು ಕವಿಯಾದ್ರೂ ಆಗ್ಬೇಕಿತ್ತು. ಬೋರಾಗೋಷ್ಟು ವರ್ಣಿಸಿ ಬರೆದಿದ್ದಾನೆ" ಸುಳ್ಳು ಬೇಸರವನ್ನು ನಟಿಸಿದಳು ವಾಸಂತಿ.

ಇಬ್ಬರು ಮುಂದಿನ ಗಾರ್ಡನ್‌ನಲ್ಲಿ ತಿರುಗಾಡುತ್ತ ಮಾತಾಡಿದರು. ಅರ್ಧ ಗಂಟೆಯ ಮೊದಲು ಸುಬ್ಬಲಕ್ಷ್ಮಿಯ ವ್ಹೀಲ್ ಛೇರ್ ಇಲ್ಲೆಲ್ಲ ಓಡಾಡಿತ್ತು.

"ಹೇಗಿದ್ದಾರೆ ನಿನ್ನ ಅತ್ತೆ?" ವಿಚಾರಿಸಿದಳು.

"ಅತ್ತೆ ಅನ್ನೊದನ್ಬೇಡ. ಆಕೆ ನಂಗೆ ತಾಯಿನೇ ಆಗಿದ್ದಾರೆ. ಹುಟ್ಟಿನಲ್ಲಿ ಕಿತ್ತುಕೊಂಡಿದ್ದನ್ನೆಲ್ಲ ಈಗ ದೇವರು ದಯಪಾಲಿಸಿಬಿಟ್ಟಿದ್ದಾನೆ. ನಾಲ್ಕು ದಿನ ರಜ ಹಾಕಿ ನಿಂಗೆ ಬರೋದಿಕ್ಕೆ ಗೋಪಾಲ ಹೇಳಿದ್ದಾನೆ, ಹೋಗ್ತೀಯಾ?" ಕಣ್ಮಣಿಯ ಕೇಳಿಕೆಗೆ ಉತ್ತರಿಸಲು ನಿಧಾನಿಸಿದಳು. ದುದ್ದನ ವಿಷಯವಿಲ್ಲದಿದ್ದರಿಂದ ಅವಳಿಗೂ ಹೋಗಿ ಬರಬೇಕೆನಿಸುತಿತ್ತು.

"ನೆನ್ನೆ ಸಂಜೆ ಕರ್ಣ ಹುಡ್ಕಿಕೊಂಡು ಬಂದು ಬೆದರಿಕೆ ಹಾಕಿ ಹೋದ.

ನಾನು ಯಾರನ್ನಾದ್ರೂ ವಿವಾಹವಾಗೋವರ್ಗೂ ಇವ್ನ ಕಾಟ ತಪ್ಪೋಲ್ಲಾಂತ ಕಾಣುತ್ತೆ. ಅರ್ಜೆಂಟ್‌ಗೆ ಯಾವ ಗಂಡು ಸಿಗುತ್ತೆ. ದುಡ್ಡನ್ನೆ ಹುಡ್ಕಿಕೊಂಡು ಹೋಗ್ಬೇಕು" ನಿರಾಶೆಯಿಂದ ನುಡಿದಳು.

ದುಡ್ಡನ ನೆನಪಾಯಿತು. ಅರೆ ತಿಕ್ಕಲಿನ ಗಂಡಿಗೆ ವಾಸಂತಿಯನ್ನು ತೋರಿಸಿ ಮದುವೆಯ ಮಾತು ಪದೇ ಪದೇ ಆಡಿದ್ದರಿಂದ ಇವಳ ಹಿಂದು ಮುಂದು ಸುತ್ತುತ್ತಾ ಹಲ್ಲು ಕಿರಿಯುವ ಅವನ ಬಗ್ಗೆ ಸಹಾನುಭೂತಿಯುಂಟಾಯಿತು.

"ಏನೇನೋ ಮಾತಾಡ್ಬೇಡ. ಸ್ವಲ್ಪ ಬೇರೆ ತರಹ ಯಾಕೆ ಯೋಚ್ಸಬಾರ್ದು?" ಕಣ್ಮಣಿಯ ಸಲಹೆಗೆ ತಕ್ಷಣ ಪ್ರತಿಕ್ರಿಯಿಸಿದಳು "ಹೌದು, ಒಂದಿಷ್ಟು ಹಣ ಕೊಟ್ಟು ಯಾರಿಂದಲ್ಲಾದ್ರೂ ಒದೆಸ್ಬೇಕು ಅಷ್ಟೆ. ಇಲ್ಲ ಯಾರಿಗಾದ್ರೂ ಹಣ ಕೊಟ್ಟು ಅವ್ನ ಸಾಮ್ರಾಜ್ಯದ ಸಮಸ್ತವನ್ನು ಕಳ್ಳತನ ಮಾಡ್ಸಿಬಿಟ್ಟರೇ.... ಬಟ್ಟೆ ಹರಿದುಕೊಂಡು ಬೀದಿ ಹುಚ್ಚನಾಗಿ ಬಿಡ್ತಾನೆ. ಆಗ ಕೂಡ ನನ್ನ ಹಿಂದೆ ಬಿದ್ದರೇ... ಕಷ್ಟ" ಎನ್ನುವ ದೃಶ್ಯವನ್ನು ಗೆಳತಿಯ ಮುಂದಿಟ್ಟ ವಾಸಂತಿ 'ಘೊಳ್' ಎಂದು ನಕ್ಕಳು. ಅವಳ ನಗೆಗೆ ಕಣ್ಮಣಿಯ ನಗು ಕೂಡ ಸೇರಿತು. ಆಗ ತಾನೇ ಕಾರಿನಿಂದ ಇಳಿಯುತ್ತಿದ್ದ ಚೈತನ್ಯ ಕಿವಿಗಳನ್ನು ತಲುಪಿತು. ತಕ್ಷಣ ಗಂಟಾದ ಹುಬ್ಬುಗಳು ಸಡಿಲಗೊಂಡವು ನಿಧಾನವಾಗಿ.

ಅವಳನ್ನು ಬೀಳ್ಕೊಟ್ಟು ಕಣ್ಮಣಿ ಒಳಗೆ ಬಂದಾಗ ವಿಶಾಲವಾದ ಹಾಲ್‌ನಲ್ಲಿನ ದೊಡ್ಡ ಸೋಫಾ ಮೇಲೆ ಕೂತು ಕಾಫಿ ಕುಡಿಯುತ್ತ ಪಿ.ಎ. ಗೆ ಏನೋ ಡಿಕ್‌ಟೇಟ್ ಮಾಡುತ್ತಿದ್ದ ಚೈತನ್ಯನನ್ನ ನೋಡಿ ಪಕ್ಕದಲ್ಲಿ ಸರಿದು ಹೋದಳು ಹೆಜ್ಜೆಯ ಸಪ್ಪಳವಾಗದಂತೆ.

"ವಾಸಂತಿ ಹೊರಟುಹೋದ್ಲಾ?" ವಿಚಾರಿಸಿಕೊಂಡ ಸುಬ್ಬಲಕ್ಷ್ಮಿ, "ಒಂದಿಷ್ಟು ಬದಲಾಗು ಕಣ್ಮಣಿ. ಹಿಂದಿನ ಭಯ, ಭಕ್ತಿ ವಿನಯಗಳು ಬೇಕಿಲ್ಲ. ನಿಂಗೆ ಇರೋ ಒಬ್ಬೇ ಫ್ರೆಂಡ್ ಬಂದಾಗ ಸ್ವಲ್ಪ ಸರ್ಯಾಗಿಯೇ ಟ್ರೀಟ್ ಮಾಡು" ಬುದ್ಧಿ ಹೇಳಿದರು. ಆದರೆ ಮದುವೆಯ ಹಿಂದೆ ಇದ್ದ ಸ್ಪಷ್ಟವಾದ ಉದ್ದೇಶ ತಿಳಿಸಿದ್ದರಿಂದ ಕಣ್ಮಣಿ ಮಿತಿಯನ್ನು ದಾಟಲು ಇಚ್ಛಿಸುತ್ತಿರಲಿಲ್ಲ "ಅರ್ಜೆಂಟ್ ಅಂತ ಹೋದ್ಲು" ಎಂದಳು ಚುಟುಕಾಗಿ.

ಅಂದು ಸಂಜೆಯ ವ್ಯಾಯಾಮ ಮುಗಿದ ಮೇಲೆ ಸುಬ್ಬಲಕ್ಷ್ಮಿಯ ಪಾದಗಳು ನೆಲದಲ್ಲಿ ಬಲವಾಗಿ ನಿಂತಿತು ಸೋಜಿಗವೆನ್ನುವಂತೆ. "ಇಂದು

ವೂಣಕಾಲು, ಸೊಂಟಕ್ಕೆ ಕಾಲುಗಳು ಭಾರವೆನಿಸುತ್ತ ಇಲ್ಲ'' ಸಂತೋಷದಿಂದ ಉದ್ಗರಿಸಿದರು. ತಾನು ಖಂಡಿತ ನಡೆಯಬಲ್ಲೆ ಎನ್ನುವ ಮಹಾನ್ ಉತ್ಸಾಹ. ಪೇಜರ್ ಮೂಲಕ ಹಾಲ್‌ನಲ್ಲಿ ಕೂತ ಚೈತನ್ಯನಿಗೆ ಸಂದೇಹ ಹೋಗಿ ತಕ್ಷಣವೇ ಓಡಿ ಬಂದ.

ಆಕೆಯ ಪಾದಗಳನ್ನು ಮುಟ್ಟಿ ಮುಟ್ಟಿ ನೋಡಿದ. ಸೊನ್ನೆಯಷ್ಟು ಕಂಪನ ಗೋಚರವಾದರೂ, ದೃಢತೆಯ ಅರಿವಾಯಿತು. ತಾಯಿಯನ್ನು ಅನಾಮತ್ತಾಗಿ ಎತ್ತಿಕೊಂಡು ಮೂರು ಸುತ್ತು ತಿರುಗಿಸಿ ಬಿಟ್ಟ ಆನಂದದಿಂದ. ಅವನ ಬದುಕಿನ ಅಮೂಲ್ಯ ಗೆಲುವು ಅವನದಾಗಿತ್ತು.

ಯಾವುದೋ ಪೇಜರ್ ಮೆಸೇಜ್ ಬಂದಿದ್ದರಿಂದ ತಕ್ಷಣ ಹೊರಗೆ ಹೋದ. ಮೇಲ್ವರ್ಗದ ಆಫೀಸರ್‌ಗಳ ಮೀಟಿಂಗನ್ನು ತುರ್ತಾಗಿ ಕರೆಯಬೇಕಿತ್ತು. ಚೈತನ್ಯ ಕಂಪನಿಯ ಷೇರುಗಳ ಬೆಲೆ ಮಾರುಕಟ್ಟೆಯಲ್ಲಿ ದಿಢೀರೆಂದು ಕುಸಿದು ಆತಂಕವನ್ನುಂಟು ಮಾಡಿತ್ತು.

ಮಧ್ಯರಾತ್ರಿಯ ನಂತರವೆ ದೀಪಾಂಕುರಕ್ಕೆ ಹಿಂದಿರುಗಿದ್ದು. ಪಂಢರಿ ಜ್ವರದಿಂದ ಮಲಗಿದ್ದರಿಂದ ಅವಳೇ ವಿಚಾರಿಸಿಕೊಳ್ಳಬೇಕಿತ್ತು. ಪಂಢರಿಯನ್ನು ಬಿಟ್ಟು ಬೇರೆ ಕೆಲಸಗಾರರು ಕರೆದರೇ ತಪ್ಪು. ಅವನ ಬೆಡ್‌ರೂಮಿಗೆ ಹೋಗರು.

ಬಟ್ಟೆ ಬದಲಾಯಿಸಿ ರಾತ್ರಿಯ ಲಾಂಗ್ ಕೋಟು ಧರಿಸಿದ್ದ ಚೈತನ್ಯ ಎರಡು ಕೈಗಳನ್ನು ಬೆಸೆದು ತಲೆಯ ಕೆಳಗಿಟ್ಟುಕೊಂಡು ಮಲಗಿದ್ದ.

"ಡೋಂಟ್ ಡಿಸ್ಟರ್ಬ್ ಮಿ, ಪಂಢರಿ. ಐಯಾಮ್ ಫುಲ್ಲಿ ಟಯರ್ಡ್" ಎಂದ ಬಳಲಿಕೆಯ ದನಿಯಲ್ಲಿ ಇತ್ತ ತಿರುಗದೆಯೇ.

"ಪಂಢರಿಗೆ ಜ್ವರ ಇದೆ. ಹಾಲು ತಂದಿದ್ದೀನಿ" ಎಂದಳು ಕಣ್ಮಣಿ. ನೋಟ ಹೊರಳಿಸಿದ. "ಸಾರಿ, ಅಮ್ಮ ನಿದ್ದೆ ಮಾಡಿದ್ದಾರ? ರಾತ್ರಿ ಏನು ತಗೊಂಡರು?" ವಿಚಾರಿಸಿದ ನಂತರವೇ "ಹಾಲು ಬೇಡ ಜ್ಯೂಸ್ ಕೊಟ್ಟಿಡು" ಎಂದ.

ಫ್ರಿಜ್‌ನಲ್ಲಿದ್ದ ಹಣ್ಣಿನ ರಸವನ್ನು ಗ್ಲಾಸ್‌ಗೆ ಬಗ್ಗಿಸಿ ಅವನ ಮುಂದಿಡಿದಳು. "ಅಮ್ಮನಿಗೆ ನಿದ್ದೆ ಬಂದಿದೆ. ಬರೀ ವೆಜಿಟೆಬಲ್ ಸಾಸ್ ಕುಡಿದರು. ಡಾಕ್ಟು ಬಂದು ಪಂಢರಿನ ನೋಡಿ ಕಾಮನ್ ಫೀವರ್ ಅಂದ್ರು" ಇಷ್ಟು ವರದಿ.

"ಅಮ್ಮ ಕೆಲವು ದಿನಗಳಲ್ಲಿ ನಡೆಯಬಹುದು" ಎಂದ. ಅದು ಬರೀ

ಕನಸಲ್ಲ, ನನಸಾಗುವ ಹಂತ ಮುಟ್ಟಿತ್ತು. "ಎಷ್ಟೇ ಕಾನ್‌ಫಿಡೆನ್ಸ್ ಇದ್ದರೂ ಎದೆಯಾಳದಲ್ಲಿ ಭಯ ಇದ್ದೇ ... ಇತ್ತು. ಒಮ್ಮೆ ನಡೆಯುವಂತಾದರೇ ನನ್ನ ಸಮಸ್ತ ಸಂಪತ್ತನ್ನು ಉಡುಗೊರೆಯಾಗಿ ಕೊಡ್ಬಲ್ಲೇಂತ ಎಷ್ಟೋ ಸಲ ಅಂದ್ಕೊಂಡಿದ್ದೆ. ಹೇಗೂ.. ಹೇಳ್ಬಿಟ್ಟಿದ್ದೀನಿ. ನೀನು ಕೇಳ್ಬಹುದು" ಎಂದ ಸ್ನೇಹದಿಂದ. ತಾಯಿಯಲ್ಲಿನ ಈ ಮಟ್ಟಿನ ಬದಲಾವಣೆಗೆ ಕಾರಣಳಾದ ಕಣ್ಮಣಿಯಲ್ಲಿ ಅವನೇನು ಪ್ರಯತ್ನಪೂರ್ವಕವಾಗಿ ಆತ್ಮೀಯತೆ ಬೆಳೆಸಿಕೊಂಡಿರಲಿಲ್ಲ. ಅದು ತಾನಾಗಿ ಮೂಡಿತ್ತು.

ಕ್ಷಣ ಅವಳು ಕೂಡ ಭಾವುಕಳಾದರೂ ನಿಯಂತ್ರಿಸಿಕೊಂಡಳು. 'ನಿಮ್ಮ ಎದೆಯ ಆಸರೆ ನೀಡಿ. ಹಿಂದಿನ ಜನ್ಮದಲ್ಲಿ ಕೂಡ ನೀವು ನನ್ನವರೆ' ಎಂದು ಹೇಳಬೇಕೆನಿಸಿದರೂ ಸಾಧ್ಯವೇ? ಎಂದೋ ಅವನೆದೆಯಲ್ಲಿ ಚಿಗುರಿದ ಪ್ರೇಮದ ಬಳ್ಳಿ ಹಚ್ಚ ಹಸುರಾಗಿ ಗುಂಪು ಗುಂಪಾಗಿ ಹರಡಿಕೊಂಡು ಬೇರೆ ಯಾರಿಗೂ ಪ್ರವೇಶವಿಲ್ಲದಂತೆ ಮಾಡಿರಬಹುದು. ಈ ಲಾಜಿಕ್‌ನ ಅವಳ ಮನ ಪೂರ್ತಿಯಾಗಿ ಒಪ್ಪಿಕೊಳ್ಳದು. ಆ ಹೆಣ್ಣು ಯಾರೇ ಆಗಿರಬಹುದು. ಅವಳಿಗೆ ಮುನ್ನ ಅವನ ಹೃದಯಕ್ಕೆ ಒಡತಿಯಾಗಿದ್ದವಳು ನಾನೇ ಎನ್ನುವ ನಂಬಿಕೆ ಅವಳದು.

ಗೊಂಬೆಯಂತೆ ನಿಂತ ಕಣ್ಮಣಿಯನ್ನು ನೋಡಿ ಅವನಿಗೆ ನಗು ಬಂತು. "ನೀನು ಕೇಳು, ಬಿಡು ! ಒಳ್ಳೆಯ ಪ್ರತಿಫಲವೇ ಸಿಗುತ್ತೆ. ಅಮ್ಮ ಓಡಾಡುವಂತಾದ ದಿನ ನೀನು ಪೂರ್ತಿ ಸ್ವತಂತ್ರಳು. ನಿನ್ನ ಸ್ವಂತ ಫ್ಲಾಟ್‌ಗೆ ಹೋಗ್ಬಹುದು. ಆರ್ಥಿಕವಾಗಿ ತೊಂದರೆ ಇರೋಲ್ಲ. ಡೈವರ್ಸ್ ಸುಲಭವಾಗಿ ಸಿಕ್ಕುತ್ತೆ. ನೀನು ಪ್ರೇಮಿಸುವ, ಇಷ್ಟಪಡುವ ವ್ಯಕ್ತಿಯೊಂದಿಗೆ ವಿವಾಹವಾಗಿ ಸುಖವಾಗಿರೋಕೆ ನನ್ನ ವಿಶಸ್ ಇದ್ದೇ ಇರುತ್ತೆ" ಎಂದ. ಅವಳ ಭವಿಷ್ಯದ ಚೌಕಟ್ಟನ್ನು ತಾನೇ ಕಣ್ಮಣಿಯ ಮುಂದಿಟ್ಟ. ಆ ಹೆಣ್ಣಿನ ಬಗ್ಗೆ ಯಾವುದೇ ಭಾವನೆ, ಸಂವೇದನೆಗಳು ಇಲ್ಲವೆಂದು ಸ್ಪಷ್ಟಪಡಿಸಿದಾಗ ನಿಂತ ನೆಲ ಕುಸಿದಂತಾಯಿತು. ಪಾತಾಳ ಸೇರುವ ಮುನ್ನ ಎದ್ದು ನಿಲ್ಲಬೇಕಿತ್ತು.

"ಥ್ಯಾಂಕ್ಯೂ ಸರ್" ಹೊರ ನಡೆದಳು.

ಪಂಢರಿ ಎಂಟು ದಿನ ಮಲಗಿದ್ದು ಚೈತನ್ಯ, ಕಣ್ಮಣಿಯ ಮಧ್ಯದ ಅಂತರ ಕಿಂಚಿತ್ತಾದರೂ ಕಡಿಮೆಯಾಗಲು ಸಹಾಯಕವಾಯಿತು. ಬಂಗ್ಲೆಯಲ್ಲಿನ ಪರ್ಸನಲ್ ಬೇಕು, ಬೇಡಗಳನ್ನು ಅವಳೇ ನೋಡುವಂತಾಯಿ ಕೆಲವೊಮ್ಮೆ 'ಕಣ್ಮಣಿ' ಎಂದು ತಾನೇ ಕೂಗುತ್ತಿದ್ದ. ಕೆಲವು ಕೆಲಸಗಳನ್ನು ಹೇಳುತ್ತಿದ್ದ

'ನಿನ್ನ ಬರವಣಿಗೆ ಎಲ್ಲಿಗೆ ಬಂತು?' ಒಂದೆರಡು ಸಲ ವಿಚಾರಿಸಿದ್ದ.

ಆಫೀಸ್‌ಗೆ ಹೊರಡುವ ಮುನ್ನ ಏನೋ ತಿಳಿಸಬೇಕಾಗಿ ಅವಳ ರೂಮಿಗೆ ಆಕಸ್ಮಿಕವಾಗಿ ಬಂದ. ಇನ್ನು ಪಂಢರಿ ಚೇತರಿಸಿಕೊಳ್ಳದಿದ್ದರಿಂದ ಅವನಿಗೆ ಹೇಳುವುದನ್ನು ಸದ್ಯಕ್ಕೆ ಕಣ್ಮಣಿಗೆ ಹೇಳುವುದು ಅನಿವಾರ್ಯವಾಗಿತ್ತು. ಅಲ್ಲಿ ಟೇಬಲ್ಲು ಮೇಲಿದ್ದ ಕೆಲವು ಫೋಟೋಗಳು ಅವನ ಗಮನ ಸೆಳೆಯಿತು. ಹೆಡೆ ಎತ್ತಿದ ಹಾವಿನ ನಾಲ್ಕು ಚಿತ್ರಗಳ ಜೊತೆ, ಒಂದು ಅರಮನೆಯಂಥ ಪಾಳು ಬಿದ್ದ ಬಂಗ್ಲೆಯ ಒಂದೆರಡು ಚಿತ್ರಗಳ ಜೊತೆ ಪುಟ್ಟ ಕರಿ ಶಿಲೆಯ ಎರಡು ಭಾವಚಿತ್ರಗಳು. ಪ್ರತಿಯೊಂದನ್ನು ಎತ್ತಿಕೊಂಡು ಪರಿಶೀಲಾತ್ಮಕವಾಗಿ ನೋಡಿ ನೋಡಿ ಇಟ್ಟ. ಸಾಮಾನ್ಯ ಕ್ಯಾಮರದಲ್ಲಿ ತೆಗೆದ ಚಿತ್ರಗಳೆಂದುಕೊಂಡ. ಬಂಗ್ಲೆ, ಹಾವು, ಕರೀಶಿಲೆ-ಏನೇನು ಅರ್ಥವಾಗಲಿಲ್ಲ. ಆ ವೇಳೆಗೆ ಬಂದ ಕಣ್ಮಣಿ ತಟಸ್ಥಳಾಗಿ ನಿಂತಳು. ಒಂದು ಹಳೆಯ ಡೈರಿ ಅವನನ್ನು ಸೆಳೆಯಿತು.

"ಈ ಫೋಟೋಗಳೆಲ್ಲ ಏನು? ಯಾರು ತೆಗೆದಿದ್ದು ? ಆ ಬಗ್ಗೆ ಸಂಜೆ ಹೇಳ್ಬಹ್ದು. ಡಾಕ್ಟ್ರು ಬಂದ ಕೂಡ್ಲೇ ನಂಗೆ ಇನ್ ಫಾರ್ಮ್ ಮಾಡು. ಅಮ್ಮನ ವೆಯಿಟ್ ಕಡ್ಮೇಯಾಗಿದೆ. ಕೊಡೋ ಫುಡ್ ಬಗ್ಗೆ ಗಮನ ಹರಿಸು" ಫೋಟೋಗಳನ್ನು ಟೇಬಲಿನ ಮೇಲೆ ಹಾಕಿ ಹೊರಟ. ಅವನಿಗಾಗಿ ಅವನ ಪಿ.ಎ. ಹೊರಗೆ ಹನುಮಂತರಾಮುನಿಗೆ ಕಾಯುವಂತೆ ವಿನಯ, ವಿಧೇಯತೆಯಿಂದ ಕಾದಿದ್ದ.

ಸುಬ್ಬಲಕ್ಷ್ಮಿಯ ರೂಮಿಗೆ ಹೋದಳು. ಡಯಾನ ಸಾವಿನ ಬಗ್ಗೆ ಆಕೆ ಸ್ವಲ್ಪ ಚಿಂತಿತರಾಗಿದ್ದರು. ಎಂಥಾ ಆಕಸ್ಮಿಕ! ಎಂಟು ವರ್ಷಗಳಿಂದ ಮಂಚ ಸೇರಿದ ಆಕೆ ಎಷ್ಟೋ ಸಲ ಸಾವನ್ನು ಬಯಸಿ ಹತ್ತಿರಕ್ಕೆ ಕರೆದಿದ್ದಳು. ಅದು ಇಣಕಿ ಕೂಡ ನೋಡಿರಲಿಲ್ಲ. ಸಾಮಾನ್ಯಳಾಗಿ ಹುಟ್ಟಿ ರಾಜಕುಮಾರಿಯಾಗಿ ಬಾಳಿದ ಆಕೆ ಬದುಕಿದ್ದಾಗಲೇ ಕತೆಯಾಗಿದ್ದ ಚೆಲುವೆ.

"ಬಾ ಕೂತ್ಕೋ, ಚೈತನ್ಯ ನಿಂಗೋಸ್ಕರ ಹುಡುಕ್ತಾ ಇದ್ದ" ತಿಳಿಸಿದರು. ಅವಳೇನು ಕೆಂಪು ಕೆಂಪಾಗಬೇಕಾದ ಅಗತ್ಯವಿರಲಿಲ್ಲ. ಯಜಮಾನ ದೀಪಾಂಕುರದಲ್ಲಿ ಇರುವಷ್ಟು ಸಮಯವು ಹಿಂದೆ, ಮುಂದೆ ಸುತ್ತಿ ಅವನ ಬೇಕು, ಬೇಡಗಳನ್ನು ಒದಗಿಸುತ್ತಿದ್ದ ಪಂಢರಿ ಮಲಗಿರುವುದು ಒಂದೇ ಒಂದು ಕಾರಣವೆಂದು ಗೊತ್ತು ಅವಳಿಗೆ.

"ನಮ್ಮ ಚೈತನ್ಯ ಹೇಗೆ?" ಒಂದು ಪ್ರಶ್ನೆ ಹಾಕಿದರು.

ಹೇಗೆ ? ಹೇಗೆ ? ಹೇಗೆ ? ಆ ತಾಯಿಗೆ ಒಂದು ರೀತಿಯ ಕುತೂಹಲ. ನಲವತ್ತರ ಮಗನಿಗೆ ಇಪ್ಪತ್ತೊಂದರ ವಯಸ್ಸಿನ ಹೆಣ್ಣಿನ ಜೋಡಿ. ಹಿಂದೆ ಇದು ಅಧಿಕವೆನಿಸುತ್ತಿರಲಿಲ್ಲವೇನೋ, ಈಗ ಈ ಅಂತರ ಅವರನ್ನು ಎಲ್ಲಿ ದೂರ ದೂರ ನಿಲ್ಲಿಸುವುದೋ ಎನ್ನುವ ಭಯ.

ಕ್ಷಣ ಮೈ ಮರೆತಳು. ಅವಳ ಚೈತನ್ಯ ಪ್ರಬುದ್ಧ, ದಿಟ್ಟ, ಹಿಂದಿರುಗಿ ನೋಡಲಾರದ ಸಾಹಸಿ. ಸುಸ್ವಭಾವ, ತಾಯಿಯಲ್ಲಿ ಅಪಾರವಾದ ಪ್ರೀತಿಯುಳ್ಳವನು ರಸಿಕ - ಇಷ್ಟನ್ನು ಆರಾಮವಾಗಿ ನುಡಿದ ನಂತರವೇ ಎಚ್ಚೆತ್ತುಕೊಂಡಿದ್ದು.

ಸುಬ್ಬಲಕ್ಷ್ಮಿ ಗ್ರಂತು ಸಂತೋಷವೋ ಸಂತೋಷ. ಗಂಡನ ಬಗ್ಗೆ ಅವಳ ಅನಿಸಿಕೆ, ಆರಾಧನೆಗೆ ದಂಗಾದರು. 'ಚೈತನ್ಯದು ಎಂತಹ ಆಯ್ಕೆ. ಅವನ ಬದುಕೆಲ್ಲ ಬೆಳದಿಂಗಳೆ' ಅಂದುಕೊಂಡರು.

"ಸುಖವಾಗಿರು" ಆವೇಶ ಕೈಯನ್ನೆತ್ತಿ ಅವಳ ತಲೆಯ ಮೇಲಿಟ್ಟು ಆಶೀರ್ವದಿಸಿತು. ಯಾವ ಶಕ್ತಿ ಪ್ರೇರೇಪಿಸಿತೋ, ದೈವ ಶಕ್ತಿ ನೀಡಿತೋ - ಕೈ ಸಶಕ್ತವಾಯಿತು.

ನಂತರವೇ ಅದು ಇಬ್ಬರ ಅರಿವಿಗೂ ಬಂದಿದ್ದು. ಆನಂದ ತಂದಿಲರಾದರು. ಮಾತಾಡಲು ಶಕ್ಯರಾಗಲಿಲ್ಲ. ಐದೇ ನಿಮಿಷದಲ್ಲಿ ಪೇಜರ್ ಈ ವಿಷಯವನ್ನು ಚೈತನ್ಯನಿಗೆ ಮುಟ್ಟಿಸಿ, ದೊಡ್ಡ ಡಾಕ್ಟರ್‌ಗಳ ಹಿಂಡಿನ ಜೊತೆ ಚೈತನ್ಯ ದೀಪಾಂಕುರಕ್ಕೆ ಹಿಂದಿರುಗಿದ ಕೂಲಂಕುಷವಾಗಿ ಚೆಕ್‌ಅಪ್‌ನ ನಂತರ ಆಕೆಯ ಕೈಕಾಲುಗಳು ಸಶಕ್ತವಾಗಿರುವುದು ಕಂಡು ಬಂದು ಅವನಿಗೆ 'ವಿಶ್' ಮಾಡಿದರು. 'ಯಾವ ಚಿಕಿತ್ಸೆ ? ಆಯುರ್ವೇದಿಕ್ಕಾ, ಅಲೋಪತಿಯ, ಹೋಮಿಯೋಪತಿಯಾ ಅಥವಾ ಬೇರೆ ಯಾವ ರೀತಿಯ ಚಿಕಿತ್ಸೆ ಔಷಧೋಪಚಾರ, ಚಿಕಿತ್ಸೆಯಿಂದ ಗುಣಪಟ್ಟಿದೆ? ಇದೊಂದು ಪ್ರಶ್ನೆ. ಎಲ್ಲರ ನೋಟ ಕಣ್ಮಣಿಯತ್ತ.'

ದೇವರ ದಯೆ ಅಷ್ಟೇ ಎಂದಿತು ಅವಳ ಕಣ್ಣುಗಳು.

ಎರಡು ದಿನದಲ್ಲಿ ಮಗ ಮತ್ತು ಕಣ್ಮಣಿಯವರ ಆಸರೇಯಿಂದ ಹೆಜ್ಜೆ ಇಡುತ್ತಿದ್ದವರು ಮೂರನೇ ದಿನ ತಾವೇ ನಾಲ್ಕು ಹೆಜ್ಜೆ ಕ್ರಮಿಸುವಷ್ಟು ಶಕ್ತರಾಗಿದ್ದು ದೇವರ ದಯೆ.

ಈ ಸಂತೋಷದ ಹಿಂದೆ ಕಣ್ಮಣಿ 'ದೀಪಾಂಕುರ' ಬಿಟ್ಟು ಹೊರಡುವ ದಿನ ಹತ್ತಿರವಾಗ ತೊಡಗಿತು. ಎರಡು ದಿನದ ಫ್ಲಾಟ್‌ಗೆ ಸಂಬಂಧಪಟ್ಟ

ಡಾಕ್ಯುಮೆಂಟ್ಸ್‌ನ ಅವಳ ವಶಕ್ಕೆ ಕೊಟ್ಟ ಚೈತನ್ಯ "ಖಾಲಿಯಾಗಿಯೇ, ಇದೆ. ನೀನು ನಿನ್ನ ಫ್ರೆಂಡ್ ಹೋಗಿ ನೋಡ್ಕೊಂಡ್ಬನ್ನಿ. ಏನಾದ್ರೂ ಬದಲಾವಣೆಗಳನ್ನು ಸೂಚಿಸಿದ್ರೆ.... ಮಾಡಿ ಕೊಡ್ತಾರೆ" ಎಂದಿದ್ದ. ಪರೋಕ್ಷವಾಗಿ ಅವಳನ್ನು ಹೊರಗೆ ಕಳುಹಿಸಲು ಚೈತನ್ಯ ತುದಿಗಾಲಲ್ಲಿ ನಿಂತಂತೆ ಕಂಡ.

ಮರುದಿನ ಹಾಸ್ಟಲ್ ವಾರ್ಡನ್ ಫೋನ್ ಮಾಡಿ ತಿಳಿಸಿದರು "ಎರಡು ದಿನದಿಂದ ವಾಸಂತಿಗೆ ಜ್ವರ. ನಿಂಗೆ ತಿಳಿಸೋಕೆ ಹೇಳಿದ್ಲು" ಕಣ್ಮಣಿಗೆ ಗಾಬರಿಯಾಯಿತು.

ದೇವರ ಮನೆಯಲ್ಲಿದ್ದ ಸುಬ್ಬಲಕ್ಷ್ಮಿಯವರ ಬಳಿಗೆ ಹೋಗಿ "ಅಮ್ಮ ವಾಸಂತಿಗೆ ಜ್ವರನಂತೆ" ಕಳವಳದಿಂದ ನುಡಿದಳು.

"ಹೋಗ್ಬಾ, ಬೇಕಾದ್ರೆ ಫೋನ್ ಮಾಡಿ ಡಾಕ್ಟ್ರನ್ನು ಕರೆಸ್ಕೋ. ಹೆಚ್ಚೂಂತ ಅನ್ನಿಸಿದ್ರೆ... ನರ್ಸಿಂಗ್ ಹೋಂಗೆ ಕರ್ಕೊಂಡ್ಹೋಗಿ ಅಡ್ಮಿಟ್ ಮಾಡ್ಬಿಡು" ಸಲಹೆ ಇತ್ತವರು "ಸ್ವಲ್ಪ ನನ್ನ ಎಬ್ಬಿಸು" ಕೈ ನೀಡಿದರು. ಸದ್ಯಕ್ಕೆ ತಟ್ಟನೆ ಏಳಲು ಮಾತ್ರ ಪ್ರಯಾಸಪಡಬೇಕಿತ್ತು. ನೆಲದ ಮೇಲೆ ಕೂತ ಸಂದರ್ಭಗಳಲ್ಲಿ ಇಲ್ಲದಿದ್ದರೇ ತೀರಾ ವೇಗವಿಲ್ಲದಿದ್ದರೂ ಮಂದವಾಗಿ 'ದೀಪಾಂಕುರ'ದಲ್ಲಿ ಓಡಾಡಬಲ್ಲವರಾಗಿದ್ದರು.

ಲಾಕರ್‌ನಿಂದ ನಾಲ್ಕು ಎಳೆಯ ಸರ ತೆಗೆದು ಅವಳ ಕುತ್ತಿಗೆಗೆ ಹಾಕಿ, ಕಲ್ಲಿನ ಬಳೆಗಳನ್ನು ಕೈಗಳಿಗೆ ತೊಡಿಸಿದಾಗ ತುಟಿ ತೆರೆಯಲಿಲ್ಲ. ಆಕೆಗೆ ವಾಸ್ತವ ಸ್ಥಿತಿ ಗೊತ್ತಿಲ್ಲವೆಂದು ಅವಳಿಗೆ ಗೊತ್ತು ತುಟಿ ತೆರೆಯಲಿಲ್ಲ.

'ದೀಪಾಂಕುರ'ದ ಮಾರುತಿ ಜೀಪ್ ಅವಳನ್ನು ಹಾಸ್ಟಲ್ ಬಳಿ ಇಳಿಸಿತು. ಪೂರ್ಣವಾದ ಸ್ವತಂತ್ರ ಅನುಭವಿಸಲು ಕೆಲವು ದಿನಗಳು ಬೇಕಿತ್ತು.

ಮೆಟ್ಟಿಲೇರಿ ಹೋಗುತ್ತಿದಂಗೆ ಬಾತ್‌ರೂಮಿನಿಂದ ಬರುತ್ತಿದ್ದ ವಾಸಂತಿ ಅವಳನ್ನು ತಬ್ಬಿಕೊಂಡಳು. "ಸದ್ಯ ಬಂದೆಯಲ್ಲ ! ಈ ಪ್ಲಾನ್ ಹಾಕದಿದ್ದರೇ ನೀನು ಬರೋಲ್ಲಾಂತ ನಂಗೆ ಗೊತ್ತಿತ್ತು" ಕುಣಿದಾಡುವಷ್ಟು ಸಂತೋಷ ಅವಳದು.

ರೂಮಿಗೆ ಹೋಗೋವರೆಗೂ ತುಟಿ ತೆರೆಯಲಿಲ್ಲ ಕಣ್ಮಣಿ ಇನ್ನೊಬ್ಬರ ಲಗೇಜ್ ಪೂರ್ತಿ ಖಾಲಿಯಾಗಿ, ಈಗ ಸದ್ಯಕ್ಕೆ ವಾಸಂತಿಯೊಬ್ಬಳೇ ವಾರದ ಹಿಂದೆ ರೂಪ ಟ್ರಾನ್ಸ್‌ಫರ್ ಆಗಿ ಹೊರಟು ಹೋಗಿದ್ದರಿಂದ ಅಲ್ಲಿ ಇನ್ನೊಬ್ಬರ

ಭರ್ತಿ ಬೇಕಿತ್ತು.

"ಫೀವರ್ ಅಂತ ಲೀವ್ ಲೆಟರ್ ಕೊಟ್ಬಂದೇ. ನಿನ್ಹತ್ರ ತುಂಬ ತುಂಬ ಮಾತಾಡ್ಬೇಕೂಂತ ಅನ್ನಿಸಿಯೇ ಫೋನ್ ಮಾಡಿಸಿದ್ದು. ಅಲ್ಲಿಗ್ಬಂದ್ರೆ... ಒಂದು ರೀತಿಯ ಪುಕ್ಕಲುತನ. 'ದೀಪಾಂಕುರ' ಗಾಂಭೀರ್ಯ, ದೊಡ್ಡತನ ನೋಡಿಬಿಟ್ಟರೇ, ನಾಲಿಗೆಯೂ ಮುಷ್ಕರ ಹುಡುತ್ತೆ" ಬಡಬಡಿಸಿದಳು.

ಕಣ್ಮಣಿಯ ಮುಖದ ಮ್ಲಾನತೆ ನೋಡಿ ಅವಳಿಗೆ ಗಾಬರಿ "ಅಮ್ಮ ಈಗ ಹೇಗಿದ್ದಾರೆ?" ಕೇಳಿದಳು.

"ಈಗ ಓಡಾಡ್ತಾರೆ. ಸ್ವಲ್ಪ ನಿಧಾನವಾಗಿಯಾದ್ರೂ ಅವ್ರ ಊಟ ಅವರು ಮಾಡಬಲ್ಲರು. ಪೂಜೆ, ಧ್ಯಾನ ಎಲ್ಲಾ ಮಾಡ್ತಾರೆ. ಟೋಟಲೀ ನಾರ್ಮಲ್ ಅಂತ್ಲೇ ಹೇಳ್ಬಹುದ್ದು. ಈ ರೂಮಿಗೆ ಇನ್ನೊಬ್ಬರನ್ನು ಫಿಲಪ್ ಮಾಡೋದ್ಬೇಡ, ನಾನೇ ಬಂದ್ಬಿಡ್ತೀನಿ."

ಕಣ್ಮಣಿಯ ಮಾತುಗಳಿಗೆ ವಿಸ್ಮಿತಳಾದಳು. ದೀಪಾಂಕುರದಂಥ ಬಂಗ್ಲೆ ಬಿಟ್ಟು ಇಲ್ಲಿಗೆ ಯಾಕೆ ಬರ್ತಾಳೆ ? ಇವಳು ಕೇಳದೆಯೇ ಸತ್ಯವನ್ನು ಅವಳ ಮುಂದೆ ಬಿಚ್ಚಿಟ್ಟಳು.

"ಅಂಥ, ಆಫರ್ ನನ್ಮುಂದೆ ಬಂದಾಗ ಜನ್ಮ ಜನ್ಮಾಂತರದ ಸುಕೃತವೆಂದುಕೊಂಡೆನೇ ವಿನಃ ಆಸ್ತಿಪಾಸ್ತಿ, ಅಂತಸ್ತು ನೋಡ್ಲಿಲ್ಲ. ಕೆಲವು ಕಾಲವಾದ್ರೂ ತಾಯಿಯ ಪ್ರೀತಿ, ಅತ್ತೆಯ ಆದರ ಸಿಕ್ತು. ಕನಿಷ್ಟ ಅವ್ರ ಸುತ್ತ ಮುತ್ತ ಓಡಾಡುವಂಥ ಭಾಗ್ಯ ಕೂಡ ನನ್ನದಾಗಿತ್ತು. ಹತ್ತು ಲಕ್ಷವಾಗ್ಲಿ, ಪ್ಲ್ಯಾಟ್ ಆಗ್ಲಿ ನಂಗೆ ಬೇಡ. ಹೋಗಿದ್ದಾಗಿನ ಕಣ್ಮಣಿಯಂತೆ ಹಿಂದಿರುಗಿ ಬಿಡ್ತೀನಿ."

ಅವಳ ಪದೋಚ್ಚಾರಣೆ ಸಮಾಧಾನಕರವಾಗಿಯೇ ಇತ್ತು. ಅಲ್ಲಿ ಆವೇಶಕ್ಕಿಂತ ಆಲೋಚನೆಗೆ ಮಹತ್ವ ಕೊಟ್ಟಿದ್ದಳು.

"ಬಹಳ ಅನ್ಯಾಯ ಕಣೇ" ವಾಸಂತಿಯ ಸ್ವರದಲ್ಲಿ ದುಗುಡವಿತ್ತು. "ನನ್ನ ಮೂರು ಸಾವಿರ ರೂಪಾಯಿ ಸ್ಕ್ಯಾಲರಿಗೆ ಅಪಾಯಿಂಟ್ ಮಾಡ್ಕೊಂಡಿದ್ದು. ಈಗ ಹತ್ತು ಲಕ್ಷದಷ್ಟು ದೊಡ್ಡ ಮೊತ್ತದ ಜೊತೆ ಒಂದು ಪ್ಲಾಟ್ ಕೂಡ ಕೊಡ್ತಾ ಇದ್ದಾರೆ. ವ್ಯಾವಹಾರಿಕವಾಗಿ ದೊಡ್ಡ ಲಾಭವೇ. ಚೈತನ್ಯರ ನೋಡಿದ್ಮೇಲೆ ಇನ್ನೊಂದು ಗಂಡಿನ ಜೊತೆ ಮದುವೆ, ಸಂಸಾರ ಅಂಥ ಕನಸೇನು ಇರ್ಲಿಲ್ಲ. ಈಗ ಒಳ್ಳೇದೇ ಆಯ್ತು. ಡೈವರ್ಸ್ ಕೊಟ್ಟರೂ ಮಾನಸಿಕವಾಗಿ ಪತಿಯ ಸ್ಥಾನದಲ್ಲೇ ಉಳೀತಾರೆ. ಕೆಲವೊಮ್ಮೆ ಜಾನಪದ

ಕತೆಯೆನಿಸುತ್ತೆ. ವೈಜ್ಞಾನಿಕವಾಗಿ ಎಷ್ಟು ಬೆಳೆದರೂ ಇಂಥ ವಿಸ್ಮಯಗಳು ಘಟಿಸುತ್ತಲೇ ಇರುತ್ತೆ. ಆ ಜನ್ಮದಲ್ಲಿ ಕಳೆದುಕೊಂಡ ಚೈತನ್ಯ ಈಗ ನಂಗೆ ಸಿಕ್ಕಿದ್ದಾರೆ. ಅವ್ರಿಗೆ ಅಂಥ ನೆನಪುಗಳು ಇರ್ದೇ ಇರ್ಬಹ್ದು, ನಂಗಿದೆ" ಎಂದಳು.

ವಾಸಂತಿಯ ಕೈಯಲ್ಲಿನ ಕೂಮ್ ಕೆಳಗೆ ಬಿದ್ದರೂ ಹೆಕ್ಕಿಕೊಳ್ಳಲಿಲ್ಲ. ಒಂದು ರೀತಿಯ ದಿಗ್ಭ್ರಮೆ. ಒಂದು ಸಸ್ಪೆನ್ಸ್ ಕಾದಂಬರಿಯೆನಿಸಿತು. ಆದರೆ ಇಂಥ ಮುಕ್ತಾಯಕ್ಕೆ ಅವಳ ಮನಸ್ಸು ಒಡಂಬಡಲಿಲ್ಲ.

"ನೀನು ಹೇಳಬಹುದಿತ್ತು, ಅಥ್ವಾ ಈ ಜನ್ಮದಲ್ಲಿ ತಾಳಿ ಕಟ್ಟಿದ್ದಕ್ಕಾದ್ರೂ ಸಹಜೀವನಕ್ಕೆ ಅವಕಾಶ ಕೊಡೂಂತು ಕೇಳಬಹುದಿತ್ತು."

ಗೆಳತಿಯ ಮಾತುಗಳಿಗೆ ತಲೆಯಾಡಿಸಿಬಿಟ್ಟಳು "ನಂಗೆ ಅದೆಲ್ಲ ಇಷ್ಟವಾಗ್ದು, ನನ್ನಿಂದ ಅವ್ರ ತಾಯಿಗೆ ಗುಣವಾಗಿದೆಯೆನ್ನುವ ಅಭಿಮಾನವಿದೆ. ಅದ್ನ ಕಳ್ದುಕೊಳ್ಳೋಕೆ ನಿಂಗಿಷ್ಟವಿಲ್ಲ. ಕಟ್ಟು ಕತೆ ಅಂಥ ಹಾಸ್ಯ ಮಾಡ್ತಾರೆ. ಅವ್ರ ದೃಷ್ಟಿಯಲ್ಲಿ ನಾನು ಪೂರ್ತಿ ಕೆಳಗಿಳಿಯಬೇಕಾಗುತ್ತೆ. ಅದೆಲ್ಲ ಬೇಡ, ಮತ್ತೆ ಒಂದು ರೀತಿಯಲ್ಲಿ ಹೊಸ ಬದ್ಕು. ಈ ರೂಮನ್ನು ನಂಗೋಸ್ಕರ ಕಾಯ್ದಿರಿಸು, ವಾರ್ಡನ್‌ಗೆ ಏನು ಹೇಳೋದ್ಬೇಡ" ಕೈ ಹಿಡಿದುಕೊಂಡಳು.

ಎರಡು ಕೈಯಲ್ಲೂ ಹಣೆಯೊತ್ತಿಕೊಂಡಳು. ಅವಳ ಜೀವನದಲ್ಲಿ ಪ್ರವೇಶಿಸಲು ಸಿದ್ಧವಾಗಿತ್ತು ಕರ್ಣನೆಂಬ ಕ್ರಿಮಿ. ಆದರೆ ಕಣ್ಮಣಿಗೆ ಸಿಕ್ಕಿದ ಅವಕಾಶ ರಾಣಿಯ ಪಟ್ಟ. ಕರ್ಣನನ್ನು ಇವಳು ತಿರಸ್ಕರಿಸಿದ್ದರೇ ಚೈತನ್ಯ ಕಣ್ಮಣಿಯನ್ನು ಹೊರದೂಡಿದ್ದ.

"ಹೇಗೂ ಇಲ್ಲೇ ಬಂದು ಇರ್ತೀನಲ್ಲ. ಗೋಪಾಲರಿಗೆ ಈ ಬಗ್ಗೆ ಪತ್ರವೇನು ಬರ್ಯೋದ್ಬೇಡ" ಮೇಲೆದ್ದಳು.

ಮಾರುತಿ ಜಿನ್ ಅಣಕಿಸಿದಂತಾಯಿತು.

****

ಎರಡು ದಿನದಿಂದ ಒಂದು ನಾಲ್ಕು ಸಲವಾದರೂ ಲೆಟರ್ ಕಳಿಸಿದ್ದಳು ವಾಸಂತಿ 'ಒಂದತ್ತು ನಿಮಿಷ ಅಪಾಯಿಂಟ್‌ಮೆಂಟ್ ಕೊಡಿ. ಮಾತಾಡೋದಿದೆ.' ಅವನ ಬಿಜಿಯಲ್ಲಿ ಉತ್ಪ್ರೇಕ್ಷಿಸಿದ್ದರೂ ಇಂಥದ್ದೇ ವಿಷಯವೆಂದು ಅಲ್ಪಸ್ವಲ್ಪ ಅರಿವಿಗೆ ಬಂದಿತ್ತು. ಕಣ್ಮಣಿ ಹೋಗಿ ಅವಳಿಗೆ ದಂಬಾಲು ಬಿದ್ದಿರಬಹುದೇ ? ತಳ್ಳಿ ಹಾಕಿದ. ಅವಳು ಕೇಳುವ ಹಣ, ಸಂಪತ್ತು ಕೊಡಲು ಸಿದ್ಧವಿದ್ದ. ಗೋಪಾಲ ಅಥವಾ ಬೇರೆ ಯಾರೊಂದಿಗಾದರೂ ಮದುವೆಯಾಗಬಹುದಿತ್ತು. ಮುಂದಿನ ಅವಳ

ಜೀವನ ಸಮಸ್ಯೆಯಾಗಿ ಕಾಣಲಿಲ್ಲ.

ಲಂಚ್ ಬ್ರೇಕ್‌ನಲ್ಲಿ ಅವನು ಹೊರಡಲು ಸಿದ್ಧವಾದಾಗ ವಾಸಂತಿ ಬಂದಳು "ಒಂದು ಐದು ನಿಮಿಷ ಮಾತಾಡೋದಿದೆ. ದಯವಿಟ್ಟು ಅವಕಾಶ ಮಾಡಿಕೊಡಿ" ಮನಸ್ಸು ಬದಲಾಯಿಸಿ ತನ್ನ ಛೇಂಬರ್‌ಗೆ ಹೋದ. ಪಿ.ಎ.ನ ಕೂಡ ಹೊರಗೆ ಕಳಿಸಿದ.

"ಕ್ವಿಕ್, ಬೇಗ್ಹೇಳಿ" ಅವಸರಿಸಿದ.

ಎಷ್ಟೇ ಧೈರ್ಯ ತಂದುಕೊಂಡರೂ ಸಿಂಹದ ಮುಂದೆ ನಿಂತಂತಾಯಿತು ಅವಳಿಗೆ. ಹೇಗೆ ಪ್ರಾರಂಭಿಸುವುದು? ಎಲ್ಲಿಂದ ಷುರು ಮಾಡುವುದು? ಅವನ ತಕ್ಷಣದ ಪ್ರತಿಕ್ರಿಯೆ ಹೇಗಿರುತ್ತೆ? ಇಂಥ ತುಮುಲಗಳ ನಡುವೆ ಕಂಗೆಟ್ಟಾಗ, ಬೆಲ್ ಮಾಡಿ ಅವಳಿಗೆ ನೀರು ತರಿಸಿಕೊಟ್ಟ.

"ಕುತ್ಕೊಂಡ್, ನೀರು ಕುಡಿದು ಧೈರ್ಯವಾಗಿ ಹೇಳಿ ನೀವು ಕೇಳಿದ ಹತ್ತು ನಿಮಿಷದಲ್ಲಿ ಎರಡ್ನಿಮಿಷ ಮುಗೀತು. ಇನ್ನು ಎಂಟು ನಿಮಿಷದಷ್ಟು ವೇಳೆ ಇದೆ."

ಈ ಅವಕಾಶ ಉಪಯೋಗಿಸಿಕೊಳ್ಳದಿದ್ದರೇ, ಕಣ್ಮಣಿ ಭವಿಷ್ಯ ಹಾಳಾಗುತ್ತದೆಯೆಂದು ಸ್ವಲ್ಪ ಧೈರ್ಯ ತಂದುಕೊಂಡಳು. "ಸರ್, ಕಣ್ಮಣಿಯ ಬದ್ಕಿನ ಎರಡ್ನ ವಿಸ್ಮಯಗಳು ನಿಮ್ಮ ಮಂದೆ ಹೇಳ್ಬೇಕೂಂತ ಅದ್ನ ನೀವು ಒಂದಿಷ್ಟು ಚಿಂತನೆಗೆ ಹಚ್ಚಿ ನೋಡ್ಬೇಕು" ಎಂದು ತನ್ನ ಹ್ಯಾಂಡ್ ಬ್ಯಾಗ್‌ನಲ್ಲಿದ್ದ ಚೀಟಿ ತೆಗೆದಳು.

ವಾಡೆಯ ಘಟನೆ ಮೊದಲನೆಯದು - ಚೈತನ್ಯನನ್ನು ಮೊದಲ ಸಲ ನೋಡಿದಾಗಿನ ನಡವಳಿಕೆ ಆಮೇಲಿನ ತುಮುಲವನ್ನು ಸಂಕ್ಷಿಪ್ತವಾಗಿ ವಿವರಿಸಿದಳು.

"ನೀವು ಹೆಚ್ಚು ಅಂದ್ಕೋಬಹ್ದು, ಭ್ರಮೆ ಅಂದ್ಕೋಬಹ್ದು ಖಂಡಿತ ಅದು ಯಾವ್ದೂ ಅಲ್ಲ. ಅವ್ಳ ಹೃದಯದ ಮಾತು ನಿಜ" ಅವಳ ಸ್ವರ ಕಂಪಿಸಿತು.

"ಹೇಳಿದ್ದು ಮುಗಿತಲ್ಲ, ಇನ್ನು ಒಂದುಕ್ಕಾಲು ನಿಮಿಷವಿದೆ."

ಅವನ ಮಾತಿಗೆ ಮೇಲೆದ್ದು "ಥ್ಯಾಂಕ್ಯೂ,ಥ್ಯಾಂಕ್ಯೂ ವೆರಿಮಚ್" ಕೈಗಳನ್ನು ಜೋಡಿಸಿ ಹೊರ ಬಂದ ನಂತರ ಸಮಾಧಾನದ ಉಸಿರು ಬಿಟ್ಟಿದ್ದು ಮಾತ್ರವಲ್ಲ, ಕೋಲ್ಡ್ ವಾಟರ್ ಟ್ಯಾಂಕ್‌ನ ಬಳಿ ಹೋಗಿ ಕನಿಷ್ಟ ನಾಲ್ಕು

ಗ್ಲಾಸ್ ನೀರು ಕುಡಿದಳು.

ಚೈತನ್ಯನ ತುಟಿಯಂಚಿನಲ್ಲಿ ಕಿರುನಗೆಯೊಂದು ಮೂಡಿ ಮಾಯವಾಯಿತು. ಸ್ವಾರಸ್ಯಕರ ಕತೆಯೆನಿಸಿತು. ಒಬ್ಬ ಒಳ್ಳೆ ಚಲನಚಿತ್ರ ನಿರ್ದೇಶಕರ ಕೈಗೆ ಈ ಕತೆ ಸಿಕ್ಕಿದರೆ ಥ್ರಿಲ್, ಸಸ್ಪೆನ್ಸ್, ಸೆಂಟಿಮೆಂಟ್‌ನ ಒಂದು ಚಿತ್ರ ತಯಾರಾಗಬಹುದೆಂದುಕೊಂಡ.

ಒಂದತ್ತು ನಿಮಿಷ ತಡವಾಗಿ ಬಂದ ದೀಪಾಂಕುರಕ್ಕೆ. ಸುಬ್ಬಲಕ್ಷ್ಮಿ ಈಗ ಚೆನ್ನಾಗಿ ಓಡಾಡುತ್ತಿದ್ದರಿಂದ, ಮಗನಿಗಾಗಿ ಸೊಸೆಯ ಜೊತೆ ಕಾಯುತ್ತಿದ್ದರು.

"ಸಾರಿ, ಒಬ್ಬ ವಿಶೇಷ ಗೆಸ್ಟ್‌ಗೆ ದಿಢೀರ್ ಅಪಾಯಿಂಟ್‌ಮೆಂಟ್ ಕೊಟ್ಟಿದ್ದರಿಂದ ಲೇಟು!" ವಾರೆ ನೋಟದಿಂದ ಕಣ್ಮಣಿಯತ್ತ ನೋಡಿದ. ಮುಗ್ಧ ತನಕ್ಕೆ ಗಾಂಭೀರ್ಯದ ಚಿನ್ನಾಭರಣ ತೊಡಿಸಿದಂತಿತ್ತು.

ಮೂವರು ಜೊತೆಯಲ್ಲಿಯೇ ಊಟಕ್ಕೆ ಕೂತರು. ತಾಯಿ, ಮಗ ಮಾತಾಡುತ್ತಿದ್ದರೇ ಕಣ್ಮಣಿ ಗಂಭೀರವಾಗಿರುತ್ತಿದ್ದಳು. ಇವನ ಆಫರ್‌ಗೆ ತಕ್ಷಣ ಒಪ್ಪಿಕೊಂಡಿದ್ದಕ್ಕೆ ಸ್ಪಷ್ಟವಾದ ಕಾರಣ ಹೇಳಿದ್ದಳು ವಾಸಂತಿ. ನಂಬ ಬೇಕಾ ? ನಂಬಲು ಸಾಧ್ಯವೇ?

ದಢ ದಢ ಮೇಲೇರಿ ರೂಮಿಗೆ ಹೋದ. ಮಗ, ಸೊಸೆಯ ಮಧ್ಯೆ ಯಾವುದೇ ಸಂಬಂಧವಿಲ್ಲವೆನ್ನುವ ಅರಿವು ಉಂಟಾದುದ್ದರಿಂದ ಅದಕ್ಕೆ ಊಹಿಸಿಕೊಂಡ ಕಾರಣಗಳೇ ಬೇರೆ ಸುಬ್ಬಲಕ್ಷ್ಮಿ. ಒಂದು ತನ್ನ ಅನಾರೋಗ್ಯ, ಎರಡು ಅವನ ಪ್ರೇಮ. ಇಂಥ ಕಾರಣಗಳು ಇದ್ದು ಮದುವೆಯಾದುದ್ದು ಯಾಕೆ ? ಏನೇನು ಅರ್ಥವಾಗಿರಲಿಲ್ಲ.

"ಕಣ್ಮಣಿ, ಚೈತನ್ಯ ರೂಮಿನ ಬೀರುನಲ್ಲಿ ಒಂದು ಹಳೇ ಆಲ್ಬಮ್ ಇದೆ. ತಗೊಂಡ್ಬಾ" ಕಳಿಸಿದರು ಅವಳನ್ನು. ಅವಳಿಗೂ ಚೈತನ್ಯನೊಂದಿಗೆ ಒಂದಿಷ್ಟು ಮಾತಾಡುವುದು ಹಿತವೆನಿಸಿತು. ಈ ಸಮಯ ಅವನಿಗೂ ಅನುಕೂಲವಾಯಿತು.

ಒಳಗೆ ಪ್ರವೇಶಿಸಿದವಳು ನಿಂತು "ಹಳೇ ಆಲ್ಬಮ್ ತಗೊಂಡ್ ಬಾ ಅಂದ್ರು, ಅಮ್ಮ". ಮಂಚದ ಕಟ್ಟಿಗೆ ಆನಿಸಿದ್ದ ಮೆತ್ತಗೆ ಒರಗಿದವನು ನೋಟವರಿಸಿ ಮೆಲ್ಲಗೆ, ಏನನ್ನಿಸಿತೋ ತಾನೇ ಎದ್ದು ಬಂದು ಬೀರುವಿನಿಂದ ಆಲ್ಬಮ್ ತೆಗೆದು ಕೊಟ್ಟು, ಏನೋ ಹೇಳಲು ಉದ್ಯುಕ್ತನಾಗುವ ಮುನ್ನ ಅವಳೇ "ಒಂದಿಷ್ಟು ಮಾತಾಡೋದಿತ್ತು" ಅವನ ಹುಬ್ಬೇರಿ ಅವಳ ಮಾತಿಗೆ

ಕೆಳಗಿಳಿಯಿತು.

"ಓಕೇ, ನಿನ್ನ ರೂಮಿನಲ್ಲಿ ನೋಡಿದ ಫೋಟೋಸ್‌ನ ಸ್ವಲ್ಪ ತಗೊಂಡ್ಬಾ" ಹೇಳಿದ. ವಾಸಂತಿ ಹೇಳಿದ ಕತೆ ನೆನಪಾಗಿ ಅವನಿಗೆ ನಗು ಬರುತಿತ್ತು. 'ಹಿಂದಿನ ಜನ್ಮದಲ್ಲಿ ತಾನು ಅವಳ ಪತಿಯಾಗಿದ್ದೆ' ಬಹಳ ವಿಚಿತ್ರವಾಗಿ ಕಾಣಿಸುತಿತ್ತು.

ಫೋಟೋಗಳನ್ನು ಹಿಡಿದು ಬಂದಾಗ ಆರಾಮಾಸನದಲ್ಲಿ ಕೂತಿದ್ದ. ಅವನ ಮುಂದಿಟ್ಬಾಗ "ಕೂತ್ಕೋ, ತುಂಬ ಇಂಟರೆಸ್ಟಾಗಿದೆ. ಇವೆಲ್ಲ ನೀನೇ ತೆಗೆದಿದ್ದ?" ಒಂದೊಂದೇ ಫೋಟೋನ ನೋಡತೊಡಗಿದ. ಬೆಳಕು ಸಾಲದು, ಸರಿಯಾಗಿ ಫೋಕಸ್ ಮಾಡಿಲ್ಲ. ಕ್ಯಾಮರ ಲೆನ್ಸ್ ಫವರ್‌ಫುಲ್ ಆಗಿಲ್ಲ ಇಂಥ ಕೆಲವು ಆಕ್ಷೇಪಣೆಗಳ ನಡುವೆಯೂ ಫೋಟೋಗಳು ಅದ್ಭುತವಾಗಿದ್ದವು. ತೀರಾ ಹಳೆಯ ಕಾಲದ ಅರಮನೆಯನ್ನು ನೆನಪಿಸುವಂಥ ಹಾಳು ಬಿದ್ದ ಬಂಗ್ಲೆ, ಎಡೆ ಎತ್ತಿದ ಹಾವು, ಪುಟ್ಟ ಕರಿಯ ಹೊಳೆಯುವ ಕಲ್ಲು. ಒಂದಕ್ಕಿಂತ ಒಂದು ಅದ್ಭುತವೆನಿಸಿತು.

"ಈ ಫೋಟೋಗಳೆಲ್ಲ ಎಲ್ಲಿಯವು?" ನೋಟವೆತ್ತಿ ಪ್ರಶ್ನಿಸಿದ.

"ಗೋಪಾಲನ ಮನೆ ಬಳಿಯ ಬಂಗ್ಲೆ, ವಾಡೆಯದು. ಅಲ್ಲಿನ ಜನ ಆ ಪುರಾತನ ಬಂಗ್ಲೆಯನ್ನು ವಾಡೆ ಅಂತ್ಲೇ ಕರೀತಾರೆ. ಅದು ಈಗ ಹಾಳು ಬಿದ್ದಿದೆ. ಅಲ್ಲಿಗೆ ಹೋಗಿದ್ದಾಗ ನಾನು, ಗೋಪಾಲ, ವಾಸಂತಿ ಬಹಳ ಕಷ್ಟಪಟ್ಟು ಎತ್ತರದ ಗೋಡೆ ಹಾರಿ ಒಳಕ್ಕೆ ಹೋಗಿದ್ವಿ. ಕಿಲುಬಿಡಿದ ಹಿಂಬಾಗಿಲಿನ ಚಿಲಕ ತೆರೆದುಕೊಂಡಾಗ ಕಂಡ ಹಾವು ಇದು. ಅಲ್ಲಿ ಸಿಕ್ಕ ಈ ಪುಟ್ಟ ಕರಿಯ ಕಲ್ಲು ವಿಷ್ಣು ಸಾಲಿಗ್ರಾಮ ಅಂದರು ಗೋಪಾಲನ ತಂದೆ." ವಿವರಿಸಿದವಳು ಕಡೆಯದಾಗಿ "ಈ ಸಾಲಿಗ್ರಾಮ ತೊಳೆದ ನೀರನ್ನು ಅಮ್ಮನಿಗೆ ಕುಡಿಸಿದ್ದು. ಅದರಿಂದ್ಲೇ ಅವ್ರು ಚೇತರಿಸಿಕೊಂಡಿದ್ದು. ಅಮ್ಮನ ಕೈಕಾಲುಗಳು ಮಾಮೂಲಿ ಸ್ಥಿತಿಗೆ ಬರಲು ವಿಷ್ಣು ಸಾಲಿಗ್ರಾಮನೆ ಕಾರಣ" ಎಂದ ಕೂಡಲೇ ಬೆಚ್ಚಿಬಿದ್ದ. ಸ್ವಾರಸ್ಯವಾದ ಕತೆಯನ್ನು ಬೇರೆಯಾರಾದರೂ ಹೇಳಿದ್ದರೇ, ಅಲ್ಲಗೆಳೆದು ನಕ್ಕು ಬಿಡುತ್ತಿದ್ದನೇನೋ, ಅದು ಅವನ ಮನೆಯಲ್ಲಿಯೇ ನಡೆದಿತ್ತು. ಇಂಟರ್‌ನೆಟ್ ಮೂಲಕ ಜಗತ್ತಿನ ಎಲ್ಲಾ ವೈದ್ಯರನ್ನು ಸಂಪರ್ಕಿಸಿ ಸೋತುಹೋಗಿದ್ದ. ಎಂಥ ಅದ್ಭುತ! ಶಿಲೆಯ ಫೋಟೋವನ್ನು ಮುಖದ ಮುಂದಿಡಿದು ತದೇಕಚಿತ್ತನಾಗಿ ನೋಡಿದ.

"ಈಗ ಆ ಸಾಲಿಗ್ರಾಮ ಎಲ್ಲಿದೆ?" ಕೇಳಿದ.

"ದೇವರ ಮನೆಯಲ್ಲಿ" ಎಂದಳು ಚುಟುಕಾಗಿ.

ಆ ಫೋಟೋಗಳನ್ನು ತೆಗೆದ ಉದ್ದೇಶ ಬೇರೆಯೇ ಇದೆಯೆಂದುಕೊಂಡ. "ಲೇಖನ ಸಿದ್ಧ ಮಾಡೋಕ್ಕೋಸ್ಕರ ಸಾಹಸ ಮಾಡಿ ಫೋಟೋಗಳ್ನ ತೆಗ್ದು ಕೊಂಡ್ಬದ್ಯಾ?" ಮತ್ತೆ ಮತ್ತೆ ನೋಡಿದ ಫೋಟೋಗಳನ್ನ.

"ಪತ್ರಿಕೆಯಲ್ಲಿ ಕೆಲ್ಸ ಮಾಡೋ ಆ ಉದ್ದೇಶ ಇತ್ತು. ಗೋಪಾಲರು ಬೇಡಾಂದ್ರು. ವಾಡೆ ಯಾವ್ದೋ ದುರಂತ ಕತೆಗೆ ವಸ್ತುವಾಗಿ ಉಳಿದಿದೆ. ಅಲ್ಲಿನ ಮರಗಳ ಮೇಲೆ ಅಸಂಖ್ಯಾತ ಪಕ್ಷಿಗಳು ವಾಸವಾಗಿದೆ. ನಿರ್ಭಯವಾಗಿ ಯಾವುದೋ ಭಯ ಮನುಷ್ಯರನ್ನು ದೂರವಿಟ್ಟಿದೆ. ನಿನ್ನ ಲೇಖನದಿಂದ ಕೆಲವರ ಪ್ರವೇಶವಾಗಿ ನಡೆಯಬಾರದ್ದು ನಡೆದು ಸುತ್ತ ಮುತ್ತಲಿನ ಜನ ಹಗಲು ಕೂಡ ಅಂಜಿ ಹೊರ್ಗೆ ಬರದಂಗಾಗುತ್ತೆ. ಅದ್ಕೆ ನೀನು ಕಾರಣವಾಗ್ಬೇಡಾಂದ್ರು" ಸ್ವಲ್ಪ ವಿಶದವಾಗಿಯೆ, ಸತ್ಯಸಂಗತಿ ಹೇಳಿದಳು. ನೋಟವೆತ್ತಿ ಕಣ್ಣುಗಳನ್ನು ನೋಡಿದ ಸುಳ್ಳೆನಿಸಲಿಲ್ಲ.

"ಯಾರು ಆ ಗೋಪಾಲ?" ಕೇಳಿದ ಕುತೂಹಲದಿಂದ.

"ಶಬರಿ ಅಮ್ಮನ ಕಡೆಯ ಮಗ. ಆಕೆನೇ ವಾಸಂತಿನ ಸಾಕಿದವರು."

ಎರಡು ನಿಮಿಷ ಸುಮ್ಮನೆ ಕೂತಿದ್ದವನು ಎದ್ದು ಹೋಗಿ ಷೋಕೇಸ್‌ನಲ್ಲಿ ಜೋಡಿಸಿಟ್ಟ ಹಲವು ಕ್ಯಾಮೆರಾಗಳಲ್ಲಿ ಒಂದನ್ನು ಹಿಡಿದು ಬಂದ "ಇದ್ನ ನೀನು ಇಟ್ಕೋ, ಇನ್ನು ಒಳ್ಳೆ ಫೋಟೋಗಳ್ನ ತೆಗೀಬಹುದ್ದು" ಹೇಳಿದ. ತಾಳಿ ಕಟ್ಟಿ ತನ್ನದೆಲ್ಲವನ್ನು ಅವಳದೆಂದು ಘೋಷಿಸಿದ್ದ ಪುಣ್ಯಾತ್ಮ ಅವಳಿಗೆ ಸೇರಿದ್ದ ಒಂದು ವಸ್ತುವನ್ನು ಔಧಾರ್ಯದಿಂದ ದಾನ ಮಾಡಿದಂತಿತ್ತು.

"ನನ್ಹತ್ರ ಇರೋ ಕ್ಯಾಮೆರಾ ನಾನು ತೆಗ್ಯೋ ಫೋಟೋಗಳಿಗೆ ಸಾಕಿತ್ತು" ಎಂದಳು. ಅದು ಅವಳ ಆತ್ಮಾಭಿಮಾನ ಚೂಟಿಯಾಗಿ ಅವಳ ಕಣ್ಣಲ್ಲಿ ಇಣಕಿ "ಒಂದು ಕಾಲದಲ್ಲಿ ಫೋಟೋ, ಕ್ಯಾಮರಾ ಹುಚ್ಚುಗಳೆಲ್ಲ ಇತ್ತು. ನಿಂಗಿರ್ಲಿ ಆ ಕ್ಯಾಮೆರಾ" ಎಂದ ಧಾರಾಳವಾಗಿ. ಬೆಲೆ ಬಾಳುವಂಥ ಕ್ಯಾಮರ ಬೇರೆಯವರ ಮಟ್ಟಿಗೆ ಅದಕ್ಕೂ ಹತ್ತು ಪಟ್ಟು ಹೆಚ್ಚು ಬೆಲೆಯುಳ್ಳ ಕ್ಯಾಮರಗಳು ಇತ್ತು. ಫೋಟೋಗಳು ನನ್ಹತ್ರ ಇರ್ಲಿ ಎಂದು ತಾನೇ ಇಟ್ಟುಕೊಂಡ.

ಆ ಬಗ್ಗೆ ಅವಳೇನು ಚಿಂತಿಸುವಂತಿರಲಿಲ್ಲ. ನೆಗೆಟಿವ್ಸ್ ಇತ್ತು. ಬೇಕೆನಿಸಿದಾಗ ಪ್ರಿಂಟ್ ಹಾಕಿಸಿಕೊಳ್ಳಬಹುದು.

"ಮತ್ತೆ ಏನಾದ್ರೂ ಹೇಳೋದಿದ್ಯಾ?" ಕೇಳಿದ.

ಹೌದೆನ್ನುವಂತೆ ತಲೆದೂಗಿದವಳು "ಈಗ ಅಮ್ಮ ಹುಷಾರಾಗಿದ್ದಾರೆ. ನನ್ನ ಅಪಾಯಿಂಟ್‌ಮೆಂಟ್ ಅವಧಿ ಮುಗೀತು. ಹೋಗೋ ವಿಷ್ಯ ತಿಳಿಸ್ದೇ" ಅವನ ಕೈಯಲ್ಲಿ ತಾಳಿ ಕಟ್ಟಿಸಿಕೊಂಡ ಹೆಣ್ಣು ಅತ್ಯಂತ ಸಹಜವಾಗಿ ಪರಿಸ್ಥಿತಿಯನ್ನೆದುರಿಸಲು ಸಿದ್ಧಳಾದಳು.

"ಯಾವಾಗ ಹೋಗ್ತೀಯಾ? ತೀಕ್ಷ್ಣವಾಗಿತ್ತು ಅವನ ದನಿ." ಗೋಕುಲಾಷ್ಟಮಿ ಹಬ್ಬದ ನಂತರ ನಿಮ್ಮ ತಂದೆಯವರ ಹುಟ್ಟಿದ ಹಬ್ಬ. ಅಮ್ಮ ಕಾರಿನಿಂದ ಇಳಿದು ತಾವೇ ನಡೆದು ಹೋಗೋ ಉತ್ಸಾಹದ ಬಗ್ಗೆ ಹಲವು ಸಲ ನನ್ನತ್ರ ಹೇಳಿದ್ದಾರೆ. ಅದ್ನ ಮುಗ್ಸಿಕೊಂಡು ಹೋಗ್ತೀನಿ "ಮೃದುವಾಗಿ ವಿಶ್ಲೇಷಿಸಿದ, ಕಣ್ಮಣಿಯ ಕಣ್ಣಂಚಿನಲ್ಲಿದ್ದ ಕಂಬನಿ ಅಲ್ಲಿಯೇ ಅಡಗಿ ಕುಳಿತಿತ್ತು."

"ಫ್ಲ್ಯಾಟ್ ನೋಡ್ಕೊಂಡ್ ಬಂದ್ಯಾ? ಅಕಸ್ಮಾತ್ ಹೋಗದಿದ್ರೆ ಹೋಗಿ ನೋಡ್ಕೊಂಡ್ಬಾ" ಅಧಿಕಾರವಿತ್ತು ಅವನ ದನಿಯಲ್ಲಿ. ಹೊರ ಬಂದಳು ಮೌನವಾಗಿ 'ಅಗತ್ಯವಿಲ್ಲ' ಎಂದು ಹೇಳಬೇಕೆನಿಸಿದರೂ ಹೇಳಲಿಲ್ಲ.

ಅಂದು ಸಾಯಂಕಾಲ ಸುಬ್ಬಲಕ್ಷ್ಮಿ ಮಗನನ್ನು ತರಾಟೆಗೆ ತಗೊಂಡರು "ನಂಗೆ ಇದೆಲ್ಲ ಇಷ್ಟವಾಗೋಲ್ಲ! ನೀನು ಕಣ್ಮಣಿಯನ್ನು ಯಾಕೆ ದೂರ ಇಟ್ಟಿದ್ದೀಯಾ? ಇಂಥ ಹೆಣ್ಣು ಯಾವ ಗಂಡಿನ ಬಾಳಿಗಾದ್ರೂ ಸುಖ, ಸಂತೋಷ ತರಬಲ್ಲಳು."

ಸ್ವಲ್ಪ ಅಳುಕಿತು. ಸತ್ಯ ಹೇಳಿದರೇ ಪ್ರತಿಕ್ರಿಯೆ ತೀರಾ ವಿರುದ್ಧವಾಗಿ ಪ್ರಬಲವಾಗಿದ್ದರೆ ಗತಿಯೇನು? ಹಿಂದಿನ ಮಂಚಕ್ಕೆ ಅಂಟಿದ ತಾಯಿಯ ಸ್ಥಿತಿಯನ್ನು ನೆನಪಿಸಿಕೊಂಡ. ಪುನಃ ಅಲ್ಲಿಗೆ ತಳ್ಳಲಾರ.

"ನಾನೇನು ಇಲ್ಲ ಅನ್ನಲಾರೆ. ಕಣ್ಮಣಿ ಪ್ರೆಟಿ, ಲವ್ಲೀ ಗರ್ಲ್ ಆ ಬಗ್ಗೆ ಅನುಮಾನವಿಲ್ಲ. ಒಂದು ...." ಎಂದವನು ನಿಲ್ಲಿಸಿದ ಆಕೆ ಗಂಭೀರವಾದರು "ವಯಸ್ಸಿನ ವಿಷಯವಾಗಿನಾ ? ನಂಗೂ ನಿಮ್ಮ ತಂದೆಯ ವಯಸ್ಸಿನ ಮಧ್ಯೆ ಹದಿಮೂರು ವರ್ಷಗಳ ಅಂತರ. ನಮ್ಮದೆಂಥ ಮಧುರವಾದ ದಾಂಪತ್ಯ. ನಿಂಗೆ ಅಂಥ ಕಾಂಪ್ಲೆಕ್ಸ್ ಇದ್ದರೆ ಯಾಕೆ ಮದ್ವೆಯಾದೆ?" ತೀಕ್ಷ್ಣವಾಗಿತ್ತು ಆಕೆಯ ಸ್ವರ.

ಚೈತನ್ಯನ ತಲೆ ಬಿಸಿಯಾಯಿತು. ತಾನು ಹೇಳುವ ಕಾರಣವನ್ನು ಒಪ್ಪಿಕೊಂಡರೂ, ತನಗಾಗಿ ಇನ್ನೊಬ್ಬ ಹೆಣ್ಣು ಬಲಿಯಾಗಿದ್ದನ್ನು ಸಹಿಸರು.

"ಈಗ ನಾನೇನ್ಮಾಡ್ಬೇಕು?" ತಾಯಿಯ ಎರಡು ಭುಜಗಳ ಮೇಲೆ ಕೈಗಳನ್ನಿಟ್ಟ "ಈ ಒಂಟಿತನ ಸಾಕು. ಆ ಹುಡ್ಗಿಗೆ ನಿನ್ನ ಬಗ್ಗೆ ಎಷ್ಟೊಂದು ಅಭಿಮಾನವಿದೆ ಗೊತ್ತಾ" ಅಂದು ಅವಳಾಡಿದ ಒಂದೊಂದು ಪದವನ್ನು ಹೆಕ್ಕಿ ಅವನ ಮುಂದಿಟ್ಟಾಗ ಚಕಿತನಾದ. ಕಣ್ಮಣಿ ತನ್ನ ಬಗ್ಗೆ ಯೋಚಿಸಿದ್ದಾಳ? ಮಧುರವಾದ ಯಾತನೆ ಅನುಭವಿಸಿದರೂ ಗಟ್ಟಿಯಾದ.

"ಒಂದಿಷ್ಟು ಬಿಜಿ ಕೆಲ್ಸಗಳಿವೆ. ಅಪ್ಪನ ಬರ್ತ್‌ಡೇ ಸೆರೆಮನಿಗಾಗಿ ಒಂದಿಷ್ಟು ಹೊಸ ಪ್ಲಾನ್‌ಗಳು ಇದೆ. ಅಲ್ಲಿವರ್‍ಗೂ ನಂಗೆ ಟೈಮ್ ಕೊಡು" ಎದ್ದು ಹೋದ.

ಮೊದಲ ಸಲ ಕಣ್ಮಣಿಯ ಬಗ್ಗೆ ದೀರ್ಘವಾಗಿ ಚಿಂತಿಸಿದ ವಾಸಂತಿಯ ಮಾತುಗಳು ಮತ್ತೆ ನೆನಪಾದರೂ ನಗು ಬಂತು. ಮೊದಲ ಸಲ ಅವನನ್ನು ಕಂಡ ತಾರೀಖು, ಸ್ಥಳವನ್ನು ಹೇಳಿದ್ದರಿಂದ ಪಿ.ಎ. ನ ಕರೆಸಿಕೊಂಡು ಅಂದಿನ ಅಪಾಯಿಂಟ್‌ಮೆಂಟ್‌ಗಳ ವಿವರವನ್ನು ತರಿಸಿಕೊಂಡ ಅದು ನಿಜವೇ.

ಇಂದು ಆಫೀಸ್‌ನಿಂದ ಮಧ್ಯಾಹ್ನವೇ ಬಂದವನು ನೇರವಾಗಿ ಆಫೀಸ್ ರೂಮಿಗೆ ಹೋದ. ಪಂಢರಿ ಅರ್ಧ ದಿನ ಪರ್ಮಿಷನ್ ಪಡೆದು ಹೊರಗೆ ಹೋಗಿದ್ದ. ಇದು ಸುಬ್ಬಲಕ್ಷ್ಮಿ ರೆಸ್ಟ್ ಸಮಯ.

ಪೇಜರ್ ಮೆಸೇಜ್‌ನಿಂದ ವಿಷಯ ತಿಳಿದ ಕಣ್ಮಣಿ ಕಾಫಿ ಟ್ರೇ ಹಿಡಿದು ಬಂದಳು. "ಅಮ್ಮ ಮಲಗಿದ್ದಾರ?" ಎಂದು ಕೇಳಿದ ಮುಂದಿನ ಫೈಲುನಿಂದ ತಲೆಯೆತ್ತದೆ, ಇಂದು ಅವನ ಕಣ್ಣಿಗೆ ಧರಿಸಿದ್ದ ಕನ್ನಡಕ ಅವನ ಗಂಭೀರ ಮುಖಕ್ಕೆ ಬಹಳ ಹೊಂದಿಕೆಯಾಗಿತ್ತು. ಕ್ಷಣ ಮೈ ಮರೆತಳು.

"ಕಣ್ಮಣಿ, ಕನಸ್ಸು ಕಾಣ್ತಾ ಇದ್ದೀಯಾ?" ಕೇಳಿದ.

ತಕ್ಷಣ ಎಚ್ಚೆತ್ತು "ಇಲ್ಲ, ಕಾಫಿ ತಂದಿದ್ದೀನಿ" ಒಂದು ಕಪ್ ಕಾಫೀ ಬೆರೆಸಿ ಅವನ ಮುಂದಿಡಿದಳು. ನಿಧಾನವಾಗಿ ಎತ್ತಿಕೊಂಡ ಕಪ್‌ನ. "ಮನುಷ್ಯನ ಜೀವನದಲ್ಲಿ ಎಲ್ಲ ದಿನಕ್ಕೂ ಒಂದಲ್ಲ ಒಂದು ವಿಶೇಷವಿರುತ್ತೆ. ಆದರೆ ಕೆಲವು ದಿನಗಳು ಅತಿಯಾದ ಮಹತ್ವ ಪಡೆದಿರುತ್ತೆ. ಅಂಥ ಎರ್ಡು ದಿನಗಳ್ನ ಹೇಳು. ಅದರಿಂದ ನಿನ್ನ ಭವಿಷ್ಯ ನಿರ್ಧಾರವಾಗ್ಬಹ್ದು, ಅಂತ ನಂಗೆ ಒಬ್ರು ಛಾಲೆಂಜ್ ಹಾಕಿದ್ದಾರೆ. ಮೊದ್ಲು ನಿಂದು ತಿಳಿಯೋ ಕುತೂಹಲ" ಬಹಳ ಸ್ನೇಹದಿಂದ ಕೇಳಿದ್ದು ಅವಳಲ್ಲಿ ಉತ್ಸಾಹ ಮೂಡಿಸಿತು.

"ಜೂನ್ 12 ಗುರುವಾರ ಮತ್ತು ಜುಲೈ 11 ಶುಕ್ರವಾರ" ಎಂದಳು ತಟ್ಟನೆ.

ತಾನು ಕಂಪ್ಯೂಟರ್‌ಗೆ ಲೋಡು ಮಾಡಿದ ಫೈಲನ್ನು ಓಪನ್ ಮಾಡಿದ. ಜೂನ್ 12 ಗುರುವಾರ 1997 ಬಂಗ್ಲೆ (ವಾಡೆ) ಪ್ರವೇಶಿಸಿದ್ದು. ಜುಲೈ 11 ಶುಕ್ರವಾರ ಅವನನ್ನು ಮೊದಲ ಸಲ ನೋಡಿದ್ದು. ಇವೆರಡು ಅವಳ ಜೀವನದಲ್ಲಿ ಅತಿ ಮಹತ್ವದ ದಿನಗಳು. ಮಾನಿಟರ್ ಮೇಲಿನ ಬರಹವನ್ನು ಒಂದಲ್ಲ ನಾಲ್ಕು ಸಲ ಓದಿಕೊಂಡ. ನಂಬಿಕೆ ಇರಲೀ, ಬಿಡಲೀ ಅವಳು ಹೇಳಿದ್ದನೆಲ್ಲ ಟೈಪ್ ಮಾಡಿ ಲೋಡು ಮಾಡಿದ್ದ. ಆಫ್ ಮಾಡಿ ಕಾಫಿ ಕುಡಿಯ ತೊಡಗಿದ.

"ಲಂಚ್‌ಗೆ ರೆಡಿ ಮಾಡ್ಲಾ ಸರ್" ಕೇಳಿದಳು. ಕೆಲವೊಮ್ಮೆ 'ಸರ್' ಎನ್ನುವುದನ್ನು ಬಹಳ ಕಷ್ಟಪಟ್ಟು ಸೇರ್ಪಡೆ ಮಾಡಬೇಕಿತ್ತು.

"ಓಕೇ...." ಎಂದು ಕ್ರಾಪನ್ನು ಎಡಗೈನಿಂದ ಸರಿ ಮಾಡಿಕೊಂಡ. "ನೀನು ತೆಗ್ದ ಫೋಟೋಗಳ್ನ ನೋಡಿದ್ಮೇಲೆ.... ನಂಗೂ ಆ ಬಂಗ್ಲೆನ್ನ ನೋಡೋ ಕುತೂಹಲ. ಸಂಡೇ ಹೋಗೋಣ" ಎಂದ. ಅವಳಿಗೆ ಆಶ್ಚರ್ಯ ಇಂಥ ನಿರ್ಣಯ, ನಿರ್ಧಾರವನ್ನು ಚೈತನ್ಯನಂಥ ವ್ಯಕ್ತಿ ಕೈಗೊಳ್ಳಲು ಸಾಧ್ಯವೇ?

"ಬೇಡಾಂತ ಅನ್ನಿಸುತ್ತೆ. ಈತ್ತೀಚೆಗೆ ಯಾರೋ ಇಬ್ರೂ ವಾಡೆಯ ಬೃಹತ್ ಕಾಂಪೌಡ್‌ನೊಳಕ್ಕೆ ಧುಮುಕಿ ಅಲ್ಲೇ ಸತ್ತು ಬಿದ್ದಿದ್ರಂತೆ. ಹದ್ದು, ಕಾಗೆ ಹಾರಾಡೋದು ನೋಡಿ... ಜನ ಪೋಲೀಸ್‌ಗೆ ತಿಳ್ಸಿ ನಂತರ ಅವ್ರುಗಳು ಬಂದು ಗೇಟ್‌ನ ಓಪನ್ ಮಾಡಿ ಹೆಣಗಳ್ನ ಹೊರ ತರೋ ವೇಳೆಗೆ ಹಾವು ನಾಲ್ಕಾರು ಸಲ ಕಂಡರೂ ಸಿಗಲಿಲ್ವಂತೆ. ಈಗ ಮತ್ತೆ ಯಥಾ ಸ್ಥಿತಿ ಜನ ಇನ್ನಷ್ಟು ಹೆದರ್ತಾರೆ" ನವಿರಾಗಿ ವಿಷಯ ಬಿಡಿಸಿಟ್ಟಳು.

"ಐ ಸೀ, ಏನೀವೇ.... ತೀರ್ಮಾನ ತಗೊಂಡಾಗಿದೆ" ಎಂದ.

ಇಂದು ಶುಕ್ರವಾರ, ಸಂಡೇ ಎಂದರೇ ನಾಳಿದ್ದು. ಆದರೂ ಅವಳಿಗೆ ವಾಡೆಯ ಬಗ್ಗೆ ಸೆಳೆತ. ಆ ಸ್ಥಳದ ವಿಷಯದಲ್ಲಿ ವ್ಯಾಮೋಹ. ಇವೆರಡು ಇಲ್ಲದಿದ್ದರೇ ಅಂತಹ ಸಾಹಸಕ್ಕೆ ಪಾಲ್ಗೊಳ್ಳುತ್ತಿರಲಿಲ್ಲ.

ಲಂಚ್ ಮಧ್ಯೆಯು ವಾಡೆಯ ವಿಷಯವಾಗಿ ನಾಲ್ಕಾರು ಪ್ರಶ್ನೆಗಳನ್ನು ಕೇಳಿದ. ಅಳತೆ, ಅಂದ ಚೆಂದ ಮುಂತಾದ ವಿಷಯಗಳನ್ನು ಹೇಳಲು ಅಸಮರ್ಥಳೇ.

ಈ ವಿಷಯುವನ್ನು ವಾಸಂತಿಗೆ ತಿಳಿಸಲೋ ಬೇಡವೋ ಅಂತ ಯೋಚಿಸಿದಳು 'ನಾವಿಬ್ರೇ ಹೋಗೋದ' ಎಂದಿದ್ದ ಚೈತನ್ಯ. ನನ್ನ ಹಾಗೇ

ಚೈತನ್ಯನ ಕುತೂಹಲದ ಹಿಂದೆ ಯಾವುದಾದರೂ ಸೆಳೆತವಿದ್ಯಾ? ಎರಡು ದಿನ ನಿರಂತರವಾಗಿ ಪ್ರಯತ್ನಿಸಿದರು ವಾಸಂತಿ ಫೋನ್‌ನಲ್ಲಿ ಸಿಗಲಿಲ್ಲ. ಗೋಪಾಲನಿಗೆ ತಿಳಿಸಿದರೇ ಹೇಗೆಂದು ಕೊಂಡಳು. ಅವರ ಮನೆಯಲ್ಲಿ ಫೋನ್ ಇರಲಿಲ್ಲ. ಕಿರಾಣಿ ಅಂಗಡಿ ಶೆಟ್ಟರಿಗೆ, ಅಥವಾ ಹೋಟಲ್ ಐತಾಳ ಮನೆಗೆ ಫೋನ್ ಮಾಡಬೇಕಿತ್ತು, ದುದ್ದನ ಮನೆಯಲ್ಲಿ ಫೋನಿತ್ತು. ಎರಡು ಮನೆಗಳ 'ಸಾಮರ್ಶ್ಯವಿಲ್ಲ ಇತ್ತೀಚೆಗೆ' ಎಂದು ಶಬರಿ ತಿಳಿಸಿದ್ದರು. ಮತ್ತೆ ನೇರವಾಗಿ ವಾಡೆಯ ಬಳಿ ಹೋಗಿ ಇಳಿಯಲು ಹೋಟಲ್ಲಾ? ಈಗಾಗಲೇ ಕೆಲವು ಏರ್ಪಾಟುಗಳನ್ನು ಚೈತನ್ಯ ಮಾಡಿದ್ದಾನೆಂದು ಅವಳಿಗೆ ತಿಳಿಯದು. ಮೌನವಹಿಸಿದಳು. ಹೋಗುವ ಮುನ್ನ.

"ಹೆಚ್ಚು ಹೊತ್ತಿನ ಪ್ರಯಾಣ ನಿಂಗೆ ಹಿಂಸೆ ಅನ್ನಿಸ್ಬಹುದ್ದು ಇನ್ನೊಮ್ಮೆ ಹೋಗೋದಿದೆ. ಆಗ ಹೆಲಿಕ್ಯಾಪ್ಟರ್‌ನಲ್ಲಿ ಹೋಗೋಣ" ತಾಯಿಗೆ ಹೇಳಿದ. ಅಭಿಮಾನದ ಕಣ್ಣೀರಿನ ಜೊತೆ ಹಾರೈಕೆಯು ಸೇರಿ ಕಣ್ಣಿರಿನ ರೂಪದಲ್ಲಿ ಕೆನ್ನೆಯ ಮೇಲೆ ಇಳಿಯಿತು, ಮಗನ ಮಾತುಗಳನ್ನು ಕೇಳಿ "ನೋ, ನಂಗೆ ಈ ಕಣ್ಣೀರು ಇಷ್ಟವಾಗೋಲ್ಲ" ಬೆರಳಿನಿಂದ ತೊಡೆದ. ಚೈತನ್ಯ.

'ದೀಪಾಂಕುರ' ಬಿಟ್ಟದ್ದು ಮೂರು ಕಾರುಗಳು. ಮುಂದೆ ಒಂದು ಅಂಬ್ಯಾಸಿಡರ್, ಹಿಂದೆ ಟಾಟಾಸುಮ ಮಧ್ಯೆದಲ್ಲಿ ಫೋಡ್.

ಮಲೆನಾಡಿನ ದಾರಿ ಹಿಡಿಯಿತು. ಅವನ ಕ್ಷೇತ್ರದಲ್ಲಿ ಪ್ರಬಲವಾಗಿ ಇದ್ದುದ್ದರಿಂದ ಎದುರಾಳಿಗಳು ಶತ್ರುತ್ವದ ದಾರಿ ಹಿಡಿಯುವುದು ಸಹಜ. ಅದಕ್ಕಾಗಿಯೇ ಅವನಂಥವರು ಅಲರ್ಟ್ ಆಗಿರಬೇಕಿತ್ತು. ಆಡಿಯೋ ಕ್ಯಾಸೆಟ್ ಕ್ಷೇತ್ರದಲ್ಲಿ ದೊಡ್ಡ ಬಿರುಗಾಳಿಯನ್ನೆ ಎಬ್ಬಿಸಿದ್ದ ಗುಲ್ಷನ್ ಕುಮಾರ್ ಹತ್ಯೆ ದೊಡ್ಡ ಜನರ ನಿದ್ದೆಗೆ ಮುಳುವಾಗಿತ್ತು. ಆದ್ದರಿಂದ ಚೈತನ್ಯನ ಬೆಂಗಾವಲಿಗೆ ಒಂದು ಪಡೆ ಇರುತ್ತಿತ್ತು.

ಆರು ಗಂಟೆಯ ಪ್ರಯಾಣ ನಾಲ್ಕು ಗಂಟೆಯಲ್ಲಿ ಮುಗಿದಿತ್ತು. ಅಲ್ಲಿ ಮತ್ತೇರಡು ಕಾರುಗಳು ಕಾಯುತ್ತಿದ್ದವು ಇವರುಗಳಿಗಾಗಿ. ಒಂದು ಕಾರಿನಲ್ಲಿ ಬಂದ ಶೇಟ್ ಚಮನ್‌ಲಾಲ್ ವಾಡೆ (ಬಂಗ್ಲೆ)ಯ ಈಗಿನ ಓನರ್. ಕೊಂಡಂದ್ದಿನಿಂದ ಒಳಗೆ ಹೋಗಿ ಪೂರ್ತಿ ನೋಡಲು ಸಾಧ್ಯವಾಗದಂಥ ದುರಾದೃಷ್ಟ ವ್ಯಕ್ತಿ. ಅದಕ್ಕೆ ಯಾವುದಾದರೂ ಹೊಸ ರೂಪ ಕೊಡಲು ಸಾಧ್ಯವೇನೋ ಅಂತ ಪ್ರಯತ್ನಿಸಿ, ನಾನಾ ಕಷ್ಟಗಳನ್ನು ಅನುಭವಿಸಿ ಕೈಚೆಲ್ಲಿ, ಮಾರಲು ಪ್ರಯತ್ನಿಸಿ ಅದರಲ್ಲೂ ಸೋತಂಥ ಕೆಟ್ಟ ಅದೃಷ್ಟದ ಮನುಷ್ಯ.

ಇನ್ನೊಂದು ಅಂಬ್ಯಾಸಿಡರ್‌ನಲ್ಲಿ ಇವನಿಗಾಗಿ ವಿನಯದಿಂದ ಕಾಯುತ್ತಿದ್ದ ದಳ್ಳಾಳಿಗಳು. ಸೇಠ್ ಧಾರಾಳವಾದ ಕಮೀಷನ್ ನೀಡಲು ಸಿದ್ಧವಿದ್ದ.

ಕಾರು ನಿಂತ ಕೂಡಲೇ ಮುಂದಿದ್ದ ಕಾರಿನಲ್ಲಿದ್ದ ಅವನ ಬಾಡಿಗಾರ್ಡ್ ಓಡಿ ಬಂದು ಡೋರ್ ತೆಗೆದ ಶಿಸ್ತಿನಿಂದ. ಮೊದಲೇ ಎರಡು ಕಾರುಗಳು ಬಂದಿದ್ದರಿಂದ ಸುತ್ತ ಮುತ್ತಲಿನ ಜನಕ್ಕೆ ಇದೊಂದು ವಿಪರೀತ ಸುದ್ದಿಯಾಗಿ, ಸಾಕಷ್ಟು ಜನ ನೆರೆದಿದ್ದರು.

ಸ್ವತಃ ಸೇಠ್ ದೊಡ್ಡ ಗೇಟಿಗೆ ಜಡಿದಿದ್ದ ಬೀಗವನ್ನು ತೆಗೆದರು ಮುಂದಡಿ ಇಡಲು ಹಿಂಜರಿದರು "ಏನೇನೋ ಕತೆಗಳ್ನ ಕಟ್ಟಿ ಬಿಟ್ಟಿದ್ದಾರೆ. ಆ ನಂಬ್ಕೆ ನನ್ನ ಮನಸ್ಸಿನಲ್ಲೂ ಕೂಡ ಉಳ್ದು ಬಿಟ್ಟಿದೆ" ಕೈ ಕೈ ಹೊಸೆದ.

ತೀರಾ ಸಂಕೋಚಗೊಂಡಳು ಕಣ್ಮಣಿ ಈ ಎಲ್ಲಾ ಜನರ ನಡುವೆ ಅದು ಬರಿ ಕುತೂಹಲಕ್ಕೆ ಸಾಹಸದಿಂದ ಗೋಡೆ ಧುಮುಕಿದ್ದಳು. ಆದರೆ ಇಂದು ಗೇಟು ತೆರೆದು ಒಳಗೆ ಹೋಗಲು ಅವಕಾಶ - ಇದು ಸ್ವಲ್ಪ ವಿಪರೀತವೆನಿಸಿತು. 'ಈಚೆಗೆ ಇಬ್ರು ಬಲಿಯಾದ್ರೂ. ಜನ ಈಗ ಅತ್ತ ಹಾಯೋದು ಕೂಡ ಬಿಟ್ಟಿದ್ದಾರೆ' ಶಬರಿ ಹೇಳಿದ್ದರು ಅಂದು ಅವಳೆದೆ ಢವಗುಟ್ಟಿತು.

ತಕ್ಷಣ ಗಟ್ಟಿಯಾಗಿ ಚೈತನ್ಯ ಕೈ ಹಿಡಿದುಕೊಂಡು "ಹೋಗೋದ್ಬೇಡ, ನಂಗ್ಯಾಕೋ ಭಯ!" ಅವಳು ಕೈ ಹಿಡಿದ ಕಡೆಕಣ್ಣು ಹಾಯಿಸಿದ. ಅವಳ ಕೈನ ಕಂಪನದ ಅನುಭವವಾಯಿತು.

"ಭಯಪಡೋಕೆ, ಏನಿದೆ? ಇಲ್ಲಿ ಯಾವ್ದೇ ಪ್ರಾಣಿಗೆ ನಮ್ಮಿಂದ ತೊಂದರೆ ಆಗೋಲ್ಲ, ಡೋಂಟ್ ಫಿಯರ್" ಎಂದ ಮೃದುವಾಗಿ.

ನಾಲ್ಕು ಜನ ಬಾಡಿಗಾರ್ಡ್‌ಗಳು ಒಳಹೊಕ್ಕರು. ಯಾವುದೇ ತಕರಾರಿಗೆ ಒಳಗಾಗದ ಮರಗಳು ಮನಸೋ ಇಚ್ಛೆ ಬೆಳೆದು, ಎಷ್ಟೋ ಪಕ್ಷಿ, ಕ್ರಿಮಿ, ಕೀಟಗಳಿಗೆ ಆಶ್ರಯ ಕೊಟ್ಟಿತ್ತು.

ಹತ್ತಿರ ಕರೆದು ಮೆಲುವಾಗಿ ಏನೋ ಹೇಳಿದ "ತೊಂದರೆಯಾಗ್ಬಾರ್ದು, ಕೊಲ್ಲೋದ್ಬೇಡ, ಬೀ ಕೇರ್‌ಫುಲ್" ಎಚ್ಚರಿಕೆ ಆ ನುರಿತ ಬಾಡಿಗಾರ್ಡ್‌ಗಳಿಗೆ.

"ಏಯ್ ಕಣ್ಮಣಿ....." ಬಂದ ಗೋಪಾಲ ಚೈತನ್ಯನತ್ತ ನೋಟ ಹರಿಸಿ "ನೀವೇನಾ ಚೈತನ್ಯ? ತುಂಬ ಸಂತೋಷ, ಸರ್. ಕೆಟ್ಟ ಧೈರ್ಯ ಬೇಡ,

ಈ ವಾಡೆ ಸಾಕಷ್ಟು ಜನನಾ ಬಲಿ ತಗೊಂಡಿದೆ" ಬಡ ಬಡ ಮಾತಾಡಿದ ತೀರಾ ಸರಳವಾಗಿ ಚೌಕಳಿ ಷರಟು, ಸಾದಾರಣ ಬಿಳಿಯ ಪಂಚೆಯುಟ್ಟು ಹೆಗಲ ಮೇಲೊಂದು ಮುಂಡು ಹಾಕಿಕೊಂಡು ಬಹಳ ಇಂಟರೆಸ್ಟಾಗಿ ಕಂಡರೂ, ಯಾಕೋ ಏನೋ ಅಸೂಯೆಯ ನೆರಳಾಡಿತು ಅವನಲ್ಲಿ ಯಾಕೆ? ಡೈವೋರ್ಸ್‌ನ ನಂತರ ಈ ಗೋಪಾಲನನ್ನ ಕಣ್ಮಣಿ ವಿವಾಹವಾಗ ಬಹುದೆ? 'ಅದು ನನಗೆ ಅನಗತ್ಯ' ಎಂದುಕೊಂಡ.

"ಇವರು ಶಬರಿ ಅಮ್ಮನ ಮಗ ಗೋಪಾಲ" ಪರಿಚಯಿಸಿದಳು.

ಕಿರುನಗೆಯೊಂದಿಗೆ ಕೈ ಚಾಚಿದಾಗ "ನಮಸ್ತೆ, ಕಾಯಿ ಕೊಚ್ಚುತ್ತ ಇದ್ದವನು ಹಾಗೇ ಬಂದೆ. ಕೈ ಚೆನ್ನಾಗಿಲ್ಲ" ಕೈ ಕುಲಕದಕ್ಕೆ ಕಾರಣ ಕೊಟ್ಟ.

"ಬಹಳ ಚೆನ್ನಾಗಿ ಮಾತಾಡ್ತೀರಾ!" ಅರಿವಾಗದಂತೆ ಶಭಾಷ್‌ಗಿರಿಕೊಟ್ಟ. ಚೈತನ್ಯ "ಬನ್ನಿ ಸೇಟ್...." ಗೇಟಿನ ಬಳಿಗೆ ಅಡಿಯಿಟ್ಟಾಗ, ಹೊರಟ ಎಲ್ಲಾ ಜನರನ್ನು ತಡೆದು. ಸೇಠ್ ಮತ್ತು ಅವನ ಮಗ ಇಬ್ಬರು ದಳ್ಳಾಳಿಗಳು, ಗೋಪಾಲ, ಇವರಿಬ್ಬರು ಒಳಗೆ ಪ್ರವೇಶಿಸಿದರು.

ಕಟ್ಟಾ ದೈವಭಕ್ತ ಬಾಡಿಗಾರ್ಡ್ ಓಡುತ್ತ ಬಂದವನು ಬಾಯಿಗೆ ಕೈ ಅಡ್ಡಿ ಹಿಡಿದು ಬಗ್ಗಿ ತೀರಾ ಮೆಲು ಸ್ವರದಲ್ಲಿ ಉಸುರಿದ "ದೊಡ್ಡ ಸರ್ಪ ಇದೆ. ಅದರ ಜೊತೆ ಇನ್ನಷ್ಟು ಹಾವುಗಳು ಇದ್ದ್ಯೋ ಏನೋ. ಅದು ಹೆಡೆ ಎತ್ತಿದರೆ ಮೂರ್ಛೆ ಹೋಗ್ಬೇಕು" ವಿಪರೀತ ಭಯ ಅವನ ಕಣ್ಣುಗಳಲ್ಲಿ ಇದ್ದಿದ್ದನ್ನು ಚೈತನ್ಯ ಗುರುತಿಸಿದ.

ಒಬ್ಬರಾದ ಮೇಲೊಬ್ಬರಂತೆ ಎಲ್ಲರು ಹೊರಗೆ ಬಂದರು. ಅವರಿಗೆ ಆ ಸರ್ಪ ದರ್ಶನವಾಗಿತ್ತು. ಹಾವುಗಳ ಬಗ್ಗೆ ಆನೇಕ ಮೂಢ ನಂಬಿಕೆಗಳು ಇತ್ತು ! ಇವು ವೈಜ್ಞಾನಿಕ ನಿಲುವಿಗೆ ಸಿಕ್ಕುತ್ತಿರಲಿಲ್ಲ. ಚೈತನ್ಯನಲ್ಲಿ ದೃಢತೆ ಹೆಚ್ಚು. ಆವೇಗಕ್ಕಿಂತ ಆಲೋಚನೆ ಜಾಸ್ತಿ.

"ಗಿಡ ಮರಗಳಿಂದ ಉದುರಿದ ಎಲೆಗಳು ರಾಶಿ ರಾಶಿಯಾಗಿದೆ. ಯಾವುದಾದ್ರೂ ಸಲಕರಣೆ ತಂದು ಅದ್ನೆಲ್ಲ ತೆಗೆಯುವ ಏರ್ಪಾಟು ಮಾಡೋಣ. ಈಗ ಫ್ರಂಟ್ ಬಾಗ್ಲು ತೆಗೀರಿ" ಹೇಳಿದ.

ಸೇಟ್ ತಮ್ಮ ಲೆದರ್ ಬ್ಯಾಗ್‌ನಿಂದ ದೊಡ್ಡ ಬೀಗದ ಕೈ ಗೊಂಚಲು ತೆಗೆದು ಮಗನ ಕೈಗಿತ್ತರು. ಮುಖ್ಯವಾದ ಬೀಗದ ಕೈ ಉದ್ದ ಹನ್ನೆರಡು ಇಂಚಿನ ಮೇಲಿತ್ತು. ಅದು ಹಿತ್ತಾಳೆಯ ಬೀಗ ನಾಲ್ಕು ಅಡಿ ಹೆಜ್ಜೆಯನ್ನು ಮುಂದಕ್ಕೆ ಇಟ್ಟನೋ ಇಲ್ಲವೋ ಒಂದು ಮಾರುಗೂ ಉದ್ದವಿದ್ದ ಕೃಷ್ಣ

ಸರ್ಪ ಸರಸರನೆ ಬಂದು ಜಗುಲಿಯೇರಿ ಬಾಗಿಲ ಬಳಿ ಹೋಗಿ ಮೇಲಕ್ಕೆ ಹೆಡೆಯೆತ್ತಿ ಹೂಕ್ಕರಿಸಿತು. ನೋಡುತ್ತಿದ್ದವರ ಗುಂಡಿಗೆ ಝಲ್ಲೆಂದಿತು.

ಚೈತನ್ಯ ಹಿಂದೆ ಇದ್ದ ಬಾಡಿ ಗಾರ್ಡ್ ಅನ್ವರ್ "ಸಾಬ್, ಷೂಟ್ ಮಾಡಿಬಿಡ್ಲಾ?' ಎಂದ ಕೂಡಲೇ ಇನ್ನೊಬ್ಬ ಅವನ ಕೈ ಹಿಡಿದುಕೊಂಡ "ನಿನ್ನ ವಂಶ ಹಾಳಾಗಿಹೋಗುತ್ತೆ. ನಾಗಪ್ಪ ನಿನ್ನ ಏಳೇಳು ಜನ್ಮಕ್ಕೂ ಕಾಡ್ತಾನೆ" ಭಯದಿಂದ ನಡುಗಿಹೋದ. ಹಾವು ಒಂದಿಂಚು ಅತ್ತಿತ್ತ ಸರಿಯಲಿಲ್ಲ. ಯಾವುದೇ ನಂಬಿಕೆಗಳು ಕಾಡಲಿಲ್ಲ ಚೈತನ್ಯನನ್ನು, ಬಹಳ ವರ್ಷಗಳಿಂದ ವಾಸವಾಗಿರುವ ಈ ಸರಿಸೃಪಕ್ಕೆ ಜನರ ಪ್ರವೇಶ ಇಷ್ಟವಾಗಿಲ್ಲವೆಂದುಕೊಂಡ ಅಷ್ಟೆ.

ಕಣ್ಮಣಿ ಅವನ ಕೈಯನ್ನು ಭದ್ರವಾಗಿ ಹಿಡಿದಳು. ಭಯ, ಕುಮುಲ, ಆಂದೋಳನ "ಪ್ಲೀಸ್ ಬಂದ್ಬಿಡಿ, ನಮ್ಮಿಂದ ಅದ್ಕೆ ತೊಂದರೆಯಾಗೋದ್ಬೇಡ" ಕಣ್ಣೀರು ಒದರಲು ಷುರು ಮಾಡಿದಾಗ ಗೋಪಾಲ "ಬೇಡ ಸರ್, ಈ ವಾಡೆಯ ಬಗ್ಗೆ ಅನೇಕ ಕತೆಗಳು ಇದೆ. ಯಾವ್ದು ನಿಜವೋ, ಯಾವ್ದು ಸುಳ್ಳೋ. ಅಂತು ಒಳಗೊದ ಜನಕ್ಕೆ ಮುಕ್ತಿ ಸಿಕ್ಕಿಬಿಡುತ್ತೆ. ಬೇಗ ಈ ತೆರನಾದ ಧೈರ್ಯದಿಂದ ಕೆಲವರು ಬಲಿಯಾಗ್ಬಹುದಷ್ಟೆ. ಪ್ಲೀಸ್, ಬಂದ್ಬಿಡಿ...." ಇವನು ಬಲವಂತ ಷುರು ಮಾಡುವ ವೇಳೆಗೆ ಹಾವು ಸರಸರನೆ ಸರಿದು ಬಂದಿದ್ದು ಚೈತನ್ಯನ ಕಾಲ ಬಳಿಯಿಂದ ಸರಿದು ಹೋಯಿತು. ಅದಕ್ಕೆ ಬೇರೆಯವರು ಏನೇನು ಅರ್ಥಗಳು ಹುಡುಕಿದರೋ, ಏನೋ. ಚೈತನ್ಯ ಮಾತ್ರ ತಟಸ್ಥನಾದ.

ಬಾಗಿಲು ತೆರೆದರೂ ಪಕ್ಷಿ, ಬಾವಲಿ ಇಲ್ಲಣಗಳಿಂದ ಒಳಗಿನ ಪ್ರದೇಶ ಪೂರ್ತಿ ಆವೃತ್ತವಾಗಿದುದ್ದರಿಂದ ಒಳಗೆ ಪ್ರವೇಶಿಸುವಂತಿರಲಿಲ್ಲ.

ಮಿಕ್ಕವರು ಹೊರಟಾಗ ಗೋಪಾಲ ಬಲವಂತದಿಂದ ಮನೆಗೆ ಕರೆದೊಯ್ದು. ಸೊಸೆಯರ ಜೊತೆ ಶಬರಿ ಸ್ವಾಗತಿಸಲು ಸಿದ್ಧರಾಗಿದ್ದರು ಸಂಭ್ರಮದಿಂದ.

"ಹೇಗಿದ್ದಿ, ಮಗಳೇ?" ಬೆನ್ನ ದಡವಿ ಮಮತೆಯಿಂದ ವಿಚಾರಿಸಿದರು. ಮಾತುಗಳು ಹೊರಡಲಿಲ್ಲ, ಅವರ ಪಾದಗಳಿಗೆ ಎರಗಿದಳು. "ತುಂಬ ಒಳ್ಳೆ ಗಂಡ ಸಿಕ್ಕಿದ್ದಾನೆ. ಪುಣ್ಯ ಮಾಡಿದ್ದೀ" ಆಕೆ ಚೈತನ್ಯನತ್ತ ನೋಟ ಹರಿಸಿದರು 'ಒಳ್ಳೆ ಜೋಡಿ ಅನಿಸಿತು ಕೂಡ.'

ಇವರುಗಳ ಸರಳತೆ, ಗೋಪಾಲನ ಮಾತಿನ ಮೋಡಿಯಲ್ಲಿ ಚೈತನ್ಯನ

ಬಿಗುಮಾನ ಸ್ವಲ್ಪ ನಿಧಾನವಾಗಿಯಾದರೂ ಕರಗಿಹೋಯಿತು. ಬರತು ಹೋದರೂ ಆಗಾಗ ಗೋಪಾಲನನ್ನು ಬೇಟೆಯಾಡುತ್ತಿತ್ತು ಅವನ ನೋಟ. 'ಅವಳಿಗೆ ನಿಮ್ಮ ಅವಳ ಸಂಬಂಧ ಜನ್ಮಜನ್ಮಾಂತರದ್ದು' ಎನ್ನುವ ಭಾವನೆ - ಇದನ್ನು ವಾಸಂತಿ ಒತ್ತಿ ಒತ್ತಿ ಹೇಳಿದ್ದಳು. ಅಂದರೆ ಕಣ್ಮಣಿ ಗೋಪಾಲನನ್ನು ಪ್ರೇಮಿಸುವ, ಮದುವೆಯಾಗುವ ಸಾಧ್ಯತೆ ಇಲ್ಲ.

ಹೊರಡುವ ಮುನ್ನ ಕಾರನ್ನು ವಾಡೆಯ ಬಳಿ ನಿಲ್ಲಿಸುವಂತೆ ಹೇಳಿದವನು ಇಳಿದ. ಹೊರಗಿನ ದೊಡ್ಡ ಗೋಡೆಗಳು ಸುಣ್ಣ ಬಣ್ಣ ಕಾಣದೇ ಕಳೆಗೆಟ್ಟಿದ್ದರೂ, ಮಜಬೂತಾಗಿದ್ದವು. ಹತ್ತಿರಕ್ಕೆ ಹೋದ. ದೊಡ್ಡ ಕಬ್ಬಿಣದ ಗೇಟಿನ ಸಪೋರ್ಟಿಗಾಗಿ ನಿಲ್ಲಿಸಿದ್ದ ಎರಡು ದೊಡ್ಡ ಸೈಜ್ ಪಿಲ್ಲರ್‌ಗಳ ಮೇಲೆ ಅದೂ ಇದೂ ಬರೆದು, ಅಲ್ಲಲ್ಲಿ ಕಿತ್ತು ಕಳೆಗೆಡಿಸಿದ್ದರೂ, ಮೇಲ್ಭಾಗದ ಅಷ್ಟು ಪ್ರದೇಶ ಕಿತ್ತುಹೋಗಿತ್ತು. ಅಲ್ಲೇನೋ ಇದ್ದಿರಬೇಕೆಂದುಕೊಂಡ.

ಸನ್ನಿಹಕ್ಕೆ ಹೋಗಿ ನೋಡಿದಾಗ ಪುಟ್ಟ ಪೊದೆಗಳ ನಡುವೆ ಒಂದು ಅಮೃತಶಿಲೆಯ ಕಲ್ಲಿನ ಪ್ಲೇಟ್ ಅವನ ಕಾಲಿಗೆ ತಾಗಿ ಬಗ್ಗಿ ಹೆಕ್ಕಿಕೊಂಡ. ಮಣ್ಣು, ಧೂಳಿನಿಂದ ಆವೃತವಾಗಿದ್ದರೂ ಅಕ್ಷರಗಳು ಸ್ಪಷ್ಟವಾಗಿದ್ದವು 'ದೀಪಾಂಕುರ ಪ್ಯಾಲೇಸ್!' ಒಂದು ಕ್ಷಣ ಅವನ ಮಿದುಳು ಸ್ತಬ್ಧವಾಯಿತು. ಹೊಸ ಬಂಗಲೆ ಕಟ್ಟಿಸಿದಾಗ ಅಪ್ಪ, ಅಮ್ಮ ಯಾವುದೇ ಹೆಸರುಗಳು ಸೂಚಿಸಿದರು 'ಬೇಡ'ವೆಂದು ತನ್ನ ಹೊಸ ಬಂಗ್ಲೆಗೆ ನಾಮಕರಣ ಮಾಡಿಕೊಂಡಿದ್ದ ಈ 'ದೀಪಾಂಕುರ' ಪ್ಯಾಲೇಸ್‌ಗೂ, ಆ 'ದೀಪಾಂಕುರ'ಕ್ಕೂ ಯಾವುದೋ ಸಂಬಂಧವಿದೆ. ಈ ಜನ್ಮದ್ದಲ್ಲ ! ಈ ಪ್ರದೇಶಕ್ಕೆ ಒಮ್ಮೆ ಕೂಡ ಬಂದವನಲ್ಲ, ಅವನಿಗೆ ನೆಂಟರು ಬಂಧು-ಬಳಗ ಈ ಕಡೆ ಇದ್ದಿಲ್ಲ, ಒಮ್ಮೆ ಕೂಡ ತಾಯಿ, ತಂದೆ ಈ ಊರಿನ ಸುದ್ದಿ ಎತ್ತಿದ್ದಿಲ್ಲ. ಏನಿದೆಲ್ಲ ? ಸೋಜಿಗವೆನಿಸಿತು. ಪಕ್ಕದಲ್ಲಿ ಕೂತಿದ್ದ ಕಣ್ಮಣಿಯ ಕಡೆ ನೋಟ ಹರಿಸಿದ. ಪೂರ್ತಿ ಹಿಂಭಾಗದ ಸಿಟಿಗೆ ಒರಗಿ ಕಣ್ಮುಚ್ಚಿದ್ದಳು. 'ಇವನು ಕಳುಹಿಸಲು ಸಿದ್ಧ! ಅವಳು ಹೋಗಲು ಸಿದ್ಧ! ಯಾವುದೋ ಒಂದು ಶಕ್ತಿ ಹಾಗಾಗದಂತೆ ಸಂದರ್ಭಗಳ ಮೂಲಕ ಸಾಕ್ಷಿಗಳನ್ನು ಒದಗಿಸುತ್ತಿದೆ.'

****

ಅಂದು ಎಂದಿನಂತೆ ಅಲ್ಲಿ ಇನ್ನಷ್ಟು ವಿಜೃಂಭಣೆಯಾಗಿ ತಂದೆಯ ಹುಟ್ಟಿದ ಹಬ್ಬ ಆಚರಿಸಲು ಸಿದ್ಧತೆಗಳು ಆಗಿದ್ದವು. ಇಂದು ತಾಯಿಯನ್ನು ಬಾಹುಗಳಿಂದ ಎತ್ತಿ ಒಯ್ದು ಕಾರಿನಲ್ಲಿ ಕೂಡಿಸಬೇಕಿರಲಿಲ್ಲ. ಅವರು

ನಡೆಯುಬಲ್ಲವರಾಗಿದ್ದರು. ಹಣೆಯಲ್ಲಿ ಬೊಟ್ಟು, ಮುಡಿಯಲ್ಲಿ ಹೂ ಜೀವಂತಗೊಳಿಸಿತ್ತು. ಈಗ ಸಮಾಜದ ಯಾವುದೇ ಕೆಟ್ಟ ವ್ಯವಸ್ಥೆಗೆ ಭಯಪಡುವಂಥ ಸ್ಥಿತಿಯಲ್ಲಿರಲಿಲ್ಲ.

ಆಕಸ್ಮಿಕವಾಗಿ ಕಣ್ಮಣಿಯ ರೂಮಿಗೆ ಬಂದ. ಅವಳಿರಲಿಲ್ಲ ಪಿಂಕ್ ಕಲರ್ ಬೈಡಿಂಗ್‌ನ ಒಂದು ಡೈರಿ ನಾಲ್ಕು ಪುಸ್ತಕಗಳ ನಡುವೆ ಒಂದು ತೀರಾ ಶಿಥಿಲ ವ್ಯವಸ್ಥೆಗೊಂಡ 1927 ರ ಡೈರಿ ತೀರಾ ಬಣ್ಣಗೆಟ್ಟಿತ್ತು. ಆ ನಾಲ್ಕು ಪುಸ್ತಕಗಳು ಮಾಸ್ ಕಮ್ಯುನಿಕೇಶನ್ (MASS COMMUNICATION) ಗೆ ಸಂಬಂಧಪಟ್ಟವು. ಜೊತೆಯಲ್ಲಿ ಇನ್ನೊಂದು ಪುಟ್ಟ ಪರ್ಸನಲ್ ಡೈರಿ ಇತ್ತು. ಇನ್ನೊಬ್ಬರ ಪರ್ಸನಲ್ ಡೈರಿ ಓದೋದು ಅಪರಾಧವೇ. ಸಾಕ್ಷಿ, ಪುರಾವೆಗಳ ಅಗತ್ಯವಿರುವಾಗ ಅದನ್ನೆಲ್ಲ ಲೆಕ್ಕಿಸುವಂತಿಲ್ಲ. ಒಮ್ಮೆ ತಿರುವಿದ. ಅವನ ಓದುವಿಕೆ ಯಾವಾಗಲೂ ವೇಗದ್ದು. ಮಧ್ಯ ಮಧ್ಯ ಹತ್ತು ಪುಟಗಳನ್ನು ತಿರುವಿ ಇಟ್ಟವನು ಮೇಲಿನ ತನ್ನ ಬೆಡ್ ರೂಮಿಗೆ ಹೋದ. ಬನಿಯನ್ ಷರಟು ಎಲ್ಲಾ ಬಿಚ್ಚಿ ಡ್ರೆಸ್ಸಿಂಗ್ ಟೇಬಲ್ ಮುಂದೆ ನಿಂತ. ಎದುರು ಬದುರಾಗಿ ಮತ್ತೆರಡು ಕಲಾತ್ಮಕ ಡ್ರೆಸ್ಸಿಂಗ್ ಮಿರರ್‌ಗಳನ್ನು ಜೋಡಿಸಿದ್ದರಿಂದ, ಈ ಕನ್ನಡಿಯಲ್ಲಿ ಕಂಡ ಪ್ರತಿಫಲನ ಬಿಂಬವನ್ನು ಇನ್ನೊಂದು ಕನ್ನಡಿಯಲ್ಲಿ ಕಾಣಬಹುದಿತ್ತು. ಅವನ ಬಲಭಾಗದ ಬೆನ್ನಿನ ಭಾಗದಲ್ಲಿ ಅವರೆಕಾಳಿಗಿಂತ ತುಸು ದೊಡ್ಡದಾದ ಕರಿಯ ಮಚ್ಚೆ ಇತ್ತು. 'ಇದು ಅದೃಷ್ಟದ ಮಚ್ಚೆ' ವರ್ಷಗಳ ಹಿಂದೆ ತಾಯಿ ಹೇಳಿದ್ದು ನೆನಪಿತ್ತು. ಅದನ್ನ ಬೇರೆಯವರು ನೋಡುವ ಸಾಧ್ಯತೆ ಇರಲಿಲ್ಲ. ಪಂಥರಿಗೆ ಕೂಡ ಗೊತ್ತಿಲ್ಲ. ಕೆಲವು ಸಲ ಕಣ್ಮಣಿ ಬಂದಿದ್ದರೂ ಪೂರ್ತಿ ಡ್ರೆಸ್ಸಿನಲ್ಲಿಯೇ ಇದ್ದ. ಆದರೆ ಈ ಮಚ್ಚೆಯನ್ನು ನೋಡಿದಾದರೂ ಹೇಗೆ? ಡೈರಿಯ ನಲವತ್ತಾರನೆ ಪುಟದಲ್ಲಿ ಅದನ್ನು ಬರೆದಿದ್ದಳು. 'ಚೈತನ್ಯರ ಬೆನ್ನಿನ ಬಲಭಾಗದಲ್ಲಿ ಕಪ್ಪು ಮಚ್ಚೆ ಇದೆಯೆನಿಸುತ್ತೆ ಇದೆಯಾ? ನಾನೆಂದು ನೋಡಿದ್ದೀನಿ? ಇಂಥ ಪ್ರಶ್ನೆಗಳನ್ನು ಡೈರಿಯಲ್ಲಿ ಹಾಕಿಕೊಂಡಿದ್ದಳು.'

'ದೀಪಾಂಕುರ ಪ್ಯಾಲೇಸ್' ಮತ್ತು 'ದೀಪಾಂಕುರ' ನಡುವೆ ಏನಾದರೂ ಬಾಂಧವ್ಯ? ಅವನ ಸ್ವಭಾವಗಳನ್ನಲ್ಲಿ ನಮೂದಿಸಿದ್ದಳು. ಅದನ್ನೆಲ್ಲ ಇಲ್ಲಿಗೆ ಬಂದ ನಂತರ ಬರೆದದ್ದಲ್ಲ. 'ವಿಪರೀತ ತಾಯಿ ಪ್ರೇಮ' ಗಂಟೆಗಟ್ಟಲೆ ಸ್ನಾನದ ಮನೆಯಲ್ಲಿ ಕಳೆಯುತ್ತಾರೆ. ಸಿಹಿಯೆಂದರೆ ಇಷ್ಟ. ನನ್ನ ಕಂಡರೆ ವಿಪರೀತ ಪ್ರೇಮ ಹೀಗೇಂತ ನನ್ನ ಮನಸ್ಸು ಹೇಳುತ್ತಿದೆಯೆಂದು

ಬರೆದುಕೊಂಡಿದ್ದು ಹುಚ್ಚ, ಇಲ್ಲ ಯಾವುದಾದರೂ ಭ್ರಮೆಯಾ? ತನ್ನ ಬಗ್ಗೆ ಯಾವುದಾದರೂ ಡಿಟೆಕ್ಟಿವ್ ಸಂಸ್ಥೆ ಮಾಹಿತಿ ಸಂಗ್ರಹಿಸಿ ಒದಗಿಸಿದೆಯಾ? ಗೂಢಚರ್ಯೆ ಹಿಂದೆ ಇತ್ತು. ಇಂದೂ ಇದೆ; ಮುಂದೆಯು ಇರುವಂಥಾದ್ದೇ. ಚಾಣಕ್ಯನ ಅರ್ಥಶಾಸ್ತ್ರದಲ್ಲಿ ಮಾತ್ರವಲ್ಲ ಕ್ರಿಸ್ತಯುಗಕ್ಕಿಂತಲೂ ಮೊದಲು ಗ್ರೀಕ್ ನಗರ ರಾಜ್ಯಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ಅಥೆನ್ಸ್ ಹಾಗೂ ಸ್ಪಾರ್ಟಾಗಳಲ್ಲಿ ಗೂಢಚರ್ಯೆ ನಡೆಯುತ್ತಿತ್ತೆಂದು ಇತಿಹಾಸ ಹೇಳುತ್ತಿದೆ. ಈಗ ಅದು ಮತ್ತಷ್ಟು ವಿಸ್ತಾರಗೊಂಡಿದೆ. ರಾಜಕಾರಣಕ್ಕೆ ಮತ್ತು ಸೈನ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಲೆಹಾಕುವ ಕೆಲಸಕಷ್ಟೇ ಸೀಮಿತವಾಗಿದ್ದ ಗೂಢಚರ್ಯೆ ಈಗ ಔದ್ಯಮಿಕ ಕ್ಷೇತ್ರಕ್ಕೂ ಪ್ರವೇಶಿಸಿ ಎಷ್ಟೊಂದು ದಾಂಧಲೆ ಮಾಡುತ್ತಿದೆಯೆಂದು ಅವನಿಗೆ ಗೊತ್ತು. ಅದರ ಬಿಸಿ ಆಗಾಗ ಅವನಿಗೂ ರಾಚುತಿತ್ತು. ಇಂಥ ಯಾವುದಾದರೂ ಸಂಸ್ಥೆಯಿಂದ ಕಣ್ಮಣಿ ನಿಯುಕ್ತಳಾಗಿದ್ದಾಳೆ? ತಟ್ಟನೆ ಒಂದು ಡಿಟೆಕ್ಟಿವ್ ಸಂಸ್ಥೆಯನ್ನು ಸಂಪರ್ಕಿಸಿ ಇನ್ನು ಕೆಲವು ಗಂಟೆಗಳಲ್ಲಿ ವಿವರ ಬೇಕೆಂದ. ಅದರ ವ್ಯಾಪ್ತಿ ವಿಶಾಲವಾಗಿತ್ತು. ಕೆಲವು ಗಂಟೆಗಳಲ್ಲಿ ಮಾಹಿತಿ ಒದಗಿಸುವುದು ರಿಸ್ಕ್ ಕೂಡ ಅಲ್ಲ.

ದೇವಸ್ಥಾನಕ್ಕೆ ಹೊರಡುವುದಕ್ಕೆ ಮುಂಚೆಯೇ ಮಾಹಿತಿ ಲಭ್ಯವಾಯಿತು. ಅನಾಥಾಲಯದಲ್ಲಿ ಬೆಳೆದ ಕಣ್ಮಣಿ ತೀರಾ ಒಳ್ಳೆಯ ಸ್ವಭಾವದವಳು, ಹಾಸ್ಟಲ್, ಪ್ರತ್ರಿಕಾಲಯದಲ್ಲಿ ಕೂಡ ಇದೇ ಮಾಹಿತಿ. ಜೋಷಿ, ಶಬರಿ, ಗೋಪಾಲ, ವಾಸಂತಿಯನ್ನು ಬಿಟ್ಟರೇ ಅವಳಿಗೆ ಹೆಚ್ಚಿನ ಆತ್ಮೀಯರು ಬಂಧುಗಳು ಇಲ್ಲ.

ಆ ಅನುಮಾನಕ್ಕೆ ತೆರೆ ಬಿದ್ದಂತಾಯಿತು.

ದೇವಸ್ಥಾನಕ್ಕೆ ಹೊರಡುವ ಮುನ್ನವೇ ತನ್ನ ಸೂಟ್‌ಕೇಸ್ ರೆಡಿ ಮಾಡಿಟ್ಟಳು ಕಣ್ಮಣಿ. ಸಂಜೆ ಬರುವುದಾಗಿ ವಾಸಂತಿಗೆ ಫೋನ್ ಮಾಡಿದ್ದಳು ಕೂಡ. ಹೋಗುವ ಮುನ್ನ ಅಪಾಯಿಂಟ್‌ಮೆಂಟ್ ಮಾಡಿಕೊಂಡಾಗ ಫಿಕ್ಸ್ ಮಾಡಿದ ಸ್ಯಾಲರಿಯಷ್ಟನ್ನೇ ಕೇಳುವುದು ಅವಳ ಉದ್ದೇಶವಾಗಿತ್ತು. ಎದೆ ಭಾರವಾಗಿತ್ತು. ಎಂದಾದರೂ ಬಂದು ಸುಬ್ಬಲಕ್ಷ್ಮಿಯವರನ್ನು ನೋಡಲು ಅವಕಾಶ ಕೊಡಬಹುದೇ?

"ಅದ್ಹೇಗೆ ಡೈವೋರ್ಸ್ ಕೊಡ್ತಾರೆ?" ವಾಸಂತಿಯ ವಾದ.

"ಯಾರು ಕೇಳಿದ್ರೂ ಡೈವೋರ್ಸ್? ಕೆಲವು ಪತ್ರಗಳಿಗೆ ಸಹಿ

ಪಡೆದಿದ್ದಾರೆ. ಹಣವಿದ್ದ ಜನಕ್ಕೆ ಸುಲಭವಾಗ್ಬಹ್ದು. ಇಲ್ಲಿ ನನ್ನ ವಿರೋಧವಾದರೂ ಎಲ್ಲಿದೆ? ಹಿಂದಿನ ಜನ್ಮದಲ್ಲಿ ಸಿಗದ ಡೈವೋರ್ಸ್ ಈಗೆಲ್ಲಿ ಸಿಕ್ಕಿತು? ಒಂದಿಷ್ಟು ನೆನಪುಗಳು ಮುಂದಿನ ದಿನಗಳನ್ನು ಕಳೆಯಲು ಉತ್ತಿಯಾಗ್ಬಹ್ದು. ಸುಮ್ನೆ ಅದಕ್ಕಾಗಿ ಯಾಕೆ ತಲೆ ಕೆಡಿಸ್ಕೋಬೇಕು?" ಪ್ರತಿಕ್ರಿಯಿಸಿದ್ದಳು ವಾರದ ಹಿಂದೆ ವಾಸಂತಿ ಬಂದಾಗ.

ಅವಳಿಗಂತೂ ದೊಡ್ಡ ಕೋಪ "ಚೈತನ್ಯ ಎಂದರೆ ದೊಡ್ಡ ಹೆಸರು ಔದ್ಯೋಗಿಕ ಕ್ಷೇತ್ರದಲ್ಲಿ. ಈಗ ಒಂದು ಕಪ್ಪು ಮಚ್ಚೆ. ಸಮಾಜದಲ್ಲಿ ಅವರ ಸ್ಥಾನಮಾನ ಕೆಳಕ್ಕಿಳಿಯುತ್ತೆ" ಎಂದ. ವಾಸಂತಿಯ ಮಾತುಗಳೇನು ಸುಳ್ಳಲ್ಲ. ಪಬ್ಲಿಕ್ ಮೆಮೊರಿ ಈಸ್ ವೆರಿ ಶಾರ್ಟ್, ಜನ ಬೇಗ ಮರೆತು ಹೋಗಬಲ್ಲರು. ಇದನ್ನೆಲ್ಲ ತಾನು ಯಾಕೆ ಯೋಚಿಸಿ ತಲೆ ಕೆಡಿಸಿಕೊಳ್ಳಬೇಕೆಂದುಕೊಂಡವಳು "ವಾಸಂತಿ, ಆ ವಿಷ್ಯನ ಬಿಡು. ನಾನು ಹಾಸ್ಟಲ್ ಬಿಟ್ಟ ಹೊಸದರಲ್ಲಿ ಗೋಳಾಡಿದ್ದೆ. ಈಗ ಇಬ್ರೂ ಒಂದೇ ದೋಣಿಯಲ್ಲಿ ತೇಲಬಹ್ದು."

ಈ ಗುಂಗಿನಿಂದ ಪಂಢರಿ ಹೊರ ತಂದ "ದೊಡ್ಡಮ್ಮಾವರು ಕರೀತಾ ಇದ್ದಾರೆ, ಇವತ್ತು ಈ ರೂಮು ಖಾಲಿಯಾಗ್ಬಿಡುತ್ತೆ" ಎಂದ. ಅವನು ಹೇಳಿದ್ದರ ಅರ್ಥವೇನು ಎಂದು ಯೋಚಿಸುವ ಗೊಡವೆಗೆ ಹೋಗಲಿಲ್ಲ.

ಹೊರ ಬಂದಾಗ ತಾಯಿ ಮಗ ಮಾತಾಡುತ್ತ ನಿಂತಿದ್ದರು. ಹೋದ ವರ್ಷಕ್ಕಿಂತ ಭಿನ್ನವಾದ ಅಪರೂಪದ ದೃಶ್ಯ. ಕೆಲವು ನಿಮಿಷಗಳಾದರೂ ನೋಡಬೇಕೆನಿಸಿತು.

"ಇದೇನಿದು, ಕಣ್ಮಣಿ!" ಅವಳತ್ತ ನೋಡಿದವರೇ ತಮ್ಮ ರೂಮಿಗೆ ಕರೆದೊಯ್ದು ಒಡವೆಯ ಬಾಕ್ಸ್ ಕೊಟ್ಟರು "ನೀನು ಬಂಗ್ಲೆಯಲ್ಲಿ ಹೇಗಾದ್ರೂ ಇರು. ಈ ಒಂದು ದಿನವಾದ್ರೂ ಹಾಕ್ಕೊಂಡ್ .... ಈ ಗುಲಾಬಿ ಬಣ್ಣದ ಸೀರೆಯುಟ್ಕೊಂಡ್ಬಾ. ಐದು ನಿಮಿಷದಲ್ಲಿ ರೆಡಿಯಾಗಿ ಹೊರ್ಗಡೆ ಇರ್ಬೇಕು" ಸರಸರನೆ ಹೋದರು. ಮೊದಲಿನ ಹತ್ತು ಪಟ್ಟು ಶಕ್ತಿ ತನ್ನ ಕೈಕಾಲುಗಳಿಗೆ ಬಂದಿದೆಯೆನ್ನುವಂತೆ ಓಡಾಡುತ್ತಿದ್ದರು. ಇವಳ ಗಾಬರಿ, ಚೈತನ್ಯನ ಆತಂಕ ಕೂಡ ಕೆಲಸ ಮಾಡದು.

ಒತ್ತಡಕ್ಕೆ ಮಣಿದು ಎಲ್ಲಾ ಒಡವೆಗಳನ್ನು ಅಲ್ಲದಿದ್ದರೂ ಕೆಲವನ್ನಾದರೂ ಹಾಕಿಕೊಂಡು ಸೀರೆಯುಟ್ಟು ಹೊರಗೆ ಬಂದಾಗ ಮ್ಯಾನೇಜರ್ ಜೊತೆ ಮಾತಾಡುತ್ತಿದ್ದ ಚೈತನ್ಯ ನೋಟ ಕೆಲವು ಕ್ಷಣ ನಿಂತುಹೋದವು. ಬೆಚ್ಚನೆಯ

ಅಪರೂಪದ ಅನುಭವಗಳು, ಇದು ಮುಂದಿನ ದಿನಗಳಿಗೆ ಬೆಲೆ ಬಾಳುವ ಬುತ್ತಿ.

ಒಂದೇ ಕಾರಿನಲ್ಲಿ ಹೊರಟರು. ಈ ಮೂವರ ಜೊತೆ ಡ್ರೈವರ್-ಕಮ್-ಬಾಡಿಗಾರ್ಡ್. ಹತ್ತಾರು ಕಾರುಗಳು ಸಾಲುಗಟ್ಟಿದ್ದವು. ವರ್ಷದಿಂದ ವರ್ಷಕ್ಕೆ ಸಾಲುಗಟ್ಟುವ ಕಾರುಗಳ ಸಂಖ್ಯೆ ಜಾಸ್ತಿ ಆಗಿತ್ತು. ಎಂದಿನಂತೆ ಪೂರ್ಣ ಕುಂಭದ ಸ್ವಾಗತ. ಪೂರ್ತಿ ಶಿಥಿಲವಾಗಿದ್ದ ಈ ಹಳೆಯ ಕಾಲದ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ್ದು ಚೈತನ್ಯನ ತಂದೆಯೇ. ನಿತ್ಯ ಪೂಜೆಗಾಗಿ ದೊಡ್ಡ ಆಸ್ತಿಯನ್ನೇ ಬಿಟ್ಟು ಹೋಗಿದ್ದರು. ಅದಕ್ಕಾಗಿ ಕೆಲವು ಮರ್ಯಾದೆಗಳ ಸಂದಾಯ. ಅಭಿಷೇಕ, ಅರ್ಚನೆ, ಷೋಡೋಪಚಾರ, ಮಂಗಳಾರತಿಯ ನಂತರ 'ಚೈತನ್ಯ ಗ್ರೂಪ್ಸ್ ಆಫ್ ಕಂಪನೀಸ್' ಮುಖ್ಯ ಅಧಿಕಾರಿಗಳು, ಅವನ ಕ್ಷೇತ್ರದಲ್ಲಿ ಪ್ರಬಲರಾಗಿದ್ದ ಉದ್ಯಮಿಗಳೆಲ್ಲ ಸಂತೋಷವನ್ನು ನಟಿಸಿ ಸುಬ್ಬಲಕ್ಷ್ಮಿಯವರು ಮೊದಲಿನಂತಾಗಿದ್ದಕ್ಕೆ ಅಭಿನಂದನೆ ಸಲ್ಲಿಸಿ ಎಲ್ಲಾ ಖಾಲಿಯಾದ ನಂತರ ಪಂಢರಿ ಒಂದು ಬುಟ್ಟಿಯನ್ನು ತಂದು ಆಕೆಯ ಬಳಿ ಇರಿಸಿದ. ಅರ್ಚಕರನ್ನು ಕರೆಸಿ ಆ ಘಮಘಮಿಸುವ ಹೂಮಾಲೆಗಳನ್ನು ದೇವರ ಪಾದಗಳ ಬಳಿ ಇರಿಸಿ ತಂದು ಮಗ, ಸೊಸೆಯ ಕೈಯಲ್ಲಿ ಕೊಡುವಂತೆ ಆದೇಶಿಸಿದರು.

ಇದು ಕಣ್ಮಣಿಗೊಂದು ಷಾಕ್, ಕೆಲವು ಘಟನೆ, ಸಂದರ್ಭಗಳಿಗೆ ಯಾರ ಪ್ರೇರಣೆಯೋ! ಅರಿವಿಗೆ ಬರುವ ಮುನ್ನ ನಡೆದು ಹೋಗುತ್ತೆ. ಒಬ್ಬರಿಗೊಬ್ಬರು ಹಾರಗಳನ್ನು ಹಾಕಿಕೊಂಡು ವಿವಾಹಜೀವನವನ್ನು ಗಟ್ಟಿಮಾಡಿಕೊಂಡಂತಾಗಿತ್ತು. ಇದಕ್ಕೆ ಬದ್ಧರೆ ? ಅದು ಸರಿಯುವ ಕಾಲ ನಿರ್ಧರಿಸಬೇಕು.

ಭರ್ಜರಿ ಔತಣ ಕೂಟ 'ದೀಪಾಂಕುರ'ದಲ್ಲಿ. ಹೆಚ್ಚು ಓಡಾಡದಂತೆ ತಾಯಿಗೆ ತಾಕೀತು ಮಾಡಿ ರೂಮಿಗೆ ಕರೆತಂದು ಮಲಗಿಸಿ ಹೋದ ಚೈತನ್ಯ. ಆಕೆಗೂ ಆಯಾಸವಾಗಿತ್ತು. ಮುಂದಿನ ಘಟನೆಗೆ ತಾನು ಸಾಕ್ಷಿಯಾಗಬಾರದೆಂದೇನೋ ಆರಾಮಾಗಿ ನಿದ್ರಿಸಿಬಿಟ್ಟರು.

ಗದ್ದಲ ಕಡಿಮೆಯಾಗಿ ಬಂದವರೆಲ್ಲ ಹಿಂದಿರುಗಿದ ನಂತರ ಒಡವೆಗಳನ್ನು ಕಳಚಿ, ಬಾಕ್ಸ್‌ಗೆ ಹಾಕಿ, ಸೀರೆಯನ್ನು ಮಡಚಿಟ್ಟು ತನ್ನ ತೀರಾ ಸಾಧಾರಣವಾದ ಸೀರೆಯನ್ನುಟ್ಟು ದೇವರ ಮನೆಗೆ ಬಂದಳು. ಸಾಲಿಗ್ರಾಮವನ್ನು ಎತ್ತಿಕೊಳ್ಳಲು ಮನಸ್ಸಾಗಲಿಲ್ಲ. ಆ 'ದೀಪಾಂಕುರ

ಪ್ಯಾಲೇಸ್' ನಲ್ಲಿ ಸಿಕ್ಕಿದ್ದು ಈ 'ದೀಪಾಂಕುರ'ದಲ್ಲಿ ಇದ್ದು ಬಿಡಲಿ ಎಂದುಕೊಂಡು ನಮಸ್ಕರಿಸಿ ಹೊರಗೆ ಬಂದಳು.

ಬರುವಾಗ ತಂದ ಬಟ್ಟೆಗಳಷ್ಟೇ ಸೂಟುಕೇಸ್‌ನಲ್ಲಿತ್ತು. ಸುಬ್ಬಲಕ್ಷ್ಮಿಯವರಿಗಾಗಲೀ, ಪಂಥರಿಗಾಗಲೀ ತಿಳಿಸುವ ರಿಸ್ಕ್ ತೆಗೆದುಕೊಳ್ಳಲು ಸಿದ್ಧಳಿರಲಿಲ್ಲ. ರೆಸ್ಟ್‌ನಲ್ಲಿದ್ದ ಅವನನ್ನು ಅರಸಿಕೊಂಡು ಚೈತನ್ಯನ ಬೆಡ್ ರೂಮಿಗೆ ಹೋದಳು.

"ಸಾರಿ ಫಾರ್ ದಿ ಡಿಸ್ಟರ್ಬ್. ನಾನು ಹೋಗ್ತಾ ಇದ್ದೀನಿ. ನಂಗೆ ಫ್ಲಾಟ್, ಹತ್ತು ಲಕ್ಷ ರೂಪಾಯಿಗಳೇನು ಬೇಡ. ನನ್ನ ಉಳಿದ ತಿಂಗಳುಗಳ ಸಂಬಳದ ಹಣ ಕೊಟ್ಟರೇ ಸಾಕು. ನಿಧಾನವಾಗಿ ಕೊಟ್ಟರೂ ಪರ್ವಾಗಿಲ್ಲ. ನಾನೇ ಒಂದು ದಿನ ಬಂದು ಮ್ಯಾನೇಜರ್ ಬಳಿ ಕಲೆಕ್ಟ್ ಮಾಡಿಕೊಂಡು ಹೋಗ್ತೀನಿ" ಎಂದು ನವಿರಾದ ದನಿಯಲ್ಲಿ ಹೇಳಿದ ಕೂಡಲೇ ಎದ್ದು ಕೂತವನು ಮಂಚದಿಂದ ಇಳಿದ. ದೀರ್ಘವಾಗಿ ನೋಡಿದ. ಮ್ಲಾನತೆ ಇತ್ತೆ ವಿನಃ ಇಷ್ಟೆಲ್ಲ ಸಂಪತ್ತನ್ನು ಬಿಟ್ಟು ಮತ್ತೆ ಭವಿಷ್ಯದಲ್ಲಿ ನೆಲೆಗಾಗಿ ಪರದಾಡಬೇಕಲ್ಲ ಎನ್ನುವ ಚಿಂತೆಯೇನು ಅವಳ ಮುಖದ ಮೇಲಿರಲಿಲ್ಲ.

"ಮುಂದೇನು ಮಾಡ್ತೀಯಾ?" ಕೇಳಿದ.

"ಅಲ್ಪ ಗುರಿ ಅಪರಾಧ ಎಂದಿರಿ ನೀವೇ. ಮುಂದೆ ಒಂದು ಆಕಾಂಕ್ಷೆ ಇಟ್ಟುಕೊಂಡು ಬದ್ಕಲು ಪ್ರಯತ್ನಿಸ್ತೀನಿ. ಅಮ್ಮನಿಗೆ ನನ್ನ ಬಗ್ಗೆ ಹೇಳೋ ಜವಾಬ್ದಾರಿ ನಿಮ್ದು" ಎಂದಳು. ಅವಳೆದೆ ಭಾರವಾಯಿತು. ಅವಳ ಸಮಸ್ತವು ಇಲ್ಲಿಯೇ ಇತ್ತು. ಆದರೂ ಒಂಟಿಯಾಗಿ ಹೊರಡಬೇಕಿತ್ತು.

"ಅಮ್ಮ ಮೊದ್ಲಿನಂತಾಗಿದ್ದಾರೆ. ನನ್ನ ಸಮಸ್ತನ್ನು ಬೇಕಾದರೆ ನಿನ್ನಗೆ ಕೊಡಬಲ್ಲೆ. ಒಂದು ಸೂಕ್ತವಾದ ಪ್ರತಿಫಲ ಕೇಳು" ಆದೇಶಿಸಿದ.

ಕಣ್ಣಾಲಿಗೆ ಬಿಕ್ಕಿ ಬಿಕ್ಕಿ ಅಳಬೇಕೆನಿಸಿತು. ಅದು ದೌರ್ಬಲ್ಯವಾಗಬಹುದು. ಕಿಂಚಿತ್ ಅಭಿಮಾನಿಸುವ ಚೈತನ್ಯ ಮುಖ ತಿರುಗಿಸಬಹುದು. ತನ್ನ ಎತ್ತರ ಅವನ ಮುಂದೆ ಕಡಿಮೆಯಾಗಬಹುದು. ಇಷ್ಟೆಲ್ಲ ಯಾಕೆ? ಮೌನವಹಿಸಿದಳು ಐದು ನಿಮಿಷದಷ್ಟು ದೀರ್ಘ ವೇಳೆ.

"ಇಲ್ಲ, ನಾನು ಮಾಡಿದ್ದಕ್ಕಿಂತ ಸಿಕ್ಕಿದ್ದೇ ಹೆಚ್ಚು. ತಾಯಿ ಪ್ರೇಮ ಕಾಣದ ನಂಗೆ ಅದನ್ನಿತ್ತ ಅಮ್ಮನಿಗೆ ನಾನೇ ಚಿರ ಋಣಿ. ಸ್ವಂತದವ್ರಿಗೆ ಮಾಡಿದಾಗ ಪ್ರತಿಫಲಾಪೇಕ್ಷೆ ಕೂಡ ದೊಡ್ಡ ತಪ್ಪೇ. ನಾನು ಬರ್ತೀನಿ" ಎಂದವಳನ್ನು ನಿಲ್ಲುವಂತೆ ಸನ್ನೆ ಮಾಡಿದ.

"ನನ್ನ ಒಂದೇ ಒಂದು ಪ್ರಶ್ನೆಗೆ ಉತ್ತರ ಬೇಕು. ಬಯೋಡಟಾ ಮುಂದಿಟ್ಟನಂತರವೂ ಪರೀಕ್ಷಾರ್ಥಿಗಳು ಪ್ರಶ್ನಿಸ್ತಾರೆ. ಯಾಕೇಂತ ಎಂದಾದ್ರೂ ಯೋಚ್ಸಿದ್ದೀಯಾ? ಕೆಲವೊಮ್ಮೆ ಅದ್ರಲ್ಲಿ ತಪ್ಪುಗಳು ಇರ್ಬಹ್ದು. ವ್ಯಕ್ತಿಯ ಕಂಠ, ಕಣ್ಣುಗಳಲ್ಲಿ ಪ್ರತಿಫಲಿಸುವ ಭಾವಗಳಿಂದಲೇ ಸತ್ಯ, ಸುಳ್ಳುಗಳ ವಿಶ್ಲೇಷಣೆ ಮಾಡ್ಬಹ್ದು ನೀನು ಯಾರನಾದ್ರೂ ಪ್ರೀತಿಸಿದ್ಯಾ?"

ಅವಳಿಗೆ ಗಾಬರೀಯೋ ಗಾಬರಿ. ವಿಪರೀತ ಗಲಿಬಿಲಿ. ಇಂಥ ಪ್ರಶ್ನೆಯನ್ನು ಬೇರೆ ಯಾರಾದರೂ ಕೇಳಿದ್ದರೇ ನಕ್ಕುಬಿಡುತ್ತಿದಳೇನೋ, ಇದನ್ನು ತಾಳಿ ಕಟ್ಟಿದ ಚೈತನ್ಯ ಕೇಳುತ್ತಿರುವುದು. ಕುಸಿದು ಕೂತು ಬಿಕ್ಕಳಿಸತೊಡಗಿದಳು.

ಯಾವುದೋ ಮೆಸೇಜ್ ಬಂದಿದ್ದರಿಂದ ಫೋನೆತ್ತಿಕೊಂಡು ಹೊರ ಹೋದ ಅವಳನ್ನು ಅಳಲು ಬಿಟ್ಟು. ಅವನು ಹಿಂದಿರುಗಿ ಬರುವ ವೇಳೆಗೆ ಸಮಾಧಾನಕ್ಕೆ ಬಂದು ಎದ್ದು ನಿಂತಿದ್ದವಳನ್ನು ನೋಡಿದ. ಕೆಂಪತ್ತಿದ ಮುಖದಲ್ಲಿ ಭಾವನೆಗಳ ಸಂಘರ್ಷವಿರಲಿಲ್ಲ.

"ನನ್ನ ಪ್ರಶ್ನೆಗೆ ಉತ್ತರ ಸಿಗ್ಲಿಲ್ಲ?" ಚೇಷ್ಟಿಸುವಂತಿತ್ತು ಅವನ ದನಿ. ನಂಬಿಕೆಯಾಗಲಿಲ್ಲ. ಭ್ರಮೆಯೆನಿಸಿತು. ಗೊಂದಲ ಬೇಡವೆನಿಸಿತು. "ಇಲ್ಲ...." ಎಂದಳು ಸ್ಪಷ್ಟವಾಗಿ.

ಮಾತು ಮುಗಿದಿತ್ತು. ಸುಬ್ಬಲಕ್ಷ್ಮಿ ಏಳುವ ಮುನ್ನವೇ 'ದೀಪಾಂಕುರ'ವನ್ನು ಬಿಟ್ಟು ಹೋಗಬೇಕಿತ್ತು.

"ಥ್ಯಾಂಕ್ಯೂ, ಬರ್ತೀನಿ" ಹಿಂದಕ್ಕೆ ತಿರುಗಿದಳು.

"ಎಲ್ಲಿಗೆ ಹೋಗ್ತೀಯಾ? " ಕೇಳಿದ.

"ಹಾಸ್ಟಲ್‌ಗೆ, ವಾಸಂತಿ ರೂಮಿನಲ್ಲಿ ಜಾಗ ಕಾದಿರಿಸಿದ್ದೀನಿ. ಏನು ತೊಂದರೆಯಾಗೋಲ್ಲ" ಉಸುರಿದಳು ಮೆಲ್ಲನೆ. ಅವಳಲ್ಲಿ ಒಂದು ರೀತಿಯ ಚಡಪಡಿಕೆ ತಾನೆಲ್ಲಿ ದೌರ್ಬಲ್ಯಕ್ಕೆ ಒಳಗಾಗಿ ಹೋಗಿ ಅವನೆದೆಗೊರಗಿ 'ನಂಟು ಈ ಜನ್ಮದ್ದು ಮಾತ್ರವಲ್ಲ' ಎಂದು ಉಸುರಿಬಿಡುವನೇನೋ ಎಂದು ಹೆದರಿದಳು.

ಮತ್ತೆರಡು ಹೆಜ್ಜೆ ಬಿರುಸಿನಿಂದ ಮುಂದಕ್ಕಿಟ್ಟಳು. "ನಿಂತ್ಕೋ ಕಣ್ಮಣಿ, ನಿಂಗೆ ತಾಳಿ ಕಟ್ಟಿದ ಉದ್ದೇಶವೇನೇ ಇರಲಿ ನಾನೇನು ಗಂಧರ್ವ ವಿಧಿಯಲ್ಲಿ ವಿವಾಹವಾಗಲಿಲ್ಲ; ಸಮಾಜದ ವಿಧಿಗಳನ್ನು ಅನುಸರಿಸಿಯೇ ಮದುವೆಯಾದ್ದುದು. ಇದರ ಪೂರ್ವಾಪರ ಯೋಚಿಸಬೇಕಾದ ಅಗತ್ಯ

ಅಂದು ಇತ್ತು. ಎಂಥ ಬುದ್ಧಿವಂತನಾದರೂ ದಿನದಲ್ಲಿ 'ಐದು ನಿಮಿಷ' ಮೂರ್ಖನಾಗುತ್ತಾನಂತೆ" ಎಂದ ನಿಧಾನವಾಗಿ.

ಅವಳ ತಾಳ್ಮೆ ಸತ್ತುಹೋಗುವ ಹಂತ ತಲುಪಿತ್ತು. ಈ ಪೀಠಿಕೆಗಳೆಲ್ಲ ಯಾಕೆ? ಸಿಡುಕಿ ಕೇಳಬೇಕೆನಿಸಿದರೂ ಅವಳ ತುಟಿಗಳು ತೆರೆದುಕೊಳ್ಳಲಿಲ್ಲ.

"ದಯುವಿಟ್ಟು ಕ್ಷಮ್ಸಿ, ಆರಾಮಾಗಿ ನನ್ನ ಹೋಗೋಕೆ ಬಿಡಿ. ಯಾವುದಾದ್ರೂ ಪತ್ರಗಳಿಗೆ ಬೇಕಾದ್ರೆ ಸಹಿ ಹಾಕ್ಸಿಕೊಳ್ಳಿ. ನನ್ನಿಂದ ಖಂಡಿತ ನಿಮ್ಗೇ ಯಾವ್ದೇ ತೊಂದರೆಯಾಗೋಲ್ಲ. ಈ ಸಿಟಿಯಲ್ಲಿನಾನು ಇರುವುದು ಬೇಡವೆಂದರೇ, ಬೇರೆ ಕಡೆ ಹೊರಟುಹೋಗ್ತೀನಿ. ಪ್ಲೀಸ್,, ಅರ್ಥ ಮಾಡ್ಕೊಳ್ಳಿ. ನಾನು ಹೊರಗ್ಗಡೆ ಹೋಗಿ ಕಾನೂನಿನ ಮೊರೆ ಹೋಗಬಃಹುದೆಂಬ ಅನುಮಾನವಿದ್ದರೇ... ಖಂಡಿತ ಹಾಗೆ ಆಗೋಲ್ಲ. ನಿಮ್ಮ ಆಸ್ತಿ, ಸಂಪತ್ತು ನೋಡಿ ತಾಳಿ ಕಟ್ಟಿಸಿಕೊಳ್ಳಿಲ್ಲ" ಎಂದಳು. ಸಹನೆ ಕಳೆದುಕೊಂಡು ಚಡಪಡಿಸುವಂತಾಯಿತು.

"ಓಕೇ, ಇಲ್ಲಿಂದ ನೀನು ಏನನ್ನೂ ಒಯ್ಯುವಂತಿಲ್ಲ"

ಅವನ ಮಾತಿಗೆ ಚಕಿತಳಾದಳು. ಎಲ್ಲವನ್ನು ಕ್ಯಾಮರವನ್ನು ಕೂಡ ತಾನು ಉಪಯೋಗಿಸುತ್ತಿದ್ದ ರೂಮಿನಲ್ಲಿ ಬಿಟ್ಟಿದ್ದಳು.

"ಇಲ್ಲ, ಏನ್ನನ್ನೂ ತಗೊಂಡಿಲ್ಲ. ಕ್ಯಾಮರ ಕೂಡ ರೂಮಿನಲ್ಲಿಯೇ ಇದೆ" ಎಂದಳು ಖೇದದಿಂದ.

ತೀರಾ ಅವಳ ಸನ್ನಿಹಕ್ಕೆ ಬಂದವನು, ಅವಳ ಎದೆಯ ಮೇಲಿದ್ದ ಮಾಂಗಲ್ಯದತ್ತ ಕಣ್ಣಲ್ಲಿಯೇ ತೋರಿಸಿ "ಇದೊಂದು ಸಾಕು, ಎಲ್ಲಾ ನಿನ್ನದಾಗಲು ಪರ್ಮೀಷನ್ ಪತ್ರಕ್ಕೆ ಬಿದ್ದ ಮುದ್ರೆ" ಎಂದವನ ಉಸಿರು ಅವಳ ಕೆನ್ನೆಗೆ ರಾಚುತಿತ್ತು. ಕಣ್ಣಲ್ಲಿ ನೀರು ಫಳಕ್ಕೆಂದಿತು. ತೊಡೆಯಲು ಅವನ ತೋರು ಬೆರಳು ಮುಂದಾದಾಗ ಈ ಜನ್ಮದ ಸಂಕೋಚ, ನಾಚಿಕೆ ಎಲ್ಲಾ ಜಾರಿ ಹೋಗಿ ಅವನಿಗೆ ತೆಕ್ಕೆಬಿದ್ದಳು. ಅವಳ ಮನಸ್ಸು ಹುಚ್ಚೆದ್ದು ಕುಣಿಯಿತು. ಹೃದಯ ಸುಸ್ವರದಲ್ಲಿ ಹಾಡಿತು.

ತನ್ನೆದೆಯ ಕಣ್ಮಣಿಯನ್ನು ಒತ್ತಿಕೊಂಡು ಮೈಮರೆತ ಚೈತನ್ಯ.

***ಸಾಯಿಸುತೆ***

# ನಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳು

ಕಾದಂಬರಿಗಳು —— (ಸಾಮಾಜಿಕ, ಐತಿಹಾಸಿಕ, ಪೌರಾಣಿಕ)
ಸಣ್ಣ ಕಥೆಗಳು
ಕವನ ಸಂಗ್ರಹಗಳು
ನಾಟಕಗಳು
ಆಧ್ಯಾತ್ಮಿಕ ಮತ್ತು ಪೌರಾಣಿಕ ಗ್ರಂಥಗಳು
ವಿಶ್ವವಿದ್ಯಾಲಯದ ಪ್ರಕಟಣೆಗಳು
ಸಂಗೀತ ಪುಸ್ತಕಗಳು
ಶಿಶು ಸಾಹಿತ್ಯ
ಪ್ರಬಂಧ ಹಾಗೂ ಪ್ರೌಢಗ್ರಂಥಗಳು
ಜ್ಯೋತಿಷ್ಯ ಶಾಸ್ತ್ರಗ್ರಂಥಗಳು
ವೈಜ್ಞಾನಿಕ ಪುಸ್ತಕಗಳು

*ಹಾಗೂ ಇತರ ಪುಸ್ತಕಗಳಿಗಾಗಿ ಒಮ್ಮೆ ಭೇಟಿಕೊಡಿ*

*ಅಥವಾ*

*ಪುಸ್ತಕಗಳ ಪಟ್ಟಿಗಾಗಿ ಇಂದೇ ಬರೆಯಿರಿ*

**ಗೀತಾ ಏಜನ್ಸೀಸ್**